ದೇವುಡು ದರ್ಶನ



ಸಂಪಾದಕರು :

ಹೊ.ರಾ. ಸತ್ಯನಾರಾಯಣ ರಾವ್

ಗಂಗಾಧರ ದೇವುಡು

ದೇವುಡು ದರ್ಶನ

(ದೇವುಡು ನರಸಿಂಹಶಾಸ್ತ್ರಿಗಳ ವ್ಯಕ್ತಿತ್ವ ಮತ್ತು ಕೃತಿಗಳ ದರ್ಶನ)

ಸಂಪಾದಕರು : ಹೊ.ರಾ. ಸತ್ಯನಾರಾಯಣರಾವ್
ಗಂಗಾಧರ ದೇವುಡು

ಪ್ರಕಾಶಕರು

ಗಂಗಾಧರ ದೇವುಡು

726, 17ನೇ ಕ್ರಾಸ್, 6ನೇ ಹಂತ, ಜೆ.ಪಿ. ನಗರ, ಬೆಂಗಳೂರು-560 078.

DEVUDU DARSHAN ; Articles on Personality and Works of Sri Devudu Narasimha Shastry Edited by Sri H.R. Sathyanarayana Rao and Gangadhara Devudu and published by Gangadhara Devudu , 726, 17th Cross , J.P.Nagar, Bangalore-560 078

Pages :

Price : Rs. 150/-

First Edition : March 1997

Rights : Publishers

ಮೊದಲ ಮುದ್ರಣ : ಮಾರ್ಚಿ 1997

ಕೃತಿ ಸ್ವಾಮ್ಯ : ಪ್ರಕಾಶಕರು

ಬೆಲೆ : ರೂ. ೧೫೦/-

ಮುದ್ರಣ : ಅಜಯ್ ಸ್ಕ್ರೀನ್ಸ್ ಅಂಡ್ ಪ್ರಿಂಟ್ಸ್,
ಮಂಜುನಾಥ ನಿಲಯ,
ನಂ. 158, Iನೇ ಮುಖ್ಯರಸ್ತೆ, Iನೇ ಅಡ್ಡರಸ್ತೆ,
ರಾಬರ್ಟ್‌ಸನ್ ಬ್ಲಾಕ್,
ಬೆಂಗಳೂರು-560 021.
ಫೋನ್ : 3350006.

ಗಂಗಾಧರ ದೇವುಡು
(ಮೊ) 94498 20446
ಬೆಂಗಳೂರು

ಅರ್ಪಣೆ

ಪೂಜ್ಯ ಮಾತಾ-ಪಿತೃಗಳಿಗೆ

- ಗಂಗಾಧರ ದೇವುಡು

ಪರಿವಿಡಿ


II ಕೃತಿ ದರ್ಶನ



ದಿ|| ಶ್ರೀ ದೇವುಡು ನರಸಿಂಹಶಾಸ್ತ್ರಿ

ಜನನ 29-12-1896 ಮರಣ 27-10-1962

ದೇವುಡು-ವಂಶವೃಕ್ಷ


ದೇವುಡು ಪುಟ್ಟಣ್ಣ ಶಾಸ್ತ್ರಿ
ದೇವುಡು ಕೃಷ್ಣಶಾಸ್ತ್ರಿ
ದೇವುಡು ರಾಮಾಶಾಸ್ತ್ರಿ
ದೇವುಡು ಗಂಗಾಧರ ಶಾಸ್ತ್ರಿ
ನಾಗಮ್ಮ (ಬಲ ಅಕ್ಕ)
ದೇವುಡು ನರಸಿಂಹ ಶಾಸ್ತ್ರಿ
ಸುಬ್ಬನರಸಮ್ಮ (ತಂಗಿ)
ಲಕ್ಷ್ಮೀನರಸಮ್ಮ (ತಂಗಿ)
ರಾಮು (ದಿವಂಗತ)
ಗಂಗಾಧರ
ಸದಾಶಿವ
ಪುಟ್ಟಮ್ಮ — ಸುಬ್ರಮಣ್ಯ
ದತ್ತ
ಸುರೇಂದ್ರ
ಶಾರದ — ಬಾಲ ಶಂಕರ ಭಾರತಿ, ಆತ್ಮಪ್ರಸನ್ನ
ಲಲಿತ — ರಾಮು, ಸೌಜ್ಞ, ಪ್ರಭಾ, ರವಿ
ಉಮಾ
ಶಾಂತಾ
ಶ್ರೀಮತಿ
ನಾಗರಾಜ
ಚಂದ್ರಶೇಖರ (ಮಗ)
ರಮಾ (ಮಗಳು)
ಶಶಾಂಕ (ಮಗ)
ಸಂದೀಪ (ಮಗ)
ಸಂಜಯ (ಮಗ)
ಶುಭಾ (ಮಗಳು)
ಚ್ಯವನ
ಆರಿದ್ರ
ಅರ್ಪಿತ
ಸ್ಕಂದ
ದೀಕ್ಷ
ಸಾಯಿ ಆಶೀಶ್
* ಚಂದ್ರಶೇಖರ ದೇವುಡು ಚ್ಯವನ (ಮಗ) ಶಶಾಂಕ ಅವನ ಮಗ ಆರಿದ್ರ (ಮಗ) } ಆಸ್ಟ್ರೇಲಿಯಾದಲ್ಲಿ ನೆಲಸಿದ್ದಾರೆ
* ಸಂಜಯ ದೇವುಡು - ಸೀಷಲ್ಸ್‌ನಲ್ಲಿ ಕೆಲಸದಲ್ಲಿದ್ದಾರೆ
* ಆತ್ಮಪ್ರಸನ್ನ - ದುಬಾಯಿಯಲ್ಲಿ ಕೆಲಸದಲ್ಲಿದ್ದಾರೆ

ಮುನ್ನುಡಿ

ಕರ್ಣನ ಬಗೆಗೆ ತುಂಬ ಅಭಿಮಾನವುಳ್ಳ ಪಂಪ ಒಂದೆಡೆ ಕೃಷ್ಣನ ಬಾಯಲ್ಲಿ ಹೀಗೆ ಹೇಳಿಸುತ್ತಾನೆ: `ಕರ್ಣಂ ಮುಂಪುಟ್ಟಿ ಪುಟ್ಟಿತ್ತು ಅಳವುಂ ಚಾಗಂ...ಕರ್ಣಂ ಗಂಡಲ್ತೆ' ಎಂದು. `ಕರ್ಣ ಹುಟ್ಟಿದ ಮೇಲೆ ಪರಾಕ್ರಮ ತ್ಯಾಗ ಎಂಬುವುಗಳು ಹುಟ್ಟಿದುವು. ಕರ್ಣ ವೀರನಲ್ಲವೇ? `ಹೌದು, ಅದೇ ಮಾತುಗಳನ್ನು ಆಧುನಿಕ ಕನ್ನಡ ಸಾಹಿತ್ಯ ಶಿಲ್ಪಿ ಶ್ರೀ ದೇವುಡು ನರಸಿಂಹಶಾಸ್ತ್ರಿಗಳವರಿಗೂ ಇಂದು ಅನ್ವಯಿಸಿ ಹೇಳಬಹುದಾಗಿದೆ: ದೇವುಡುರವರು ಬರೆದ ಮೇಲೆ ಕನ್ನಡದಲ್ಲಿ ಪೌರಾಣಿಕ ಕಾದಂಬರಿ ಅಸ್ತಿತ್ವಕ್ಕೆ ಬಂತು; ಅವರು ಅನ್ಯಾದೃಶ ಸಾಹಿತಿಗಳಲ್ಲವೆ? ಎಂದು ಕನ್ನಡ ಕಣ್ತೆರೆಯುತ್ತಿದ್ದ ನವೋದಯದ ಕಾಲ ಅದು. ಆ ದಿನ ತನ್ನ ಸ್ಥಿತ್ಯಂತರದ ಸಂಕ್ರಮಣ ಸಂದರ್ಭದಲ್ಲಿ ಕನ್ನಡ ಹೊಸ ಹೊಸ ಆಯಾಮಗಳನ್ನು ಹೊಂದಿ ಹೊರಹೊಮ್ಮುವಾಗ ಪೌರಾಣಿಕ ಕಾದಂಬರಿಯ ಆವಿರ್ಭಾವವನ್ನೂ ಬಯಸಿತು. ಅದನ್ನು ಪೂರ್ಣಗೊಳಿಸಿದ ಏಕಮೇವಾದ್ವಿತೀಯರೆಂದರೆ ದೇವುಡು ನರಸಿಂಹ ಶಾಸ್ತ್ರಿಗಳು. ಕಸುವುಳ್ಳ ಕನ್ನಡದಲ್ಲಿ ಹೊಸ ಹಾದಿ ನಿರ್ಮಿಸಿ ಪಥ ನಿರ್ಮಾಪಕರು ತಾವಾದವರು.

ದೇವುಡುರವರನ್ನು ನಾನು ನೋಡಿದ್ದು ಚಿತ್ರದುರ್ಗದ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ. ತೊಟ್ಟಿದ್ದ ಅಂಗಿ ಕಳಚಿಟ್ಟು, ಮೇಲೊಂದು ಉತ್ತರೀಯ ಹೊದೆದು ಮೇಜಿನ ಮೇಲೆ ಪದ್ಮಾಸನ ಹಾಕಿ ಕುಳಿತು ಸುಮಾರು ಒಂದೂಕಾಲು ಗಂಟೆ ಭಾಷಣ ಮಾಡಿದ ಅವರ ಭಂಗಿ ಇನ್ನೂ ಕಣ್ಣಲ್ಲಿ ಕಟ್ಟಿದೆ. ಅವರ ಅಮೃತೋಪಮ ನುಡಿಗಳು ಇನ್ನೂ ನನ್ನ ಕಿವಿಗಹ್ವರಗಳಲ್ಲಿ ಅನುರಣಿತವಾಗುತ್ತಿವೆ. ಅವರೊಂದು ವಿದ್ವತ್ ಪ್ರತಿಭೆಗಳ ಮೇರುವಾಗಿದ್ದರು; ಪ್ರಾಂಜಲ ಮನದ ತೀರ್ಥವಾಗಿದ್ದರು. ಅವರ ಬದುಕು ಹೇಗೊ ಅವರ ಸಾಹಿತ್ಯವೂ ಹಾಗೆಯೇ ಪವಿತ್ರ ಪಾರದರ್ಶಕ. ಅಂತಹ ಶ್ರೀಮಂತ ಸಾಹಿತಿಗೆ ಅಭಿಮಾನಿಗಳು ಅವರಿಗರ್ಪಿಸಿದ್ದ ನುಡಿಪುಷ್ಪಗಳನ್ನು ಒಂದೆಡೆ ಕೋದು`ದೇವುಡು ದರ್ಶನ' ಎಂಬ ಹಾರ ಸಿದ್ಧಪಡಿಸಿದ್ದಾರೆ. ಶ್ರೀ ಹೊ. ರಾ. ಸತ್ಯನಾರಾಯಣ ರಾವ್ ಅವರು. ಇದು ಎಂದೆಂದಿಗೂ ಬಾಡದ ಪುಷ್ಪಮಾಲೆ. ಇದನ್ನು ಕಟ್ಟಿದ ಮಾಲೆಗಾರರು ಅಭಿನಂದನೀಯರು.

`ದೇವುಡು ದರ್ಶನ' ಎರಡು ರೂಪದ್ದು: ಒಂದು ವ್ಯಕ್ತಿಯನ್ನು ಕುರಿತದ್ದು, ಮತ್ತೊಂದು ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದು. ವ್ಯಕ್ತಿಯಾಗಿ ದೇವುಡುರವರ ಬದುಕಿನ ಪಾರಿಶುದ್ಧ್ಯವನ್ನು ಕೆಲವರು ಬಣ್ಣಿಸಿದ್ದರೆ, ಹಲವರು ಅವರ ಬಹುಮುಖ ಪ್ರತಿಭೆಯ ವ್ಯಕ್ತಿತ್ವವನ್ನು ಅನಾವರಣಗೊಳಿಸಿದ್ದಾರೆ. ವ್ಯಕ್ತಿಗೆ ಒಂದು ಮುಖವಾದರೆ, ವ್ಯಕ್ತಿತ್ವಕ್ಕೆ ನಾನಾ ಮುಖಗಳು: ಹರಿಯುವ ನೀರಿನಂತೆ, ಉರಿಯುವ ಜ್ಯೋತಿಯಂತೆ. ಅಂತಹದೇ ದೀಪ್ಯಮಾನ ಜ್ಯೋತಿರೂಪದ ವ್ಯಕ್ತಿತ್ವ ದೇವುಡು ನರಸಿಂಹಶಾಸ್ತ್ರಿಗಳವರದು. ಅದು ಮೂರ್ತಿಮತ್ತಾಗಿ ನಿಂತಿರುವುದು ಅವರ ಮಹಾಕ್ಷತ್ರಿಯ, ಮಹಾಬ್ರಾಹ್ಮಣ, ಮಹಾದರ್ಶನ ಕಾದಂಬರಿಗಳಲ್ಲಿ. ಕ್ಷಾತ್ರ ಓಜಸ್ಸು ಬ್ರಹ್ಮತೇಜಸ್ಸಾಗಿ ಪರಿವರ್ತಿತವಾದ ಅತ್ಯುದ್ಭುತ ಘಟನೆಯ ಅವಿಸ್ಮರಣೀಯ ಅಭಿವ್ಯಕ್ತಿ ಋಷಿಸದೃಶ ಬದುಕಿನ ದೇವುಡುರವರಿಂದ ಮಾತ್ರ ಸಾಧ್ಯ ಎಂಬುದು

ಎಂಥವರಿಗೂ ವೇದ್ಯವಾಗುತ್ತದೆ. ಯಾಜ್ಞವಲ್ಕ್ಯದರ್ಶನವನ್ನು ಎದೆ ಎದೆಗೆ ಮುಟ್ಟಿಸುವಲ್ಲಿ ಅವರ ಗೆಲುವಿದೆ. ಅವರ ಕಸುವುಳ್ಳ ಲೇಖಣಿಯಲ್ಲಿ ಕಾಂತಿ ಇದೆ; ಅಯಸ್ಕಾಂತದ ಆಕರ್ಷಣೆಯೂ ಇದೆ. ಈ ಶತಮಾನೋತ್ಸವ ವೇಳೆಯಲ್ಲಿ ಅವೆಲ್ಲವೂ ಹೊರಬರಲೆಂದು ಆಶಿಸುತ್ತೇನೆ.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕೇವಲ ಕಥಾನಕಗಳಾಗಿ ಮೂಡಿದ ಪೌರಾಣಿಕಾಂಶಗಳು ಇಪ್ಪತ್ತರ ತಾರುಣ್ಯದಲ್ಲಿ ದೇವುಡುರವರ ಪ್ರಬುದ್ಧ ಲೇಖಣಿಯ ಮೂಲಕ ಕಾದಂಬರಿಗಳಾಗಿ ಹೊರಬಂದಂತೆ, ಆದರ್ಶವೆನಿಸಿದಂತೆ, ಐತಿಹಾಸಿಕ ಕಾದಂಬರಿ ರಚನೆಯೂ ರೂಪುಗೊಂಡದ್ದುಂಟು. ಶ್ರೀಯುತರ `ಮಯೂರ' ಅಂತಹ ಒಂದು ಮಾದರಿ ಐತಿಹಾಸಿಕ ಕಾದಂಬರಿ.

ದೇವುಡು ಅವರ ಗ್ರಂಥಗಳ ವಿಮರ್ಶೆ ಬಹಳ ವಿರಳವಾಗಿವೆ. ದೇವುಡು ಅವರ ಕೃತಿಗಳನ್ನು ಕುರಿತು ಸಮಗ್ರ ವಿಮರ್ಶೆ ಗ್ರಂಥವೊಂದು ಇಲ್ಲದಿರುವ ಕೊರತೆಯನ್ನು ನಾಡಿನ ಶ್ರೇಷ್ಠ ವಿಮರ್ಶಕರೂ, ವಿದ್ವಾಂಸರೂ ಆದ ಶ್ರೀ ಕೆ. ನರಸಿಂಹೆ ಮೂರ್ತಿಯವರು ಬಹುಮಟ್ಟಿಗೆ ನಿವಾರಿಸಿರುವುದು ಈ ಗ್ರಂಥದ ವಿಶಿಷ್ಟತೆ. ಇಂಥವೆನಿತೋ ರಚನೆಯ ಮೂಲಕ ಕನ್ನಡಮ್ಮನ ಮಡಿಲು ತುಂಬಿದ, ಮುಡಿಯ ಸಿಂಗರಿಸಿದ ದೇವುಡುರವರ ಪದತಲದಲ್ಲಿ ನನ್ನ ಪ್ರಣಾಮಪೂರ್ವಕ ಪುಷ್ಪಾಂಜಲಿ ಈ ಮುನ್ನುಡಿ. ಇದಕ್ಕೆ ಕಾರಣರಾದ ಆತ್ಮೀಯ ಅನಿಮಿತ್ತ ಬಂಧುಗಳಾದ ಶ್ರೀ ಗಂಗಾಧರ ದೇವುಡುರವರಿಗೆ ಅನಂತಾನಂತ ಪ್ರಣಾಮಗಳು. ಇವರು ತಂದೆಗೆ ತಕ್ಕ ಮಗ; ತಂದೆಯ ರಕ್ತ ಅವರ ಧಮನಿ ಧಮನಿಗಳಲ್ಲಿ ಹರಿದಂತೆ ಅವರ ಚೈತನ್ಯವೂ ತುಂಬಿ ಬರಲಿ ಎಂದು ಹಾರ್ದಿಕವಾಗಿ ಹಾರೈಸುತ್ತೇನೆ. ಅಂತೆಯೇ ನನ್ನ ಅಭಿಮಾನಿ ಮಿತ್ರ ಶ್ರೀ ಉದಯ ಧರ್ಮಸ್ಥಳರವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಕನ್ನಡಕುಲಕೋಟಿಗೆ ತಾಯ್ಮನೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಮಿತ್ರ ಶ್ರೀ ಹೊರಾಸರವರು ಸಿದ್ಧಪಡಿಸಿಕೊಡುತ್ತಿರುವ ಈ ಕೃತಿರತ್ನವನ್ನು ಹೃದಯತುಂಬಿ ಸ್ವಾಗತಿಸುತ್ತೇನೆ.

ಡಾ|| ಸಾ.ಶಿ. ಮರುಳಯ್ಯ
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಪ್ರಕಾಶಕರ ಮಾತು

ಬಹುಮುಖ ಪ್ರತಿಭೆಯ ವ್ಯಕ್ತಿತ್ವವನ್ನು ಹೊಂದಿದ್ದ ದೇವುಡು ಅವರ ಮಗನಾಗಿರುವುದು ನನ್ನ ಅದೃಷ್ಟವೆಂದೇ ಭಾವಿಸುತ್ತೇನೆ. ಇಂತಹ ಮಹಾವಿದ್ವಾಂಸರು ಯಾವ ರೀತಿ ಜೀವನವನ್ನು ಎದುರಿಸಿದರು, ಹೇಗೆ ಇದ್ದರು ಎಂದು ಹತ್ತಿರದಿಂದ ನೋಡುವ ಭಾಗ್ಯ ನನ್ನದಾಗಿತ್ತು. ಆದರೇ ಕೇವಲ ಐವತ್ತು ವರ್ಷಗಳಲ್ಲಿ ಬದಲಾಗಿರುವ ಈ ಸಮಾಜದಲ್ಲಿ, ಈಗಿನ ಪರಿಸ್ಥಿತಿಯಲ್ಲಿ ಗಮನಿಸಿದಲ್ಲಿ, ಒಬ್ಬ ವ್ಯಕ್ತಿ ಜೀವನದಲ್ಲಿ ಈ ರೀತಿ ಇರಲು ಸಾಧ್ಯವೇ? ಎಂಬ ಸಂದೇಹ ನನಗೇ ಬರುವಂತಾಗಿದೆ.

ಸ್ವತಂತ್ರರಾಗಿ ಜೀವನವನ್ನು ನಡೆಸಿ, ನಿಸ್ವಾರ್ಥತೆಯಿಂದ ಸಮಾಜಸೇವೆ ಮಾಡಿ, ಕನ್ನಡ ನಾಡು, ನುಡಿ, ನಡೆಗಳಿಗಾಗಿ ಬಹುಮುಖ ಸೇವೆಯನ್ನು ಸಲ್ಲಿಸಿದ ಮಹಾವ್ಯಕ್ತಿಗೆ, ಯಾವ ಒಂದು ಪುರಸ್ಕಾರ, ಗೌರವ ಯಾವುದೂ ಅವರ ಜೀವಿತ ಕಾಲದಲ್ಲಿ ದೊರೆಯದೆ ಹೋದುದು ವಿಷಾದನೀಯವಾದುದು.

ಇಂತಹ ದಾರ್ಶನಿಕ ಸಾಹಿತಿಗಳನ್ನು, ಕನ್ನಡಿಗರು ಆಗಲೇ ಮರೆಯುತ್ತಿದ್ದಾರಲ್ಲ ಎಂದು ಮನಸ್ಸಿನಲ್ಲಿ ತೊಳಲಾಡುತ್ತಾ ಹೇಗೆ ಮುಂದುವರೆಯಬೇಕೆಂದು ಪರದಾಡುತ್ತಿದ್ದಾಗ ದೇವುಡು ಅವರ ಮೇಲೆ ಅಪಾರ ಗೌರವವನ್ನು ಇಟ್ಟಿದ್ದ ಶಾರದಾ ಪ್ರಕಟನಾಲಯದ ದಿ|| ಶ್ರೀ ಬಸವರಾಜ್ ಅವರು, ಪ್ರೊ|| ಜಿ. ಅಶ್ವತ್ಥನಾರಾಯಣ್‌ರವರು, ಸುವಿದ್ಯಾ ಪ್ರಕಾಶನದ ಶ್ರೀ ಸತ್ಯನಾರಾಯಣ ಅವರೂ ಹಾಗೂ ಇನ್ನೂ ಕೆಲವು ಆಪ್ತ ಮಿತ್ರರು ಬಂದು, ಏನಾದರೂ ಮಾಡಿ ದೇವುಡು ಅವರ ಹೆಸರು ಚಿರಸ್ಥಾಯಿಯಾಗಿ ನಿಲ್ಲುವಂತೆ ಮಾಡಲೇಬೇಕೆಂದು ಒತ್ತಾಯ ಮಾಡುತ್ತಾ ಬಂದರು. ಇದಲ್ಲದೇ ನಮ್ಮ ತಾಯಿಯವರಾದ ದಿ|| ಗೌರಮ್ಮ ದೇವುಡು ಅವರು ನಮಗೆಲ್ಲಾ ನೀವು ಏನಾದರೂ ಮಾಡಿ ನಿಮ್ಮ ತಂದೆಯವರ ಪುಸ್ತಕಗಳನ್ನು ಪುನರ್ ಮುದ್ರಣ ಮಾಡಿಸಬೇಕು.ಎಂದು ಪದೇ ಪದೇ ಕಳಕಳಿಯಿಂದ ಹೇಳುತ್ತಿದ್ದರು. ದೇವುಡು ಅವರ ಬೆನ್ನೆಲುಬಾಗಿ ನಿಂತು, ಅವರ ಕಷ್ಟಗಳಲ್ಲಿ ಸಂಪೂರ್ಣ ಭಾಗಿಯಾಗಿ, ಸಂಸಾರದ ಭಾರವನ್ನೂ ನಮ್ಮ ತಾಯಿ ಹೊರದಿದ್ದಲ್ಲಿ ದೇವುಡು ಅವರ ಸಾಧನೆಗಳು ಬರಹ ರೂಪದಲ್ಲಿ ಬರುತ್ತಿರಲಿಲ್ಲ. ಅದಕ್ಕಾಗಿ ನಾವಷ್ಟೇ ಅಲ್ಲ ಕನ್ನಡಿಗರೆಲ್ಲಾ ಎಷ್ಟು ಕೃತಜ್ಞರಾದರು ಸಾಲದು. ಇಂದು ಅವರಿಲ್ಲದಿರುವುದು ನಮ್ಮೆಲ್ಲರ ಮನಸ್ಸಿಗೆ ನೋವುಂಟು ಮಾಡಿದೆ. ಈ ಹಿನ್ನೆಲೆಯಲ್ಲಿ ದೇವುಡು ಅವರ ಪಿತೃಋಣ ತೀರಿಸುವ ದೃಷ್ಟಿಯಿಂದ ಅವರ ಕೃತಿಗಳನ್ನು ಪುನರ್ ಮುದ್ರಣ ಮಾಡಿಸುವುದು, ಅಲ್ಲದೆ ಅವರು ಸಲ್ಲಿಸಿರುವ ಸೇವೆಯನ್ನು, ಉಪನ್ಯಾಸಗಳ ಮೂಲಕ ಜನರಲ್ಲಿ ಅರಿವುಂಟುಮಾಡುವುದು ಎಂದು ನಿರ್ಧರಿಸಿ ದೇವುಡು ಪ್ರತಿಷ್ಠಾನ ೧೯೯೩ನೇಯ ಮೇ ತಿಂಗಳಲ್ಲಿ ಸ್ಥಾಪನೆಗೊಂಡಿತು. ಅನಂತರ, ದೇವುಡು ಪ್ರತಿಷ್ಠಾನದ ಆಶ್ರಯದಲ್ಲಿ ಅವರ ಪುಸ್ತಕಗಳನ್ನು ಪುನರ್‌ಮುದ್ರಣ ಮಾಡಿಸುತ್ತಾ ಹಾಗೂ ಕರ್ನಾಟಕದ ನಾನಾ ಕಡೆಗಳಲ್ಲಿ ದೇವುಡು ಅವರ ಜೀವನ, ಸಾಧನೆ, ಸಾಹಿತ್ಯಗಳನ್ನು ಕುರಿತು ವಿಚಾರ ಸಂಕಿರಣಗಳನ್ನು ನಡೆಸುತ್ತಾ ಬರಲಾಯಿತು.

ಅದಲ್ಲದೇ, ದೇವುಡು ಅವರ ಜನ್ಮಶತಾಬ್ದಿ ಕಾರ್ಯಕ್ರಮಗಳನ್ನು ೧೯೯೫ರಿಂದ ಹಮ್ಮಿಕೊಂಡಿದ್ದು ಇದೀಗ ಜನ್ಮಶತಾಬ್ಧಿಯ ಕಾರ್ಯಕ್ರಮ ಸರಣಿಯ ಮುಕ್ತಾಯ ಸಮಾರಂಭದಲ್ಲಿ "ದೇವುಡು ದರ್ಶನ" ಸಂಸ್ಮರಣ ಗ್ರಂಥವನ್ನು ನಾಡಿನ ಜನಕ್ಕೆ ಕಿರುತಾರೆಯಾಗಿ ಸಲ್ಲಿಸಲಾಗುತ್ತಿದೆ. ಈ ರೀತಿ, ದೇವುಡು ಅವರಿಗೆ ಈ "ದೇವುಡು ದರ್ಶನ' ದ ಮೂಲಕ ಪಿತೃಋಣವನ್ನು ನಮ್ಮ ಕುಟುಂಬ ಒಪ್ಪಿಸುವ ಅವಕಾಶ ಸಿಕ್ಕಿದೆ.

ದೇವುಡು ಅವರ ಜೀವನ-ಸಾಧನೆ-ವ್ಯಕ್ತಿತ್ವ-ಸಾಹಿತ್ಯಗಳೆಂಬ ಚತುರ್ಮುಖಗಳನ್ನು ಹತ್ತಿರದಿಂದ ಕಂಡವರು, ಆತ್ಮೀಯರಿಂದ ಕೇಳಿದವರು, ಅಧ್ಯಯನದಿಂದ ತಿಳಿದ ಮಹನೀಯರು, ಅನುಭವ ಪೂರ್ಣ ಲೇಖನಗಳನ್ನು ನೀಡಿ, `ದೇವುಡು ದರ್ಶನ' ಗ್ರಂಥವನ್ನು ಅಮೂಲ್ಯವಾಗಿಸಿದ್ದಾರೆ. ಅವರಿಗೆಲ್ಲಾ ನಮ್ಮ ಕೃತಜ್ಞತೆಗಳು.

ನಾಡಿನ ಹೆಸರಾಂತ ವಿದ್ವಾಂಸರೂ ಸಾಹಿತಿಗಳೂ ಅನೇಕರು ದೇವುಡು ಅವರ ಮೇಲಿನ ಅಭಿಮಾನದಿಂದ ಮತ್ತು ಅವರ ಸಾಹಿತ್ಯವನ್ನು ಮೆಚ್ಚಿಕೊಂಡಿದ್ದರ ಫಲವಾಗಿ ಪರಿಚಯ ಲೇಖನಗಳನ್ನು ವಿಮರ್ಶಾ ಬರಹಗಳನ್ನು ನೀಡಿ ಉಪಕರಿಸಿದ್ದಾರೆ. ಅವರಿಗೆಲ್ಲಾ ಕೃತಜ್ಞತೆಯನ್ನು ಸಲ್ಲಿಸಬೇಕಾಗಿವೆ. ಈ ಪೈಕಿ, ಕನ್ನಡನಾಡಿನ ಪ್ರಸಿದ್ಧ ವಿಮರ್ಶಕರಾದ ವಿದ್ವಾಂಸರೂ ಆದ ದೇವುಡು ಅವರನ್ನು ಚೆನ್ನಾಗಿ ಬಲ್ಲವರಾದ ಶ್ರೀ ಕೆ. ನರಸಿಂಹಮೂರ್ತಿ ಅವರು ದೇವುಡು ಅವರ ಕಥೆ, ಕಾದಂಬರಿ, ನಾಟಕಗಳನ್ನು ಕುರಿತು ಹತ್ತಾರು ವಿಮರ್ಶಾ ಲೇಖನಗಳನ್ನು ಬರೆದು ಮರೆತುಹೋದ ಮಹಾನುಭಾವರಾದ ದೇವುಡು ಅವರನ್ನು ಈ ತಲೆಮಾರಿನವರಿಗೆ ನೆನಪಿಗೆ ತರುವುದರಲ್ಲಿ ಅಮೂಲ್ಯ ಕೊಡುಗೆ ಸಲ್ಲಿಸಿದ್ದಾರೆ. ಅಂತೆಯೇ `ದೇವುಡು ದರ್ಶನ' ಗ್ರಂಥದಲ್ಲಿ ದೇವುಡು ಅವರನ್ನು ಕುರಿತು ಮತ್ತು ಅವರ ಕೃತಿಗಳನ್ನು ಕುರಿತಾದ ಲೇಖನಗಳು ಕನ್ನಡ ನಾಡಿನ ವಿವಿಧ ಪತ್ರಿಕೆಗಳಲ್ಲಿ ಚೆಲ್ಲಾಡಿ ಹೋದುದನ್ನು ಬಹಳ ಶ್ರಮಪಟ್ಟು ಸಂಗ್ರಹಿಸಿ ಮುದ್ರಣಕ್ಕೆ ಸಿದ್ಧಪಡಿಸಿದ ಆತ್ಮೀಯ ಮಿತ್ರರೂ ಸಾಹಿತಿಗಳೂ ಉತ್ಸಾಹಿ ಕನ್ನಡ ಕಾರ್ಯಕರ್ತರಾದ ಶ್ರೀ ಹೊ.ರಾ. ಸತ್ಯನಾರಾಯಣ ಅವರು ನಮಗೆ ದೊರತಿದ್ದಾರೆ. ಈ ಇಬ್ಬರು ಮಹನೀಯರಿಗೆ ನಾವು ತುಂಬಾ ಆಭಾರಿಯಾಗಿದ್ದೇವೆ. ದೇವುಡು ಅವರನ್ನು ಕುರಿತ ಲೇಖನಗಳನ್ನು ನಾಡಿನ ಪತ್ರಿಕೆಗಳು ಪ್ರಕಟಿಸಿ ಉಪಕರಿಸಿವೆ. ಆ ಪತ್ರಿಕೆಗಳ ಸಂಪಾದಕರಿಗೆ ನಮ್ಮ ವಂದನೆಗಳು. ಈ ವಿಚಾರದಲ್ಲಿ ವಿಶೇಷ ನೆರವಿತ್ತ ಪತ್ರಕರ್ತ ಸಾಹಿತಿ ಶ್ರೀ ವೈ.ಎನ್.ಕೆ. ಅವರಿಗೆ ನಮ್ಮ ವಂದನೆಗಳು.

ದೇವುಡು ಅವರ ಶತಾಬ್ದಿ ಕಾರ್ಯಕ್ರಮಗಳನ್ನು ನಾಡಿನಲ್ಲೆಲ್ಲಾ ವರುಷಾದ್ಯಂತ ನಡೆಸಲು ಉದ್ದೇಶಿಸಿದಾಗ ದೇವುಡು ಪ್ರತಿಷ್ಠಾನದೊಂದಿಗೆ ಮತ್ತೂ ತಾವಾಗಿ ನಾಡಿನ ಸಂಘಸಂಸ್ಥೆಗಳು, ವಿಚಾರ ಸಂಕಿರಣ, ಉಪನ್ಯಾಸ, ಗೋಷ್ಠಿ, ಸಂವಾದ ಮೊದಲಾದ ನಾನಾ ಬಗೆಯ ಕಾರ್ಯಕ್ರಮಗಳನ್ನು ಏರ್ಪಡಿಸಿ, ದೇವುಡು ಅವರ ನಾಡು-ನುಡಿಗಳ ಸೇವೆಗೆ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿ ನಮಗೆ ಸ್ಫೂರ್ತಿ ತಂದಿದ್ದಾರೆ. ಅವರ ನೆನಪನ್ನು ಎಷ್ಟು ನೆನದರೂ ಸಾಲದು.

ದೇವುಡು ಅವರ ಕೃತಿಗಳು ಇಂದಿನ ತಲೆಮಾರಿಗೆ ದೊರೆಕಿಸಲು. ಸುವಿದ್ಯಾಪ್ರಕಾಶನ, ಕಾಮಧೇನು ಪ್ರಕಾಶನ, ಪ್ರಗತಿ ಪ್ರಕಾಶನದವರು ಪ್ರಕಟಿಸಿ ನೆರವಾಗಿದ್ದಾರೆ. ಅವರ ಸೇವೆ ಸ್ಮರ

ಣೀಯ. ಶ್ರೀ ಶಾರದಾ ಪ್ರಕಾಶನದ ಪ್ರಕಾಶಕರಾದ ದಿ|| ಶ್ರೀ ಜಿ. ಬಸವರಾಜ್ ಅವರು ದೇವುಡು ಅವರ ಅನೇಕ ಕೃತಿಗಳನ್ನು ಮೊದಲ ಬಾರಿಗೆ ಪ್ರಕಟಿಸಿ ನಾಡಿನ ಜನರಿಗೆ ದೊರಕುವಂತೆ ಮಾಡಿದ್ದಾರೆ ಮತ್ತು ದೇವುಡು ಪ್ರತಿಷ್ಠಾನದ ಸ್ಥಾಪನೆಗೆ ನೆರವಾದವರಲ್ಲಿ ಒಬ್ಬರು. ದೇವುಡು ಅವರ ಆತ್ಮೀಯರಲ್ಲಿ ಒಬ್ಬರಾಗಿದ್ದ ಅವರ ಸ್ಮರಣೆ ಮಾಡುವುದು ಈ ಸಂದರ್ಭದಲ್ಲಿ ನಮ್ಮ ಕರ್ತವ್ಯವಾಗಿದೆ.

`ದೇವುಡು ದರ್ಶನ' ಗ್ರಂಥವನ್ನು ಸಿದ್ಧಪಡಿಸಿ ಹೊರತರುವಲ್ಲಿ, ದೇವುಡು ಅವರ ಆತ್ಮೀಯ, ಬಂಧುಮಿತ್ರರು, ನಾಡಿನ ಸಾಹಿತಿಗಳೂ, ಅಭಿಮಾನಿಗಳು ಹಲವಾರು ಬಗೆಗಳಲ್ಲಿ ನೆರವಾಗಿದ್ದಾರೆ. ಹಾಗೂ ಆಗಿಂದಾಗ್ಗೆ ಸೂಕ್ತ ಸಲಹೆಗಳನ್ನೂ ನೀಡುತ್ತಾ ಬಂದಿರುವ ಪ್ರೊ|| ಜಿ. ಅಶ್ವಥನಾರಾಯಣ ಮತ್ತು ಪ್ರೊ|| ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೆ ಆಭಾರಿಯಾಗಿದ್ದೇವೆ.

ದೇವುಡು ಅವರನ್ನು ವಿದ್ಯಾರ್ಥಿ ದೆಸೆಯಿಂದಲೂ ಮೆಚ್ಚಿಕೊಂಡು ಅವರ ಕೃತಿಗಳನ್ನು ಅಧ್ಯಯನ ಮಾಡಿ, `ದೇವುಡು' ಎಂಬ ಜೀವನ ಚರಿತ್ರೆಯ ಗ್ರಂಥ ಬರೆದ, ಪರಿಷತ್ತಿನ ಅಧ್ಯಕ್ಷರೂ, ಕವಿಗಳೂ, ವಿದ್ವಾಂಸರೂ ಆದ ಡಾ|| ಸಾ.ಶಿ. ಮರುಳಯ್ಯ ಅವರು ಈ ಗ್ರಂಥಕ್ಕೆ ಕೇಳಿದ ಕೊಡಲೇ ತುಂಬ ಸಂತಸದಿಂದ ಮುನ್ನುಡಿ ಬರೆದಿದ್ದಾರೆ. ಅವರ ಉಪಕಾರಕ್ಕೆ ಅನಂತ ಧನ್ಯವಾದಗಳು.

ದೇವುಡು ಅಭಿಮಾನಿಗಳಾದ ಪ್ರೊ|| ಎಂ.ಎಸ್. ನಾಗರಾಜ ಅವರು ಈ ಕೃತಿ ಪ್ರಕಟಣೆಯಲ್ಲಿ ಹಲವು ವಿಧದಲ್ಲಿ ನೆರವಾಗಿ ಬೆನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಯ ವಂದನೆಗಳು.

ಉದಯಾ ಮಾರ್ಕೆಟಿಂಗ್ಸ್‌ನ ಶ್ರೀ ಉದಯ ಧರ್ಮಸ್ಥಳ ಅವರು ಕೇವಲ ಮುದ್ರಕರಷ್ಟೇ ಅಲ್ಲ ಉತ್ತಮ ಸಾಹಿತಿಗಳೂ, ಕವಿಗಳೂ ಆಗಿದ್ದು, ಈ ಗ್ರಂಥವನ್ನು ತಪ್ಪಿಲ್ಲದೆ, ಅಂದವಾಗಿ ಸಕಾಲಕ್ಕೆ ತರುವಲ್ಲಿ ನೆರವಾಗಿದ್ದಾರೆ. ಅಂತೆಯೇ ಗ್ರಂಥದ ರಕ್ಷಾಪುಟದ ವಿನ್ಯಾಸವನ್ನು ಕಲಾವಿದ ಶ್ರೀ ರಾಜರಾಂರವರು ಸುಂದರವಾಗಿ ರೂಪಿಸಿಕೊಟ್ಟಿದ್ದಾರೆ. ಇವರಿಬ್ಬರಿಗೂ ನಮ್ಮ ಕೃತಜ್ಞತೆಗಳು.

ದೇವುಡು ಅವರ ಕೃತಿಗಳನ್ನು ಕುರಿತ ಸಮಗ್ರ ವಿಮರ್ಶಗ್ರಂಥವೊಂದು ಇಲ್ಲದಿರುವ ಕೊರತೆಯನ್ನು ನಿವಾರಿಸುವುದರಲ್ಲಿ `ದೇವುಡು ದರ್ಶನ' ಒಂದು ಹಿರಿಯ ಕೊಡುಗೆ ಆಗಿದೆ ಎಂದು ನಂಬಿದ್ದೇವೆ.

ಪ್ರಕಾಶಕರು

ಆತ್ಮೀಯ ದೇವುಡು ಶಾಸ್ತ್ರಿ

ಶ್ರೀ ನಿಟ್ಟೂರು ಶ್ರೀನಿವಾಸರಾಯರು

ಶ್ರೀ ದೇವುಡು ಅವರು ತಮ್ಮೆಲ್ಲರಿಗೂ ಚೆನ್ನಾಗಿ ತಿಳಿದವರೇ ಆಗಿದ್ದಾರೆ. ನನಗೆ ಈಗ ಕಾಲು ಶತಮಾನಕ್ಕಿಂತ ಹೆಚ್ಚಾಗಿ ಅವರ ಸ್ನೇಹ ಸೌಹಾರ್ದದ ಭಾಗ್ಯ ದೊರೆತಿದೆ. ಅದಲ್ಲದೆ ನಾನು ಅವರ ಕೃತಿಗಳಲ್ಲಿ ಕೆಲವನ್ನು ಪ್ರಕಟಿಸಿಯೂ ಇದ್ದೇನೆ. ನಮ್ಮ ಸಂಬಂಧವು ಹೀಗೆ ನಿಕಟವಾಗಿರುವುದರಿಂದ ನಾನು ಅವರನ್ನು ಕುರಿತು ಹೆಚ್ಚಾಗಿ ಹೇಳಿದರೆ ನಾಟಕೀಯವಾಗಿ ಕಂಡೀತು. ಆದ್ದರಿಂದ ಅವರ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ.

ಶ್ರೀ ದೇವುಡು ಅವರದು ಹತ್ತು ಜನರ ಮಧ್ಯೆ, ನೂರು ಮಂದಿಯ ಮಧ್ಯೆ, ಸಾವಿರ ಮಂದಿಯ ಮಧ್ಯೆ, ಗಮನವನ್ನು ಸೆಳೆಯುವ ಆಕೃತಿ. ಅದಕ್ಕೆ ತಕ್ಕ ಹಾಗೆಯೇ ಕಂಠ. ಈ ಸಂಬಂಧವಾಗಿ ನಾನು ಅವರನ್ನು ಮೊಟ್ಟಮೊದಲು ಕಂಡದ್ದು ನನ್ನ ನೆನಪಿಗೆ ಬರುತ್ತದೆ. ಏಕೆಂದರೆ ಆಗ ಅವರು ನನ್ನ ಗಮನವನ್ನು ಹಾಗೆಯೇ ಸೆಳೆದರು. ೧೯೨೨ರಲ್ಲೋ ೧೯೨೩ರಲ್ಲೋ ಸೆಂಟ್ರಲ್ ಕಾಲೇಜು ನಾಟಕ ಸಂಘದವರು ಮೈಸೂರಿಗೆ ಹೋಗಿದ್ದೆವು. ಆ ವರ್ಷದ ಕಾನ್ವೊಕೇಷನಿನಲ್ಲಿ ಡಿಗ್ರಿ ಪಡೆದವರ ಗೌರವಾರ್ಥವಾಗಿ ರವೀಂದ್ರನಾಥರ `Sacrifice' ಎಂಬ ನಾಟಕವನ್ನು ಆಡಿದೆವು. ಅದರ ಕಥಾವಸ್ತುವು ಬಹುಶಃ ತಮ್ಮೆಲ್ಲರಿಗೂ ತಿಳಿದೇ ಇದೆ. ಪೂಜಾರಿಯ ಪಾತ್ರದ ಸಂಬಂಧವಾಗಿ ಆ ನಾಟಕದಲ್ಲಿ ಕೆಲವು ಕಟೂಕ್ತಿಗಳಿರುವಂತೆ ಕಾಣುತ್ತವೆ. ನಾಟಕದ ಕೊನೆಯಲ್ಲಿ ಭಾಷಣಗಳಾಗುವ ವೇಳೆಯಲ್ಲಿ ಈ ವ್ಯಕ್ತಿಯು ಪ್ರೇಕ್ಷಕಗಣದ ಮಧ್ಯದಿಂದ ಎದ್ದುಬಂದು ನಾಟಕದಲ್ಲಿ ಕಾಣಬರುವದೆಂದು ಅವರಿಗೆ ತೋರಿದ ಅಭಿಪ್ರಾಯಗಳನ್ನು ಕುರಿತು ವಿಮರ್ಶಾತ್ಮಕವಾದ, ಆವೇಶಪೂರಿತವಾದ ಪುಟ್ಟ ಭಾಷಣವನ್ನು ಮಾಡಿದರು. ಇವರು ಯಾರು ಎಂದು ವಿಚಾರಿಸಲು `ನಿನಗೆ ಗೊತ್ತಿಲ್ಲವೆ? ಇವರೇ ದೇವುಡು ನರಸಿಂಹಶಾಸ್ತ್ರಿಗಳು, ಈ ಸಲ ಎಂ.ಎ. ಪರೀಕ್ಷೆ ಪಾಸ್ ಮಾಡಿದ್ದಾರೆ' ಎಂದು ನನ್ನ ಸ್ನೇಹಿತರೊಬ್ಬರು ಹೇಳಿದರು. ಅವರು ಹೇಳಿದ ರೀತಿಯಲ್ಲಿ ದೇವುಡು ಅವರು ಕಾಲೇಜಿನಲ್ಲಿ ಆಗಲೇ ಸುಪ್ರಸಿದ್ಧ ವ್ಯಕ್ತಿಗಳಾಗಿದ್ದರೆಂಬುದು ಕಾಣುತ್ತಿತ್ತು. ಈ ಸನ್ನಿವೇಶವು ದೇವುಡು ಅವರ ಸ್ವಭಾವ ಯಾವ ರೀತಿಯದೆಂಬುದಕ್ಕೆ ನಿದರ್ಶನವಾಗಿದೆ. ಸಾಂಪ್ರದಾಯಿಕತೆಯ ಪ್ರತಿನಿಧಿ `Sacrifice' ನಾಟಕದ ಪೂಜಾರಿ. ಅವನ ರೀತಿ ನೀತಿಗಳನ್ನು ಟೀಕಿಸಿದಂತೆ ಕಂಡುಬಂದದ್ದು ದೇವುಡು ಅವರ ಮನಸ್ಸಿಗೆ ಒಪ್ಪಲಿಲ್ಲ. ಅದು ಕೇವಲ ಮನಸ್ಸಿನೊಳಗಿನ ಟೀಕೆಯಾಗಿಯೇ ನಿಲ್ಲುವುದಕ್ಕೆ ಬಿಡುವುದು ಶ್ರೀ ದೇವುಡು ಅವರ ಸ್ವಭಾವವಲ್ಲ. ದೇವುಡು ಮತ್ತು ಇತರ ಪದವೀಧರರ ಗೌರವಕ್ಕಾಗಿ ಆಡಿದ ನಾಟಕದ ಕೊನೆಯಲ್ಲಿ ನಿರೀಕ್ಷಿಸಬಹುದಾದ್ದು ಔಪಚಾರಿಕ ಭಾಷಣಗಳು. ಅದೇ ಸಾಮಾನ್ಯ ಸಂಪ್ರದಾಯ. ಆದರೆ ಅಂಥ ಸಂಪ್ರದಾಯವು ದೇವುಡು ಅವರ ಭಾವೋದ್ವೇಗದ ಮುಂದೆ ನಿಲ್ಲಲಿಲ್ಲ. ಅದಾದ ಮೇಲೆ ನಾನು ಅವರ ಅನೇಕ ಭಾಷಣಗಳನ್ನು ಕೇಳಿದ್ದೇನೆ. ದೇವುಡು ಅವರು ನಮ್ಮ ಅತ್ಯುತ್ತಮ ವಾಗ್ಮಿಗಳಲ್ಲೊಬ್ಬರೆಂದು ನಿಸ್ಸಂಶಯವಾಗಿ ಹೇಳಬಹುದು. ಇದರಿಂದ ಎಲ್ಲರೂ ಸಂತೋಷಪಡುತ್ತಿದ್ದರು,

ಲಾಭ ಪಡೆಯುತ್ತಿದ್ದರು. ದೇವುಡು ಅವರು ರಾಜಕೀಯ ರಂಗಕ್ಕೆ ಪುನಃ ಇಳಿದ ಮೇಲೆ ಅವರ ಪಕ್ಷದವರಿಗೆ ಇಮ್ಮಡಿ ಲಾಭಕ್ಕೆ, ಇತರ ಪಕ್ಷಗಳಿಗೆ ತಲೆನೋವಿಗೆ ಕಾರಣರೂ ಆಗಿದ್ದರು.

ಇವರ ಸ್ವಾತಂತ್ರ ವಿಚಾರಮನೋವೃತ್ತಿಯು ಗಮನಾರ್ಹವಾದ್ದು. ಏಕೆಂದರೆ ಇವರು ಪುರಾತನ ಸಂಸ್ಕೃತಿಯ ರಕ್ಷಕರಾದ ವಿದ್ವಾಂಸರುಗಳ ವಂಶದಲ್ಲಿ ಹುಟ್ಟಿ ಬೆಳೆದವರು. ವೇದಾಂತ ಸಾಹಿತ್ಯಗಳಲ್ಲಿ ಹಿಂದಿನ ಪದ್ಧತಿಯ ಪ್ರಕಾರ ಶಿಕ್ಷಣವನ್ನು ಪಡೆದಿದ್ದಾರೆ. ಕಾಲೇಜಿನ ವಿದ್ಯಾವ್ಯಾಸಂಗವನ್ನು ಮುಗಿಸಿದ ಮೇಲೂ ನಮ್ಮ ಹಿಂದಿನ ಶಾಸ್ತ್ರಗಳ ಅಭ್ಯಾಸವನ್ನೂ ಮುಂದುವರೆಸಿದ್ದಾರೆ. ಈ ರೀತಿ ಇವರ ಪಾಂಡಿತ್ಯವು ವಿಶಾಲವಾದ್ದಾಗಿದೆ.

ಸಾಹಿತ್ಯಕ್ಷೇತ್ರದಲ್ಲಿ ಇವರ ಚಟುವಟಿಕೆಯು ಇವರ ವಿದ್ಯಾರ್ಥಿದೆಸೆಯಲ್ಲಿಯೇ ಆರಂಭ ವಾಗಿರುವ ಹಾಗೆ ಕಾಣುತ್ತದೆ. ಅನೇಕ ವಿಧದ ಸಾಹಿತ್ಯದಲ್ಲೂ ಇವರು ಪ್ರಯೋಗವೆಸಗಿ ಯಶಸ್ವಿ ಗಳಾಗಿದ್ದಾರೆ. ಶಿಶು ಸಾಹಿತ್ಯ ಬಾಲಸಾಹಿತ್ಯ-ಇವಕ್ಕೆ ಅವರ ಕಥೆಗಳೇ-ಬುದ್ಧಿಯ ಕಥೆಗಳು, ದೇವುಡು ಕಥೆಗಳು, ಮಕ್ಕಳ ಕಥೆಗಳು, ಮಕ್ಕಳ ಕಾಳಿದಾಸ, ಷೇಕ್ಸ್‌ಪಿಯರ್-ನಿದರ್ಶನ, `ಸಾವಿತ್ರೀ', `ಮಯೂರ' ನಾಟಕಗಳಿಗೆ `ಕಳ್ಳರ ಕೂಟ', `ಅಂತರಂಗ', `ಸೋಲೋ ಗೆಲುವೋ' ಇತ್ಯಾದಿಗಳು ಕಾದಂಬರಿಗಳಿಗೆ, `ಮಹಾಬ್ರಾಹ್ಮಣ' ಇದು ಇವರ ಇತ್ತೀಚಿನ ಕಾದಂಬರಿ. ನಮ್ಮ ಮಹಾರಾಜರ ಆಶ್ರಯದಲ್ಲಿ ಪ್ರಕಟ ವಾಗುತ್ತಿರುವ ಗ್ರಂಥಮಾಲೆಯಲ್ಲಿ ಇವರ ಯೋಗವಾಸಿಷ್ಠದ ಭಾಷಾಂತರದ ೧೭ ಸಂಪುಟಗಳು ಪ್ರಕಟವಾಗಿವೆ. ಇವರ `ಮೂಲ ಸಂಸ್ಕೃತ'ದ ಮೇಲಿನ ಪುಸ್ತಕ ಸಂಸ್ಕೃತ ಭಾಷೆಯ ಶಿಕ್ಷಣದಲ್ಲಿ ಒಂದು ಹೊಸ ಪ್ರಯೋಗ, `ಸಂಗ್ರಹ ರಾಮಾಯಣ', `ಪಂಚತಂತ್ರ' ಇವು ಇವರ ಕೈಯಿಂದ ಕನ್ನಡ ದಲ್ಲಿ ದೊರೆಯುವುದು ಉಚಿತವೇ. `ಮೀಮಾಂಸಾ ದರ್ಪಣ' ಇವರು ಮಹಾಮಹೋಪಾಧ್ಯಾಯ ವೈದ್ಯನಾಥ ಶಾಸ್ತ್ರಿಗಳಲ್ಲಿ ಆರ್ಜಿಸಿದ ವಿದ್ಯೆಯ ಫಲವಾಗಿ ಕನ್ನಡಿಗರಿಗೆ ಅರ್ಪಿಸಿದ ಕಾಣಿಕೆ. `ವಿಚಾ ರಣೆ' ಜಾನ್ ಮೇಸ್ ಫೀಲ್ಡ್‌ರ `Trial of Jesus' ನಾಟಕದ ಅತ್ಯುತ್ತಮ ಭಾಷಾಂತರ. ನಮ್ಮ ನಾಡಿನ ಸಂಸ್ಕೃತಿಯನ್ನು ಅಭ್ಯಸಿಸಿ ವಿಮರ್ಶಿಸಿ ಅದರ ಸಾರದ ಪರಿಚಯವನ್ನು ಮಾಡಿಕೊಡುವುದು ಇವರ `ಕರ್ನಾಟಕದ ಸಂಸ್ಕೃತಿ'. ಇವಲ್ಲದೆ ಇವರು ಇತರ ಗ್ರಂಥಗಳನ್ನೂ ಬರೆದಿದ್ದಾರೆ.

ಇವರ ಕಾರ್ಯಕ್ಷೇತ್ರವೂ ವಿಶಾಲ ವ್ಯಾಪ್ತಿಯುಳ್ಳದ್ದು. ಇವರು ಆರ್ಯ ವಿದ್ಯಾಶಾಲೆಯ ಮುಖ್ಯ ಶಿಕ್ಷಕರಾಗಿದ್ದದ್ದೂ ಗಾಂಧಿನಗರದ ಹೈಸ್ಕೂಲು ಮುಖ್ಯ ಶಿಕ್ಷಕರಾಗಿದ್ದು ಪರಸ್ಪರ ಸಹಾಯ ತತ್ತ್ವದ ಮೇಲೆ ಶಿಕ್ಷಣ ಸಂಸ್ಥೆಯನ್ನು ನಡೆಸುವ ಪ್ರಥಮ ಪ್ರಯೋಗ ನಡಸಿದ್ದೂ ಎಲ್ಲರಿಗೂ ಗೊತ್ತಿರುವ ವಿಷಯ. ಇವರು ನಾಟಕಗಳನ್ನು ಬರೆದಿರುವುದಲ್ಲದೆ, ನಾಟಕಗಳಲ್ಲಿ ಮತ್ತು ಚಲನ ಚಿತ್ರಗಳಲ್ಲಿ ಪಾತ್ರಧರಿಸಿದ್ದಾರೆ. ಇದೂ ಅನೇಕರಿಗೆ ತಿಳಿದ ವಿಷಯ. ಇವರಿಗೆ ಭೂಗರ್ಭಶಾಸ್ತ್ರದಲ್ಲಿ ಪರಿಶ್ರಮವಿದೆಯೆಂಬುದೂ ಮತ್ತು ಕೆಲವು ಪ್ರದೇಶಗಳಲ್ಲಿ ಗಣಿ ತೆಗೆಯುವ ಹಕ್ಕನ್ನು ಪಡೆದು ಆ ಉದ್ಯಮವನ್ನು ಕೈಗೊಳ್ಳುವ ಪ್ರಯತ್ನವನ್ನು ಮಾಡಿರುವರೆಂಬುದೂ ಅನೇಕರಿಗೆ ತಿಳಿಯದಿರಬಹುದು.

ಸಹಕಾರ ಕ್ಷೇತ್ರದಲ್ಲಿಯೂ ರಾಜಕಾರಣದಲ್ಲಿಯೂ ದೇವುಡುಗಳು ಪ್ರವೇಶ ಮಾಡಿದ್ದಾರೆ. ಸ್ವಾತಂತ್ರ್ಯೋತ್ತರ ಪ್ರಥಮ ಚುನಾವಣೆಯಲ್ಲಿ ಅವರು ಸ್ಪರ್ಧಿಗಳಾಗಿ ನಿಂತಿದ್ದರು. ಇದು ಬಹಳ

ಜನರಿಗೆ ತಿಳಿದ ವಿಷಯವಾದುದರಿಂದ ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಇಷ್ಟು ಹೇಳಿದರೆ ಸಾಕು. ಅವರು ರಾಜಕಾರಣದ ದೃಷ್ಟಿಯಿಂದ ಒಂದು ಪಕ್ಷಕ್ಕೆ ಸೇರಿದವರಾದರೂ ದೇಶದ ಹಿತದ ದೃಷ್ಟಿಯಿಂದ ನಡೆಯುವ ಯಾವ ಕೆಲಸಕ್ಕಾದರೂ, ನಡಸುವ ಯಾವ ಸರ್ಕಾರಕ್ಕಾಗಲಿ ಸಂಸ್ಥೆಗಾಗಲಿ, ಅವರ ಸಹ ಕಾರವುಂಟು. ಮತ್ತು ತಾವು ಹೇಗೆ ಸ್ವತಂತ್ರವಿಚಾರಪರರೋ ಇತರ ಪಕ್ಷದವರಿಗೆ, ಇತರ ವ್ಯಕ್ತಿಗಳಿಗೆ ಅದೇ ರೀತಿಯ ವಿಚಾರಸ್ವಾತಂತ್ರ್ಯದ ಅಧಿಕಾರವಿರುವುದನ್ನು ಚೆನ್ನಾಗಿ ಮನಗಂಡು ನಡೆಯುತ್ತಾರೆ.

ಇವೆಲ್ಲಕ್ಕಿಂತ ಹೆಚ್ಚಾಗಿ ಶ್ರೀ ದೇವುಡು ಅವರು ಸಹೃದಯರು. ಅವರ ಶೈಲಿಯು ಹೇಗೋ ಅವರ ಅಂತಃಕರಣವೂ ಹಾಗೆಯೇ ತಿಳಿಯಾದ್ದು. ಅವರು ಮನ ಸುಲಭವಾಗಿ ಮರುಗುವುದು. ಅವರ ಹೃದಯ ಸುಲಭವಾಗಿ ಸಂತೋಷಿಸುವುದು. ಅವರ ಸ್ವಭಾವದಲ್ಲಿ ಯಾವ ರೀತಿಯ ಕಾರ್ಪಣ್ಯವೂ ಇಲ್ಲ. ಯಾವ ಕಷ್ಟವೂ ಅವರನ್ನು ಕುಗ್ಗಿಸುವುದಿಲ್ಲ. ಯಾವ ಆಪತ್ತಿಗೂ ಅವರು ಎದೆಗುಂದುವುದಿಲ್ಲ. ಎಷ್ಟೇ ನಿರುತ್ತೇಜಕವಾದ ವಾತಾವರಣದಲ್ಲೂ ಅವರು ಆತ್ಮವಿಶ್ವಾಸವನ್ನು ಕಳೆದುಕೊಂಡಿಲ್ಲ. ಇದೆಲ್ಲ ಅವರ ಬರವಣಿಗೆಯಲ್ಲಿ ಪ್ರತಿಬಿಂಬಿತವಾಗಿರದೆ ಇರಲು ಸಾಧ್ಯವೆ?

★

21

ದೇವುಡು ನರಸಿಂಹ ಶಾಸ್ತ್ರಿ

ವಿ. ಸೀತಾರಾಮಯ್ಯ

ಮೈಸೂರು ಕಡೆ ಪ್ರಖ್ಯಾತರಾದ ಸಾಹಿತಿಗಳಲ್ಲಿ ಈ ಶತಮಾನದ ಎರಡನೆಯ ದಶಕದಲ್ಲಿ ಮೈಸೂರಲ್ಲಿಯೂ ಅಲ್ಲಿಂದೀಚೆಗೆ-ಅವರು ತೀರಿಕೊಂಡ ೧೯೬೨ರವರೆಗೂ ಬೆಂಗಳೂರಲ್ಲಿಯೂ ಹೆಸರಾದ ಲೇಖಕರು ದೇವುಡು. ದೇವುಡು ನರಸಿಂಹ ಶಾಸ್ತ್ರಿ ಎಂಬುದು ಅವರ ಪೂರ್ತಿ ಹೆಸರು. ಮೈಸೂರಲ್ಲಿಯೂ ಅದೇ ಹೆಸರಿನ ಇನ್ನೊಬ್ಬ ಪ್ರಸಿದ್ಧ ಗಮಕಿಗಳಿದ್ದರು. ಅವರು ಶಾರದಾವಿಲಾಸ ಹೈಸ್ಕೂಲಲ್ಲಿ ಕನ್ನಡ ಉಪಾಧ್ಯಾಯರಾಗಿದ್ದರು. ಇಬ್ಬರದೂ ಗಂಡು ಸ್ವಭಾವ. ಇಬ್ಬರ ಗಂಟಲೂ ದೊಡ್ಡವು, ಗಟ್ಟಿ. ಈ ದೇವುಡು ತಂದೆ ಅರಮನೆಯ Senior ಪುರೋಹಿತರಾಗಿದ್ದರೆಂದು ಕೇಳಿದ್ದೇನೆ. ಅವರ ಹಿರಿಯರೂ ಚಿಕ್ಕಪ್ಪಂದಿರೂ ಮೈಸೂರಲ್ಲಿ ಹಿರಿಯ ವಿದ್ವಾಂಸರು, ಗಣ್ಯರು. ಇವರೋ: ಮೊದಲಿಂದ ಸುಪುಷ್ಟರು. ನಿರ್ಬಂಧಗಳಿಗೆ ಒಳಪಡದೆ ಮನೆಯ ಮೇಲ್ಮೆಯನ್ನು ವ್ಯಕ್ತಿತ್ವವನ್ನು ಸಂಪ್ರದಾಯಗಳನ್ನು ಬೆಳೆಸಿಕೊಂಡು ಬಂದರು. ಕಡೆಯ ಕಾಲದವರೆಗೂ ಸೋಲರಿಯದ ಸೋಲೊಪ್ಪದ ನಿರ್ಭೀತವ್ಯಕ್ತಿ. ಸಂಪತ್ತು, ಅಧಿಕಾರ ಇಲ್ಲದಿದ್ದರೂ ತಮ್ಮ ಸುತ್ತಲವರ ಸಂಬಂಧಗಳಲ್ಲಿ ತಾವಿದ್ದ ಕಡೆ ದರ್ಪದಿಂದ ಪ್ರಕಾಶಗೊಳ್ಳುತ್ತಿದ್ದರು. ತಮ್ಮ ನಿರ್ಣಯಗಳ, ವಿದ್ಯೆಯ ವಿಶ್ವಾಸ ಅದಕ್ಕೆ ಕಾರಣ. ಆಚಾರ, ವೇದಶಾಸ್ತ್ರಗಳ ಪಾಠ, ಜಿಜ್ಞಾಸೆಗಳ ಆವರಣದಲ್ಲಿ ಬೆಳೆದವರಾದ್ದರಿಂದ ಅದನ್ನು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಪರಿಚಯ ಮಾಡಿಕೊಡಲು ಶಕ್ತರಾದರು.

ಮೈಸೂರು ಮಹಾರಾಜ ಕಾಲೇಜಲ್ಲಿ ನಾನೂ ಅವರೂ ಜೊತೆಗೆ ಬಿ.ಎ., ಎಂ.ಎ. ಪ್ಯಾಸು ಮಾಡಿದೆವು,-೧೯೧೭ ರಿಂದ ೧೯೨೨ ಕಾಲದಲ್ಲಿ. ಇಬ್ಬರಿಗೂ ಸಾಧಾರಣವಾದ ಇಂಗ್ಲಿಷಿಗೆ ಅವರು ನಮ್ಮೊಡನೆಯೇ ಹಾಜರಾಗುತ್ತಿದ್ದರು. ಅವರ ಐಚ್ಛಿಕ ವ್ಯಾಸಂಗ ಸಂಸ್ಕೃತ; ಒಂದು ಭಾಗ ತತ್ತ್ವ ಶಾಸ್ತ್ರ. ಪ್ರೊ. ಹಿರಿಯಣ್ಣನವರಲ್ಲಿ ಸಂಸ್ಕೃತ ಪಾಠಮಾಡಿ ಅವರ ಗಮನಕ್ಕೆ ಸಂದರು. ಹಾಗೇ ಕಡೆಯವರೆಗೂ ಡಾ|| ರಾಧಾಕೃಷ್ಣನ್ ಅವರ ನೆನಪಿನಲ್ಲಿ ಉಳಿದಿದ್ದರು. ೧೯೨೨ರಿಂದೀಚೆಗೆ ಹಲವು ವಿದ್ಯಾಕಾರ್ಯಗಳಲ್ಲಿ ನಿರತರಾಗಿ ಹೆಸರಾಗಿದ್ದರು.

ಬೆಂಗಳೂರಿನಲ್ಲಿ ಆರ್ಯ ವಿದ್ಯಾ ಶಾಲೆಯನ್ನು ಸ್ಥಾಪಿಸಿದರು. ಕೆಂಪೇಗೌಡ ರಸ್ತೆಯ ಮೊದಲಲ್ಲಿ `ಕೋಲಾ ಲಾಡ್ಜ್' ಎಂಬ ಬಂಗಲೆ ಇತ್ತು. ಅಲ್ಲಿ ಈಗ ಒಂದು ಚಲಚಿತ್ರ ಮಂದಿರವಿದೆ. ಅಲ್ಲಿ ಅವರ ಜೊತೆಗೆ ಶ್ರೀ ಬೆಟಗೇರಿ ಕೃಷ್ಣಶರ್ಮರು ಕೆಲಸ ಮಾಡುತ್ತಿದ್ದರು. ಮಕ್ಕಳ ವಿದ್ಯಾಭಿವೃದ್ಧಿಯಲ್ಲಿ ಅತಿಶಯವಾದ ಆಸ್ಥೆವಹಿಸಿ ಅಶ್ವತ್ಥನಾರಾಯಣರೆಂಬವರೊಡನೆ ಮಕ್ಕಳ ಪ್ರಪಂಚ ಮುಂತಾದವುಗಳ ಪ್ರಕಟನೆ ಮಾಡಿದರು. ಬೆಂಗಳೂರಿನ ಅಮೆಚ್ಯೂರ್ ನಾಟಕ ಮಂಡಳಿಯಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ-ಬಹುಶಃ `ರಂಗಭೂಮಿ'ಯ ಪ್ರಕಾಶನದಲ್ಲಿ-ನೆರವಾದರು. ಅವರು ಆಡುತ್ತಿದ್ದ ಸಿ.ಕೆ. ವೆಂಕಟರಾಮಯ್ಯ ಅವರ `ನಚಿಕೇತ', `ಮಂಡೋದರಿ'ಗಳಲ್ಲಿ ಭೂಮಿಕೆ ವಹಿಸಿದರು. ಮಾಸ್ತಿಯವರ `ಯಶೋಧರಾ' ನಾಟಕದಲ್ಲಿ ಬುದ್ಧನ ಪಾತ್ರವನ್ನು ವಹಿಸಿ, ಶ್ರೀ ವೆಂಬಾರ್

ವೆಂಕಟಾಚಾರ್ಯರ ಯಶೋಧರಾ ಪಾತ್ರದೊಡನೆ ಅಭಿನಯಿಸಿದ ಬುದ್ಧಚಿತ್ರ ನನ್ನ ನೆನಪಿನಲ್ಲಿ ಅಚ್ಚಳಿಯದೆ ಇದೆ. ಅಲ್ಲಿ ಕಾಣಿಸಿದ ಗಂಭೀರ, ಸ್ವಾಸ್ಥ್ಯ, ರಸಪ್ರತಿಪಾದನೆ ಅವರಿಗೆ ಕೀರ್ತಿ ತಂದಿತು. ಧಾರವಾಡ ಹುಬ್ಬಳ್ಳಿಗಳಲ್ಲಿಂದ ಮೈಸೂರು ಕಡೆಯ ಕೆಲವರೊಡನೆ `ಚಿರಂಜೀವಿ' ಎಂಬ ಚಲಚಿತ್ರ ವನ್ನು ತಯಾರು ಮಾಡುವುದರಲ್ಲಿ ನೆರವಾದರು.

ಇಷ್ಟೆಲ್ಲ ಹೇಳಿದರೂ ಅವರ ಬಹುಮುಖ ಚೈತನ್ಯವನ್ನು ವರ್ಣಿಸಿದಂತಾಗಲಿಲ್ಲ. ಸರ್ಕಾರ ದವರು ಅವರನ್ನು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ನೇಮಿಸಿದರು. ತಾವೇ ನಮ್ಮ ಪೌರಸಭೆಗೆ ಆಯ್ಕೆಯಾಗಿದ್ದರು. ಸಂಸ್ಕೃತ ವಿದ್ಯಾಸಮಿತಿ, ಪಠ್ಯಪುಸ್ತಕದ ಸಮಿತಿಗಳಲ್ಲಿ ಕೆಲಕಾಲ ದುಡಿದರು. ಅವರ ಮುಖ್ಯ ಲೇಖನಗಳು ಸಾಹಿತ್ಯಕವಾಗಿ ಹತ್ತು ಹನ್ನೆರಡಕ್ಕಿಂತ ಹೆಚ್ಚು. ವಿಶೇಷ ಶಾಸ್ತ್ರವ್ಯಾಸಂಗಕ್ಕಾಗಿ ಶಂಕರ ಮಠದಲ್ಲಿ ಮಹಾ ಮಹೋಪಾಧ್ಯಾಯ ವೈದ್ಯನಾಥ ಶಾಸ್ತ್ರಿಗಳಲ್ಲಿ ಮೀಮಾಂಸಾ ಶಾಸ್ತ್ರ ವ್ಯಾಸಂಗ ಮಾಡಿ ಕನ್ನಡಕ್ಕೆ `ಮೀಮಾಂಸಾದರ್ಪಣ'ವನ್ನು ದಾನ ಮಾಡಿದರು. `ಯೋಗವಾಸಿಷ್ಠ'ದ ೨೪ ಭಾಗಗಳನ್ನು ಬಹುಶಃ ಅರಮನೆಯ ಪ್ರಕಾಶನಕ್ಕಾಗಿ ಬರೆದುಕೊಟ್ಟರು. ಹಾಗೆಯೇ ಸ್ವಾಮಿ ವಿವೇಕಾನಂದರ ಭಾಷಣಗಳನ್ನು, ಥೋರೊ ಅವರ `ವಾಲ್ಡನ್'ಅನ್ನು ಕನ್ನಡಿಸಿ ದರು. ಯಾರಿಗೇ ಆಗಲಿ, ಇಂಥ ಕಾರ್ಯ ಅದ್ಭುತವೇ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ ಕೆಲಕಾಲ ಅದರ ಪತ್ರಿಕೆಯ ಸಂಪಾದಕರಾಗಿದ್ದರೆಂದು ನನ್ನ ಎಣಿಕೆ. ಆ ಕಾಲದಲ್ಲಿ ಅವರು ಬರೆದ `ಕನ್ನಡ ಸಂಸ್ಕೃತಿ' ಎಂಬ ಗ್ರಂಥವೂ ಪತ್ರಿಕೆಯಲ್ಲಿ ಧಾರವಾಹಿಯಾಗಿ ಬಂದ ಕನ್ನಡಲಾವಣಿ ಸಾಂಗತ್ಯಗಳಂತೂ ತುಂಬಾ ಉಪಯುಕ್ತವಾದ, ಬೆಲೆಯುಳ್ಳ ಲೇಖನಗಳು.

ಎಲ್ಲಕ್ಕಿಂತ ಕೇವಲ ಸಾಹಿತ್ಯಕವಾದವು ನಾಲ್ಕು ಕಾದಂಬರಿಗಳು : ೧. `ಮಯೂರ' ಎಂಬ ಒಂದು ಕನ್ನಡ ರಾಜಮನೆತನಕ್ಕೆ ಸೇರಿದ ವೀರನ ಹಿರಿಮೆಯ ಪ್ರಕಾಶನ; ೨. `ಮಹಾಬ್ರಾಹ್ಮಣ', ೩. `ಮಹಾಕ್ಷತ್ರಿಯ', ಮತ್ತು ೪. `ಮಹಾದರ್ಶನ': ವೇದ ಉಪನಿಷತ್ತುಗಳಲ್ಲಿ ಖ್ಯಾತರಾದವರ ಪ್ರಸಂ ಗಗಳು.

`ಮಹಾಬ್ರಾಹ್ಮಣ'–ವಸಿಷ್ಠ ವಿಶ್ವಾಮಿತ್ರರನ್ನು ಕುರಿತುದು. ತಪೋಬಲದಲ್ಲಿ ವಸಿಷ್ಠರ ಮಹಿಮೆಯನ್ನು ಅರಿತು ಆ ಮಟ್ಟದ ಶಕ್ತಿಯನ್ನು ತಾನೂ ಸಾಧಿಸಬೇಕೆಂದು ಹಟ ಹಿಡಿದು ತಪಃ ಪ್ರಭಾವವನ್ನು ಸಂಪಾದಿಸಿದ ವಿಶ್ವಾಮಿತ್ರ ಬ್ರಹ್ಮರ್ಷಿಯಾದ ಪ್ರಕರಣ. ಆತನಷ್ಟು individualist ಪ್ರಾಚೀನ ಭಾರತದಲ್ಲಿ ಕಡಮೆ. ನಮ್ಮಲ್ಲಿ ಸೇಟನ್ನಂಥ ದೈವ ವಿದ್ರೋಹಿ ಇರಲಿಲ್ಲ. ದೇವರಿಗೆ ಎದುರಾಗಿ ನಿಂತ ಅವನಾಗಲಿ, ಅಹ್ರಿಮಾನ್ ಆಗಲಿ ಇಲ್ಲ. ಈತನು ನಾಸ್ತಿಕನೂ ಅಲ್ಲ. ಕ್ಷಾತ್ರದಿಂದ ದೈವೀತಪಶ್ಶಕ್ತಿಯನ್ನು ಮುರಿಯಬಹುದೆಂದುಕೊಂಡು ನಾಶಕಾರ್ಯದಲ್ಲಿ ತೊಡಗಿ ಸೋತು, ತಪಸ್ ಚೈತನ್ಯವನ್ನು ಪಡೆದು ವಸಿಷ್ಠರಿಂದಲೇ ಸನ್ಮಾನಿತನಾದ ಮಹಾಚೈತನ್ಯ ಆತನದು. ಗಾಯತ್ರೀ ಮಂತ್ರಕ್ಕೆ ಆತನೇ ಅಧಿದೇವತೆ. ರಾಮಾಯಣದಲ್ಲಿ ರಾಮನಿಗೆ ಶಸ್ತ್ರ ಅಸ್ತ್ರ ವಿದ್ಯೆಗಳನ್ನು, ರಹಸ್ಯ ವಿದ್ಯೆಗ ಳನ್ನು ಬೋಧಿಸಿ ಆತನನ್ನು ಆ ಕಾಲಕ್ಕೆಲ್ಲ ಮೇಲ್ಪಟ್ಟ ಸಾತ್ವಿಕ ಶಕ್ತಿಯಾಗಿ ಮೆರಸಿದ ಪ್ರಭಾವ ಆತ ನದು–ಈ ಕಾಲಗಳೆಲ್ಲ ಒಂದು ಎಂದು ನಂಬುವುದು ಕಷ್ಟವಾದರೂ. ವಿಶ್ವಾಮಿತ್ರನೆಂಬ ಹೆಸರಿನ

ವನು ಈ ಒಬ್ಬಾತನೆಯೊ ಎಂಬುದೂ ವಿವಾದದಲ್ಲಿದೆ. ಆದರೆ ಇಲ್ಲಿ ನಾವು ನೋಡುತ್ತಿರುವುದು ಸಾಂಸ್ಕೃತಿಕ ಮಹತ್ವ, ದಾನವನ್ನು.

`ಮಹಾಕ್ಷತ್ರೀಯ'–ನಹುಷನ ಕತೆ. ಯಜ್ಞಯಾಗಾದಿಗಳ ಬಲದಿಂದ ದಾನವೀರಗಳಿಂದ ಇಂದ್ರನ ದರ್ಪವನ್ನು ಮುರಿದು ಇಂದ್ರಪಟ್ಟಕ್ಕೆ ಬಂದವನು. ಇದಕ್ಕೇ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತದ್ದು. ಅವರ ತರುವಾಯ ಅವರ ಮಡದಿಯ ಕೈಗೆ ಬಹುಮಾನದ ನಗದು ಬರಲಿಲ್ಲ. ಯಾವುದೊ ಹಣ ಸಂಕೋಚದ ಕಾರಣದಿಂದ ಆಕೆಗೆ ದೊರೆತದ್ದು National Savings Certificates ಮಾತ್ರ!

ಮೂರನೆಯದು `ಮಹಾದರ್ಶನ'–ಯಾಜ್ಞವಲ್ಕ್ಯರ ಪ್ರಸಂಗ. ಆದಿಶಂಕರರನ್ನು ಕುರಿತದ್ದು ಇನ್ನೊಂದು ಗ್ರಂಥ–`ಮಹಾಸಂನ್ಯಾಸಿ' ಮುಗಿಯದೆ ನಿಂತಿದೆ. ಅದೂ ಬಂದಿದ್ದರೆ ಯಾವ ಸಂಪ್ರದಾಯಕ್ಕೆ ಹುಟ್ಟಿ ಬೆಳೆದಿದ್ದರೊ ಅದಕ್ಕೆ ದೇವುಡು ತನ್ನ ಕಾಣಿಕೆಯನ್ನು ಜ್ವಲಂತ ರೀತಿಯಲ್ಲಿ ಅರ್ಪಿಸಿದಂತಾಗುತ್ತಿತ್ತು. ವಸಿಷ್ಠ-ವಿಶ್ವಾಮಿತ್ರ, ನಹುಷ, ಯಾಜ್ಞವಲ್ಕ್ಯ–ಇವರ ಚರಿತ್ರೆ ಭರತಖಂಡವನ್ನು ಒಂದು ಹಿರಿಯ ಸತ್ವವನ್ನಾಗಿ ಬೆಳಗಿದ ಚೈತನ್ಯಗಳು. ತತ್ತ್ವಸಿದ್ಧಿಗೆ, ಲೋಕಸಂಗ್ರಹಕ್ಕೆ, ಸಾತ್ವಿಕ ಹಿರಿಮೆಗೆ ಎತ್ತಿದ ವಾಣಿಗಳು, ಕೈಗಳು ಅವರವು. ಇವರ ಮೂರ್ತಿಸ್ವರೂಪವನ್ನೂ ಜೀವವಿಶೇಷವನ್ನೂ ತಕ್ಕಂತೆ ಕಾಣಿಸುವುದು ಯಾರಿಗೂ ಸಾಹಸವೇ. ಸಾಧಿಸಿದವರು ದೇವುಡು.

ಅವರು ಬೆಂಗಳೂರಲ್ಲಿದ್ದ ಹಲವರು ದೊಡ್ಡ ವ್ಯಕ್ತಿಗಳ ಬಳಕೆಯವರು. ಎಲ್ಲಿಯೇ ಆಗಲಿ ಯಾರಿಗೂ ತಲೆಗ್ಗಿಸದೆ ನಿಂತ ನಿಲವಿನವರು. ತಮ್ಮ ಮಾತು ನಡೆದರಾಯಿತು; ಇಲ್ಲವಾದರೆ ಅವರು ಅಲ್ಲಿ ಸುಳಿಯುತ್ತಿರಲಿಲ್ಲ. ಹಿರಿಯ ಮಗನಿಗೆ ಅರ್ಧ ಕಾಲೆಜ್ ರುಸುಮು ವಿನಾಯಿತಿ ಮಾತ್ರ ದೊರಕೀತು ಎಂದು ಹೇಳಿದಾಗ ಆತನ ಹೆಸರನ್ನು ಪುನಃ ಆ ಸಂಬಂಧದಲ್ಲಿ ಸೇರಿಸಬೇಡಿ, ಹೇಗೊ ಮಾಡಿಕೊಳ್ಳುತ್ತೇನೆ ಎಂದ ಧೀರಪುರುಷರು. ಬಂದದ್ದು ಬರಲಿ ಎಂದು ಯಾವುದಕ್ಕೂ ಕೈಯೊಡ್ಡುವ ಮನಸ್ಸು, ರೀತಿ ಎಂದಿಗೂ ಅವರದಲ್ಲ. ವ್ಯಕ್ತಿಗಳೊಡನೆ, ಸಂಘಸಂಸ್ಥೆಗಳೊಡನೆ, ತಮ್ಮ ಮಾತು ನಡೆದರೆಯೇ ಸಂಗ, ಸಾಂಗತ್ಯ, ಅನುಷ್ಠಾನ. ಅಧಿಕಾರದಲ್ಲಿ ಇರುವವರಲ್ಲಿಯೂ ತಮಗೆ ವಿದ್ಯಾವಿಚಾರಗಳಲ್ಲಿ ಗುರು ಸದೃಶರಾದವರಲ್ಲಿಯೂ ಕೂಡ ತಗ್ಗಿ ನಡೆಯಲು ಒಪ್ಪರು. ಯಾವು compromise-ಮಧ್ಯಸ್ಥ ನಡತೆಗೂ ಒಡಂಬಡದ ಗುಣ ಅವರದು. ವಿವೇಕವೊ ಅಲ್ಲವೋ, ಪ್ರಯೋಜನವೊ ಅಲ್ಲವೊ; ಬೈಗಳಿಗೆ ಅವಹೇಳನಕ್ಕೆ ಇಳಿದರೆ ಅದರಲ್ಲಿ ಯಾರಿಗೂ ಬೀಳಲ್ಲ. ಯಾವುದೂ ಅವರನ್ನು ಮಾರ್ಪಡಿಸುತ್ತಿರಲಿಲ್ಲ. ಯಾವುದನ್ನು ಆ ಕಾಲದಲ್ಲಿ ಮೇಧಾವಿತೆ, ಸಂಪ್ರದಾಯ ಎನ್ನುತ್ತಿದ್ದರೊ ಅದಕ್ಕೆ ತರ್ಕ, ಮೀಮಾಂಸಾ, ವೇದಾಂತಗಳ ಹೃದ್ಭಾವವನ್ನೂ ತಿರುಳನ್ನೂ ಬಳಸಿ ವಾದದಲ್ಲಿ ಜ್ಞಾನಪ್ರತಿಪಾದನೆಯಲ್ಲಿ ಬಲಗೊಳಿಸುತ್ತಿದ್ದರು. ಭಾರತದ ಮೊದಲ ರಾಷ್ಟ್ರಾಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರು ಪೂರ್ವಸಂಪ್ರದಾಯದಲ್ಲಿ ನಾಡಿನ ನೂರುಮಂದಿ ವೈದಿಕರನ್ನು, ವಿದ್ವಾಂಸರನ್ನು ಕರಸಿ–ಬಹುಶಃ ಕಾಶಿಯಲ್ಲಿ–ಕಾಲು ತೊಳೆದು ಪಾದಪೂಜೆ ಅರ್ಪಿಸಿದರಂತೆ. ಆಗ ಇವರೂ ಒಬ್ಬರಾಗಿ ಅಲ್ಲಿಗೆ ಆಹ್ವಾನಿತರಾಗಿದ್ದುದು ಅವರಿಗೆ ಅಭಿಮಾನದ ನೆನಪಾಗಿತ್ತು. ಇವೆಲ್ಲ ಗತಕಾಲದ ಲಕ್ಷಣಗಳೆಂದು ಇಂದಿನವರೆಂದಾರು. ಎರಡನೆಯ ಮಹಾಯುದ್ಧ ಮುಗಿದ ತರುವಾಯ ಆಲೋಚನೆಯ

ನಾನಾ ಬಗೆಯ ಕಲಸುಗಳು–ರೀತಿನೀತಿ ವಿಧಾನಗಳಲ್ಲಿ, ಯೋಚನೆಯಲ್ಲಿ, ತತ್ತ್ವವಿಚಾರದಲ್ಲಿ, ವ್ಯವಹಾರದಲ್ಲಿ, ಸಾಹಿತ್ಯ ಸಂಸ್ಕೃತಿಗಳ ಪರಿಶೀಲನಗಳಲ್ಲಿ, ಸಾರಸ್ವತ ಸೃಷ್ಟಿಯಲ್ಲಿ, ಕೃತಿಗಳ ರೂಪರೇಖೆಗಳಲ್ಲಿ–ಬಂದು ಇವಂಥವಕ್ಕೆ ಅಷ್ಟು ಮಾನ್ಯತೆ ಇಲ್ಲವಾಗಿದೆ. ಆದರೆ ಯಾರೂ ತಮ್ಮ ಕಾಲದಲ್ಲಿ ತಾವು ಬಲ್ಲಂತೆ ಮಾತ್ರ ನಡೆದಾರು, ನುಡಿದಾರು ತಾನೆ? ಆ ಆ ಕಾಲದ ಕೊಡುಗೆ ಅದು.

ಒಂದು ಮಾತು ಹೇಳಿದೆ: ಅವರಿಗೆ ಯಾರ ಲಕ್ಷ್ಯವೂ ಇರಲಿಲ್ಲ ಎಂದು. ತಮ್ಮ ದೇಹಾರೋಗ್ಯವನ್ನು ಕುರಿತು ಇನ್ನಷ್ಟು ಎಚ್ಚರಿಕೆ ವಹಿಸಿದ್ದರೆ ಕಡೆಯ ದಿನಗಳಲ್ಲಿ ಇನ್ನಷ್ಟು ನೆಮ್ಮದಿಯಾಗಿರಬಹುದಾಗಿತ್ತು. ಸಕ್ಕರೆಯ ವ್ಯಾಧಿ ಇರುವಾಗ ಬೇಡೆಂದರೂ ಸಿಹಿಗಳನ್ನು ತಿಂದು, ಅದು ವಿಷಮಿಸಿ ಶಸ್ತ್ರ ಚಿಕಿತ್ಸೆ ಆಗಿ ಕಷ್ಟಪಡಬೇಕಾಯಿತು. ಮಕ್ಕಳಲ್ಲಿ ದೊಡ್ಡವನಾದ ರಾಮು ಕನ್ನಡ ಎಂ.ಎ. ಪಾಸು ಮಾಡಿದ್ದರು. ಇನ್ನಿಬ್ಬರು ಒಳ್ಳೆಯ ಹುದ್ದೆಗಳಲ್ಲಿ ಇದ್ದಾರೆ. ಬಹುಶಃ ಇದ್ದ ಒಬ್ಬಳೇ ಮಗಳು ಸಣ್ಣ ವಯಸ್ಸಿನಲ್ಲಿ ವೈಧವ್ಯ ಅನುಭವಿಸಬೇಕಾಗಿಬಂದಿತಂತೆ. ಆಕೆಯ ಮಕ್ಕಳು-ಮರಿ ಒಳ್ಳೆಯ ಸ್ಥಿತಿಯಲ್ಲಿದ್ದಾರೆಂದು ಕೇಳಿದ್ದೇನೆ. ಶಾಸ್ತ್ರಿಗಳ ಜೊತೆಯಲ್ಲಿ ಸಂಸಾರ ಮಾಡುವುದು ಸಾಮಾನ್ಯವಾಗಿ ನಮ್ಮ ಮನೆತನಗಳಲ್ಲಿನ ಹೆಣ್ಣುಮಕ್ಕಳಿಗೂ ಸುಲಭವೇನಲ್ಲ. ಆದರೆ ಆತನ ಬದುಕನ್ನು ನಡೆಸಿಕೊಂಡು ಆತನನ್ನೂ ಮಕ್ಕಳನ್ನೂ ಪೋಷಣೆ ಮಾಡಿ ಮೇಲಕ್ಕೆ ತಂದ ಭಾರ್ಯೆ ಶ್ರೀಮತಿ ಗೌರಮ್ಮನವರು ಒಳ್ಳೆಯ ಬದುಕು ಬದುಕಿ ಎಲ್ಲರಿಗೂ ಗೌರವಪಾತ್ರರಾಗಿದ್ದಾರೆ. ಅವರಿಗೆ ನಮಃ.

★

ಕನ್ನಡ ಕುಲರಸಿಕ ದೇವುಡು

ಅ.ನ. ಕೃಷ್ಣರಾಯರು

ಸುಲ್ತಾನಪೇಟೆ ಗಣಪತಿಯ ಗಲಭೆ ಸಂದರ್ಭದಲ್ಲಿ ಸಾರ್ವಜನಿಕ ಮುಷ್ಕರ ನಡೆದಿತ್ತು. ಬಳೆಯಪೇಟೆ ಚೌಕದಲ್ಲಿ ಪೋಲೀಸಿನವರು ಶಾಂತಿ ಪಾಲಿಸಲು ಮದ್ದುತುಂಬಿದ ಬಂದೂಕುಗಳನ್ನು ಹಿಡಿದು ವ್ಯಾನ್‌ಗಳಲ್ಲಿ ಭದ್ರವಾಗಿ ಕುಳಿತಿದ್ದರು. ಎಲ್ಲಿಂದಲೋ ಒಂದು ಕಲ್ಲು ಬೀಸಿ ಬಂದು ವ್ಯಾನಿಗೆ ಬಡೆಯಿತು. ಪೋಲೀಸಿನವರು ಗುಂಡಿನ ಮಳೆ ಆರಂಭಿಸಿದರು. ಆಗ ರಸ್ತೆಯಲ್ಲಿ ಹಾದು ಹೋಗುತ್ತಿದ್ದ ಒಬ್ಬ ಹಣ್ಣು ಹಣ್ಣು ಮುದುಕನ ಕಾಲಿಗೆ ಗೋಲಿ ತಾಕಿತು. ಅವನು ಅಲ್ಲಿಯೇ ಕುಸಿದುಬಿದ್ದ. ಜನ ನೋಡುತ್ತ ನಿಂತಿದ್ದರು. ಯಾರಿಗೂ ಮುದುಕನನ್ನು ರಕ್ಷಿಸಿ, ಉಪಚರಿಸುವ ಧೈರ್ಯವಾಗಲಿಲ್ಲ. ಎಲ್ಲಿಯೋ ನಿಂತಿದ್ದ ದೇವುಡು, ಧಾವಿಸಿ ಬಂದು, ಮುದುಕನಿಗೆ ಆಶ್ರಯಕೊಟ್ಟು ಅವನನ್ನು ಒಂದು ಪಕಕ್ಕೆ ಕರೆದೊಯ್ದು ಉಪಚರಿಸಿದರು. `ಯಾರೀ ಗಂಡುಗಲಿ?' ಎಂದು ಜನ ಕೇಳಿದರು; ತಿಳಿದವರು ಹೇಳಿದರು `ಇವರೇ ಆರ್ಯ ವಿದ್ಯಾಶಾಲೆಯ ಮುಖ್ಯೋಪಾಧ್ಯಾಯರು, ದೇವುಡು ನರಸಿಂಹಶಾಸ್ತ್ರಿ, ಎಂ.ಎ.' ಸಾವಿಗೆ ಅಂಜಬಾರದೆಂದು ಹೇಳುವವರು ಬಹಳ ಜನಗಳನ್ನು ನಾನು ನೋಡಿದ್ದೆ. ಸಾವಿಗೆ ಹೆದರದೆ ಅದನ್ನೆದುರಿಸಿ ನಿಂತ ನಚಿಕೇತನನ್ನು ಅಂದೇ ನಾನು ನೋಡಿದ್ದು.

ದೇವುಡು ಆರ್ಯ ವಿದ್ಯಾಶಾಲೆಗೆ ಮುಖ್ಯೋಪಾಧ್ಯಾಯರಾಗಿ ಬರುವುದಕ್ಕೆ ಮುಂಚೆ ಮೈಸೂರಿನಲ್ಲಿ ಒಂದು ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಇವರ ತಂದೆ ಸಂಸ್ಕೃತದಲ್ಲಿ ಘನವಿದ್ವಾಂಸರು. ಸಂಸ್ಕೃತ ಪಾಂಡಿತ್ಯದ ಅತಿರಥ ಮಹಾರಥರೊಂದಿಗೆ ದೇವುಡು ಬಾಲ್ಯ ಮೈಸೂರಿನಲ್ಲಿ ಕಳೆಯಿತು. ಮೈಸೂರ ಅರಮನೆಯಲ್ಲಿ ದೇವುಡು ಅವರ ತೀರ್ಥರೂಪರವರ ಪ್ರಭಾವ ಸಾಕಷ್ಟಿತ್ತು. ದೇವುಡು ಅವರಿಗೆ ಶೈಶವ್ಯದಿಂದಲೂ ಅರಮನೆಯ ವಹಿವಾಟ. ಹೇಗೋ ಏನೋ ಶುದ್ಧ ವೈದಿಕವಿದ್ಯೆ-ವೃತ್ತಿಗಳಿಂದ ಪಾರಾಗಿ ದೇವುಡು ಎಂ.ಎ. ಮಾಡಿಕೊಂಡರು. ದರ್ಶನಗಳೇ ಅವರ ಮೆಚ್ಚಿನ ವಿಷಯಗಳು. ಕಾಲೇಜಿನಲ್ಲಿ ಡಾ॥ ರಾಧಾಕೃಷ್ಣನ್ ಅವರ ಗುರುಗಳು. ದೇವುಡು ಅವರ ಸ್ವತಂತ್ರ ವಿಚಾರಧಾರೆ, ಪ್ರಗಲ್ಭ ಪಾಂಡಿತ್ಯ ಕಂಡು ಗುರುಗಳು ತಲೆದೂಗುತ್ತಿದ್ದರು.

ದೇವುಡು ಮೈಸೂರು ಬಿಟ್ಟು ಬೆಂಗಳೂರಿಗೆ ಬಂದು ನೆಲಸುವುದಕ್ಕೆ ಕಾರಣಗಳು ಎರಡು. ಮೈಸೂರಿನ ಕ್ಷೇತ್ರ ದೇವುಡು ಅವರ ಬಹುಮುಖ ಪ್ರತಿಭೆಗೆ ಸಾಲದಾಗಿತ್ತು. ಪತ್ರಿಕಾವೃತ್ತಿ ದೇವುಡು ಅವರ ಮೆಚ್ಚಿನ ಲಾಲಸೆಗಳಲ್ಲಿ ಒಂದು. ಅದಕ್ಕೆ ಮೈಸೂರಿನಲ್ಲಿ ಏನೂ ಅವಕಾಶವಿರಲಿಲ್ಲ. ಬೆಂಗಳೂರಿಗೆ ಬಂದು ಆರ್ಯವಿದ್ಯಾಶಾಲೆಯ ಮುಖ್ಯೋಪಾಧ್ಯಾಯ ವೃತ್ತಿ ಕೈಗೊಂಡುದರ ಜತೆಗೆ `ನವಜೀವನ' ವಾರಪತ್ರಿಕೆ, ದೈನಂದಿನ ಪತ್ರಿಕೆಗಳ ಸಂಪಾದಕತ್ವವೂ ದೇವುಡು ಕೊರಳಿಗೆ ಬಿತ್ತು.

ಕೆಲವು ಕಾಲ `ನವಜೀವನ' ಬಹಳ ಸುಂದರ ಆಕಾರದಲ್ಲಿ ವಾರಪತ್ರಿಕೆಯಾಗಿ ಪ್ರಕಟವಾಗುತ್ತಿತ್ತು. ಕನ್ನಡದಲ್ಲಿ ಇಂಥ ಒಂದು ಪತ್ರಿಕೆ ನಡೆಸುವುದು ಸಾಧ್ಯವೇ ಎಂದು ಜನ ಅಚ್ಚರಿಗೊಂಡಿದ್ದರು. ಈ ವಾರಪತ್ರಿಕೆ ಬಹುದಿವಸ ಬಾಳಲಿಲ್ಲ.

ಈ ವೇಳೆಗಾಗಲೇ ದೇವುಡು ಅವರ ಒಂದೆರಡು ಸಾಹಿತ್ಯಕೃತಿಗಳು ಅಚ್ಚುಕಂಡಿದ್ದವು. ಅವರ

`ಸಾವಿತ್ರಿ' ನಾಟಕ `ಜಯಕರ್ನಾಟಕ'ದಲ್ಲಿ ಕ್ರಮಾಗತವಾಗಿ ಪ್ರಕಟವಾಗಿತ್ತು. `ಕಳ್ಳರಕೂಟ' ಕಾದಂಬರಿ ಜರ್ಮನಿಯ ಗಯಟೆಕವಿಯ, `Fellow culprits' ನಾಟಕವನ್ನು ಅವಲಂಬಿಸಿತ್ತು. ಆದರೆ ದೇವುಡು ಅವರ ಪ್ರತಿಭೆಯ ಪರಿಚಯ ಕನ್ನಡನಾಡವರಿಗೆ ಮಾಡಿಕೊಟ್ಟ ಗ್ರಂಥ ಅವರ `ಅಂತರಂಗ' ಕಾದಂಬರಿ. ಗುರಿಯನ್ನು ಸಾಧಿಸುವುದು ಜೀವನದ ಉದ್ದೇಶವೆಂದುಕೊಂಡಿರುವ ಶುದ್ಧಹೃದಯದ ಭಟ್ಟರ ಗುಟ್ಟುಗಳನ್ನು ಒಳಗೊಂಡ ಭಾವಕಥೆ. ಅದರ ಮುನ್ನುಡಿಯಲ್ಲಿ ಶ್ರೀ ಎಸ್.ಜಿ. ಶಾಸ್ತ್ರಿಗಳವರು ಹೇಳಿರುವಂತೆ `ಅಂತರಂಗ ವಿಕ್ಷೋಭ ವಿಪರ್ಯಾಸಗಳನ್ನು ಇಷ್ಟು ಸಾಮರ್ಥ್ಯದಿಂದ ಕನ್ನಡ ಗದ್ಯದಲ್ಲಿ ಯಾರೂ ಬರೆದಿದ್ದಂತೆ ಕಾಣುವುದಿಲ್ಲ.' ಅಂತರಂಗದಲ್ಲಿ ಬರುವ ಭಟ್ಟ, ಆತನ ಹೆಂಡತಿ, ಲಾಯರ್ ಗೆಳೆಯ, ದೇವಸ್ಥಾನದ ಬಾಲಿಕೆ ಎಲ್ಲಾ ಜೀವಂತ ಪಾತ್ರಗಳು. ಪ್ರಪಂಚಕ್ಕೆ ಅಡಿಯಿಡಲೋ ಬೇಡವೋ ಎಂದು ಕನ್ನಡ ಕಾದಂಬರಿ ಅನುಮಾನಿಸುತ್ತಿದ್ದ ಕಾಲದಲ್ಲಿ ಸ್ವತಂತ್ರವಾದ ಮನೋವಿಶ್ಲೇಷಣಾತ್ಮಕ ಕಾದಂಬರಿಯನ್ನು ಬರೆದ ದೇವುಡು ಸಾಹಸಪ್ರಿಯರೆನ್ನುವುದರಲ್ಲಿ ಸಂದೇಹವಿಲ್ಲ. ಕೆಲವು ವರ್ಷಗಳ ತರುವಾಯ ಅವರ `ಮಯೂರ' ಕಾದಂಬರಿ ಪ್ರಕಟವಾಯಿತು. `ಪಲ್ಲವ ಸಮ್ರಾಟರಿಂದ ರಾಜ್ಯವನ್ನು ಕಕ್ಕಿಸಿ ಸಿಂಹಾಸನವನ್ನು ಆರ್ಜಿಸಿದ ಸಾಹಸಿ ಕದಂಬ ಮಯೂರಶರ್ಮನು ನಾಯಕ. ಹದಿನೇಳು ಶತಮಾನಗಳ ಹಿಂದೆ ಕನ್ನಡಿಗರು ತಮ್ಮ ರಾಜಭಕ್ತಿ ದೇಶಾಭಿಮಾನಗಳನ್ನು ಮೆರೆದು ತಮ್ಮ ರಾಜನನ್ನೂ ರಾಜ್ಯವನ್ನೂ ಮತ್ತೆ ಸಂಪಾದಿಸಿದ ಕಥೆಯು ವಸ್ತು. ಈ ಎರಡು ಕಾದಂಬರಿಗಳಲ್ಲಿ ದೇವುಡು ಅವರು ಕನ್ನಡದ ಜಾಡನ್ನು ಹಿಡಿದು, ಸರಳ, ಸುಭಗ ಕನ್ನಡಶೈಲಿಯಲ್ಲಿ ಗಂಭೀರ ವಿಷಯಗಳನ್ನು ಸುಂದರವಾಗಿ, ಪ್ರತಿಪಾದಿಸಬಹುದೆಂಬುದನ್ನು ತೋರಿಸಿಕೊಟ್ಟರು.

ಕನ್ನಡದ ಸಣ್ಣ ಕಥೆಗಳ ಬೆಳವಣಿಗೆಗೆ ದೇವುಡು ಮಾಡಿರುವ ದುಡಿಮೆ ಸಾಧಾರಣವಾದುದಲ್ಲ. ಕಥಾನಕ, ಕಥೆ, ನೀಳ್ಗತೆಗಳೆಲ್ಲದರಲ್ಲಿ ದೇವುಡು ಒಂದು ಬಗೆಯ ಪಕ್ವತೆಯನ್ನು ತೋರಿಸಿದ್ದಾರೆ.

`ದೇವುಡುಕಥೆ'ಗಳಲ್ಲಿ ಬಂದಿರುವ ಒಂದೆರಡು ಪುಟಗಳ ಕಥೆಗಳನ್ನೋದಿದರೆ ಆಗುವ ಆನಂದವೇ ಅವರ `ಸೋಲೋ ಗೆಲವೋ' ನೀಳ್ಗತೆಗಳನ್ನು ಓದಿದರೂ ಆಗುತ್ತದೆ. ಅವರ `ವೈಣಿಕ' ಕಥೆಯನ್ನು ನನ್ನ ಕಾಮನ ಬಿಲ್ಲು ಗ್ರಂಥದಲ್ಲಿ ಪ್ರಕಟಿಸುತ್ತಾ (೧೯೩೩) ಅವರ ಕಥನ ಕಲೆಯ ಬಗ್ಗೆ.ಈ ಕೆಲವು ಮಾತುಗಳನ್ನು ಹೇಳಿದ್ದೇನೆ, `ಕಥಾವಸ್ತುವಿನ ಮತ್ತು ವಾತಾವರಣದ ಸಂಪೂರ್ಣ ಪರಿಚಯವು ಇವರ ಎಲ್ಲ ಕಥೆಗಳಲ್ಲಿಯೂ ಕಂಡು ಬರುತ್ತದೆ. ರಾಜಮನೆತನದ ಮರ್ಮಜೀವನವನ್ನು–ಅಂದರೆ ಸಾಮಾನ್ಯವಾಗಿ ಬರೆಹಗಾರರು ಯಾವ ಸಮಾಜವನ್ನು ಕಾಣಲಾರರೋ ಆ ಸಮಾಜವನ್ನು–ಚಿತ್ರಿಸುವುದರಲ್ಲಿ ಅಸಾಮಾನ್ಯಕೌಶಲ್ಯ ದೇವುಡು ಅವರಿಗಿದೆ. ಅವರು ಎಷ್ಟು ಉತ್ತಮ ಸಾಹಿತ್ಯಭಕ್ತರೋ ಅಷ್ಟೇ ಉತ್ತಮ ನಾದಪ್ರಿಯರು. ಸಂಗೀತಕ್ಕೆ ಸಾಮ್ಯವನ್ನು ಅವರು ಹೇಗಾದರೂ ತಮ್ಮ ಕೃತಿಗಳಲ್ಲಿ ಸೇರಿಸಿಬಿಡುತ್ತಾರೆ. ಅರ್ವಾಚೀನ ಸಮಾಜಕ್ಕೆ ಸೇರಿದ ವ್ಯಕ್ತಿಗಳಿಗಿಂತ ಪ್ರಾಚೀನ ಸಮಾಜದ ವ್ಯಕ್ತಿಗಳನ್ನು ಚಿತ್ರವತ್ತಾಗಿ ತೋರುವ ಹಿರಿಶಕ್ತಿ ಇವರಿಗಿದೆ. ಇವರ ಕಥೆಗಳ ನವೀನತೆಯು ಸಾಮಾನ್ಯವಾಗಿ ಹೇಳುವ ರೀತಿಯಲ್ಲಿಲ್ಲ. ಸಣ್ಣ ಕಥೆಗಳು ಕೂಡ ಹ್ರಸ್ವಮಾಡಿದ ಕಾದಂಬರಿಗಳಂತೆ ಕಂಡು ಬರುತ್ತದೆ. ಇವರ ಕೃತಿಗಳಲ್ಲಿ ವಿಶೇಷವಾಗಿ ಕಾಣಬರುವ ಉಪಮಾನಪ್ರಿಯತೆಯೂ ಇದಕ್ಕೆ ಒಂದು ಕಾರಣವಿರಬಹುದು. ದೇವುಡು ಅವರ ಶೈಲಿಯಲ್ಲಿ ಸರಳತೆಯೂ, ಸುನಾದ ಗಾಂಭೀರ್ಯವೂ, ತೇಜಸ್ಸೂ ಇದೆ.'

ಮಕ್ಕಳ ಮನಸ್ಸನ್ನರಿತು, ಅವರ ಬುದ್ಧಿಗೆ ನಿಲುಕುವಂತೆ ಕಥೆ ಬರೆಯುವುದರಲ್ಲಿ ದೇವುಡು ಅನ್ಯಾದೃಶ ಸಿದ್ಧಿ ದೊರಕಿಸಿಕೊಂಡಿದ್ದಾರೆ. ಮಕ್ಕಳಿಗಾಗಿ ಇವರು ರಚಿಸಿರುವ ಸಾಹಿತ್ಯ ಮತ್ತು ಇವರು ಸಂಪಾದಿಸಿದ ಕೆಲವು `ಮಕ್ಕಳ ಪುಸ್ತಕ'ದ ಸಂಪುಟಗಳು ಮಕ್ಕಳ ಸಾಹಿತ್ಯದ ಕೊರತೆಯನ್ನು ಬಹು ಮಟ್ಟಿಗೆ ನಿವಾರಣೆಮಾಡಿದವು. ತರುವಾಯ ಹಲವು ಕನ್ನಡ ಸಾಹಿತಿಗಳು ಮಕ್ಕಳ ಸಾಹಿತ್ಯ ನಿರ್ಮಾಣ ಮಾಡಲು ಹೊರಡುವುದಕ್ಕೆ ದೇವುಡು ಅವರ ಮೇಲ್ಪಂಕ್ತಿ, ಸಾಧನೆ, ಪ್ರತಿಭೆಗಳೇ ಕಾರಣವೆಂಬುದನ್ನು ಮರೆಯಬಾರದು.

ಅನುವಾದಕನನ್ನು ಸಾಮಾನ್ಯವಾಗಿ ಕೊಲೆಪಾತಕಿ ಎಂದು ಕರೆಯುವುದು ರೂಢಿ. ಮೂಲ ಕವಿಯ ಮನಸ್ಸನ್ನು ಚೆನ್ನಾಗಿ ಅರಿತು, ಮೂಲಕ್ಕೆ ಸ್ವಲ್ಪವೂ ಅಪಮಾನವಾಗದ ರೀತಿಯಲ್ಲಿ ಅನುವಾದ ಮಾಡುವುದು ಒಂದು ವಿಶಿಷ್ಟ ಶಕ್ತಿ. ಜೊವೆಟ್, ಗಿಲ್ಬರ್ಟ್ ಕ್ಯಾನನ್, ಆಮರ್ ಮಾಡ್‌ರಂಥ ಅನುವಾದಕರು ಇಂಗ್ಲೀಷಿನಲ್ಲಿಯೂ ವಿರಳ. ಗಯಟೆ ಕವಿಯನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟ ದೇವುಡು ಮಾಸಫೀಲ್ಡ್ ಕವಿಯ ಯೇಸುವಿನ ವಿಚಾರಣೆ ಗ್ರಂಥವನ್ನು ಅತ್ಯುದ್ಭುತವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಕೆಲವು ಕಡೆ ಅನುವಾದ ಮೂಲಕ್ಕೂ ಮಿಗಿಲಾಗಿದೆ. ಯೇಸು ಸ್ವಾಮಿಯ ನಿರ್ಮಲಜೀವನ ಮಾಸಫೀಲ್ಡನಿಗಿಂತಲೂ ದೇವುಡು ಅವರಿಗೆ ಚೆನ್ನಾಗಿ ಮನವರಿಕೆಯಾಗಿದೆಯೆಂದು ಧಾರಾಳವಾಗಿ ಹೇಳಬಹುದು.

ನಾಟಕವೆಂದರೆ ದೇವುಡು ಅವರಿಗೆ ಪಂಚಪ್ರಾಣ. ಬಾಲ್ಯದಿಂದಲೂ ನಾಟಕ ಬರೆಯುವ, ಆಡಿಸುವ, ಆಡುವ ಹುಚ್ಚು. ಬೆಂಗಳೂರು ಅಮೆಚೂರ ನಾಟಕಮಂಡಳಿಯವರು ಅಭಿನಯಿಸಿದ `ನಚಿಕೇತ' ನಾಟಕದಲ್ಲಿ ದೇವುಡು ಪ್ರಧಾನ ಭೂಮಿಕೆ ವಹಿಸಿ ಅಪೂರ್ವ ಕೀರ್ತಿಗಳಿಸಿದರು. `ಚಿರಂಜೀವಿ' ಚಲನಚಿತ್ರದಲ್ಲಿ ಪಾತ್ರವಹಿಸಿದ್ದರು. `ರಂಗಭೂಮಿ' ಪತ್ರಿಕೆಯನ್ನು ಶ್ರೇಷ್ಠ ರೀತಿಯಲ್ಲಿ ಕೆಲವು ಕಾಲ ನಡೆಸಿದ ನಾಟಕ ಶಾಸ್ತ್ರದ ಮೇಲೆ ಹಲವು ಲೇಖನಗಳನ್ನು ಬರೆದು ಅಳಿಯುತ್ತಿರುವ ನಾಟಕ ಕಲೆಯ ಪುನರುದ್ಧಾರಕ್ಕೆ ಶ್ರಮಿಸಿದ್ದಾರೆ.

ದೇವುಡು ಅವರ ಅತಿ ಮೆಚ್ಚಿನ ಕವಿ ಕಾಳಿದಾಸ; ಅತಿಮೆಚ್ಚಿನ ದಾರ್ಶನಿಕ ಶ್ರೀ ಶಂಕರಾಚಾರ್ಯರು; ಅತಿಮೆಚ್ಚಿನ ಧರ್ಮಗ್ರಂಥ ಭಗವದ್ಗೀತೆ. ಕಾಳಿದಾಸನ `ಮೇಘ ಸಂದೇಶ'ದ ಮೇಲೆ ಒಂದು ಬೃಹದ್ಗ್ರಂಥ ಬರೆದಿದ್ದಾರೆ. ಅವನ ನಾಟಕಗಳ, ಕಾವ್ಯಗಳ ವಸ್ತುವನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಶ್ರೀ ಶಂಕರಾಚಾರ್ಯರ ಮೇಲೆ ಇದೇ ಈಗ ಒಂದು ಜೀವನ ಚರಿತ್ರೆ ಬರೆದು ಮುಗಿಸಿದ್ದಾರೆ. ಭಗವದ್ಗೀತೆಯನ್ನು ಸೊಗಸಾಗಿ ಅನುವಾದ ಮಾಡಿಕೊಟ್ಟಿರುವುದಲ್ಲದೆ, `ಗೀತಾ' ಪ್ರಸಾರಕ್ಕಾಗಿಯೇ ಬಹುಶ್ರಮದಿಂದ ಒಂದು ಪತ್ರಿಕೆ ನಡೆಸುತ್ತಿದ್ದಾರೆ.

ದೇವುಡು ಅವರ ಪ್ರಗಲ್ಭ ಪಾಂಡಿತ್ಯಕ್ಕೆ ಅವರ `ಕರ್ನಾಟಕ ಸಂಸ್ಕೃತಿ', `ಮೀಮಾಂಸಾದರ್ಪಣ' ಎಂಬೆರಡು ಗ್ರಂಥಗಳು ಸಾಕು. ಅವರ `ಭಾರತದ ಮಹಾ ಪುರುಷರು' ಮತ್ತು `ಸಂಗ್ರಹ ರಾಮಾಯಣ' ಕನ್ನಡಿಗರ ಪ್ರತಿಯೊಂದು ಮನೆಯಲ್ಲಿಯೂ ಮೆರೆಯಬೇಕಾದ ಗ್ರಂಥಗಳು. ಅರಮನೆಯ ಪ್ರಕಟನೆ ಶಾಖೆಗೆ `ಯೋಗವಾಸಿಷ್ಠ' ಗ್ರಂಥವನ್ನು ಪರಿಷ್ಕರಿಸಿ ಅನುವಾದಿಸಿ ಕೊಡುತ್ತಿದ್ದಾರೆ.

ದೇವುಡು ಅವರ ಎಲ್ಲ ಕೃತಿಗಳಲ್ಲಿಯೂ ಅವರ ಪಾಂಡಿತ್ಯ, ಕನ್ನಡ ತೇಜಸ್ಸು, ವಿಚಾರ ಪರಿಪ್ಲುತತೆಗಳು ಕಂಡು ಬರುವುದಲ್ಲದೆ ಅವರ ಪರಿಶುದ್ಧ ಅಂತರಂಗವೂ ಲಾಸ್ಯವಾಡುತ್ತದೆ. ದೇವುಡು

ವಾದಪ್ರಿಯ, ಆದರೆ ಇತ್ತಂಡ ವಾದಿಯಲ್ಲ. ಸತತ ಧ್ಯಾನ, ಅಭ್ಯಾಸಗಳಿಂದ, ತಾವು ಅರಿತಿರುವುದು ಹೇಳುತ್ತಿರುವುದು ಸತ್ಯವೆಂಬ ನಂಬಿಕೆಯಿದೆ. ಆದರೆ ಅದನ್ನು ಎಲ್ಲರ ಮೇಲೆ ಹೇರಿ ತಮ್ಮ ಪ್ರತಿಷ್ಠೆ ಮೆರೆಸಬೇಕೆಂಬ ಹಟಮಾರಿತನವಿಲ್ಲ. ತಾವು ಕಂಡಿರುವ ಸತ್ಯಕ್ಕೆ ದೇವುಡು ಎಷ್ಟು ಗೌರವ, ಭಕ್ತಿ ತೋರಿಸುತ್ತಾರೋ ಅಷ್ಟೇ ಭಕ್ತಿ ಗೌರವಗಳನ್ನು ಇತರರು ಕಂಡಿರುವ ಸತ್ಯಕ್ಕೂ ತೋರಿಸುತ್ತಾರೆ. `ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂಬ ಋಷಿವಾಣಿಯ ಆಚರಣೆಗೆ ದೇವುಡು ಮನಸ್ಸು ಮೀಸಲಾಗಿದೆ.

ಕನ್ನಡ ನಾಡಿನಲ್ಲಿ ಬಹುಮುಖವಾಗಿ ಜ್ಞಾನಪ್ರಸಾರಮಾಡಿ ನಾಡಿನ ಸಂಸ್ಕೃತಿಯ ಮಟ್ಟವನ್ನೇರಿಸುವುದಕ್ಕೆ ಪ್ರಯತ್ನಿಸಿರುವ ಹಿರಿಯರಲ್ಲಿ ದೇವುಡು ಅವರಿಗೆ ಸ್ಥಾನವಿದೆ. ಮೈಸೂರಿನಲ್ಲಿ ಅಕ್ಷರ ಪ್ರಚಾರ ಚಳುವಳಿಯನ್ನಾರಂಭಿಸಿ ವಯಸ್ಕರ ಶಿಕ್ಷಣ ಸಾಧ್ಯವೆಂಬುದನ್ನು ಪ್ರಯೋಗಮಾಡಿ ತೋರಿಸಿಕೊಟ್ಟವರೇ ದೇವುಡು. ಅವರ `ಮೂಲ ಸಂಸ್ಕೃತ' ಸಂಸ್ಕೃತ ಕಲಿಯಬೇಕೆನ್ನುವವರ ಕಲ್ಪವೃಕ್ಷ.

ದೇವುಡು ಅವರನ್ನು ನೋಡಿದವರು ಯಾರಿಗಾದರೂ ಅವರು `ಮಹಾಬ್ರಾಹ್ಮಣ'ರೆಂದು ಹೊಳೆಯದಿರಲಾರದು. ಋಷಿರಾಜ ವಶಿಷ್ಠನನ್ನು ಕುರಿತು ದೇವುಡು `ಮಹಾಬ್ರಾಹ್ಮಣ' ಎಂಬ ಕಾದಂಬರಿ ಬರೆದಿದ್ದಾರೆ. ಒಬ್ಬ ಮಹಾಬ್ರಾಹ್ಮಣನನ್ನು ಕುರಿತು ಇನ್ನೊಬ್ಬ ಮಹಾಬ್ರಾಹ್ಮಣನೇ ಬರೆಯಬೇಕಲ್ಲವೇ? ನಡೆ, ನುಡಿ, ಶೀಲಗಳೆಲ್ಲದರಲ್ಲಿಯೂ ದೇವುಡು ಮಹಾಬ್ರಾಹ್ಮಣರಾಗಿದ್ದಾರೆ. ಒಮ್ಮೆ ದೇವುಡು ರೆ. ಚೆನ್ನಪ್ಪ ಉತ್ತಂಗಿಯವರನ್ನು ತಮ್ಮ ಮನೆಗೆ ಊಟಕ್ಕೆ ಕರೆದರು. ಉತ್ತಂಗಿಯವರು ಮನೆಗೆ ಹೋಗುತ್ತಲೇ ದೇವುಡು ಅವರ ಪಾದಗಳನ್ನು ತೊಳೆದರು. ಉತ್ತಂಗಿಯವರು ಚಕಿತರಾಗಿ `ಏನಿದು?' ಎಂದು ಕೇಳಿದರು. ಅದಕ್ಕೆ ದೇವುಡು `ನನಗಂತೂ ಮಹಾನುಭಾವ ಯೇಸುಸ್ವಾಮಿಯ ಪಾದ ತೊಳೆಯುವ ಪುಣ್ಯ ಸಿಕ್ಕಲಿಲ್ಲ. ಅವನ ಅಂತರಂಗ ಭಕ್ತನ ಪಾದವನ್ನಾದರೂ ತೊಳೆದು ಕೃತಾರ್ಥನಾಗುತ್ತೇನೆ' ಎಂದರು. ಎಲ್ಲ ಧರ್ಮಗಳನ್ನೂ ಸಮನಾಗಿ ಕಂಡು, ಅವುಗಳ ಮಹಾಪುರುಷರನ್ನು ಭಕ್ತಿ ಪ್ರೇಮಗಳಿಂದ ಆರಾಧಿಸುವ ಮಹಾ ಬ್ರಾಹ್ಮಣತ್ವದ ದೇವುಡು ನಾಡವರ ಮುಂದೆ, ತಮ್ಮ ಹಿರಿಯ ಬಾಳುವೆಯಿಂದ ಇಡುತ್ತಿದ್ದಾರೆ.

ಅಪರಿಮಿತ ಸಂಸಾರ ತಾಪತ್ರಯ, ತಲೆಯಲ್ಲಿ ಸುಳಿಯುವ ನೂರಾರು ವಿಚಾರಗಳು, ಭಾವನೆಗಳಿಗೆ ರೂಪಕೊಡಲು ಅವಕಾಶವಿಲ್ಲದ ನೋವು ನುಂಗಿಕೊಂಡು ದೇವುಡು ಅವಧೂತರಾಗಿದ್ದಾರೆ. ಅವರ ಮಾತೇ ಜ್ಯೋತಿರ್ಲಿಂಗ, ಬಾಳಬಟ್ಟೆಯ ಪರಮಾಗಮ ಪ್ರವರ್ತಕರು ದೇವುಡು.

ಅವರಷ್ಟೇ ಸರಳ ಅವರ ಮಾತುಗಾರಿಕೆ. ಪಾಂಡಿತ್ಯ ತುಂಬಿ ತುಳುಕುತ್ತಿದ್ದರೂ ಪಾಂಡಿತ್ಯ ಪ್ರದರ್ಶನವಿಲ್ಲ. ಶಂಕರಾಚಾರ್ಯರ ಮೇಲೆ, ಗೀತೆಯ ಮೇಲೆ, ಕಾಳಿದಾಸನ ಮೇಲೆ ದೇವುಡು ಮಾತನಾಡುವುದನ್ನು ಕೇಳುವುದೊಂದು ಹಿರಿಭಾಗ್ಯ.

ಸಾಹಿತಿಗಳಾಗಿ, ದಾರ್ಶನಿಕರಾಗಿ, ನಾಡಶಿಲ್ಪಿಗಳಾಗಿ ದೇವುಡು ಕನ್ನಡನಾಡಿಗೆ ಅಭೂತಪೂರ್ವ ಸೇವೆ ಸಲ್ಲಿಸಿದ್ದಾರೆ. ಉತ್ತಮ ಸಾಹಿತ್ಯ ಉತ್ತಮ ಜೀವನದ ಪ್ರತೀಕವೆಂಬುದನ್ನು ಎತ್ತಿ ಹಿಡಿದಿದ್ದಾರೆ. ಬೇರೆ ಯಾವ ಮೋಹ ವಿಲೋಭಕ್ಕೂ ಬಲಿಯಾಗದೆ, ಹಲವು ಭಾಷೆಗಳ ಬೆನ್ನು ಹತ್ತದೆ ಕನ್ನಡದ ಮನೆಯನ್ನು ಉಳಿಸಲು ದೇವುಡು ತಮ್ಮ ಜೀವನವನ್ನು ತೇಯ್ದಿದ್ದಾರೆಂಬುದನ್ನು ಕನ್ನಡಿಗರು ಮರೆಯದಿರಬೇಕು.

★

ನಾ ಕಂಡ ದೇವುಡು

ಪ್ರೊ॥ ಕೆ. ಸಂಪದ್ಗಿರಿ ರಾವ್

ದೇವುಡು ನರಸಿಂಹಶಾಸ್ತ್ರಿಗಳನ್ನು ನೆನೆದಾಗಲೆಲ್ಲಾ ನನ್ನ ಮನಸ್ಸಿನಲ್ಲಿ ಮೂಡುವ ಚಿತ್ರ ಅವರ ಅದಮ್ಯ ಉತ್ಸಾಹ, ಅವರ ತೇಜೋಮಯವಾದ ವಾಕ್ಸರಣಿ, ಅವರ ಉಚ್ಚತರವಾದ ಆಕಾಂಕ್ಷೆಗಳು. ಅವರ ಪ್ರಥಮ ಪರಿಚಯವಾದದ್ದು ೧೯೨೫ರಲ್ಲಿ ಎಂದು ನನಗೆ ನೆನಪು. ನಾನು ಕೆಲಸ ಮಾಡುತ್ತಿದ್ದ ದೇಶೀಯ ವಿದ್ಯಾಶಾಲೆಯ ವಿಷಯದಲ್ಲಿ ಅವರಿಗೆ ಅಪಾರವಾದ ಆದರವಿತ್ತು. ಮೊದಲ ಸಲದ ಭೇಟಿಯಲ್ಲಿಯೇ ವೇದಗಳ ಅರ್ಥದ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳ ಬಗೆಗೆ ಒಂದು ಸಣ್ಣ ಉಪನ್ಯಾ ನವನ್ನೇ ನನಗೆ ಕೊಟ್ಟರು. ಪ್ರಥಮ ಪರಿಚಯವೇ ಗಾಢವಾದ ಸ್ನೇಹಕ್ಕೆ ಅಂಕುರವಾಯಿತು. ಎರಡನೆಯ ಸಲ ಸಂಧಿಸಿದಾಗ ಅನೇಕ ವರ್ಷ ಪಳಗಿದ ಸ್ನೇಹಿತರಂತೆ ನಾವು ವರ್ತಿಸಿದೆವು. ಅವರ ನಿಷ್ಕಪಟ ಮನೋಧರ್ಮ ಮತ್ತು ಸ್ನೇಹಪರತೆ ಇದಕ್ಕೆ ಕಾರಣವೆಂದು ತೋರುತ್ತದೆ. ಇದೇ ಅವರ ಅನೇಕ ಮಿತ್ರರ ಅನುಭವವೂ ಇರಬೇಕು. ದೂರದ ಕೇವಲ ಔಪಚಾರಿಕ ಪರಿಚಯ ಅವರಲ್ಲಿ ಅಕ್ಕರೆ ಇರುವವರಿಗೆ ಸಾಧ್ಯವಿರುತ್ತಿರಲಿಲ್ಲ.

ದೇವುಡುರವರು ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ಪದವೀಧರರು, ಸಂಸ್ಕೃತ ಭಾಷೆಯಲ್ಲಿ. ಅವರು ಕೇವಲ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ನಿಮಿತ್ತದಿಂದ ಸಂಸ್ಕೃತವನ್ನು ಕಲಿತವರಲ್ಲ. ವೈದಿಕ ಮನೆತನಕ್ಕೆ ಸೇರಿದವರು. ಸಂಸ್ಕೃತಜ್ಞಾನ ಅವರಿಗೆ ರಕ್ತಗತವಾಗಿ ಬಂದದ್ದು. ವೈದಿಕ ಸಂಪ್ರದಾಯವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಶೃಂಗೇರಿ ಮಠದೊಂದಿಗೆ ನಿಕಟವಾದ ಸಂಬಂಧವನ್ನು ತಾಳಿದ್ದರು. ಆದರೆ ಅವರದು ಆಧುನಿಕ ದೃಷ್ಟಿ, ಸಂಶೋಧನಾ ಮನೋಧರ್ಮ. ನಮ್ಮ ದೇಶದ ಸಂಸ್ಕೃತಿಗೆ ಸಂಸ್ಕೃತವೇ ಬುಡಕಟ್ಟೆಂಬ ವಿಶ್ವಾಸ ಅವರಲ್ಲಿ ದೃಢವಾಗಿತ್ತು. ಎಲ್ಲರೂ ಸುಲಭವಾಗಿ ಸಂಸ್ಕೃತವನ್ನು ಕಲಿಯಬಹುದೆಂದು ಅವರ ಆಶಯ. ಇದಕ್ಕಾಗಿ ಒಂದು ಸಂಸ್ಕೃತ ಸ್ವಬೋಧಿನಿ ಪುಸ್ತಕವನ್ನೂ ಅವರು ಸಿದ್ಧಗೊಳಿಸಿದರು. ಅವರ ಬಹುಮುಖಿ ಪ್ರಯತ್ನಗಳಲ್ಲಿ ಇದೂ ಒಂದು.

ವೈದಿಕ ವಾಙ್ಮಯ, ಸಂಸ್ಕೃತ-ಇವುಗಳಲ್ಲಿ ಅವರಿಗೆ ವಿಶೇಷ ಆಸಕ್ತಿ ಇದ್ದರೂ ಅವರ ಚಟುವಟಿಕೆಗಳು ಬಹುಮುಖವಾಗಿದ್ದವು. ಶಿಕ್ಷಣ, ನಾಟಕ ಮತ್ತು ಚಲನಚಿತ್ರಗಳಲ್ಲಿ ಅಭಿನಯ, ಕಾದಂಬರಿ ರಚನೆ, ಶಿಶು ಸಾಹಿತ್ಯ ನಿರ್ಮಾಣ, ಅಕ್ಷರ ಪ್ರಚಾರ, ಪೌರಾಣಿಕ ವೃತ್ತಿ, ಕೊನೆಗೆ ಖನಿಜಗಳ ಉತ್ಪತ್ತಿ ಅವುಗಳ ವಿತರಣೆ–ಹೀಗೆ ಅನೇಕ ಕ್ಷೇತ್ರಗಳಲ್ಲಿ ಆಸಕ್ತಿ ವಹಿಸಿ ತಮ್ಮದೇ ಆದ ಹುಮ್ಮಸ್ಸಿನಿಂದ ಅವರು ಶ್ರಮಿಸಿದರು.

ಅವರ ಪ್ರಥಮ ಪರಿಚಯವಾದ ನಂತರ ಶಿಕ್ಷಣಕ್ಷೇತ್ರದಲ್ಲಿ ನಮ್ಮ ನಂಟು ಬೆಳೆಯಿತು. ಆ ಕಾಲಕ್ಕೆ ನಮ್ಮ ಜನರು ನಡೆಸುತ್ತಿದ್ದ ಖಾಸಗಿ ಶಾಲೆಗಳು ಬಹಳ ಇರಲಿಲ್ಲ. ಗೋಪಾಲಾಚಾರ್ ಎನ್ನುವ ಶಿಕ್ಷಣ ಪ್ರೇಮಿಗಳು ಬಳೇಪೇಟೆಯ ಶ್ರೀ ನರಸಿಂಹದೇವರ ಗುಡಿಯ ಪಕ್ಕದಲ್ಲಿರುವ ಮನೆಯಲ್ಲಿ ಒಂದು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯನ್ನು ಅದಕ್ಕೆ ಆರ್ಯವಿದ್ಯಾಶಾಲೆಯೆಂದು

ಹೆಸರಿಟ್ಟು ನಡೆಸುತ್ತಿದ್ದರು. ಅವರು ಕಾಲವಾದ ನಂತರ ಆ ಶಾಲೆ ಬಹಳ ದುರವಸ್ಥೆಗೆ ಗುರಿಯಾಯಿತು. ಅದನ್ನು ಪುನರ್ವ್ಯವಸ್ಥೆಗೊಳಿಸಲು ಆಡಳಿತವರ್ಗದವರು ನಮ್ಮ ದೇಶೀಯ ವಿದ್ಯಾಶಾಲೆಯ ಅಧ್ಯಾಪಕರ ನೆರವನ್ನೂ ಸಲಹೆಯನ್ನೂ ಕೋರಿದರು. ಆ ಸಂದರ್ಭದಲ್ಲಿ ದೇವುಡು ನನಗೆ ಹೊಸ ಪರಿಚಯವಾಗಿದ್ದರೂ, ಅವರನ್ನು ಆರ್ಯವಿದ್ಯಾಶಾಲೆಯ ನಿರ್ವಹಣೆಯನ್ನು ಮಾಡಬೇಕೆಂದು ಕೇಳಿಕೊಂಡೆ. ಅವರಿಗೂ ತಮ್ಮ ಮನಸ್ಸಿಗೆ ಒಪ್ಪುವ ಕೆಲಸ ಬೇಕಾಗಿತ್ತು, ದೇವುಡು ಒಪ್ಪಿಕೊಂಡರು. ನಮ್ಮ ದೇಶೀಯ ವಿದ್ಯಾಶಾಲೆಯ ಕೆಲವು ಹಳೆಯ ವಿದ್ಯಾರ್ಥಿಗಳನ್ನು ಅಧ್ಯಾಪಕವರ್ಗಕ್ಕೆ ಸೇರಿಸಿಕೊಂಡರು. ಬಹಳ ನಿಷ್ಠೆಯಿಂದ ಕೆಲಸಮಾಡಿದರು, ಶಾಲೆಯನ್ನು ಒಂದು ರೀತಿಯ ಗುರುಕುಲ ಸ್ವರೂಪವನ್ನು ತಾಳುವಂತೆ ಮಾಡಿದರು. ಅಂದರೆ ಶಾಲೆಯ ವಿದ್ಯಾರ್ಥಿಗಳಲ್ಲನೇಕರು ಮತ್ತು ಅಧ್ಯಾಪಕರು ಬೆಳಗಿನಿಂದ ರಾತ್ರಿಯವರೆಗೂ ಅಲ್ಲಿಯೇ ಇರುವಂತೆಯೂ, ಪಾಠಪ್ರವಚನಗಳೊಂದಿಗೆ ಇತರ ವಿಷಯಗಳನ್ನು ಅವರು ಕಲಿಯುವಂತೆಯೂ, ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಬೇತು ದೊರೆಯುವಂತೆಯೂ ಏರ್ಪಾಡು ಮಾಡಿದರು. ಒಂದೆರಡೇ ವರ್ಷಗಳಲ್ಲಿ ಶಾಲೆಯ ಶಿಸ್ತು, ಪಾಠಕ್ರಮ ಎಲ್ಲವೂ ಬಹಳ ಉತ್ತಮಗೊಂಡವು. ಧಾರವಾಡದಿಂದ ಶ್ರೀ ಬೆಟಗೇರಿ ಕೃಷ್ಣಶರ್ಮ ('ಆನಂದಕಂದ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದವರು) ಶಾಲೆಯ ಕನ್ನಡ ಅಧ್ಯಾಪಕರಾಗಿ ಬಂದರು. ಕೆಲವೇ ವರ್ಷಗಳು ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಕೆಲಸವನ್ನು ಮಾಡಿ, ಎಲ್ಲರ ಮೆಚ್ಚಿಗೆಗೂ ಪಾತ್ರರಾಗಿ ಅಲ್ಲಿಂದ ದೇವುಡು ದೂರ ಸರಿದರು. ಇದಕ್ಕೆ ಕಾರಣ ನನಗೆ ಜ್ಞಾಪಕವಿಲ್ಲ. ಆದರೆ ದೇವುಡು ಅವರದು ಸ್ವತಂತ್ರ ವಿಚಾರಧಾರೆ. ಅವರ ಕನಸನ್ನು ನನಸಾಗಿಸಲು ಯಾವ ತ್ಯಾಗವನ್ನಾದರೂ ಯಾವ ಸಾಹಸವನ್ನಾದರೂ ಮಾಡಲು ಅವರು ಸಿದ್ಧರಾಗಿದ್ದರು. ಪ್ರಾಪಂಚಿಕ ಜ್ಞಾನ, ಎಚ್ಚರಿಕೆ, ಜೀವನೋಪಾಯದ ಚಿಂತೆ–ಸಾಮಾನ್ಯ ಜನರಲ್ಲಿ ಇರುವ ಗುಣಗಳು ಅವರಲ್ಲಿ ಅಷ್ಟಾಗಿರಲಿಲ್ಲ. ಪತ್ರಿಕಾ ಪ್ರಪಂಚ, ಬರವಣಿಗೆ ಇವುಗಳಲ್ಲಿ ಉದ್ಯುಕ್ತರಾದರು. ನಾಟಕದ ಗೀಳೂ ಅವರಲ್ಲಿತ್ತು–ಚಲನಚಿತ್ರ ಪ್ರಪಂಚವನ್ನೂ ಪ್ರವೇಶಿಸಿ "ಮಾರ್ಕಂಡೇಯ" ಎಂಬ ಚಿತ್ರದಲ್ಲಿ ಪಾತ್ರವಹಿಸಿದರು. ಆ ಕಾಲಕ್ಕೆ ಅವರನ್ನು ಸಂದರ್ಶಿಸುವ ಅವಕಾಶಗಳು ನನಗೆ ಕಡಿಮೆಯಾದವು. ಆದ್ದರಿಂದ ಈ ಚಟುವಟಿಕೆಗಳ ವಿವರಗಳು ನನಗೆ ಗೊತ್ತಿಲ್ಲ.

ದೇವುಡು ಭಾವುಕರು, ಇದು ಅವರಲ್ಲಿ ವಿಶೇಷವಾದ ಗುಣ. ಯಾವ ವಿಷಯದಲ್ಲಿ ಅವರಿಗೆ ಆಸಕ್ತಿ ಇತ್ತೋ ಅಂತಹದನ್ನು ಪ್ರಸ್ತಾಪಿಸುತ್ತಾ ಅವರ ಕಣ್ಣಿನಲ್ಲಿ ನೀರು ತುಂಬಿ ಪಳ ಪಳವೆಂದು ಹರಿಯುತ್ತಿತ್ತು. ಅವರ ಭಾವುಕತೆಗೆ ಎರಡು ಉದಾಹರಣೆಗಳು ನನಗೆ ಮರೆಯಲಾಗದಾಗಿದೆ.

ನಮ್ಮ ದೇಶೀಯ ವಿದ್ಯಾಶಾಲೆ ೧೯೨೧-೨೪ರವರೆಗೂ ಹೊಸತರಗುಪೇಟೆಯಲ್ಲಿ ಒಂದು ಬಾಡಿಗೆ ಕಟ್ಟಡದಲ್ಲಿತ್ತು. ಈಗಿರುವ ಸ್ಥಳಕ್ಕೆ ಬದಲಾಯಿಸುವ ಸಂದರ್ಭದಲ್ಲಿ ಒಂದು ಶುಭ ದಿನವನ್ನು ಗೊತ್ತುಮಾಡಿ ವಿದ್ಯಾರ್ಥಿಗಳೂ, ಅಧ್ಯಾಪಕರೂ ಅಲಂಕರಿಸಿದ ಸರಸ್ವತಿ ಪಟದೊಂದಿಗೆ, ಮಂಗಳವಾದ್ಯಗಳೊಡನೆ, ಮೆರವಣಿಗೆಯಲ್ಲಿ ಪ್ರಾತಃಕಾಲ ಹೊರಟಿದ್ದೆವು. ದೇಶೀಯ ವಿದ್ಯಾಶಾಲೆಯ ವಿಷಯದಲ್ಲಿ ಅವರಿಗಿದ್ದ ವಿಶ್ವಾಸ ಹಿಂದೆ ಪ್ರಸ್ತಾಪಿಸಲಾಗಿದೆ. ಮೆರವಣಿಗೆ ಮಹಿಳಾ ಸೇವಾ ಸಮಾಜದ ಹಿಂಭಾಗಕ್ಕೆ ಬರುತ್ತಿರುವಾಗ ದೇವುಡು ಮೆರವಣಿಗೆಯನ್ನು ಎದುರುಗೊಂಡರು. ಭಾವಾವಿಷ್ಟರಾ

ದರು, ಕಣ್ಣಲ್ಲಿ ಅಶ್ರುಧಾರೆ, ಪಕ್ಕದಲ್ಲಿ ದ್ರಾಕ್ಷಿಯನ್ನು ಮಾರುತ್ತಿದ್ದವನು ಅವರ ಕಣ್ಣಿಗೆ ಬಿದ್ದನು, ಅವನಲ್ಲಿಗೆ ಹೋಗಿ ಅವನಲ್ಲಿ ಇದ್ದದ್ದನೆಲ್ಲಾ ವ್ಯಾಪಾರ ಮಾಡಿ–ನಮ್ಮೊಡನೆ ಹೊಸ ಶಾಲೆಯವರೆಗೂ ಬಂದು ನಮ್ಮೆಲ್ಲರಿಗೂ ಹಂಚಿದರು.

ಮತ್ತೊಂದು ಸಂದರ್ಭ: ಬಳ್ಳಾರಿಯಲ್ಲಿ ೧೯೩೭ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಮ್ಮೇಳನ ಮತ್ತಿತರ ಸಮಾರಂಭಗಳಾದವು. ಅವುಗಳಲ್ಲಿ ಡಾ|| ನಾ.ಸು. ಹಾರ್ಡಿಕರ್ ಅವರ ಸೇವಾದಳ ಸಮ್ಮೇಳನವೂ ಒಂದು. ಅದಕ್ಕೆ ಅಧ್ಯಕ್ಷರು ದಿ|| ಹೊಸಕೊಪ್ಪ ಕೃಷ್ಣರಾಯರು. ಅವರನ್ನು ಅಧ್ಯಕ್ಷ ಪೀಠದಲ್ಲಿ ಕೂಡಿಸಿ ಅವರನ್ನು ಸೇವಾದಳದ ಸೇನಾಪತಿಯಾಗಿ ಘೋಷಿಸುವ ಸಂದರ್ಭದಲ್ಲಿ ಡಾ||ಹಾರ್ಡಿಕರರು ಒಂದು ನಾಟಕೀಯ ಏರ್ಪಾಡನ್ನೇ ಮಾಡಿಬಿಟ್ಟರು. ಸಮ್ಮೇಳನ ಆರಂಭವಾದಾಗ ಪಂಚೆ, ಕುಡತಾ, ವಲ್ಲಿ ಧರಿಸಿ ಬಂದಿದ್ದ ಹೊಸಕೊಪ್ಪ ಕೃಷ್ಣರಾಯರು–ನೇಪಥ್ಯಕ್ಕೆ ಒಯ್ಯಲ್ಪಟ್ಟರು. ಸಭಾಮಂಟಪದಲ್ಲಿ ರಾಷ್ಟ್ರೀಯ ಗೀತೆಗಳು ಮೊಳಗಿದವು. ಅನಂತರ ಖಾಕಿ ಸಮವಸ್ತ್ರವನ್ನು–ಚೆಲ್ಲಣ, ಷರ್ಟ್, ಟೋಪಿ–ಧರಿಸಿದ ಕೃಷ್ಣರಾಯರ ಕೈಯಲ್ಲಿ ಒಂದು ಉದ್ದವಾದ ಕೋಲು, ಭುಜಕ್ಕೆ ಒಂದು ಭಿಕ್ಷೆ ಬೇಡುವ ಝುಡ್ಲ ಇವುಗಳ ಸಹಿತ ಪ್ರವೇಶಿಸಿದರು. ಡಾ|| ಹಾರ್ಡಿಕರರು ಕೃಷ್ಣರಾಯರನ್ನು ಸಭೆಯ ಮುಂದೆ ನಿಲ್ಲಿಸಿದರು–ಶಿವಾಜಿಯ ಕಾಲದಲ್ಲಿ ಸಮರ್ಥ ರಾಮದಾಸ ಪಂಥಿಗಳಂತೆ ಸೇವಾದಳದವರು ಭಿಕ್ಷೆಗೂ, ಸೇವೆಗೂ ತೊಡಗುವರೆಂದು ಹೇಳಿದರು. ಸಭೆಯಲ್ಲಿ ಕುಳಿತಿದ್ದ ದೇವುಡು ಅವರಿಗೆ ತಡೆಯಲಿಕ್ಕಾಗಲಿಲ್ಲ. ಎದ್ದುನಿಂತು ವಿಲಕ್ಷಣವಾದ ರೀತಿಯಲ್ಲಿ ಹಾ! ಹಾ! ಎಂದು ಕೂಗಿಕೊಂಡರು. ಆವೇಶ ಬಂದವರಂತೆ ವರ್ತಿಸಿದರು. ಸ್ಥಿಮಿತಕ್ಕೆ ಬಂದ ಮೇಲೆ ಅವರಿಗೆ ಡಾ|| ಹಾರ್ಡಿಕರ್ ಅವರ ಪರಿಚಯ ಮಾಡಿಕೊಡಬೇಕೆಂದು ನನ್ನನ್ನು ಕೇಳಿಕೊಂಡರು.

ಮಾನವನಿಗೆ ದೈವೀ ಸಂಪತ್ತು ಲಭಿಸಬೇಕಾದರೆ ಅವನ ಬುದ್ಧಿಗಿಂತಲೂ ಅವನ ಹೃದಯವೇ ಸಹಾಯಕವಾಗುತ್ತದೆ. ದೇವುಡು ಅವರಲ್ಲಿ ಉತ್ತಮ ಮೇಧಾಶಕ್ತಿ ಇತ್ತು. ಆದರೆ ಅದಕ್ಕೆ ಮಿಗಿಲಾಗಿ ಅವರ ಹೃದಯ ವಿಶಾಲವಾಗಿತ್ತು. ಕವಿತೆಗಳನ್ನು ಅವರು ಬರೆಯದಿದ್ದರೂ ಅದು ಕವಿಹೃದಯವಾಗಿತ್ತು. ಅವರ ಲೋಪದೋಷಗಳನ್ನು ಇತರರು ಗಣನೆಗೆ ತಾರದಂತೆ ಮಾಡುತ್ತಿತ್ತು. ನಾನಾ ಕ್ಷೇತ್ರಗಳಲ್ಲಿ ಪ್ರವೇಶಿಸಿ ಅವರ ಶಕ್ತಿ ಹಂಚಿಹೋಗಿದ್ದರೂ, ಸಾಹಿತ್ಯ ಕ್ಷೇತ್ರದಲ್ಲಿ ಅವರು ಮಾಡಿರುವ ಕೆಲಸ ಗಣನೀಯವಾಗಿದೆ. ಮಾರ್ಗಸೂಚಕವಾಗಿಯೂ ಇದೆ.

ಅವರ ಕೃತಿಗಳಿಗಿಂತಲೂ ಅವರ ವ್ಯಕ್ತಿತ್ವ ತೇಜೋಮಯವಾದ ವ್ಯಕ್ತಿತ್ವ. ಅವರ ಸಂಪರ್ಕವಿದ್ದವರ ಮನಸ್ಸಿನಲ್ಲಿ ಅಚ್ಚಳಿಯದ ವ್ಯಕ್ತಿತ್ವ.

★

ಆಪ್ತ ಸ್ನೇಹಿತ ಆದರ್ಶ ಗೆಳೆಯ

ಪದ್ಮಶ್ರೀ ಆ॥ ಎ॥ ಪಂಡಿತರತ್ನ ಬಿ. ಶಿವಮೂರ್ತಿ ಶಾಸ್ತ್ರಿ

ಸುಮಾರು ೪೦ ವರ್ಷಗಳಿಂದ ಕನ್ನಡರಾಜ್ಯಕ್ಕೂ ಕನ್ನಡ ಸಾಹಿತ್ಯಕ್ಕೂ ಸನಾತನ ಧರ್ಮ–ದರ್ಶನ–ಸಂಸ್ಕೃತಿಗಳಿಗೂ ಮಿಗಿಲಾದ ಸೇವೆಯನ್ನು ಸಲ್ಲಿಸಿ, ವಿಖ್ಯಾತ ಗ್ರಂಥಕಾರರೆನಿಸಿ, ಮಹಾವಾಗ್ಮಿಗಳೆನಿಸಿ, ಕರ್ನಾಟಕ ಏಕೀಕರಣವಾದಿಗಳೆನಿಸಿ, ಶಿಕ್ಷಣವೇತ್ತರೆನಿಸಿ ಸಮಗ್ರ ಕರ್ನಾಟಕವನ್ನು ಸಂಚರಿಸಿ ಕನ್ನಡಿಗರನ್ನು ತಮ್ಮ ಪ್ರತಿಭಾನ್ವಿತ ಭಾಷಣಗಳಿಂದ ಬಡಿದೆಬ್ಬಿಸಿ, ಕನ್ನಡಿಗರ ಸಂಸ್ಕೃತಿಯ ನೆಲೆಬೆಲೆಗಳನ್ನು ಸ್ಪಷ್ಟಪಡಿಸಿ ಅದಕ್ಕಾಗಿ ಕೃತಿಗಳನ್ನು ರಚಿಸಿ ಕನ್ನಡಿಗರ ಕುಲಗುರುವೆನಿಸಿ ಕೀರ್ತಿವೆತ್ತವರು ಶ್ರೀ ದೇವುಡು ನರಸಿಂಹಶಾಸ್ತ್ರಿಗಳು.

೧೮೯೬ರಲ್ಲಿ ಜನಿಸಿದ ಶ್ರೀ ದೇವುಡು ನರಸಿಂಹಶಾಸ್ತ್ರಿಗಳು ಮೈಸೂರಿನ ವೈದಿಕ ಬ್ರಾಹ್ಮಣರ ಮನೆತನಕ್ಕೆ ಸೇರಿದವರು. ಬಾಲ್ಯದಿಂದಲೂ ಶಾಸ್ತ್ರೀಯ ಪದ್ಧತಿಯಂತೆ ಸಂಸ್ಕೃತ, ಕನ್ನಡ, ಶಾಸ್ತ್ರ ಪುರಾಣಗಳನ್ನು ಗುರು ಮುಖದಿಂದ ಅಭ್ಯಾಸ ಮಾಡಿದವರು. ಮೈಸೂರು ವಿ.ವಿ.ದಲ್ಲಿ ಡಾ॥ ಎಸ್. ರಾಧಕೃಷ್ಣನ್‌ರವರ ಸನ್ನಿಧಿಯಲ್ಲಿ ತತ್ವಜ್ಞಾನದ ಶಿಷ್ಯರಾಗಿ ದಾರ್ಶನಿಕ ನಿಪುಣನಾಗಿ ಎಂ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದವರು. ಭಗವದ್ಗೀತೆ, ಶಾಂಕರ ದರ್ಶನ ಅಥೇತಿ ಪರ್ಯಂತವಾಗಿ ಓದಿದವರು ಹಾಗೂ ಅವುಗಳನ್ನು ಕುರಿತು ಚೆನ್ನಾಗಿ ಮಾತನಾಡಬಲ್ಲವರು, ಬರೆಯಬಲ್ಲವರು ದೇವುಡು ನರಸಿಂಹ ಶಾಸ್ತ್ರಿಗಳು. ಶ್ರೀ ದೇವುಡು ದೈವಭಕ್ತರು, ರಾಜಭಕ್ತರು, ದೇಶಭಕ್ತರು, ಸ್ನೇಹಪರರು, ಧೈರ್ಯಶಾಲಿಗಳು, ಸ್ಪಷ್ಟವಾದಿಗಳು, ಎಲ್ಲಕ್ಕೂ ಮಿಗಿಲಾಗಿ ಸಹೃದಯರು, ಗುಣೈಕ ಪಕ್ಷಪಾತಿಗಳು. ಒಳ್ಳೆಯ ವ್ಯಕ್ತಿತ್ವ ಅದಕ್ಕೆ ಅನುಗುಣವಾದ ಶಾಸ್ತ್ರಪಾಂಡಿತ್ಯ, ಅದಕ್ಕೆ ಸಮ್ಮತವಾದ ಉತ್ತಮ ನಡವಳಿಕೆಗಳು ದೇವುಡುರವರ ವೈಶಿಷ್ಟ್ಯಗಳು. ೧೯೪೪-೪೫ರಲ್ಲಿ ದೇವುಡು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ೧೯೫೭ರಲ್ಲಿ ಅಖಿಲಕರ್ನಾಟಕ ಕಾದಂಬರಿಕಾರರ ಪರಿಷದಧ್ಯಕ್ಷರಾಗಿದ್ದರು.

ಶ್ರೀ ದೇವುಡು ಕನ್ನಡಕ್ಕೆ ಸಲ್ಲಿಸಿದ್ದ ಸೇವೆ ಅಪಾರವಾದುದು. ಅವರು ಸಣ್ಣಕಥೆ, ಕಾದಂಬರಿ, ನಾಟಕ, ಶಾಸ್ತ್ರಗ್ರಂಥ, ಮಕ್ಕಳ ಪುಸ್ತಕ, ಸುಲಭ ಸಂಸ್ಕೃತ ಇತ್ಯಾದಿಗಳನ್ನು ಕುರಿತು ಬರೆದಿದ್ದಾರೆ. `ನವಜೀವನ' ಮಕ್ಕಳ ಪುಸ್ತಕ, ನಮ್ಮ ಪುಸ್ತಕಗಳ ಸಂಪಾದಕರಾಗಿದ್ದು ಕನ್ನಡ ಪತ್ರಿಕಾ ಪ್ರಪಂಚಕ್ಕೆ ಸೇವೆ ಸಲ್ಲಿಸಿದ್ದಾರೆ. ರಂಗಭೂಮಿಯಲ್ಲಿ ಆಸಕ್ತಿ ವಹಿಸಿ ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ. `ಚಿರಂಜೀವಿ' ಎಂಬ ಚಲನಚಿತ್ರದಲ್ಲಿ ಪಾತ್ರವಹಿಸಿದ್ದಾರೆ. ವಯಸ್ಕರ ಶಿಕ್ಷಣಕ್ಕೆ ಮೊದಲಿಗರಾಗಿದ್ದಾರೆ. ಆರ್ಯ ವಿದ್ಯಾಶಾಲೆಯ ಮತ್ತು ಗಾಂಧೀನಗರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಬೆಂಗಳೂರಿನಲ್ಲಿ ಸಾವಿರಾರು ಮಕ್ಕಳಿಗೆ ಪಾಠಪ್ರವಚನ ಹೇಳಿದ್ದಾರೆ. ಸಾಹಿತ್ಯ ಪರಿಷತ್ಪತ್ರಿಕೆ, ಶರಣ ಸಾಹಿತ್ಯ ಮೊದಲಾದ ಪ್ರೌಢ ಪತ್ರಿಕೆಗಳಿಗೆ ಲೇಖನ ಬರೆದಿದ್ದಾರೆ. ಆಕಾಶವಾಣಿಯಲ್ಲಿ ಭಾಷಣಗಳನ್ನು ಮಾಡಿದ್ದಾರೆ. ಕರ್ನಾಟಕ ಏಕೀಕರಣಕ್ಕೆ ಬೆಂಬಲವಿತ್ತಿದ್ದಾರೆ. ತಮ್ಮ ವಿಚಾರಪೂರ್ಣ ಲೇಖನ, ಭಾಷಣಗಳಿಂದ ಕನ್ನಡಿಗರ ಕುಲನೆಲಗಳ ಅಭಿಮಾನವನ್ನು ಜನರಲ್ಲಿ ಕೆರಳಿಸಿದ್ದಾರೆ. ಧರ್ಮಸ್ಥಳ ಮೊದ

ಲಾದ ಕಡೆ ಹಲವಾರು ಸಮ್ಮೇಳನಗಳ ಅಧ್ಯಕ್ಷರಾಗಿ ಧರ್ಮಸಂದೇಶ ಬೀರಿದ್ದಾರೆ. ಒಟ್ಟಿನಲ್ಲಿ ಕನ್ನಡ ನಾಡಿಗೆ ಸ್ಫೂರ್ತಿದಾಯಕವೆನಿಸುವ ಸಾರ್ಥಕ ಬಾಳನ್ನು ಸುಮಾರು ೬೬ ವರ್ಷಗಳ ಕಾಲ ನಡೆಸಿ ಇಂದು ಕೀರ್ತಿಕಾಯರಾಗಿದ್ದಾರೆ.

ಶ್ರೀ ದೇವುಡು ಗುಣೈಕ ಪಕ್ಷಪಾತಿಗಳು–ಪಾಂಡಿತ್ಯ, ಪ್ರತಿಭೆಗಳನ್ನು ಮೆಚ್ಚತಕ್ಕವರು. ಅವರು ಮೊದಲಿನಿಂದಲೂ ಸಾಹಿತ್ಯ ಪರಿಷತ್ತಿನ ಸದಸ್ಯರು. ಕೆಲವು ಕಾಲ ಕಾರ್ಯಕಾರಿ ಸಮಿತಿ ಸದಸ್ಯರಾಗಿ (೧೯೫೬-೫೯) ಪರಿಷತ್ಪರೀಕ್ಷೆಗಳ ನಿರೀಕ್ಷಕರಾಗಿ ಆ ಮಹಾಸಂಸ್ಥೆಗೆ ಮಿಗಿಲಾದ ಸೇವೆ ಸಲ್ಲಿಸಿದ್ದಾರೆ. ತಾವು ಹುಟ್ಟಿದ ನಾಡಿಗೂ ತಾವು ಆಡಿದ ನುಡಿಗೂ ಕೀರ್ತಿಗೌರವಗಳನ್ನು ತಂದಿದ್ದಾರೆ.

ದೇವುಡು ಶಾಸ್ತ್ರಿಗಳು ಕನ್ನಡ, ಸಂಸ್ಕೃತ, ತೆಲುಗು, ಇಂಗ್ಲೀಷ್ ಈ ನಾಲ್ಕೂ ಭಾಷೆಗಳಲ್ಲಿ ಪಂಡಿತರು. ಅವರ ಮನೆಯ ಮಾತು ತೆಲುಗು. ಅವರಿಗೆ ಪ್ರಿಯವಾದ ಭಾಷೆ ಕನ್ನಡ. ಅವರಿಗೆ ಹೆಚ್ಚಿಗೆ ಭಕ್ತಿಯುಳ್ಳ ಭಾಷೆ ಸಂಸ್ಕೃತ. ಅವರಿಗೆ ಮಿಗಿಲಾದ ಪಾಂಡಿತ್ಯವಿದ್ದ ಭಾಷೆ ಇಂಗ್ಲಿಷ್. ದೇವುಡು ಸಜೀವ ಜ್ಞಾನಭಂಡಾರವಿದ್ದಂತೆ. ಅವರಿಗೆ ತತ್ವಜ್ಞಾನದಲ್ಲಿ ಹೆಚ್ಚು ಆಸಕ್ತಿ. ಅವರು ನಿಜವಾದ ಅದ್ವೈತಿಗಳು. ಆಚಾರ್ಯ ಶಂಕರರನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ ಮಹಾಬ್ರಾಹ್ಮಣ ದೇವುಡು. ಅಲ್ಲದೆ ಅವರಿಗೆ ಸಂಗೀತ, ನಾಟಕ ಕಲೆಗಳಲ್ಲಿಯೂ ಅಭಿರುಚಿ ಹೆಚ್ಚು. ಚಿತ್ರಶಿಲ್ಪಗಳಲ್ಲಿಯೂ ಆಸಕ್ತಿ ಹೆಚ್ಚು. ಅದೊಂದು ಹಿರಿಯ ಜೀವನ, ಉತ್ತುಂಗ ಜೀವನ, ಉದಾತ್ತ ಜೀವನ, ಆದರ್ಶ ಜೀವನ.

ಶ್ರೀ ದೇವುಡು ಬರೆದಿರುವ ಗ್ರಂಥಗಳು ಶುದ್ಧಿ ಮತ್ತು ಪ್ರಮಾಣಗಳಿಂದ ಹಿರಿದಾದುವು. ಕನ್ನಡ ಸಾಹಿತ್ಯ ಇರುವವರೆಗೆ ಇರತಕ್ಕುವು. ಅವುಗಳ ವಿವರ ಹೀಗಿವೆ. ಮಹಾಬ್ರಾಹ್ಮಣ, ಅಂತರಂಗ, ವಿಚಾರಣೆ, ಮಯೂರ, ಕರ್ನಾಟಕ ಸಂಸ್ಕೃತಿ, ಸಂಗ್ರಹ ರಾಮಾಯಣ, ಸಂಗ್ರಹ ಭಾಗವತ, ಉಪನಿಷತ್ತು, ರಾಮಾಯಣವೂ ಭಗವದ್ಗೀತೆಯೂ, ಹೊಸಗನ್ನಡ ಪಂಚತಂತ್ರ, ಮೀಮಾಂಸದರ್ಪಣ, ಕಾಳಿದಾಸ, ಕಾಳಿದಾಸನ ಕೃತಿಗಳು, ಭಾರತದ ಮಹಾಪುರುಷರು, ರಾಮಾಯಣದ ಮಹಾಪುರುಷರು, ಮೂಲ ಸಂಸ್ಕೃತ ಯೋಗ ವಾಶಿಷ್ಠದ ಅನುವಾದ; ಸಾವಿತ್ರೀ ನಾಟಕ, ಕಳ್ಳರ ಕೂಟ ಕಾದಂಬರಿ ಇತ್ಯಾದಿ.... ಶ್ರೀ ದೇವುಡು ಕೃತಿಗಳು ಓದಿ ಬಿಸಾಡತಕ್ಕವುಗಳಲ್ಲ. ಸತ್ವಪೂರ್ಣವಾದ, ಅನುಭವ ಪೂರ್ಣವಾದ ಓದುಗರ ಸುಸ್ಥಿರಕ್ಕೆ ನೆರವಾಗತಕ್ಕ ಉತ್ತಮ ಗ್ರಂಥಗಳು ಈ ದಿಸೆಯಲ್ಲಿ ದೇವುಡು ಕನ್ನಡಸಾಹಿತ್ಯಕ್ಕೆ ಮಹೋಪಕಾರ ಮಾಡಿದ್ದಾರೆ.

ದೇವುಡು ಸುಂದರ ಪುರುಷರು, ಉನ್ನತ ವ್ಯಕ್ತಿತ್ವವುಳ್ಳವರು, ವಿನಯಶೀಲರೂ, ಸಹೃದಯರು, ಮಹಾ ವಾಗ್ಮಿಗಳು, ಮೃದುವಾದ ಅಂತಃಕರಣವುಳ್ಳವರು. ಕರುಣೆಗೆ ಆಸ್ಪದವಾದ ಸನ್ನಿವೇಶಗಳನ್ನು ಕಂಡು ಅವರ ಕಣ್ಣುಗಳು ಸದಾ ನೀರು ಸೂಸುತ್ತಿದ್ದುವು. ಇಷ್ಟೆಲ್ಲಾ ಒಳ್ಳೆಯ ಗುಣಗಳಿದ್ದರೂ ದೇವುಡು ಜೀವನದಲ್ಲಿ ಸದಾ ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತಿದ್ದರು. ಅದಕ್ಕೆ ಅವರ ಪ್ರಬಲ ದುರದೃಷ್ಟ ಕಾರಣವೆನ್ನಬಹುದು. ಹಿರಿಯಮಗ ರಾಮು ತಂದೆಗೆ ತಕ್ಕ ಮಗ ಅವರ ಕಣ್ಣ ಮುಂದೆಯೇ ಕಣ್ಮರೆಯಾದನು. ಸ್ವಯಂ ದೇವುಡು ಸಾಕಾರ ಮನ್ಮಥನಂತಿದ್ದವರು ಮಧುಮೂತ್ರರೋಗದ ಫಲವಾಗಿ ವೈದ್ಯರ ಸಲಹೆಯಂತೆ ಕಾಲು ಕತ್ತರಿಸಿಕೊಂಡು ಕೆಲಕಾಲ ಬದುಕಬೇಕಾ

ಯಿತು. ಅವರಿಗೆ ಅನುಕೂಲ ಪತ್ನಿ, ಪುತ್ರ, ಪುತ್ರಿಯರ ಭಾಗ್ಯವಿತ್ತುದು ಭಗವಂತನ ಅನುಗ್ರಹ. ಅವರ ಸೌಜನ್ಯದ ಫಲವಾಗಿ ದೇವುಡು ಸಂಸಾರದ ಕಷ್ಟನಷ್ಟಗಳನ್ನು ಮರೆಯುತ್ತಿದ್ದರು. ನನಗೂ ದೇವುಡೂಗೂ ಸುಮಾರು ೨೦ ವರ್ಷಗಳ ಸ್ನೇಹವಿತ್ತು. ಸುದೀರ್ಘವಾದ ಅವಧಿಯಲ್ಲಿ ನನಗೆ ಅವರಲ್ಲಿ ಕಡೆಯವರೆಗೂ ಸ್ನೇಹಗೌರವ ಅಧಿಕವಾಗುತ್ತಲೇ ಇತ್ತು. ಇದಕ್ಕವರಲ್ಲಿದ್ದ ನಿಷ್ಕಾಮ ಪ್ರೇಮ ಕಾರಣವೆನಿಸಿತ್ತು. ದೇವುಡು ನಿಜಕ್ಕು ನನಗೆ ಹಿತೈಷಿಗಳಾಗಿದ್ದರು. ಆಗಾಗ್ಗೆ ನಮ್ಮ ಕಾರ್ಯಾಲಯಕ್ಕೆ ಬರುತ್ತಿದ್ದರು. ನನ್ನ ಆಪ್ತ ಸ್ನೇಹಿತ, ಆದರ್ಶ ಕನ್ನಡಿಗ, ನಿಜವಾದ ತತ್ವಜ್ಞಾನಿ, ಪ್ರತಿಭೆಗಳ ಸಾಕಾರ ಸ್ವರೂಪ ದೇವುಡು.

★

ಬಹುಮುಖ ಪ್ರತಿಭೆಯ ಮಹಾವಿದ್ವಾಂಸ

ಪ್ರೊ॥ ಎಲ್.ಎಸ್. ಶೇಷಗಿರಿ ರಾವ್

ವೇದೋಪನಿಷತ್ತುಗಳಲ್ಲಿ ಶಾಸ್ತ್ರ-ಪುರಾಣಗಳಲ್ಲಿ ಇಡೀ ದೇಶದ ಮಹಾವಿದ್ವಾಂಸರಲ್ಲಿ ಒಬ್ಬರು. ಅದ್ವೈತಿಗಳಾದ ಈ ಪ್ರಕಾಂಡ ಪಂಡಿತರನ್ನು ಉಡುಪಿಯ ಮಧ್ವಮಠದ ಶ್ರೀಗಳು ದ್ವೈತವನ್ನು ಕುರಿತು ಉಪನ್ಯಾಸ ಮಾಡಲು ಆಹ್ವಾನಿಸಿ ಅವರ ಉಪನ್ಯಾಸವನ್ನು ಕೇಳಿ ಮೆಚ್ಚಿಕೊಂಡರು. ಇದೇ ಪ್ರಚಂಡ ವಿದ್ವಾಂಸರು ಭೂವಿಜ್ಞಾನವನ್ನೂ ಗಣಿವಿಜ್ಞಾನವನ್ನೂ ಅಭ್ಯಾಸ ಮಾಡಿದರು. ಕಂಗುದಿ ಕುಪ್ಪಂನಲ್ಲಿ ಕೆಲವು ಬಗೆಯ ಹವಳಗಳು ದೊರೆಯುತ್ತವೆ ಎಂದು ಜನರು ಹೇಳಿದಾಗ ಅಲ್ಲಿಗೆ ಹೋಗಿ ಪರೀಕ್ಷೆ ಮಾಡಿದರು. ಬೆಂಗಳೂರಿನ ಬಳಿ ಮೂವತ್ತು ಎಕರೆ ಭೂಮಿಯನ್ನು ಕೊಂಡುಕೊಂಡರು. ಅಲ್ಲಿ ಕಾಕಡ, ಸಪ್ಪೋಟ ಗಿಡಗಳನ್ನು ನೆಡಿಸಿದರು. ಚಲನಚಿತ್ರದಲ್ಲಿ ಅಭಿನಯಿಸಿದರು. ಮಕ್ಕಳಿಗಾಗಿ ಒಂದು ನಿಯತಕಾಲಿಕವನ್ನೂ ಪ್ರಾರಂಭಿಸಿ, ಜಟಿಲವಾದ ವಿಷಯಗಳನ್ನು ಸರಳವಾದ ಭಾಷೆಯಲ್ಲಿ ಬರೆದರು. ಅವರೇ ಮೂರು ಪೌರಾಣಿಕ ಕಾದಂಬರಿಗಳನ್ನು ಬರೆದರು. ಮಹಾ ವಿದ್ವಾಂಸರೂ ಇವರನ್ನು ಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇವೆ ಎಂದು ಹೇಳುವುದು ಕಷ್ಟ.

ದೇವುಡು ನರಸಿಂಹಶಾಸ್ತ್ರಿಗಳದು ವರ್ಣರಂಜಿತ ವ್ಯಕ್ತಿತ್ವ

ವಿದ್ವತ್ತಿಗೆ ಹೆಸರಾದ ಕುಟುಂಬದಲ್ಲಿ ಹುಟ್ಟಿದರು ದೇವುಡು (೧೮೯೬ರ ಡಿಸೆಂಬರ್ ೨೯ ರಂದು). ಬಾಲ್ಯದಿಂದಲೂ ಚುರುಕು. ಅವರಿಗೆ ಐದು ವರ್ಷವಾಗಿದ್ದಾಗ ಅವರ ತಂದೆ ತೀರಿಕೊಂಡರು. ಸ್ವಪ್ರಯತ್ನದಿಂದ, ಪ್ರತಿಭೆಯಿಂದ ಮನ್ನಣೆ ಗಳಿಸಿದವರು ದೇವುಡು. ಹತ್ತು–ಹನ್ನೊಂದು ವರ್ಷ ವಯಸ್ಸಾಗುವ ಹೊತ್ತಿಗೆ ರಾಮಾಯಣ, ಮಹಾಭಾರತ, ಬ್ರಹ್ಮಾಂಡ ಪುರಾಣಗಳನ್ನು ಓದಿದ್ದರು. ಹದಿನೈದು ವರ್ಷ ವಯಸ್ಸಾಗುವ ಹೊತ್ತಿಗೆ ವ್ಯಾಕರಣ ಮತ್ತು ಛಂದಸ್ಸನ್ನು ಅಭ್ಯಾಸ ಮಾಡಿ ಕವನಗಳನ್ನು ಬರೆದರು. ಹದಿನೆಂಟು ವರ್ಷವಾಗುವ ಹೊತ್ತಿಗೆ `ಸಾಹಸವರ್ಮ' ಎನ್ನುವ ಕಾದಂಬರಿಯನ್ನು ಪ್ರಕಟಿಸಿದ್ದರಂತೆ. ಮೈಸೂರು ಮಹಾರಾಜಾ ಕಾಲೇಜಿನಲ್ಲಿ ೧೯೨೨ರಲ್ಲಿ ಸಂಸ್ಕೃತ ಎಂ.ಎ. ಪದವಿ ಪಡೆದರು. ಎಸ್. ರಾಧಾಕೃಷ್ಣನ್ ಅವರ ಶಿಷ್ಯ. ಸರ್ಕಾರಿ ಕೆಲಸ ಬೇಡ ಎಂದು ತೀರ್ಮಾನಿಸಿದರು. ೧೯೨೪ರಲ್ಲಿ ಬೆಂಗಳೂರಿಗೆ ಬಂದರು. ಶ್ರೀ ಅಶ್ವತ್ಥನಾರಾಯಣ ರಾಯರು ನಡೆಸುತ್ತಿದ್ದ `ಮಕ್ಕಳ ಪುಸ್ತಕ' ಮಾಸಪತ್ರಿಕೆಯ ಸಂಪಾದಕರಾದರು. ಮೂರು ವರ್ಷಕಾಲ ಆರ್ಯ ವಿದ್ಯಾಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಅವರ ಪುಸ್ತಕವೊಂದು ಪಠ್ಯಪುಸ್ತಕವಾದಾಗ ಬಂದ ಹಣವನ್ನೆಲ್ಲ ಧಾರೆ ಎರೆದು ಬೆಂಗಳೂರು ಗಾಂಧೀನಗರ ಪ್ರೌಢಶಾಲೆಯನ್ನು ಸ್ಥಾಪಿಸಿದರು. ಐದು ವರ್ಷಕಾಲ ಅದರ ಪ್ರಾಂಶುಪಾಲರಾಗಿದ್ದರು.

ದೇವುಡು ಅವರ ವ್ಯಕ್ತಿತ್ವದ ಕೆಲವು ಮುಖಗಳನ್ನು ಆಗಲೇ ಸೂಚಿಸಿದೆ. ಅವರದು ಸಾಹಸಮಯವಾದ ಧೀರ ಬದುಕು. ಆಜಾನುಬಾಹು, ಆತ್ಮವಿಶ್ವಾಸವನ್ನು ಹೊರಸೂಸುತ್ತಿದ್ದ ಮುಖ,

ದೊಡ್ಡದನಿ, ಸ್ಫುಟವಾದ ಮಾತು, ಚೈತನ್ಯ ಎದ್ದು ಕಾಣುವ ವ್ಯಕ್ತಿತ್ವ. ಆಗಲೇ ಹೇಳಿದಂತೆ ಅವರು ಮಹಾನ್ ವಿದ್ವಾಂಸರು. ಒಳ್ಳೆಯ ಅಧ್ಯಾಪಕರು, ಶ್ರೇಷ್ಠ ಸಾಹಿತಿಗಳು, ಸಾಹಸವಂತರು, ಪ್ರಯೋಗಪ್ರಿಯರು, ಕನ್ನಡನಾಡಿನ ಮೊಟ್ಟಮೊದಲನೆಯ ಚಲನಚಿತ್ರ ಕಾರ್ಪೊರೇಷನ್ ಕಾರ್ಯನಿರ್ವಾಹಕ ನಿರ್ದೇಶಕರು, ಗುಬ್ಬಿ ವೀರಣ್ಣನವರ ಸಂಸ್ಥೆಯ ನಿರ್ದೇಶಕರಲ್ಲಿ ಒಬ್ಬರು. ಅವರದೇ ಕಾದಂಬರಿ `ಕಳ್ಳರ ಕೂಟ'ದ ನಾಲ್ಕು ರೀಲುಗಳು ಸಿದ್ಧವಾದವು. ಹಣದ ಅಡಚಣೆಯಿಂದ ಚಿತ್ರವು ಮುಗಿಯಲಿಲ್ಲ. ಸಂಸ್ಕೃತ ಎಂ.ಎ. ಪದವಿಯನ್ನು ಪಡೆದ ಹದಿನೇಳು ವರ್ಷಗಳ ನಂತರ, ಹಿಂದಿನ ಗುರು–ಶಿಷ್ಯ ಪದ್ಧತಿಯಲ್ಲಿ ಮೀಮಾಂಸೆಯನ್ನು ಅಭ್ಯಾಸ ಮಾಡಬೇಕು ಎನ್ನಿಸಿತು. ಶಂಕರಮಠದ ಗೀರ್ವಾಣ ವಿದ್ಯಾಪೀಠವನ್ನು ಸೇರಿದರು. ಈ ಅಭ್ಯಾಸದ ಕಾಲದಲ್ಲಿ ಮನೆಯಲ್ಲಿ ಸದಾ ಅಗ್ನಿಯನ್ನಿಟ್ಟುಕೊಂಡಿದ್ದರು. ಮೂರು ವರ್ಷ ತಮ್ಮ ಮನೆಯಿಂದ ಹೊರಗಡೆ ನೀರನ್ನು ಸಹ ಕುಡಿಯುವುದಿಲ್ಲ ಎನ್ನುವ ವ್ರತವನ್ನು ಪಾಲಿಸಿದರು. ಮೀಮಾಂಸೆಯನ್ನು ಕುರಿತು ಅವರು ಬರೆದ ಪುಸ್ತಕವನ್ನು ಮಹಾ ಮಹೋಪಾಧ್ಯಾಯ ವೈದ್ಯನಾಥ ಶಾಸ್ತ್ರಿಗಳು ಮೆಚ್ಚಿಕೊಂಡರು. ಮಹಾರಾಜರು ಈ ಪುಸ್ತಕಕ್ಕಾಗಿ ಅವರಿಗೆ ವಿಶೇಷ ಪಾರಿತೋಷಕವನ್ನು ಕೊಟ್ಟರು. ಮೀಮಾಂಸದ ಅಧ್ಯಯನದಿಂದ ದೇವುಡು ಮತ್ತೆ ಚಲನಚಿತ್ರದ ಪ್ರಪಂಚಕ್ಕೆ ಹಾರಿದರು. `ಚಿರಂಜೀವಿ ಅಥವಾ ಮಹಾತ್ಮ ಮಾರ್ಕಂಡೇಯ'ದ ಚಿತ್ರೀಕರಣಕ್ಕಾಗಿ ಪುಣೆಗೆ ಹೋದರು. ೧೯೩೭ರಲ್ಲಿ ಮಕ್ಕಳಿಗಾಗಿ `ನಮ್ಮ ಪುಸ್ತಕ'ವನ್ನು ಪ್ರಾರಂಭಿಸಿದರು. ನಮ್ಮ ಮಕ್ಕಳಿಗೆ ಭಾರತೀಯ ಸಂಸ್ಕೃತಿಯ ಪರಿಚಯವೂ ಆಗಬೇಕು, ತಾವು ವಾಸಿಸುವ ಜಗತ್ತಿನ ಪರಿಚಯವೂ ಆಗಬೇಕು–ಇದು ಅವರ ಹಂಬಲ. ವೇದದ ಕಥೆಗಳು, ಜಾತಕದ ಕಥೆಗಳು ಇವನ್ನು ಮಕ್ಕಳಿಗೆ ಸುಲಭವಾದ ಭಾಷೆಯಲ್ಲಿ ಹೇಳಿದರು. ಜೊತೆಗೆ ದೇಶಾಂತರದ ಕಥೆಗಳನ್ನು ಹೇಳಿದರು. ಚಿತ್ರಲಿಪಿ ಕಲಿಸಿದರು. `ಸಮುದ್ರದಲ್ಲಿ' ಎಂಬ ಶೀರ್ಷಿಕೆಯಲ್ಲಿ ಸಾಗರದ ಜೀವರಾಶಿ ಮತ್ತು ಸಂಪತ್ತುಗಳನ್ನು ಬಿತ್ತರಿಸಿದರು. `ಆಕಾಶದಲ್ಲಿ' ಶೀರ್ಷಿಕೆಯಲ್ಲಿ ಖಗೋಳ ವಿಜ್ಞಾನದ ಭಂಡಾರದ ಬಾಗಿಲುಗಳನ್ನು ತೆರೆದರು. ಗುಡೂರ ಬಳಿ ಅಭ್ರಕ ದೊರೆಯುತ್ತದೆ, ಅದನ್ನು ತೆಗೆದು ರಫ್ತು ಮಾಡುವ ಉದ್ಯಮವನ್ನು ಬೆಳೆಸಬೇಕು ಎಂದು ಪ್ರಯತ್ನಿಸಿದರು. ೧೯೪೪ರಲ್ಲಿ ಆಗಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದರು, ೧೯೪೬-೪೭ರಲ್ಲಿ ಬೆಂಗಳೂರು ಪುರಸಭೆಯ ಸದಸ್ಯರಾದರು. `ಯೋಗವಾಸಿಷ್ಠ'ವನ್ನು ಕನ್ನಡಕ್ಕೆ ಸಮರ್ಥವಾಗಿ ತರಬಲ್ಲ ಬೆರಳೆಣಿಕೆಯ ವಿದ್ವಾಂಸರಲ್ಲಿ ದೇವುಡು ಒಬ್ಬರೆಂದು ಜಯಚಾಮರಾಜ ಒಡೆಯರು ಆ ಕೆಲಸವನ್ನು ಅವರಿಗೆ ಒಪ್ಪಿಸಿದರು. ಅದನ್ನು ಯಶಸ್ವಿಯಾಗಿ ಮಾಡಿಕೊಟ್ಟರು ದೇವುಡು.

ಇಲ್ಲಿಗೆ ಮುಗಿಯಲಿಲ್ಲ ದೇವುಡು ಅವರ ಆಸಕ್ತಿ–ಪ್ರಯೋಗ ಸಾಧನೆಗಳ ಕಥೆ. ವೀಣೆ ನುಡಿಸುವುದನ್ನು ಕಲಿತರು. ನಾಟಕ–ರಂಗಭೂಮಿ ಎಂದರೆ ಅವರಿಗೆ ಪ್ರಾಣ. ಎಳೆಯ ವಯಸ್ಸಿನಲ್ಲಿ ನಟರಾದರು. ನಾಟಕ ಶಿರೋಮಣಿ ವರದಾಚಾರ್ಯರ ಜೊತೆಯಲ್ಲಿ ಅಭಿನಯಿಸಿದರು. ಕನ್ನಡದಲ್ಲಿ ಅಪೂರ್ವ ರೀತಿಯ ಮಾಸಪತ್ರಿಕೆಯಾದ `ರಂಗಭೂಮಿ'ಗೆ ಸಂಪಾದಕರಾಗಿದ್ದರು. ೧೯೨೯ರಿಂದ ಕೆಲವು ವರ್ಷಗಳ ಅವಧಿಯಲ್ಲಿ ಈ ಪತ್ರಿಕೆಯು ಸಂಸ, ಕುವೆಂಪು, ಅ.ನ.ಕೃ., ಶ್ರೀರಂಗ-ಮೊದಲಾದವರ ಬರಹಗಳನ್ನು ಪ್ರಕಟಿಸಿತು. (ಈ ಪತ್ರಿಕೆಯ ಲಭ್ಯವಿರುವ ಸಂಚಿಕೆಗಳ ಆಯ್ದ ಲೇಖನಗಳನ್ನು ಪ್ರಕಟಿಸಿದರೆ ಬಹು ಮೌಲಿಕವಾದ ಪ್ರಕಟಣೆ ಆದೀತು.) ಮನೆಯಲ್ಲೇ `ಕನ್ನಡ ಸಾಹಿತ್ಯ ಸಮಾಜ' ಎನ್ನುವ

ಸಂಸ್ಥೆಯನ್ನು ನಡೆಸಿದರು. ನಟ ತಂಡವೊಂದನ್ನು ಕಟ್ಟಿದರು. ಮಾಸ್ತಿಯವರ `ತಿರುಪ್ಪಾಣಿ', ಸಿ.ಕೆ. ವೆಂಕಟರಾಮಯ್ಯನವರ `ನಚಿಕೇತ', `ಮಂಡೋದರಿ' ನಾಟಕಗಳನ್ನು ರಂಗಭೂಮಿಗೆ ತಂದರು. `ಮಂಡೋದರಿ'ಯಲ್ಲಿ ರಾವಣನ ಪಾತ್ರವನ್ನು ನಿರ್ವಹಿಸಿ ಮೆಚ್ಚಿಗೆ ಪಡೆದರು. `ಮಾರ್ಕಂಡೇಯ' ಚಿತ್ರದಲ್ಲಿ ಮೃಕಂಡು ಮಹರ್ಷಿಯಾದರು.

೧೯೩೩ರಲ್ಲಿ ದೇವುಡು ಅವರು ಮಾಡಿದ ಮೂರು ಉಪನ್ಯಾಸಗಳು `ಕರ್ನಾಟಕ ಸಂಸ್ಕೃತಿ' ಎನ್ನುವ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾದವು. ಕನ್ನಡ ಜನತೆಯ ಸಂಸ್ಕೃತಿಯನ್ನು ಕುರಿತು ಪ್ರಕಟವಾದ ಪ್ರಾರಂಭದ ಕೃತಿಗಳಲ್ಲಿ ಇದು ಒಂದು. ಅವರು ಭಗವದ್ಗೀತೆಯನ್ನು ಅನುವಾದಿಸಿದರು. ಉಪನಿಷತ್ತುಗಳನ್ನು ಸುಲಭ ಭಾಷೆಯಲ್ಲಿ ವಿವರಿಸಿದರು. `ಸಂಗ್ರಹ ರಾಮಾಯಣ'ವನ್ನು ಬರೆದರು.

ವಯಸ್ಕರ ಶಿಕ್ಷಣವನ್ನು ಭಾರತದಲ್ಲಿ ಮೊದಲು ಯೋಚಿಸಿದ್ದು ಹಿಂದಿನ ಮೈಸೂರು ಸಂಸ್ಥಾನದ ಸರ್ಕಾರ. ಸರ್ಕಾರವು ಒಂದು ಯೋಜನೆಯನ್ನು ಪ್ರಾರಂಭಿಸುವ ಮೊದಲೇ ದೇವುಡು ೧೯೪೦ ರಲ್ಲಿ ವಯಸ್ಕರಿಗೆ ಅಕ್ಷರಗಳನ್ನು ಕಲಿಸುವ ಸರಳ ವಿಧಾನವನ್ನು ರೂಪಿಸಿ ಅಕ್ಷರ ಪ್ರಚಾರ ಮಾಲೆಯನ್ನು ಪ್ರಾರಂಭಿಸಿದರು. ಹದಿನೈದು ದಿನಗಳಲ್ಲಿ ವಯಸ್ಕನು ಕನ್ನಡ ಪತ್ರಿಕೆಗಳನ್ನು ಓದಿಕೊಳ್ಳಲು ಸಮರ್ಥನಾಗಬೇಕು ಎಂಬುದು ಅವರ ಗುರಿ. ಅವರ ಸಾಧನೆಯನ್ನು ಮೆಚ್ಚಿ ಸರ್ಕಾರವು ಅವರನ್ನು ವಯಸ್ಕರ ಶಿಕ್ಷಣ ಸಮಿತಿಯ ಆಜೀವ ಸದಸ್ಯರನ್ನಾಗಿ ನೇಮಿಸಿತು. `ಬೇಸಿಕ್ ಇಂಗ್ಲಿಷ್' ಮಾದರಿಯನ್ನು ಅನುಸರಿಸಿ `ಮೂಲ ಸಂಸ್ಕೃತ' ಯೋಜನೆ ಮಾಡಿ, ಸಂಸ್ಕೃತವನ್ನು ಕಲಿಯುವವರಿಗೆ ನೆರವಾದರು.

ದೇವುಡು ಕಷ್ಟ–ಸುಖಗಳೆರಡನ್ನೂ ಕಂಡರು. ಅವರ ಆತ್ಮಪ್ರತ್ಯಯ, ಸ್ವತಂತ್ರ ಮನೋವೃತ್ತಿ–ಇವು ನಡೆ–ನುಡಿಗಳಲ್ಲಿ ಎದ್ದು ಕಾಣುತ್ತಿದ್ದವು. ಜನರನ್ನು ಸುಲಭವಾಗಿ ನಂಬುವ ಪ್ರವೃತ್ತಿಯಿಂದ ಅವರ ಹಲವು ಉದ್ಯಮಗಳು ನಷ್ಟವನ್ನೆ ತಂದವು. ಬೆಳೆದ ಮಗ ಕಾಲೇಜಿನಲ್ಲಿ ಅಧ್ಯಾಪಕ ರಾಮು ತೀರಿಕೊಂಡರು. ದೇವುಡು ಹಾಸಿಗೆ ಹಿಡಿದು ಮಲಗಿ, ಒಂದು ಕಾಲನ್ನು ಕತ್ತರಿಸಬೇಕಾಯಿತು. `ಮಹಾಕ್ಷತ್ರಿಯ' ಕಾದಂಬರಿ ಅವರು ತೀರಿಕೊಂಡ ನಂತರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿತು. ಆದರೆ ಒಳ್ಳೆಯ ಸ್ನೇಹಿತರನ್ನು ಪಡೆದ ಭಾಗ್ಯ ಅವರದು. ಮಹಾರಾಜರು ಗೌರವಿಸಿದರು. ವಿದ್ವತ್ಸಂಸ್ಥೆಗಳೂ, ಸರ್ಕಾರವೂ ಮನ್ನಣೆ ನೀಡಿದವು. ಮಕ್ಕಳು ಒಳ್ಳೆಯ ಸ್ಥಾನಗಳಿಗೆ ಬಂದು ನೆಮ್ಮದಿಯಿಂದ ಇದ್ದುದನ್ನು ಕಂಡರು. ತಮ್ಮನ್ನು ಕುರಿತ ಲೇಖನದಲ್ಲಿ, ತಮ್ಮ ಯೋಜನೆಗಳನ್ನು ಕುರಿತು ಬರೆಯುತ್ತ, "ಅವೆಲ್ಲ ಯಶಸ್ವಿಯಾಗಿ ಇದ್ದುವೆಂದೇ ಅಂದುಕೊಳ್ಳೋಣ. `ಬ್ರಹ್ಮ ಸೂತ್ರ'ಗಳಲ್ಲಿ ಒಂದನ್ನು ಹಿಡಿದು ಒಳನುಗ್ಗಿ ಅದರ ವಿಚಾರ ಚಿಂತಿಸುತ್ತ ಮೈಮರೆಯುವುದಕ್ಕಿಂತ ಇದರಲ್ಲೇನಿಲ್ಲ ಸೌಖ್ಯವಿದೆಯೆ? ಅಥವಾ ಅದ್ವೈತವು ಹೇಳುವ ಅಮನಸ್ಕಯೋಗಕ್ಕಿಂತ ಇನ್ನೇನಿದೆ?" ಎಂದಿದ್ದಾರೆ.

ದೇವುಡು ಅವರ ಸ್ವಭಾವವನ್ನು ತೋರಿಸುವ ಒಂದೆರಡು ಪ್ರಸಂಗಗಳನ್ನು ಇಲ್ಲಿ ಸ್ಮರಿಸಬಹುದು. ಅವರು ಹಿಂದೂ ಧರ್ಮದಲ್ಲಿ ಅಗಾಧ ಶ್ರದ್ಧೆ ಇದ್ದವರು. ಶೃಂಗೇರಿಯ ಶ್ರೀ ಚಂದ್ರಶೇಖರ

ಭಾರತಿಗಳವರಿಂದ ಉಪದೇಶ ಪಡೆದವರು. ಅವರ ಮನೆಗೆ ಒಮ್ಮೆ ರೆವರೆಂಡ್ ಚನ್ನಪ್ಪ ಉತ್ತಂಗಿಯವರು ಬಂದರು. ಉತ್ತಂಗಿಯವರು ಬಹು ಹಿರಿಯ ಬಾಳನ್ನು ಬಾಳುತ್ತಿದ್ದವರು. ದೇವುಡು ಸ್ನಾನ-ಸಂಧ್ಯಾವಂದನೆಗಳನ್ನು ಮುಗಿಸಿ ಅವರಿಗಾಗಿ ಕಾಯುತ್ತಿದ್ದರು. ಅವರು ಬರುತ್ತಲೇ ಮನೆಯ ಬಾಗಿಲಿನಲ್ಲಿ ನಿಂತು ಸ್ವಾಗತಿಸಿ ಅವರನ್ನು ಮಣೆಯ ಮೇಲೆ ನಿಲ್ಲಿಸಿ ಅವರ ಕಾಲುಗಳನ್ನು ತೊಳೆಯಲು ಹೋದರು. ಉತ್ತಂಗಿಯವರು ಒಪ್ಪಲಿಲ್ಲ. ದೇವುಡು, "ನೀವು ಬಂದದ್ದು ಯೇಸುಕ್ರಿಸ್ತನೇ ನನ್ನ ಮನೆಗೆ ಬಂದಂತಾಯಿತು. ನನಗೆ ಸಮಾಧಾನವಾಗುವಂತೆ ಬರಮಾಡಿಕೊಳ್ಳಲು ಬಿಡಿ" ಎಂದು ಹಠ ಮಾಡಿ ಅವರ ಕಾಲು ತೊಳೆದು ಒರೆಸಿದರು. ಒಳಕ್ಕೆ ಕರೆದುಕೊಂಡು ಹೋಗಿ ಹಿಂದೂ ಸಂಪ್ರದಾಯದಂತೆ ಅವರನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಿ ತಾವು ಉತ್ತರಾಭಿಮುಖವಾಗಿ ಕುಳಿತರು. ಅನಂತರ ಮಾತು-ಕತೆ, ಊಟ.

ಭಾರತದ ಚಿಂತನೆಯ ಅಧ್ಯಯನಕ್ಕಾಗಿ ಅಮೇರಿಕದಿಂದ ವಿದ್ಯಾರ್ಥಿಗಳು ಭಾರತ ಪ್ರವಾಸ ಮಾಡುತ್ತ ಬೆಂಗಳೂರಿಗೆ ಬಂದರು. ಅವರಿಗೆ ಭಾರತದ ತತ್ವ ಚಿಂತನೆಯನ್ನು ಇಂಗ್ಲಿಷಿನಲ್ಲಿ ವಿವರಿಸುವಂತೆ ದೇವುಡು ಅವರನ್ನು ಕಂಡು ಈ ಪ್ರಾರ್ಥನೆಯನ್ನು ತಿಳಿಸಿದರು. ಹಿರಿಯ ಅಧಿಕಾರಿಗಳು ದೇವುಡು ಅವರನ್ನು ಕಂಡು ಈ ಪ್ರಾರ್ಥನೆಯನ್ನು ತಿಳಿಸಿದರು. ದೇವುಡು ಒಪ್ಪಿದರು. "ವಿದ್ಯಾರ್ಥಿಗಳು ಸರ್ಕಾರದ ಅತಿಥಿಗಳಾಗಿ ಇಂತಹ ಕಡೆ ಉಳಿದಿದ್ದಾರೆ. ತಮ್ಮನ್ನು ಕರೆದುಕೊಂಡು ಹೋಗಲು ಕಾರು ಬರುತ್ತದೆ" ಎಂದು ಅಧಿಕಾರಿಗಳು ಹೇಳಿದರು. ದೇವುಡು, "ನಾನು ಬರುವುದಿಲ್ಲ" ಎಂದರು. ಬೆರಗಾಗಿ ಅಧಿಕಾರಿಗಳು ಕಾರಣವನ್ನು ಕೇಳಿದರು. ದೇವುಡು. "ನಮ್ಮ ಪರಂಪರೆಯಲ್ಲಿ ಗುರುವಿನಿಂದ ವಿದ್ಯೆಯನ್ನು ಬಯಸುವ ವಿದ್ಯಾರ್ಥಿ ಗುರುವಿನ ಬಳಿಗೆ ಹೋಗಬೇಕು. ಗುರು ಶಿಷ್ಯನ ಬಳಿಗೆ ಹೋಗುವುದಿಲ್ಲ" ಎಂದರು. ಅಧಿಕಾರಿಗಳ ವಾದ ಪ್ರಯೋಜನಕ್ಕೆ ಬರಲಿಲ್ಲ. ಇದನ್ನು ಅಮೇರಿಕದ ವಿದ್ಯಾರ್ಥಿಗಳಿಗೆ ತಿಳಿಸಿದಾಗ ಅವರು ಒಪ್ಪಿ, ದೇವುಡು ಅವರ ಮನೆಗೇ ಹೋದರು. ಈ ಪ್ರಸಂಗವನ್ನು ಕುರಿತು ಅನಂತರ ಮಾತನಾಡುತ್ತ ದೇವುಡು ಹೇಳಿದರಂತೆ: `ವಿದ್ಯೆಯನ್ನು ಹುಡುಕಿಕೊಂಡು ಹೋಗುವವನೇ ಅಲ್ಲವೆ ವಿದ್ಯಾರ್ಥಿ?'

ಅಸಾಧಾರಣವಾದ ವ್ಯಕ್ತಿ ದೇವುಡು

೧೮೯೬ರಲ್ಲಿ ಹುಟ್ಟಿದ ದೇವುಡು ೧೯೬೨ರಲ್ಲಿ ನಿಧನರಾದರು. ನವೋದಯದ ಕಾಲದ ಅನೇಕ ಮಂದಿ ಪ್ರತಿಭಾವಂತರೊಂದಿಗೆ ಹೋಲಿಸಿದರೆ ಅವರು ಬರೆದದ್ದು ಕಡಿಮೆ. ಹಲವು ಕೃತಿಗಳು ಸಾಮಾನ್ಯ ಓದುಗರನ್ನು ತಲುಪುವಂತಹುದಲ್ಲ; `ಯೋಗವಾಸಿಷ್ಠ'ದ ೨೪ ಸಂಪುಟಗಳ ಅನುವಾದ, ಮೀಮಾಂಸಾದರ್ಪಣ-ಇವು ಅಸಾಧಾರಣ ಸಾಧನೆಗಳೆಂದು ಆ ಕ್ಷೇತ್ರದ ವಿದ್ವಾಂಸರು ಹೇಳುತ್ತಾರೆ. `ಸಾಹಸವರ್ಮ', `ಕಳ್ಳರ ಕೂಟ'ಗಳಿಂದ ಪ್ರಾರಂಭಿಸಿ ೧೧ ಕಾದಂಬರಿಗಳು. ೬ ಕಥಾಸಂಗ್ರಹಗಳು, `ಕ್ರಿಸ್ತನ ವಿಚಾರಣೆ' ಮೊದಲಾದ ನಾಟಕಗಳು, ಕಾಳಿದಾಸ, ರಾಮಾಯಣ ಮತ್ತು ಮಹಾಭಾರತ, ಉಪನಿಷತ್ತು ಈ ವಸ್ತುಗಳನ್ನು ಕುರಿತ ಪುಸ್ತಕಗಳೂ ಸಾಮಾನ್ಯ ಓದುಗರಿಗೆ ನಿಲುಕುವಂತಹವು. `ಮಯೂರ' ಚಾರಿತ್ರಿಕ ಕಾದಂಬರಿ; ಕರ್ನಾಟಕದಲ್ಲಿ ಆಳಿದ ಮೊದಲನೆಯ ರಾಜವಂಶದ ಮೂಲಪುರುಷ ಮಯೂರ ಶರ್ಮ ಇದರ ನಾಯಕ. ಈ ಕಾದಂಬರಿ ಚರಿತ್ರೆಯ ಸಂಗತಿಗಳಿಗೆ

ಸಂಪೂರ್ಣವಾಗಿ ನಿಷ್ಕವಾಗಿಲ್ಲ, ಕಾದಂಬರಿಯಲ್ಲಿ ಇದು ಸಾಧ್ಯವೂ ಇಲ್ಲ. ಆದರೆ ಕತೆಯ ನಿರೂಪಣೆ ವಿಶಿಷ್ಟವಾದದ್ದು. `ಅಂತರಂಗ' ಕಾಮದ ಪ್ರಶ್ನೆಯನ್ನು ಆರಿಸಿಕೊಂಡಿದೆ. ಕನ್ನಡದಲ್ಲಿ ಮೊದಲನೆಯ ಮನೋವಿಶ್ಲೇಷಣಾತ್ಮಕ ಕಾದಂಬರಿ. ಮುಖ್ಯ ಪಾತ್ರದ ಮನಸ್ಸನ್ನು ಪದರ ಪದರವಾಗಿ ಬಿಡಿಸಿ ನಮ್ಮ ಮುಂದಿಡುವ ಕೃತಿ ಇದು. ಸಂಸ್ಕೃತಿ ಸಾಹಿತ್ಯ ಪ್ರಾಚೀನ ಭಾರತ ಚಿಂತನೆ - ಇವುಗಳಿಂದ ಸ್ವಭಾವವನ್ನು ಬೆಳೆಸಿಕೊಂಡಿರುವ ನಾಯಕ ಭಟ್ಟನ ಮನಸ್ಸು ಪರಸ್ತ್ರೀಯಲ್ಲಿ ಮೋಹಗೊಂಡಾಗ ಅವನ ಮನಸ್ಸಿನ ಹೊಯ್ದಾಟಗಳನ್ನು, ನೀತಿ, ಅನೀತಿಗಳ ವಿಷಯದಲ್ಲಿ ಸಾಂಪ್ರದಾಯಿಕ ಮೌಲ್ಯಗಳನ್ನು ಅನ್ವಯಿಸದೆ ಅನುಭವವನ್ನು ವಿಶ್ಲೇಷಿಸುವ ಕಾದಂಬರಿ ಇದು.

ದೇವುಡು ಅವರ ವಿಶಿಷ್ಟ ಸಾಧನೆ ಅವರ ಮೂರು ಪೌರಾಣಿಕ ಕಾದಂಬರಿಗಳು- `ಮಹಾಕ್ಷತ್ರಿಯ' `ಮಹಾಬ್ರಾಹ್ಮಣ' ಮತ್ತು `ಮಹಾದರ್ಶನ' (ಶಂಕರಾಚಾರ್ಯರನ್ನು ನಾಯಕರನ್ನಾಗಿ ಮಾಡಿಕೊಂಡು `ಮಹಾಸನ್ಯಾಸಿ' ಎನ್ನುವ ಕಾದಂಬರಿಯನ್ನು ಬರೆಯಲು ದೇವುಡು ಉದ್ದೇಶಿಸಿದ್ದರು.)

`ಮಹಾಬ್ರಾಹ್ಮಣ'ದ ಕಥೆ ವಸಿಷ್ಠ-ವಿಶ್ವಾಮಿತ್ರರ ಘರ್ಷಣೆಯ ಕಥೆ, ಕ್ಷತ್ರಿಯನಾದ ವಿಶ್ವಾಮಿತ್ರನು ಬ್ರಹ್ಮರ್ಷಿಯಾದ ಕಥೆ. `ಮಹಾಕ್ಷತ್ರಿಯ'ದ ನಾಯಕ ನಹುಷ; ಮನುಷ್ಯನಾಗಿ ಹುಟ್ಟಿ ಮಹಾತ್ಮನೆನಿಸಿಕೊಂಡು, ದೇವತೆಗಳ ಆಹ್ವಾನದಂತೆ ಇಂದ್ರನಾಗಿ, ಸಪ್ತಋಷಿಗಳು ಹೊತ್ತ ಪಲ್ಲಕ್ಕಿಯಿಂದ ಉರುಳಿದವನ ಕಥೆ, `ಮಹಾದರ್ಶನ'ದ ನಾಯಕ ಯಾಜ್ಞವಲ್ಕ್ಯ, ಯಾಜ್ಞವಲ್ಕ್ಯಸ್ಮೃತಿಯನ್ನು ರಚಿಸಿದ ದ್ರಷ್ಟಾರ. ಮೂರು ಕಾದಂಬರಿಗಳಲ್ಲಿಯೂ ದೇವುಡು ಜನರಿಗೆ ಪರಿಚಿತವಾದ ಪೌರಾಣಿಕ ಕಥೆಗಳನ್ನು ಮಾರ್ಪಡಿಸಿಕೊಂಡಿದ್ದಾರೆ. ಉದಾಹರಣೆಗೆ: ಇಲ್ಲಿ ನಹುಷ ಶಚಿದೇವಿಯನ್ನು ಬಯಸಿ ಸಪ್ತರ್ಷಿಗಳಿಗೆ ಅಪಮಾನ ಮಾಡಿ ಪತನ ಹೊಂದಿದ ಕಾಮುಕನಲ್ಲ. ತಾನೇ ಇಂದ್ರಪದವಿಯನ್ನು ತ್ಯಜಿಸಲು ನಿರ್ಧರಿಸಿ ಹಿಂದಿನ ಇಂದ್ರನನ್ನು ಬರಮಾಡಿಕೊಂಡ ಮಹಾನುಭಾವ. ಜನಕನ ಸಭೆಯಲ್ಲಿ ಯಾಜ್ಞವಲ್ಕ್ಯನು ಗಾರ್ಗಿಗೆ, "ನೀನು ಮುಂದೆ ಪ್ರಶ್ನೆಯನ್ನು ಕೇಳಿದರೆ ತಲೆ ಹೋಳಾಗುತ್ತದೆ" ಎಂದು ಬೆದರಿಸುವುದಿಲ್ಲ. ಇಲ್ಲಿ ವಿಶ್ವಾಮಿತ್ರ–ಮೇನಕೆಯರ ಸಂಬಂಧವು ಎರಡು ಸುಸಂಸ್ಕೃತ ಜೀವಿಗಳ ಆಕರ್ಷಣೆ.

ಶಿವರಾಮ ಕಾರಂತ, ಅ.ನ.ಕೃ. ಪ್ರಾರಂಭಿಸಿದ ಕನ್ನಡ ಕಾದಂಬರಿಯ ವಾಸ್ತವ ಪರಂಪರೆಯನ್ನು ಬಿಟ್ಟು ಅರಳಿದ ಈ ಕಾದಂಬರಿಗಳು ಅತ್ಯಂತ ಕುತೂಹಲಕಾರಿಯಾಗಿವೆ. ಈ ಕಾದಂಬರಿಗಳು ದೇವತೆಗಳ, ಬ್ರಹ್ಮ–ವಿಷ್ಣು–ಸರಸ್ವತಿಯರ ಲೋಕ. ಇಲ್ಲಿರುವ ಮನುಷ್ಯರೂ ದೇವತೆಗಳ ಸಮಾನರು ಅಥವಾ ಅವರನ್ನು ಮೀರಿಸಿದವರು, ತಮಗೆ ಬೇಕೆನ್ನಿಸಿದಾಗ ಅವರನ್ನು ಬರಮಾಡಿಕೊಳ್ಳಬಲ್ಲವರು `ಮಹಾಬ್ರಾಹ್ಮಣ'ಕ್ಕೆ ದೇವುಡು ಬರೆದ ಮುನ್ನುಡಿಯು ಮೂರು ಕಾದಂಬರಿಗಳಿಗೂ ಹೆಬ್ಬಾಗಿಲಾಗುತ್ತದೆ. "ಈ ವಿದ್ಯಾಪ್ರತೀಕಗಳಲ್ಲಿ ಕೆಲವು ಸ್ವಾನುಭವ, ಕೆಲವು ಪರಾನುಭವ, ಕೆಲವು ಬರೆಯುತ್ತಿದ್ದಾಗ ತಾವಾಗಿ ಬಂದವು." ನಮ್ಮನ್ನು ಬೆರಗುಗೊಳಿಸುವ ಒಂದು ಮಾತನ್ನು ಹೇಳುತ್ತಾರೆ: "ರುದ್ರನು ಪ್ರತ್ಯಕ್ಷನಾಗುವುದು, ದೇವತೆಗಳು ಬಂದು ಮಾತನಾಡುವುದು-ಇವೆಲ್ಲ ಸ್ವಾನುಭವ." ಮುನ್ನುಡಿಯ ಇನ್ನೊಂದು ಮಾತು: "ಈ ಕಥೆಯಲ್ಲಿ ಚಿತ್ರಿತವಾಗಿರುವುದು ಭರತ ಖಂಡದ ಆತ್ಮ. ಪರಕೀಯರ ದಾಳಿಗೆ ಸಾವಿರಾರು ವರ್ಷದಿಂದ ಸತತವಾಗಿ ಸಿಕ್ಕಿದ್ದರೂ ಇನ್ನೂ ಪಾತಾಳಕ್ಕಿಳಿಯದೆ ನಿಂತಿರಲು ಈ ಜನತೆಗೆ ಸಾಮರ್ಥ್ಯವಿತ್ತಿರುವ ಅಂತಶ್ಶಕ್ತಿ."

ಮೂರು ಕಾದಂಬರಿಗಳಿಗೂ ಸಮಾನವಾದ ಅಂಶಗಳುಂಟು. ಬಹು ದೂರದ ಕಾಲದಲ್ಲಿ, ವೇದೋಪನಿಷತ್ತುಗಳ ಯುಗದಲ್ಲಿ ಕ್ರಿಯೆ ನಡೆಯುತ್ತದೆ. ಆಗಲೇ ಹೇಳಿದಂತೆ, ಇಲ್ಲಿನ ಪಾತ್ರಗಳೆಲ್ಲ ದೇವತೆಗಳು ಅಥವಾ ದೇವತಾ ಸದೃಶರೋ ದೇವತೆಗಳನ್ನು ಮೀರಿದವರೋ ಆದ ಮನುಷ್ಯರು. ಉಳಿದೆರಡು ಕಾದಂಬರಿಗಳಿಗಿಂತ `ಮಹಾದರ್ಶನ'ದಲ್ಲಿ ದೇವತೆಗಳು ಪ್ರವೇಶಿಸುವುದು ಕಡಮೆ. ಮೂರರಲ್ಲಿಯೂ ಬಹು `ಡ್ರ್ಯಾಮಟಿಕ್' ಆದ, ಬಹುಕಾಲ ಮನಸ್ಸಿನಲ್ಲಿ ನಿಲ್ಲುವ ದೃಶ್ಯಗಳಿವೆ. (ಇಂತಹ ದೃಶ್ಯಗಳು `ಮಹಾ ದರ್ಶನ'ದಲ್ಲಿ ಕಡಿಮೆ.) ಪಾತ್ರಗಳು ಪರ್ವತ ಸದೃಶವಾದವು. ಆದುದರಿಂದ ಇಂತಹ ದೃಶ್ಯಗಳಲ್ಲಿ ಪರ್ವತಗಳು ಒಂದೆಡೆ ಸೇರಿದಂತೆ, ಪರ್ವತವು ಪರ್ವತಕ್ಕೆ ಡಿಕ್ಕಿ ಹೊಡೆದಂತೆ ಭಾಸವಾಗುತ್ತದೆ. ಆದರೆ ಇವುಗಳಲ್ಲಿ ವ್ಯತ್ಯಾಸಗಳೂ ಎದ್ದು ಕಾಣುತ್ತವೆ. ಎರಡು ಪಕ್ಷಗಳ ಘರ್ಷಣೆ ಸ್ಪಷ್ಟವಾಗಿ ಕಾಣುವುದು ವಿಶ್ವಾಮಿತ್ರನು ನಾಯಕನಾದ `ಮಹಾ ಬ್ರಾಹ್ಮಣ'ದಲ್ಲಿ. `ಮಹಾಕ್ಷತ್ರಿಯ'ನಲ್ಲಿ ಘರ್ಷಣೆ ಇದೆ, ಆದರೆ ಇದರ ಸ್ವರೂಪ ವಿಚಿತ್ರವಾದದ್ದು. ಒಂದು ಕಡೆ (ತನಗೆ ನಿಷ್ಠರಾದ ದೇವತೆಗಳೊಡನೆ) ದೇವೇಂದ್ರ, ಮತ್ತೊಂದು ಕಡೆ ಮೊದಲು ವಿಶ್ವರೂಪಾಚಾರ್ಯ, ಅನಂತರ ವೃತ್ರಾಸುರ, ಅನಂತರ ನಹುಷ. ಇಂದ್ರ-ನಹುಷರ ಸಂಬಂಧ ವಿಚಿತ್ರವಾಗಿದೆ. ಹತ್ಯೆಯ ಪಾಪದಿಂದ ಇಂದ್ರನು ಸ್ವರ್ಗವನ್ನು ಬಿಟ್ಟು ಓಡಿದನೆಂದು ದೇವತೆಗಳೇ ನಹುಷನನ್ನು ಬೇಡಿ ಕರೆತರುತ್ತಾರೆ. ಅವನು ಎಂದೂ ಇಂದ್ರನಿಗೆ ಅಥವಾ ದೇವತೆಗಳಿಗೆ ವಿರೋಧಿಯಲ್ಲ. ಆದರೆ ಅವರು ಅವನನ್ನು ದೂರಮಾಡಿ ಮತ್ತೆ ಇಂದ್ರನನ್ನು ಕರೆತರುವ ಸನ್ನಾಹದಲ್ಲಿದ್ದಾರೆ. `ಮಹಾದರ್ಶನ'ದಲ್ಲಿ ಘರ್ಷಣೆ ಎನ್ನುವುದೇ ಇಲ್ಲ. ಒಂದು ದೃಷ್ಟಿಯಲ್ಲಿ ಇದನ್ನು ಕಾದಂಬರಿ ಎಂದು ಕರೆಯುವುದೇ ಸಾಧ್ಯವಿಲ್ಲ. ಯಾಜ್ಞವಲ್ಕ್ಯನ ಹುಟ್ಟಿಗೆ ಮೊದಲು ಪ್ರಾರಂಭವಾಗುವ ಕ್ರಿಯೆ ಅವನು ಗೌರೀಶಂಕರದ ಎತ್ತರಕ್ಕೆ ಬೆಳೆದು ಕಡೆಗೆ ವಾನಪ್ರಸ್ಥಾಶ್ರಮಕ್ಕೆ ಹೋಗುವುದರೊಂದಿಗೆ ಮುಕ್ತಾಯವಾಗುತ್ತದೆ. ಇಲ್ಲಿ ಕ್ರಿಯೆಯ ಬೆಳವಣಿಗೆಯನ್ನು ಒಂದು ದಿವ್ಯಪುಷ್ಪದ ವಿಕಸನಕ್ಕೆ ಹೋಲಿಸಬಹುದು. ಕಾಲಕಳೆದಂತೆ, ಪುಷ್ಪವು ಹುಟ್ಟುವಾಗಲೇ ತಂದ ಚೆಲುವು, ಬಣ್ಣ, ಪರಮಳಗಳು ಪ್ರಕಟವಾಗುತ್ತಾ ಹೋಗುತ್ತವೆ. ಯಾಜ್ಞವಲ್ಕ್ಯನು ಪರಿಪೂರ್ಣನಾಗಿಯೆ ಹುಟ್ಟುತ್ತಾನೆ. ಆ ಪರಿಪೂರ್ಣತೆ ಪ್ರಕಾಶವಾಗುತ್ತ ಹೋಗುತ್ತದೆ.

ಒಂದು ವಿಶಿಷ್ಟವಾದ ಅಂಶವೆಂದರೆ, ಮೂರು ಕಾದಂಬರಿಗಳಲ್ಲಿಯೂ ಸಾಧಿಸುವ ಒಂದು ಸಮತೋಲನ-ಹೊರಜಗತ್ತು ಮತ್ತು ಒಳಜಗತ್ತುಗಳ ಸಮತೋಲನ. (ಈ ಸಾಧನೆಯಲ್ಲಿ ಈ ಕೃತಿಗಳು ವ್ಯಾಸ ಭಾರತವನ್ನು ನೆನಪಿಗೆ ತರುತ್ತವೆ) ಒಂದಾದ ಮೇಲೊಂದು, ಅದರ ಹಿಂದೆ ಮತ್ತೊಂದು ಕುತೂಹಲಕರವಾದ ಘಟನೆಗಳು ಸಾಗಿಬರುತ್ತವೆ. ಹೊರ ಜಗತ್ತಿನ ಆಗುಹೋಗುಗಳನ್ನು, ಹುಟ್ಟು–ಸಾವುಗಳನ್ನು ಕಾಮ–ಕ್ರೋಧಗಳನ್ನು, ಪ್ರೀತಿ–ಸ್ನೇಹಗಳನ್ನು, ಉತ್ಕರ್ಷ–ಪತನಗಳನ್ನು ನಾವು ಮರೆಯುವಂತೆಯೇ ಇಲ್ಲ. ಆದರೆ ಪಾತ್ರಗಳ ಒಳಜಗತ್ತು ಅಷ್ಟೇ ಸ್ಫುಟವಾಗುತ್ತದೆ. ಅದರ ದೃಷ್ಟಿಗಳು, ಬಯಕೆಗಳು, ತಲ್ಲಣಗಳು-ಎಲ್ಲ ನಮ್ಮ ಅನುಭವಕ್ಕೆ ಬರುತ್ತವೆ. ಈ ಕಾದಂಬರಿಗಳ ವೈಚಾರಿಕತೆ ಎರಡು ಮುಖನಾದುದು. ಒಂದು ಶಿಷ್ಯರು (ಅಥವಾ ತಮ್ಮ ಮುಂದಿರುವವರಷ್ಟು ಜ್ಞಾನಿಗಳಲ್ಲದವರು) ಜ್ಞಾನಿಗಳನ್ನು ಪ್ರಶ್ನಿಸುವುದು ಅಥವಾ ಜ್ಞಾನಿಗಳ ಜಿಜ್ಞಾಸೆಯಿಂದ. ಇವುಗಳಿಗೂ ಕ್ರಿಯೆಗೂ

ತುಂಬಾ ನಿಕಟವಾದ ಸಂಬಂಧವಿಲ್ಲದಿರಬಹುದು; ಕ್ರಿಯೆಯು ಈ ಜಿಜ್ಞಾಸೆಗೆ ಒಂದು ಸಂದರ್ಭವನ್ನಷ್ಟು ಒದಗಿಸಬಹುದು. (ಇಂತಹ ಪ್ರಸಂಗದ ನಿರೂಪಣೆಯನ್ನೂ ಮಾತಿನ ತೂಕವನ್ನೂ ಈ ಕೃತಿಗಳಲ್ಲಿ ದೇವುಡು ಅವರ ಶೈಲಿಯನ್ನು ಈ ಕೆಳಗಿನ ಹ್ರಸ್ವವಾದ ಉದ್ಧೃತ ಭಾಗದಲ್ಲಿ ಕಾಣಬಹುದು.

"ಈ ಶಕ್ತಿ ಪ್ರಸಾದವು ಮೂಲಾಧಾರದಿಂದ ಸೂಕ್ಷ್ಮ ಶರೀರದ ನಾಡಿಗಳಲ್ಲಿ ಹೊರಟಾಗ ಸರಸ್ವತಿಯಾಗುವುದು. ಆಗ ಆಕೆಯ ಪರಾಪಶ್ಯಂತಿ ಮಧ್ಯಮಾ ವೈಖರಿ ಎಂಬ ನಾಲ್ಕು ಸ್ಥಾನಗಳಲ್ಲಿ ಪ್ರಕಟವಾಗಿ ವ್ಯೂಹವನ್ನು ಕಟ್ಟಿ ಆಡಿಸುವಳು. ಅದು ಗಣಪತಿ ವ್ಯೂಹವಾಗುವುದು. ಆಗ ಗರಿಕೆಯಂತೆ ಮೂರು ಮೂರಾಗಿ ದೇಹವನ್ನೆಲ್ಲ ವ್ಯಾಪಿಸಿರುವ ಸ್ಥೂಲನಾಡಿಗಳಲ್ಲಿ ಸಂಚರಿಸುವುದು. ಆಗ ದೇಹವು ಸ್ಥೂಲವಾದುದರಿಂದ ಅಲ್ಲಲ್ಲಿ ವಿಘ್ನಗಳು ಏರ್ಪಡುವುವು. ವೃತ್ತವಾದುದನ್ನು ವಿಸ್ತಾರಗೊಳಿಸುವುದು ಸಾಮ. ಹಾಗೆ ಅಭಿವ್ಯಕ್ತವಾಗಿ ವಿಸ್ತಾರವಾದುದನ್ನು ಆರಾಧಿಸುವುದಕ್ಕೆ ಯಶಸ್ಸು"– `ಮಹಾದರ್ಶನ.'

ಮತ್ತೊಂದು ಬಗೆಯ ವೈಚಾರಿಕತೆ ಪಾತ್ರಗಳು ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ಮತ್ತು ಕ್ರಿಯೆಯು ಮುಂದುವರೆಯುವ, ಬಾಗುವ, ಮುಕ್ತಾಯವಾಗುವ ರೀತಿಯಲ್ಲಿ ಪ್ರಕಟವಾಗುವುದು. ಈ ಕಾದಂಬರಿಗಳಲ್ಲಿ ಮುಖ್ಯ ಪಾತ್ರಗಳು ತೆಗೆದುಕೊಳ್ಳುವ ನಿರ್ಧಾರಗಳನ್ನು ಅನಂತರ ಅವೇ ಪರೀಕ್ಷಿಸಿಕೊಳ್ಳುತ್ತವೆ ಅಥವಾ ಇತರ ಪಾತ್ರಗಳು ಪ್ರಶ್ನಿಸುತ್ತವೆ. ಇಂತಹ ಬಿಂದುಗಳಲ್ಲಿ ಅವರ ಆಯ್ಕೆಗಳ ವಿಶ್ಲೇಷಣೆಯಾಗುತ್ತದೆ. ಈ ಎಲ್ಲ ವಿವರಣೆಗಳೂ ಕ್ರಿಯೆ ಸಾಗುವ ಮತ್ತು ಮುಕ್ತಾಯವಾಗುವ ರೀತಿಗಳಿಗೆ ಹೊಂದಿಕೊಂಡವು. `ನಾನು' ಎನ್ನುವುದು ದೇಹವಲ್ಲ, ತಾನು ದೇಹ ಎಂದು ಭ್ರಮಿಸಿದವನು ದಾರಿ ಕೆಡುತ್ತಾನೆ ಎನ್ನುವುದು ಈ ಕೃತಿಗಳ ಕೇಂದ್ರ ಚಿಂತನೆಯ ಒಂದಂಶ. ಇದನ್ನು ಮರೆತವರು ಮುಗ್ಗರಿಸುವುದನ್ನೂ ದುಃಖಕ್ಕೆ ಒಳಗಾಗುವುದನ್ನೂ ಮತ್ತೆ ಮತ್ತೆ ಕಾಣುತ್ತೇವೆ. ಯಾವುದೇ ವ್ಯಕ್ತಿಯ ಕರ್ಮವು ಫಲವನ್ನು ಕೊಟ್ಟೇ ಕೊಡುತ್ತದೆ ಎನ್ನುವುದು ಮತ್ತೊಂದು ಅಂಶ. ದೇವಗುರು ಬೃಹಸ್ಪತಿಯು ಒಂದು ಕ್ಷಣ ತಾಳ್ಮೆ ಕೆಟ್ಟುದರಿಂದ ಅನರ್ಥ ಪರಂಪರೆ ಸಂಭವಿಸುತ್ತದೆ. ಈ ಕೃತಿಗಳ ತಿರುಳಾದ ಚಿಂತನೆಯನ್ನು ರಕ್ತಗತ ಮಾಡಿಕೊಂಡಾಗಲೇ ನಾಯಕರು ಪರಿಪೂರ್ಣತೆಯನ್ನು ಸಾಧಿಸುವುದು.

ಈ ಮಹಾಕೃತಿಗಳಲ್ಲಿ ಬದುಕಿನ ಒಂದು ದರ್ಶನ ಹಬ್ಬಿ ಪ್ರಕಟವಾಗುತ್ತದೆ. ಇಲ್ಲಿ ಮತ್ತೆ ಒಂದು ವಿಶಿಷ್ಟ ರೀತಿಯ ಸಮತೋಲನವನ್ನು ಕಾಣಬಹುದು. ಮನುಷ್ಯನನ್ನು ಮೀರಿದ ಶಕ್ತಿಯೊಂದರ ನಿರ್ಣಯ-ನಿರ್ವಹಣೆಗಳ ಅನುಭವವು ನಮಗಾಗುತ್ತದೆ. ದೇವತೆಗಳ ಸಂಕಲ್ಪ, ಮಹಾವಿಷ್ಣುವಿನ ಸಂಕಲ್ಪ, ನಿಯತಿ–ಇವೆಲ್ಲ ಇಲ್ಲಿ ನಿರ್ಣಾಯಕ ಶಕ್ತಿಗಳು. ಹಾಗೆಂದು ಇಲ್ಲಿ ಮನುಷ್ಯ ಅದೃಶ್ಯ ಶಕ್ತಿಗಳ ಕೈಗೊಂಬೆ ಎಂದೇನೂ ಅಲ್ಲ. ನಹುಷ, ಶುಕ್ರಾಚಾರ್ಯ, ಬೃಹಸ್ಪತಿ, ವಸಿಷ್ಠ, ವಿಶ್ವಾಮಿತ್ರ, ಯಾಜ್ಞವಲ್ಕ್ಯ, ಮೈತ್ರೇಯಿ-ಎಲ್ಲ ಬೇರೆ ಬೇರೆ ಸಾಧ್ಯತೆಗಳಲ್ಲಿ ಆಯ್ಕೆ ಮಾಡುವ ಪ್ರಕ್ರಿಯೆಯನ್ನೇ ಕಾಣುತ್ತೇವೆ. ಈ ಆಯ್ಕೆಯ ಪರಿಣಾಮಗಳು ಅವರ ಬದುಕನ್ನು ನಡೆಸುತ್ತವೆ. ನಿಯತಿ-ಸ್ವಾತಂತ್ರ್ಯಗಳ ಈ ಸಮತೋಲನ ಬೆರಗನ್ನುಂಟುಮಾಡುತ್ತದೆ. ಮನುಷ್ಯನ ಆಯ್ಕೆಯ ಸ್ವಾತಂತ್ರ್ಯ, ನೈತಿಕ ಹೊಣೆ-ಇವು ಸ್ಪಷ್ಟವಾಗಿವೆ.

ಮತ್ತೊಂದು ವಿಶಿಷ್ಟವಾದ ಅಂಶ ಎಂದರೆ, ದೇವುಡು ಪೌರಾಣಿಕ ಸಾಮಗ್ರಿಯನ್ನು ಆರಿಸಿಕೊಳ್ಳುವುದು ಮನುಷ್ಯನ ಹಿರಿಮೆಯ ಸಾಧ್ಯತೆಯನ್ನು ಮೆರೆಯುವುದಕ್ಕೆ ನಹುಷ, ವಸಿಷ್ಠ, ವಿಶ್ವಾಮಿತ್ರ, ಯಾಜ್ಞವಲ್ಕ್ಯ, ಮೈತ್ರೇಯಿ–ಎಲ್ಲ ಪಾತ್ರಗಳೂ ಮನುಷ್ಯನ ಹಿರಿಮೆಯನ್ನೆ ಸಾರುತ್ತವೆ. ಅಗ್ನಿ, ವಾಯು, ಯಮ–ಮೊದಲಾದ ದಿಕ್ಪಾಲಕರ ನಡುವೆ, ಶುಕ್ರಾಚಾರ್ಯ, ಬೃಹಸ್ಪತಿಯರ ಜೊತೆಗೆ ಇದ್ದು ನಹುಷನು ಧರ್ಮದಲ್ಲಿ, ಸಂಯಮದಲ್ಲಿ, ಪರಿತ್ಯಾಗದಲ್ಲಿ ಅವರೆಲ್ಲರನ್ನು ಕುಬ್ಜರನ್ನಾಗಿ ಮಾಡಿಬಿಡುತ್ತಾನೆ. ಇಂದ್ರಪತ್ನಿ ಶಚೀದೇವಿಯೇ, ದೇವತೆಗಳು ಮನುಷ್ಯರಿಂದ ವರವನ್ನು ಪಡೆಯುವಂತಾಯಿತು ಎನ್ನುತ್ತಾಳೆ, ಈ ಧೀಮಂತನು ತನ್ನ ಗಂಡ ಇಂದ್ರನನ್ನು ಮೀರುತ್ತಾನೆ ಎಂದುಕೊಳ್ಳುತ್ತಾಳೆ. ದೇವತೆಗಳು ವಸಿಷ್ಠ, ವಿಶ್ವಾಮಿತ್ರ, ಯಾಜ್ಞವಲ್ಕ್ಯರ ಆಣತಿಯನ್ನು ಪಾಲಿಸುತ್ತಾರೆ. ನಹುಷನ ಹೆಂಡತಿ ವಿರಜಾದೇವಿ, ಯಾಜ್ಞವಲ್ಕ್ಯನ ಪತ್ನಿಯರು ಕಾತ್ಯಾಯನಿ ಮತ್ತು ಮೈತ್ರೇಯಿ, ಎಲ್ಲ ತಮ್ಮ ಜ್ಞಾನದಿಂದ, ಧರ್ಮದಿಂದ, ಶುಭ್ರ ಬದುಕಿನಿಂದ ನಮ್ಮ ಗೌರವವನ್ನು ಗೆದ್ದುಕೊಳ್ಳುತ್ತಾರೆ. ದೇವುಡು ಪೌರಾಣಿಕ ಸಾಮಾಗ್ರಿಯನ್ನು ಆರಿಸಿಕೊಂಡದ್ದು ಇಲ್ಲಿ ಸಾರ್ಥಕವಾಗುತ್ತದೆ. ಪೌರಾಣಿಕ ಪಾತ್ರಗಳು ಮನುಷ್ಯಸ್ವಭಾವದ ಗುಣಗಳ ಪರಾಕಾಷ್ಠತೆಯನ್ನು ಸೂಚಿಸುತ್ತವೆ; ರೋಷ, ಛಲ, ಧರ್ಮಪರಾಯಣತೆ, ಸತ್ಯನಿಷ್ಠೆ, ದುಷ್ಟತನ–ಹೀಗೆ ಒಂದೊಂದು ಗುಣವೂ ಮುಟ್ಟಬಹುದಾದ ಎಲ್ಲೆಯನ್ನು ಅವು ತೋರಿಸುತ್ತವೆ. `ಮಹಾಕ್ಷತ್ರಿಯ'ದಲ್ಲಿ ಒಂದು ದೃಶ್ಯವಿದೆ. ಹತ್ಯೆಯ ಹೆದರಿಕೆಯಿಂದ ಇಂದ್ರ ಓಡಿಹೋಗಿ ಅವಿತುಕೊಂಡಿದ್ದಾನೆ. ಅವನ ಸ್ಥಾನದಲ್ಲಿರುವ ನಹುಷನು ಅವನನ್ನು ಹಿಂದಕ್ಕೆ ಕರೆಸಲು ತೀರ್ಮಾನಿಸಿದ್ದಾನೆ. ಅಗ್ನಿ, ವಾಯು–ಮೊದಲಾದವರನ್ನೂ, ಇಂದ್ರನ ಅಸ್ತ್ರಗಳನ್ನೂ ಕರೆಕಳುಹಿಸಿ ಅವಕ್ಕೆ, ಇಂದ್ರನನ್ನು ಕರೆತರಬೇಕೆಂದೂ, ಯಾವ ಅಡ್ಡಿ ಬಂದರೂ ತೊಡೆದು ಹಾಕಬೇಕೆಂದೂ ಆಜ್ಞಾಪಿಸುತ್ತಾನೆ. ಅಸ್ತ್ರಗಳೂ ಅತ್ಯುತ್ಸಾಹದಿಂದ ಸಿದ್ಧವಾಗುತ್ತವೆ. ಅಗ್ನಿ–ವಾಯುಗಳಿಗೆ ಮೈಯ್ಯುಬ್ಬುತ್ತದೆ. "ಹೀಗೆ ತಮಗೆ ಹಿಂದೆ ಅಪ್ಪಣೆಯಾಗಿದ್ದರೆ ಆ ಹತ್ಯೆಯು ಇದುವರೆಗೆ ಉಳಿಯುತ್ತಿರಲಿಲ್ಲ," ಎನ್ನಿಸುತ್ತದೆ. ದೇವಗುರುವು, "ಹೌದು, ಹೌದು, ಅಧಿಕಾರವಿರುವುದು ಹೆಚ್ಚಲ್ಲ. ಅದನ್ನು ವಿನಿಯೋಗಿಸುವ ಸಾಮರ್ಥ್ಯವೂ ಬೇಕು," ಎಂದು ತಲೆದೂಗುತ್ತಾನೆ. ದೇವುಡು ಅವರ ಮೂವರು ನಾಯಕರೂ ಮನುಷ್ಯನ ಭವ್ಯತೆಯ ಶಿಖರಗಳು.

ಈ ಕಾದಂಬರಿಗಳಲ್ಲಿ ದೇವುಡು ಬೆಳೆದು ಹೋದ ಆ ಯುಗವನ್ನಾಗಲಿ ಆಶ್ರಮಗಳನ್ನಾಗಲಿ ದೇವಲೋಕವನ್ನಾಗಲಿ ನಾವು `ಹೌದು, ಹೀಗೆಯೇ ಇದ್ದಿರಬೇಕು' ಎನ್ನುವಂತೆ ಸೃಷ್ಟಿಸಿ ಬಿಡುತ್ತಾರೆ. ತಾವು ಸೃಷ್ಟಿಸುವ ಲೋಕದ ಭಯಭಕ್ತಿ ಗೌರವಗಳು, ಶಿಷ್ಟಾಚಾರಗಳು, ಯಾರು ಯಾರಿಗೆ ಹೇಗೆ ಅಭಿವಾದನ ಮಾಡಬೇಕು, ಯಾವಾಗ ಯಾವ ದಿಕ್ಕಿಗೆ ಅಭಿಮುಖವಾಗಿ ಕುಳಿತುಕೊಳ್ಳಬೇಕು, ಯಾರು ಯಾರನ್ನು ಯಾವ ಮಂದಿರದಲ್ಲಿ ಭೇಟಿಯಾಗಬೇಕು, ಯಾವಾಗ ಆಚಮನ ಮಾಡಬೇಕು–ಇಂತಹ ಸಾವಿರ ವಿವರಗಳು ಅವರಿಗೆ ಕರತಲಾಮಲಕ, ಆ ಲೋಕಗಳು ಅವರಿಗೆ ತಾವು ವಾಸಿಸುವ ಲೋಕದಷ್ಟೇ ವಾಸ್ತವ, ಸ್ಫುಟ, ಇದರಿಂದ ಅವರು ಸೃಷ್ಟಿಸುವ ಲೋಕಗಳು `ಕನ್‌ವಿನ್‌ಸಿಂಗ್' ಆಗುತ್ತವೆ. ನಮಗೂ ವಾಸ್ತವವಾಗುತ್ತವೆ. ದೇವುಡು ಈ ಕೃತಿಗಳಲ್ಲಿ ಒಂದು ವಿಶಿಷ್ಟವಾದ, ಗಂಭೀರವಾದ ಶೈಲಿಯನ್ನು ಬಳಸಿದ್ದಾರೆ. ಭಾಷೆ ಆತ್ಮೀಯವಾಗಬಲ್ಲದು, ಔಪಚಾರಿಕವಾಗಬಲ್ಲದು. ಆದರೆ ಅದರ

ಗಾಂಭೀರ್ಯ ಉಳಿದೇ ಉಳಿಯುತ್ತದೆ. ಈ ಭಾಷೆಯು ಆ ಲೋಕಗಳ ವಾತಾವರಣಲವನ್ನು ಸೃಷ್ಟಿಸಿ ಉಳಿಸಿಕೊಳ್ಳುವುದರಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈ ಕಾದಂಬರಿಗಳ ಹಲವು ಸಂಭಾಷಣೆಗಳು ಸಾಗುವ ರೀತಿ, ತರ್ಕದ ಬಂಧ–ಇವು ಅತ್ಯುನ್ನತ ಪ್ರತಿಭೆಗೆ ಮಾತ್ರ ನಿಲುಕುವಂಥವು.

ಈ ಕಾದಂಬರಿಗಳನ್ನು ಓದುವುದು ಸುಲಭವಲ್ಲ. ನಮಗೆ ಅಭ್ಯಾಸವಾಗಿ ಹೋದ ಜಗತ್ತನ್ನು ಬಿಟ್ಟು, ಪರ್ವತಗಳಂತಹ ಪಾತ್ರಗಳ ನಡುವೆ, ಆಧ್ಯಾತ್ಮದ ಬದುಕಿಗೆ ಮುಡಿಪಾದವರ ನಡುವೆ, ಮನುಷ್ಯನ, ತನ್ನ ಒಳಗಿನ ಶಕ್ತಿಯನ್ನು ಬೆಳೆಸಿಕೊಂಡರೆ ಯಾವುದೂ ಅಸಾಧ್ಯವಲ್ಲ ಎಂದು ಅದಕ್ಕೆ ಮುಡಿಪಾದವರ ನಡುವೆ ನಿಲ್ಲಬೇಕು. ಆದರೆ ಈ ಶ್ರಮವನ್ನು ವಹಿಸಿ, ಈ ಆಧ್ಯಾತ್ಮಿಕ ಗೌರೀಶಂಕರ–ವಿಂಧ್ಯ–ಮೇರುಗಳ ನಡುವೆ ಒಂದಿಷ್ಟು ಕಾಲ ನಡೆದಾಡುವುದು ಒಂದು ಅಪೂರ್ವವಾದ, ಕೆಲ ಕಾಲವಾದರೂ ನಮ್ಮ ಮಿತಿಗಳ ಮೀರಿ ಬೆಳೆಯುವ ಅನುಭವ. ಪಾಶ್ಚಾತ್ಯ ವಿಮರ್ಶಕರು ಕೆಲವರು `ವಿಸ್‌ಡಮ್ ಲಿಟರೇಚರ್' ಎನ್ನುವ ಪದಬೃಂದವನ್ನು ಬಳಸುತ್ತಾರೆ. ಹೀಗೆ ವರ್ಣಿಸುವ ಹಲವು ಕೃತಿಗಳು (ಎಲ್ಲವೂ ಅಲ್ಲ) ಸಾಹಿತ್ಯದ ಕೃತಿಗಳೇ, ಆದರೆ ಅವು ಸಾಹಿತ್ಯದ ಎಲ್ಲೆಯನ್ನು ಮೀರಿ ಮನುಷ್ಯನ ಬದುಕಿನ ಮೂಲ ಸ್ವರೂಪ, ಅರ್ಥಗಳತ್ತ ಸಾಗುತ್ತವೆ. ಒಂದು ದರ್ಶನವನ್ನು ಕೊಡುತ್ತವೆ. ಭಗವದ್ಗೀತೆ, ವ್ಯಾಸಭಾರತ, ದಿ ಬುಕ್ ಆಫ್ ಜೋಬ್, ಷೇಕ್ಸ್‌ಪಿಯರನ `ಕಿಂಗ್ ಲಿಯರ್' ಇಂತಹ ಕೆಲವು ಕೃತಿಗಳು. `ಮಹಾದರ್ಶನ' `ವಿಸ್‌ಡಮ್ ಲಿಟರೆಚರ್'. ಈ ಮೂರು ಕೃತಿಗಳಂತಹ ಕೃತಿಗಳು ಯಾವುದೇ ಭಾಷೆಯಲ್ಲಿ ಅತಿ ವಿರಳ. ಇವನ್ನು ಓದುವುದು ಶ್ರಮವೇ, ಆದರೆ ಸಂತೋಷ ಕೊಡುವ ಶ್ರಮ, ಬೆಳ್ಳಿ-ಬಂಗಾರಗಳನ್ನು ಗಣಿ ಅಗೆದು ತೆಗೆಯುವ ಶ್ರಮ.

★

ನಾನು ಕಂಡಂತೆ - ದೇವುಡು

ಶ್ರೀ ಇ.ಆರ್. ಸೇತೂರಾಂ

ಶ್ರೀ ದೇವುಡು ಅವರು ನಮ್ಮ ತಾಯಿಯ ಕಡೆಯಿಂದ ದೂರದ ಸಂಬಂಧಿಗಳು. ಅವರು ಮುಲಕನಾಡು ಬ್ರಾಹ್ಮಣರು. ಮನೆ ಮಾತು ತೆಲಗು ನಾನು ಅವರನ್ನು ಮೊದಲಬಾರಿ ಕಂಡದ್ದು ಬಹುಶಃ ನಾನು ಇಂಟರ್‌ಮೀಡಿಯೇಟ್ ವಿದ್ಯಾರ್ಥಿಯಾಗಿದ್ದಾಗ–ಸುಮಾರು ೧೯೩೩-೩೪ ಇರಬಹುದು.

ನಾನು ಗಮನಿಸಿದಂತೆ ಅವರನ್ನು ಕುರಿತು ಕೆಲವು ಮಾತುಗಳನ್ನು ಹೇಳಬಹುದು. ಬಟ್ಟೆ-ಬರೆಗಳು, ಅಲಂಕಾರ ಇತ್ಯಾದಿಗಳ ಬಗ್ಗೆ ವಿಶೇಷ ಆಸ್ಥೆ ಇದ್ದಂತೆ ಕಾಣುತ್ತಿರಲಿಲ್ಲ. ಸಾಧಾರಣವಾಗಿ ದಟ್ಟಿ ಪಂಚೆ, ಹೊರಗಡೆ ಹೋಗುವಾಗ ಕಚ್ಚೆಪಂಚೆ, ಷರಟು, ಕ್ಲೋಸ್‌ಕಾಲರ್ ಕೋಟು, ತಲೆಯ ಮೇಲೊಂದು ಟೋಪಿ.

ಒಂದು ಬಾರಿ ಚಿತ್ರದುರ್ಗದ ಯಾವುದೋ ಒಂದು ಕಾರ್ಯಕ್ರಮದಲ್ಲಿ ನಾನೂ ಮತ್ತು ಅವರು ಭಾಗವಹಿಸಬೇಕಾಗಿತ್ತು. ಆಗ ಅವರು ನಮ್ಮ ಮನೆಯ ಸಮೀಪದಲ್ಲಿಯೇ ವಾಸಿಸುತ್ತಿದ್ದರು. ಅಂದು ನಾನು ಅವರ ಮನೆಗೆ ಹೋದೆ, ಸುಮಾರು ಬೆಳಗ್ಗೆ ೧೧ ಗಂಟೆಯ ಸಮಯವಿರಬಹುದು. ಅವರು ಪ್ರಯಾಣಕ್ಕೆ ಸಿದ್ಧರಾಗಿರಲಿಲ್ಲ. `ಏನು ಶಾಸ್ತ್ರಿಗಳೇ ಇನ್ನೂ ಹೀಗೆ ಇದ್ದೀರಲ್ಲಾ' ಎಂದು ಚಿತ್ರದುರ್ಗದ ಕಾರ್ಯಕ್ರಮವನ್ನೂ ಕೈಗೊಳ್ಳಬೇಕಾದ ಪ್ರಯಾಣವನ್ನೂ ಕುರಿತು ಜ್ಞಾಪಿಸಿದೆ. `ಗೌರೀ, ನನ್ನ ಷರಟು ಕೊಡು' ಎಂದು ಹೇಳಿ ಅವರು ಸಿದ್ಧರಾಗಿಯೇ ಬಿಟ್ಟರು.

ಅವರು ಮಕ್ಕಳ ಪುಸ್ತಕಗಳನ್ನು ಪ್ರಕಟಪಡಿಸುತ್ತಿದ್ದರು. ನನಗೆ ಮತ್ತು ಅವರಿಗೆ ಪರಿಚಯವಿದ್ದ ನಂಜನಗೂಡಿನ ಶ್ರೀಕಂಠಯ್ಯ ಎನ್ನುವ ತರುಣರು ಅವರನ್ನು ಪುಸ್ತಕಗಳನ್ನು ಕಮೀಷನ್ ಮೇಲೆ ಮಾರಿ ಹಣಕೊಡುವುದಾಗಿ ಹೇಳಿ, ಒಂದು ಐದಾರು ಪ್ರತಿಗಳನ್ನು ಕೊಡುವಂತೆ ಕೇಳಿದರು. ಅದಕ್ಕೆ ಅವರು `ಐದಾರು ಪ್ರತಿಗಳೇ ಏಕೆ? ಇಪ್ಪತ್ತು–ಮೂವತ್ತು ಪ್ರತಿಗಳನ್ನೇ ತೆಗೆದುಕೊಂಡು ಹೋಗು ಎನ್ನುತ್ತಿದ್ದರು. ತರುಣರನ್ನು ಬಹಳ ವಿಶ್ವಾಸದಿಂದ ಕಾಣುತ್ತಿದ್ದರು. ಅವರು ಮಾಡುವ ಕೆಲಸಗಳಲ್ಲಿ ಅವರನ್ನು ಹುರಿದುಂಬಿಸುತ್ತಿದ್ದರು. ತರುಣರನ್ನು ಕೆಲಸಮಾಡಲು ಪ್ರೇರಿಪಿಸುತ್ತಿದ್ದರು, ಪ್ರೋತ್ಸಾಹಿಸುತ್ತಿದ್ದರು. ಅವರಂತೆ ಚಿಕ್ಕವರನ್ನು, ತರುಣರನ್ನು ಅವರು ಮಾಡುತ್ತಿದ್ದ ಕೆಲಸಗಳಲ್ಲಿ ಉತ್ಸಾಹ ತುಂಬುತ್ತಿದ್ದವರು, ತಮ್ಮ ಕೈಲಾದ ಸಹಾಯವನ್ನು ಮಾಡುತ್ತಿದ್ದವರು ವಿರಳರೆಂದೇ ಹೇಳಬೇಕು.

ಅವರು ಇಂಗ್ಲಿಷು, ಸಂಸ್ಕೃತ, ವೇದ, ರಾಮಾಯಣ, ಭಾರತ ಪುರಾಣಗಳು ಇತ್ಯಾದಿಗಳನ್ನು ಚೆನ್ನಾಗಿ ವ್ಯಾಸಂಗ ಮಾಡಿದವರು. ಒಳ್ಳೆಯ ವಿದ್ವಾಂಸರು, ಹಳೆಯ ಸಂಪ್ರದಾಯ, ನಂಬಿಕೆ, ವಾಙ್ಮಯಗಳಲ್ಲಿ ಅಪಾರ ಶ್ರದ್ಧೆ ಭಕ್ತಿಗಳಿದ್ದವರು.

ನಮ್ಮದು ನಂಜನಗೂಡು ಸ್ಥಳ. ದೇವುಡು ಅವರು ನನಗೆ ಬೇಕಾದವರು. ವಿದ್ವಾಂಸರು, ಒಳ್ಳೆಯ ಭಾಷಣಕಾರರೂ ಆದ ದೇವುಡು ಅವರನ್ನು ಎರಡು ಮೂರು ಬಾರಿ ನಂಜನಗೂಡಿಗೆ ಬಂದು ಭಾಷಣ ಮಾಡಲು ವ್ಯವಸ್ಥೆ ಮಾಡಿದ್ದೆ. ಹೀಗೆ ಅವರು ನಂಜನಗೂಡಿಗೆ ಬಂದಿದ್ದಾಗ ಅವರು ಭಾಷಣ ಮಾಡಿದ ಎರಡು ಸಂದರ್ಭಗಳ ನೆನಪಾಗುತ್ತದೆ. ಆವೇಶ, ವಿದ್ವತ್ತು, ಉತ್ಸಾಹ–ಇವುಗಳು ಅವರ ಭಾಷಣದ ವಿಶೇಷಗಳು. ೪೦ರ ದಶಕದಲ್ಲಿ ಬಿ.ವಿ. ಪಂಡಿತರ ಪ್ರಯೋಗಶಾಲೆಯ ಆಶ್ರಯ ದಲ್ಲಿ ಧನ್ವಂತ್ರಿ ಜಯಂತಿಗೆ ಭಾಷಣಕಾರರಾಗಿ ನಂಜನಗೂಡಿಗೆ ಬಂದಿದ್ದರು. ಒಂದು ಗಂಟೆಯ ಆವೇಶಪೂರಿತ ಭಾಷಣ ಮಾಡಿದರು. ಭಾಷಣದಲ್ಲಿ ಹೆಗೆಲ್, ಮಾರ್ಕ್ಸ್, ಫ್ರಾಯ್ಡ್, ಕಾಳಿದಾಸ, ವೇದ–ಹೀಗೆ ಅನೇಕ ತತ್ತ್ವಜ್ಞರ ಚಿಂತಕರ ಅಭಿಪ್ರಾಯಗಳನ್ನೂ ವಿವರಿಸಿದರು. ಜೊತೆಗೆ ಯೂಂಗ್‌ನ ಮತವನ್ನು ಹೇಳಿದರು. ಅವರ ಭಾಷಣದಲ್ಲಿ ಭಾರತೀಯ ತತ್ತ್ವಶಾಸ್ತ್ರಕ್ಕೆ ಪ್ರಾಮುಖ್ಯತೆ ಎದ್ದು ಕಾಣುತ್ತಿತ್ತು. ಕಡೆಯಲ್ಲಿ ಆಯುರ್ವೇದವನ್ನು ಬೆಂಬಲಿಸಿದರು. ಭಾಷಣ ಅಮೋಘವಾಗಿತ್ತು. ಜನರು ಅದನ್ನು ಬಹಳ ಆಸಕ್ತಿಯಿಂದ ಕೇಳಿದರು.

ಇದಕ್ಕಿಂತ ಮುಂಚೆ ೩೦ರ ದಶಕದಲ್ಲಿ ಅವರು ನಾಟಕವನ್ನು, ಕಲೆಯನ್ನು ಕುರಿತು ಭಾಷಣ ಮಾಡಿದ್ದರು. ಆ ಭಾಷಣದಲ್ಲಿಯೂ ಅವರ ಆವೇಶ, ಉತ್ಸಾಹಗಳು ಪ್ರಾಮುಖ್ಯತೆಯನ್ನು ಪಡೆ ದಿದ್ದವು. ಅವರ ಭಾಷಣಗಳನ್ನು ಕೇಳಿದರೆ, ವಿಸ್ತಾರವಾದ ಅಗಾಧವಾದ ಪಾಂಡಿತ್ಯದ ಅರಿವಾಗುತ್ತಿತ್ತು. ಆದರೆ ಕೆಲವೊಮ್ಮೆ ಅವರ ತೀರ್ಪುಗಳು ಏಕಪಕ್ಷೀಯವೇನೋ ಎನ್ನಿಸದೆ ಇರುತ್ತಿರಲಿಲ್ಲ. ತೀರ್ಪಿ ನಲ್ಲಿ ಒಮ್ಮೊಮ್ಮೆ ತರ್ಕ ಹಿಂದೆ ಸರಿದು, ಆವೇಶ ಉದ್ವೇಗ ಕಾಣಿಸುತ್ತಿತ್ತು.

ಸಾಮಾನ್ಯವಾಗಿ ಹಳೆಯ ಕಾಲದವರಂತೆ ದೇವುಡೂರವರೂ ಇಸ್ಪೀಟ್‌ಪ್ರಿಯರು. ಇನ್ನೊಬ್ಬ ಹಿರಿಯರೂ, ವಿದ್ವಾಂಸರೂ ಆದ ವೀರಕೇಸರಿ ಸೀತರಾಮಶಾಸ್ತ್ರಿಗಳ ಮನೆಯಲ್ಲಿ ಈ ಇಸ್ಪೀಟ್ ಕೂಟ ಸೇರುತ್ತಿತ್ತು. ವೀರಕೇಸರಿಯವರು ಇದರಿಂದ ದೂರ. ಅವರ ಮಕ್ಕಳು ಮತ್ತು ಇತರರ ಜೊತೆಯಲ್ಲಿ ದೇವುಡುರವರು ಇಸ್ಪೀಟ್ ಆಡುತ್ತಿದ್ದರು. ಇಲ್ಲಿಯೂ ಮಾತನಾಡುತ್ತಿದ್ದವರು ದೇವು ಡೂರವರೇ. ಅವರ ಉತ್ಸಾಹ, ಆಸಕ್ತಿಗಳು ಚೆನ್ನಾಗಿ ಗೋಚರವಾಗುತ್ತಿದ್ದವು. ವಾಹಿನಿ ಪ್ರಕಾಶನ ದವರು ಸುಲಭ ಬೆಲೆಯ ಪುಸ್ತಕಗಳನ್ನು ಪ್ರಕಟಿಸಲು ಆರಂಭಿಸಿದರು. ಅನಕೃರವರ `ಗೃಹಲಕ್ಷ್ಮಿ' ಕಾದಂಬರಿಯಿಂದ ಇದು ಪ್ರಾರಂಭವಾಯಿತು. ಮಾಲೆಯಲ್ಲಿ ದೇವುಡುರವರ `ಮಲ್ಲಿ' ಕಾದಂಬ ರಿಯೂ ಪ್ರಕಟವಾಯಿತು. ಥಾಮಸ್ ಹಾರ್ಡಿಯ ಪ್ರಸಿದ್ಧ ಕೃತಿ `ಟೆಸ್ ಆಫ್ ದಿ ಡುಬರ್‌ವಿಲ್ಲೆ' ಏನು? ಕನ್ನಡದಲ್ಲಿ ನಾನು ಅದರಂತಹ ಕಾದಂಬರಿಯನ್ನು ಬರೆಯುತ್ತೇನೆ ಎಂದು ಬರೆದದ್ದು `ಮಲ್ಲಿ' ಕಾದಂಬರಿ. ಪ್ರಜಾವಾಣಿಯ ಸುದ್ದಿಸಂಪಾದಕನಾಗಿದ್ದ ನನಗೆ ಈ ಪುಸ್ತಕದ ಪ್ರತಿಯನ್ನು ಕೊಟ್ಟು ವಿಮರ್ಶೆಯನ್ನು ಬರೆಯಲು ವ್ಯವಸ್ಥೆ ಮಾಡಬೇಕೆಂದು ಹೇಳಿದರು. ನಾನು ಅದನ್ನು ವಿಮರ್ಶೆಗೆ `ಸೂರಿ' ಅವರಿಗೆ ಕೊಟ್ಟೆ. ಕಾದಂಬರಿಯ ಲೋಪದೋಷಗಳನ್ನೂ, ಪ್ರೇರಣೆಗಳನ್ನೂ ಗುರುತು ಹಚ್ಚಿದ ಅವರು ಇದು ಹಾರ್ಡಿಯ `ಟೆಸ್' ಕಾದಂಬರಿಯ ಕನ್ನಡ ರೂಪ ಎನ್ನುವ ಅರ್ಥ ಬರುವಂತೆ ಬರೆ ದುಬಿಟ್ಟರು. ತಮ್ಮ ಪ್ರೀತಿಯ ಕಾದಂಬರಿಯ ಬಗ್ಗೆ ಹೀಗೆಲ್ಲಾ ಬರೆದದ್ದು ದೇವುಡು ಅವರು ಸಿಟ್ಟಿ ಗೇಳುವಂತೆ ಮಾಡಿತ್ತು.

"ಏನಯ್ಯಾ, ನೀನು ಸಂಪಾದಕನಾಗಿದ್ದು ಈ ರೀತಿಯೆಲ್ಲಾ ನಿನ್ನ ಪತ್ರಿಕೆಯಲ್ಲಿ ಬಂದಿದೆಯಲ್ಲಾ?" ಎಂದು ಕೋಪದಿಂದ ಹೇಳಿ "ನಾನು ನಿಮಗೆ ಬುದ್ಧಿ ಕಲಿಸುತ್ತೇನೆ' ನ್ಯಾಯಾಲಯಕ್ಕೆ ಹೋಗುತ್ತೇನೆ" ಎಂದು ಆರ್ಭಟಿಸಿದರು. ವೀರಕೇಸರಿಯವರು ಇಸ್ಪೀಟ್ ಆಟದ ನಡುವೆ ದೇವುಡುರವರನ್ನು ಕೊಂಚ ಗೇಲಿ ಮಾಡಿದರು. ಈ ಕೋಪದಲ್ಲೇ ಅವರು ನನಗೊಂದು ಪತ್ರವನ್ನು ಬರೆದರು. "ಆ ವಿಮರ್ಶಕರು, ಸಂಪಾದಕರು ಬರೆದಿರುವುದಕ್ಕೆ ನನ್ನ ಕ್ಷಮೆ ಕೇಳಿದರೆ ಸರಿ, ಇಲ್ಲದೆ ಇದ್ದರೆ..." ಎಂದು ಬರೆದಿದ್ದರು. ನಾನು ಪತ್ರಿಕೆಯ ಸಾಮಾನ್ಯ ಪದ್ಧತಿಯಂತೆ ವಿಮರ್ಶೆಗೆ ಬಂದ ಪುಸ್ತಕದ ವಿಷಯದಲ್ಲಿ ನುರಿತವರೊಬ್ಬರಿಗೆ ವಿಮರ್ಶೆಗೆ ಪುಸ್ತಕವನ್ನು ಕಳುಹಿಸುತ್ತೇವೆ. ಪುಸ್ತಕವನ್ನು ಕುರಿತು ಅಭಿಪ್ರಾಯ ವಿಮರ್ಶೆ ಬರೆಯುವುದು ಅವರ ಸ್ವಾತಂತ್ರ್ಯ, ಪ್ರಕಟಿಸಿದ ಮಾತ್ರಕ್ಕೆ ನಾವು ಅದರಲ್ಲಿ ಬರೆದ ಎಲ್ಲ ಅಭಿಪ್ರಾಯಗಳನ್ನು ಒಪ್ಪಿದ್ದೇವೆ ಎಂದು ಅರ್ಥವಲ್ಲ. ಅವರು ಬರೆದದ್ದನ್ನು, ಅವರ ಸ್ವಾತಂತ್ರ್ಯವನ್ನು ಮೊಟಕು ಗೊಳಿಸದೆ ನಾವು ಪ್ರಕಟಿಸುತ್ತೇವೆ" ಎಂದು ಉತ್ತರ ಬರೆದೆ. ಸ್ವಲ್ಪ ಕಾಲ ಈ ಕೋಪ ಅವರಲ್ಲಿತ್ತು. ಮತ್ತೆ ಮೊದಲಿನಂತಾದರು.

ನಂಜನಗೂಡಿನ ಕರ್ನಾಟಕ ಸಂಘದ ಕಾರ್ಯಕ್ರಮಕ್ಕೋ, ಮಹಿಳಾ ಸಂಘದ ಕಾರ್ಯಕ್ರಮಕ್ಕೋ-೧೯೫೦ರ ದಶಕದ ಕೊನೆಯ ಭಾಗದಲ್ಲಿ ಇರಬೇಕು-ಅವರನ್ನು ಕಾರ್ಯಕ್ರಮಕ್ಕೆ ಗೊತ್ತು ಮಾಡಿದೆ. ಅವರು ಕಾರ್ಯಕ್ರಮಕ್ಕೆ ಹೋದರು. ಭಾಷಣವೆಲ್ಲಾ ಮುಗಿದು ಹಿಂದಿರುಗುವಾಗ ಶಾಸ್ತ್ರಿಗಳಿಗೆ ಸ್ವಲ್ಪ ಹಣವನ್ನು ಕೊಟ್ಟರಂತೆ. ಅದರಲ್ಲಿ ಅವರು ಒಂದು ಜೊತೆ ಚಪ್ಪಲಿಯನ್ನು ಕೊಂಡು ಹಾಕಿಕೊಂಡರು. ದುರದೃಷ್ಟವಶಾತ್ ಹೊಸ ಚಪ್ಪಲಿ ಅವರ ಕಾಲನ್ನು ಕಚ್ಚಿತು. ಕೆಲವು ಕಾಲ ಅವರು ಅದರ ಕಡೆ ಗಮನ ಕೊಡಲಿಲ್ಲ. ಆ ಘಾಯ ದೊಡ್ಡದಾಗಿ ಕಡೆಗೆ ಅವರ ಕಾಲನ್ನು ಕತ್ತರಿಸುವಂತಾಯಿತು. ನನಗೆ ಇದರಿಂದ ಬಹಳ ನೋವಾಯಿತು. ನನ್ನಿಂದ ಅವರು ನಂಜನಗೂಡಿಗೆ ಹೋಗಿ ಈ ರೀತಿ ಕಾಲನ್ನು ಕಳೆದುಕೊಳ್ಳುವಂತಾಯಿತಲ್ಲಾ ಎಂದು ದುಃಖವಾಯಿತಾದರೂ ನನಗೆ ಅವರನ್ನು ಹೋಗಿ ನೋಡಿ ಮಾತನಾಡಿಸಿಕೊಂಡು ಬರಲು ಏನೋ ಸಂಕೋಚವಾಗಿ ನಾನು ಹೋಗಲಿಲ್ಲ. ಈ ದುಃಖ ಇಂದಿಗೂ ನನ್ನಲ್ಲಿದೆ.

ಅವರು ದೈವಾಧೀನರಾದ ಸುಮಾರು ೩೦ ವರ್ಷಗಳ ನಂತರ ೧೯೬೨ರಲ್ಲಿ ಇಂಗ್ಲೆಂಡಿನ ಬಿಬಿಸಿಗಾಗಿ `ಮೋಕ್ಷ' ಚಿತ್ರವನ್ನು ತೆಗೆಯಲು ನಾನು ಕೆಲವು ವಿದೇಶಿಯರೊಂದಿಗೆ ಕಾಶಿಗೆ ಹೋಗಿದ್ದೆ. ಮಣಿಕರ್ಣಿಕಾ ಘಾಟಿನ ಸಮೀಪದಲ್ಲಿರುವ ಸಾಗರದ ಶ್ರೀ ಶ್ರೀಧರ ಸ್ವಾಮಿಗಳವರ ಆಶ್ರಮಕ್ಕೆ ಚಿತ್ರೀಕರಣಕ್ಕಾಗಿ ಹೋದೆವು. ಅಲ್ಲಿಯ ಸ್ವಾಮಿಗಳು ಕರ್ನಾಟಕದವರು. ಅವರಿಗೆ ನಾಲ್ಕೈದು ಜನ ಶಿಷ್ಯರು. ಅವರ ಪೈಕಿ ಒಬ್ಬ ಶಿಷ್ಯ ಮುಂಗೋಪಿ, ಕೋಪಿಷ್ಟ. ಅವನು ನಮ್ಮನ್ನು ಗೇಲಿ ಮಾಡಿದ. ನಮ್ಮ ಮೇಲೆ ಕೋಪ ಮಾಡಿಕೊಂಡ. ತೆಲುಗಿನಲ್ಲಿ `ಸಿನಿಮಾ ತೆಗೀತೀರಾ ಸಿನಿಮಾ.... ಅದೂ ಈ ವಿದೇಶಿಯರ ಜೊತೆ ಸೇರಿ' ಎಂದು ಏನೇನೋ ಹೇಳಿದ. ಸ್ವಾಮಿಗಳು ಸಮಾಧಾನದಿಂದ ಹೇಳಿದರು, `ಅವನ ಸ್ವಭಾವವೇ ಹಾಗೆ. ದುಡುಕು ಬುದ್ಧಿ. ಆದರೆ ಒಳ್ಳೆಯವನು. ನೀವು ಬೇಸರಿಸಿಕೊಳ್ಳಬೇಡಿ.'

ಆ ಶಿಷ್ಯ ನಂತರ ಆಶ್ರಮದ ಆ ದೊಡ್ಡ ಹಾಲಿನ ಒಂದು ಮೂಲೆಗೆ ಹೋಗಿ ಕುಳಿತು ಪುಸ್ತಕವೊಂದನ್ನು ತೆರೆದು ಓದುವ ಪ್ರಯತ್ನ ಮಾಡಿದ. ನಾನು ಕುತೂಹಲದಿಂದ ಆ ಪುಸ್ತಕವೇನೆಂದು

ನೋಡಿದೆ. ಅದು ದೇವುಡುರವರ `ಮಹಾಬ್ರಾಹ್ಮಣ' ಕೃತಿಯ ತೆಲುಗು ಅವತರಣಿಕೆ. ನನ್ನನ್ನು ಉದಾಸೀನದಿಂದ ನೋಡಿ ಅವನು ಮತ್ತೆ ಪ್ರಶ್ನಿಸಿದ ತೆಲುಗಿನಲ್ಲಿ, `ಈ ಪುಸ್ತಕ ಓದಿದ್ದೀರಾ? ಇದನ್ನು ಬರೆದದ್ದು ಯಾರು ಗೊತ್ತೆ? ಅವರು ಮಹನೀಯರು ಎಂದ.' ನಾನು `ಇದರ ಮೂಲ ಕನ್ನಡದ್ದು. ಇದನ್ನು ಬರೆದ ಶ್ರೀ ದೇವುಡು ನರಸಿಂಹಶಾಸ್ತ್ರಿಗಳು ನನಗೆ ಮಾವನಾಗಬೇಕು' ಎಂದೆ. ಕೂಡಲೇ ಆತನ ಕೋಪವೆಲ್ಲಾ ಮಾಯವಾಗಿ ಹೋಯಿತು. ಅವನು ಮೆತ್ತಗಾದ. `ನಾನು ನಿಮ್ಮ ವಿಷಯ ಏನು ಎಂದು ತಿಳಿಯದೆ ಏನೇನೋ ಮಾತನಾಡಿಬಿಟ್ಟೆ... ದಯವಿಟ್ಟು ಏನೂ ತಿಳಿದುಕೊಳ್ಳಬೇಡಿ. ಅದನ್ನೆಲ್ಲ ಮರೆತುಬಿಡಿ' ಎಂದು ಹೇಳಿ ಕ್ಷಮೆ ಕೋರಿದ. ಹೀಗೆ ದೇವುಡುರವರನ್ನು ದೂರದ ಕಾಶಿಯಲ್ಲಿ ನೆನಪು ಮಾಡಿಕೊಳ್ಳುವಂತಹ ಘಟನೆ ನಡೆಯಿತು.

★

ದೈತ್ಯಪ್ರತಿಭೆ

ದೈತ್ಯ ಪ್ರತಿಭೆಯ
ದಿವ್ಯ ಚೇತನವು ನೀವು ।
ಸ್ತುತ್ಯ ವಿಶ್ರುತ
ಭವ್ಯ ನೂತನವು ನೀವು ॥

ನಿತ್ಯ ಸತ್ಯದ ಪಾರದರ್ಶಕತೆಯುಡಿಯೆ।
ಕೃತ್ಯ ಕೃತಕೃತ್ಯತೆಯು ಪ್ರಾಂಜಲತೆ ಪಡೆಯೆ।
ಮಿಥ್ಯ ತಥ್ಯವ ಮಥಿಸಿ ಸಾರ್ಥಕತೆಯೊಡೆಯೆ।
ವ್ಯಕ್ತ - ಅವ್ಯಕ್ತಗಳ ಸೂಕ್ಷ್ಮತೆಯೊಳ್ ದುಡಿಯೆ।

ಸರಸ್ವತಿಯ ಸವಿಯೊಲುಮೆ
ಪಡೆದವರು ನೀವು।
ಸಿರಿ ಮತಿಯ ನಿಜದುಳುಮೆ
ಮಾಡಿಹಿರಿ ನೀವು ।
ದೇವುಡು ನಿಮಗಿದೊ
ಶಬ್ದ ಕುಸುಮಾಂಜಲಿ।
ದೇವುಡು ನಿಮಗಿದೊ
ಶುದ್ಧ ಪ್ರತಿಭಾಂಜಲಿ ।

- ಉದಯ ಧರ್ಮಸ್ಥಳ

ದಾರ್ಶನಿಕ ಸಾಹಿತಿ ದೇವುಡು ಅವರು

ಎನ್ಕೆ. ಕುಲಕರ್ಣಿ

ದೇವರು ಅಂದರೇನೆ `ದೇವುಡು'. `ಬಾಲನಂಥ ದೇವುಡು' ಎಂದು `ಅಂಬಿಕಾತನಯದತ್ತರು' ಕರೆದರು. ಆ ಅಮಾಯಕತೆಯೆ ದೇವುಡು.

`ದೇವರನ್ನು ಮರೆಯದಂತೆ।
ಗುರುವಿನಲ್ಲಿ ಬೆರೆಯುವಂತೆ।
ವಿನಯದಲ್ಲಿ ಮೆರೆಯುವಂತೆ।
ಬರಬೇಕು ದೇವುಡು॥

ಎಂದೂ ದೇವುಡು ಗುಣಗಾನ, ಗುಣ ಗೌರವದೊಂದಿಗೆ ಅದೇ ಕವಿ `ಅಂಬಿಕಾತನಯರು'

`ನಹುಷ ಯಾಜ್ಞವಲ್ಕ್ಯನಲ್ಲಿ।
ಸಮಿತ್‌ಪಾಣಿ ದೇವುಡು।
ಬ್ರಹ್ಮ-ಕ್ಷತ್ರ ಕುರುಕ್ಷೇತ್ರ! ಅದು
ಪವಿತ್ರ ದೇವುಡು॥

ಎಂದು ಈ `ಮಹಾಬ್ರಾಹ್ಮಣ', `ಮಹಾಕ್ಷತ್ರಿಯ' ಕರ್ತೃವಿನ ಹೆಗ್ಗಳಿಕೆಯನ್ನು ಹೊಗಳಿದ್ದಾರೆ.

ದೇವುಡು! ನಿಜವಾಗಿಯೂ ಕನ್ನಡಕ್ಕೆ ದೊಡ್ಡ ಹೆಸರು. ಆಧ್ಯಾತ್ಮ ವೇದಾಂತಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ತತ್‌ಸತ್ ಸಂಬಂಧಿಕ ಗ್ರಂಥ ರಚನೆ ಮಾಡಿದ ಮೇಧಾವಿಗಳು. `ಅಂತರಂಗ', `ಘಾಟಿಮುದುಕ'ದಂತಹ ಲಲಿತ ಸೃಜನ ಸಾಹಿತ್ಯ ನಿರ್ಮಾಣ ಮಾಡಿದ್ದು ಅವರ ಪ್ರಜ್ಞಾ ವೈವಿಧ್ಯ–ವಿಸ್ತಾರಗಳನ್ನು ತಿಳಿಯಪಡಿಸುತ್ತದೆ.

ನಾನು ಪೂಜ್ಯ ದೇವುಡು ಅವರ ಪರಿಚಯಕ್ಕೊಳಗಾಗುವ ಸುಮಾರು ಇಪ್ಪತ್ತು ವರ್ಷ ಪೂರ್ವದಿಂದಲೇ ಅವರ ಸಾಹಿತ್ಯ ಓದಿ ಅವರ ಅಭಿಮಾನಿಯಾಗಿ ಬೆಳೆದಿದ್ದೆ. ನಾನು ಅಕಾಶವಾಣಿಯ ಕಾರ್ಯಕ್ರಮ ನಿರ್ವಾಹಕನಾಗಿ ಬೆಂಗಳೂರು ಕೇಂದ್ರದಲ್ಲಿ ಕಾರ್ಯ ಮಾಡುತ್ತಿದ್ದಾಗ ಶ್ರೀ ಶಂಕರಾಚಾರ್ಯ, ರಾಮಾನುಜಾಚಾರ್ಯ ಮತ್ತು ಮಧ್ವಾಚಾರ್ಯರನ್ನು ಕುರಿತು `ದಕ್ಷಿಣದ ಸಾಧು ವೇದಾಂತಿಗಳು' ಎಂಬ ಒಂದು ವಿಶೇಷ ರೂಪಕ ಮಾಲೆಯನ್ನು ನಿಯೋಜಿಸಿ ನಾನೇ ಆ ಮೂರು ಸಾಕ್ಷಿ ಚಿತ್ರಗಳನ್ನು ಪ್ರೊಡ್ಯೂಸ್ ಮಾಡಬೇಕಾದ ಸಂದರ್ಭ. ಈ ರೂಪಕಗಳಿಗೆ ಸಾಕ್ಷಿತ್ವದ ಆಯಾಮ ಕೊಡಲು-ಶಂಕರಾಚಾರ್ಯರ `ಕಾಲಡಿ'ಯಿಂದ, ಶೃಂಗೇರಿಯಿಂದ; ಶ್ರೀರಾಮಾನುಜಾಚಾರ್ಯರ ಬಗ್ಗೆ ಶ್ರೀ ಪೆರಂಬುದೂರಿನಿಂದ, ಶ್ರೀರಾಮಾನುಜರು ಹೊಯ್ಸಳ ವಿಷ್ಣುವರ್ಧನನನ್ನು ಬಿಟ್ಟಿಗನನ್ನಾಗಿ ಮಾಡಿದ ಮೇಲುಕೋಟೆಯಿಂದ, ಶ್ರೀಮಾನ್ ಮಧ್ವಾಚಾರ್ಯರ ಬಗ್ಗೆ ಉಡುಪಿ, ಪಾಜಕಗಳಿಂದ ಸ್ಥಳೀಯ ಧ್ವನಿಮುದ್ರಣ, ಸಂದರ್ಶನ, ಅರ್ಚನ, ಮಂತ್ರಪಠನ ಮೊದಲಾದವುಗಳನ್ನೆಲ್ಲಾ ಟೇಪ್

ಮಾಡಿಕೊಂಡು ಬಂದು ಕಾರ್ಯಕ್ರಮದಲ್ಲಿ ಬೆರಸಲಾಗಿತ್ತು. ಶ್ರೀ ಆದಿಶಂಕರಾಚಾರ್ಯರ ಬಗ್ಗೆ ಶ್ರೀ ದೇವುಡು ನರಸಿಂಹಶಾಸ್ತ್ರಿಗಳೂ, ಶ್ರೀ ರಾಮಾನುಜರ ಬಗ್ಗೆ ಶ್ರೀ ಮಾಸ್ತಿಯವರೂ, ಶ್ರೀ ಮಧ್ವಾಚಾರ್ಯರ ಬಗ್ಗೆ ಶ್ರೀ ಸುಬ್ಬಣ್ಣ ಯಕ್ಕುಂಡಿ ಅವರ ರೂಪಕ-ಆಲೇಖಗಳನ್ನು ರಚಿಸಿ ಕಳಿಸಿದ್ದರು.

ಈ ಸಂದರ್ಭದಲ್ಲಿ ಶ್ರೀ ದೇವುಡು ಅವರು ರೂಪಕ ರಚನೆ ಮಾಡಿಕೊಟ್ಟಾಗ ಅವರ ನಿರ್ಮಾಣ ಪ್ರಕ್ರಿಯೆಯಲ್ಲಿ ನಾನು ಅನೇಕ ಸಲ ಅವರನ್ನು ಅವರ ಮನೆಯಲ್ಲಿ ಕಂಡು ಅವರ ಮೌಲಿಕ ಸಲಹೆ ಸೂಚನೆಗಳು ಪಡೆದುಕೊಳ್ಳುವ ಪ್ರಸಂಗಗಳು ಪ್ರಥಮ ಪರಿಚಯದಲ್ಲಿಯೇ ನಾನು ಧಾರವಾಡದವನೆಂದೂ ನಾನೂ ಒಬ್ಬ ಬರೆಹಗಾರನೆಂದೂ ತಿಳಿದಿದ್ದ ಶ್ರೀ ದೇವುಡು ಅವರು ಕವಿ ಬೇಂದ್ರೆ ಅವರ ಬಗ್ಗೆ ಆಗಾಗ ವಿಚಾರಿಸುತ್ತಿದ್ದರು. ತಾವು `ಕರ್ನಾಟಕ ಟಾಕೀಜ್'ಗಾಗಿ `ಚಿರಂಜೀವಿ' (ಮಾರ್ಕಂಡೇಯ) ಚಿತ್ರಕಥೆ-ಸಂಭಾಷಣೆ ಬರೆದು (೧೯೩೩)ತಾವು ಸ್ವತಃ ಅದರಲ್ಲಿ ಮೃಕಂಡು ಋಷಿಯ ಪಾತ್ರ ನಿರ್ವಹಿಸಿದುದು, ಮರಾಠಿ ನಿರ್ದೇಶಕ ಭಾವೆಯೆಂಬುವರ ಕೈಯಲ್ಲಿ ತಮ್ಮ ಕನ್ನಡ ಚಿತ್ರಕಥೆ ಸಿಕ್ಕು ತಾವು ಎಲ್ಲಾ ಇಂಗ್ಲಿಷ್‌ನಲ್ಲಿ ಚರ್ಚಿಸಬೇಕಾಗಿ ಬಂದ ವಿಷಯಾನೂ ಪ್ರಸ್ತಾಪಿಸಿದರು. `ಚಿರಂಜೀವಿ'ಯ ಇತರ ಪಾತ್ರಧಾರಿಗಳಾದ ಬಸವರಾಜು ಮನ್ಸೂರ್ (ನಾರದ), ಶಾರದಾ ಹಾನಗಲ್ (ವೀಣೆ), ಅಮೀರಬಾಯಿ ಕರ್ನಾಟಕಿ ಮೊದಲಾದವರ ಬಗೆಗೂ ಪ್ರಸ್ತಾಪಿಸುತ್ತಿದ್ದಾಗ ನಾನು ನಡುವೇ ಬಾಯಿ ಹಾಕಿ, `ದೇವುಡು ಅವರ ನಿಮ್ಮ ಚಿರಂಜೀವಿಯ ಪ್ರಥಮ ದೃಶ್ಯದ ಒಂದು ನಿಮ್ಮ ಮಾತು ಮಾತ್ರ ನನ್ನ ಮನದಲ್ಲಿ ಮನೆ ಮಾಡಿಬಿಟ್ಟಿದೆ' ಎಂದು ಹೇಳಿದಾಗ `ಯಾವುದಪ್ಪ ಅದು?' ಎಂದು ಕುತೂಹಲದಿಂದ ಪ್ರಶ್ನಿಸಿದಾಗ ನಾನು ಕಂಠೋಕ್ತವಾದ ಆ ವಾಕ್ಯ ಹೇಳಿದೆ. "ದುಃಖವು ದುಪ್ಪಟೆಯಂತೆ. ಹೊದ್ದುಕೊಂಡರೆ ಹೆಗಲ ಮೇಲೆ ಕೂರುತ್ತದೆ. ಎಸೆದರೆ ಮೂಲೆಯಲ್ಲಿ ಬಿದ್ದಿರುತ್ತದೆ" `ಭೇಷ್, ಭೇಷ್' ಎಂದು ನನ್ನ ಜ್ಞಾಪಕಶಕ್ತಿಯ ಕೌತುಕ ಮಾಡಿದರು. ನಾನೋ, `ಇದರಲ್ಲಿ ಎಂತಹ ದೊಡ್ಡ ಫಿಲಾಸಫೀನೇ ಹೇಳಿದ್ದೀರಿ. ದೇವುಡು ಅವರೆ! ಸಾಮಾನ್ಯ ಸಂಸಾರಿಗನಿಗೂ ಅರ್ಥ ಬೀರಿ, ಬೆಳಕು ಕೊಡಬಲ್ಲಂಥ ವೇದಸಮ ವಾಕ್ಯ ಇದು' ಎಂದು ಆ ವಾಕ್ಯ ನನ್ನ ಮೇಲೆ ಯಾಕೆ ಪರಿಣಾಮ ಬೀರಿತು ಎಂದೆಲ್ಲಾ ವಿವರಿಸಿದಾಗ ಶ್ರೀ ದೇವುಡು ಅವರಿಗೆ ತುಂಬ ಸಂತೋಷ. ಒಬ್ಬ ಲೇಖಕ, ಒಬ್ಬ ಕವಿಗೆ ರಸಿಕ ಸಹೃದಯತ್ವಕ್ಕಿಂತ ಹೆಚ್ಚಿನದೇನೂ ಬೇಕಾಗುವುದಿಲ್ಲ. ಶ್ರೀ ದೇವುಡು ಅವರು ನಾನೊಬ್ಬ ಆಕಾಶವಾಣಿ ನೌಕರ. ಅವರ ಬಳಿ ಅವರ ಬಾನುಲಿ ಬರಹದ ಸಲುವಾಗಿ ಬಂದಿದ್ದೇನೆಂಬ ಸಂಬಂಧ ಮಾತ್ರಕ್ಕೆ ತಮ್ಮ ಪ್ರೇಮವನ್ನು ಸೀಮಿತಗೊಳಿಸದೆ ಸಮಾನ ಹೃದಯಿಗಳಿಬ್ಬರ ಸ್ನೇಹ ನಿಸ್ಸೀಮತೆಯ ನಿಲುವಿನಿಂದ ಹೋದಾಗಲೆಲ್ಲಾ ಕಾಫಿ ಕೊಟ್ಟು ತಾಸುಗಟ್ಟಲೆ ಮಾತನಾಡುವರು.

ನಾನು ಯಾವಾಗಲೇ ಹೋಗಲಿ ಅವರು ಮನೆಯಲ್ಲೇ ಇರುವರು. ಕಾರಣ ಅವರಿಗೆ ಓಡಾಡುವುದು ಅಸಾಧ್ಯವಾಗಿತ್ತು. ಮಧುಮೇಹದ ಉಲ್ಬಣದಿಂದಾಗಿ ಅರ್ಧ ಕಾಲನ್ನೇ ಕತ್ತರಿಸಿಕೊಂಡು ಮನೆಯಲ್ಲಿ ಮಂಚದ ಮೇಲೆಯೇ ಮಲಗಿರುತ್ತಿದ್ದರು. ನಾನು ಹೋದಾಗಲೆಲ್ಲಾ ಪ್ರಸನ್ನರಾಗಿಯೇ ಇದ್ದು, ಪ್ರಸನ್ನ ಚಿತ್ತದಿಂದಲೇ ಮಾತನಾಡುತ್ತಿದ್ದರು. ತಮ್ಮ ಒಂದು ಕಾಲು ಊನವಾದ ಅಸಹಾಯಕ ಸ್ಥಿತಿಯಲ್ಲೂ ಅವರಿಂದ ಒಂದು ಜೋಕು: `ನೋಡಿ ಕುಲಕರ್ಣಿ, ಈ ಕುಂಟದಾಸ ಸೀಗ ವೈಕುಂಠ ಕಾಣಬೇಕು ಅಂತಿದ್ದಾನೆ' ಎಂದು ನಗುತ್ತ ತಮ್ಮ ಮೊಂಡಗಾಲನ್ನು ಕುಣಿಸುವರು! ಎಂತಹ

ಕರುಣೆ ಬೆರೆತ ಹಾಸ್ಯ! ನನಗೊ ಅಂತಃಕರಣದೊಳಗೆ ಅಲಗು ತಿರುವಿದ ನೋವು. ಆ ಮಾತು ಮರೆಸಲು ನಾನು, ಅವರ `ಮಹಾಬ್ರಾಹ್ಮಣ'ದ ಪ್ರಸ್ತಾಪವೆತ್ತಿ- `ಶಾಸ್ತ್ರಿಗಳೇ, ನಿಮ್ಮ ಈ ಕಾದಂಬರಿಯೊಳಗೆ, ವಿಶ್ವಾಮಿತ್ರನಿಗೆ ಗಾಯತ್ರಿ ಸಾಕ್ಷಾತ್ಕಾರವಾದ ಸನ್ನಿವೇಶವನ್ನು ಎಷ್ಟೊಂದು ಯಥಾವತ್ತಾಗಿ ಚಿತ್ರಿಸಿದ್ದೀರಿ. ನಿಜವಾಗಿಯೂ ನಿಮಗೆ ಗಾಯತ್ರೀ ಮಂತ್ರದ ಅನುಭಾವ, ಅನುಭೂತಿ ಉಂಟಾಗಿತ್ತೆ? ಅದು ಹೇಗೆ?' ಎಂದು ನಾನು ಪ್ರಶ್ನೆ ಮಾಡಿದಾಗಲಂತೂ ಶಾಸ್ತ್ರಿಗಳು ಮೊಂಡಗಾಲುಗಳ ಮೇಲೆಯೇ ಜಿಗಿದು ಕುಳಿತು ತಮಗೆ ಗಾಯತ್ರೀ ಮಂತ್ರದ ಅನುಭೂತಿಯ ಬಗ್ಗೆ ವಿವರಿಸಿದರು:

`ಮೈಸೂರಿನ ಕುಕ್ಕನಹಳ್ಳಿ ಕೆರೆ ನೀವು ನೋಡಿರಬೇಕಲ್ಲವೆ? ಪ್ರತಿದಿನ ಸಂಜೆ ಆ ಕೆರೆಯ ದಂಡೆಗೆ ಸೂರ್ಯಾಸ್ತದ ಸಮಯಕ್ಕೆ ಹೋಗುತ್ತಿದ್ದೆ. ಸಾಯಂಸಂಧ್ಯಾವಂದನೆ ಆಚರಿಸುತ್ತ ಗಾಯತ್ರಿಮಂತ್ರ ಹೇಳುತ್ತ ಗಂಟೆಗಟ್ಟಲೆ ಧ್ಯಾನಸ್ಥನಾಗಿ ಕುಳಿತು ಬಿಡುತ್ತಿದ್ದೆ ಕುಲಕರ್ಣಿ ಅವರೆ ! ಎಷ್ಟು ದಿನ ಹೀಗೆ ಮಾಡಿದೆನೊ, ಎಷ್ಟು ಗಂಟೆಕಾಲ ಒಪ್ಪಂದದಲ್ಲಿ ಧ್ಯಾನಸ್ಥನಾಗಿ ಕುಳಿತಿದ್ದೆನೋ! ಅಂತೂ ಒಂದು ದಿನ ವಿಶ್ವಾಮಿತ್ರನಿಗೊಲಿದ ಗಾಯತ್ರಿ ಮಂತ್ರದ ಮಹತಿ, ಸಾಕ್ಷಾತ್ಕಾರ ಮಹಿಮೆಗಳನ್ನು ಮನಗಂಡೆ! ನಾನೇ ವಿಶ್ವಾಮಿತ್ರಾದ ಅನುಭವವನ್ನು ಪಡೆದ ಅನುಭವ. ಆಗಿನ ನನ್ನ ಮನಃಸ್ಥಿತಿ ಹೇಗಾಗಿರಬೇಕು, ಅದನ್ನು ಮಾತಿನಲ್ಲಿ ಹೇಳಲಾರೆ ಮಿಸ್ಟರ್ ಕುಲಕರ್ಣಿ. ಆ ಒಂದು ಮಂತ್ರಮಯಶಕ್ತಿ ಅಂತಃಸ್ಫುರಣೆಗಳಿಂದ ವಿಶ್ವಾಮಿತ್ರನಾದ ಸಾಕ್ಷಾತ್ಕಾರದ ಅನುಭೂತಿಯನ್ನು ಪುಟಗಟ್ಟಲೆ ವರ್ಣಿಸಲಿಕ್ಕೆ ಸಮರ್ಥನಾದೆ. ವಿಶ್ವಾಮಿತ್ರ ಬ್ರಹ್ಮರ್ಷಿ ಪದವಿಯನ್ನು ಪಡೆದುದನ್ನು ಅಭಿವ್ಯಕ್ತಿಸುವ ಒಂದು ಸ್ವಾನುಭೂತಿ ಅದು!'... ಎಂದೆಲ್ಲಾ ವರ್ಣಿಸುವಾಗ ಶ್ರೀ ದೇವುಡು ನರಸಿಂಹಶಾಸ್ತ್ರಿಗಳು ವಿಶ್ವಾಮಿತ್ರರೇ ಮೈಯಲ್ಲಿ ಹೊಕ್ಕಂತೆ ಪರವಶರಾಗಿ ಮಾತನಾಡಿದ್ದನ್ನು ಮರೆಯಲಾರೆ. ನಾನೆಂದಿಗೂ ಮರೆಯಲಾರೆ.

ಹಾಗೆಯೇ ಅವರ `ಮಹಾಕ್ಷತ್ರಿಯ' ಅಕಾಡೆಮಿ ಪಾರಿತೋಷ ಪಡೆದ ಕಾದಂಬರಿಯಲ್ಲಿ ನಹುಷನ ಪಾತ್ರದಲ್ಲಿ ಅವರು ತುಂಬಿದ ಜೀವಂತಿಕೆ, ಸಪ್ತರ್ಷಿಗಳಿಂದ ವಾಹ್ಯವಾದ ಪಲ್ಲಕ್ಕಿಯಲ್ಲಿ ಕುಳಿತ ನಹುಷ ನುಡಿದ. ಸರ್ಪ ಸರ್ಪ ಎಂಬ ಅವಹೇಳನದ ಮಾತು ಋಷಿಯ ಶಾಪವನ್ನು ಪ್ರಕೋಪಿಸಿ ಸರ್ಪನಾದ ನಹುಷನ ಕಥೆಯನ್ನು ರೋಮಾಂಚಕವಾಗಿ ಹೇಳಿದರು. ನೂರು ಯಜ್ಞ ಮಾಡಿದ ನಹುಷ ಇಂದ್ರ ಪದವಿಯನ್ನು ಪಡೆದು, ಇಂದ್ರಾಣಿಗಾಗಿ ಕಾಮಿಸಿ ತನ್ನ ಭಂಗವನ್ನು ತಾನೇ ತಂದುಕೊಂಡ ಪುರಾಣಕಥೆಗೆ ಹೊಸ ಅರ್ಥಕೊಟ್ಟು, ತಾವು ನಿರೂಪಿಸಿದ ನಿರುಪಮ ಅನುಭವವನ್ನು ವಿವರಿಸಿದಾಗ ನನಗೆ ಪೂಜ್ಯ ದೇವುಡು ಅವರ ಬಗ್ಗೆ ಪೂಜ್ಯಭಾವ ಇನ್ನೂ ಹೆಚ್ಚಾಯಿತು.

ಶ್ರೀ ದೇವುಡು ಅವರು ಸಾಮಾಜಿಕ ಮನೋವೈಜ್ಞಾನಿಕ, ಕಥೆ ಕಾದಂಬರಿ ಬರೆದುದಕ್ಕಿಂತಲೂ ಮಹಾ ಬ್ರಾಹ್ಮಣ ಮಹಾಕ್ಷತ್ರಿಯಗಳಂತಹ ಕಾದಂಬರಿಗಳನ್ನು ಬರೆದ ಬಗೆಯನ್ನು ಪ್ರಥಮ ಪುರುಷ ಉವಾಚ ರೀತಿಯಲ್ಲಿ ಕೇಳಿದಾಗ ಅದ್ಭುತ ರೋಮಾಂಚನ ಪಡೆದೆ. ಅವರಿಗೆ ದೀರ್ಘದಂಡ ನಮಸ್ಕಾರ ಹಾಕಿದೆ. `ಈ ಕುಂಟನಿಗೇಕೆ ಈ ದೀರ್ಘದಂಡ ನಮಸ್ಕಾರವಪ್ಪ' ಎಂದು ಹರ್ಷಪುಲಕವನ್ನೇ ವರ್ಷಿಸಿದರು.

ಶ್ರೀ ದೇವುಡು ಅವರು ಆಕಾಶವಾಣಿಗಾಗಿ ಬರೆದ `ಆದಿಶಂಕರಾಚಾರ್ಯರನ್ನು ಕುರಿತ ತಮ್ಮ ರೂಪಕದಲ್ಲಿ ಅವರು ಸ್ಥಾಪಿಸಿದ ಪೀಠಗಳು ನಾಲ್ಕು-ಪೂರ್ವದಲ್ಲಿ ಪುರಿ, ಪಶ್ಚಿಮದಲ್ಲಿ ದ್ವಾರಕೆ, ಉತ್ತರದಲ್ಲಿ ಕಾಶ್ಮೀರ (ಬದರಿ?) ಮತ್ತು ದಕ್ಷಿಣದಲ್ಲಿ ಶೃಂಗೇರಿ ಎಂದು ಪ್ರತಿಪಾದಿಸಿದ್ದರು. ಕಾರ್ಯಕ್ರಮ ಪ್ರಸಾರವಾದ ಮೇಲೆ ಕೆಲವು ಶ್ರೋತೃಗಳು ಕಾಂಚೀ ಕಾಮಕೋಟಿ ಪೀಠವೂ ಶಂಕರಾಚಾರ್ಯ ಸ್ಥಾಪಿತವೆಂದು ಪತ್ರ ಬರೆದು ವಾದಿಸಿದ್ದರು. ಇದನ್ನು ಶ್ರೀ ದೇವುಡು ಅವರು ಸರ್ವಥಾ ಒಪ್ಪಲಿಲ್ಲ. ಆದಿ ಶಂಕರರು ಸ್ಥಾಪಿಸದ್ದು ನಾಲ್ಕು ದಿಕ್ಕುಗಳಿಗೆ ನಾಲ್ಕು ಅಮ್ನಾಯ ಪೀಠಗಳು ಎಂದೇ ತಮ್ಮ ಸ್ಪಷ್ಟ ಖಚಿತ ಅಭಿಪ್ರಾಯಕ್ಕೆ ಅಂಟಿಕೊಂಡರು. ಅದು ಸತ್ಯವೂ ಆಗಿತ್ತು. ದೇವುಡು ಅವರು ಸತ್ಯ ಆಧಾರಗಳಿಲ್ಲದೆ ಏನೂ ಬರೆಯುತ್ತಿದ್ದಿಲ್ಲ. `ಅನ್ನೋ ಜನಾ ಏನು ಅಂತಾನೆ ಇರತಾರೆ' ಎಂದು ಬೇಂದ್ರೆ ಹೇಳುವಂತೆ ಕರ್ನಾಟಕ ಟಾಕೀಜ ಧಾರವಾಡ, ಈ ಲಾಂಛನದಡಿಯಲ್ಲಿ (೧೯೩೩) ತಮ್ಮ `ಮಾರ್ಕಂಡೇಯ' ಚಿತ್ರಕಥೆ-ಸಂಭಾಷಣೆಗೆ ಬರೆದು ಶ್ರೀಮತಿ ಮಳವಳ್ಳಿ ಸುಂದರಮ್ಮನವರ ಜೊತೆಗೆ ಕಾಣಿಸಿಕೊಂಡ ದೇವುಡು ಅವರ ಅಭಿನಯ ಇತ್ಯಾದಿಗಳ ಬಗ್ಗೆ ಆಡಿಕೊಳ್ಳುವ ಜನರಿದ್ದರೆ ಅದಕ್ಕೆ ಅವರು ಸೊಪ್ಪು ಹಾಕಲಿಲ್ಲ. ಈ ಚಿತ್ರದಲ್ಲಿ ನಮ್ಮ ವ್ಯಾಯಾಮ ಪಟು ಧಾರವಾಡದ ಮಲ್ಲ... ಪ್ರೊ|| ಕೆ.ಜಿ. ನಾಡಗೀರ ಅವರು ೬೦ ವರ್ಷ ಹಿಂದೆ ಯಮನಾಗಿ ಕಾಣಿಸಿಕೊಂಡುದೊಂದು ವಿಶೇಷ.

★

ನಮ್ಮ ದೇವುಡು

ಶ್ರೀ ಸಿ.ಕೆ. ನಾಗರಾಜರಾವ್

ನನಗೆ ದೇವುಡು ಅವರಿಗೆ ಪರಿಚಯ ಹೇಗಾಯಿತು, ಸ್ನೇಹ ಹೇಗಾಯಿತು ಎಂಬುದೇ ಆಶ್ಚರ್ಯದ ಸಂಗತಿ. ನನಗೆ ಅವರಿಗೆ ವಯಸ್ಸಿನಲ್ಲಿ ೨೦ಕ್ಕೂ ಹೆಚ್ಚು ವರ್ಷ ಅಂತರ. ನನ್ನಲ್ಲಿ ಅವರು ಪ್ರೇಮ ತೋರಿಸಿದುದು ಈಗ ಮೂವತ್ತು ವರ್ಷಗಳ ಕೆಳಗೆ ಯಾವುದೋ ಒಂದು ನಾಟಕದಲ್ಲಿ ಅವರೊಡನೆ ಅತಿಪುಟ್ಟ ಪಾತ್ರವನ್ನು ರಂಗಭೂಮಿಯಲ್ಲಿ ಮಾಡಿದುದು. ಅಂದು ಅವರು ಮಾಡಿದುದು ಅತಿ ಮುಖ್ಯಪಾತ್ರ. ನಾನು ಮಾಡಿದುದು ಅತಿ ಪುಟ್ಟಪಾತ್ರ. ಚಕ್ರವರ್ತಿಗೂ ಬೀದಿಯ ಭಿಕ್ಷುಕನಿಗೂ ಇರುವಷ್ಟು ಅಂತರ ಪಾತ್ರಗಳ ಪ್ರಾಮುಖ್ಯತೆಯಲ್ಲಿ. ನನ್ನ ಅವರ ವಯಸ್ಸಿನಲ್ಲೂ ಅಷ್ಟೇ ಅಂತರವಿತ್ತು. ಜ್ಞಾನಾನುಭವಗಳಲ್ಲಿ ಸಹ ಅಷ್ಟೇ ಅಂತರವಿತ್ತು. ಆದರೂ ಅವರು ನನ್ನನ್ನು ತಮ್ಮ ಆಪ್ತ ಸ್ನೇಹಿತರಲ್ಲಿ ಒಬ್ಬನೆಂದು ಪರಿಗಣಿಸಿ ಸರಿಸಮಾನತೆಯನ್ನು ತೋರುತ, ನನ್ನನ್ನು ನಡೆಸಿಕೊಂಡರು. ಅಂದು ಅವರು ಒಂದು ಗಾದೆಯ ಮಾತನ್ನೇ ಹೇಳಿದರು ರಂಗಭೂಮಿಗೆ ಅನ್ವಯಿಸುವಂತೆ. "ಆಳಾಗಬಲ್ಲವ ಅರಸಾಗಬಲ್ಲ. ನೀವು ಅನತಿ ದೂರದಲ್ಲೇ ಮುಖ್ಯಪಾತ್ರಗಳನ್ನು ಯಶಸ್ವಿಯಾಗಿ ತೂಗಿಸಬಲ್ಲಿರಿ. ಆ ದಿಶೆಗೆ ಮುನ್ನಡೆಯಲು ಒಂದು ಸೂತ್ರವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ತನ್ನತನವನ್ನು ಮರೆತು ತಾನು ಬೇರೊಂದಾಗಿ ವಾಸ್ತವಿಕತೆಯ ಭ್ರಮೆಯನ್ನು ಹುಟ್ಟಿಸುವ ಕಲೆಗಾರಿಕೆಯನ್ನು ಗುರಿಯಾಗಿಟ್ಟುಕೊಂಡವನಿಗೆ ಶ್ರೇಯಸ್ಸಿದೆ, ಕೀರ್ತಿಯಿದೆ, ಮೆಚ್ಚಿಗೆಯಿದೆ"–ಎಂದು ಮುಂತಾಗಿ ಹೇಳಿ ನಿಷ್ಠೆಯಿಂದ ನಾನು ಕಾರ್ಯತತ್ಪರನಾಗುವಂತೆ ಮಾಡಿದರು.

ಚಿತ್ರಗಾರನ ವ್ಯಕ್ತಿತ್ವಕ್ಕಿಂತ, ಸಾಹಿತಿಯ ವ್ಯಕ್ತಿತ್ವಕ್ಕಿಂತ ಭಿನ್ನವಾದುದು ನಟನ ವ್ಯಕ್ತಿತ್ವ. ಚಿತ್ರಗಾರನಲ್ಲೂ ಕಲೆಯಿದೆ, ಸಾಹಿತಿಯಲ್ಲೂ ಕಲೆಯಿದೆ. ಆದರೆ ತನ್ನ ಕಲಾಪ್ರದರ್ಶನದ ಸಮಯದಲ್ಲಿ ಆ ಕಲೆಯ ಆನಂದವನ್ನು ಆಸ್ವಾದಿಸುವ ಪ್ರೇಕ್ಷಕನ ನೇರ ಸಂಪರ್ಕ ನಟನಿಗಿರುವಂತೆ ಅವರಿಗಿಲ್ಲ. ಇದೊಂದೇ ವ್ಯಕ್ತಿತ್ವದ ಭಿನ್ನತೆಗೆ ಮೂಲಕಾರಣವಾಗುತ್ತದೆ. ಈ ಭಿನ್ನತೆಯ ಕಾರಣವಾಗಿ ನಿಜವಾದ ನಟನಾದವನಲ್ಲಿ ಹೃದಯವೈಶಾಲ್ಯ ತಾನೇತಾನಾಗಿ ಮೈಗೂಡಿಕೊಂಡಿರುತ್ತದೆ. ಆ ಹೃದಯ ವೈಶಾಲ್ಯತೆಯಲ್ಲಿ ವಯಸ್ಸಿನ ವ್ಯತ್ಯಾಸಕ್ಕೆ ಎಡೆಯಿಲ್ಲ. ತಾನು ಅನುಭವಿಸುವ ರುಚಿಯನ್ನು, ಆನಂದವನ್ನು ತನ್ನವರೂ ಹಂಚಿಕೊಳ್ಳಬೇಕೆಂಬ ಮನೋಭಾವ, ಈ ಕಾರಣವಾಗಿ, ಶ್ರೇಷ್ಠನಾದ ನಟನಲ್ಲಿ ನೆಲೆಯೂರಿರುತ್ತದೆ. ಅದಕ್ಕೇ ಇರಬಹುದು ತಮ್ಮ ಮನೆಯಲ್ಲಿ ಹಾಕಿದ ಉಪ್ಪಿನಕಾಯಿ ತುಂಬ ರುಚಿಯಾಗಿತ್ತೆಂದು ಅದರ ರುಚಿ ನಾನು ಅನುಭವಿಸಬೇಕೆಂದು ಮನೆಯಿಂದ ಹೊತ್ತು ತಂದುಕೊಟ್ಟರು. ಅದರ ಹಿಂದೆ ಅಡಗಿರುವ ಪ್ರೇಮ ಎಂತಹುದು? ಅದಕ್ಕೆ ಬೆಲೆ ಕಟ್ಟುವವರು ಯಾರು? ಹೀಗೆ ಬೆಳೆದುಬಂತು ನನ್ನ ದೇವುಡು ಅವರ ಸ್ನೇಹ. ಸಾಹಿತ್ಯ ಕ್ಷೇತ್ರದಲ್ಲಿ, ರಂಗಭೂಮಿಯಲ್ಲಿ, ಪತ್ರಿಕಾ ವ್ಯವಸಾಯದಲ್ಲಿ, ಸಹಕಾರ ಸಂಸ್ಥೆಗಳಲ್ಲಿ, ವಯಸ್ಕರ ಶಿಕ್ಷಣ ಸಮಿತಿಯಲ್ಲಿ ನಾವು ಉಭಯರೂ ಕೆಲಸಮಾಡುವ ಅನೇಕ ರಸ, ಸನ್ನಿವೇಶಗಳು ದೊರೆತು ಅವರ ವ್ಯಕ್ತಿತ್ವ ಎಂತಹುದು ಎಂಬುದನ್ನು

ನಾನು ಮನಗಂಡಿದ್ದೇನೆ. ಒಂದೇ ಮಾತಿನಲ್ಲಿ ಹೇಳುವುದಾದರೆ ದೇವುಡು ಬರೀ ವ್ಯಕ್ತಿಯಾಗಿರಲಿಲ್ಲ ಶಕ್ತಿಯಾಗಿದ್ದರು.

ಅವರ ವಾಜಶ್ರವಸ, ಬುದ್ಧ, ತೆನಾಲಿ ರಾಮಕೃಷ್ಣ ಈ ಮೂರು ಪಾತ್ರಗಳನ್ನು ನಾನು ಎಂದೆಂದಿಗೂ ಮರೆಯಲಾರೆ. ವಾಜಶ್ರವಸ, ಮಹರ್ಷಿಯಾದರೂ ರಾಜಸ ಸ್ವಭಾವದಿಂದ ತುಂಬಿತುಳುಕುವ, ಅಹಂಸಂಯುತವಾದ ವ್ಯಕ್ತಿತ್ವವು ಪ್ರಸಂಗಾನುಸಾರವಾಗಿ ರೋಷಾವಿಷ್ಟವಾಗುವುದೂ, ಶೋಕ ಪರಿತಾಪಗಳಿಂದ ಹಣ್ಣಾಗುವುದೂ, ತನ್ನೊಂದು ಅಕಾರ್ಯದಿಂದ ಚಿತ್ತಭ್ರಾಮಕ ಸ್ಥಿತಿಗೆ ಬರುವುದೂ ಈ ಎಲ್ಲವನ್ನೂ ದೇವುಡು ಸಾಟಿಯಿಲ್ಲದ ಜಾಣ್ಮೆಯಿಂದ ನಿಖರತೆಯಿಂದ ಮೂಡಿಸಿದರು. ಆ ಪಾತ್ರಕ್ಕೂ ಬುದ್ಧನ ಗಂಭೀರ ಶಾಂತ ವ್ಯಕ್ತಿತ್ವದ ಪಾತ್ರಕ್ಕೂ ಸಂಬಂಧವೇ ಇಲ್ಲ. ವಾಜಶ್ರವಸನ ವಾಸನೆಯೂ ಇಲ್ಲಿ ಸುಳಿಯುವುದಿಲ್ಲ, ಅಂತೆಯೇ ರಾಮಕೃಷ್ಣನ ಪಾತ್ರ ಅದಕ್ಕೆ ಒಂದು ಹೊಸ ಮೆರುಗನ್ನೇ ದೇವುಡು ಕೊಟ್ಟರು. ನನ್ನ ಒಂದು ಮಹದ್ಭಾಗ್ಯವೆಂದರೆ ಈ ರಾಮಕೃಷ್ಣನ ಪಾತ್ರವನ್ನು ಇಬ್ಬರು ಮಹಾಪಂಡಿತರು ನಿರ್ವಹಿಸಿದುದನ್ನು ನೋಡಿದುದು. ಶ್ರೀ ದೇವುಡು ಅವರ ನಿರ್ವಹಣೆ ಶ್ರೀ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳ ನಿರ್ವಹಣೆ ಇಬ್ಬರ ಮಾರ್ಗವೂ ಬೇರೆಬೇರೆ. ಅನುಕರಣೆಯ ಲವಲೇಶವೂ ಇಲ್ಲ. ಆದರೆ ಇಬ್ಬರೂ ಮೂಲ ನಾಟಕಕಾರನ ಪಾತ್ರವನ್ನು ತಮ್ಮದೇ ಆದ ರೀತಿಯಲ್ಲಿ ಚೊಕ್ಕವಾಗಿ ನಮ್ಮ ಮುಂದೆ ನಿಲ್ಲಿಸಿದರು. ಕಲೆಗಾರಿಕೆಯ ಸಿರಿವಂತಿಕೆಯನ್ನು, ವ್ಯಕ್ತಿತ್ವವನ್ನು, ಸೃಷ್ಟಿಸಿದ ಪಾತ್ರವನ್ನು ತಕ್ಕಡಿಯಲ್ಲಿ ತೂಗುವುದಕ್ಕೆ ಆಗುವಂತಿದ್ದಿದ್ದರೆ ಈ ಇಬ್ಬರು ಮಹನೀಯರ ಪಾತ್ರಗಳನ್ನೂ ಇಟ್ಟುತೂಗಿದ್ದರೆ ಅದರಲ್ಲಿ ಚಾಚೂ ವ್ಯತ್ಯಾಸವಿಲ್ಲದ ಸಮತೂಕ ಕಂಡು ಬರುತ್ತಿತ್ತು. ಕಣ್ಣಿಗೆ ತೀರಾ ಭಿನ್ನವಾಗಿ ಕಂಡರೂ, ಯೋಗ್ಯತೆ ಪಾತ್ರಪೋಷಣೆಯಲ್ಲಿ ಒಂದೇ! ಈ ಸಂದರ್ಭದಿಂದ ಅನುಕರಣೆ ಮಾಡದೆ ಪ್ರತಿ ನಟನೂ ತನ್ನದೇ ಆದ ವಿಶಿಷ್ಟ ಮಾರ್ಗವನ್ನು ಕಲ್ಪಿಸಿಕೊಳ್ಳಬೇಕೆಂಬುದು ನನ್ನ ಅನುಭವಕ್ಕೆ ಬಂತು. ಈ ಇಬ್ಬರು ಮಹನೀಯರ ಹಾರ್ದಿಕ ಸ್ನೇಹ ಪಡೆದ ನಾನು ನಿಜವಾಗಿ ಭಾಗ್ಯಶಾಲಿ. ಅವರೊಡನೆ ಕಳೆದ ದಿನಗಳು, ಗಂಟೆಗಳು, ನಿಮಿಷಗಳು ಎಲ್ಲಾ ರಸಮಯವಾದುವುಸ್ಫೂರ್ತಿದಾಯಕವಾದುವು. ಇಬ್ಬರು ಮಹನೀಯರು ಇಂದು ನಮ್ಮೊಡನೆ ಇಲ್ಲದಿದ್ದರೂ ಅವರ ಸ್ಮರಣೆ ನಮ್ಮಲ್ಲಿ ಸ್ಫೂರ್ತಿಯನ್ನು ನಿಜಕ್ಕೂ ಹೊಮ್ಮಿಸುತ್ತದೆ.

ದೇವುಡುರವರ ಅಭಿನಯದ ವಿಷಯ ಹೇಳುವಾಗ ಒಂದೆರಡು ಸಂದರ್ಭ ನೆನಪಾಗುತ್ತದೆ. ಮೊದಲನೆಯ ಸಲ ನಚಿಕೇತ ನಾಟಕವನ್ನು ಆಡಿ ಮನೆಗೆ ಹಿಂತಿರುಗಿದಂದು ರಾತ್ರಿ ಅವರ ಮನೆಯಲ್ಲೇ ನನಗೆ ಊಟ. ಅವರ ತಾಯಿ ಹಣ್ಣು ಮುದುಕಿ ಊಟಕ್ಕೆ ಬಡಿಸುತ್ತ "ದೇವುಡು ಈಪದ್ದು ನೇನು ನಿಜಂಗಾ ದೇವುಡೂನಿ ಚೂಸ್ತಿ" ಎಂದರು. ಅವರೂ ನಾಟಕಕ್ಕೆ ಬಂದಿದ್ದರು. ತಾನು ತಾನಲ್ಲದಾಗಿ, ತಾನು ಬೇರೊಂದಾಗಿ ಇರಬಲ್ಲ ವ್ಯಕ್ತಿ, ಕಾಣಬಲ್ಲ ವ್ಯಕ್ತಿ, ಹೆತ್ತ ತಾಯಿಯ ಅರಿವಿಗೆ ಬಾರದಿದ್ದ ವ್ಯಕ್ತಿ, ಅಂತಹ ಒಂದು ಹೊಸಾ ವ್ಯಕ್ತಿಯನ್ನು ಆ ತಾಯಿ ಅಂದು ತಮ್ಮ ಮಗನಲ್ಲಿ ಕಂಡಿರಬೇಕು. ಸಂಪ್ರದಾಯ ಶರಣರು ದೇವುಡು ಮನೆಯಲ್ಲಿನ ಆಚಾರ ನಡವಳಿಕೆಗಳು, ಅನೂಚಾನವಾಗಿ ನಡೆದುಬಂದ ರೀತಿಯಲ್ಲಿ ನಡೆಯಬೇಕೆಂಬುದು ಅವರ ಮನೋಧರ್ಮ. ಅವುಗಳಲ್ಲಿ ಅವರಿಗೆ ಅಚಲವಾದ ಶ್ರದ್ಧೆ, ನಂಬಿಕೆ. ಒಟ್ಟಿನಲ್ಲಿ ವೈದಿಕ ಸಂಸ್ಕೃತಿಯ ಆಶ್ರಿತರು ದೇವುಡು. ಅದರಿಂದ ಯಮ ಪಾತ್ರವನ್ನು ನಿರ್ವಹಿಸಿದ ದಿವಸ ಅವರು ಶಾಂತ್ಯೋಪಾಸನೆ ಮಾಡುತ್ತಿದ್ದರು.

ದೇವುಡು ಅನೇಕ ಸಂಸ್ಥೆಗಳಲ್ಲಿ ದುಡಿದರು. ಹೊಸ ಸಂಸ್ಥೆಗಳನ್ನು ಹುಟ್ಟುಹಾಕಿದರು. ಯಾವುದರಲ್ಲೂ ಕಡೆಯವರೆಗೆ ಇರಲಿಲ್ಲ. ನಡುವಿನಲ್ಲಿ ಕೈಬಿಟ್ಟರು ಎಂಬ ಆರೋಪ ಅವರ ಮೇಲಿದೆ. ಅವರು ಕೈಬಿಡಲಿಲ್ಲ, ಅದಕ್ಕೆ ಅಂಟಿಕೊಂಡು ಅವರು ಕೂಡಲಿಲ್ಲ. ಅದು ಬಿಟ್ಟರೆ ಗತಿಯಿಲ್ಲ ಎಂಬ ದುರ್ಬಲ ಮನೋಭಾವವಲ್ಲ ದೇವುಡುರವರದು. ಕುತಂತ್ರದಿಂದ, ಕುಹಕದಿಂದ ತನ್ನ ಸುತ್ತಲಿನ ಜನಸಿದ್ಧವಾದ ಒಂದು ಸಂಸ್ಥೆಯನ್ನು ತನ್ನಿಂದ ಕಸಿದುಕೊಂಡರೆಂದು ಅವರು ಎಂದೂ ಪರಿತಾಪಪಡಲಿಲ್ಲ. ಆ ಕುತಂತ್ರಿಗಳನ್ನು ಕಂಡು, ಅವರ ಪರಿಶೋಚನೀಯ ಮನೋಭಾವವನ್ನು ಕಂಡು ಅವರು ಮರುಗಿದರು. ಆದರೆ ಅಂತಹ ನೂರಾರು ಸಂಸ್ಥೆಗಳನ್ನು ಕಟ್ಟುವ ಶಕ್ತಿ ದೇವುಡುವಿನಲ್ಲಿ ಇದೆ, ಅದು ಎಂದಿಗೂ ಕುಂದದ ಶಕ್ತಿ ಎಂಬ ಸ್ವಾಭಿಮಾನ ಅವರಲ್ಲಿ ತುಂಬಿತ್ತು. ಅದನ್ನು ದುರಭಿಮಾನವೆಂದು ಹೇಳಿದವರೂ ಉಂಟು. ಅಂತಹ ಮಾತನ್ನು ಅವರು ಕೇಳಿ ಹುಸಿನಗೆಯಲ್ಲಿ ಅದನ್ನು ಮರೆತದ್ದೂ ಉಂಟು.

ತನ್ನ ಯೋಗ್ಯತೆ ಸಾಮರ್ಥ್ಯಗಳನ್ನು ದೇವುಡು ಅರಿತಿದ್ದರು. ಎಂತಲೇ ಅವರು ಒಬ್ಬರ ಅಡಿಯಾಳಾಗಿ ಬಾಳಲು ಹಿಂಜರಿದರು. ಸ್ವಾವಲಂಬಿಯಾಗಿ, ಸ್ವತಂತ್ರವಾಗಿ ಬಾಳಿದರು. ನಮ್ಮ ದೇಶದಲ್ಲಿ, ನಮ್ಮ ಈ ಜನಗಳ ನಡುವೆ, ಹಾಗೆ ಬಾಳಬೇಕಾದರೆ ಬಹಳ ಕೆಚ್ಚುಬೇಕು. ಅವರಲ್ಲಿ ಅಂತಹ ಕೆಚ್ಚು ಇತ್ತು. ಆ ಕೆಚ್ಚಿನ ಪ್ರತಿರೂಪವೇ ಅವರ "ಮಹಾ ಬ್ರಾಹ್ಮಣ".

ಬಹುಮುಖವಾದ ಅವರ ಪ್ರತಿಭೆಗೆ ತಕ್ಕ ಮನ್ನಣೆ ನಾವು ಅವರಿಗೆ ನೀಡಿಲ್ಲವೆಂಬುದು ಸರ್ವವಿದಿತವಾದ ವಿಷಯ. ನಮಗೆ ಯಾವ ಶಾಪವೋ ತಿಳಿಯದು. ನಿಜದ ನೆಲೆಯನ್ನರಿಯದೆ, ಯೋಗ್ಯತೆಯ ಆಳವನ್ನರಿಯದೆ, ಮನ್ನಣೆಗೆ ಪಾತ್ರವಾಗುವ ನಿಜವಾದ ಯೋಗ್ಯತೆಗಳನ್ನೂ ಮರೀಚಿಕೆಗಳೆಂದು ಭಾವಿಸಿ, ಮರೀಚಿಕೆಗಳೇ ಯೋಗ್ಯತೆಯ ಗಣಿಗಳೆಂದು ತಿಳಿದು ನಡೆದುಕೊಳ್ಳುತ್ತಿದ್ದೇವೆ. ಬೇರೆ ದೇಶಗಳಲ್ಲಿ ಇಂತಹ ಪ್ರತಿಭಾವಂತರನ್ನು ನಾಡು, ನಾಡಿನ ಜನತೆ ತಮ್ಮ ಪಾಲಿನ ಭಾಗ್ಯವೆಂದು ಪರಿಗಣಿಸಿ ಕಾಪಾಡುತ್ತದೆ. ನಮ್ಮಲ್ಲಿ ಈ ದಿಶೆಯಲ್ಲಿ ಉದಾಸೀನತೆ ಮಾತ್ರ ತುಂಬಿತುಳುಕುತ್ತಿದೆ, ಈ ಮಾತನ್ನು ಹೇಳುವಾಗ ಮತ್ತೆ ನನಗೆ ಒಂದು ದುಃಖದ ಪ್ರಸಂಗ ನೆನಪಿಗೆ ಬರುತ್ತದೆ. ಶ್ಲೋಕಸಂಗೀತ, ಗಮಕವಿದ್ವಾನ್ ಕಳಲೆ ಸಂಪತ್ಕುಮಾರಾಚಾರ್ಯರನ್ನು ಉದಾಸೀನದಿಂದ, ಅಲಕ್ಷ್ಯದಿಂದ ನಮ್ಮ ಜನತೆ ಕಳೆದುಕೊಂಡಿತು. ಅಂತಹ ದೈವದತ್ತವಾದ ಶಾರೀರ ಹಿಂದೆ ಇರಲಿಲ್ಲ, ಮುಂದೆ ಬರಲಾರದು.

ಶರೀರವನ್ನು ನಾವೇ ಝಾಡಿಸಿ, ಆ ಪ್ರಾಣವಾಯುವನ್ನು ಅಲ್ಲಿಂದ ಓಡಿಸಿ ಆಮೇಲೆ ಮಹಾ ಭಾಗ್ಯವನ್ನು ಕಳೆದುಕೊಂಡೆವು ಎಂದು ನಾವು ಹೇಳುತ್ತೇವೆ–ಕಣ್ಣೀರಿಡುತ್ತೇವೆ. ಅವರ ಸ್ಮರಣೆಗಾಗಿ ಏನನ್ನಾದರೂ ನಿರ್ಮಾಣ ಮಾಡುತ್ತೇವೆ ಎನ್ನುತ್ತಾರೆ, ಜನ. ಅದೂ ಬಾಯಿಮಾತಿನಲ್ಲಿ ಮಾತ್ರ–ಕೃತಿಯಲ್ಲಿ ಇಲ್ಲ. ವರದಾಚಾರ್ಯರ ಕಾಲದಿಂದ ಹಿಡಿದು ಇಲ್ಲಿಯವರೆಗೆ ಅನೇಕಾನೇಕ "ಮೆಮೋರಿಯಲ್"ಗಳ ಉದ್ವೇಗಪೂರಿತವಾದ ಮಾತುಗಳು ವೇದಿಕೆಯ ಮೇಲೆ ತರುಮಿಕೊಂಡು ಬಂದಿವೆ. ಆದರೆ ಅವೆಲ್ಲ ಈಗ ಗಾಳಿಯಲ್ಲಿ ಲೀನವಾಗಿದೆ. ಈ ಮೆಮೋರಿಯಲ್‌ಗಳಿಗಿಂತ ಜೀವಂತ ಪ್ರತಿಭೆ ಬದುಕಿ ಬಾಳುವಂತೆ ಒಂದು ಯೋಜನೆಯನ್ನು ಸರ್ಕಾರ ಜನತೆ ಹಾಕಿಕೊಂಡರೆ ಒಳಿತು.

ಸದಾ ಚಟುವಟಿಕೆಯಿಂದ ತುಂಬಿದ ಚೈತನ್ಯ ದೇವುಡೂರವರದು. ಅವರದ್ದೇ ಆಶೆಗಳಲ್ಲಿ ಬಹುಮಟ್ಟಿಗೆ ಎಲ್ಲವೂ ಪೂರೈಸಿತು. ಎರಡು ಮಾತ್ರ ಅಪೂರ್ಣವಾಗಿ ಉಳಿದುವು. ಶಂಕರರ ಮೇಲೆ ಬರೆಯಬೇಕೆಂದಿದ್ದ ಉದ್ಗ್ರಂಥ ಮತ್ತು ಗುರುಕುಲಸ್ಥಾಪನೆ. ಶಂಕರರ ಬಗೆಗೆ ಬರೆವ ಗ್ರಂಥಕ್ಕೆ ಸಹಾಯವಾಗಬಹುದೆಂಬ ಭಾವನೆಯಿಂದ ಶಂಕರರ ಮೇಲೆ ರಚಿತವಾದ ಒಂದು ಹಿಂದಿ ಗ್ರಂಥವನ್ನು ನಾನು ಅವರಿಗೆ ತೆಗೆದುಕೊಂಡು ಹೋಗಿ ಕೊಟ್ಟೆ. ಅದೇ ಅವರ ನನ್ನ ಕಡೆಯ ಸಂದರ್ಶನ. ಆಮೇಲೆ ನಾನು ಪ್ರವಾಸದಲ್ಲಿರಬೇಕಾಯಿತು. ನನಗೆ ಅವರು ಸ್ವರ್ಗವಾಸರಾದ ಸುದ್ದಿ ಸಿಡಿಲಿನಂತೆ ಮುಟ್ಟಿತು. ಅವರ ಗ್ರಂಥ ಮುಗಿದಿದ್ದರೆ ಅವರ ಬಾಳಿಗೆ ಒಂದು ಪೂರ್ಣತೆ ಬರುತ್ತಿತ್ತು. ಆ ಕೊರತೆ ಹಾಗೆಯೇ ಉಳಿಯಿತು.

ಕನ್ನಡನಾಡಿನ ಇತಿಹಾಸಕ್ಕೆ ಸಂಬಂಧಿಸಿದ ವಸ್ತುವನ್ನು ಆರಿಸಿಕೊಂಡು ಆಧುನಿಕ ಕನ್ನಡ ಕಾದಂಬರಿ ಪ್ರಪಂಚಕ್ಕೆ ಐತಿಹಾಸಿಕ ಕಾದಂಬರಿಯ ನವೀನ ಸ್ವರೂಪವನ್ನು ಕೊಟ್ಟ ಕೀರ್ತಿ ಅವರ "ಮಯೂರ"ದಿಂದ ಶ್ರೀ ದೇವುಡು ಅವರಿಗೆ ಲಭಿಸುತ್ತದೆ. ಮನೋವಿಶ್ಲೇಷಣಾತ್ಮಕವಾದ ಜಾಡು, ಕಾದಂಬರಿ ರಚನೆಗೆ ಪ್ರೌಢತೆಯ ಮೆರಗನ್ನು ತಂದು ಕೊಡುತ್ತದೆಯೆಂದು "ಅಂತರಂಗ" ರಚಿಸಿ ದೇವುಡು ನಮಗೆ ತೋರಿಸಿಕೊಟ್ಟಿದ್ದಾರೆ.

ಪುರಾಣ ಪುರಾಣವಲ್ಲ. ಅಮಾನುಷವಾದುದೇ ಅದರಲ್ಲಿ ತುಂಬಿಲ್ಲ. ಅದು ಸಹ ಮಾನವ ಸಹಜವಾದ ವ್ಯಕ್ತಿಗಳಿಂದ, ಚಿತ್ತವೃತ್ತಿಗಳಿಂದ ತುಂಬಿದೆ ಎಂಬುದನ್ನು ಅವರು "ಮಹಾಬ್ರಾಹ್ಮಣ" ಮೊದಲಾದ ಕಾದಂಬರಿಗಳಿಂದ ನಮಗೆ ತಿಳಿಸಿದ್ದಾರೆ. ಗಂಡು-ಹೆಣ್ಣಿನ ಸಂಬಂಧದಲ್ಲಿ ಪಾವಿತ್ರ್ಯತೆ, ಅಪಾವಿತ್ರ್ಯತೆ ಇದೆಯೆಂಬುದನ್ನು ಸಮಾಜ ಒಪ್ಪಿಕೊಂಡಿದೆ. ಒಂದೊಂದು ಸಮಾಜದ ಅಳತೆಗೋಲು ಈ ದಿಶೆಯಲ್ಲಿ ಭಿನ್ನವಾದರೂ ಪಾವಿತ್ರ್ಯತೆ ಅಪಾವಿತ್ರ್ಯತೆ ಇದೆಯೆಂಬುದನ್ನು ಎಲ್ಲ ಸಮಾಜವೂ ಒಪ್ಪಿಕೊಂಡಿದೆ. ಅಪಾವಿತ್ರ್ಯತೆಯನ್ನು ಪಾವಿತ್ರ್ಯತೆ ಎಂದು ಸಮರ್ಥನೆ ಮಾಡಹೊರಟ ಸಾಹಿತ್ಯವನ್ನು ನಾವು ಅಶ್ಲೀಲವೆಂದು ಹೇಳತೊಡಗಿದ್ದೇವೆ. ಏಕೆಂದರೆ ಅದರಲ್ಲಿ ಹೇಸಿಗೆ ತರುವ ನಗ್ನತೆ ತಾಂಡವವಾಡುತ್ತದೆ. ಶ್ರೀ ದೇವುಡು ಅವರು ಎರಡೂ ಬಗೆಯ ಗಂಡು ಹೆಣ್ಣುಗಳ ಸಂಬಂಧವನ್ನೂ ಚಿತ್ರಿಸಿದ್ದಾರೆ. ಆದರೆ ಅವುಗಳಲ್ಲಿ ದೇವುಡುತನ ಎದ್ದು ಕಾಣುತ್ತದೆ. ಪಾವಿತ್ರ್ಯತೆಯ ಚಿತ್ರದಲ್ಲಿ ಅವರು ಅತಿ ಮೇಲ್ಮಟ್ಟಕ್ಕೆ ಹೋಗುತ್ತಾರೆ. ಅಪಾವಿತ್ರ್ಯವೆನ್ನಿಸಬಹುದಾದ ಸನ್ನಿವೇಶದ ಸುತ್ತಲೂ ಇರಬಹುದಾದ ಹೇಸಿಗೆಯನ್ನು ದೂರಮಾಡಿ, ನಗ್ನತೆ ಇಲ್ಲದಂತೆ ಮಾಡಿ, ಮನಸ್ಸಿಗೆ ಹಿತವೆನಿಸುವ ಆದರೂ ಅಡ್ಡದಾರಿಗೆ ಮನಸೋಲದಂತಹ ಉನ್ನತ ಅಭಿರುಚಿಯನ್ನು ಹುಟ್ಟಿಸಿ ಪಾವಿತ್ರ್ಯತೆಯ ಕಡೆಗೆ ಒಲವನ್ನುಂಟುಮಾಡುವ ರೀತಿಯಲ್ಲಿ ಅವರು ಚಿತ್ರಿಸುತ್ತಾರೆ.

ಬೇರೊಬ್ಬ ಅವರಂತೆ ಕಷ್ಟಕಾರ್ಪಣ್ಯಗಳನ್ನು ಇದಿರಿಸಿದ್ದರೆ ನಿರಾಶಾವಾದಿಗಳೋ, ಉನ್ಮತ್ತರೋ ಆಗುತ್ತಿದ್ದರು. ಆದರೆ ಅವರ ಚಿತ್ತಸ್ಥೈರ್ಯ, ಅದ್ವೈತ ಸಿದ್ಧಾಂತದಲ್ಲಿ ಅವರಲ್ಲಿ ನೆಲಸಿದ್ದ ನಂಬಿಕೆ ಅವರ ಧೈರ್ಯವನ್ನು ಎಂದೂ ಕಲಕಲು ಎಡೆಕೊಡಲಿಲ್ಲ. ಅವರು ಕಡೆಯವರೆಗೆ ಆಶಾವಾದಿಗಳಾಗಿಯೇ ಇದ್ದರು. ಅವರ ಈ ಆದರ್ಶವೇ ನಮ್ಮ ಬಾಳಿನ ಆಶಾದೀವಿಗೆಯಾಗಲಿ.

★

ಸೀಮಾಪುರುಷ ದೇವುಡು

ದ.ಬಾ. ಕುಲಕರ್ಣಿ

ಮಹಾ ಬ್ರಾಹ್ಮಣ !
ಮಹಾ ಕ್ಷತ್ರಿಯ !!
ಮಹಾ ದರ್ಶನ !!!

ಕನ್ನಡಕ್ಕೆ ಮೂರು ಮಹಾ ಕಾದಂಬರಿಗಳನ್ನಿತ್ತ ದೇವುಡು ಕಾಲವಾದರು. ದೇವಲೋಕ, ಮರ್ತ್ಯಲೋಕಕ್ಕೆ, ಸೇತುವೆ ಕಟ್ಟಿತೋರಿದ ದೇವುಡು ಇನ್ನೆಲ್ಲಿ? ಅವರು ಬರೆಯಬೇಕೆಂದಿದ್ದ ಆಚಾರ್ಯ ಶಂಕರರನ್ನು ಕುರಿತಾದ ಪುಸ್ತಕವನ್ನು ಇನ್ನಾರು ಬರೆದಾರು?

ದೇವುಡು ಅವರಂತೆ ವೇದ-ವೇದಾಂಗ, ತರ್ಕ ಮೀಮಾಂಸೆಗಳನ್ನರಿತವರು ಭಾರತದಲ್ಲಿ ಹಲವರಿರಬಹುದು. ಬರುವ ಎಲ್ಲ ಕಾಲಕ್ಕೂ ಅಂಥವರಿರುವಂತೆ ಭಾರತದ ಅಧಿದೈವ ಕರುಣಿಸುವುದೂ ಸಾಧ್ಯವಿದ್ದೀತು. ಆದರೆ ಪುರಾಣ ಕಾಲದ, ಪುರಾಣ ಪೂರ್ವಕಾಲದ ಮಹಾಮಹಿಮರ ಚಿತ್ರಗಳನ್ನು ಅಂದಿನ ಆ ಪರಿಸರದ ಸಹಜಕಲ್ಪನೆಯಿಂದ ಸಮರ್ಪಕವಾಗಿ ಬಣ್ಣಿಸಿ ಹೇಳುವವರು ಇನ್ನಾರು?

ಭವಿಷ್ಯ ಗರ್ಭವನ್ನು ಯಾರು ಭೇದಿಸಿ ಹೇಳಿಯಾರು? ಕನ್ನಡದ ಪುಣ್ಯ ಅದನ್ನು ಕಾಣುವಂತಾಗಲಿ.

ಇಂಥ ಬರಹಗಳ ಗುಟ್ಟನ್ನು ದೇವುಡು ಮೂರು ದಶಕಗಳಿಗಿಂತಲೂ ಮೊದಲೇ ಮಯೂರ ಕಾದಂಬರಿಯ ಪೀಠಿಕೆಯಲ್ಲಿ ರಟ್ಟು ಮಾಡಿದ್ದಾರೆ. "ಮಯೂರವು ಕಥೆ; ಚರಿತ್ರೆಯಲ್ಲ. ಇದರಲ್ಲಿ ದಿಟಕ್ಕಿಂತಲೂ ದಿಟದಂತೆ ತೋರುವ ಸಟೆಯೇ ಹೆಚ್ಚು... ಆದರೂ ಈ ಕತೆಯಲ್ಲಿ ಬಂದಿರುವ ಒಂದೊಂದು ಅಂಗಕ್ಕೂ ಆಧಾರವಿದೆ."

★

೧೯೩೫ರಷ್ಟು ಹಿಂದೆ, ಮೊದಲ ಸಲ ಬೆಂಗಳೂರಿಗೆ ಹೋದಾಗ `ಮಯೂರ', `ಅಂತರಂಗ' ಕಾದಂಬರಿಗಳನ್ನು ಬರೆದು ಖ್ಯಾತರಾದ ಶ್ರೀದೇವುಡು ನರಸಿಂಹಶಾಸ್ತ್ರಿಗಳನ್ನು ಕಾಣುವ ತವಕದಿಂದ, ಆಗ ಅವರು ನಡೆಸುತ್ತಿದ್ದ `ನವಜೀವನ'ದ ಕಛೇರಿಗೆ ಹೋಗಿದ್ದ ನೆನಪು ಮಸಕು ಮಸಕಾಗಿದೆ.

ನಾನಾಗ ಇನ್ನೂ ತೀರಾ ಹುಡುಗ. ಕಾಫಿ ಆಯಿತು. ಆ ಅಚ್ಚುಕೂಟದ ಪರಿಸರದಲ್ಲಿ, ಕರಡುಗಳ ರಾಶಿಯಲ್ಲಿ ಕುಳಿತ ದೇವುಡು ಅಲ್ಲಿನ ಕೆಲಸಗಾರರೊಡನೆ ಒಂದಾಗಿಯೇ ಕಂಡಿದ್ದರು. ಮುದ್ರಕ, ಮೊಳೆ ಜೋಡಿಸುವವರು ಕೊರಳಿಗೆ ನೇಲಿಸಿದ ಕಪ್ಪುಬಟ್ಟೆ ಕಾಲತುದಿಯವರೆಗೆ ಬಂದಿತ್ತು. ದೇವುಡು ಮೊಳಕಾಲವರೆಗಿದ್ದ ಕಪ್ಪು ಕೋಟು ಧರಿಸಿದ್ದರು.

ಮರುದಿನ ಮನೆಗೆ ಬರುವಂತೆ ಕರೆಯಾಯಿತು. ಮನೆಯನ್ನು ಹೇಗೆ ಹುಡುಕುವುದೆಂದಾಗ `ದೇವುಡು-ಶಂಕರಪುರ' ಎಂದು ಚುಟುಕಿನಲ್ಲಿ ಹೇಳಿದ್ದರು. ಆಗ ನನ್ನನ್ನಾರು ಮನೆಗೆ ಕರೆಯಬೇಕು?

ಸಾಲಕ್ಕೆ ಪುಸ್ತಕ ಪಡೆದು, ನಗದು ಬೆಲೆಗೆ ಮಾರಿ 'ಬಿಸಿನೆಸ್' ಮಾಡುವುದು ನನ್ನ ಕ್ರಮ. ಇಂದಿಗೂ ಇದೇ ಬಗೆಯದು ನನ್ನ ಉದ್ಯೋಗ.

ಬೆಳಗ್ಗೆ ಮನೆ ಹುಡುಕಿಕೊಂಡು ಹೋದೆ. ಕೇರಂ ಆಟ ನಡೆದಿತ್ತು. ದೇವುಡು ಒಂದು ಮುಂಡು ಸುತ್ತಿಕೊಂಡು ಬರಿ ಮೈಯಿಂದ ಕುಳಿತಿದ್ದರು. ಸನ್ನೆಯಿಂದಲೇ ಸ್ವಾಗತ ದೊರೆಯಿತು. ಬದಿಯಲ್ಲಿ ಕುಳಿತಿದ್ದೆ.

ದೇವುಡು ಅವರಿಗೆ ಆಟ ಬರುವಾಗ ರಾಣಿಯ ಮೇಲೆ ಅವರ ದೃಷ್ಟಿ ಬಿದ್ದಿತ್ತು. ಎಡಗೈಯ ಹೆಬ್ಬೆರಳು-ತೋರಬೆರಳುಗಳನ್ನು ಅಗಲಿಸಿ, ತುಟಿಗೆ ಮಧ್ಯವನ್ನು ತಾಗಿಸಿ ಹಿಡಿದು ಬಲಗೈ ಬೆರಳಿನಿಂದ ಒಟಪವನ್ನು ಚಿಮ್ಮಿದರು. ರಾಣಿ ಕಿಸೆಗೆ ಬಿತ್ತು–ಎನ್ನುವಾಗ ನಿಸ್ಸಾಳತತಿ ಮೊಳಗಿದಂತೆ ಇವರ ತುಟಿಯಿಂದ ನಾದ ಹೊರಟು, ಇಬ್ಭಾಗವಾಗಿ ತೂರಿ, ಬಸ್ ಹಾರ್ನಿನ ಸ್ವರ ಹೊರಟಿತ್ತು. ಗೆದ್ದ ಹುಮ್ಮಸ್ಸದು!

ಮತ್ತೆ ಮಾತು–ಕತೆ, ಕ್ಷೇಮ ಸಮಾಚಾರ ತುಂಬ ಆತ್ಮೀಯವಾಗಿಯೇ ನಡೆಯಿತು. ಆಗ ಅಲ್ಲಿಗೆ ಮೊಹಗೆ ಹಣಮಂತರಾಯರು ಬಂದರು. ದೇವುಡು ಎದ್ದು ದಂಡವತ್ ಪ್ರಣಾಮವನ್ನೇ ಮಾಡಿದರು. ಇಂಥ ಪ್ರಸಿದ್ಧ ಲೇಖಕರಾದ ದೇವುಡು ಅವರ ಸಹಜ ಇರವನ್ನು ಕಂಡು ನನಗೆ ಆಗ ತುಂಬ ನಿಸ್ಸಂಕೋಚಭಾವ ಉಂಟಾಯಿತು. ಮುಂದೆ ಬೆಂಗಳೂರಿಗೆ ಹೋದಾಗಲೆಲ್ಲ ಅವರನ್ನು ಕಂಡು ಬರುತ್ತಿದ್ದೆ.

★

ದೇವುಡು ಪರಂಪರಾಪ್ರಿಯವಾದ ಧಾರ್ಮಿಕ ಮನೆತನದಲ್ಲಿ ಹುಟ್ಟಿಬೆಳೆದರು. ಧಾರ್ಮಿಕ–ಶಾಸ್ತ್ರ ಗ್ರಂಥಗಳನ್ನು ಅರೆದು ಕುಡಿದರು. ಅವರು ಕಾಲೇಜಿನಲ್ಲಿ ಓದುತ್ತಿರುವಾಗ ಇಂದಿನ ರಾಷ್ಟ್ರಪತಿ ಮಹಾದಾರ್ಶನಿಕ ರಾಧಾಕೃಷ್ಣ ಮತ್ತು ಕನ್ನಡದಲ್ಲಿ ಎಲ್ಲಾ ಆಗಬೇಕೆಂಬ ಕನಸುಳ್ಳ ಏ.ಎಸ್. ಸುಬ್ಬರಾಯರು ಅವರ ಗುರುಗಳಾಗಿದ್ದರು.

ದೇವುಡು ತಮ್ಮ ಮಹಾಕೃತಿಗಳ ರಚನೆಯಿಂದ ಈ ಗುರುಗಳ ಋಣ ತೀರಿಸಿದರು. ಅವರ ಮೀಮಾಂಸಾದರ್ಪಣ, ಕರ್ನಾಟಕ ಸಂಸ್ಕೃತಿ ಮತ್ತು ಯೋಗಾವಾಶಿಷ್ಠ ಬೃಹದ್‌ಗ್ರಂಥ-ಅಲ್ಲದೆ ಮೂರು ಮಹಾಕಾದಂಬರಿಗಳು ಕನ್ನಡದ ವೈಶಿಷ್ಟ್ಯವನ್ನು ಮೆರೆಯಲು ಸಾಲವೆ?

ಆದರೆ ಕನ್ನಡಿಗರು ಈ ಮಹಾಬ್ರಾಹ್ಮಣನಿಗೆ ಯಾವಾಗಲೂ ಋಣಿಗಳಾಗಿಯೇ ಇರುವಂತಾಯಿತು.

ಎಂ.ಎ. ಪದವೀಧರರಾಗಿಯೂ ಆ ಕಾಲದಲ್ಲಿ ಸುಲಭವಾಗಿ ದೊರೆಯಬಹುದಾಗಿದ್ದ ಸರಕಾರಿ ನೌಕರಿಯನ್ನು ದೇವುಡು ಹಿಡಿಯಲಿಲ್ಲ.

ಒಂದಲ್ಲ–ಎರಡು ಪಾಠಶಾಲೆಗಳನ್ನು ನಡೆಸಿ ಆ ಕಾರ್ಯವೂ ಬಂಧನವೆನ್ನಿಸಿದಾಗ ಕೈತೊಳೆದುಕೊಂಡರು. ಆರ್ಯವಿದ್ಯಾಶಾಲೆ ಅವರ ತೀರ ತರುಣದಲ್ಲಿ ಹುಟ್ಟಿಕೊಂಡಿದ್ದು. ಗಾಂಧೀನಗರ ಪ್ರೌಢಶಾಲೆ ಈಚಿನ ವರ್ಷಗಳದ್ದು. ಬದುಕಿನ ಈ ಎರಡು ಅವಸ್ಥೆಗಳಲ್ಲೂ ಬಂಧನ ಅವರಿಗಾಗಿ ಬರಲಿಲ್ಲ.

ಆದರೂ ಅವರು ಮಾಡಲೇಬೇಕೆಂದಿದ್ದ `ಗುರುಕುಲದ' ಕನಸು ಹಾಗೇ ಉಳಿದುಕೊಂಡಿತು.

ನಡುನಡುವೆ ಅವರು ಪತ್ರಿಕೋದ್ಯಮ ಮಾಡಿದರು. `ನವಜೀವನ' `ಮಕ್ಕಳ ಪುಸ್ತಕ' ಮುಂತಾದವು ಸ್ನೇಹಿತರೊಡನೆ ಮಾಡಿದ ಕೆಲಸ. ಕನ್ನಡದ ಮಕ್ಕಳಿಗೆ ಆದ್ಯ ಪತ್ರಿಕೆಯೆಂದರೆ ಮಕ್ಕಳ ಪುಸ್ತಕ.

ಮುಂದೆ ಸ್ವಂತವಾಗಿ `ನಮ್ಮ ಪುಸ್ತಕ' ಹೊರಡಿಸಿದರು. `ಇದೇನು ಹೆಸರು ಶಾಸ್ತ್ರಿಗಳೇ? `ನನ್ನ ಪುಸ್ತಕ' ಎಂದುಬಿಡಿ, ಎಂದರೆ, ಅಯ್ಯಾ `ನನ್ನ' ಎಂಬುದು ಹೋಗಬೇಕು, `ನಮ್ಮ' ಎಂದಾಗಬೇಕು-ಎಲ್ಲಾ' ಎಂದರು.

ಗೀತೆಯದೇ ಒಂದು ಪತ್ರಿಕೆಯಾಯಿತು. ಸುಲಭ ಸಂಸ್ಕೃತವೂ ಒಂದು ಪ್ರಯೋಗ.

ಆದರೆ ನಮಗೆ ಯಾವುದೂ ಸುಲಭವಲ್ಲ.

ದೇವುಡು ಜತೆಯಲ್ಲಿ ಯಾರೂ ಓಡಿಯಾರು?

ಹೀಗೆ ಹಿಡಿವ-ಬಿಡುವ ಆಟ ಅವರದು. ಹೀಗೇಕೆ–ಎಂದು ಕೇಳಿದರೆ "ಅಯ್ಯಾ ಇದೇನು ಮಹಾ! ಇಂಥ ನೂರು ಯತ್ನ ದೇವುಡು ಮಾಡಬಲ್ಲ. ಹತ್ತು–ಐವತ್ತು ಸಂಸ್ಥೆ ಕಟ್ಟಬಲ್ಲ" ಎಂದು ಬಿಡುವರು.

"ಶಾಸ್ತ್ರಿಗಳೇ ನಿಮ್ಮಿಂದ ಒಂದು ಪುಸ್ತಕವಾಗಬೇಕು ನನಗೆ" ಎಂದು ಯಾರಾದರೂ ಪ್ರಕಾಶಕ ಬಂದು ಕೇಳಿದರೆ "ಹೂಂ-ಯಾವುದು ಬೇಕು? ಕತೆಯೆ? ಕಾದಂಬರಿಯೆ? ಪತ್ತೆದಾರಿಯೆ? ರಾಮಾಯಣವೆ? ಭಾರತವೆ? ವೇದವೆ? ಉಪನಿಷತ್ತೆ? ಯಾವುದು ಬೇಕಾದರೂ ದೇವುಡು ಸಿದ್ಧ" ಎನ್ನುವರು. ಬರೆದುಕೊಟ್ಟೂ ಬಿಡುವರು.

ಹಾಗೆ ದೇವುಡು ಸವ್ಯಸಾಚಿ ಲೇಖಕರು. ಅವರ "ಮಯೂರ' ಇತಿಹಾಸ ಕಾದಂಬರಿಗೆ ಮಾದರಿ. `ಅಂತರಂಗ' ಮನೋವ್ಯಾಪಾರದ ಬಹುಶಃ ಮೊದಲ ಕಾದಂಬರಿ ಕನ್ನಡಕ್ಕೆ.

`Trail of Jesus' ಎಂಬ ಒಂದು ನಾಟಕವನ್ನು ವಿಚಾರಣೆ ಎಂದು ಅವರು ಕನ್ನಡಿಸಿದರು. ಅದರ ಪೀಠಿಕೆಯಲ್ಲಿ ಅವರು ಬರೆಯುತ್ತಾರೆ.

`ನಾನು ಸಂಪ್ರದಾಯ ಶರಣನಾದ ವೈದಿಕ. ನಮ್ಮ ಸಂಸ್ಕೃತಿ ದೇಶಾಂತರದ ಸಂಸ್ಕೃತಿಗಿಂತಲೂ ಹಿರಿದು-ಎಂಬ ಬಲಿತ ನಂಬಿಕೆಯಿರುವವರಲ್ಲಿ ಒಬ್ಬನಾದ ನಾನು ಪರಸಂಸ್ಕೃತಿಯ ಗ್ರಾಸವನ್ನಿಕ್ಕಿ ಸದ್ಯಕ್ಕೆ ಕೊರಗಿರುವ ನಮ್ಮ ಸಂಸ್ಕೃತಿಯನ್ನು ಬೆಳೆಯಿಸಬೇಕೆಂಬ ಅಭಿಮಾನದಿಂದ ಇದನ್ನು ಕನ್ನಡಿಸಿದೆ.'

ಇದೂ ಮೂವತ್ತು ವರುಷಗಳಿಗಿಂತ ಹಿಂದಿನ ಮಾತು. ವಯಸ್ಕರ ಶಿಕ್ಷಣದ ಕನಸನ್ನು ಬಹು ಮೊದಲು ಕಂಡವರು ದೇವುಡು. ಕರ್ನಾಟಕ ಏಕೀಕರಣಕ್ಕೆ ತೀರ ಮುಂಚಿನಿಂದಲೂ ಬೆಂಬಲವಿತ್ತ ಮೈಸೂರಿಗರು ಅವರು. ಕೊನೆಯವರೆಗೂ ಕನ್ನಡ ನಾಡಿನ ಏಕೀಭಾವಕ್ಕೆ ದುಡಿದವರವರು.

★

ಆಜಾನುಬಾಹು ದೇಹ. ಇಷ್ಟಗಲದ ತುಂಬ ಮುಖ. ಗೌರವ ಕಾಂತಿ. ಒಂದು ಕಣ್ಣನ್ನು ಸಂಕುಚಿಸಿ ನೋಡುವ ನಾಟಕೀಯ ದೃಷ್ಟಿ.

ಅಸ್ತವ್ಯಸ್ತ ಉಡಿಗೆ-ತೊಡಿಗೆ, ಬೋಳಿಸಿದ ತಲೆ, ಟೊಪ್ಪಿಗೆ ಒಂದಿದ್ದರೆ ಇತ್ತು; ಇಲ್ಲದಿದ್ದರೆ ಇಲ್ಲ.

ದೇವುಡು ಉಪಚಾರವನ್ನರಿಯರು; ಗಾಂಭೀರ್ಯವನ್ನರಿಯರು. ಹಿರಿಯರನ್ನು ಕಂಡರೆ ದಂಡವತ್ ಪ್ರಣಾಮ. ಸರಿಕರನ್ನು, ಕಿರಿಯರನ್ನು ಕಂಡರೆ ಬಾಚಿ ತಬ್ಬಿಕೊಂಡೇ ಮಾತಾಡುವರು.

ತುಂಬು ಮುಖ ನಗೆಗೆ ಇನ್ನೂ ಹರಡಿಕೊಳ್ಳುವುದು.

ಮನೆಗೆ ಹೋದರೆ ಊಟದ ಆಮಂತ್ರಣ. `ಅಯ್ಯಾ, ಬಡವನ ಮನೆ ಮತ್ತೆ'–ಎಂಬ ಸೂಚನೆ! ಮನೆತುಂಬ ಓಡಾಟ. `ಗೌರೀ' ಎಂದು ಕರೆದು ಬಂದವರ ಪರಿಚಯ ಶ್ರೀಮತಿಗೆ ಹೇಳುವರು. ಹಿತ್ತಲಿಗೋ ಅಂಗಳಕ್ಕೋ ಕರೆದೊಯ್ದು ಹಸುವನ್ನು ತೋರಿಸವರು.

ಮಾತು-ಮಾತು-ಮಾತು! ಎಲ್ಲೆಲ್ಲೋ ಸುತ್ತಾಡಿ ತಾವು ಓದಿದ, ಸಾಧಿಸಬೇಕೆಂದಿದ್ದ, ಸಾಧಿಸಿಯೂ ಬಿಟ್ಟ, ಸಾಧಿಸದೆ ಬಿಟ್ಟುಕೊಟ್ಟ ಸಂಕಥನ. ಮೈಮುಟ್ಟಿ, ಭುಜತಟ್ಟಿಯೇ ಮಾತು. `ನಾನೆಂದರೆ ಏನೆಂದು ತಿಳಿದಿರುವಿರಿ?' ಎಂಬ ನಾಟಕೀಯತೆ ಬೇರೆ. `ಬಡಾಯಿ ಜಾಸ್ತಿ' ಎಂಬಂತೆನ್ನಿಸಿದರೂ ಅದು ಆತ್ಮೀಯವಾದ ಮಾತು. ತನ್ನಲ್ಲೇ ತಾನು ಎಂದುಕೊಂಡಂತೆ ಸ್ವಗತದ ರೀತಿ. ಸಭ್ಯತೆಯ ಸೋಗನ್ನು ಅವರು ಅಭಿನಯಿಸುವ ರಂಗದ ಮೇಲೆಯೇ ನೋಡಬೇಕು.

ನಾಟಕದ ಸೂತ್ರವೂ ಅವರೊಂದಿದೆ; `ತಾನು ಬೇರೊಂದಾಗಿ ವಾಸ್ತವಿಕತೆಯ ಭ್ರಮೆ ಹುಟ್ಟಿಸುವುದೇ ನಟನ ಕಲೆ' ಎಂಬುದು.

ಈ ಬ್ರಾಹ್ಮಣ ಬಣ್ಣ ಬಳಿದು, ವೇಷಕಟ್ಟಿ ರಂಗದ ಮೇಲೆ ಕುಣಿದದ್ದನ್ನು ಕಂಡವರು ಮರೆಯಲಾರರು.

`ನಚಿಕೇತ'ದ `ವಾಜಸ್ರವಸ-ಆ ಪಾತ್ರ ದೇವುಡುಗಾಗಿಯೇ ರಚಿತವಾಯಿತೇನೋ. ಆ ಮಹರ್ಷಿಯ ರಾಜಸ ತಳಮಳ ಅವರದೇ.

`ಬುದ್ಧ'-ಆ ಶಾಂತ-ಗಂಭೀರ ಪಾತ್ರಕ್ಕೆ ದೇವುಡು ಕೈಸೆರೆ. ತೆನಾಲಿ ರಾಮನ ಹುಡುಗಾಟವೂ ಇವರಿಗೆ ಸಹಜ ಲೀಲೆ.

ಬದುಕೇ ಒಂದು ರಂಗಭೂಮಿ ದೇವುಡು ಅವರಿಗೆ. ನಂಬುಗೆ-ನೆಚ್ಚಿಕೆ, ಗೇಲಿ-ಗಾಂಭೀರ್ಯ, ಮಾನವೀಯ ಕರುಣೆ ಬದುಕಿನಲ್ಲಿದ್ದದ್ದು ರಂಗದಲ್ಲಿ ಲೀಲಾಜಾಲ ಅವರಿಗೆ.

ದೇವುಡು ಕರಗುವುದು ಬಹುಬೇಗ. ಮಾತು–ಮಾತಿನೆಡೆಯಲ್ಲಿ ಅವರ ಕಣ್ಣು ಹನಿಗೊಳ್ಳುವುದು. "ಏನು ಶಾಸ್ತ್ರಿಗಳೇ, ಇಷ್ಟೊಂದು ಅನುಕಂಪ?" ಎಂದರೆ "ಅಮೃತಾಂಜನವಯ್ಯಾ! ನೋಡು, ಒಕ್ಕಣ್ಣಿನಿಂದ ಅಳಬಲ್ಲೆ ನಾನು" ಎಂದು ಅತ್ತು ತೋರಿಸುವರು.

ಚಿರಂಜೀವಿ ಚಿತ್ರಪಟದ ತಾಲೀಮಿಗೆಂದು ದೇವುಡು ಧಾರವಾಡಕ್ಕೆ ಬಂದರು. ಆಗಲೇ ಮನೋಹರ ಗ್ರಂಥಮಾಲೆಗೊಂದು ಪುಸ್ತಕ ಬರೆದುಕೊಟ್ಟರು. ಅದೇ ಸಮಯ ಮೈಸೂರಿನ ರಾಜಕೀಯ ಕಾರ್ಯಕರ್ತರೆಲ್ಲ ಗಡೀಪಾರಾಗಿ ಬಂದು ಧಾರವಾಡ-ಹುಬ್ಬಳ್ಳಿಗಳಿಗೆ ದೌಡಾಯಿಸಿದ್ದರು. ದೇವುಡು ಆಗ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರೇನೋ! ಪ್ರತ್ಯಕ್ಷ ಹೋರಾಟದವರಿಗೆ ಇವರ ಮೇಲೆ ಏನೋ ಅತೃಪ್ತಿ. ವೈದ್ಯ ಪಾರ್ಥನಾರಾಯಣ ಪಂಡಿತರು ಸಂಧಿಸಿದಾಗ ಒಂದು ನಾಟಕವೇ ನಡೆಯಿತು. ಅವರಿವರು ಪರಸ್ಪರ ಅಂದುಕೊಳ್ಳುತ್ತಿರುವಾಗ ನಡುವೆ ಸಿಕ್ಕ ನಾನು ಇಬ್ಬರಿಂದಲೂ ತಿವಿಸಿಕೊಂಡು ಒದ್ದಾಡುವಂತಾಯಿತು. `ಪಾರ್ಥಾ' ಎಂದು ಇವರು, `ಶಾಸ್ತ್ರೀ' ಎಂದು ಅವರು ಪರಸ್ಪರ ತೆಲುಗಿನಲ್ಲೇ ಮಾತಾಡಿಕೊಂಡರು. ದೇವುಡು ಅಂದ ಒಂದು ಮಾತು: ಹಿಂದೆ ಗೋಣಿಚೀಲದಂಥ ಪಂಚೆಯುಟ್ಟು, ತೊಡೆ ತೋರಿಸಿಕೊಂಡು ಸತ್ಯಾಗ್ರಹ ಮಾಡಿರುವವನು ನಾನು. ಈಗ ನಿಮ್ಮದು ನಯವಾದ ಬದನವಾಳ ಪಂಚೆ ಸತ್ಯಾಗ್ರಹ!

ಚಿರಂಜೀವಿಗೆ ಸಂಭಾಷಣೆ ಬರೆದವರು ದೇವುಡು. ಅದರಲ್ಲಿ ಅವರ ಭೂಮಿಕೆ ಮೃಕಂಡು ಮುನಿ.

ಬಾಹ್ಯ ನೋಟಕ್ಕೆ ಅವರಿಗಾವ ಬಂಧನವೂ ಇಲ್ಲದಂತಿತ್ತು. ಆದರವರು ಧಾರ್ಮಿಕ ಶ್ರದ್ಧೆಯ ಕಟ್ಟುಪಾಡಿಗೆ ಸದಾ ಬಂಧಿತರು.

ಬಾಹ್ಯ ನೋಟಕ್ಕೆ ಯಮನ ಭೂಮಿಕೆ ವಹಿಸುವ ದಿನ ಮನೆಯಲ್ಲಿ ಶಾಂತಿಯ ಉಪಾಸನೆಯಾಗಲೇಬೇಕು.

ಇಂಥವರಿಗೆ ಬಡತನದ ಬಳುವಳಿ ಹೇಳಿ ಮಾಡಿಸಿತ್ತು. ಅಸಂಗ್ರಹ ಇವರಿಗೆ ಸಹಜ ಕ್ರಿಯೆ. ಜೇಬು ಸದಾ ಖಾಲಿ. ಕಾಸು ಇತ್ತಾದರೆ ಅದನ್ನು ಹೊರಗೆ ಹಾಕುವುದಕ್ಕೆ ಉಚಿತಾನುಚಿತ ವಿವೇಚನೆಯನ್ನೇ ಮಾಡರು. "ನನಗೆ ಬಂದದ್ದೇ ಧರ್ಮಕ್ಕೆ. `ಏನು ಮಹಾಕೆಲಸ ನಾನು ಮಾಡಿದ್ದು? ಅವನಿಗೆ ಬೇಕಿತ್ತು; ಕೊಟ್ಟುಬಿಟ್ಟೆ."

ಅದಾಯಿತೆಂದರೆ ನಾನು ಮಾಡಿದ ಕೆಲಸ ಏನು ಕಡಿಮೆಯದು ಎಂಬ ಪ್ರಜ್ಞೆ ಕಾಡುವುದು.

ಮೇಲ್ಮಾತಿಗೆ ಅಸೂಯೆ; ಅಹಂಮನ್ಯತೆ; ಅತೃಪ್ತಿ. ಆದರೆ ಯಾವುದು ಬಂದರೂ ಅಷ್ಟೆ. ಬಾರದಿದ್ದರೂ ಅಷ್ಟೆ.

ದೊಡ್ಡ ಕುಟುಂಬ. ಧಾರ್ಮಿಕ ಅನುಸಂಧಾನ. ನವೀನ ಕಲ್ಪಕತೆ. ಸಹನೆ-ಸಹಯೋಗ-ಸಹಾನುಭೂತಿ-ಸಾನುರಾಗ! ಪಾಂಡಿತ್ಯ ಪ್ರದರ್ಶನ ಅವರಿಂದಾಗದು. ಅದಕ್ಕೆ ಬೇಕಾದ ಶಿಷ್ಟಾಚಾರವನ್ನು ಅರಿಯರವರು.

ಎಂತಲೇ ಇಂದಿನ `ನಾಗರಿಕ' ಜಗತ್ತಿನಲ್ಲಿ ದೇವುಡು ಸಂತ್ರಸ್ತ ಸಾಹಿತಿಯಾಗಿಯೇ ಬದುಕಬೇಕಾಯಿತು.

ಕೈಗೆ ಬಂದ ಹಿರಿಯ ಮಗ ಅಕಾಲ ಮೃತ್ಯುವಿಗೆ ತುತ್ತಾದ. ಇತ್ತೀಚೆ ಮಧುಮೇಹದಿಂದಾಗಿ ಅವರದೊಂದು ಕಾಲನ್ನು ಕತ್ತರಿಸಬೇಕಾಯಿತು.

ರಥ ಮುಗ್ಗರಿಸಿದಂತಾಯಿತು.

ಆದರೂ ಮುಂದೆ ಒಂದೆರಡು ವರುಷ ತಮ್ಮ ತೇರನ್ನೆಳೆದುಕೊಂಡು ಬದುಕಿದರು.

ಶಂಕರಾಚಾರ್ಯರ ಮೇಲೆ ಬರೆಯಬೇಕೆಂದಿದ್ದ `ಮಹಾ ಸನ್ಯಾಸಿಯ' ಹೊಳವನ್ನು ಹಾಕಿಕೊಂಡಿದ್ದರು. ಯೋಗಾವಾಶಿಷ್ಠ ಕೊನೆಯ ಘಟ್ಟಕ್ಕೆ ತಂದರು.

ಅವರಿಗೆ ಅರವತ್ತಾರು ವರ್ಷಗಳ ಪ್ರಾಯ.

ಶಾಸ್ತ್ರಗ್ರಂಥಗಳ ದಂಡಕಾರಣ್ಯದಲ್ಲಿ ದೇವುಡು ತಮ್ಮ ಹರಿತ ಬುದ್ಧಿಯ, ಅಚಲ ಶ್ರದ್ಧೆಯ ಜೀಪುಗಾಡಿಯಲ್ಲಿ ಸಲೀಸಾಗಿ ಸುತ್ತುವವರಾಗಿದ್ದರು.

ಆದರೆ `ವಿಧಿ ಈ ದೀಪಾವಳಿಯಂದು ಕನ್ನಡದ ಈ ದೀಪವನ್ನು ನಂದಿಸಿದ.

ತಾವು ಚಿತ್ರಿಸಿದ ಇಂದ್ರಲೋಕ, ಗಂಧರ್ವಲೋಕಗಳನ್ನು ನೋಡಲು ದೇವುಡು ಹೊರಟು ಹೋದರು.

ಅವರ ಚೇತನ ಸಪ್ತರ್ಷಿ ಮಂಡಲವನ್ನು ಸುತ್ತಿ–ಸುಳಿದು, ತಮ್ಮ ಚಿತ್ರಕ ಶಕ್ತಿಗೆ ಹೋಲುವೆಯನ್ನು ಕಂಡಿತೇನೋ!

ವಿಶ್ವಾಮಿತ್ರನನ್ನು, ನಹುಷ–ವೃತ್ತರನ್ನು, ದೇವರಾತ–ಆಲಂಬಿ, ಬುಡಿಲ–ಯಾಜ್ಞವಲ್ಕ್ಯರನ್ನು ಕಂಡು ಮಾತನಾಡುವರೇನೋ!

ಆ ಚೇತನದ ಇತ್ತೀಚಿನ ಸಂದೇಶ–

"ಎಲ್ಲರಿಗೂ ಧರ್ಮಾಭಿವೃದ್ಧಿಯಾಗಲಿ" ಎಂಬುದಾಗಿತ್ತು.

★ ★ ★

ಅವ್ಯಕ್ತ ಶಕ್ತಿ

ತ.ರಾ.ಸು

೧೯೬೧ರಲ್ಲಿ ಪ್ರಕಟವಾದ `ಬೆಳಕು ತಂದ ಬಾಲಕ' ಕಾದಂಬರಿಯನ್ನು ಯಜಮಾನರು ಬರೆದದ್ದೂ ಒಂದು ಕಥೆಯೇ.

ಮಗ ನಾಗಪ್ರಸಾದ್ ಹುಟ್ಟಿದ ಹೊಸದರಲ್ಲಿ ಒಂದು ದಿನ ದೇವುಡು ನರಸಿಂಹಶಾಸ್ತ್ರಿಗಳು ಮನೆಗೆ ಬಂದರು. ಹಿರಿಯರಾದ ದೇವುಡು ಅವರನ್ನು ಕಂಡರೆ ನಮಗೆಲ್ಲ ಭಕ್ತಿ-ಗೌರವ.

ಆ ಮಾತು ಈ ಮಾತು ಆಡುತ್ತಾ ಯಜಮಾನರು-`ದೇವುಡು ಅವರೇ ಕಠೋಪನಿಷತ್ತಿನಲ್ಲಿ ಬರುವ ನಚಿಕೇತನನ್ನು ಕುರಿತು ಕಾದಂಬರಿ ಬರೆಯಬೇಕೆಂದು ತುಂಬಾ ಆಸೆ ಇದೆ. ನಚಿಕೇತ ನನ್ನ ಮನಸ್ಸನ್ನು ಸೆರೆಹಿಡಿದು ಬಿಟ್ಟಿದ್ದಾನೆ. ಇದನ್ನು ಬರೀಬೇಕು ಅಂತ ಅಂದುಕೊಂಡಾಗಲೆಲ್ಲ ಬರೆಯಬಲ್ಲೆ ಅನಿಸಿದರೂ, ಆ ಅರ್ಹತೆ ನನ್ನಲ್ಲಿ ಇಲ್ಲ ಅಂತಲೂ ಅನಿಸಿದೆ'–ಎಂದು ಹೇಳಿದಾಗ, ಆ ಮಾತು ಕೇಳಿ ತುಂಬಾ ಸಂತೋಷಪಟ್ಟ ದೇವುಡು–`ಬರಿಯಯನ' ಬರಿ–ನಿನ್ನಲ್ಲಿ ಆ ಅರ್ಹತೆ ಇದೆ. ಅವತ್ತೇ ನಾನು ಹೇಳಲಿಲ್ಲವಾ. ನೀನು, ಕೃಷ್ಣರಾಯ ಇಂಥ ವಿಷಯ ಕುರಿತು ಬರೀಬೇಕೊಂತ'–ಎಂದರು.

`ಬರೀಬೇಕು. ಇಂಥ ವಿಷಯದ ಮೇಲೆ ಹೇಗೆ ಬರೆಯೋದು. ವಿಷಯ ಹೇಗೆ ಸಂಗ್ರಹಿಸೋದು?'

`ಹೋಗಿ ಕೈಕಾಲು ತೊಳೆದು ಬಾ'

`ಇದಕ್ಕೂ ಅದಕ್ಕೂ ಏನು ಸಂಬಂಧ ದೇವುಡು'

`ನಾನು ಹೇಳಿದ ಹಾಗೆ ಕೇಳು'

`ಆಯಿತು' ಎಂದು ಯಜಮಾನರು ಕೈಕಾಲು ತೊಳೆದು ಬಂದರು.

`ನಮಸ್ಕಾರ ಮಾಡು' ಎಂದು ದೇವುಡು ಹೇಳಿದಾಗ, ಯಜಮಾನರು ದೇವುಡು ಅವರಿಗೆ ನಮಸ್ಕರಿಸಿದರು.

ತಮಗೆ ನಮಸ್ಕರಿಸಿದ ರಾಯರ ತಲೆಯನ್ನು ಮಮತೆಯಿಂದ ನೇವರಿಸಿದ ದೇವುಡು ಏನನ್ನೋ ಧ್ಯಾನಿಸಿ–`ಈ ಕೃತಿರಚನೆಗೆ ಬೇಕಾದ ಬಲ ನಿನ್ನಲ್ಲಿ ಬರಲಿ' ಎಂದು ಆಶೀರ್ವದಿಸಿದರು.

`ಆಶೀರ್ವಾದ ಏನೋ ಮಾಡಿದಿರಿ ಇದನ್ನು ಬರೆಯೋದು ಹೇಗೆ ಹೇಳಲಿಲ್ಲವಲ್ಲ.?

`ಏನೂ ಅಗತ್ಯವಿಲ್ಲವಯ್ಯ, ಎಲ್ಲಾ ಆಗುತ್ತೆ. ಇನ್ನೊಂದು ತಿಂಗಳಲ್ಲಿ ಈ ಪುಸ್ತಕ ಬರ್ದಿರ್ತೀಯಾ-ಹೋಗು.'

`ದೇವುಡು ಅವರೇ, ನಾನು ಸಾಕಷ್ಟು ವಿಜ್ಞಾನ, ಮನೋವಿಜ್ಞಾನ ಓದಿಕೊಂಡಿದ್ದೇನೆ. ತಲೆ ಸವರಿ ಆಶೀರ್ವದಿಸಿದರೆ ಬರೆಯೋ ಶಕ್ತಿ ಬರುತ್ತೈ?'

`ನನ್ನ ಮಾತು ಸುಳ್ಳೋ-ನಿಜವೋ ನೀನೇ ಪರೀಕ್ಷಿಸು' ಎಂದು ಹೇಳಿ, ನಮ್ಮ ಸತ್ಕಾರವನ್ನು ಸ್ವೀಕರಿಸಿ ದೇವುಡು ಹೊರಟುಹೋದರು.

ಅವರು ಹೋದ ಮೇಲೆ ನಾನು ಕೇಳಿದೆ:

`ನಿಮಗೆ ಈ ಪುಸ್ತಕ ಬರೆಯೋಕೆ ದೇವುಡು ಹೇಳಿದ್ರಾ?'

`ಅದೊಂದು ಕಥೆ, ನಾನು ಬೆಂಗಳೂರಿನಲ್ಲಿದ್ದಾಗ ಅ.ನ.ಕೃ. ಮನೇಲಿ ಕುಳಿತಿದ್ದೆ. ಅದೇ ತಾನೆ `ಮಹಾಬ್ರಾಹ್ಮಣ' ಪ್ರಿಂಟಾಗಿತ್ತು. ಒಂದು ಕಾಪಿಯನ್ನು ದೇವುಡು ಅನಕೃಗೆ ಕೊಟ್ಟರು. ನಾನು ಸರ್ರಂತ ತಗೊಂಡು ಓದಲು ಆರಂಭಿಸಿದೆ. `ನಿನಗೆ ನಾಳೆ ಬೇರೆ ಕೊಡ್ತೀನಿ' ಅಂದ ದೇವುಡು, ಮಾರನೆಯ ದಿನ ಅಲ್ಲಿಗೇ ನನ್ನನ್ನು ಹುಡುಕಿಕೊಂಡು ಬಂದು ಒಂದು ಪ್ರತಿಕೊಟ್ಟರು. ಅಷ್ಟು ಹೊತ್ತಿಗೆ ನಾನು ಓದಿದ್ದೆ. `ದೇವುಡು, ಅದ್ಭುತವಾದ ಕೆಲಸ' ಅಂತ ನನ್ನ ಮೆಚ್ಚುಗೆ ಸೂಚಿಸಿದೆ. ಅದಕ್ಕೆ ಅವರು `ನೀನು ಓದಿ ಮೆಚ್ಚಿದರೇನಾಯ್ತು. ನೀನು, ಕೃಷ್ಣರಾಯ ಇಂಥ ವಿಷಯದ ಮೇಲೆ ಬರೀಬೇಕು. ಸೂಳೆ ಮೇಲೆ ನೀವುಗಳು ಬರೆದರೂ ಸಾವಿರಾರು ಜನ ಓದುತ್ತಾರೆ. ನನ್ನಂಥವರು ಬರೆದರೆ ಯಾರು ಓದ್ತಾರೆ. ನೀವಿಬ್ಬರೂ ಇಂಥ ವಿಷಯದ ಮೇಲೆ ಕಾದಂಬರಿ ಬರೆದರೆ ನಮ್ಮ ಭಾರತೀಯ ಸಂಸ್ಕೃತಿಯನ್ನು ಮನೆಮನೆಗೂ ಪರಿಚಯಿಸಬಹುದು' ಅಂತ ಹೇಳಿದ್ದರು.

`ನಿಮ್ಮ ಮಟ್ಟ ಎಲ್ಲಿ' ನಮ್ಮ ಮಟ್ಟ ಎಲ್ಲಿ–ನಮ್ಮ ಕೈಯಲ್ಲಿ ಇಂಥದ್ದನ್ನು ಬರೆಯೋಕೆ ಸಾಧ್ಯವೇ?' ಅಂತ ಹೇಳಿದ್ದೆ.

`ಈಗ ಹೊರಟಿದ್ದೀರಲ್ಲ' ಬರೆಯೋಕೆ?'

`ನೋಡೋಣ. ದೇವುಡು ಅವರ ಆಶೀರ್ವಾದ ಹೇಗೆ ಕೆಲಸ ಮಾಡುತ್ತೆ. ಅವರು ನನ್ನ ತಲೆ ಸವರಿದಾಗ ಕರೆಂಟ್ ಹೊಡೆದ ಹಾಗಾಯ್ತು. ನನಗಂತೂ ಈಗ್ಲೂ ನೆನೆಸಿಕೊಂಡರೆ ಮೈ ಜುಂ ಅಂತಿದೆ' ಎಂದರು ಯಜಮಾನರು.

ದೇವುಡು ಅವರ ಆಶೀರ್ವಾದ ಕೆಲಸ ಮಾಡಲಾರಂಭಿಸಿತು. ಅಭ್ಯಾಸಕ್ಕೆ ಬೇಕಾದ ಗ್ರಂಥಗಳಿಗಾಗಿ ಯಜಮಾನರು ಪರದಾಡುತ್ತಿದ್ದರು. ನಿಧಾನವಾಗಿ ಅಭ್ಯಾಸಮಾಡಿ ಬರೆಯಲು ಜೀವನಾನುಕೂಲ, ಕಾಲಾವಕಾಶ ಎರಡೂ ಇರಲಿಲ್ಲ. ಬೇರೆ ಬರವಣಿಗೆಯ ಮಧ್ಯೆಯೇ ಈ ಅಧ್ಯಯನವೂ ನಡೆಯಬೇಕು. ಮೈಸೂರು ವಿಶ್ವವಿದ್ಯಾಲಯದ ಪ್ರಕಟಣ ಶಾಖೆಯ ಡೈರಕ್ಟರಾಗಿದ್ದ ಮಿತ್ರ ಪಿ. ಮಲ್ಲಿಕಾರ್ಜುನಪ್ಪನವರು ಪುಸ್ತಕಗಳಿಗಾಗಿ ಪರದಾಡುತ್ತಿದ್ದುದನ್ನು ಕಂಡು, ಅಗತ್ಯವಾದ ಗ್ರಂಥಗಳನ್ನು ಎರವಲಾಗಿ ಒದಗಿಸಿದರು. ತರಾಸು ಅವರ ಅತ್ಯಂತ ಆಪ್ತ ಮಿತ್ರರಾಗಿದ್ದ ಜೆ.ಬಿ. ಮಲ್ಲಾರಾಧ್ಯರು `ಲೈಬ್ರರಿ ಪುಸ್ತಕವಾದರೆ ವಾಪಸ್ಸು ಕೊಡಬೇಕು, ನಿನ್ನ ಸ್ವಂತಕ್ಕೆ ಇಟ್ಟುಕೋ-ಇಂಥ ವಿಷಯದ ಮೇಲೆ ಹೆಚ್ಚು ಬರಿ' ಅಂತ ಹೇಳಿ, ಅರಮನೆಯಿಂದ ಪ್ರಕಟವಾದ ವೇದೋಪನಿಷತ್ತುಗಳ ಗ್ರಂಥಗಳನ್ನೆಲ್ಲ ಖರೀದಿಸಿ, ಯಜಮಾನರಿಗೆ ಕೊಟ್ಟುಬಿಟ್ಟರು.

ಇಂಥ ಮಿತ್ರರ ನಿರ್ವ್ಯಾಜ ಪ್ರೀತಿಯಿಂದ ಈ ಕಾದಂಬರಿಯ ಕೆಲಸ ಸುಲಲಿತವಾಗಿ ನಡೆದು ದೇವುಡು ಅವರು ಹೇಳಿದ್ದ ಗಡುವಿನಲ್ಲೇ ಆಶ್ಚರ್ಯಕರವಾಗಿ ಮುಕ್ತಾಯವಾಯಿತು.

ಪವಾಡದಂತೆ `ಬೆಳಕು ತಂದ ಬಾಲಕ' ಕಾದಂಬರಿ ಬರೆದ ಯಜಮಾನರು ಹೇಳುತ್ತಿದ್ದರು: `ಕೆಲವನ್ನು ನಾನೇ ಬರೆಯುತ್ತೇನೆ. ಇಂಥ ಕೆಲವು ಕಾದಂಬರಿಗಳನ್ನು ಬರೆಯುವಾಗ ನನ್ನಲ್ಲಿ ನಿಂತು ಇನ್ನಾರೋ ಬರೆಸುತ್ತಿರುವಂತೆ ಅನ್ನಿಸುತ್ತದೆ. ಈ ರೀತಿಯ ಅನುಭವವನ್ನು ಅನುಭವಿಸುವುದೇ ಒಂದು ಆನಂದ.'

`ಬೆಳಕು ತಂದ ಬಾಲಕ' ಬರೆಯಲು ದೇವುಡು ಅವರು ಹೀಗೆ ನೆರವು, ಪ್ರೇರಣೆ ನೀಡಿದರು.

★

ನೆನಪ ಬುತ್ತಿಯ ಗಂಟು

ಶ್ರೀ ಬೆಳಗೆರೆ ಕೃಷ್ಣ ಶಾಸ್ತ್ರಿ

೧

ಮಹಾಬ್ರಾಹ್ಮಣ, ಮಹಾಕ್ಷತ್ರಿಯ ಹಾಗೂ ಮಹಾ ದರ್ಶನಗಳನ್ನು ಕನ್ನಡ ನಾಡಿಗೆ ನೀಡಿದ ದೇವುಡು ನರಸಿಂಹ ಶಾಸ್ತ್ರಿಗಳದು ಒಂದು ಉದ್ದಾಮ ವ್ಯಕ್ತಿತ್ವ. ಅವರ ಮಾತೃ ಭಾಷೆ ತೆಲಗು, ಆಡುಭಾಷೆ ಕನ್ನಡ. ಸಂಸ್ಕೃತ, ಹಿಂದಿ, ಇಂಗ್ಲೀಷ್, ತಮಿಳುಗಳಲ್ಲಿ ಪೂರ್ಣ ಪಾಂಡಿತ್ಯವುಳ್ಳವರು. ಉರ್ದು, ಮರಾಠಿಗಳನ್ನು ಬಲ್ಲವರು: ವೇದೋಪನಿಷತ್ತುಗಳು, ರಾಮಾಯಣ, ಭಾರತ, ಭಗವದ್ಗೀತೆ, ಅಷ್ಟಾದಶ ಪುರಾಣಗಳು, ಬ್ರಹ್ಮಸೂತ್ರ ಇತ್ಯಾದಿಗಳೆಲ್ಲ ನಾಲಿಗೆಯ ತುದಿಯಲ್ಲಿ ಕುಣಿದಾಡುತ್ತಿದ್ದವು. ಬಾಯಿಬಿಟ್ಟರೆ ಕೇಳುವವರು ಅತ್ತಿತ್ತ ಅಲುಗಾಡುವಂತಿಲ್ಲ, ಸಾಂಪ್ರದಾಯಿಕ ಜೀವನವಾದರೂ ಆಧುನಿಕ ವಿಚಾರಗಳ ಕಾರಂಜಿ.

ಇಂತಹ ಮಹನೀಯರನ್ನು ನಾನು ಮೊದಲಿಗೆ ಕಂಡದ್ದು ೧೯೩೬ರಲ್ಲಿ ಮಹಾತ್ಮಾಗಾಂಧೀಜಿಯವರು ಅಂದಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ಆಹ್ವಾನದ ಮೇಲೆ ಮೈಸೂರು ಸಂಸ್ಥಾನದ ಅತಿಥಿಯಾಗಿ ಬೆಂಗಳೂರಿಗೆ ಬಂದಿದ್ದರು. ಅಂದಿನ `ಕುಮಾರ ಪಾರ್ಕಿನಲ್ಲಿ (ಇಂದಿನ ಕುಮಾರ ಕೃಪ) ಒಂದು ತಿಂಗಳು ಬಿಡಾರ ಮಾಡಿದ್ದರು. ಗಾಂಧೀಜಿಯವರ ಜೊತೆಯಲ್ಲಿ, ಜಮುನಾಲಾಲ್ ಬಜಾಜ್, ಮಹದೇವ ದೇಸಾಯಿ, ಸರೋಜಿನಿ ನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ, ಆರ್.ಆರ್. ದಿವಾಕರ ಮುಂತಾದವರು ಇದ್ದರು. ರಾಜಾಜಿ, ಶರತ್‌ಚಂದ್ರ ಬೋಸ್ (ಸುಭಾಸ್‌ಚಂದ್ರ ಬೋಸರ ಅಣ್ಣ) ಆ ಸಮಯದಲ್ಲಿ ಮಹತ್ಮಾಜಿಯವರನ್ನು ಭೇಟಿಯಾಗಲು ಬಂದು ಹೋದರು. ಆ ನಡುವೆ ಮೂರು ದಿನ ಮೈಸೂರಿಗೆ, ಒಂದು ವಾರ ನಂದೀಬೆಟ್ಟಕ್ಕೆ ಗಾಂಧೀಜಿ ಹೋಗಿ ಬಂದರು.

ಮೈಸೂರು ಕಾಂಗ್ರೆಸ್ಸಿಗೆ ಆಗ ಒಳ್ಳೆಯ ಹುರುಪು ಬಂದಿತ್ತು. ಮಾನ್ಯರಾದ ಚಂಗಲರಾಯ ರೆಡ್ಡಿ, ಕೆ. ಹನುಮಂತಯ್ಯ, ಕೆ.ಟಿ. ಭಾಷ್ಯಂ, ಹೆಚ್.ಸಿ. ದಾಸಪ್ಪ, ತಗಡೂರು ರಾಮಚಂದ್ರ ರಾಯರು, ತಿ.ತಾ. ಶರ್ಮ, ಹೆಚ್.ಕೆ. ವೀರಣ್ಣಗೌಡರು ಮುಂತಾದವರು ಅತ್ಯುತ್ಸಾಹದಿಂದ ಗಾಂಧೀಜಿಯವರ ಸನ್ನಿಧಿಯಲ್ಲಿ ತಮ್ಮನ್ನು ರಾಷ್ಟ್ರ ಕಾರ್ಯಕ್ಕಾಗಿ ಅರ್ಪಿಸಿಕೊಂಡ ದಿನಗಳು ಅವು. ಅದೇ ಸಮಯದಲ್ಲಿ ದೇವುಡು ಅವರೂ ಸಹ ತಮ್ಮ ಸರ್ಕಾರಿ ಹೈಸ್ಕೂಲ್ ಮುಖ್ಯೋಪಾಧ್ಯಾಯರ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಗಾಂಧೀಜಿ ತತ್ವಾನುಯಾಯಿ ಆಗಿದ್ದು ಆ ಸಮೂಹದಲ್ಲಿ ಒಬ್ಬರಾಗಿದ್ದರು. ಆಗಲೇ ಪ್ರಥಮಬಾರಿಗೆ ನಾನು ಅವರನ್ನು ಕಂಡದ್ದು.

ಆ ದಿನಗಳಲ್ಲಿ ಬೆಂಗಳೂರಿನ ಮಲ್ಲೇಶ್ವರಂ ಹೈಸ್ಕೂಲಿನಲ್ಲಿ (ಈಗಿನ ಐದನೇ ಕ್ರಾಸ್ ರೋಡಿನಲ್ಲಿ) ನಾನೊಬ್ಬ ವಿದ್ಯಾರ್ಥಿಯಾಗಿದ್ದೆ. ನನ್ನ ಸಹ ವಿದ್ಯಾರ್ಥಿಗಳಾದ ರಂಗಸ್ವಾಮಿ, ರಂಗವಿಠ್ಠಲ,

ದಾಸಪ್ಪ ಇವರುಗಳ ಜೊತೆಯಲ್ಲಿ ನಾನು ಒಬ್ಬ ಸ್ವಯಂ ಸೇವಕನಾಗಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಮಹಾತ್ಮಾಜಿಯವರ ಕ್ಯಾಂಪಿನಲ್ಲಿ ಇರುತ್ತಿದ್ದೆ. ಅದೇ ಸಮಯದಲ್ಲಿ ಗಾಂಧೀವಾದಿ, ಶಿಕ್ಷಣ ತಜ್ಞ, ವಿಚಾರವಾದಿ ಎಂದು ಈಗ ಪ್ರಸಿದ್ಧರಾಗಿರುವ ಡಾ॥ ಎಚ್. ನರಸಿಂಹಯ್ಯನವರೂ ಒಬ್ಬ ಸ್ವಯಂ ಸೇವಕರಾಗಿದ್ದರು. ದೇವುಡು ಅವರು ನಮಗೆಲ್ಲ ಅಗತ್ಯ ಸೇವಾ ಕಾರ್ಯಗಳಲ್ಲಿ ನಮ್ಮನ್ನು ತೊಡಗಿಸುವ ಜವಾಬ್ದಾರಿ ಹೊತ್ತಿದ್ದರು.

೨

ಅದಾದ ಕೆಲ ಕಾಲಾನಂತರ ೧೯೩೭ರಲ್ಲಿ `ನಾರೀಮನ್ ಗಲಾಟೆ'-ಎಂದೇ ಪ್ರಸಿದ್ಧವಾದ ದೊಂದು ಚಳುವಳಿ ಬೆಂಗಳೂರಿನಲ್ಲಿ ನಡೆಯಿತು. ಮೈಸೂರು ಸರ್ಕಾರ ತಲ್ಲಣಿಸಿತು. ಸರ್ ಮಿರ್ಜಾ ಸಾಹೇಬರು ಆಗ ನಮ್ಮ ದಿವಾನರು, ಅವರು ಕಂಟೋನ್ಮೆಂಟಿನ ವಿಶೇಷ ಪೋಲೀಸ್ ಪಡೆಯನ್ನು ಕರೆಸಿದರು. ಒಂದು ಅಪರಾಹ್ನ ಮೈಸೂರ್ ಬ್ಯಾಂಕ್ ಚೌಕದಲ್ಲಿ ಈಗಲೂ ಇರುವ ಅರಳೀಕಟ್ಟೆಯ ಮೇಲೆ ನಿಂತು ದೇವುಡು ಅವರು ಅಲ್ಲಿ ನೆರೆದಿದ್ದ ಭಾರಿ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಇದ್ದಕ್ಕಿದ್ದಂತೆ ಲಾಠಿ ಪ್ರವಾಹವಾಯಿತು. ವೇದಿಕೆಯನ್ನು ಹತ್ತಿದ ಪೋಲೀಸರು ದೇವುಡು ಅವರನ್ನು ಮನಬಂದಂತೆ ಥಳಿಸಿದರು. ಗುಂಡು ಹಾರಿಸಲಾಯಿತು. ಸ್ಥಳದಲ್ಲೇ ಒಬ್ಬರು ಸತ್ತರು. ಜನ ದಿಕ್ಕಾಪಾಲಾದರು. ಪಕ್ಕದಲ್ಲಿದ್ದ ಸೆಂಟ್ರಲ್ ಕಾಲೇಜ್ ಲೈಬ್ರರಿ ಕಟ್ಟಡದ ಮಹಡಿಯ ಮೇಲಿನಿಂದ ವೀಕ್ಷಿಸುತ್ತಿದ್ದ ನಾವೆಲ್ಲ ಆ ಅವಾಂತರ ಕಡಿಮೆಯಾದ ಮೇಲೆ ಇಳಿದು ಬಂದೆವು. ದೇವುಡು ಅವರು ಪ್ರಜ್ಞಾಹೀನರಾಗಿ ಅಲ್ಲಿ ಬಿದ್ದುದನ್ನು ಕಂಡು ಗಾಬರಿಯಾದೆವು. ಅಷ್ಟರೊಳಗೆ ಕೆ.ಟಿ. ಭಾಷ್ಯಂ ತಮ್ಮ ಕಾರಿನಲ್ಲಿ ಬಂದರು. ದೇವುಡು ಅವರನ್ನು ನಾವೆಲ್ಲರೂ ಎತ್ತಿ ಕಾರಿನೊಳಗೆ ಮಲಗಿಸಿದೆವು. ವಿಕ್ಟೋರಿಯಾ ಆಸ್ಪತ್ರೆಗೆ ಕೊಂಡೊಯ್ದರು.

ಮುಂದೆ ಅವರು ಬೆಂಗಳೂರಿನ ಗಾಂಧೀನಗರದ ಪ್ರೌಢಶಾಲೆಯನ್ನು ಸ್ಥಾಪಿಸಿ, ಅವರೇ ಅದರ ಸಂಸ್ಥಾಪಕ ಪ್ರಿನ್ಸಿಪಾಲ್ ಆದರು. ಸ್ವಾತಂತ್ರ್ಯನಂತರ ಸುಮಾರು ೫೦ನೇ ಇಸವಿಯವರೆಗೂ ಅದನ್ನು ನಿರ್ವಹಿಸಿದರು. ಅಲ್ಲಿಂದ ಹೊರ ಬಂದ ಮೇಲೆ ಆಧ್ಯಾತ್ಮಿಕ ಸಾಧನೆಗಳು ಹಾಗೂ ಸಾಹಿತ್ಯ ಸೇವೆಗಾಗಿ ತಮ್ಮನ್ನು ಅರ್ಪಿಸಿಕೊಂಡರು.

೩

ಹಿರಿಯೂರಿನ ಹಿರಿಯರಾದ ಮೋಕ್ಷಗೊಂಡಂ ಹನುಮಂತರಾಯರು ಸುಮಾರು ೧೯೨೫ನೆಯ ಇಸವಿಯಿಂದಲೂ ಶ್ರೀ ರಾಮೋತ್ಸವವನ್ನು ಒಂದು ಸಾಂಸ್ಕೃತಿಕ ಚಟುವಟಿಕೆಯಾಗಿ ನಡೆಸಿಕೊಂಡು ಬಂದರು. ಅವರ ತರುವಾಯ ಅವರ ಮಕ್ಕಳೂ ಸಹ ಆ ಕಾರ್ಯಕ್ರಮಗಳನ್ನು ಅಷ್ಟೇ ಅದ್ಧೂರಿಯಾಗಿ ಶ್ರದ್ಧೆಯಿಂದ ನಡೆಸಿಕೊಂಡು ಬರುತ್ತಿರುವುದು ಒಂದು ವಿಶೇಷವಾದ ಸಂಗತಿ.

ಈ ಉತ್ಸವಕ್ಕಾಗಿ ೪೫ನೆಯ ಇಸವಿಯ ಸುಮಾರಿನಲ್ಲಿ ದೇವುಡು ಆಗಮಿಸಿದ್ದರು. ಪ್ರತಿದಿನ ಬೆಳಗಿನ ಸಭೆಯಲ್ಲಿ ವಾಲ್ಮೀಕಿ ರಾಮಾಯಣವನ್ನು ವ್ಯಾಖ್ಯಾನ ಮಾಡುತ್ತಿದ್ದರು. ರಾಮಾಯಣವು ಕೇವಲ ಒಂದು ಕಟ್ಟುಕತೆಯಾಗಿರದೆ ಸರ್ವಕಾಲದಲ್ಲೂ, ಸರ್ವರಿಗೂ ಅಗತ್ಯವಾದ, ಸರ್ವರೂ ಅರಿತು

ನಡೆಯಬೇಕಾದ ಮಹಾಕಾವ್ಯ, ಮಹಾನ್ ಆದರ್ಶ ಪುರುಷನೊಬ್ಬನ ಜೀವನ ಸಾಧನೆ, ಧರ್ಮ ಮತ್ತು ಸಂಸ್ಕೃತಿಗಳನ್ನು ಸಾರುವ ಒಂದು ವಿಚಾರಧಾರೆ. ಇದು ಮಹರ್ಷಿ ವಾಲ್ಮೀಕಿಯು ತನ್ನ ತಪಸ್ಸು, ಚಿಂತನೆ, ಜೀವನ ವಿಧಾನಗಳನ್ನು ಎರಕಹೊಯ್ದು ಮಾನವಕುಲಕ್ಕೆ ಕೊಟ್ಟಿರುವ ಅನರ್ಘ್ಯ ಕಾಣಿಕೆ ಎಂದು ಬೋಧಿಸಿ ಆ ಹತ್ತು ದಿನಗಳಲ್ಲಿ ಒಂದು ದಿವ್ಯ-ವಾತಾವರಣವನ್ನು ನಿರ್ಮಾಣ ಮಾಡಿದ್ದರು. ಬಿಡುವಿನ ವೇಳೆಯಲ್ಲಿ ಆ ದೇವಾಲಯವೇ ಅವರ ಬಿಡಾರ. ಅಲ್ಲಿ ಯೋಗ ವಾಸಿಷ್ಠವನ್ನು ಕನ್ನಡಕ್ಕೆ ಅನುವಾದಿಸಿದರು. ಅದೇ ಸಮಯದಲ್ಲಿ ಶ್ರೀ ಜಯಚಾಮರಾಜ ಒಡೆಯರು ರಚಿಸಿದ-ದತ್ತಾತ್ರೇಯರನ್ನು ಕುರಿತ ಹಸ್ತಪ್ರತಿಯೊಂದು ದೇವುಡು ಅವರ ಪರಿಶೀಲನೆಗಾಗಿ ಬಂದಿತ್ತು. ದೇವುಡು ಆ ಕೆಲಸವನ್ನು ಆ ದಿನಗಳಲ್ಲೇ ಮಾಡಿಮುಗಿಸಿದರು. ಅವರ ಜೊತೆಗೇ ಇದ್ದು ಗಮನಿಸುವುದು ನನಗೊಂದು ಸಂತೋಷವಾಗಿತ್ತು ರಾತ್ರಿ ಇಬ್ಬರೂ ಅದೇ ದೇವಾಲಯದಲ್ಲಿ ಮಲಗುತ್ತಿದ್ದೆವು. ಬೆಳಗಿನ ಮೂರು ಗಂಟೆಗೆ ಎದ್ದು ನೋಡಿದರೆ ದೇವುಡು ಹಾಸಿಗೆ ಮೇಲೆ ಕುಳಿತು ಧ್ಯಾನ ಮಗ್ನರಾಗಿರುತ್ತಿದ್ದರು. ಬೆಳಗಾದ ಮೇಲೆ ಸ್ನಾನ ಸಂಧ್ಯಾವಂದನೆ ಇತ್ಯಾದಿ ಊಟೋಪಚಾರಗಳಲ್ಲಿ ಸರ್ವಸಾಮಾನ್ಯ, ಮಾತುಕತೆಗಳಲ್ಲಿ ದೊಡ್ಡವರಲ್ಲಿ ದೊಡ್ಡವರಂತೆ ಮಕ್ಕಳಲ್ಲಿ ಮಕ್ಕಳಂತೆ ಸದಾ ಹರ್ಷಚಿತ್ತರು.

ಇನ್ನೇನು ರಾಮೋತ್ಸವ ಮುಗಿಯುವ ದಿನಗಳು, ಹಿರಿಯೂರಿನ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ವೆಂಕಟೇಶಯ್ಯನವರು ದೇವುಡು ಅವರನ್ನು ತಮ್ಮ ಶಾಲೆಗೆ ಆಹ್ವಾನಿಸಿದರು. ಆ ಶಾಲೆಯ ಮಕ್ಕಳಿಗೆ ಏನಾದರೂ ಹೇಳಬೇಕೆಂದು ಕೋರಿದರು. ದೇವುಡು ಸಂತೋಷದಿಂದ ಒಪ್ಪಿದರು.

ಸಂಜೆ ೪ ಎಂದು ನಿಶ್ಚಯವಾಯಿತು. ದೇವುಡು ಅರ್ಧತಾಸು ಮುಂಚೆಯೇ ಹೊರಟರು.-"ಇಷ್ಟು ಮುಂಚೆಯೇ ಯಾಕೆ? ಯಾರಾದರೂ ಕರೆಯಲರು ಬರುತ್ತಾರೆ ಆಗ ಹೊರಟಾಯಿತು"-ಎಂದರು ನಮ್ಮ ಹನುಮಂತರಾಯರು.

ಅದಕ್ಕೆ ದೇವುಡು-"ಆಗಲ್ಲ ಅವರಾಗಲೇ ಕರೆದಿದ್ದಾಗಿದೆ. ನಾವು ಹೋಗಬೇಕು" ಎಂದು ನಗುತ್ತ ಹೊರಟೇ ಬಿಟ್ಟರು. ಅವರ ಜೊತೆಯಲ್ಲಿ ನಾನು ಹೊರಟೆ. ದಾರಿಯಲ್ಲಿ ಹೆಡ್‌ಮಾಸ್ಟರ್ ವೆಂಕಟೇಶಯ್ಯನವರ ಮನೆಯ ಓಣಿಗೆ ತಿರುಗಿದರು.-"ಅವರ ಮನೆಗೇಕೆ ಶಾಲೆಗೇ ನೇರವಾಗಿ ಹೋಗೋಣ, ಅವರು ಅಲ್ಲಿ ಕಾಯುತ್ತಾರೆ"-ಎಂದೆ.

"ಇರಲಿ ಬನ್ನಿ, ಇಲ್ಲಿ ನೋಡಿ ಹೋಗೋಣ"-ಎಂದು ಅವರ ಮನೆ ಪ್ರವೇಶಿಸಿದರು. ಅಲ್ಲಿ ನೋಡಿದರೆ ವೆಂಕಟೇಶಯ್ಯನವರು ಜ್ವರ ಬಂದು ತೀವ್ರ ಆಯಾಸದಿಂದ ಮಲಗಿದ್ದರು. ಅವರ ಮಿತ್ರರಾದ ವಿಜೇಂದ್ರರಾಯರು ಮತ್ತು ಎಂ.ಎಸ್. ಅವಧಾನಿ ಅವರ ಆ ಪರಿಸ್ಥಿತಿಯಲ್ಲಿ ಸಭೆಯನ್ನೇ ರದ್ದುಮಾಡುವ ಯೋಚನೆಯಲ್ಲಿದ್ದರು. ದೇವುಡು ವೆಂಕಟೇಶಯ್ಯನವರ ಪಕ್ಕದಲ್ಲಿ ಕುಳಿತು ಅವರ ಹಣೆ, ಮೈ, ಕೈ, ಎದೆಯ ಭಾಗವನ್ನೆಲ್ಲ ಸವರಿ ಅವರ ಬಲಗೈ ಹಿಡಿದು ಕುಳಿತರು. ಆಗ ವೆಂಕಟೇಶಯ್ಯನವರು-"ನೀವು ಹೋಗಿ ಶಾಲೆಯಲ್ಲಿ ಸಭೆಯ ಸಿದ್ಧತೆಯನ್ನು ಮಾಡಿ, ನಾನು ಬರು

ವುದಿಲ್ಲ. ನನಗೆ ಅದೃಷ್ಟವಿಲ್ಲ"-ಎಂದು ಆ ಮಿತ್ರರಿಗೆ ಸೂಚಿಸಿದರು.

"ನೀವು ಹೊರಡಿ ಹಾಗೆ ಮಾಡಿ, ಇನ್ನೂ ಅರ್ಧಗಂಟೆಯಲ್ಲಿ ಬರುತ್ತೇವೆ"-ದೇವುಡು ನಗುತ್ತ ನುಡಿದರು. ಆ ಇಬ್ಬರೂ ಹೋದರು. ದೇವುಡು ವೆಂಕಟೇಶಯ್ಯನವರ ಕೈ ಹಿಡಿದುಕೊಂಡು ಸುಮಾರು ಹದಿನೈದು ಇಪ್ಪತ್ತು ನಿಮಿಷ ಕಣ್ಣು ಮುಚ್ಚಿ ಹಾಗೇ ಕುಳಿತರು. ಅನಂತರ ನಿಧಾನವಾಗಿ ಕಣ್ಣು ಬಿಟ್ಟು ನಗುತ್ತ "ಹೀಗೇನೆನ್ನುತ್ತೀರಿ, ಏಳಿ, ಮುಖತೊಳೆದುಕೊಂಡು ಸ್ವಲ್ಪ ಕಾಫೀ ಕುಡಿಯಿರಿ"- ಎಂದರು. ವೆಂಕಟೇಶಯ್ಯನವರು ನಿದ್ದೆಯಿಂದ ಎದ್ದವರಂತೆ ಎದ್ದು ಮುಖ ತೊಳೆದು ಬಂದರು. ಮೂವರು ಕಾಫಿ ಕುಡಿದೆವು.

ದೇವುಡು ಅವರು-"ಹೊರಡೋಣವೇ ದೇವರೂ, ಬಟ್ಟೆ ಹಾಕಿಕೊಳ್ಳಿ, ಹೋಗೋಣ"-ಎಂದರು. ವೆಂಕಟೇಶಯ್ಯನವರು ಹಾಗೇ ಮಾಡಿದರು.

ಶಾಲೆ ಸೇರುವ ವೇಳೆಗೆ ಸಬೆ ಸಿದ್ಧವಾಗಿತ್ತು. ಮುಖ್ಯೋಪಾಧ್ಯಾಯರೇ ಅಧ್ಯಕ್ಷರು. ಸಹೋಪಾಧ್ಯಾಯರೊಬ್ಬರಿಂದ ಸ್ವಾಗತ ಆದ ಮೇಲೆ ದೇವುಡು ತಮ್ಮ ಭಾಷಣ ಪ್ರಾರಂಭಿಸಿದರು.

ಪ್ರಹ್ಲಾದ, ಅಭಿಮನ್ಯು, ಗೌತಮಬುದ್ಧ, ಈ ಕತೆಗಳ ಮೂಲಕ ಮಕ್ಕಳಿಗೆ ತಿಳಿಸಬೇಕಾದ ರೀತಿ, ನೀತಿಗಳ, ಆದರ್ಶಗಳನ್ನು ಬೋಧಿಸಿ ಅಂತಹ ವ್ಯಕ್ತಿತ್ವವನ್ನು ಚಿಕ್ಕ ಮಕ್ಕಳು ಈಗಿನಿಂದಲೇ ರೂಢಿಸಿಕೊಳ್ಳಲು ಸಂಕಲ್ಪ ಮಾಡಬೇಕೆಂದು ಉಪದೇಶಿಸಿದರು. ಉದ್ದಕ್ಕೂ ಅಧ್ಯಕ್ಷ ವೆಂಕಟೇಶಯ್ಯನವರ ಮುಂಗೈಯನ್ನು ಹಿಡಿದುಕೊಂಡೇ ಇದ್ದರು. ಅಧ್ಯಕ್ಷರು ಚಿಕ್ಕದಾಗಿ, ಚೊಕ್ಕವಾಗಿ ಮಾತನಾಡಿದರು. ವಂದನಾರ್ಪಣೆಯ ತರುವಾಯ ದೇವುಡು ಮಕ್ಕಳಿಗೆಲ್ಲ ಪೆಪ್ಪರಮೆಂಟ್ ಹಂಚಿ ಖುಷಿ ಮಾಡಿ ಮಕ್ಕಳಲ್ಲಿ ನಕ್ಕು ನಲಿದರು.

೪

ದೇವನೂರಿನ ಲಕ್ಷ್ಮೀಶ ಕವಿ ಜಯಂತಿಯಲ್ಲಿ ದೇವುಡು ಒಬ್ಬ ಅತಿಥಿ. ಎರಡನೇ ದಿನ ಬೆಳಗಿನ ಸಭೆಯಲ್ಲಿ ಅವರು ಮಾಡಿದ ಉಪನ್ಯಾಸ-"ಚಂದ್ರಹಾಸ" ಲಕ್ಷ್ಮೀಶನ ಕಾವ್ಯದ, ಆ ಪದ್ಯಗಳನ್ನು ಪುಂಖಾನುಪುಂಖವಾಗಿ ಉದ್ಧರಿಸುತ್ತ ಆ ಕಾವ್ಯದ ಸೊಗಸು, ಸೊಬಗು, ಭಾವ, ವಿದ್ವತ್ತು, ವರ್ಣನೆ, ಶೈಲಿ, ಕಥೆಯಮ್ನ ನಡೆಸುವ ರೀತಿ, ಶಬ್ದ ಪ್ರಯೋಗ, ಅಲಂಕಾರ, ಆಕರ್ಷಕತೆ ಇತ್ಯಾದಿಗಳನ್ನು ಎಳೆ ಎಳೆಯಾಗಿ ವಿವರಿಸುತ್ತಾ ಸಭಿಕರೆಲ್ಲರಿಗೂ ಆ ಕವಿಯ ಸತ್ವವನ್ನು ಮನ ಮುಟ್ಟುವಂತೆ ಮಾಡಿದರು.

ಮಾರನೆಯ ದಿನ ಬೆಳಗಿನ ಸಭೆಯಲ್ಲಿ ಅವರಿಂದ `ಭಗವದ್ಗೀತಾ ಉಪನ್ಯಾಸ' ಮಾಸ್ತಿ ಅಧ್ಯಕ್ಷರು, ರಾಜರತ್ನಂ, ಕೆ. ವೆಂಕಟರಾಮಪ್ಪ, ಡಿ. ಶಿವರಾಮಯ್ಯ ಎನ್. ಪ್ರಹ್ಲಾದರಾವ್ ಮುಂತಾದವರು ಶ್ರೋತೃವೃಂದದಲ್ಲಿದ್ದರು. ಸಂಪೂರ್ಣವಾಗಿ ಮೈದುಂಬಿ ಮಾತನಾಡಿದ ದೇವುಡು ಗೀತಾಮೃತವನ್ನು ಸಭಿಕರಿಗೆಲ್ಲ ಉಣಬಡಿಸಿದರಲ್ಲದೇ, ಅದರ ತಿರುಳನ್ನು ತಾವೂ ಸವಿದರು. ಅವರ ಕಣ್ಣಿಂದ ಪದೇ ಪದೇ ಆನಂದ ಭಾಷ್ಪ ಸುರಿಯುತ್ತಿತ್ತು. ಭಯ, ಭರವಸೆ; ಸಂಶಯ, ಪರಿಹಾರ, ಜಿಜ್ಞಾಸೆ, ವ್ಯಾಖ್ಯಾನ, ಸಮಸ್ಯೆ, ನಿವಾರಣೆ ಮುಂತಾದ ಸಂದರ್ಭಗಳಲ್ಲಿ ಎಲ್ಲವನ್ನು ಅನುಭವಿಸಿ,

ಅನುಭವಿಸಿ ಆನಂದಿಸಿದರು. ಬಹುಶಃ ಅಂತಹ ಆವೇಶ ಪೂರ್ಣವಾದ ಉಪನ್ಯಾಸ ಆ ಮುಂಚೆ ನಾನೆಂದೂ ಕೇಳಿರಲಿಲ್ಲ.

ಮೈಮರೆತು ಮಾತನಾಡುತ್ತಿದ್ದ ಅವರನ್ನು ಮಾಸ್ತಿಯವರ ಸೂಚನೆಯಂತೆ ನಾನೆ ಸಮೀಪಕ್ಕೆ ಹೋಗಿ, ಅಡ್ಡ ನುಗ್ಗಿ ಮುಂದಿನ ಕಾರ್ಯಗಳಿಗಾಗಿ ಜನ ಕಾಯುತ್ತಿದ್ದಾರೆಂದು ಪ್ರಾರ್ಥಿಸಿದೆ. ಅವರ ಅಂದಿನ ಭಾಷಣವನ್ನು ಹಾಗೆ ನಿಲ್ಲಿಸದಿದ್ದರೆ ಅವರ ಆ ಆವೇಶ ಯಾವಾಗ ಹೇಗೆ ಪರಿಸಮಾಪ್ತಿಯಾಗುತ್ತಿತ್ತೋ ತಿಳಿಯದು.

ಅಂತೂ ಉಪನ್ಯಾಸವನ್ನು ಹೇಗೋ ಮುಗಿಸಿದರು. ಮಾಸ್ತಿಯವರು ಆ ಭಾಷಣವನ್ನು ಹಾಗೆಯೇ ಉಳಿಯ ಬಿಡಬೇಕೆಂದು ಹೇಳಿ ಅಧ್ಯಕ್ಷ ಭಾಷಣವನ್ನು ಸಂಜೆಯ ಸಭೆಯಲ್ಲಿ ಮಾಡುವುದಾಗಿ ತಿಳಿಸಿಬಿಟ್ಟರು. ಇನ್ನಾವ ಕಲಾಪವೂ ಈ ಕೂಡಲೇ ಬೇಡ ಎಂದು ತಮ್ಮ ತಮ್ಮ ಬಿಡಾರಗಳಿಗೆ ಎಲ್ಲರೂ ಹೋಗಿಬಿಟ್ಟರು.

ಸ್ವಲ್ಪ ಕಾಲದಲ್ಲೇ ಶ್ರೀ ಲಕ್ಷ್ಮೀಕಾಂತ ಸ್ವಾಮಿಯ ಪಲ್ಲಕ್ಕಿ ಉತ್ಸವ ಹೊರಟಿತು. ಮತ್ತೆ ಎಲ್ಲರೂ ಸೇರಿ ದೇವನೂರಿನ ಬೀದಿಗಳಲ್ಲಿ ಉತ್ಸವದೊಂದಿಗೆ ಸಾಗಿದೆವು. ಅಷ್ಟರಲ್ಲಿ ದೇವುಡು ದಾಪುಗಾಲು ಹಾಕುತ್ತ ಬಂದು ಪಲ್ಲಕ್ಕಿಗೆ ಹೆಗಲು ಕೊಟ್ಟೇ ಬಿಟ್ಟರು. ಊರಿನ ಸಾಮಾನ್ಯ ಯುವಕರು ಮಾಡಬೇಕಾದ ಆ ಕೆಲಸಕ್ಕೆ ಈ ಉದ್ದಾಮರು ಹೆಗಲು ಕೊಟ್ಟಿದ್ದು, ಅಲ್ಲಿದ್ದ ಎಲ್ಲರನ್ನು ಬೆರಗುಗೊಳಿಸಿತು. ದೇವುಡು ಕಣ್ಣುಮುಚ್ಚಿದ್ದರು. ಅವರ ಮೈ ಕಂಪಿಸುತ್ತಿತ್ತು. ಪಲ್ಲಕ್ಕಿಯನ್ನು ಹೊತ್ತಿದ್ದ ಇತರರು ಕಷ್ಟದಿಂದ ತಳ್ಳಿಕೊಂಡು ಮುಂದೆ ಸಾಗಬೇಗಿತ್ತು. ಇದನ್ನು ಗಮನಿಸಿದ ಮಾಸ್ತಿ ನನ್ನನ್ನು ಕರೆದು-"ಅವರಿಗೇಕೇ ಅವಕಾಶ ಕೊಟ್ಟಿರಿ? ಅವರಿನ್ನೂ ಗೀತೆಯ ಗುಂಗಿನಿಂದ ಹೊರಬಂದಿಲ್ಲ ಪಲ್ಲಕ್ಕಿ ಸಹಿತ ಬಿದ್ದುಬಿಟ್ಟಾರು"-ಎಂದರು ತವಕದಿಂದ. ನಾವಾಗಲೇ ಪ್ರಯತ್ನಪಟ್ಟೆವು ಅವರು ಬಿಡುವಂತಿಲ್ಲ ಎಂದೆ.

"ಹಾಗೆಂದು ಸುಮ್ಮನಾಗಬಾರದು, ಏನೋ ಮಾಡಿ ಅವರನ್ನು ಬಿಡಿಸಲೇ ಬೇಕು"-ಎಂದು ಒತ್ತಾಯಿಸಿದರು. ನಾವು ಕೆಲವರು ಹೋಗಿ ದೊಡ್ಡ ಧ್ವನಿಯಲ್ಲಿ ಅವರನ್ನು ಮಾತನಾಡಿಸಿ ಬಲವಂತದಿಂದ ಅವರ ಕೈ ಬಿಡಿಸಿ, ಈಚೆಗೆ ಕರೆತಂದೆವು. ಇನ್ನೂ ಅವರ ಮೈ ಕಂಪಿಸುತ್ತಲೇ ಇತ್ತು. ಕೈಹಿಡಿದು ನಿಧಾನವಾಗಿ ಅವರ ಬಿಡಾರಕ್ಕೆ ಕರೆ ತಂದು ಮಲಗಿಸಿ ಬಿಟ್ಟೆವು. ಅಲ್ಲೊಬ್ಬರನ್ನು ಕಾವಲಿಟ್ಟು ಬಂದುಬಿಟ್ಟೆವು. ಆವೇಶವೋ, ನಿದ್ದೆಯೋ, ಬಹುಹೊತ್ತು ಮಲಗಿಯೇ ಇದ್ದರು.

ಮಧ್ಯಾಹ್ನದ ಊಟಕ್ಕೆ ಅವರು ಬರಲಿಲ್ಲ. ಸಾಯಂಕಾಲದ ವೇಳೆಗೆ ಮಾಮೂಲು ಸ್ಥಿತಿಗೆ ಬಂದಿದ್ದರು. ಲಘು ಆಹಾರ ಸೇವಿಸಿ ಸಭೆಗೆ ಬಂದರು, ಆ ಸಂಜೆಯ ಸಭೆಯಲ್ಲಿ ಶ್ರೀ ರಾಜರತ್ನಂರವರ "ನಮ್ಮ ನಾಡಿನ ಗೊಮ್ಮಟಗಳು"-ರಸಗವಳ ಸಿದ್ಧವಾಗಿತ್ತು.

೫

ಬೆಂಗಳೂರಿನ ಶಂಕರಮಠದ ಎದುರು ಸಾಲಿನಲ್ಲಿದ್ದ ಅವರ ಬಾಡಿಗೆ ಮನೆಯಲ್ಲಿ ದೇವುಡು ಅವರನ್ನು ಕಂಡೆ. "ಗೌರೂ, ಯಾರು ಬಂದಿದ್ದಾರೆ ನೋಡು" ಎಂದು ಅವರ ಧರ್ಮ ಪತ್ನಿಯನ್ನು ಕರೆದು ನನ್ನನ್ನು ಅವರಿಗೆ ಪರಿಚಯಿಸಿದರು. ಕುವೆಂಪು ಅವರ `ಬೆರಳಿಗೆ ಕೊರಳ್" ಹಳಗನ್ನಡ

ನಾಟಕವನ್ನು ದೇವನೂರಿನ ಪುರಾಣಿ ಮಕ್ಕಳಿಂದ ಬಹು ಪರಿಣಾಮಕಾರಿಯಾಗಿ ಆಡಿಸಿದ್ದನ್ನು ವಿವರಿಸಿ ಅಸ್ಖಲಿತವಾದ ಆ ಹಳಗನ್ನಡದ ಉಚ್ಚಾರ, ಭಾವಪೂರ್ಣವಾದ ಅಭಿನಯ, ತಕ್ಕುದಾದ ವೇಷಭೂಷಣಗಳನ್ನೆಲ್ಲ ವಿವರಿಸಿದರು. ಕೊನೆಯಲ್ಲಿ-"ಇಷ್ಟೆಲ್ಲ ಹೇಳಿದ ಮೇಲೆ-ಇವರಿಗೆ ನಿನ್ನ ಅತಿಥ್ಯ ಏನು?" ಎಂದು ನಕ್ಕರು. ಆ ಅಜ್ಜಮ್ಮನವರು ಒಳಗೆ ಹೋಗಿ ಒಂದು ಚಿಕ್ಕ ತಟ್ಟೆಯಲ್ಲಿ ಎರಡು ಕೋಡುಬಳೆ ತಂದಿಟ್ಟರು. ದೇವುಡು ಗಟ್ಟಿಯಾಗಿ ನಗುತ್ತ-"ಆತನ ಬಾಯಿ ನೋಡಲಿಲ್ಲವೇ? ಕೋಡುಬಳೆ ತಂದುಕೊಟ್ಟಿದ್ದೀಯಲ್ಲ" ಎಂದಾಗ ಅಜ್ಜಿ ತಬ್ಬಿಬ್ಬಾಗಿ ನಿಂತರು.

"ಹೋಗಲಿ ಬಿಡು ಮನೆಯಲ್ಲಿ ಇನ್ನೇನು ಇಲ್ಲ ಎಂದು ಹೇಳಲು ಸಂಕೋಚಪಡಬೇಕಾಗಿಲ್ಲ ಒಂದು ಲೋಟ ಮಜ್ಜಿಗೆ ತಂದುಕೊಡು"-ಎಂದರು. ಆ ತಾಯಿ ಹಾಗೆ ಮಾಡಿದರು. ದೇವನೂರಿನ ಸಭೆ, ಸಮಾರಂಭ ಅಲ್ಲಿನ ಉಪನ್ಯಾಸಕರು ಊಟೋಪಚಾರಗಳು ಮುಂತಾದವನ್ನೆಲ್ಲ ಸ್ಮರಿಸಿದ್ದು ನನಗೂ ಖುಷಿ ತಂದಿತ್ತು.

೬

ಮೈಸೂರಿನಲ್ಲಿ ಉಪಾಧ್ಯಾಯರ ಟ್ರೈನಿಂಗ್ ಪಡೆಯಲು (TCH) ಹೋಗಿದ್ದೆ. ಚನ್ನರಾಯಪಟ್ಟಣ ಸಮೀಪದ ಬಾಗೂರಿನ ಮಿತ್ರ ಶ್ರೀ ಟಿ.ಎಲ್. ರಾಮಚಂದ್ರರಾಯರು ನನ್ನೊಡನಿದ್ದರು. ಮೈಸೂರಿನ ನರಸಿಂಹರಾಜ ಕಾಲೊನಿಯಲ್ಲಿ ಒಂದು ರೂಮು ಬಾಡಿಗೆಗೆ ಪಡೆದು ಅಡಿಗೆ ಮಾಡಿಕೊಳ್ಳುತ್ತಿದ್ದೆವು. ಪ್ರತಿ ಭಾನುವಾರದ ಬಿಡುವಿನಲ್ಲಿ ಸುತ್ತಾಡಲು ಹೋಗುತ್ತಿದ್ದೆವು. ಹೀಗೆ ಒಂದು ಭಾನುವಾರ ಶ್ರೀ ತ.ಸು. ಶಾಮರಾಯರು ಹಾಗೂ ಪ್ರೊಫೆಸರ್ ವೆಂಕಣ್ಣಯ್ಯನವರ ಮಗ ಅಶ್ವತ್ಥಣ್ಣ ಇವರನ್ನು ಭೇಟಿಯಾಗೋಣವೆಂದು ಹೊರಟೆ.

ಸಂಸ್ಕೃತ ಮಹಾ ಪಾಠಶಾಲೆಯ ಸಮೀಪ ಹೋಗುತ್ತಿದ್ದಾಗ ಶ್ರೀ ಜಯಚಾಮರಾಜ ಒಡೆಯರ್ ಅವರು ಕಾರಿನಲ್ಲಿ ಆ ಮಹಾಪಾಠಶಾಲೆಯಿಂದ ಹೊರಟು ಅರಮನೆಯ ಕಡೆ ಹೋದರು. ಇಲ್ಲೇನು ವಿಶೇಷ ಎಂದು ಆ ಮಹಾ ಪಾಠಶಾಳೆಯ ಕಡೆ ಕಣ್ಣು ಹಾಯಿಸಿದೆ. ಆ ಕಾಂಪೌಂಡಿನ ತುಂಬ ವಿವಿಧ ಬಣ್ಣಗಳ ವೇಷಭೂಷಣಗಳ ಜಗಮಗಿಸುವ ಶಾಲುಗಳ, ಕರ್ಣಕುಂಡಲಗಳ, ಕಂಠೀಹಾರಗಳ, ಕೈತೋಡಾಗಳ ಉಂಗುರಗಳ, ಮತ್ತಿತರ ಆಕರ್ಷಕ ಅಲಂಕಾರಗಳ ನೂರಾರು ಜನರು ಪರಸ್ಪರ ಮಾತನಾಡುತ್ತ ನಿಂತದ್ದನ್ನು ಕಂಡೆ. ಅದೊಂದು ಅಪರೂಪದ, ಮನಸೆಳೆಯುವ ದೃಶ್ಯವಾಗಿತ್ತು. ಅಲ್ಲಿ ಯಾವುದೋ ಸಂಸ್ಕೃತದ ಸಭೆ ನಡೆದಿದ್ದು ಅದಕ್ಕಾಗಿ ನಾನಾ ಕಡೆಗಳಿಂದ ಬಂದ ಪಂಡಿತರ ಸಮೂಹ ಅದೆಂದೂ, ಶ್ರೀಮನ್ ಮಹಾರಾಜರು ಆ ಸಭೆಗೆ ಬಂದಿದ್ದರೆಂದೂ ಊಹೆಯಾಯಿತು. ಹಾಗೆಯೇ ನೋಡಿದರೆ, ಅವರ ನಡುವೆ ಯಾವುದೇ ಆಕರ್ಷಕ ಬಣ್ಣದ ಉಡುಪು ತೊಡಪುಗಳಿಲ್ಲದ, ಅಭರಣಾದಿ ಅಲಂಕಾರಗಳಿಲ್ಲದ, ಕೇವಲ ಸಾಧಾ ಕಚ್ಚೆಪಂಚೆ, ಮೊಳಕೈ ಕೆಳಗಿನವರೆಗೂ ಇದ್ದ ತೋಳಿನ ಬನಿಯನ್, ಹೆಗಲ ಮೇಲೆ ಸಾದಾರಣವಾದ ಕಡ್ಡಿಯಂಚಿನ ಶಲ್ಯ ಧರಿಸಿದ್ದ, ಒಂದು ವಾರದಷ್ಟು ಹಿಂದೆ ಕ್ಷೌರವಾಗಿದ್ದು ಬೋಳುತಲೆಯ ಮತ್ತು ಗೌರವರ್ಣದ ಮುಖದ ವ್ಯಕ್ತಿಯೊಬ್ಬರು, ಆ ಸಮೂಹದಲ್ಲಿ ಓಡಾಡುತ್ತಿದ್ದುದು ಅರಿಸಿಟ್ಟಂತೆ ಪ್ರತ್ಯೇಕವಾಗಿ ಕಾಣಿಸಿತು. ಇವರಾರೆಂದು ಗಮನಿಸಿದಿರೆ `ದೇವುಡು ನರಸಿಂಹಶಾಸ್ತ್ರಿಗಳು'! ಅಚ್ಚರಿಯಿಂದ ನೋಡುತ್ತಾ ನಿಂತೆ. ಅವರೂ ಏಕೋ ನನ್ನತ್ತ

ನೋಡಿದರು. ನಿಂತಲ್ಲಿಂದಲೇ ಕೈಜೋಡಿಸಿ ನಮಸ್ಕರಿಸಿದೆ. ಅವರು ಕೈ ಎತ್ತಿ ನಿಲ್ಲುವಂತೆ ಸೂಚಿಸಿದರು. ನಾನು ಅಲ್ಲೇ ನಿಂತೆ. ಸ್ವಲ್ಪ ಹೊತ್ತಿನಲ್ಲೇ ಅಲ್ಲಿದ್ದವರಿಗೆಲ್ಲ ಕೈ ಕುಲುಕಿ, ಕೈ ಜೋಡಿಸಿ ನಗುನಗುತ್ತಾ ಗೇಟಿನ ಕಡೆ ಬಂದರು. ಅಷ್ಟರಲ್ಲಿ ಕಾರಿನಿಂದ ಬಂದ ಒಬ್ಬರು ಬನ್ನಿ ಎಲ್ಲಿಗೆ ಬೇಕೋ, ಬಿಡುತ್ತೇನೆ" ಎಂದು ಅವರನ್ನು ಕರೆದರು.

"ನನ್ನ ಮಿತ್ರರು ಬಂದಿದ್ದಾರೆ. ತಾವು ದಯಮಾಡಿ" ಎಂದು ವಿನಯದಿಂದ ಹೇಳಿ ಕಳುಹಿಸಿದರು.

"ಬನ್ನಿ ದೇವರೂ ಹೋಗೋಣ. ಈ ಮೂರು ದಿನವೂ ಇಲ್ಲಿ ಒಂದು ಸಂಸ್ಕೃತ ವಿದ್ವಾಂಸರ ಸಮ್ಮೇಳನ ನಡೆಯಿತು. ಈಗ ತಾನೇ ನಮ್ಮ ಮಹಾರಾಜರ ಸಮಾರೋಪ ಭಾಷಣದೊಂದಿಗೆ ಮುಕ್ತಾಯವಾಯಿತು. ಅದಿರಲಿ ನೀವೇನು ಇಲ್ಲಿ" ಎಂದರು.

"ನಾನಿಲ್ಲಿ ಟಿ.ಸಿ.ಹೆಚ್. ಓದುತ್ತಿದ್ದೇನೆ"-ಎಂದೆ.

"ಹಾಗಾದರೆ, ಊಟಕ್ಕೆ?"-ಎಂದು ವಿಚಾರಿಸಿದರು.

"ಬಾಡಿಗೆ ರೂಮು, ಸ್ವಯಂಪಾಕ"

"ಒಬ್ಬರೇನೇ"

"ಇಲ್ಲ, ನನ್ನ ಇನ್ನೊಬ್ಬ ಮಿತ್ರರೂ ಜೊತೆಗಿದ್ದಾರೆ."

"ಹಾಗಾದರೆ ಅಲ್ಲಿಗೇ ಹೋಗೋಣವೇ?"– ನಗುತ್ತ ಕೇಳಿದರು.

"ಬಹಳ ಸಂತೋಷ ಹೋಗೋಣ".

"ತೊಂದರೆ ಏನೂ ಇಲ್ಲ ತಾನೆ"

"ಇಲ್ಲ, ಇಲ್ಲ. ನಾನೇ ಕರೆಯಬೇಕೆಂದಿದ್ದೆ. ಸ್ವಲ್ಪ ಸಂಕೋಚವಾಯಿತು."

"ಇನ್ನೂ ಸಂಕೋಚವೇ?"

"ಹೌದು, ದೊಡ್ಡವರನ್ನು ಕರೆಯಬೇಕೆಂದರೆ..."

"ಅದೆಲ್ಲ ಬೇಡ, ನಡೆಯಿರಿ, ಎಲ್ಲಿ ನಿಮ್ಮ ರೂಮು?"

"ನರಸಿಂಹರಾಜ ಮೊಹಲ್ಲದಲ್ಲಿ. ತುಂಬ ದೂರಾ. ಆದರೆ ಸಿಟಿ ಬಸ್ ಇದೆ".

"ಸರಿ ಮತ್ತೆ"-ಹೊರಟರು.

ದಿವಾನ್ ರಂಗಾಚಾರ್ಲು ಭವನದ ಪಕ್ಕದಲ್ಲಿ, ಆಗ ಸಿಟಿ ಬಸ್‌ಗಳು ನಿಲ್ಲುವ ಜಾಗ (ಈಗಿನ ದೊಡ್ಡ ಬಸ್‌ಸ್ಟಾಂಡ್‌ನ ಎದುರು ಮೂಲೆ). ಇಬ್ಬರೂ ಒಂದು ಕಲ್ಲು ಬೆಂಚಿನ ಮೇಲೆ ಕುಳಿತೆವು–ಬಸ್ಸಿಗಾಗಿ ಕಾಯುತ್ತ. ಅಷ್ಟರಲ್ಲಿ "ಸೌತೇಕಾಯಿ" ಕೂಗುತ್ತಾ ಒಬ್ಬ ಹೆಂಗಸು ಉಪ್ಪುಕಾರ ಹಚ್ಚಿದ ಸೌತೆಕಾಯಿ ಸೀಳುಗಳನ್ನು ಮಾರುತ್ತ ಬಂದಳು.

"ಎರಡು ಸೀಳುಗಳನ್ನು ತೆಗೆದುಕೊಳ್ಳಿ"-ಎಂದರು ದೇವುಡು. ನಾನು ಕೂಡಲೇ ಎಂಟಾಣೆಗೆ ನಾಲ್ಕು ಸೀಳುಗಳನ್ನು ಕೊಂಡು ಅವರಿಗೆ ಕೊಟ್ಟೆ. ಅಲ್ಲೇ ಕುಳಿತು ಚಿಕ್ಕ ಮಕ್ಕಳಂತೆ ಕರಕರನೆ ಅಗಿದು ತಿಂದುಬಿಟ್ಟರು. ಕೈಗಳನ್ನು ಒಂದಕ್ಕೊಂದು ಕೊಡವಿಕೊಂಡು ಅನಂತರ ತಮ್ಮ ಅಂಗವಸ್ತ್ರದಿಂದ ಒರೆಸಿಕೊಂಡರು. ಅಷ್ಟರಲ್ಲಿ ಬಸ್ಸು ಬಂತು. ಎದ್ದು ನಿಂತೆವು.

"ನನ್ನಲ್ಲಿದ್ದ ಎಂಟಾಣೆಗೆ ಸೌತೆಕಾಯಿ ಕೊಂಡೆ. ನಿಮ್ಮಲ್ಲಿ ಹಣ ಇದ್ದರೆ ಮಾತ್ರ ಬಸ್ಸು ಹತ್ತಬಹುದು"–ಎಂದು ಸಂಕೋಚವಾದರೂ ಅನಿವಾರ್ಯವೆಂದು ಹೇಳಿದೆ.

"ಓಹೋ, ಏಕಾದಶೀ ಮನೆಗೆ ಶಿವರಾತ್ರಿ ಬಂದಂತಾಯಿತು"-ಎಂದು ನಕ್ಕರು. ನನ್ನ ಮನಸ್ಸಿಗೆ ತುಂಬ ಕಸಿವಿಸಿ ಆಯಿತು. ಏನೂ ತೋಚದೆ ನಿಂತೆ.

"ನಡೆಯಿರಿ ನಡೆದೇ ಹೋಗೋಣ"-ಎಂದರು. ಧ್ವನಿಯಲ್ಲಿ ಬೇಸರವಿರಲಿಲ್ಲ.

"ನರಸಿಂಹರಾಜ ಮೊಹಲ್ಲ ತುಂಬಾ ದೂರ. ಈಗಾಗಲೇ ಬಿಸಿಲೇರಿದೆ"-ಎಂದೆ.

"ನಿಮ್ಮ ನರಸಿಂಹರಾಜ ಮೊಹಲ್ಲ ಈ ಭೂಮಂಡಲದ ಮೇಲೆ ಇದೆಯೋ ಅಥವಾ ಇದ ರಾಚೆಗೆ ಇದೆಯೋ"-ಎನ್ನುತ್ತಾ ನಕ್ಕರು.

"ಈ ಭೂಮಿಯ ಮೇಲೇ ಇದೆ"–ಎಂದೆ ನಗುತ್ತಾ, ಒಳಗೆ ಮುಜುಗರ ತುಂಬಿಕೊಂಡು.

"ಹಾಗಾದರೆ ನಡೆಯಿರಿ ಹೋಗೋಣ"-ಹೊರಟೇಬಿಟ್ಟರು ನನಗಿಂತ ಮುಂಚೆ.

ನನಗೊಂದೂ ತಿಳಿಯಲಿಲ್ಲ. ಬಾಯಿ ಉಪಚಾರದ ಮಾತುಗಳನ್ನಾಡುತ್ತ ನಡೆದೆ.

"ಹೋಗಬೇಕು ಎಂದಾಗ ಹೋದರಾಯಿತು. ಯಾರಿಗೆ ಯಾರು ಉಪಚಾರ ಹೇಳೋದು–ನನ್ನ ಜೊತೆಯಲ್ಲಿ ನೀವು ನಡೆಯುತ್ತಿಲ್ಲವೇ"-ಎಂದು ಸುಮ್ಮನಿರಿಸಿದರು. ಅಂತೂ ಆ ಉರಿ ಬಿಸಿಲಿನಲ್ಲಿ ತಮ್ಮ ಕಡ್ಡಿಯಂಚಿನ ಶಲ್ಯವನ್ನು ತಲೆಯ ಮೇಲಿಂದ ಇಳಿಬಿಟ್ಟುಕೊಂಡು ನಡೆದೇಬಿಟ್ಟರು. ದಾರಿ ಯುದ್ದಕ್ಕೂ ತಮ್ಮಗುರುಗಳಾದ ಸರ್.ಎಸ್. ರಾಧಾಕೃಷ್ಣನ್‌ರವರು ಮಹಾರಾಜಾ ಕಾಲೇಜಿಗೆ ಬರುತ್ತಿದ್ದುದು, ಅವರ ಶಿಸ್ತು, ಬೋಧಿಸುತ್ತಿದ್ದ ರೀತಿ ಇತ್ಯಾದಿಗಳನ್ನು ವಿವರಿಸುತ್ತ, ಅವರು ತರಗತಿಗೆ ಬಂದ ಕೂಡಲೇ ಅಂದಿನ ದಿನಪತ್ರಿಕೆಯಿಂದ ಕೆಲವು ಮುಖ್ಯ ವಿಷಯಗಳನ್ನು ಓದಿ ಹೇಳುತ್ತಿದ್ದರು: ಅದು ಅವರು ತಮ್ಮ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಜನರಲ್ ನಾಲೆಡ್ಜ್ ಆಗಿತ್ತು. ಇದಕ್ಕಾಗಿ ೧೫ ನಿಮಿಷಗಳು ಮೀಸಲು. ನಂತರ ದಿನದ ಪಾಠ ಷುರುವಾಯಿತೆಂದರೆ ವಿದ್ಯಾರ್ಥಿಗಳನ್ನು ಅತ್ತಿತ್ತ ಅಲುಗದಂತೆ ಹಿಡಿದಿಡುತ್ತಿದ್ದರು. ಬೇರೆ ತರಗತಿಗಳ ವಿದ್ಯಾರ್ಥಿಗಳೂ ಸಹ ಸದ್ದಿಲ್ಲದಂತೆ ತಪ್ಪಿಸಿಕೊಂಡು ಬಂದು ನಮ್ಮ ಕೊಠಡಿಯಲ್ಲಿ ಕೂತು ಕೇಳುತ್ತಿದ್ದರು. ಇತ್ಯಾದಿ ಇತ್ಯಾದಿ ತಮ್ಮ ವಿದ್ಯಾರ್ಥಿ ಜೀವನವನ್ನು ನೆನೆಯುತ್ತ ನಡೆದರು. ಅಷ್ಟರಲ್ಲಿ ಸೇಂಟ್ ಫಿಲೋಮಿನಾ ಚರ್ಚ್ ಬಳಿ ಬಂದಾಗ ಡಿ.ಪಿ.ಐ. ಮಲ್ಲಾರಾಧ್ಯರು ಕಾರಿನಲ್ಲಿ ಎದುರುಗಡೆಯಿಂದ ಬಂದು ಇವರನ್ನು ನೋಡಿ ಕಾರಿನಿಂದ ಇಳಿದರು. ಪರಸ್ಪರ ವಂದನೆಗಳಾದ ಮೆಲೆ `ಏನು. ಹೀಗೆ ಹೋರಟಿದ್ದೀರಿ ಬಿಸಿಲಿನಲ್ಲಿ" ಎಂದು ಕೇಳಿದರು ಮಲ್ಲಾರಾಧ್ಯರು.

"ಇವರು, ನನ್ನ ಮಿತ್ರರು. ಇವರಲ್ಲಿಗೆ ಹೋಗುತ್ತಿದ್ದೇನೆ"-ಎಂಧು ನಗುತ್ತ ನಯವಾಗಿ ನುಡಿದರು ದೇವುಡು.

"ಬನ್ನಿ, ಕಾರಿನಲ್ಲಿ ಎಲ್ಲಿಗೆ ಬೇಕೋ ಅಲ್ಲಿಗೆ ಬಿಡುತ್ತೇನೆ"

"ಅಯ್ಯೋ-ಯ್ಯೋ!? ನಿಮ್ಮ ಕಾರಿನಲ್ಲಿ ನಾನೇ!?" ಎಂದರು ಶಾಸ್ತ್ರಿಗಳು ನಗುತ್ತ.

"ಏಕೆ ಹಾಗನ್ನುತ್ತೀರಿ! ಈ ಕಾರು ನಿಮ್ಮಿಂದಲೇ ಬಂದಿದ್ದು ಒಂದರ್ಥದಲ್ಲಿ" ಎಂದರು ಡಿ.ಪಿ.ಐ.

"ಅದೇನ್ ದೇವರೂ ಹಾಗೆ ಅಪ್ಪಣೆ ಕೊಡಿಸುತ್ತೀರಿ?" ಆಶ್ಚರ್ಯದಿಂದ ಕೇಳಿದರು ದೇವುಡು.

"ಅಹುದು. ಅಂದು ನೀವು ರಾಜೀನಾಮೆ ಕೊಡದಿದ್ದರೆ ನನಗಿಂತ ಮುಂಚೆ ನೀವೇ ಡಿ.ಪಿ.ಐ. ಆಗಿರುತ್ತಿದ್ದಿರಿ. ನನ್ನ ಸರದಿ ಬರುವ ವೇಳೆಗೆ ನಾನು ರಿಟೈರ್ ಆಗಿರುತ್ತಿದ್ದೆ ಅಲ್ಲವೇ?" ಎಂದರು.

ಇಬ್ಬರೂ ಪರಸ್ಪರ ಕೈಹಿಡಿದು ಗಟ್ಟಿಯಾಗಿ ನಕ್ಕರು.

"ಅದೆಲ್ಲ ಅವರವರ ಪಾಲಿಗೆ ಬಂದ ಪಂಚಾಮೃತ ದೇವರೂ. ಈಗ ನಾನು ಇವರ ಜೊತೆಗೆ ನಡೆದು ಹೋಗುವುದು ನನಗೆ ದೊರೆತಿರುವ ಪಂಚಾಮೃತ. ಹೋಗಿಬನ್ನಿ"-ಶಾಸ್ತ್ರಿಗಳು ಹೆಜ್ಜೆ ಹಾಕಿದರು. "ಕಾರಿನಲ್ಲಿ ಬಿಡುತ್ತೇನೆ ಎಂದೆನಲ್ಲ"

"ದಯವಿಟ್ಟು ಅಷ್ಟು ತೊಂದರೆಬೇಡ. ಇಲ್ಲೇ ಇನ್ನು ಹತ್ತು ಹೆಜ್ಜೆ ಹಾಕಿದರೆ ಇವರ ಮನೆ. ನಮಸ್ಕಾರ ಹೋಗಿ ಬನ್ನಿ–ಮತ್ತೆ ಕಲೆಯೋಣ". ಮುಂದೆ ಹೊರಟು ಇನ್ನು ಒಂದು ಮೈಲಿ ನಡೆದು ನನ್ನ ರೂಮು ತಲುಪಿದೆವು. ವೇಳೆ ಹನ್ನೆರಡಾಗಿತ್ತು.

ರೂಮಿನ ಬಾಗಿಲಿಗೆ ಹೋದಾಗ ನೋಡುತ್ತೇನೆ ನನ್ನ ಮಿತ್ರ ರಾಮಚಂದ್ರರಾಯರು ಬಾಗಿಲಿಗೆ ಬೀಗ ಹಾಗಿ ಎಲ್ಲೋ ಹೊರಟು ಹೋಗಿದ್ದರು. ಆ ಬೀಗಕ್ಕಿದ್ದ ಮತ್ತೊಂದು ಕೈಯನ್ನು ಕೆಲವು ದಿಗಳ ಹಿಂದೆ ನಾನೇ ಕಳೆದಿದ್ದೆ. ಅಂದಿನಿಂದ ಬೀಗ ಹಾಕುವ ತೆಗೆಯುವ ಗೊಡವೆಗೆ ನಾನು ಹೋಗಬಾರದೆಂದು ಇಬ್ಬರಿಗೂ ಒಪ್ಪಂದವಾಗಿತ್ತು. ಅದೇನೆ ಇರಲಿ. ಅಷ್ಟು ದೂರದಿಂದ ಆ ಉರಿ ಬಿಸಿಲಿನಲ್ಲಿ ಆ ಹಿರಿಯರನ್ನು ಕರೆದುಕೊಂಡು ಬಂದು ಇಲ್ಲಿ ಹೀಗಾಗಬೇಕೇ! ನನಗೆ ದಿಕ್ಕೇ ತೋಚಲಿಲ್ಲ. ಅವರಂತೂ ಸ್ವಲ್ಪವೂ ಬೇಸರ ಪಡದೇ ರಸ್ತೆಯ ಬದಿಯಲ್ಲಿದ್ದ ಮರದ ನೆರಳಿಗೆ ಮೈಯೊಡ್ಡಿ ನಿಂತುಬಿಟ್ಟರು.

ನಾನು ಗಡಿಬಿಡಿಯಲ್ಲಿ ಓಡಾಡುತ್ತಿದ್ದುದನ್ನು ಮನೆಯ ಮಾಲೀಕರು ನೋಡಿ ನನ್ನನ್ನು ಕರೆದು "ಅವರು ದೇವುಡು ನರಸಿಂಹ ಶಾಸ್ತ್ರೀಗಳೇ" ಎಂದು ಅನುಮಾನದಿಂದ ಕೇಳಿದರು.

ನಾನು ಹೌದೆಂದೆ. `ಮಹಾ ಬ್ರಾಹ್ಮಣ' ಪುಸ್ತಕದಲ್ಲಿ ಅವರ ಫೋಟೋ ನೋಡಿದ್ದರಿಂದ ಅವರೇ ಇರಬೇಕೆಂದು ಊಹಿಸಿದೆ. ಅವರಿಲ್ಲಿಗೇಕೆ ಬಂದಿದ್ದಾರೆ ಎಂದರು.

"ಅವರನ್ನು ನಾನೇ ಕರೆತಂದೆ. ಇಲ್ಲಿ ನನ್ನ ಜೊತೆಗಾರರು ಬೀಗ ಹಾಕಿ ಎಲ್ಲಿಗೋ ಹೋಗಿಬಿಟ್ಟಿದ್ದಾರೆ. ಇವರನ್ನು ಒಳಗೆ ಕರೆದುಕೊಂಡು ಹೋಗಲು ಅವಕಾಶವಿಲ್ಲ. ನಿಮ್ಮಲ್ಲಿ ಒಂದು ಸುತ್ತಿಗೆ. ಅಥವಾ ಗುಂಡುಕಲ್ಲು, ಇದ್ದರೆ ಕೊಡಿ. ಬೀಗ ಮುರಿದುಬಿಡುತ್ತೇನೆ" ಎಂದೆ.

"ಬೀಗ ಮುರಿಯುವುದು ಬೇಡ. ನಮ್ಮ ಮನೆಯಿಂದ ನಿಮ್ಮ ರೂಮಿಗೆ ಒಂದು ಬಾಗಿಲಿದೆಯಲ್ಲವೇ ಅದನ್ನು ಮುಚ್ಚಿ ಈಚೆಯಿಂದ ಬೋಲ್ಟ್ ಹಾಕಿದ್ದೇವೆ. ಬೇಕಾದರೆ ಅದರ ಮೂಲಕ ಒಳಕ್ಕೆ ಹೋಗಬಹುದಲ್ಲ" ಅಂದರು.

ನನಗೆ ತಲೆಯ ಭಾರವೆಲ್ಲ ಇಳಿದಂತಾಯಿತು. ಆ ಬಾಗಿಲಿಗೆ ಅಡ್ಡವಾಗಿಟ್ಟಿದ್ದ ದೊಡ್ಡ ಅಲ್ಮೇರಾವನ್ನು ಸರಿಸಿ ಅಲ್ಲಿ ಕಟ್ಟಿದ್ದ ಜೇಡನ್ನು ಒರೆಸಿ ಚೊಕ್ಕ ಮಾಡಿ, ಬೋಲ್ಟ್ ತೆಗೆದು ನಮ್ಮನ್ನು ಒಳಕ್ಕೆ ಬಿಟ್ಟರು. ಅಲ್ಲಿ ನೋಡಿದರೆ ಒಲೆ ಹಚ್ಚಿದ ಕುರುಹಿಲ್ಲ. ಜಳ ಜಳ ತೊಳೆದ ಪಾತ್ರೆಗಳು ಒಂದರ ಪಕ್ಕದಲ್ಲೊಂದು ಸಾಲಾಗಿದ್ದವು.

"ಈಗ ಊಟಕ್ಕೆ ಹೇಗೇ?" ಕೇಳಿದೆ.

"ಊಟವಂತೂ ಆಗಲೇ ಬೇಕು. ಅದಂತೂ ನಿರ್ದಾಕ್ಷಿಣ್ಯ" ಎಂದರು.

"ಹೋಟೆಲಿನಿಂದ ತಂದರೆ ಆದೀತೇ" ಅನುಮಾನಿಸುತ್ತ ಕೇಳಿದೆ.

"ಅಗತ್ಯವಾಗಿ ಆಗಬಹುದು, ಅದೂ ಊಟವೇ ತಾನೆ" ಎನ್ನುತ್ತಾ ಉತ್ತರಿಸಿದರು.

ಅದೇ ಪಕ್ಕದ ಬಾಗಿಲಿಂದ ಹೋಗಿ ಹೋಟೆಲ್‌ನಲ್ಲಿ ಕ್ಯಾರಿಯರಿನಲ್ಲಿ ಊಟ ತಂದೆ. ಜೊತೆಗೆ ಅಲ್ಲಿದ್ದ ಜಿಲೇಬಿ, ಮೈಸೂರು ಪಾಕು, ಬಾಳೆಹಣ್ಣು ಕಟ್ಟಿಸಿಕೊಂಡೆ. ಸರಿ, ಪಕ್ಕದ ಬಾಗಿಲನ್ನು ಮುಚ್ಚಿ ಪರಸ್ಪರ ಉಪಚಾರ ಮಾಡುತ್ತ ಊಟ ಮಾಡಿದೆವು. ಅವರಿಗೆ ಸಕ್ಕರೆ ಕಾಯಿಲೆ, ಇತ್ಯಾದಿ ಏನೂ ಇರಲಿಲ್ಲವಾದ್ದರಿಂದ ಸಿಹಿ ತಿಂಡಿಗಳನ್ನು ಧಾರಾಳವಾಗಿ ತಿಂದರು. ನನಗೆ ಬಹಳ ಸಂತೋಷವಾಯಿತು.

ಹೊರ ಕೋಣೆಗೆ ಬಂದು ಚಾಪೆ ಹಾಸಿ ದಿಂಬು ಇರಿಸಿ ವಿಶ್ರಾಂತಿ ತೆಗೆದುಕೊಳ್ಳಲು ಕೋರಿದೆ.

"ಏನು ಕಡಿದು ಕಟ್ಟೆ ಹಾಕಿದ್ದೀವಿ ಅಂತ ವಿಶ್ರಾಂತಿ ಪಡೆಯಬೇಕು. ನಾವು, ನಾವು ಹೀಗೆ ಏಕಾಂತವಾಗಿ ಸೇರಿದಾಗ ಮಲಗಿ ನಿದ್ರಿಸಬೇಕೇ. ಅದರ ಬದಲು ಏನಾದರೂ ಮುಖ್ಯವಾದ ಒಳ್ಳೆಯದೊಂದು ಸಮಸ್ಯೆಯನ್ನು ಮುಂದಿಟ್ಟುಕೊಂಡು ಹಿಂಜುವುದು.ಒಳ್ಳೆಯದಲ್ಲವೇ" ಎಂದರು.

ನನಗೂ ಅವರೊಂದಿಗೆ ಏನಾದರೂ ಗಮನಾರ್ಹವಾದ ವಿಚಾರ ಎತ್ತಿ ಮಾತನಾಡುವ ಆಸೆ. ಆದರೆ ಆ ಮಹಾ ವಿದ್ವಾಂಸರ ಸಮೂಹದಿಂದ ಆಗತಾನೇ ಬಂದ ಈ ಮಹನೀಯರನ್ನು ಅಷ್ಟು ದೂರ ನಡೆಸಿಕೊಂಡು ಬಂದು, ಪಕ್ಕದ ಮನೆಯ ಇಕ್ಕಟ್ಟಿನ ಬಾಗಿಲಿನಿಂದ ನುಗ್ಗಿಸಿ, ಯಾವುದೋ ಸಾಧಾರಣ ಹೋಟೆಲ್‌ನಿಂದ ಎಲ್ಲರೂ ಉಂಡು ತಿಂದು ಉಳಿದಿದ್ದ ಸೀಕು ಪಾಕನ್ನೇ ತಂದು ಉಣಬಡಿಸಿ ಈಗ ಗಹನ ವಿಚಾರಕ್ಕೆ ಹಚ್ಚುವುದೇ, ಅಲ್ಲದೆ ಅಂತಹ ಗಹನ ವಿಚಾರವಾದರೂ ನನ್ನಲ್ಲಿ ಏನಿದೆ? ಎಂದೆಲ್ಲ ಗೊಂದಲವಾಯಿತು. ಆ ಚಾಪೆಯ ಮೇಲೆ ಅಡ್ಡಲಾಗಿ ಮಲಗಿದರೂ ಮತ್ತೆ ಅದೇ ಮಾತು, "ಹೇಳಿ ಯಾವುದು ನಿಮ್ಮ ಪ್ರಶ್ನೆ."

`ದ್ವಂದ್ವಾತೀತ ಸ್ಥಿತಿ' ಎಂದು ಹಿಂದೊಮ್ಮೆ ಹಿರಿಯೂರಿಗೆ ಬಂದಾಗ ತಮ್ಮ ಉಪನ್ಯಾಸದಲ್ಲಿ ಅವರೇ ಮಾತನಾಡಿದ್ದರು. ಕೂಡಲೇ ನೆನಪಿಗೆ ಬಂದು ಕೇಳಿಯೇಬಿಟ್ಟೆ.

"ಜಡ, ಚೇತನ ಎಂದು ಎರಡು ಮಾತುಗಳಿವೆ. ನಿಜವಾಗಿಯೂ ಈ ಜಡವೇ ಬೇರೆ, ಚೇತನವೇ ಬೇರೆ ಇವೆಯೇ–ಅಥವಾ ಅವೆರಡೂ ಒಂದೇ ಆಗಿದೆಯೇ?"–ಎಂಬುದು ನನ್ನ ಪ್ರಶ್ನೆಯಾಗಿತ್ತು.

ಮಲಗಿದ್ದವರು ಉತ್ಸಾಹದಿಂದ ಎದ್ದು ಕುಳಿತರು. "ಇದು, ನಾನು ವಿವರಿಸಿ ಹೇಳಿದರೆ ಸಾಕೇ? ಅಥವಾ ನಿಮಗೆ ಸಿದ್ಧಾಂತವಾಗಬೇಕೇ?" ಎಂದರು.

"ನನಗೇ ಸಿದ್ಧಾಂತವಾದರೆ ಇನ್ನೂ ಒಳ್ಳೆಯದಲ್ಲವೇ" ಖುಷಿಯಿಂದ ಹೇಳಿದೆ.

"ನೀವು ಧ್ಯಾನ ಮಾಡುತ್ತೀರಲ್ಲವೇ" ಕೇಳಿದರು.

"ಏನೋ ಮಾಡುತ್ತೇನೆ. ಅದು ಧ್ಯಾನವೋ, ಅಲ್ಲವೋ ಗೊತ್ತಿಲ್ಲ" ಎಂದೆ.

"ನಿಮ್ಮ ಉತ್ತರ ಚೆನ್ನಾಗಿದೆ. ಇರಲಿ, ಹೇಗೋ ಅಂತೂ ಧ್ಯಾನ ಮಾಡುತ್ತೀರಿ. ಆಗ ನಿಮ್ಮ ಲಕ್ಷ್ಯ ಎಲ್ಲಿರುತ್ತೋ"-ಎಂದರು.

"ಎಲ್ಲೂ ಇರುವುದಿಲ್ಲ. ಮನಸ್ಸನ್ನು ಚಲಿಸದಂತೆ ನಿಲ್ಲಿಸುವುದೇ ನನ್ನ ಧ್ಯಾನದ ರೀತಿ"-ಎಂದೆ.

"ಬಹಳ ಸರಿ, ಈಗ ನಿಮ್ಮ ರೀತಿಯಲ್ಲಿ ಧ್ಯಾನ ಆರಂಭಿಸಿ. ಅದಕ್ಕೆ ಮುಂಚೆ ನಾನು ಹೇಳುವ ನಿಬಂಧನೆಗಳನ್ನು ಚೆನ್ನಾಗಿ ಕೇಳಿ. ಏನೇ ಆದರೂ ನಾನು ಹೇಳುವವರೆಗೂ ಕಣ್ಣು ಬಿಡಕೂಡದು. ಇದು ಒಂದನೆಯದು. ಮತ್ತೊಂದು ನಿಮ್ಮ ಶರೀರದಲ್ಲಿ ನಾನು ಮುಟ್ಟುವ ಕೆಲವು ಸ್ಥಳಗಳಲ್ಲಿ ನಿಮ್ಮ ಧ್ಯಾನ ಕೇಂದ್ರೀಕರಣವಾಗಬೇಕು. ಎಷ್ಟು ಗಾಢವಾಗಿ ನೀವು ಕೇಂದ್ರೀಕರಿಸುತ್ತೀರೋ ಅಷ್ಟು ತೀವ್ರವಾಗಿ ನಿಮ್ಮ ಪ್ರಶ್ನೆಗೆ ಉತ್ತರ ನಿಮಗೇ ಲಭಿಸುತ್ತದೆ. ಆಗಬಹುದೋ"-ಎಂದರು.

ಬಹಳ ಉಲ್ಲಾಸದಿಂದ ಒಪ್ಪಿಕೊಂಡೆ.

"ನಿಮ್ಮ ಮೈಮೇಲೊಂದು ಸರ್ಪವೇ ಓಡಾಡಿದರೂ ನಾನು ಹೇಳುವವರೆಗೂ ಕಣ್ಣು ಬಿಡಕೂಡದೆಂಬುದು ಕಡ್ಡಾಯ"–ಕಟ್ಟುನಿಟ್ಟಾಗಿ ಹೇಳಿದರು.

"ಕಡ್ಡಾಯವಾಗಿ ಆಗಬಹುದು"–ದೃಢವಾಗಿ ಹೇಳಿದೆ.

"ಧ್ಯಾನ ಪ್ರಾರಂಭವಾಯಿತು. ಸ್ವಲ್ಪ ಹೊತ್ತಿನಲ್ಲಿ ಹೃದಯ, ಕಂಠ, ಭ್ರೂಮಧ್ಯ, ಶಿಖಿ, ಕಂಠದ ಹಿಂಬದಿ, ಬಲಭುಜ ಮೊಳಕೈ ಅಂಗೈ ಹೀಗೆ ಒಂದೊಂದು ಸ್ಥಳದಲ್ಲೂ ಮೂರು ನಾಲ್ಕು ನಿಮಿಷಗಳಷ್ಟು ಕಾಲ ಮುಟ್ಟಿ ಹಿಡಿದಿದ್ದರು. ಅಂಗೈಗೆ ಬಂದಾಗ ಸುಮಾರು ೧೨-೧೫ ನಿಮಿಷ ಆಗಿರಬೇಕು. ಇದ್ದಕ್ಕಿದ್ದಂತೆ ಅಂಗೈಯಲ್ಲಿ ಏನೋ ಭಾರವಾಯಿತು. ಸ್ವಲ್ಪ ಸ್ವಲ್ಪವಾಗಿ ಕಂಪಿಸಿದ ಅನುಭವವಾಯಿತು. ಬರುಬರುತ್ತ ಆ ಕಂಪನ ತೀವ್ರವಾಯಿತು. ಕೊನೆ ಕೊನೆಗೆ ಭಾರ ಕಡಿಮೆಯಾಗಿ ಯಾವುದೋ ಒಂದು ದೊಡ್ಡದು ಹುಳು-ತೆಂಗಿನಮರ ಕೊರೆಯುವ ಬೂವಾಡೆ' ನನ್ನ ಅಂಗೈಲಿ ಒದ್ದಾಡುತ್ತಿರುವ ಭಾಸವಾಯಿತು. ಅಸಹ್ಯವಾಗಿ ಕೈ ಕೊಡುವುದರಲ್ಲಿದ್ದೆ. ಮತ್ತೊಮ್ಮೆ ಕಣ್ಣು ಬಿಡಬಾರದೆಂದು ಎಚ್ಚರಿಸಿದರು.

"ಈಗ ಹೇಳಿ. ನಿಮ್ಮ ಕೈಲಿರುವುದು ಜಡವೇ ಚೇತನವೇ"

"ಚೇತನ" ನನಗಾಗುತ್ತಿದ್ದ ಅನುಭವವನ್ನು ಸ್ಪಷ್ಟವಾಗಿ ಹೇಳಿದೆ. `ಅಹುದೇ?' ಮತ್ತೊಮ್ಮೆ ಕೇಳಿದರು.

"ಹೌದು, ನಿಸ್ಸಂಶಯ"-ನೇರವಾಗಿ ಹೇಳಿದೆ.

"ಈಗ ಕಣ್ಣು ಬಿಡಿ"-ಎಂದರು.

ತಕ್ಷಣವೇ ಕಣ್ಣುಬಿಟ್ಟು ನನ್ನ ಅಂಗೈ ನೋಡಿಕೊಂಡೆ. ಆಶ್ಚರ್ಯವೆಂದರೆ ನಮ್ಮ ರೂಮಿನ ಕದ ಮುಚ್ಚಿದಾಗ ಅದು ಹಿಂದಕ್ಕೆ ತೆರೆದುಕೊಳ್ಳದಂತೆ ತಡೆಯಾಗಿಡುತ್ತಿದ್ದ ಒಂದು `ಗುಂಡು ಕಲ್ಲು'.

"ಈಗ ಹೇಳಿ, ನೀವು ನೋಡುತ್ತಿರುವುದು ಜಡವೋ, ಚೇತನವೋ"

"ಇದು ಜಡ, ಗುಂಡುಕಲ್ಲು. ಈ-ಬಾಗಿಲಿಗೆ ತಡೆಯಾಗಿ ಇಡುತ್ತಿದ್ದೆವು."

"ಈ ಮುಂಚೆ ಕೇಳಿದಾಗ, ಚೇತನ ಎಂದಿರಲ್ಲ."

ಹೌದು. ಈಗಲೂ ಇದರ ಚಲನೆ, ಅಥವಾ ಕಂಪನ ಇದ್ದೇ ಇದೆ" ಎಂದೆ.

ಅದನ್ನು ನನ್ನ ಕೈಯಿಂದ ತೆಗೆದು ಕೆಳಗಿಟ್ಟು "ಈಗ ನೀವೇ ಹೇಳಿ, ಈ ಗುಂಡುಕಲ್ಲು ಒಂದು ವಿಧಾನದಿಂದ ನೀವೇ ಮುಟ್ಟಿದಾಗ ಕಂಪನದ ಮೂಲಕ ಚೇತನವಾಗಿ ಗೋಚರಿಸಿತು. ಆದರೆ ಕಣ್ಣಿಂದ ನೋಡಿದಾಗ ಅದು ಚಲನೆಯಿಲ್ಲದ ಜಡ ವಸ್ತುವಾಗಿ ಕಾಣಿಸಿತು. ಎಂದರೇ ಇದು ಜಡವೂ ಹೌದು, ಚೇತನವೂ ಹೌದು ಎಂದು ಅನುಭವವಾಯಿತು. ಆ ಅನುಭವ ಅದನ್ನು ನೋಡುವ ವಿಧಾನದ ಮೇಲೆ ನಿಂತಿದೆ. ಚಲಿಸಿದರೆ ಚೇತನ, ಚಲಿಸದಿದ್ದರೆ ಜಡ ಎಂಬುದು ನಮ್ಮೆಲ್ಲರ ಸಾಮಾನ್ಯ ನಿಶ್ಚಯ. ಆದರೆ ಯಾವುದೇ ವಸ್ತು ಜಡವಾಗಿ ಕಂಡರೂ, ಚೇತನವೇ ಆಗಿರುವುದೆಂಬುದು ಈಗ ನಿಮ್ಮ ಅನುಭವ ಸಿದ್ಧಾಂತ ಅಲ್ಲವೇ"-ಎಂದು ವಿವರಿಸಿದರು.

ಒಪ್ಪಿಕೊಳ್ಳದೇ ಅನ್ಯಮಾರ್ಗವಿಲ್ಲ. ಒಪ್ಪಿಕೊಂಡೆ. ಮನಸ್ಸಿಗೆ ಬಹಳ ಖುಷಿಯಾಯಿತು.

ಅಷ್ಟರಲ್ಲಿ ಮಿತ್ರ ರಾಮಚಂದ್ರರಾಯರು ಬಂದು ಬೀಗ ತೆಗೆಯುತ್ತಿದ್ದಾಗ ನಮ್ಮಿಬ್ಬರ ಮಾತುಗಳನ್ನೂ ಕೇಳಿ ಯಾರೋ ಕಳ್ಳರು ಹೆಂಚು ತೆಗೆದು ಒಳಗೆ ಇಳಿದಿದ್ದಾರೆ-ಎಂತಹ ಧೈರ್ಯ, ಪೊಲೀಸರಿಗೆ ತಿಳಿಸಬೇಕು ಎಂದು ಯೋಚಿಸುತ್ತಿದ್ದರಂತೆ ನನ್ನ ಧ್ವನಿ ಗುರ್ತಿಸಿ ಬೀಗ ತೆಗೆದು, ನಗುತ್ತ ಬಳಿ ಬಂದರು. ನಮ್ಮನ್ನು ಕಳ್ಳರೆಂದು ಬಗೆದ ವಿಚಾರ ಕೇಳಿ ಎಲ್ಲರೂ ನಕ್ಕು ಬಿಟ್ಟೆವು.

"ಅಹುದು, ನಾವು ದೊಡ್ಡ ಕಳ್ಳರು. ಆದ್ದರಿಂದಲೇ ಹೀಗೆ ಗುಟ್ಟಾಗಿ ಕುಳಿತು ಏನೇನೋ ಮಸಲತ್ತು ಮಾಡುತ್ತಿದ್ದೇವೆ" ಎಂದು ಮತ್ತೆ ಮತ್ತೆ ನಗಿಸಿದರು ದೇವುಡು.

ಬಂದಿರುವ ಆ ಹಿರಿಯರು ದೇವುಡು ನರಸಿಂಹ ಶಾಸ್ತ್ರಿಗಳೆಂದು ತಿಳಿದಾಗ ರಾಮಚಂದ್ರರಾಯರಿಗಾದ ಸಂತೋಷ, ಆಶ್ಚರ್ಯ ಅಷ್ಟಿಷ್ಟಲ್ಲ. ಕೂಡಲೇ ಕಾಫಿ ಮಾಡಿದರು. ಮೂವರು ಕುಡಿದು ವಿನೋದವಾಗಿ ಮಾತನಾಡಿದೆವು.

ಮೂರು ಘಂಟೆಯಾಗಿತ್ತು. ದೇವುಡು ಅವರು ಟ್ರೈನಿನಲ್ಲಿ ಬೆಂಗಳೂರಿಗೆ ಹೋಗುವುದಾಗಿ

ಹೊರಟರು. ನಾನು ಅವರನ್ನು ಕಳುಹಿಸಲು ಅವರೊಂದಿಗೆ ಅಷ್ಟು ದೂರ ಹೋದೆ. ಹೋದ ಮೇಲೆ "ನಿಮ್ಮಲ್ಲಿ ಐದು ರೂಪಾಯಿ ಇದೆಯೆ"-ಎಂದು ಕೇಳಿದರು. ನಾನು ರೂಮಿಗೆ ಓಡಿ ಬಂದು ಹತ್ತು ರೂಪಾಯಿ ನೋಟು ತೆಗೆದುಕೊಂಡು ಹೋಗಿ ಕೊಟ್ಟೆ, "ಬೇಡ, ಬೇಡ. ಸಾಕು. ನನ್ನಲ್ಲಿ ಇದೆ. ಐದು ರೂಪಾಯಿ ಸಾಲದು ಅಷ್ಟೇ-ಎಂದು ಅಲ್ಲಿದ್ದ ಅಂಗಡಿಯಲ್ಲಿ ಚಿಲ್ಲರೆ ಮಾಡಿಸಿ ಐದು ರೂಪಾಯಿ ನನಗೆ ಹಿಂದಿರುಗಿಸಿ–

"ರೈಲಿಗೆ ತಡವಾಗುತ್ತೆ ನಿಂತು ಬಿಡಿ"-ಎಂದು ದಾಪುಗಾಲು ಹಾಕುತ್ತ ನಡೆದುಬಿಟ್ಟರು. ಅವರು ಹೋಗುವುದನ್ನೇ ನೋಡುತ್ತ ಮೂಕನಾಗಿ ನಿಂತೆ. ಅಂದು ಬೆಳಗಿನ ಆ ವಿದ್ವಾಂಸರ ಸಮೂಹ. ಮಹಾರಾಜರ ಪರಿಸರ. ಸೌತೇಕಾಯಿ ಸೀಳು ಉರಿ ಬಿಸಿಲಿನಲ್ಲಿ ಅಷ್ಟು ದೂರ ನಡಿಗೆ, ಪಕ್ಕದ ಮನೆಯ ಇಕ್ಕಟ್ಟಾದ ಬಾಗಿಲಿನಿಂದ ನುಸುಳಿದ್ದು, ಜಡ ಚೇತನಗಳ ಸಿದ್ಧಾಂತ, ಕೊನೆಯಲ್ಲಿ ಐದು ರೂಪಾಯಿಗಳಾಗಿ ನನ್ನನ್ನು ಕೇಳಿದ್ದು ಎಲ್ಲವೂ ಕಣ್ಣು ಮುಂದೆ ಮೂಡಿದವು.

೭

ಒಮ್ಮೆ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ದೇವುಡು ಅವರ ಅಕಸ್ಮಾತ್ ಭೇಟಿ ಲಭಿಸಿತು. ಮುಂದಿನವಾರ ಉಡುಪಿಯಲ್ಲಿ ಅವರ `ಭಗವದ್‌ಗೀತಾ' ಉಪನ್ಯಾಸದ ವ್ಯವಸ್ಥೆ ಆಗಿತ್ತು. ಜೊತೆಯಲ್ಲಿ ಬರುವಂತೆ ನನ್ನನ್ನು ಕರೆದರು. ಬಹಳ ಸಂತೋಷವಾಯಿತು. ಅಂತಹ ದೊಡ್ಡವರ ಸಹವಾಸದಲ್ಲಿ ಎರಡು ಮೂರು ದಿನ ಕಳೆಯುವುದು ತುಂಬಲಾಭದಾಯಕ ಸಂಗತಿ ಎಂದು ಒಪ್ಪಿಕೊಂಡೆ. ಅವರು ತಿಳಿಸಿದ ದಿನದಂದು ಕಡೂರಿನ ರೈಲ್ವೇ ಸ್ಟೇಷನ್‌ನಲ್ಲಿ ಬೆಂಗಳೂರಿನಿಂದ ಬರುವ ರೈಲಿಗಾಗಿ ನಾನು ಕಾಯುವುದೆಂದು ನಿಶ್ಚಯವಾಯಿತು.

ಮಧ್ಯಾಹ್ನದ ರೈಲಿನಲ್ಲಿ ದೇವುಡು ದಂಪತಿಗಳು ಕಡೂರಿಗೆ ಬಂದರು. ಉಡುಪಿಯಿಂದ ಅವರಿಗಾಗಿ ಬಂದಿದ್ದ ಕಾರಿನಲ್ಲಿ ಪ್ರಯಾಣ ಮಾಡಿ ಸಂಜೆ ಪೂಜೆವೇಳೆಗೆ ಉಡುಪಿ ತಲುಪಿದೆವು. ಅಲ್ಲಿ ಶ್ರೀಮಠದ ಸ್ವಾಮಿಗಳು ಸಾಂಗೋಪಾಂಗವಾಗಿ ಪೂಜೆ ನೆರವೇರಿಸಿದರು.

ಎಲ್ಲರೂ ದೇವಾಲಯದಿಂದ ಹೊರಬಂದರು. ಉಪನ್ಯಾಸ ನಡೆಯುವಲ್ಲಿಗೆ ಕಾರಿನಲ್ಲಿ ಕರೆತಂದರು. ಬೃಹತ್ ಸಭೆ ಇವರನ್ನು ಸ್ವಾಗತಿಸಿತು. ನೇರವಾಗಿ ವೇದಿಕೆಯ ಬಳಿ ಕರೆದೊಯ್ದರು.

"ನಿಮಗೊಂದು ಟೆಲಿಗ್ರಾಂ" ಎಂದು ಯಾರೋ ತಂದುಕೊಟ್ಟರು. ದೇವುಡು ಅದನ್ನು ತೆರೆದು ಓದಿದರು ಮುಖದಲ್ಲಿ ಒಂದು ಬಗೆಯ ಆತಂಕದ ಅಲೆ ಬಂದು ಹೋಯಿತು. `ಏನು ವಿಚಾರ?' ಎಂದು ಅಲ್ಲಿನ ಕಾರ್ಯನಿರ್ವಾಹಕರು ಕೇಳಿದರು. ದೇವುಡು ಕೈಲಿದ್ದ ಕಾಗದವನ್ನು ಮುದುಡಿ ತಮ್ಮ ಕೈಲಿದ್ದ ಪುಸ್ತಕದೊಳಕ್ಕೆ ಸೇರಿಸಿ:

`ಯಾವುದೋ ಒಂದು ಪ್ರಕಾಶನಕ್ಕೆ ಸಂಬಂಧಿಸಿದ್ದು ಅತಿಮುಖ್ಯವಾದುದು. ಕೂಡಲೇ ಬರಬೇಕೆಂದು ತಿಳಿಸಿದ್ದಾರೆ, ಹೋಗಲೇಬೇಕು. ತಾವು ನನಗಾಗಿ ಒಂದು ತೊಂದರೆ ಸಹಿಸಿಕೊಳ್ಳಬೇಕು'-ಎಂದರು ದೇವುಡು ತವಕದಿಂದ.

`ಅಗತ್ಯವಾಗಿ ಆಗಬಹುದು. ಸಂಕೋಚವೇಕೆ, ತಾವು ಏನು ಹೇಳಿಧರೂ ಬದಲು ಮಾತಿಲ್ಲ'-ಎಂದರು ಆ ಕಾರ್ಯಕರ್ತರು.

`ಈಗ ಈ ಉಪನ್ಯಾಸ ಆದಕೂಡಲೇ ನನ್ನನ್ನು ಕಾರಿನಲ್ಲಿ ಕಡೂರು ಮುಟ್ಟಿಸಬೇಕು. ಹಾಗೆ ಮಾಡುತ್ತೀರಾ'-ಎಂದರು, ಅವರು ಒಪ್ಪಿಕೊಂಡರು. ಅಂದು ದೇವುಡು ಅವರ ಉಪನ್ಯಾಸದ ಓಘವೇ ಬೇರೆ ಆಗಿತ್ತು. ಹಲವು ಬಾರಿ ಕೇಳಿದ್ದೆನಾದರೂ ಅಂದಿನ ವ್ಯಾಖ್ಯಾನದ ವೈಖರಿಯೇ-ವೈಖರಿ. ಜನರಂತೂ ಅದೆಷ್ಟು ಸಂತೋಷ ಪಟ್ಟರೋ, ಸಭೆ ಮುಗಿದ ಮೇಲೆ ಬೇರೆ ಸಂಘ ಸಂಸ್ಥೆಗಳವರು ದೇವುಡು ಅವರನ್ನು ಆಹ್ವಾನಿಸಲು ಮುಂದಾದರು. ಆದರೆ ಬಂದಿದ್ದ ಟೆಲಿಗ್ರಾಂ ಕಾರಣದಿಂದ ಕೂಡಲೇ ಹೊರಡುವುದು ಅನಿವಾರ್ಯವಾಗಿತ್ತು. ಮತ್ತೊಮ್ಮೆ ಬಿಡುವಾಗಿ ಬಂದು ಮೂರು ನಾಲ್ಕುದಿನ ಇದ್ದು ಹೋಗುವುದಾಗಿ ಅವರೆಲ್ಲರಿಗೂ ಸಮಾಧಾನ ಹೇಳಿದರು: ಕಾರು ಸಿದ್ಧವಾಗಿತ್ತು. ಕಡೂರಿಗೆ ಬಂದು, ಕೂಡಲೇ ಬೆಂಗಳೂರಿಗೆ ಪ್ರಯಾಣ ಮಾಡಿದೆವು. ಬೆಂಗಳೂರಿನವರೆಗೂ ಬರಬೇಕೆಂದು ನನ್ನನ್ನು ಒತ್ತಾಯಿಸಿದರು. ಒಪ್ಪಿಕೊಂಡೆ.

"ಉಡುಪಿಯ ಉಪನ್ಯಾಸ ಹೇಗಿತ್ತು"-ಎಂದು ಗೌರಜ್ಜಿಯನ್ನು ಕೇಳಿದರು.

"ಎಂದೂ ಇಷ್ಟು ಚೆನ್ನಾಗಿ ಬಂದಿರಲಿಲ್ಲ"-ಎಂದರು ಗೌರಜ್ಜಿ.

`ಇನ್ನೂ ಮೇಲೆ ನೀನೇ ನನ್ನನ್ನು ಕೂರಿಸಿ ಉಪನ್ಯಾಸ ನೀಡಬೇಕು'-ಎಂದರು ದೇವುಡು. ಅಜ್ಜಿ ನಗುತ್ತಾ. "ಹಾಗೆ ಆಗಲಿ"-ಎಂದರು.

ಜಟಕಾ ಮಾಡಿಕೊಂಡು ಶಂಕರ ಮಠದವರೆಗೂ ಹೋದೆವು. ಅಲ್ಲಿ ಮೆಟ್ಟಿಲುಗಳ ಮೇಲೆ ಕುಳಿತು ನನ್ನನ್ನು ಪ್ರತ್ಯೇಕವಾಗಿ ಕರೆದು.

`ನಿನ್ನೆ ರಾತ್ರಿ ಟೆಲಿಗ್ರಾಂ ವಿಚಾರ ಗೊತ್ತೇ ದೇವು'-ಎಂದು ಕೇಳಿದರು.

`ಅದೇನೋ ಪ್ರಕಾಶನದ ವಿಚಾರ ಅಂದಿರಲ್ಲ'-ಎಂದೆ.

"ಹೌದು, ಈಗ ಅದನ್ನು ಪ್ರಕಾಶ ಪಡಿಸುತ್ತೇನೆ'-ಗೌರೂಗೆ ಹೇಗೆ ತಿಳಿಸಬೇಕೋ ಗೊತ್ತಿಲ್ಲ. ನಿಮಗೆ ಮೊದಲು ತಿಳಿಸುತ್ತೇನೆ. ದಯವಿಟ್ಟು ಧಿಟ್ಟರಾಗಿ ಸಹಕರಿಸಬೇಕು"-ಎಂದರು.

`ಇದೇನು ಹೀಗೆ ಸುತ್ತು ಬಳಸಿನ ಮಾತು'-ಎಂದು ಮುಖವನ್ನೇ ನೋಡಿದೆ. ಅತ್ಯಂತ ಗಂಭೀರವಾಗಿತ್ತು ಆ ಮುಖ. ಕಣ್ಣು ಕೆಂಪೇರಿದ್ದವು. ಹೀಗೇಕೆ ಎಂದುಕೊಳ್ಳುತ್ತಿದ್ದಂತೆಯೇ

"ರಾಮು ತೀರಿಹೋಗಿದ್ದಾನೆ ಅದೇ ಟೆಲಿಗ್ರಾಂ, ಅಲ್ಲಿ ಹೊರಪಡಿಸಿದರೆ ಎಲ್ಲರಿಗೂ ಅಸಹ್ಯವಾಗುವುದೆಂದು ಸುಮ್ಮನಾದೆ. ಆದ್ದರಿಂದಲೇ-ಎಲ್ಲವನ್ನು ಮೊಟಕು ಮಾಡಿ ವಾಪಸು ಬಂದಿದ್ದಾಯಿತು."

(ಡಿ.ಎನ್. ರಾಮು. ದೇವುಡು ಅವರ ಹಿರಿಯ ಮಗ ಚಿಂತಾಮಣಿ ಕಾಲೇಜಿನಲ್ಲಿ ಕನ್ನಡದ ಉಪನ್ಯಾಸಕರಾಗಿದ್ದರು).

"ಅಲ್ಲಾ ಸ್ವಾಮಿ ಈ ವಿಚಾರ ತಿಳಿದ ಮೇಲೂ ಅಂತ ಅಮೋಘವಾದ ಉಪನ್ಯಾಸ ನೀಡಿದ ರಲ್ಲ, ಅದು ಹೇಗೆ ಸಾಧ್ಯವಾಯಿತು."

"ಹೌದು, ಅಲ್ಲಿ ನಾನು ಯಾರಿಗೂ ಉಪನ್ಯಾಸ ನೀಡಲಿಲ್ಲ. ನನಗೆ ನಾನೇ ಗೀತೋಪದೇಶ ಮಾಡಿಕೊಂಡೆ-"ಸ್ಥಿತ ಪ್ರಜ್ಞ ಲಕ್ಷಣ"-ವನ್ನು ನನಗೆ ನಾನೇ ಬೋಧಿಸಿಕೊಂಡೆ-"ಸರ್ವ ಧರ್ಮಾನ್ ಪರಿತ್ಯಜ್ಞ ಮಾವೇಕಂ-ಶರಣಂವ್ರಜ"-ಎಂಬುದನ್ನು ನನಗೆ ನಾನೇ ತೊಡಗಿಸಿಕೊಂಡೆ, ಆದ್ದರಿಂದಲೇ ಆ ಸಭೆಯನ್ನು ನಿರ್ವಹಿಸುವುದು ಸಾಧ್ಯವಾಯಿತು. ಬಿಡಿ, ಬಿಡಿ ಅದೆಲ್ಲ ಆಗಿಹೋದ ವಿಚಾರ ಈಗ ಗೌರೂಗೆ ಇದನ್ನು ತಿಳಿಸಿ ಧೈರ್ಯ ತುಂಬಿ ಅನಂತರ ಮನೆಗೆ ಕರೆದೊಯ್ಯಬೇಕು. ಇಲ್ಲವಾದರೆ ಇವಳು ಯದ್ವಾ ತದ್ವಾ ಆಡಿ ಮಕ್ಕಳು ಮರಿ ಇನ್ನಷ್ಟು ರಾಧಾಂತಕ್ಕೆ ಒಳಗಾದರೂ"-ಎಂದರು.

ಅಂತೂ ಇಬ್ಬರೂ ಧೈರ್ಯ ಮಾಡಿ ಗೌರಜ್ಜಿಗೆ ವಿಚಾರ ತಿಳಿಸಿದೆವು. ಅಜ್ಜಿ ಕೇಳಿದ ಕೂಡಲೇ ಅರಚಿ ಮೂರ್ಛೆ ಬಿದ್ದರು. ಸಂತೈಸಿದೆವು. ಎಚ್ಚೆತ್ತರು. ಅತ್ತರು. ಎದೆ ಬಡಿದುಕೊಂಡರು. ದೇವುಡು ಅಜ್ಜಿಯನ್ನು ಎದೆಗೆ ಒರಗಿಸಿಕೊಂಡು ಸಂತೈಸಿದರು. ಅವರ ಆವೇಶ ಇಳಿಯಲೆಂದು ಅವರಷ್ಟಕ್ಕೆ ಅವರನ್ನು ಬಿಟ್ಟು ಬಿಟ್ಟರು. ಅನಂತರ ನಿಧಾನವಾಗಿ ಹೇಳಿದರು.-`ನೀನು ಆಡಿದರೆ ಮನೆಯಲ್ಲಿ ಮಕ್ಕಳೆಲ್ಲ ಇನ್ನೂ ಗಾಬರಿಯಾಗಿವುದಿಲ್ಲವೇ, ಇನ್ನು ಮೇಲೆ ನೀನೇ ನನಗೆ ಗೀತಾತತ್ವವನ್ನು ಬೋಧಿ ಸುವುದಾಗಿ ಒಪ್ಪಿಕೊಂಡು ಈಗ ಹೀಗೆ ಮನಸ್ಸನ್ನು ಹರಿಬಿಡುವುದೇ' ಎಂದು ಏನೇನೋ ಹೇಳಿ ಸಂತೈ ಸಿದರು. ಅರ್ಧತಾಸು ಕಳೆದ ಮೇಲೆ ಅಜ್ಜಿ ಒಂದು ನಿಲುಕಿಗೆ ಬಂದರು. ಅಲ್ಲಿಯೇ ಎದುರಿಗಿದ್ದ ತಮ್ಮ ಮನೆಗೆ ಕರೆದೊಯ್ದರು. ಆ ವೇಳೆಗಾಗಲೇ ಶವಸಂಸ್ಕಾರ ನಡೆದು ಹೋಗಿತ್ತು. ಮಗನ ಮುಖವೂ ಕಾಣಲಾಗಲಿಲ್ಲ-ಅಜ್ಜಿಗೆ, ಮನೆ ಕಂಡ ಕೂಡಲೇ ದುಃಖದ ಕಟ್ಟೆಯೊಡೆದು ಅವಾಂತರವಾಯಿತು. ಎಷ್ಟೇ ಆಗಲಿ ತಾಯಿ ಕರುಳು.

ಮುಂದಿನ ಕೋಣೆಯಲ್ಲಿ ದೇವುಡು ಕಣ್ಣುಮುಚ್ಚಿ ಕುಳಿತುಬಿಟ್ಟರು. ನಾನು ಅಲ್ಲೇ ಕುಳಿತೆ. ನಿಮಿಷ ನಿಮಿಷಕ್ಕೂ ಜನ ಸಂದಣಿ-ಹೆಚ್ಚಾಯಿತು. ಸಂಜೆಯಾಗುತ್ತಾ ಬಂತು.

"ಇದು ಹೇಗೆಯೇ ದೇವ್ರು ನಿಮ್ಮನ್ನು ಅನವಶ್ಯಕವಾಗಿ ಈ ಗೊಂದಲದಲ್ಲಿ ಸಿಕ್ಕಿಸಿದ್ದಾ ಯಿತು. ಬನ್ನಿ ಸ್ವಲ್ಪ ಆಚೆ ಹೋಗೋಣ"-ಎಂದು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನವರೆಗೂ ಬಂದು-`ಯಾರಿದ್ದು ಏನು ಮಾಡುವುದಿದೆ. ನೀವು ಹೊರಡಿ'-ಎಂದು ಬಲವಂತಮಾಡಿ ನನ್ನನ್ನು ಕಳುಹಿಸಿ ತಾವು ಹಿಂದಿರುಗಿದರು.

ಅವರು ಹೋಗುವುದನ್ನೇ ನೋಡುತ್ತ ಬಹು ಹೊತ್ತು ಅಲ್ಲೇ-ನಿಂತಿದ್ದು ಭಾರವಾದ ಮನಸ್ಸಿನಿಂದ ಹೆಜ್ಜೆ ಹಾಕುತ್ತಾ ಬಂದೆ.

೮

ಬಹುಕಾಲಾನಂತರ ದೇವುಡು ಅವರಿಗೆ ಆರೋಗ್ಯ ಕೆಟ್ಟು ಹಾಸಿಗೆ ಹಿಡಿದಿರುವುದಾಗಿ ಪತ್ರಿಕೆ ಗಳಲ್ಲಿ ಓದಿದೆ. ಆ ವೇಳೆಗ ಜಯನಗರದ ನಾಲ್ಕನೇ ಬ್ಲಾಕಿನ ಒಂದು ಚಿಕ್ಕ ಮನೆಯಲ್ಲಿ ಬಾಡಿಗೆಗೆ

ಇದ್ದರು. ನಾನು ಹೋದಾಗ ಸಂಜೆ ಐದಾಗಿತ್ತು. ಏನೋ ಬರೆಯುತ್ತಾ ಆರಾಮ ಕುರ್ಚಿಯಲ್ಲಿ ಕುಳಿತಿದ್ದರು. ಮುಖ ತೀರಾ ಬಿಳುಚಿಕೊಂಡು ರಕ್ತಹೀನವಾಗಿತ್ತು. ದಷ್ಟಪುಷ್ಟವಾಗಿದ್ದ ದೊಡ್ಡದೇಹ ಕೃಶವಾಗಿ ಮೈಯೊಳಗಿನ ಎಲುಬುಗಳನ್ನೂ ನರಗಳನ್ನೂ ಎಣಿಸಬಹುದಾಗಿತ್ತು. ನೋಡಿ ಗಾಬರಿಯಾಯಿತು. ಬಾಗಿ ಕಾಲು ಮುಟ್ಟಿದೆ. ಕೈಗೆ ಒಂದೇ ಕಾಲು ತಡಕಿತು. ಬೆಚ್ಚಿ ಎದ್ದು ನಿಂತೆ ಒಂದೇ ಸಮನೆ ಮುಖ ನೋಡಿದರು.

"ಇನ್ನೂ ಬದುಕಿದ್ದಾನೆಂದು ಬಂದಿರಾ"-ಕೈಹಿಡಿದು ಪಕ್ಕದಲ್ಲಿ ಕೂರಿಸಿಕೊಂಡರು. ಅವಕ್ಕಾಗಿ ಅವರನ್ನೇ ನೋಡಿದೆ.

"ಏನು ಹಾಗೆ ನೋಡುತ್ತೀರಿ. ನಹುಷ ಅಜಗರನಾಗಿ ಪಟ್ಟ ಪಾಡಿಗೇ, ನನ್ನದೊಂದು ಬೇಳೇ ಪಾಲೂ ಅಲ್ಲಿ ಅವನ ಕತೆಯನ್ನೇ `ಮಹಾಕ್ಷತ್ರೀಯ' ಎಂದು ಬರೆದು ಮುಗಿಸುತ್ತಿದ್ದೇನೆ. ಅದೇ ನನ್ನನ್ನು ಸಂತೈಸುತ್ತಿದೆ" ಎನ್ನುತ್ತ ಮಾಮೂಲಿನಂತೆ-`ಗೌರು ಯಾರು ಬಂದಿದ್ದಾರೆ ನೋಡು"-ಎಂದು ಒಳಕ್ಕೆ ಕೂಗಿದರು-`ಗೌರಜ್ಜಿ ಬಂದು ಯಾವಾಗ ಬಂದಿರಿ ಎಂದು ಕುಶಲ ಪ್ರಶ್ನೆ ಮಾಡಿ ಒಳಗೆ ಹೋದರು.

"ಈ ಸ್ಥಿತಿಯಲ್ಲೂ ಬರೆಯುತ್ತಿದ್ದೀರೀ ಎಂದೆ"-

"ಇದೂ ಇಲ್ಲವೆಂದರೆ ನಾನೇ ಇಲ್ಲ. ನಾಳೆಯಿಂದ `ಮಹಾದರ್ಶನ' ಪ್ರಾರಂಭ. ಯಾಜ್ಞವಲ್ಕ್ಯರನ್ನು ಕುರಿತದ್ದು. ಅದೊಂದು ಪೂರ್ತಿಯಾಗಬೇಕೆಂಬುದು ಸಂಕಲ್ಪ. ಬಹುಶಃ ಅಷ್ಟಾದರೆ ಅಲ್ಲಿಗೆ ದೇವುಡು ದೇವರೊಂದಿಗೆ ಸೇರ್ಪಡೆ" ಎನ್ನುತ್ತ ನಕ್ಕರು.

"ಅಹುದು ಹೀಗೇಕಾಯಿತು ಎಂದೇ" ಕಳಕಳಿಯಿಂದ.

"ನೋಡಿ, ಯಾರೋ ಚಪ್ಪಲಿ ಕದ್ದರು, ಬರಿಗಾಲಲ್ಲೇ ಓಡಾಡುತ್ತಿದ್ದೆ, ಅದನ್ನು ನೋಡಿದ ಒಬ್ಬರು ಕನಿಕರ ಪಟ್ಟು ಒಂದು ಜೊತೆ ಹಳ್ಳಿ ಮೆಟ್ಟು ಮಾಡಿಸಿ ತಂದುಕೊಟ್ಟರು. ಅವರ ಅಭಿಮಾನಕ್ಕಾಗಿ ಮೆಟ್ಟಿಕೊಂಡು ಓಡಾಡಿದೆ. ಅದು ಕಾಲು ಕಚ್ಚಿತು. ದಿನದಿನಕ್ಕೆ ಗಾಯ ದೊಡ್ಡದಾಯಿತು. ಆಸ್ಪತ್ರೆಗೆ ತೋರಿಸಿದೆ. ಅವರು `ಡಯಾಬಿಟೀಸ್ ಇದೆ ಎಂದು ಏನೋ ಮಾತ್ರೆ ಕೊಟ್ಟರು-ವಾಸಿಯಾಗಲಿಲ್ಲ. ಎಂಟು ದಿನ ಬಿಟ್ಟು ಮತ್ತೆ ಹೋದೆ ಕಾಲು ಆಪರೇಷನ್ ಮಾಡಬೇಕೆಂದರು. ನನ್ನ ಮಗ ಶಿವು ಹರಿಹರದಲ್ಲಿದ್ದ ಅವನಿಗೆ ಬರೆದೆ. ಅವನು ರಜ ಹಾಕಿ ಬರುವುದು ಸ್ವಲ್ಪ ತಡವಾಯಿತು. ಅಂತೂ ಆಸ್ಪತ್ರೆಗೆ ದಾಖಲಾದೆ. ಎಲ್ಲ ಪರೀಕ್ಷೆ ಆದಮೇಲೆ ಕಾಲನ್ನು ತೊಡೆಯ ಮೇಲ್ಭಾಗದವರೆಗೆ ಕತ್ತರಿಸಿದರು. ಎರಡು ತಿಂಗಳು ಆಸ್ಪತ್ರೆಯಲ್ಲಿದ್ದೆ. ಅಷ್ಟರಲ್ಲಿ ಈ `ಮಹಾಕ್ಷತ್ರಿಯಾ ಪೂರ್ಣವಾಯಿತು. ಮನೆಗೆ ಬಂದು ಒಂದು ವಾರ ಆಯಿತು. ಮಹಾದರ್ಶನ' ಒಂದಾದರೆ-ಹೇಳಿದೆನಲ್ಲ ದೇವುಡು ದೇವರೊಳಕ್ಕೆ `ಸೇರ್ಪಡೆ ಎಂದು ಅಷ್ಟಾದರೆ ಧನ್ಯ"- ಎಂದರು.

"ಅಷ್ಟರೊಳಗೆ ಇಲ್ಲಿ ಯಾರಾದರೂ ಸಹೃದಯರು ಬಂದು ದರ್ಶನಕೊಟ್ಟರೆ ಅದಕ್ಕಿಂತ ನನಗೆ ಏನಾಗಬೇಕು"-ಎಂದು ನಿಟ್ಟುಸಿರುದರು. ನಾನು ನಮಸ್ಕರಿಸಿದಾಗ ನನ್ನ ಕೈಗೆ ಒಂದೇ ಪಾದ ತಡಕಿದ್ದರ ಕಾರಣ ಈಗ ತಿಳಿಯಿತು.

ಗೌರಜ್ಜಿ ಹೆಸರುಕಾಳಿನ ಉಸುಳಿ ತಂದುಕೊಟ್ಟರು. ಅನಂತರ ಎಂದಿನಂತೆ ಮಜ್ಜಿಗೆ ಒಂದೆರಡು ತಾಸು ಅಲ್ಲಿ ಕುಳಿತು ಅವರ `ನಹುಷನ' ಕಥೆಯನ್ನೆಲ್ಲ ಕೇಳಿ ಅನುಮತಿ ಪಡೆದು ಹೊರಟು ಬಂದೆ.

`ಎರಡು ಮೂರು ತಿಂಗಳು ಕಳೆದ ಮೇಲೆ ಒಂದು ರಾತ್ರಿ ಬೆಂಗಳೂರು ರೇಡಿಯೋ ದೇವುಡು ದೈವಾಧೀನರಾದ ಸಂಗತಿಯನ್ನು ಬಿತ್ತರಿಸಿದರು. ಶ್ರೋತೃಗಳಿಗೆ ಅವರ ವ್ಯಕ್ತಿತ್ವದ ಆಧ್ಯಾತ್ಮಿಕ ಜೀವನದ ಸಾಹಿತ್ಯಾರಾಧನೆಯ ರಾಷ್ಟ್ರಸೇವೆಯ ಪರಿಚಯ ಮಾಡಿಕೊಟ್ಟರು. ಈಗಲೂ ಬೆಂಗಳೂರಿಗೆ ಹೋದಾಗ ಆ ಬೀದಿಗಳಲ್ಲಿ ಸುತ್ತಾಡಿದಾಗ ದೇವುಡು ಇಲ್ಲದಿರುವುದು ಅವರ ಪರಿಚಯವಿದ್ದ ಯಾರಿಗಾದರೂ ಅನುಭವ ಆಗದೇ ಇರಲಾರದು.

★

ಹಿರಿಯ ತಲೆಮಾರಿನ ಪ್ರಮುಖ ಲೇಖಕ

ಶ್ರೀ ಕುಮಾರ ಚಲ್ಯ

- ೧ -

`ದೇವುಡು' ಹೊಸಗನ್ನಡ ಸಾಹಿತ್ಯದ ಹಿರಿಯ ತಲೆಮಾರಿನ ಪ್ರಮುಖ ಲೇಖಕರಲ್ಲಿ ಒಬ್ಬರು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಏಳಿಗೆಗಾಗಿ ಶ್ರಮಿಸಿದುದಲ್ಲದೆ, ಶಿಕ್ಷಣ, ರಂಗಭೂಮಿ, ಪತ್ರಿಕೋದ್ಯಮ, ಚಲನಚಿತ್ರ—ಮೊದಲಾದ ಹಲವಾರು ಕ್ಷೇತ್ರಗಳಲ್ಲಿ ದುಡಿದ ವ್ಯಕ್ತಿ. ಈ ಶತಮಾನದ ಮೂರನೆಯ ದಶಕದಲ್ಲಿ ಬರವಣಿಗೆಗೆ ತೊಡಗಿ, ತಮ್ಮ ಬಹುಮುಖ ಪ್ರತಿಭೆಯನ್ನು ಮೆರೆದ ಪ್ರಯೋಗಶೀಲ ಬರಹಗಾರ. ಇವರು ಡಿಸೆಂಬರ್ ೨೬, ೧೮೯೬ರಂದು ಮೈಸೂರಿನಲ್ಲಿ ಜನಿಸಿದರು. ಇವರ ನಿಜವಾದ ಹೆಸರು ನರಸಿಂಹಶಾಸ್ತ್ರಿ. ಪೂರ್ವಿಕರು ಆಂಧ್ರ ಪ್ರಾಂತದ ಕಂಬಾಲೂರಿನವರು. ತಂದೆ ಕೃಷ್ಣಶಾಸ್ತ್ರಿ; ತಾಯಿ ಸುಬ್ಬಮ್ಮ. ಸಂಪ್ರದಾಯಸ್ಥ ವೈದಿಕ ಮನೆತನದ ಪರಿಸರದಲ್ಲಿ ಬೆಳೆದರೂ, ಸ್ವತಂತ್ರ ಮನೋಧರ್ಮವನ್ನು ರೂಢಿಸಿಕೊಂಡಿದ್ದರು. ವೇದಾಧ್ಯಯನ, ಧಾರ್ಮಿಕ ಪರಿಪಾಠಗಳೊಡನೆ ಕವಿತ್ವದಲ್ಲೂ ತೊಡಗಿದ್ದ ತಂದೆಯವರ ಸಂಸರ್ಗದಲ್ಲಿ ಬಾಲ್ಯದಲ್ಲಿಯೇ ರಾಮಾಯಣ, ಭಾರತ, ಭಾಗವತ, ಬ್ರಹ್ಮಾಂಡ ಪುರಾಣಗಳನ್ನು ಓದಿಕೊಂಡಿದ್ದರು. ಪ್ರೌಢಶಾಲೆಯ ಪ್ರವೇಶದ ಪಾಶ್ಚಾತ್ಯ ಲೇಖಕರ ಸಾಹಿತ್ಯವನ್ನು ಪರಿಚಯ ಮಾಡಿಕೊಂಡಿದ್ದರು. ಬಂಕಿಮಚಂದ್ರರ ಕೃತಿಗಳ ಬಗ್ಗೆ ಹೆಚ್ಚು ಒಲವಿತ್ತು. ಸಂಸ್ಕೃತ ಸಾಹಿತ್ಯದಲ್ಲಿ ಅಪಾರ ಪಾಂಡಿತ್ಯಗಳಿಸಿಕೊಂಡಿದ್ದ ವಿದ್ವಾಂಸರು, ಚಿಂತಕರು ಅವರಿಗೆ ದೊರಕಿದ್ದರು. ದೇವುಡು ಬಿ.ಎ. ಮತ್ತು ಎಂ.ಎ. ಪದವಿ ಶಿಕ್ಷಣವನ್ನು ೧೯೧೭-೧೯೨೩ರ ಅವಧಿಯಲ್ಲಿ ಮುಗಿಸಿದರು. ಅವರು ಐಚ್ಛಿಕವಾಗಿ ಆಯ್ದುಕೊಂಡದ್ದು ಸಂಸ್ಕೃತ; ಪ್ರಿಯವಾದ ಮತ್ತೊಂದು ವಿಷಯ ತತ್ತ್ವಶಾಸ್ತ್ರ. ಚಿತ್ರಕಲೆ, ಸಂಗೀತದ ಪರಿಚಯ ಕೂಡ ಅವರಿಗಿತ್ತು. ದೇವುಡು ಅವರ ಚಿಂತನೆಗೆ ಸರಿಯಾದ ರಹದಾರಿಯನ್ನು ಕಲ್ಪಿಸಿದವರು ಮಹಾದಾರ್ಶನಿಕ ಎನಿಸಿಕೊಂಡಿದ್ದ ಡಾ|| ರಾಧಾಕೃಷ್ಣನ್ ಮತ್ತು ಎನ್.ಎಸ್. ಸುಬ್ಬರಾವ್. ತಮ್ಮನ್ನು ರೂಪಿಸಿದ ಗುರುವೃಂದವನ್ನು ಆತ್ಮಕಥನದಲ್ಲಿ ದೇವುಡು ಕೃತಜ್ಞತೆಯಿಂದ ನೆನಪು ಮಾಡಿಕೊಂಡಿದ್ದಾರೆ. ತಮ್ಮ ತಾತ್ತ್ವಿಕ ಅನ್ವೇಷಣೆಯಲ್ಲಿ ಇಂಥವರ ವಿಚಾರವನ್ನು ಅರಿಯಲು ದೇವುಡು ಯತ್ನಿಸಿದರು. ಜೊತೆಗೆ, ಇಂಗ್ಲಿಷ್, ತೆಲುಗು ಭಾಷೆಯಲ್ಲೂ ಪ್ರಭುತ್ವವಿತ್ತು; ಕನ್ನಡ ಬಗ್ಗೆ ಮಿಗಿಲಾದ ಸಂಸ್ಕೃತಾಧ್ಯಯನಕ್ಕೆ ತಿರುಗಿ ಸಂಸ್ಕೃತ ಕವಿತ್ವಕ್ಕೆ ಹೊರಳಬೇಕಾಗಿದ್ದ ಮನಸ್ಸು ಕನ್ನಡದ ಕಡೆ ತಿರುಗಿತು" (ಕಂನಾಡ ಸಾಹಿತ್ಯಜ್ಞರ ಆತ್ಮಕಥನ, ೧೯೫೩, ಪುಟ. ೨೯-೪೦). ಪ್ರತಿಭೆ. ವಿದ್ವತ್ತುಗಳನ್ನು ಸದ್ವನಿಯೋಗ ಮಾಡಿಕೊಳ್ಳುವ ಸೂಕ್ತ ವಾತಾವರಣದಲ್ಲಿ ಬೆಳೆದ ದೇವುಡು ಸಾಧನೆ ದೊಡ್ಡದು. ಭಾರತೀಯ ಸಂಸ್ಕೃತಿಯ ಪುನರುಜ್ಜೀವನ ಅವರ ಮುಖ್ಯ ಧ್ಯೇಯಗಳಲ್ಲಿ ಒಂದಾಗಿತ್ತು. ಹೀಗಾಗಿ, ಪುರಾಣ ಮತ್ತು ಇತಿಹಾಸ ಮೂಲದ ಸಂಗತಿಗಳನ್ನು ವ್ಯಾಖ್ಯಾನಿಸುವ ಹಾಗೂ ಅರ್ಥೈಸುವ ಪ್ರಯತ್ನದಲ್ಲಿ ತೊಡಗಿದರು. ಜನಪರ ಧೋರಣೆಯುಳ್ಳ ಸಾಮಾಜಿಕ ಕಾರ್ಯಗಳನ್ನು ಕೈಗೊಂಡು ಅಕ್ಷರ ಪ್ರಚಾರ, ವಯಸ್ಕರ ಶಿಕ್ಷಣ, ಕರ್ನಾಟಕ ಏಕೀಕರಣ ಮುಂತಾದ ಪ್ರಗತಿಪರ ಕಾರ್ಯಗಳಲ್ಲಿ ಪಾಲ್ಗೊಂಡರು. ಉತ್ತಮ ವಾಗ್ಮಿ, ಪ್ರಬುದ್ಧ ನಟ, ಶುದ್ಧ ಅಂತಃಕರಣವುಳ್ಳ ಮಾನವೀಯ ವ್ಯಕ್ತಿಯಾಗಿ ಅವರು ಹೆಸರು ಗಳಿಸಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ವಿಶಿಷ್ಟ ಮನೋಧರ್ಮದ ಲೇಖಕರಾಗಿದ್ದರು. ಸಾಹಿತ್ಯ ಸಮೀಕ್ಷೆಯನ್ನು

ಕೃತಿಯ ಕೊನೆಯಲ್ಲಿ ನೀಡಿರುವುದರಿಂದ ಹೆಚ್ಚಿನ ವಿವರಣೆ ಅಪ್ರಸ್ತುತವೆಂದು ಭಾವಿಸಿ ಅವರ ವ್ಯಕ್ತಿತ್ವದ ಕಡೆ ಗಮನ ಕೊಡಲಾಗಿದೆ.

ಕೌಟುಂಬಿಕ ಪರಿಸರದಲ್ಲಿ ದೇವುಡು ತುಂಬಾ ಶಿಸ್ತನ್ನು ಪಾಲಿಸುತ್ತಿದ್ದರು. ಅವರ ಸಹ ಧರ್ಮಿಣಿ ಗೌರಮ್ಮ ಹಾಗೂ ಮಕ್ಕಳೊಡನೆ ಉಲ್ಲಾಸದಾಯಕ ಜೀವನ ನಡೆಸಿದವರು. ಸಂದರ್ಭಾನುಸಾರ ನಿಷ್ಠೂರವಾಗಿ ವರ್ತಿಸುತ್ತಿದ್ದವರು. ಮನೆಯ ಮತ್ತು ಮನಸ್ಸಿನ ಅರಕೆಗಳನ್ನು ಬಚ್ಚಿಟ್ಟುಕೊಂಡ ಹಸನ್ಮುಖಿ. ಬಡವರನ್ನು ಕಂಡರೆ ತನ್ನಲ್ಲಿರುವುದನ್ನು ಹಂಚಿ ಬದುಕುವ ಸ್ವಭಾವ. ಅಪಾರ ಸ್ನೇಹಿತರನ್ನು ಸಂಪಾದಿಸಿಕೊಂಡಿದ್ದ ದೇವುಡು ಬದುಕಿನ ಕೊನೆಯಲ್ಲಿ ಕಷ್ಟಗಳನ್ನು ಅನುಭವಿಸಬೇಕಾಯಿತು. ಮಧುಮೇಹಕ್ಕೆ ತುತ್ತಾದಾಗ ಅವರ ಕಾಲೊಂದನ್ನು ಕತ್ತರಿಸಲಾಯಿತು. ಅಂಥ ಸಂದಿಗ್ಧದಲ್ಲಿಯೇ `ಮಹಾದರ್ಶನ' ಕಾದಂಬರಿಯನ್ನು ಬರೆದರು. ಬದುಕನ್ನು ಹೋರಾಟವೆಂದೇ ಭಾವಿಸಿದ್ದ ಅವರು ಮಹತ್ತರವಾದುದನ್ನು ಸಾಧಿಸಬೇಕೆಂದು ಹೊರಟವರು. ಜೀವನ ನಿರ್ವಹಣೆಗಾಗಿ ಸರಕಾರಿ ನೌಕರಿಯನ್ನು ಹಿಡಿಯಲಿಲ್ಲ. ತಮ್ಮ ಮನೋಧರ್ಮಕ್ಕೆ ಹೊಂದದೇ ಹೋದಾಗ ಅರಮನೆಯ ಕೆಲಸವನ್ನ, ಶೃಂಗೇರಿಯಲ್ಲಿ ದೊರೆತಿದ್ದ ಪೇಷ್ಕಾರ್ ಕೆಲಸವನ್ನು ಬಿಟ್ಟುಬಂದರು. ಸಣ್ಣಪುಟ್ಟ ವೃತ್ತಿಗಳಲ್ಲಿ ಅವರಿಗೆ ತೃಪ್ತಿ ದೊರೆಯಲಿಲ್ಲ. ಏನೇ ಕಾರ್ಯದಲ್ಲಿ ತೊಡಗಿದರೂ ಅವರದು ದೊಡ್ಡನೋಟ. "ಮೈಸೂರು ನನ್ನ ಸಾಧನ ರಂಗ. ಬೆಂಗಳೂರು ನನ್ನ ಕಾರ್ಯ ರಂಗ. ನಾನು ಸಾಧನಕಾರ್ಯಗಳಿಗಾಗಿ ಒದ್ದಾಡಿದಷ್ಟು ಸಿದ್ಧಿಗಾಗಿ ಒದ್ದಾಡಲಿಲ್ಲ. ನನಗೆ ಸಿದ್ಧಿಯಲ್ಲಿ ಅಷ್ಟು ವಿಶ್ವಾಸವಿಲ್ಲ" ಎಂದಿದ್ದಾರೆ (ಕಂನಾಡ ಸಾಹಿತ್ಯಜ್ಞರ ಆತ್ಮಕಥನ, ೧೯೫೩, ಪುಟ. ೨೯-೪೦). ೧೯೨೭ರ ವೇಳೆಗೆ ಬೆಂಗಳೂರಿನ ಆರ್ಯವಿದ್ಯಾಶಾಲೆಯಲ್ಲಿ ಉಪಾಧ್ಯಾಯರಾಗಿ ಸೇರಿದರು. ೧೯೪೨ರಲ್ಲಿ ಸ್ವತಃ ಗಾಂಧೀನಗರದಲ್ಲಿ ಪ್ರೌಢಶಾಲೆಯನ್ನು ಸ್ಥಾಪಿಸಿದರು. ಪಠ್ಯಪುಸ್ತಕವಾಗಿದ್ದ ತಮ್ಮ `ದೇಶಾಂತರದ ಕಥೆಗಳು' ಎಂಬ ಕೃತಿಯಿಂದ ಬಂದ ಹಣವನ್ನು ವಿನಿಯೋಗಿಸಿ ಆ ಪಾಠಶಾಲೆಯನ್ನು ಮಾದರಿ ಸಂಸ್ಥೆಯನ್ನಾಗಿ ರೂಪಿಸಿದರು. ಅಲ್ಲಿಯೂ, ಹೆಚ್ಚುದಿನ ಉಳಿಯಲಿಲ್ಲ. ಮುಂದೆ ವಯಸ್ಕರಿಗಾಗಿ `ಅಕ್ಷರ ಪ್ರಚಾರ' ಯೋಜನೆಯನ್ನು ಹಾಕಿಕೊಂಡು ಹೊರಟರು. ದೇವುಡು ಅವರ ಮಹತ್ವಾಕಾಂಕ್ಷೆಗಳಲ್ಲಿ ಪತ್ರಿಕಾ ವೃತ್ತಿಯೂ ಒಂದು. ಬೆಂಗಳೂರಿಗೆ ಬಂದ ಅನಂತರದಲ್ಲಿ `ನವಜೀವನ', `ರಂಗಭೂಮಿ' ಪತ್ರಿಕೆಗಳ ಸಂಪಾದಕರಾಗಿ ಕೆಲಸ ನಿರ್ವಹಿಸಿದರು. ೧೯೩೫ರ ಸುಮಾರಿನಲ್ಲಿ ಸ್ವತಃ ಆರಂಭಿಸಿದ `ನಮ್ಮ ಪುಸ್ತಕ' ಹೆಚ್ಚು ಮನ್ನಣೆ ಗಳಿಸಿತ್ತು. ೧೯೨೮ರ ಸುಮಾರಿನಲ್ಲಿ ದೇವುಡು `ಕರ್ನಾಟಕ ಫಿಲ್ಮ್ ಕಾರ್ಪೋರೇಷನ್' ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿ ಚಲನಚಿತ್ರ ಕ್ಷೇತ್ರವನ್ನು ಪ್ರವೇಶಿಸಿದರು. ೧೯೩೭ರಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ತಯಾರಾದ ಮೊದಲ ಕನ್ನಡ ಚಿತ್ರ `ಚಿರಂಜೀವಿ'ಯ ಮೂಲ ಪ್ರವರ್ತಕರಾದ ದೇವುಡು ಚಿತ್ರ ಸಾಹಿತ್ಯವನ್ನು ರಚಿಸಿ, ಮೃಕಂಡು ಮುನಿಯಾಗಿ ಅಭಿನಯಿಸಿದ್ದರು. ಈ ವೇಳೆಗಾಗಲೇ ಅವರು ರಂಗಭೂಮಿಯ ಪರಿಣತ ನಟರಾಗಿದ್ದರು. `ಅಮೆಚ್ಯೂರ್ ನಾಟಕ ಸಂಸ್ಥೆ'ಯ ಸಕ್ರಿಯ ಸದಸ್ಯರಾಗಿದ್ದುಕೊಂಡು `ನಚಿಕೇತ', `ಮಂಡೋದರಿ', `ಯಶೋಧರಾ', `ಮಾರ್ಕಂಡೇಯ', `ತೆನಾಲಿ ರಾಮಕೃಷ್ಣ'-ಮೊದಲಾದ ನಾಟಕಗಳಲ್ಲಿ ಪಾತ್ರವಹಿಸಿದ್ದರು. ಸಿ.ಕೆ. ವೆಂಕಟರಾಮಯ್ಯನವರ `ನಚಿಕೇತ'ದಲ್ಲಿನ ಅವರ `ವಾಜಸ್ರವಸ್' ಮಹರ್ಷಿಯ ಪಾತ್ರ ಅಪೂರ್ವವಾದ ಕೀರ್ತಿಯನ್ನು ತಂದು ಕೊಟ್ಟಿತ್ತು. ಹಾಗೆಯೇ ಅವನತಿಯ ಹಾದಿ ಹಿಡಿದಿದ್ದ ಕನ್ನಡ ರಂಗಭೂಮಿಯ ಏಳಿಗೆಗಾಗಿ ಅಕ್ಷರಸ್ಥರು. ವಿದ್ಯಾವಂತರು ಪ್ರಾಮಾಣಿಕವಾಗಿ ದುಡಿಯುವ ಅಗತ್ಯವಿದೆಯೆಂದು ಭಾವಿಸಿದರು. ಹೀಗೆ ಸಾಹಿತ್ಯ ಮತ್ತು ಕಲೆಯ ಕ್ಷೇತ್ರದಲ್ಲಿ ತೃಪ್ತರಾಗದೆ ದೇವುಡು ೧೯೪೨ರ ಅನಂತರದಲ್ಲಿ ರಾಜಕೀಯ

ಕ್ಷೇತ್ರವನ್ನು ಪ್ರವೇಶಿಸಿದರು. ಪುರಸಭೆಯ ಚುನಾವಣೆಯಲ್ಲಿ ಸ್ಪರ್ಧಿಸಿದರು. ೧೯೪೬ರಲ್ಲಿ ಸರಕಾರ ಅವರನ್ನು ಪ್ರಜಾಪ್ರತಿನಿಧಿ ಸಭೆಗೆ ನೇಮಿಸಿತು. ಕೆಲವು ವರ್ಷಗಳ ಕಾಲ ಪಠ್ಯಪುಸ್ತಕ ಸಮಿತಿ, ಮೈಸೂರು ಸಂಸ್ಕೃತಾಧ್ಯಯನ ಮಂಡಳಿಯ ಸದಸ್ಯರಾಗಿದ್ದರು. ೧೯೫೬-೫೮ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. ಇದು ದೇವುಡು ಅವರ ಈ ಬಗೆಯ ಕಾರ್ಯಚಟುವಟಿಕೆಗಳ ಕೊನೆಯ ಘಟ್ಟವಾಯಿತು. ೧೯೫೨ರಲ್ಲಿ ತಮ್ಮ ಮಗ ರಾಮುವನ್ನು ಕಳೆದುಕೊಂಡ ಬಳಿಕ ಅವರ ಚಟುವಟಿಕೆಗಳು ಬರವಣಿಗೆಗಷ್ಟೇ ಸೀಮಿತಗೊಂಡವು.

ದೇವುಡು ವೈದಿಕ ನಿಷ್ಠರಾಗಿದ್ದರೇ ಹೊರತು ಮಡಿವಂತ ಬ್ರಾಹ್ಮಣನಂತೆ ವರ್ತಿಸಿದವರಲ್ಲ. ಎಲ್ಲಾ ಜಾತಿ, ಧರ್ಮಗಳನ್ನು ಸಮಾನವಾಗಿ ಕಾಣುವ ಮನೋಭಾವ ಅವರಲ್ಲಿತ್ತು. ತಾವು ನಂಬಿದುದರ ಬಗ್ಗೆ ತೋರುತ್ತಿದ್ದ ಗೌರವವನ್ನೇ, ಇತರರು ಕಂಡುಕೊಂಡ ಸತ್ಯಕ್ಕೂ ನೀಡುತ್ತಿದ್ದರು. ಒಮ್ಮೆ ದೇವುಡು. ರೆ. ಉತ್ತಂಗಿ ಚೆನ್ನಪ್ಪನವರನ್ನು ಕಾಲುತೊಳೆದು ಸತ್ಕರಿಸಿದ ನಿದರ್ಶನ ಜನಜನಿತವಾದದ್ದು. ಅವರು ಸಾಮಾಜಿಕ ಪಿಡುಗುಗಳನ್ನು ತೊಡೆಯಬೇಕೆಂದು, ಜನಜೀವನದ ನಂಬಿಕೆ. ಆಚರಣೆಗಳಲ್ಲಿ ಸುಧಾರಣೆಯಾಗಬೇಕೆಂದು ಬಯಸಿದರು. ಬೆಂಗಳೂರಿನಲ್ಲಿ ಆರ್ಯಸಮಾಜದ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ ಎಂಬುವರು ಬಾಲ್ಯವಿವಾಹ ಪದ್ಧತಿಯ ವಿರುದ್ಧ ಭಾಷಣ ಮಾಡಿದಾಗ ಕೆಲವು ಸಂಸ್ಕೃತ ಪಂಡಿತರು ಅವರ ವಾದವನ್ನು ಪ್ರತಿಭಟಿಸಿದರಂತೆ. ದೇವುಡು ಅವರು ಮಾತ್ರ ವಿದ್ಯಾವಾಚಸ್ಪತಿಯವರ ವಾದ ಸರಿಯಾದುದೆಂದು ಬೆಂಬಲ ನೀಡಿದರಂತೆ. ದೇವುಡು ಸನಾತನ ಭಾರತೀಯ ಸಂಸ್ಕೃತಿಯಲ್ಲಿ ನಂಬಿಕೆಯುಳ್ಳವರಾಗಿದ್ದರೂ ಒಣತರ್ಕದ ವಿತಂಡವಾದಿಯಾಗಿರಲಿಲ್ಲ. ಅವರ ಚಿಂತನೆಗಳು ಪುರಾತನ ಸಂಸ್ಕೃತಿಯ ಬೇರುಳ್ಳ ಆಧುನಿಕ ದೃಷ್ಟಿಯಿಂದ ಕೂಡಿದ್ದವು. `ಮಹಾಬ್ರಾಹ್ಮಣ', `ಮಹಾಕ್ಷತ್ರಿಯ', `ಮಹಾದರ್ಶನ' ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಹಲವಾರು ಆಶಯಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. ವಿಶ್ವಾಮಿತ್ರನಂಥ `ವ್ಯಕ್ತಿವಾದಿ', ನಹುಷನಂಥ `ಕ್ಷತ್ರಿಯ' ಹಾಗೂ ಯಜ್ಞಾವಲ್ಕ್ಯನಂಥ `ದಾರ್ಶನಿಕ'ರು ಎಲ್ಲ ಕಾಲಕ್ಕೂ ಸಲ್ಲುವಂಥವರು. ದೇವುಡು ಸಮರ್ಥ ಜಿಜ್ಞಾಸು. ತಿಳಿದುದನ್ನು ಮತ್ತೆ ಮತ್ತೆ ಒರೆ ಹಚ್ಚಿ ನೋಡುವ ಸ್ವಭಾವ. ತನಗೆ ಸರಿಯೆನಿಸಿದ್ದನ್ನು ನಿರ್ಭೀತಿಯಿಂದ ಅಧಿಕಾರಯುತವಾಗಿ ನುಡಿಯುತ್ತಿದ್ದರು. ಹಲವರ ನಿಷ್ಠೂರಕ್ಕೆ ಗುರಿಯಾದರೂ ಸತ್ಯವನ್ನು ಮರೆಮಾಚಿದವರಲ್ಲ. ಅವರಂತೆಯೇ ಅವರ ಮಾತೂ ಸರಳ. ಆದರೆ ಕಾಳಿದಾಸ, ಶಂಕರಾಚಾರ್ಯ ಮುಂತಾದವರನ್ನು ಕುರಿತು ಹೇಳುವಲ್ಲಿ ಗಂಭೀರತರವಾದ ವಾಕ್ಯಸರಣಿ, ವಿಚಾರ ಮಂಥನ ಕಾಣುತ್ತಿತ್ತು. ಯಾವುದೇ ಕಾರಣಕ್ಕೂ ಜನತೆಯನ್ನು ದಾರಿ ತಪ್ಪಿಸುವ ವಾದ ಸರಣಿಯನ್ನು ಅವರು ಒಪ್ಪುತ್ತಿರಲಿಲ್ಲ. ಇಂಥ ಹಲವಾರು ಜೀವನ ಸಂದರ್ಭಗಳನ್ನು ಸೃಷ್ಟಿಸಿಕೊಂಡಿದ್ದ ದೇವುಡು ಒಬ್ಬ ಧೀಮಂತ, ಮೇಧಾವಿ ವ್ಯಕ್ತಿತ್ವವನ್ನು ಹೊಂದಿದ್ದ ಸವ್ಯಸಾಚಿ ಬರಹಗಾರ. ಕೊನೆಯ ಗಳಿಗೆಯಲ್ಲಿ ಅನಾಯಕತೆಯ ನಡುವೆ ಒಂದೆರಡು ವರ್ಷ ಬದುಕು ಸಾಗಿಸಿದ ದೇವುಡು ಅಕ್ಟೋಬರ್ ೨೭, ೧೯೬೨ರಂದು ಮೃತರಾದರು. `ಮಹಾಕ್ಷತ್ರಿಯ' ಕಾದಂಬರಿಗೆ ೧೯೬೩ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆಯಿತು. ಸತ್ತ ಮೇಲೆ ಸನ್ಮಾನಿಸುವ ಪದ್ಧತಿ ಹಳೆಯದು ತಾನೆ! ಕೊನೆಗೂ ಬಹುಮಾನದ ಬದಲಾಗಿ ಬಂದದ್ದು ರಾಷ್ಟ್ರೀಯ ಉಳಿತಾಯ ಪತ್ರ! ಪ್ರತಿಭಾವಂತ ಲೇಖಕನಿಗೆ ಸಕಾಲದಲ್ಲಿ, ನ್ಯಾಯವಾಗಿ ಸಲ್ಲಬೇಕಾದ ಗೌರವ ದೊರೆಯಲಿಲ್ಲ. "ಸಾಹಿತ್ಯದೊಳಗಿನ ರಾಜಕಾರಣ ಅಡ್ಡಿಯಾಗದೇ ಇದ್ದಿದ್ದರೆ ಶಾಸ್ತ್ರಿಗಳಿಗೆ ಈ ಗೌರವ ನಿಸ್ಸಂದೇಹವಾಗಿ ಈ ಮೊದಲೇ ಸಲ್ಲುತ್ತಿತ್ತು" (ನಿರಂಜನ, ಅಂಕಣ, ೧೯೭೨, ಪುಟ. ೧೭೪)-ಈ ಮಾತು ನಿಸ್ಸಂದೇಹವಾಗಿ ನಿಜವೆನಿಸುತ್ತದೆ. ಒಂದು

ಅಪರೂಪದ ಸ್ನೇಹ ಗೀತೆ ಹೀಗಿದೆ :

ಎದ್ದ, ಬಿದ್ದ, ಒದ್ದಾಡಿದ, ಗುದ್ದಾಡಿದ ದೇವುಡು
ಸುತ್ತಾಡಿದ, ತಿತ್ತಾಡಿದ, ಕಿತ್ತಾಡಿದ ದೇವುಡು
ಕುಂಟುಗಾಲಿನಿಂದ ಹೊರಟ, ವೈಕುಂಠಕೆ ದೇವುಡು
ಕುರುಡುಗಣ್ಣಿನಿಂದ ಕಂಡ, ಕೈಲಾಸವ ದೇವುಡು
ವೇದ, ತೀರ್ಥ, ಬುಡ್ಡನಗರಿ, ಬಾಳಕದಳಿಕರೆವುದು
ಅರ್ಥಮರ್ಥ ಎಲ್ಲ ಕೆಲಸ, ಬರಬೇಕು ದೇವುಡು
ದೇವರನ್ನು ಮರೆಯದಂತೆ, ಗುರುವಿನಲ್ಲಿ ಬೆರೆಯುವನಂತೆ
ವಿನಯದಲ್ಲಿ ಮೆರೆಯುವಂತೆ, ಬರಬೇಕು ದೇವುಡು

(ಅಂಬಿಕಾತನಯದತ್ತ. `ಒಲವೆ ನಮ್ಮ ಬದುಕು', ೧೯೭೬ ಪುಟ. ೨೦೬)

- ೨ -

ದೇವುಡು ಕಥನ ಸಾಹಿತ್ಯ ನಿರ್ಮಿತಿಗೇ ಹೆಸರಾದವರು. ಅದರಲ್ಲೂ ಕಾದಂಬರಿ ಅವರಿಗೆ ಪ್ರಿಯವಾದ ಪ್ರಕಾರ. ಇತರ ಪ್ರಕಾರಗಳಲ್ಲಿ ಅವರು ಆಸಕ್ತಿ ತೋರಿದ್ದರೂ ಅವರ ಪ್ರತಿಭೆ ಹೆಚ್ಚು ಪ್ರಕಟಗೊಂಡಿರುವುದು ಕಾದಂಬರಿ ರಚನೆಯಲ್ಲಿ. ದೇವುಡು ತಮ್ಮ ಬರವಣಿಗೆಯನ್ನು ಆರಂಭಿಸಿದ ಕಾಲಕ್ಕಾಗಲೇ ಹೊಸಗನ್ನಡ ಸಾಹಿತ್ಯದ ಗದ್ಯಪ್ರಕಾರಕ್ಕೆ ನಿಶ್ಚಿತವೆನ್ನಬಹುದಾದ ಕೆಲವು ಆಯಾಮ ಗಳು ಪ್ರಾಪ್ತವಾಗಿದ್ದುವು. ದೇಸಿ ಹಿನ್ನೆಲೆಯಿಂದ ಪರಿಭಾವಿಸುವುದಾದರೆ ಕೆಂಪು ನಾರಾಯಣನ `ಮುದ್ರಾಮಂಜೂಷ' ಕಾದಂಬರಿ ರಚನೆಗೆ ಬೇಕಾದ ಭಾಷಿಕ ವಿನ್ಯಾಸಗಳನ್ನು ಸೂಚಿಸಿದ ಗ್ರಂಥ. ಹಾಗೆಯೇ ಸಂಸ್ಕೃತ ಮತ್ತು ಕನ್ನಡ ಮಹಾಕಾವ್ಯಗಳ `ಕಥಾನಕ' ರೂಪಗಳೂ ಬಳಕೆಗೆ ಬಂದಿದ್ದವು. ಅನಂತರ ಇಂಗ್ಲಿಷ್ ಸಾಹಿತ್ಯದ ಪ್ರಭಾವಗಳನ್ನು ಅರಗಿಸಿಕೊಂಡಂತೆ, ಭಾರತೀಯ ಮೂಲದ ಅನ್ಯ ಭಾಷೆಗಳಿಂದ ಅನುವಾದಗೊಂಡ ಕಾದಂಬರಿಗಳು ಬಂದವು. ಬಿ. ವೆಂಕಟಾಚಾರ್ಯ ಮತ್ತು ಗಳಗನಾಥರು ಕ್ರಮವಾಗಿ ಬಂಗಾಳಿ ಹಾಗೂ ಮರಾಠಿ ಮೂಲದ ಕಾದಂಬರಿಗಳನ್ನು ಕನ್ನಡಕ್ಕೆ ತಂದರು. ಅವರ ಮುಖ್ಯ ಉದ್ದೇಶ ಕೇವಲ ಕಾದಂಬರಿ ಪ್ರಾಕಾರವೊಂದರ ಬಗ್ಗೆ ಓದುಗರಲ್ಲಿ ಆಸಕ್ತಿ ಮೂಡಿಸು ವುದೇ ಆಗಿತ್ತು. ಏಕೆಂದರೆ, ಸಣ್ಣಕತೆಯಂತೆಯೇ ಕಾದಂಬರಿ ಪ್ರಕಾರ ಕೂಡ ಪಾಶ್ಚಾತ್ಯ ನೆಲೆಯಿಂ ದಲೇ ಪರಿಚಯವಾಗಿತ್ತು. ಹೀಗಾಗಿ, ಕನ್ನಡದ ಮೊದಲ ಕಾದಂಬರಿಕಾರರ ಪ್ರಯತ್ನ ಕೇವಲ ಪ್ರಯೋ ಗಶೀಲವಾದದ್ದು. ಒಂದೆಡೆ ಸಾಹಿತ್ಯ ಪ್ರಕಾರವೊಂದನ್ನು ಪರಿಚಯಿಸುವ ಆಶಯವಿದ್ದರೆ, ಮತ್ತೊಂ ದೆಡೆ ಆ ಪ್ರಕಾರದಲ್ಲಿ ಒಲವು ತೋರುವ ಓದುಗ ವರ್ಗವನ್ನು ಸಿದ್ಧ ಮಾಡುವ ಮಹತ್ವಾಕಾಂಕ್ಷೆ ಯಿತ್ತು. ಒಂದರ್ಥದಲ್ಲಿ ಬರೆಯುವವರು ಕಡಿಮೆಯಿದ್ದು; ಓದುವವರ ಸಂಖ್ಯೆಯನ್ನು ಬೆಳೆಸಿದ ಪ್ರಕಾರ ಕಾದಂಬರಿ. ಮುಂದೆ ಬಹುತೇಕ ಪ್ರಮುಖ ಬರಹಗಾರರು ಈ ಹಿನ್ನೆಲೆಗಳನ್ನು ಗಮನದಲ್ಲಿ ರಿಸಿಕೊಂಡೇ ಅನೇಕ ಪ್ರಯೋಗಗಳನ್ನು ಮಾಡಿದರು. `ಸೂರ್ಯಕಾಂತ', `ಶೃಂಗಾರ ಚಾತುರ್ಯೋಲ್ಲಾ ಸಿನಿ', `ಇಂದಿರಾ ಬಾಯಿ', `ಇಂದಿರಾ', `ವಾಗ್ದೇವಿ' ಮೊದಲಾದ ಸ್ವತಂತ್ರ ಕಾದಂಬರಿಗಳು ಬಂದರೂ ಅವುಗಳಲ್ಲಿ ಅನುವಾದಿತ ಕೃತಿಗಳ ಛಾಯೆ ನುಸುಳಿತು. ಇಂಥ ಪ್ರಭಾವದಿಂದ ಬಿಡಿಸಿಕೊಂಡಂತೆ ಕಾಣುವ ಕಾದಂಬರಿ ಎಂ.ಎಸ್. ಪುಟ್ಟಣ್ಣನವರ `ಮಾಡಿದ್ದುಣ್ಣೋ ಮಹರಾಯ'. ಪರಂಪರಾಗತ ಮೌಲ್ಯಗಳನ್ನು ಕಟ್ಟಿಕೊಡುವುದರ ಮೂಲಕ ಇದು ಐತಿಹಾಸಿಕ ಮಹತ್ವವನ್ನು ಪಡೆಯಿತು. ಜೊತೆಗೆ,

ಪುರಾಣ-ಮೂಲದ ಸಿದ್ಧಮಾದರಿಗಳನ್ನು ವರ್ತಮಾನದ ಗ್ರಹಿಕೆಗೆ ಹೊಂದುವ ಹಾಗೆ ಬಳಸಿಕೊಂಡದ್ದೂ ಗಮನಾರ್ಹ ಸಂಗತಿ. ಈ ಪರಂಪರೆಯ ಪ್ರಭಾವವನ್ನು ಅರಗಿಸಿಕೊಂಡೂ ವಿಭಿನ್ನರೀತಿಯ ಕೃತಿಗಳನ್ನೂ ನೀಡಿದವರು ದೇವುಡು. ಹೊಸಗನ್ನಡ ಸಾಹಿತ್ಯ ಪರಂಪರೆಯ ಪ್ರಧಾನ ಧಾರೆಯಲ್ಲಿ ಸೇರಬಹುದಾದ ಅರ್ಹತೆಯುಳ್ಳ ಅವರ ಪ್ರಾತಿನಿಧಿಕ ಕೃತಿಗಳು ಕನ್ನಡ ವಿಮರ್ಶೆಯ ಸಂದರ್ಭದಲ್ಲಿ ಅಮಾನತ್ತಿಗೆ ಒಳಗಾದದ್ದು ದೊಡ್ಡ ವಿಪರ್ಯಾಸ.

- ೩ -

ದೇವುಡು ಅವರ ಸೃಜನಪ್ರಧಾನ ಸಾಹಿತ್ಯ ಹಾಗೂ ಚಿಂತನಪ್ರಧಾನ ಸಾಹಿತ್ಯದ ನೆಲೆಗಳಿರುವುದು ಸನಾತನ ಭಾರತೀಯ ಸಂಸ್ಕೃತಿಯಲ್ಲಿ. ಅವರ ಚಿಂತನೆಗೆ ಇಂಬು ದೊರೆತಿರುವುದು ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಭಾಗವತ ಮೊದಲಾದ ಗ್ರಂಥಗಳಲ್ಲಿ ತಮ್ಮ ತಾತ್ವಿಕ ಅನ್ವೇಷಣೆಗಾಗಿ ಅನೇಕ ಜ್ಞಾನ ಶಾಖೆಗಳನ್ನು ಅವರು ಅವಲಂಬಿಸುತ್ತಾರೆ. ಅವರ ತತ್ವಜ್ಞಾನ ಸಂಪತ್ತು, ತರ್ಕನೈಪುಣ್ಯ ಅನನ್ಯ. ಉದ್ಭವಿಸುವ ಅತ್ಯಂತ ಜಟಿಲ ಸಮಸ್ಯೆಗಳಿಗೆ ಸಮರ್ಪಕ ಉತ್ತರವನ್ನು ಅವರು ಪ್ರಾಚೀನ ಗ್ರಂಥಗಳಲ್ಲಿ ಕಂಡುಕೊಳ್ಳುತ್ತಾರೆ. ಭಾರತೀಯ ಪರಂಪರಾಗತ ಮೌಲ್ಯಗಳನ್ನು ಶೋಧಿಸಿ ತೆಗೆದುಕೊಡುವುದರೊಂದಿಗೆ ಅವುಗಳನ್ನು ಕಾಲಕ್ಕೆ ತಕ್ಕಂತೆ ನವೀನಗೊಳಿಸಿ ನೀಡುವ ಪ್ರಯತ್ನವನ್ನು ಮಾಡುತ್ತಾರೆ. ಪಾಂಡಿತ್ಯದ ಸೆಳೆತ, ಶಾಸ್ತ್ರದ ನಿರ್ಬಂಧಗಳು ಬರವಣಿಗೆಯಲ್ಲಿ ಪ್ರವೇಶಿಸಿದರೂ, ಸ್ವತಂತ್ರ ಪ್ರತಿಭೆ ತೆರೆದುಕೊಳ್ಳುವ ಕಡೆ ಆಳವಾದ ಅಧ್ಯಯನ, ಸಂಶೋಧನಾ ಮನೋಧರ್ಮ ಮತ್ತು ಆಧುನಿಕ ದೃಷ್ಟಿಯಿಂದ ಕೂಡಿದುದು. ದೇವುಡು ಅವರ ಸಾಧನೆ ದೊಡ್ಡದು ಎಂದು ಹೇಳಲು ಯಾವುದೇ ರೀತಿಯಲ್ಲೂ ಹಿಂಜರಿಯಬೇಕಿಲ್ಲ. ದೇವುಡು ಕನ್ನಡಕ್ಕೆ ನೀಡಿದ ಕೊಡುಗೆ ಅಪಾರವಾದುದಾದರೂ, ಅವರ ಸಾಧನೆಗಳನ್ನು ಸಕಾಲದಲ್ಲಿ ಗುರುತಿಸದೇ ಹೋದುದಕ್ಕೆ ಕಾರಣ ವೇನೆಂದು ತಿಳಿಯುವುದು ಸುಲಭವಲ್ಲ. ದೇವುಡು ಅವರ ಪ್ರಯೋಗಶೀಲ ಪ್ರವೃತ್ತಿ ಅನೇಕ ಹೊಸ ಹೊಸ ವಿಚಾರಗಳ ಗುಂಗಿನಲ್ಲಿ ಒಂದು ನಿರ್ದಿಷ್ಟ ನೆಲೆಯನ್ನು ಕಂಡುಕೊಳ್ಳಲಿಲ್ಲ ಎನಿಸುತ್ತದೆ. ಕಾದಂಬರಿ, ಸಣ್ಣಕಥೆ, ನಾಟಕ, ರಂಗಭೂಮಿ, ಪತ್ರಿಕೋದ್ಯಮ, ಚಲನಚಿತ್ರ ಇತ್ಯಾದಿ ಕ್ಷೇತ್ರಗಳಲ್ಲಿ ಅವರ ಪ್ರತಿಭೆ ಹಂಚಿಹೋಯಿತು. ಹೀಗಿದ್ದೂ "ದೇವುಡು ಅವರ ಮರಣದಿಂದ ಕನ್ನಡ ಸಾಹಿತ್ಯದಲ್ಲಿ ಭೂತ ವರ್ತಮಾನಗಳನ್ನು ಬೆಸೆಯಬಲ್ಲ ಶಿಲ್ಪಿಯೊಬ್ಬನನ್ನು ಕಳೆದುಕೊಂಡ ಹಾಗಾಯಿತು. ಸಾಹಿತ್ಯ ಅಕಾಡೆಮಿಯಿಂದ ದೇವುಡು ಮರಣೋತ್ತರ ಪ್ರಶಸ್ತಿಯನ್ನು ಪಡೆಯಬೇಕಾಗಿ ಬಂದದ್ದು ಬಹುದುಃಖದ ಸಂಗತಿ" (ಹಾ. ಮಾ. ನಾಯಕ, ಸಮೀಕ್ಷೆ, ೧೯೬೭, ಪುಟ. ೯೬-೯೭) ಎಂಬ ಮಾತಿನೊಳಗಿನ ವಿಷಾದ ಭಾವ ಪ್ರತಿಭಾವಂತರನ್ನು ಗುರುತಿಸುವ ವಿಳಂಬ ನೀತಿಯನ್ನೇ ಸೂಚಿಸಿದೆ. ಪರಂಪರೆಯೊಂದರ ಅರ್ಥಪೂರ್ಣ ಮಜಲುಗಳನ್ನು ಕಾಲಕಾಲಕ್ಕೆ ಸರಿಯಾಗಿ ಗುರುತಿಸದೇ ಹೋಗುವುದರಿಂದ ಆಗುವ ನಷ್ಟ ಕೂಡ ದೊಡ್ಡದಾಗಿರುತ್ತದೆ. ಸಾಹಿತ್ಯವನ್ನು ಕುರಿತಂತೆಯೂ ಈ ನಿಲುವಿಗೆ ಬರಬಹುದು. ಏಕೆಂದರೆ, ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅವಜ್ಞೆಯಿಂದಲೋ, ಪೂರ್ವಗ್ರಹಗಳಿಂದಲೋ, ಮಿಗಿಲಾಗಿ ಅನಾಸಕ್ತಿಯಿಂದಾಗಿ ಅನೇಕ ಲೇಖಕರನ್ನು ಮರೆಯಲಾಗಿದೆ. ಸಾಕಷ್ಟು ಮೌಲಿಕವೆನ್ನಬಹುದಾದ ಸಾಹಿತ್ಯ ನಿರ್ಮಾಣ ಮಾಡಿದವರನ್ನೂ ಪರಂಪರೆಯ ವಾಹಿನಿಯಿಂದ ಆಚೆಗೆ ಸರಿಸಿಬಿಡುವ ಸಂಪ್ರದಾಯ ಕೂಡ ವಿಮರ್ಶೆಯ ಒಂದು ಮಾದರಿಯಿರಬಹುದೆ!

★

ದೇವುಡು

ಕೆ.ಎಸ್. ನರಸಿಂಗರಾವ್

- ೧ -

ಇಪ್ಪತ್ತನೆಯ ಶತಮಾನದ ಮೂರನೆಯ ದಶಕದಿಂದಲೂ ಹೊಸಗನ್ನಡ ಸಾಹಿತ್ಯದ ಗದ್ಯಪ್ರಕಾರದ ಸರ್ವತೋಮುಖ ಬೆಳವಣಿಗಾಗಿ ದುಡಿದ ಮಹನೀಯರಲ್ಲಿ ಶ್ರೀ ದೇವುಡುರವರೂ ಓರ್ವ ಪ್ರಮುಖರು. ಧರ್ಮಶಾಸ್ತ್ರ, ಸಾಹಿತ್ಯಗಳ ಆಳವಾದ ಅಭ್ಯಾಸದಿಂದ ಉದ್ದಾಮ ವಿದ್ವಾಂಸರೂ, ಶ್ರೇಷ್ಠ ಸಾಹಿತ್ಯಕರೂ ಆಗಿದ್ದ ಅವರದು ಬಹುಮುಖವಾದ, ಧೀಮಂತ ವ್ಯಕ್ತಿತ್ವ. ಪತ್ರಿಕಾ ಸಂಪಾದಕರಾಗಿ, ರಂಗಭೂಮಿ ಹಾಗೂ ಚಲನಚಿತ್ರಗಳಲ್ಲಿ ನಟರಾಗಿ, ಉತ್ತಮ ಭಾಷಣಕಾರರಾಗಿ, ದಾರ್ಶನಿಕರಾಗಿ ಬಾಳಿದವರು ದೇವುಡು. ಇಂಥವರ ಜೀವನ ಮತ್ತು ಸಾಹಿತ್ಯದ ಪರಿಚಯ ಒಂದು ಕಾಲದ ಜನಜೀವನದ ಧೋರಣೆಗಳನ್ನೂ ಬೆಳವಣಿಗೆಯ ಸ್ಥಿತಿಯಲ್ಲಿದ್ದ ನಮ್ಮ ಸಾಹಿತ್ಯದ ಒಲವು-ನಿಲುವುಗಳನ್ನೂ, ಚರ್ಚಿಸಲು ಅಳತೆಗೋಲಾಗುವುದಲ್ಲದೆ, ಸ್ಫೂರ್ತಿದಾಯಕವೂ ಆಗಿದೆ. ದೇವುಡು ನರಸಿಂಹಶಾಸ್ತ್ರಿ ಎಂಬುದು ಪೂರ್ಣ ಹೆಸರಾದರೂ ಅವರು `ದೇವುಡು' ಎಂದೇ ಜನಪ್ರಿಯರಾಗಿದ್ದಾರೆ.

ಮೈಸೂರಿನಲ್ಲಿ ರಾಜಪುರೋಹಿತರೂ, ಆಸ್ಥಾನ ಪಂಡಿತರೂ ಎಂದು ಹೆಸರುವಾಸಿಯಾದ ವಂಶದಲ್ಲಿ ಜನಿಸಿದವರು ದೇವುಡು. ೧೮೮೦ರಲ್ಲಿ ಸ್ಥಾಪನೆಯಾದ ಲಕ್ಷ್ಮೀನರಸಿಂಹ ಪ್ರೆಸ್ ಸ್ಥಾಪಕರಲ್ಲಿ ಒಬ್ಬರಾದ, ವೇದಶಾಸ್ತ್ರಸಂಪನ್ನರೆಂದು ಪ್ರಸಿದ್ಧರಾದ ಇವರ ತಂದೆ ಕಂಭಾಲೂರ ವಂಶದವರಂತೆ. ತಾಯಿ ಕೋಲಾರದ ಮಂಡಲ ವಂಶದವರಂತೆ. (೧) ಇವರಿಗೆ ಮಗನಾಗಿ ದುರ್ಮುಖ ಸಂವತ್ಸರದ ಮಾರ್ಗಶಿರ ಬಹುಳ ದಶಮಿ ಮಂಗಳವಾರ ೧೮೯೭ಕ್ರೈಸ್ತ ಹೊಸವರ್ಷಕ್ಕೆ ಎರಡು ದಿನ ಮುನ್ನ ದೇವುಡು ಜನಿಸಿದರು. ಐದು ವರ್ಷದ ಮಗುವಾಗಿದ್ದಾಗಲೇ ಪಿತೃವಿಯೋಗವಾಗಿ ಕುಟುಂಬಕ್ಕೆ ಭರಿಸಲಾಗದ ನಷ್ಟವಾದರೂ, ಸ್ವಚ್ಛಂದವಾಗಿ ಓದುವ ಹಂಬಲ ಇವರಿಗೆ ಉಂಟಾಗಿ ಹನ್ನೆರಡು ವರ್ಷಗಳ ವಯದಲ್ಲೇ ರಾಮಾಯಣ, ಭಾರತ, ಭಾಗವತ, ಬ್ರಹ್ಮಾಂಡ ಪುರಾಣಗಳನ್ನು ಓದಿ ಮುಗಿಸಿದರು. ಗಣ್ಯರ ವಂಶದಲ್ಲಿ ಹುಟ್ಟಿದ ದೇವುಡುರವರು ತಮ್ಮ ಮನೆತನದ ಹಿರಿಮೆ-. ಗರಿಮೆಗಳನ್ನು, ಆಚಾರ ಸಂಪ್ರದಾಯಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಬೆಳೆಸಿಕೊಂಡರು.

ಬಾಲ್ಯಸಹಜ ಆಟಗಳಲ್ಲಿ ಹೇಗೊ ಹಾಗೆ ಹೆಂಗಸರು ಹೇಳುವ ಹಾಡುಗಳನ್ನು ಕೇಳುವುದರಲ್ಲೂ ಆಸಕ್ತಿ ಮತ್ತು ಉತ್ಸಾಹ. ಬೇಗಬೇಗ ಬರೆಯುತ್ತಿದ್ದುದರಿಂದ ಹೆಂಗಸರು ತಿಂಡಿ ಕೊಟ್ಟು ಇವರ ಕೈಯಲ್ಲಿ ಹಾಡು ಬರೆಸುತ್ತಿದ್ದರಂತೆ. ಚುರುಕುತನಕ್ಕೆ ಹೆಸರಾಗಿದ್ದ ಬಾಲಕ ೧೯೧೨ರ ವೇಳೆಗೆ ಛಂದಸ್ಸು, ವ್ಯಾಕರಣಗಳನ್ನು ಕಲಿತು ಪದ್ಯಗಳನ್ನು ರಚಿಸಿದ್ದು ಅಚ್ಚರಿಯೇನಲ್ಲ. ಒಂದು ಕಡೆ ವ್ಯಾಸಂಗ; ಮತ್ತೊಂದು ಕಡೆ ಹುಡುಗರ ಕಂಪನಿ ನಾಟಕಗಳಿಗೆ ಹಾಡು ಬರೆದು ನಟಿಸುವುದು ಜೊತೆಜೊತೆಯಲ್ಲಿ ಸಾಗಿ ರಂಗಭೂಮಿಯ ಪರಿಚಯವಾಯಿತು.

---

(೧) *ಕಂನಾಡ ಸಾಹಿತ್ಯಜ್ಞರ ಆತ್ಮ ಕಥನ*

ವೈದಿಕ ವಿದ್ಯೆ ಕಲಿತವರಾಗಿದ್ದರೂ ಮುಂದೆ ೧೯೧೭-೧೯೨೨ರ ಅವಧಿಯಲ್ಲಿ ಅಧ್ಯಯನನಿರತರಾಗಿ ಬಿ.ಎ., ಎಂ.ಎ. ಪದವಿಗಳನ್ನು ಪಡೆದರು. ಆಗ ವಿದ್ವಾಂಸರಾದ ವಿ.ಸೀ. ಅವರು ಇವರ ಸಹಪಾಠಿಗಳು. ಡಾ|| ರಾಧಾಕೃಷ್ಣನ್ ಇವರ ಗುರುಗಳು; ಅಲ್ಲದೆ ಪ್ರೊ|| ಎಂ. ಹಿರಿಯಣ್ಣನವರ ವಿಶ್ವಾಸವೂ ಇವರಿಗಿತ್ತು. ಸಂಸ್ಕೃತ ಭಾಷೆಯನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಭಾರತೀಯ ತತ್ತ್ವಶಾಸ್ತ್ರವನ್ನು ವಿಶೇಷವಾಗಿ ವ್ಯಾಸಂಗ ಮಾಡಿದ್ದು ಮುಂದಿನ ದೇವುಡುರವರ ಸಾಹಿತ್ಯ ಕೃಷಿಗೆ ಪ್ರೇರಣೆ ದೊರೆತಂತಾಯಿತು.

ಮೈಸೂರಿನ ಸದ್ವಿದ್ಯಾಶಾಲೆಯಲ್ಲಿ ೧೯೨೩-೨೪ಒಂದು ವರ್ಷ ಮುಖ್ಯೋಪಾಧ್ಯಾಯರಾಗಿ ಅಧಿಕಾರ ವಹಿಸಿದರು. ಆದರೆ ಈ ಹುದ್ದೆ ತಮ್ಮ ಸ್ವತಂತ್ರ ಪ್ರವೃತ್ತಿಗೆ ಅಡ್ಡಿಯಾಯಿತೆಂದು ಅದನ್ನು ಬಿಟ್ಟು ೧೯೨೫ರಲ್ಲಿ ಬೆಂಗಳೂರಿಗೆ ಕಾರ್ಯಕ್ಷೇತ್ರವನ್ನು ಬದಲಾಯಿಸಿದರು. ಹೀಗೆ ಬೆಂಗಳೂರಿಗೆ ಬರಲು ಪಂಡಿತ ತಿ.ತಾ. ಶರ್ಮ ಹಾಗು ಇತರ ಗೆಳೆಯರ ಸ್ನೇಹದ ಒತ್ತಾಯವೂ ಕಾರಣವಾಯಿತು.

ಬೆಂಗಳೂರಿಗೆ ಬಂದರೂ, ಬರೆಯುವ ತವಕವಿದ್ದರೂ ದೇವುಡುರವರಿಗೆ ಪುಸ್ತಕವನ್ನು ಕೊಂಡು ಓದುವ ಜನಾಭಿರುಚಿ ಕಾಣದೆ ಅಕ್ಷರ ಪ್ರಚಾರ ಕಾರ್ಯ ಕೈಗೊಳ್ಳಲು ಮನಸ್ಸಾಗುತ್ತದೆ. ಇವರ ಕಾರ್ಯ ಸರ್ಕಾರದ ಗಮನಕ್ಕೂ ಬಂದು ಅಕ್ಷರ ಪ್ರಚಾರಕ್ಕೆ ಒಂದು ವ್ಯವಸ್ಥೆ ರೂಪಿತವಾಗುತ್ತದೆ. ಕೆಂಪೇಗೌಡ ರಸ್ತೆಯಲ್ಲಿ `ಆರ್ಯ ವಿದ್ಯಾಶಾಲೆ'ಯನ್ನು ಸ್ಥಾಪಿಸಿದ್ದು ದೇವುಡುರವರ ಮೊದಲ ಮಹಾ ಸಾಧನೆ ಎನ್ನಬಹುದು. ಅಲ್ಲಿ ಮುಖ್ಯೋಪಾಧ್ಯಾಯರಾಗಿದ್ದುಕೊಂಡು ಐದು ವರ್ಷಗಳು ತಮ್ಮ ಸ್ವತಂತ್ರ ವಿಚಾರಗಳು ಕಾರ್ಯಗತವಾಗಲು ಶ್ರಮಿಸಿದರು. ಮಕ್ಕಳ ವಿದ್ಯಾಭ್ಯಾಸದ ಮಟ್ಟ ಮೇಲಕ್ಕೆತ್ತಲು `ಮಕ್ಕಳ ಪುಸ್ತಕ' ಮುಂತಾದ ಪ್ರಕಟಣೆ ಮಾಡಿದರು. ಒಮ್ಮೆ ಪಂಜೆ ಮಂಗೇಶರಾಯರು ದೇವುಡುರವರನ್ನು ತಬ್ಬಿಕೊಂಡು ಮಕ್ಕಳಿಗಾಗಿ ಬರೆಯುವುದನ್ನು ಮುಕ್ತಕಂಠದಿಂದ ಪ್ರಶಂಸಿಸಿದರಂತೆ! ಈ ಅವಧಿಯಲ್ಲೇ ಅವರು `ನವಜೀವನ' ಎಂಬ ಪತ್ರಿಕೆಗೆ ಸಂಪಾದಕರಾಗಿಯೂ ದುಡಿದರು. ಪ್ರಾಯಶಃ ಕನ್ನಡ ದಿನಪತ್ರಿಕೆಗಳಲ್ಲಿ ಕಥೆಗಳನ್ನು ಧಾರವಾಹಿಯಾಗಿ ಪ್ರಕಟಿಸುವ ರೂಢಿ ನವಜೀವನ ಪತ್ರಿಕೆಯಿಂದಲೇ ಬಂದಿರಲೂಬಹುದು.

೧೯೨೬ರ ರಲ್ಲೇ ಅಮೆಚೂರ್ ಕಂಪನಿಯ ಸದಸ್ಯರಾಗಿ ನಟಶ್ರೇಷ್ಠರಾದ ರಾಘವಾಚಾರ್ಯರ ಆತ್ಮೀಯರಾಗಿ ನಚಿಕೇತ, ಮಂಡೋದರಿ, ರಾಮಕೃಷ್ಣ, ಮಾರ್ಕಂಡೇಯ, ಯಶೋಧರಾ ನಾಟಕಗಳಲ್ಲಿ ಪ್ರಧಾನ ಭೂಮಿಕೆಯಲ್ಲೇ ರಂಜಿಸಿದರು. ರಂಗನಟನೆ ದೇವುಡುರವರನ್ನು ಚಲಚ್ಚಿತ್ರ ಕ್ಷೇತ್ರಕ್ಕೆಳೆಯಿತು. ಕೆಲವು ಗೆಳೆಯರ ಸಹಕಾರದೊಡನೆ ಧ್ರುವಕುಮಾರ, ಚಿರಂಜೀವಿ ಚಿತ್ರಗಳನ್ನು ಹೊಸ ತಂತ್ರಗಳಿಂದ ನಿರ್ಮಿಸಿದ್ದಾರೆ. ಸಿನಿಮಾ ಉದ್ದಿಮೆಯನ್ನು ೧೯೩೦ರ ವೇಳೆಗೆ ಬಿಟ್ಟು ಶ್ರೀ ಎಸ್.ಜಿ. ಶಾಸ್ತ್ರಿಯವರ ಸಲಹೆಯ ಮೇರೆಗೆ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಕರ್ನಾಟಕ ಸಂಸ್ಕೃತಿ ಕುರಿತು ಉಪನ್ಯಾಸ ಮಾಡುವ ಸುಯೋಗ ಲಭಿಸಿತು. ಕರ್ನಾಟಕ ಪರಿಷತ್ಪತ್ರಿಕೆಯಲ್ಲಿ ಲೇಖನಮಾಲೆಯಾಗಿ ಬಂದ ಉಪನ್ಯಾಸಗಳೇ ಮುಂದೆ ೧೯೩೫ರಲ್ಲಿ ಪುಸ್ತರೂಪ ತಾಳಿತು.

ಸಂಸ್ಕೃತ ವಿದ್ಯಾ ಸಮಿತಿ, ಪಠ್ಯಪುಸ್ತಕ ಸಮಿತಿಗಳಲ್ಲೂ ದೇವುಡು ಶ್ರಮಿಸಿದ್ದಾರೆ. ಸಂಸ್ಕೃತ ಭಾಷಾ ಸಾಹಿತ್ಯಗಳ ಬಗ್ಗೆ ಅಪಾರವಾದ ಪ್ರೀತಿ, ಗೌರವಗಳಿದ್ದ ಇವರು `ಮೂಲ ಸಂಸ್ಕೃತ' ಎಂಬ ಗ್ರಂಥ ಬರೆದು ಆ ಭಾಷೆಯನ್ನು ಜನ ಹೆಚ್ಚು ಕಲಿಯಲಿ ಎಂದು ಆಶಿಸಿದರು. ಅಖಿಲ ಭಾರತ

ಘಟ್ಟದ ಸಂಸ್ಕೃತ ಸಮ್ಮೇಳನದಲ್ಲಿ ಮೈಸೂರಿನಿಂದ ಪ್ರತಿನಿಧಿಯಾಗಿ ಭಾಗವಹಿಸುವ ಅವಕಾಶ ದೇವುಡುರವರದಾಗಿತ್ತು. ತಮ್ಮ ಮುಂದಿನ ಬದುಕಿನ ಕಾಲವನ್ನು ಶ್ರೇಷ್ಠ ದರ್ಜೆಯ ಸಾಹಿತ್ಯ ಸೃಷ್ಟಿಗೆ ಇವರು ವಿನಿಯೋಗಿಸಿದ್ದಾರೆ.

ಯಾವ ವೃತ್ತಿಯಲ್ಲೂ ಸ್ವತಂತ್ರ ಪ್ರವೃತ್ತಿ, ಮನೋಭಾವಗಳನ್ನು ಬೆಳೆಸಿಕೊಂಡಿದ್ದವರು ದೇವುಡು. ಯಾವ ಸರಕಾರೀ ಉದ್ಯೋಗಕ್ಕೂ ಅಂಗಲಾಚದ ಸ್ವತಂತ್ರ ವ್ಯಕ್ತಿತ್ವ; ದಿಟ್ಟತನದ ಸ್ವಭಾವ. ಬಾಲಕರಾಗಿದ್ದಾಗ ಒಮ್ಮೆ ಪಾದ್ರಿಯೊಬ್ಬ ಸಭೆಯೊಂದರಲ್ಲಿ-`ಕೃಷ್ಣನು ಕೊಳಲು ಊದಿದಾಗ ಒಣಗಿದ್ದ ಗಿಡಮರಗಳೆಲ್ಲ ಚಿಗುರಿದವಲ್ಲ; ಕೈಯಲ್ಲಿದ್ದ ಕೊಳಲೇಕೆ ಚಿಗುರಲಿಲ್ಲ?' ಎಂದು ವ್ಯಂಗವಾಡಿದನಂತೆ! ಆಗ ಇವರು "ಚಿಗುರಿದರೆ ತನ್ನನ್ನು ಎಸೆದುಬಿಡುವನು ಎಂದು ಹೆದರಿಕೊಂಡು ಚಿಗುರಲಿಲ್ಲ"-ಎಂದು ಅದೇ ಧಾಟಿಯಲ್ಲಿ ಉತ್ತರ ಕೊಟ್ಟಿದ್ದರು. "ನನಗೆ ಆಗಿನಿಂದಲೂ `ಸುಪೀರಿಯಾರಿಟಿ ಕಾಂಪ್ಲೆಕ್ಸ್'. ಅಲ್ಲದೆ, ಅದೇನೊ ಹೊಗಳಿಸಿಕೊಳ್ಳಬೇಕೆಂಬ ಆಸೆಯಿಲ್ಲ. ಯಾರ ಲೇಖನವನ್ನು ನೋಡಿದರೂ `ಇದೋ! ಏನು ಮಹಾ?' ಎಂದು ಅದರಲ್ಲಿರುವ ದೋಷಗಳನ್ನು ಎತ್ತಿಹಾಕುವುದು–ಇಂತಹುದು ಬರೆಯದೆ ಹೋದರೆ ಏನು ನಷ್ಟ ಎನ್ನುವುದು-ಹೀಗೆ ಇತ್ತು"-(೨) ಎಂದು ಅವರೇ ತಮ್ಮ ನಿರ್ದಾಕ್ಷಿಣ್ಯ ಪ್ರವೃತ್ತಿ ಬಗೆಗೆ ಪ್ರಾಮಾಣಿಕವಾಗಿ ಹೇಳಿಕೊಂಡಿದ್ದಾರೆ. ತಮ್ಮ ಮಿತ್ರರೊಡನೆಯೂ ಹೀಗೆ ವ್ಯವಹರಿಸುತ್ತಿದ್ದರು. ದೇವುಡುರವರನ್ನು ಹಿಂದಿನಿಂದಲೂ ಚೆನ್ನಾಗಿ ಬಲ್ಲ ವಿ.ಸೀ.ಯವರು ಇವರ ವ್ಯಕ್ತಿತ್ವವನ್ನು ಅಚ್ಚುಕಟ್ಟಾಗಿ ಒಂದೆಡೆ ಹೇಳಿದ್ದಾರೆ: "ಅವರು ಬೆಂಗಳೂರಲ್ಲಿದ್ದ ಹಲವರು ದೊಡ್ಡ ವ್ಯಕ್ತಿಗಳ ಬಳಕೆಯವರು. ಎಲ್ಲಿಯೇ ಆಗಲಿ ಯಾರಿಗೂ ತಲೆ ತಗ್ಗಿಸದೆ ನಿಂತ ನಿಲುವಿನವರು... ಬಂದದ್ದು ಬರಲಿ ಎಂದು ಯಾವುದಕ್ಕೂ ಕೈಯೊಡ್ಡುವ ಮನಸ್ಸು, ರೀತಿ ಎಂದಿಗೂ ಅವರದಲ್ಲ. ಅಧಿಕಾರದಲ್ಲಿ ಇರುವವರಲ್ಲಿಯೂ, ತಮಗೆ ವಿದ್ಯಾವಿಚಾರಗಳಲ್ಲಿ ಗುರುಸದೃಶರಾದವರಲ್ಲೂ ಕೂಡ ತಗ್ಗಿ ನಡೆಯಲು ಒಪ್ಪರು... ಯಾವುದನ್ನು ಆ ಕಾಲದಲ್ಲಿ ಮೇಧಾವಿತೆ, ಸಂಪ್ರದಾಯ ಯೆನ್ನುತ್ತಿದ್ದರೊ ಅದಕ್ಕೆ ತರ್ಕ, ಮೀಮಾಂಸಾ, ವೇದಾಂತಗಳ ಹೃದ್ಭಾವವನ್ನೂ, ತಿರುಳನ್ನೂ ಬಳಸಿ ವಾದದಲ್ಲಿ, ಜ್ಞಾನ ಪ್ರತಿಪಾದನೆಯಲ್ಲಿ ಬಲಗೊಳಿಸುತ್ತಿದ್ದರು." (೩) ಈ ಮಾತುಗಳು ದೇವುಡುರವರ ದೃಷ್ಟಿ ಧ್ಯೇಯಗಳನ್ನೂ, ಪ್ರಕಾಂಡ ಪಾಂಡಿತ್ಯವನ್ನೂ ಚಿತ್ರಿಸಲು ಸಾಕು. ಕನ್ನಡದಲ್ಲಿ ಒಂದು ವಿಶ್ವಕೋಶ ಆಗಬೇಕು; ಗೀತೆಯ ಪ್ರಚಾರವಾಗಬೇಕು-ಮುಂತಾಗಿ ಸದಾ ಕನ್ನಡ ಪರವಾದ ಚಿಂತನೆ, ಏಳಿಗೆಗಾಗಿ ಹಾತೊರೆದ ಹಿರಿಯ ಚೇತನ.

ಪತ್ನಿ ಗೌರಮ್ಮ, ಮೂವರು ಗಂಡುಮಕ್ಕಳು, ಒಬ್ಬ ಮಗಳನ್ನು ಪಡೆದ ಶ್ರೀಯುತರು, ತಮ್ಮ ಕಡೆಯ ದಿನಗಳಲ್ಲಿ ಅನಾರೋಗ್ಯದಿಂದ ಬಳಲಬೇಕಾಗಿ ಬಂತೆಂದು ತಿಳಿಯುತ್ತದೆ. ೧೯೬೨ರಲ್ಲಿ ಅವರ ಮರಣದ ವರ್ಷವೇ `ಮಹಾಕ್ಷತ್ರಿಯ' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ಹಸ್ತಪ್ರತಿಯಲ್ಲೇ ಉಳಿದಿದ್ದ `ಮಹಾದರ್ಶನ' ಮೇರುಕೃತಿ ೧೯೬೭ರಲ್ಲಿ ಪ್ರಕಾಶನಗೊಂಡಿತು. ಜೀವನದಲ್ಲಿ ಬಂದುದನ್ನು ಹಸನ್ಮುಖರಾಗಿ ಸ್ವೀಕರಿಸುವ ವಿಶಾಲ ಮನಸ್ಸಿನ ವ್ಯಕ್ತಿಗಳು ಇಂಥವರು ವಿರಳ ಎನ್ನಬೇಕು.

---

(೨) ಕಂನಾಡ ಸಾಹಿತ್ಯಜ್ಞರ ಆತ್ಮಕಥನ

(೩) ಹಿರಿಯರು ಗೆಳೆಯರು - ವಿ.ಸೀ.

- ೨ -

ದೇವುಡುರವರ ಬರಹ-ಸಂಖ್ಯೆ, ಗುಣಸತ್ತ್ವ ಎರಡರ ನಿಟ್ಟಿನಿಂದಲೂ ಗಮನಾರ್ಹವಾದುದಾಗಿದೆ. ತಾವು ಅಂಗೀಕರಸಿದ ಮೌಲ್ಯ ಸಾಮಾಜಿಕವೊ, ಧಾರ್ಮಿಕವೊ ಅದನ್ನು ತಮ್ಮ ಜೀವನದಲ್ಲೇ ಸಾಧಿಸಲು ಶ್ರಮಿಸುವುದು ಸಾಹಿತಿಯ ನಿಷ್ಠೆ ಎನ್ನುವುದಾದರೆ ಆ ಮಾತು ದೇವುಡು ಅವರಿಗೆ ಸರ್ವಥಾ ಅನ್ವಯಿಸುತ್ತದೆ. ಶಾಸ್ತ್ರ ವಿಷಯಗಳಿಂದ ಹಿಡಿದು ಸಾಮಾಜಿಕ ಎನ್ನಬಹುದಾದ ವಸ್ತುಗಳವರೆಗೆ ಅವರ ಬರವಣಿಗೆಯ ವೈವಿಧ್ಯಮಯವಾದ ಹರಹಿದೆ. ಎಂತಲೇ ವೇದೋಪನಿಷತ್ತುಗಳ ಪಾಂಡಿತ್ಯವೂ, ನವೀನ ಜನಜೀವನ ದೃಷ್ಟಿಯೂ ಅವರ ಸಾಹಿತ್ಯಸೃಷ್ಟಿಗೆ ಬೆನ್ನೆಲುಬಾಗಿದೆ. ಶಾಸ್ತ್ರವಿಷಯಕ, ಸಾಹಿತ್ಯಕ-ಎಂಬ ವಿಭಾಗಗಳಲ್ಲಿ ಅವರ ಬರಹ ನೋಡಬಹುದಾದರೂ ಅದೊಂದು ರೀತಿ ಅಧ್ಯಯನದ ವಿಧಾನವಾಗಬಹುದೇ ವಿನಾ, ಸಾಧಾರಣವಾಗಿ ವೈದಿಕ ಪ್ರಜ್ಞೆ, ಪಾಂಡಿತ್ಯಗಳು ಎಲ್ಲಕಡೆ ಅಚ್ಚೊತ್ತಿವೆ.

ವಾಸಿಷ್ಠ ರಾಮಾಯಣವೆಂದು ಹೆಸರಾದ `ಯೋಗವಾಸಿಷ್ಠ'ವು ಅದ್ವೈತ ಸಿದ್ಧಾಂತಕ್ಕೆ ಸೇರಿದ ಗ್ರಂಥ. ವಸಿಷ್ಠರು ಶ್ರೀರಾಮನ ಚಿತ್ತಶಾಂತಿಗೆಂದು ಬ್ರಹ್ಮನು ಉಪದೇಶಿಸಿದ ಜ್ಞಾನವಿದ್ಯೆಯನ್ನು ಹೇಳಿದರೆಂದು ಪ್ರತೀತಿ. ಇಂಥ ಗ್ರಂಥದ `ಸುಲಭ ಕನ್ನಡ' ಅನುವಾದದ ಪ್ರಕಟಣೆಗೆ ದೇವುಡು ದುಡಿದಿದ್ದಾರೆ. `ಮೀಮಾಂಸ ದರ್ಪಣ'-ಎಂಬ ಗ್ರಂಥ ವೇದಾಂತ, ಪೂರ್ವಮೀಮಾಂಸೆಗಳ ಅವರ ನೈಷ್ಠಿಕ ಅಭ್ಯಾಸಕ್ಕೆ ಕೈಗನ್ನಡಿಯಂತಿದೆ. `ಸಂಗ್ರಹ ರಾಮಾಯಣ' ಎಂಬುದು ವಾಲ್ಮೀಕಿಯ ಮಾತುಗಳಲ್ಲೇ ರಾಮಾಯಣದ ಕಥೆಯನ್ನು ಸುಂದರವಾಗಿ ಸಂಗ್ರಹಿಸಿರುವ ಕೃತಿ. `ಮಹಾಭಾರತದ ಮಹಾಪುರುಷರು'-ಎಂಬುದೂ ವ್ಯಾಸರ ಮಹಾಕಾವ್ಯ ಮಹಾಭಾರತದ ಬಗೆಗಿನ ಇವರ ಭಕ್ತಿ, ಪ್ರೀತಿಗೆ ದ್ಯೋತಕವಾಗಿ ಕನ್ನಡದಲ್ಲಿ ಅವತರಿಸಿದೆ.

೧೯೩೩ರಲ್ಲಿ ದೇವುಡು ನರಸಿಂಹಶಾಸ್ತ್ರಿ ಅವರು ಮಾಡಿದ ಉಪನ್ಯಾಸಗಳ ಸಂಕಲನ `ಕರ್ನಾಟಕ ಸಂಸ್ಕೃತಿ' ಎಂಬುದು. ಕನ್ನಡಿಗರ ಸಾಂಸ್ಕೃತಿಕ ಮಟ್ಟ ಹಿರಿಯದಾಗಬೇಕೆಂಬ ಮಹದಾಶಯದಿಂದ ಹೊಮ್ಮಿದ ಕೃತಿಯಿದು. ಕನ್ನಡದಲ್ಲಿ ಈ ಬಗೆಯ ಪುಸ್ತಕಗಳು ವಿರಳ ಎನ್ನಬಹುದಾದ ಕಾಲದಲ್ಲಿ ರಚಿತವಾದದ್ದು, ಇಂದೂ ಒಂದು ಅಮೂಲ್ಯ ಕೊಡುಗೆಯಾಗಿ ಉಳಿದಿದೆ. ಕರ್ನಾಟಕದ ನಾನಾ ಕುಲಗಳ ಆಚಾರ ವ್ಯವಹಾರಗಳು, ಹಾಡು-ಕಥೆ-ಗಾದೆ-ಒಗಟುಗಳು, ವಿದ್ಯೆ-ವಿಹಾರ-ವಿನೋದಗಳು, ವಿಶೇಷ ಪದ್ಧತಿಗಳು-ಮುಂತಾದುವನ್ನೂ ಅವುಗಳಲ್ಲಿ ಅಂತರ್ಗತವಾಗಿರುವ ಸಂಸ್ಕೃತಿಯ ಸಾರವನ್ನು ನಿದರ್ಶನಗಳ ಸಹಿತ ವಿಮರ್ಶನ ದೃಷ್ಟಿಯಿಂದ ನೋಡಿರುವುದು ಇಲ್ಲಿನ ವಿಶೇಷ.

ಸಂಸ್ಕೃತಿಯನ್ನು ಪಾಮರ ಸಂಸ್ಕೃತಿ, ವಾಸ್ತವ್ಯ ಸಂಸ್ಕೃತಿ, ಜನತೆಯ ಸಂಸ್ಕೃತಿ ಎಂದೆಲ್ಲಾ ವಿಭಾಗಿಸಿಕೊಂಡು ವಿಚಾರ ಮಾಡಬಹುದು. ಆದರೆ, ನಮ್ಮಲ್ಲಿ ವಿದ್ಯಾವಂತ ಸಾಹಿತಿಗಳೂ ಇದ್ದಾರೆ; ಓದದೆ ಕೇಳಿ ಕಂಠಪಾಠ ಮಾಡಿ ಕಾವ್ಯ ಹೇಳುವ ನಿರಕ್ಷರಿಗಳೂ ಇದ್ದಾರೆ. ಆಶುಕವಿತ್ವದ ಶಕ್ತಿಯುಳ್ಳ ಪಾಮರರಿದ್ದಾರೆ. ಇವರೆಲ್ಲರನ್ನೂ ಒಳಗೊಂಡ ನಾಡಿನಲ್ಲಿ ಸಂಸ್ಕೃತಿ ವಿಚಾರದಲ್ಲಿ ಪಂಡಿತ, ಪಾಮರ ಎಂದು ಭೇದ ಮಾಡದೆ ಸಮಷ್ಟಿ ದೃಷ್ಟಿಯಿಂದ ಇಡಿಯಾಗಿ ಕರ್ನಾಟಕದ ಸಂಸ್ಕೃತಿಯನ್ನು ದೇವುಡುರವರು ನಿರೂಪಿಸಿದ್ದಾರೆ.

ಲಾವಣಿ, ವಿನೋದ ಪದಗಳು, ವಿಶೇಷ ಪದಗಳು ಎಂದು ಗಂಡಸರ ಹಾಡುಗಳನ್ನು ಮತ್ತು ಹೆಂಗುಸರ ಹಾಡುಗಳನ್ನು ಉದಾಹರಿಸಿ ಸಾಹಿತ್ಯದ ಸೊಗಸನ್ನು ಕೊಂಡಾಡಿದ್ದಾರೆ. ಜನಪದ ಸಾಹಿತ್ಯ ಸಂಗ್ರಹ, ಸಂಶೋಧನೆಗಳು ಉಪಲಬ್ಧವಿಲ್ಲದ ಅಂದು ನರಸಿಂಹಶಾಸ್ತ್ರಿಯವರ ಈ ಕಾರ್ಯಸ್ತುತ್ಯಾರ್ಹ ವಾಗಿದೆ. ಸಂಸ್ಕೃತಿ ಎಂದರೇನು? (ಪರಿಶಿಷ್ಟ ೧), ವಿವಾಹದ ವಿಧಿವಿಧಾನಗಳು (ಪರಿಶಿಷ್ಟ ೨) - ಲೇಖನಗಳು ವಿಚಾರಪರವಾಗಿವೆ. ಕೆಲವು ಪ್ರಚಲಿತ ಗಾದೆ, ಒಗಟು, ಕಥೆಗಳನ್ನು ಪರಿಚಯಿಸಿದ್ದಾರೆ. ಕನ್ನಡ ನುಡಿಯ ಸಂಸ್ಕೃತಿಯಂತೆ ಕನ್ನಡ ನಡೆಯ-ಸಂಪ್ರದಾಯದ ಸಂಸ್ಕೃತಿಯನ್ನು ಸೂಕ್ಷ್ಮವಾಗಿ ನೋಡಿದ್ದಾರೆ. ಒಟ್ಟಿನಲ್ಲಿ, `ಕರ್ನಾಟಕ ಸಂಸ್ಕೃತಿ'- ಅಂದಿನ ಶ್ರೀ ಕೃಷ್ಣರಾಜ ಒಡೆಯರ್ ಮುಂತಾದ ಗಣ್ಯರಿಂದ ಪ್ರಶಂಸೆಗಳಿಸಿದ, ದೇವುಡುರವರ ಆಳವಾದ ಸಂಶೋಧನೆಯ ಪರಿಣಾಮವಾಗಿ ರೂಪುತಳೆದ ಒಂದು ಆಕರಗ್ರಂಥ ಎನ್ನಬಹುದು.

- ೩ -

ಕಾದಂಬರಿ ಈ ಯುಗದ ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರ. ಸಮಕಾಲೀನ ಜೀವನ ಚಿತ್ರಣಕ್ಕೆ, ಶೈಲಿ ಹಾಗು ವಸ್ತುವಿನಲ್ಲಿ ಅನಿರ್ಬಂಧಿತ ಸ್ವಾತಂತ್ರ್ಯ, ಸೊಗಸನ್ನು ಮೆರಸಲು ಹೇಳಿ ಮಾಡಿಸಿದ ರೂಪ ಕಾದಂಬರಿ. ಹೀಗಾಗಿ ದೇವುಡುರವರು ತಮ್ಮ ಪ್ರತಿಭಾ ಆವಿಷ್ಕಾರದ ಕಾರಣದಿಂದ ಚಾರಿತ್ರಿಕ, ಪೌರಾಣಿಕ ಮತ್ತು ಸಾಮಾಜಿಕ ವಲಯದ ಹಲವು ಕಾದಂಬರಿಗಳನ್ನು ನಿರ್ಮಿಸಿ ಆ ಕ್ಷೇತ್ರ ದಲ್ಲಿ ಮಹತ್ವದ ಸ್ಥಾನ ಗಳಿಸಿದ್ದಾರೆ.

`ಮಯೂರ' ಎಂಬ ಚಾರಿತ್ರಿಕ ಕಾದಂಬರಿ ಈ ಶತಮಾನದ ಮೂರನೇ ದಶಕದಲ್ಲಿ, ಚಾರಿತ್ರಿಕ ಕಾದಂಬರಿಗಳ ಸಂಖ್ಯೆ ಇಳಿಮುಖವಾಗುತ್ತಿದ್ದಾಗ ಬೆಳಕು ಕಂಡ ಕೃತಿ. ಇತಿಹಾಸದ ಬನವಾಸಿಯ ಕದಂಬರನ್ನು ವಸ್ತುವನ್ನಾಗಿ ಆಧರಿಸಿ ಸ್ವತಂತ್ರ ನಿರ್ಮಾಣ ಮಾಡಿದ್ದಾರೆ. ಚರಿತ್ರೆಯಲ್ಲಿ ಕದಂಬ ರಾಜವಂಶದ ಬಗೆಗೆ ಸಾಕಷ್ಟು ಭಿನ್ನಾಭಿಪ್ರಾಯಗಳು ಗೊಂದಲವಿದ್ದರೂ `ಮಯೂರ'ದ ಕಥೆ ವಾಸ್ತವಿಕ ಎನ್ನುವಂತೆ ಪರಿಣಾಮರಮಣೀಯವಾಗಿದೆ. ದೇವುಡುರವರ ಕಥನ ಕೌಶಲ ಮತ್ತು ಶೈಲಿ ಇದಕ್ಕೆ ಕಾರಣ ಎನ್ನಬೇಕು. ಮಯೂರಶರ್ಮ ಬ್ರಾಹ್ಮಣ ವೇಷದ ಕ್ಷತ್ರಿಯನೇ ಎಂಬುದನ್ನು ನಿಖರಗೊಳಿಸಿ ಅವನ ಸಾಹಸದ ಕಥೆಯನ್ನು ವರ್ಣದೃಶ್ಯಗಳ ಮಾಲೆಯಂತೆ ಚಿತ್ರಿಸಲಾಗಿದೆ. ಕದಂಬ ವಂಶದ ಮಯೂರ ಅನಾಥವಾಗಿ ಪಲ್ಲವ ರಾಜ್ಯಕ್ಕೆ ಬಂದು, ಒಂದು ಕಾಲಕ್ಕೆ ತಾನೊಬ್ಬ ರಾಜವಂಶದವನೆಂದು ಅರಿತು, ಪೌರುಷದಿಂದ, ಸಮಯ ಸಾಧಿಸಿ ಶ್ರೀಶೈಲ, ಬನವಾಸಿಗಳನ್ನು ಗೆದ್ದು, ಪಲ್ಲವರ ಹುಟ್ಟಡಗಿಸುವುದು ಕಥೆ. ಪಲ್ಲವ ರಾಜಕುಮಾರಿ ಪ್ರೇಮಾವತಿಯನ್ನು ಪ್ರೇಮಿಸಿ ವಿವಾಹವಾಗುವುದು ಕಥೆಯ ಒಂದು ರಮ್ಯ ಸನ್ನಿವೇಶ.

ವಾಸ್ತವ ಘಟನೆಗಳನ್ನಾಧರಿಸಿದ ಚರಿತ್ರೆಯಲ್ಲಿ ಕಾದಂಬರಿಗೆ ವಿಷಯವಾಗುವ ಎಷ್ಟೋ ಪಾತ್ರ, ಸನ್ನಿವೇಶಗಳಿರಬಹುದು. ಆದರೆ, ಅದನ್ನು ಚರಿತ್ರೆಗೆ ಅಪಚಾರವಾಗದಂತೆ ಕಲ್ಪನೆಯ ಬಲದಿಂದ ವಿನೂತನವಾಗಿಸುವುದು ಕಾದಂಬರಿಕಾರನ ಕುಶಲತೆ. ದೇವುಡುರಂಥ ಸಮರ್ಥರೂ-`ಮಯೂರ ಒಂದು ಕಥೆ; ಅದರಲ್ಲಿ ದಿಟಕ್ಕಿಂತ ದಿಟದಂತೆ ತೋರುವ ಸಟೆಯೇ ಹೆಚ್ಚು'-ಎಂದು ವಿನಯದಿಂದ ಹೇಳಿರುವುದನ್ನು ನೋಡಿದರೆ ಚಾರಿತ್ರಿಕ ಕಾದಂಬರಿಗಳ ರಚನೆಯ ತೊಡಕು ಎಷ್ಟೆಂಬುದು ವಿದಿತವಾಗುತ್ತದೆ.

"ಮಯೂರ ಕೇವಲ ಕಥೆಯೆಂದೇ ಓದಬೇಕಾದದ್ದು; ಅಬಿನವ ಮುದ್ರಾರಾಕ್ಷಸದಂತೆ ನಾಯಕ ಪ್ರತಿನಾಯಕರ ಕೌಶಲ್ಯಪೂರ್ಣವಾದ ತಂತ್ರ ಪ್ರತಿತಂತ್ರಗಳೇ ಕಥೆಯ ಜೀವಾಳವಾಗಿದೆ. ದೇವುಡು ಅವರ ಶೈಲಿಯ ಮಾರ್ಮಿಕತೆಯೊಂದೇ ಕಥೆಯ ಮೋಹಕತೆಯನ್ನು ಕಾಪಾಡಿದೆ" (೪) ಎಂಬ ವಿಮರ್ಶೆ ಅರ್ಥಪೂರ್ಣ. ಇತ್ತೀಚೆಗೆ, ಮಯೂರ ಚಲನಚಿತ್ರವಾಗಿ ಯಶಸ್ವಿ ಆಗಲು ಈ ಕಾದಂಬರಿಯೇ ಸ್ಫೂರ್ತಿ ಎಂದರೂ ಆಶ್ಚರ್ಯವಲ್ಲ.

ವಿಜಯನಗರದ ಇತಿಹಾಸದ ಅವಧಿಯಲ್ಲಿ ಅಯಿತೆನ್ನಲಾದ ಒಂದು ಶೃಂಗಾರದ ಕಥೆ `ಅವಳ ಕಥೆ'. ಕಾದಂಬರಿಯಲ್ಲಿ ಚಿನ್ನಾಸಾನಿಯ ಪಾತ್ರವೇ ಪ್ರಮುಖವಾಗಿ ಉಳಿದ ಪಾತ್ರಗಳು ಅವಳ ಸುತ್ತ ಚಿತ್ರಣವಾಗಿವೆ. ಸಾರ್ವಕಾಲಿಕವಾದ ಮಾನವ ಬದುಕಿನ ಕಾಮದ ಸಮಸ್ಯೆಯ ಜಟಿಲತೆಯನ್ನು ದೇವುಡುರವರು ಪ್ರಸ್ತುತ ಕಾದಂಬರಿಯಲ್ಲಿ ವೈಚಾರಿಕವಾಗಿ ನೋಡಿದ್ದಾರೆ.

- ೪ -

ಕನ್ನಡ ಸಾಹಿತ್ಯ ಲೋಕಕ್ಕೆ ದೇವುಡುರವರ ಪೌರಾಣಿಕ ಕಾದಂಬರೀತ್ರಯ-ಮಹಾಬ್ರಾಹ್ಮಣ, ಮಹಾಕ್ಷತ್ರಿಯ ಮತ್ತು ಮಹಾದರ್ಶನ-ಇಂದೂ ಹಾಗೂ ಮುಂದೂ ಮರೆಯಲಾಗದ ಮಹಾ ಕಾಣಿಕೆಯಾಗಿದೆ. ಅವರಂತೆ ಪೌರಾಣಿಕ ವಸ್ತುವನ್ನು ದೇಶ ಕಾಲಗಳು, ಪರಿಸರ ಕಲ್ಪನೆಗಳ ಹಿನ್ನೆಲೆಯಲ್ಲಿ ನೋಡಿ ಕಲಾತ್ಮಕವಾಗಿ ಭಾಷೆಯಲ್ಲಿ ಮೂರ್ತಗೊಳಿಸಬಲ್ಲ ಸಾಮರ್ಥ್ಯ ಅಪರೂಪವೇ ಸರಿ. ತಮ್ಮ ಪ್ರತಿಭೆಗೆ ಸ್ಫೂರ್ತಿ `ದೈವಪ್ರೇರಣೆ' ಎಂದು ದೇವುಡು ಅತ್ಯಂತ ನಿಷ್ಠೆಯಿಂದ ಹೇಳಿಕೊಂಡಿದ್ದಾರೆ.

ಸಾಮಾಜಿಕ ಮೌಲ್ಯ, ವಾಸ್ತವ ಪ್ರಜ್ಞೆ, ಮಣ್ಣಿನ ವಾಸನೆ ಮುಂತಾದ ಮಾತುಗಳೇ ಹೆಚ್ಚು ಕೇಳಿ ಬರುತ್ತಿರುವ ಈ ದಿನಗಳಲ್ಲಿ ಪುರಾಣದ ಆಕರಕ್ಕೆ ಕಾದಂಬರಿಕಾರ ತುಡಿಯುವುದು ಆಕಸ್ಮಿಕವೇ! ಹಾಗೆ ನೋಡಿದರೆ `ಭಾರತೀಯತೆ' ಎಂಬುದೂ ಒಂದು ರಾಷ್ಟ್ರೀಯ ಮೌಲ್ಯ. ಅದರ ಉತ್ಥಾನಕ್ಕಾಗಿ ಹೋರಾಡಿದವರು ಎನ್ನಲಾದ ಮಹಾ ಪುರುಷರ ಜೀವನವೂ ಸಾಂಕೇತಿಕ ಹಾಗೂ ಆದರ್ಶಪ್ರಾಯ. ಅವರು ಪುರಾಣಲೋಕದವರೇ ಇರಬಹುದು. "ಸಾಣೆಗೆ ಒಡ್ಡುವುದು ರತ್ನವಲ್ಲದೆ ಕಲ್ಲನ್ನಲ್ಲ; ಹಾಗೆ ಮಹಾವಿಷಯಗಳನ್ನು ವಿಮರ್ಶಿಸಬೇಕೆಂಬ ಆಸೆ ಇದ್ದವರು ಮಹಾಪುರುಷರನ್ನು ಚಿತ್ರಿಸಲು ಹೊರಡದೆ ಬೇರೆ ದಾರಿ ಇದೆಯೇನು"- (೫) ಎಂದು ತಮ್ಮ ಮೂಲೋದ್ದೇಶವನ್ನು ದೇವುಡು ಸ್ಪಷ್ಟಪಡಿಸಿದ್ದಾರೆ. ಅವರ ಸಂಸ್ಕೃತಿಸಂಪನ್ನ ವಿಶಾಲ ದೃಷ್ಟಿಯ ಮೂಲದಿಂದ ಮೂರು ಕೃತಿಗಳು ಉದ್ಭವಿಸಿವೆ.


`ಮಹಾಬ್ರಾಹ್ಮಣ'ದ ಕಥೆ ವೇದಕಾಲದ ಪ್ರಸಿದ್ಧರಾದ ವಸಿಷ್ಠ-ವಿಶ್ವಾಮಿತ್ರರದು. ಹತ್ತು ಹಲವು ಮೂಲಗಳಲ್ಲಿ ದೊರೆಯುವ ಕಥಾನಕವಾದರೂ ಮುಖ್ಯವಾಗಿ ರಾಮಾಯಣದ ಕಥೆ ಆಧರಿಸಿ, ಪ್ರಾಸಂಗಿಕವಾಗಿ ಉಳಿದ ಅಂಶಗಳನ್ನು ಹೊಂದಿಸಿ, ಕಲ್ಪನೆಯ ಮೂಸೆಯಲ್ಲಿ ಎರಕಹೊಯ್ದ ಮಹಾಕೃತಿ `ಮಹಾಬ್ರಾಹ್ಮಣ'. ೧೯೦೭ರಲ್ಲೇ ಇಂಥ ಕಾದಂಬರಿ ರಚನೆ ಬಗ್ಗೆ ದೇವುಡುರವರಿಗೆ ಹಂಬಲ ಮೂಡಿತ್ತತಂತೆ! ಆದರೆ, ವ್ಯಾಸಂಗ, ಪರಿಣತಿಯಿಂದ ಆಸೆ ಕೈಗೂಡಲು ಸುಮಾರು ಇಪ್ಪತ್ತೈದು ವರ್ಷಗಳು ಕಾಯಬೇಕಾಯಿತಂತೆ.

(೪) *ಯುಗಧರ್ಮ ಹಾಗೂ ಸಾಹಿತ್ಯ ದರ್ಶನ-ಕೆ.ಡಿ. ಕುರ್ತುಕೋಟಿ*

(೫) `ಮಹಾಬ್ರಾಹ್ಮಣ' ಮುನ್ನುಡಿ

ವಸಿಷ್ಠನ ಹೋಮಧೇನು ನಂದಿನಿಗೆ ರಾಜ ಕೌಶಿಕ ಆಸೆಪಟ್ಟು, ಹಿಡಿಯಲು ಹೋಗಿ ಅದರ ಪ್ರಭಾವದಿಂದ ಹೆದರಿ ಜೀವಗಳ್ಳನಂತೆ ಓಡಿಹೋಗಬೇಕಾಗುತ್ತದೆ. ವಸಿಷ್ಠನ ಮೇಲಿನ ಆಕ್ರೋಶ, ಸೇಡಿನ ಮನೋಭಾವ ತಪೋನಿರತನಾಗುವಂತೆ ಮಾಡಿ ತನ್ಮೂಲಕ ಸಿದ್ಧಿಗಾಗಿ ಈಶ್ವರಾನುಗ್ರಹಕ್ಕೆ ಮುಂದಾಗುತ್ತಾನೆ. ರುದ್ರನ ಅನುಗ್ರಹದಿಂದ, ಅಸ್ತ್ರಾಭಿಮಾನಿ ದೇವತೆಗಳಿಂದ ಪಡೆದ ಶಕ್ತಿಯನ್ನು ವಸಿಷ್ಠನ ಆಶ್ರಮ ನಿರ್ಮೂಲನ ಮಾಡುವ ಹೀನಕೃತ್ಯಕ್ಕೆ ಬಳಸಲು ಮುಂದಾಗಿ ಬ್ರಹ್ಮದಂಡದಿಂದ ಮೂರ್ಛೆಹೋಗಿ, ಎಚ್ಚತ್ತು ಸರ್ವಸಿದ್ಧಿ ಪಡೆದ ವಸಿಷ್ಠನಂತೆ ತಾನೂ ಆಗಬೇಕೆಂಬ ಮನಃ ಪರಿವರ್ತನೆಯಿಂದ ಮಹಾಬ್ರಾಹ್ಮಣನಾಗುವ ಆಸೆಯಿಂದ `ವಿಶ್ವಮಿತ್ರ'ನಾಗುತ್ತಾನೆ. ಸಶರೀರನಾಗಿ ಸ್ವರ್ಗಕ್ಕೆ ಹೋಗುವ ಆಸೆ ವ್ಯಕ್ತಪಡಿಸಿದ ತ್ರಿಶಂಕು ರಾಜನ ದೇಹವನ್ನು ದಿವ್ಯದೇಹವನ್ನಾಗಿ ಮಾಡಲು ಕೈಗೊಳ್ಳುವ ಯಜ್ಞ, ಕ್ಷತ್ರಿಯ ಸಹಜ ಕಾಮಕ್ರೋಧಗಳನ್ನು ಇನ್ನೂ ಬಿಡದ ಕಾರಣದಿಂದ ಪರಿಣಾಮಬೀರದೆ ಹೋಗಿ ತನ್ನ ಮಂತ್ರಬಲದಿಂದ ವಸಿಷ್ಠನ ಮಕ್ಕಳನ್ನು ವಿಶ್ವಾಮಿತ್ರ ಸಂಹರಿಸುತ್ತಾನೆ. ಹೀಗೆ ಅನುಭವಲೋಕದಲ್ಲಿ ಬೆಳೆಯುತ್ತಾ ಹೋಗುತ್ತಾನೆ. ಮುಂದೆ ದೇವಲೋಕದ ಮೇನಕೆಯೊಡನೆ ಸಂಸಾರ; ಮೇನಕೆ ಮಾನವಳಂತೆ ಸರಳವಾಗಿ ವರ್ತಿಸುತ್ತಾಳೆ. ಶಕುಂತಳೆಯ ಜನನ; ಮೇನಕಾ ನಿರ್ಗಮನದ ತರುವಾಯ ಮತ್ತೆ ವಿಶ್ವಾಮಿತ್ರನಿಗೆ ತಪಸ್ಸಿನ ಧ್ಯಾನಲೋಕ; ಬ್ರಾಹ್ಮಣ್ಯದ ಯೋಚನೆ. ಈ ನಡುವೆ ಹರಿಶ್ಚಂದ್ರನಿಗೆ ಯಜ್ಞಪಶುವಾಗಬೇಕಾಗಿ ಬಂದ ಶುನಶ್ಯೇಪನನ್ನು ತನ್ನ ಮಂತ್ರಬಲದಿಂದ ರಕ್ಷಿಸುತ್ತಾನೆ. ದೇವಗುರು ಬೃಹಸ್ಪತ್ಯಾಚಾರ್ಯರಿಂದ ದೇವರಹಸ್ಯಗಳನ್ನು ತಿಳಿದು ಗಾಯತ್ರಿ ಮಂತ್ರಾನುಷ್ಠಾನಕ್ಕೆ ತೊಡಗುತ್ತಾನೆ. ಮಹಾಸಾಧನೆ ಮಾಡಿ ಹೆಸರಿಗೆ ತಕ್ಕಂತೆ ವಿಶ್ವಾಮಿತ್ರನಾಗಿ ಗಾಯಿತ್ರಿದೇವಿ ದರ್ಶನಪಡೆದು ಮಂತ್ರದ್ರಷ್ಟಾರನಾಗುತ್ತಾನೆ. ಇದು ಕಾದಂಬರಿಯ ಸ್ಥೂಲ ಚಿತ್ರ.

ಕ್ಷತ್ರಿಯನಾಗಿ ಹುಟ್ಟಿ `ಮಹಾ ಬ್ರಾಹ್ಮಣ'ನಾಗಲು ವಿಶ್ವಾಮಿತ್ರ ಕೈಗೊಳ್ಳುವ ಸಾಹಸಮಯ ಕಥೆ ಇಲ್ಲಿಯದು. ದೇವ-ಮಾನವ ಸಂಬಂಧಗಳು, ಯಜ್ಞ ಯಾಗಗಳ ಅನುಷ್ಠಾನಗಳು, ದೇವತೆಗಳು ಪ್ರತ್ಯಕ್ಷರಾಗುವುದು, ವೇದ ಕಾಲದ ಬಿಡಿಸಲಾದ ಧರ್ಮ ವಿಚಾರಗಳು, ಮಂತ್ರಸಿದ್ಧಿ ಮುಂತಾದ ಸಂಗತಿಗಳು ದೇವುಡುರವರ ಕೈಯಲ್ಲಿ ಹದವಾಗಿ ಮೂಡಿ ಕಾದಂಬರಿಗೆ ಉಚಿತವಾದ ಆವರಣ ನಿರ್ಮಾಣಕ್ಕೆ ಪೋಷಕವಾಗಿವೆ. ಕಾಲ, ದೇಶಗಳ ಕಟ್ಟಿಗೆ ಒಳಪಟ್ಟವರು ಎತ್ತುವ `ಸಂದೇಹ'ಗಳಿಗೆ ಗ್ರಂಥದಲ್ಲೇ ಸಮಾಧಾನವಿದೆ ಎಂದು ಲೇಖಕರು ಹೇಳಿಕೊಂಡಿದ್ದಾರೆ. ಈ ಕಾದಂಬರಿ `ಭರತಖಂಡದ ಆತ್ಮಚಿತ್ರಣ' ಎಂಬ ಅವರ ಮಾತು ಸತ್ಯ. ಹೆಜ್ಜೆ ಹೆಜ್ಜೆಗೆ ಅಹಂಭಾವವನ್ನು ತೊರೆಯುತ್ತಾ, ಬ್ರಾಹ್ಮಣರ ಪರಮಸಿದ್ಧಿಗಾಗಿ ಹಾತೊರೆಯುತ್ತಾ, ಸಾಧನಾ ನಿರತನಾಗುವ ವಿಶ್ವಾಮಿತ್ರ ಮಾನವೀಯವಾಗಿ ಬೆಳೆಯುತ್ತಾ ಸಾತ್ವಿಕ ಶಕ್ತಿಯಾಗಿ ನಮ್ಮ ಅನುಕಂಪೆಗೆ ಪಾತ್ರನಾಗುತ್ತಾನೆ. ಸಾರ್ವಕಾಲಿಕ ಅನುಭವ ಸಾಂದ್ರತೆಯಿಂದ ಕೂಡಿದ ವಿಶ್ವಾಮಿತ್ರನ ಜೀವನ ಹಾಗು ಅವನಿಗುಂಟಾದ ಗಾಯತ್ರೀ ಸಾಕ್ಷಾತ್ಕಾರ ನಮ್ಮ ಸಂಸ್ಕೃತಿಯ ಒಂದು ಪ್ರತೀಕ; ಪರಿಪಾಕ. ಸ್ವಾನುಭವ, ಕಲ್ಪನಾಶಕ್ತಿ, ಶಾಸ್ತ್ರ ಪರಿಚಯದಿಂದ ಆಸ್ತಿಕರಿಗೆ ಮಾತ್ರವಲ್ಲದೆ ಸಾಹಿತ್ಯಜಿಜ್ಞಾಸುಗಳಿಗೂ ಪ್ರಿಯವಾಗುವಂಥ, ಜನಮನದಲ್ಲಿ ಬೇರೂರಿರುವ ವಿಶ್ವಾಮಿತ್ರನ ಕಥೆಯ ರೇಕು ರೂಹುವಡೆದಂಥ ಮಹಾಕೃತಿಯನ್ನು ದೇವುಡು ನಿರ್ಮಿಸಿದ್ದಾರೆ.



ದೇವುಡು ಕುಟುಂಬದ ಅಪರೂಪದ ಭಾವಚಿತ್ರ

- ೫ -

`ಮಹಾಕ್ಷತ್ರಿಯ'-ಕಾದಂಬರಿಯ ನಾಯಕ ನಹುಷ ಮಹಾರಾಜ. ಪರಿಗ್ರಹಕ್ಕಿಂತ ತ್ಯಾಗವು ಹೆಚ್ಚೆಂದೂ, ಭೋಗಕ್ಕೆ ಅಂಟಿಕೊಳ್ಳುವ ದೇವತ್ವಕ್ಕಿಂತಲೂ ತ್ಯಾಗವನ್ನೇ ಆರಾಧಿಸುವ ಮನುಷ್ಯತ್ವವೇ ಅಧಿಕವೆಂದು ಲೋಕಕ್ಕೆ ಶ್ರುತಪಡಿಸಿದ ಮಹಾವ್ಯಕ್ತಿ ಈತ. ಯಜ್ಞಯಾಗಾದಿಗಳಿಂದ, ದಾನ ಬುದ್ಧಿ, ವೀರಗುಣಗಳಿಂದ ಇಂದ್ರನ ದರ್ಪವನ್ನು ತುಳಿದು ಇಂದ್ರಪಟ್ಟ ಪಡೆದವನು. ಉಪನಿಷತ್ತು, ಮಹಾ ಭಾರತ, ವಾಯುಪುರಾಣ ಮುಂತಾದ ಅನೇಕ ಮೂಲಗಳ ಕಥೆಯನ್ನು, ಪ್ರಸಂಗಗಳನ್ನು ಸ್ವೀಕರಿಸಿ, ಇದು ಹೀಗೇ ನಡೆಯಿತೇನೊ ಎನ್ನುವಂತೆ ಸರ್ವಾಂಗ ಸುಂದರವನ್ನಾಗಿಸಿದ್ದಾರೆ ದೇವುಡು.

ದೇವಲೋಕದಲ್ಲಿ ಇಂದ್ರನ ಸಭೆಯ ವರ್ಣನೆಯಿಂದ ಕಾದಂಬರಿಯ ಆರಂಭ. ಸಭೆಗೆ ದೇವಗುರು ಬೃಹಸ್ಪತ್ಯಾಚಾರ್ಯರು ತಡವಾಗಿ ಬಂದರೆಂದು ಇಂದ್ರ ಸಿಟ್ಟಾಗುವುದೂ; ಇದರಿಂದ ಮುಂದೆ ತ್ವಷ್ಟ್ರಬ್ರಹ್ಮನ ಮಗ ವಿಶ್ವರೂಪಾಚಾರ್ಯ ಇಂದ್ರನಿಗೆ ಧರ್ಮಾಚಾರ್ಯನಾಗಿ ದಾನವ ಪಕ್ಷಪಾತಿಯೆಂದು ಇಂದ್ರ ಆತನನ್ನು ವಧಿಸುವುದೂ ಕಥೆಗೆ ಅನರ್ಥಬೀಜವಾಗುತ್ತದೆ. ಇಂದ್ರನ ಅಹಂಕಾರ ಮುರಿಯಲು ತ್ವಷ್ಟ್ರ ಬ್ರಹ್ಮನಿಂದ ಕರಾಳ ವೃತ್ರಾಸುರನ ಸೃಷ್ಟಿ; ಮತ್ತೆ ಇಂದ್ರನಿಗೆ ಮನಃ ಕ್ಷೋಭೆಯಾಗಿ ಇಂದ್ರ ಪದವಿಯನ್ನು ವಿಷ್ಣುವಿನ ಅಪ್ಪಣೆಯಂತೆ ವೃತ್ರನಿಗೆ ಒಪ್ಪಿಸಿ ಒಂದು ಕಾಲಕ್ಕೆ ಆತನನ್ನು ವಧಿಸಿ, ಹತ್ಯಾಚಿಂತೆ ಮೂಡಿ, ಹೆದರಿ ಓಡಿಹೋಗಿ ಬಚ್ಚಿಟ್ಟುಕೊಳ್ಳುವುದೂ ಕಾದಂಬರಿಯ ಪೂರ್ವಭಾಗವನ್ನೆಲ್ಲ ಆವರಿಸಿರುವ ಕಥೆ.

ತೆರವಾದ ಇಂದ್ರನ ಪದವಿಗೆ ದೇವತೆಗಳ ಮತದಂತೆ ಮಧ್ಯಮ ಲೋಕದ ನಹುಷಚಕ್ರ ವರ್ತಿ ಎರಡು ನಿಬಂಧನೆಗಳನ್ನೊಡ್ಡಿ ಆಯ್ಕೆಯಾಗುವುದು; ಒಂದು, ವಿರಾಜಾದೇವಿಯೇ ಅಮರಾವ ತಿಯಲ್ಲೂ ತನ್ನ ಪತ್ನಿಯಾಗಬೇಕೆಂದು ಹೇಳಿ ಮನುಷ್ಯ ಧರ್ಮ ಬಿಡದೆ ಮರಣ ಧರ್ಮ ಹೊಂದು ವುದು-ಎರಡು-ದೇವಗುರುಗಳು ಕೇಳಿದ್ದನ್ನು ರಹಸ್ಯವೆನ್ನದೆ ತನಗೆ ಹೇಳಬೇಕೆಂದು ಕೇಳಿ ಮುಂದೆ `ತನ್ನ ಇಂದ್ರಪಟ್ಟ ಪೂರ್ಣವೇ?' ಎಂದು ಪ್ರಸಂಗವಶಾತ್ ಕೇಳಿ `ಶಚೀಪತಿಯಾಗುವವರೆಗೂ ಪೂರ್ಣ ವಾಗುವುದಿಲ್ಲ' ಎಂಬ ಕಾರಣದಿಂದ ರಹಸ್ಯಭೇದನೆಯಿಂದ ಶಾಪಕ್ಕೆ ತುತ್ತಾಗುವುದು-ಇದು ನಹುಷ ಇಂದ್ರಪದವಿ ತಾತ್ಕಾಲಿಕ ಎಂದು ತಿಳಿದು ಶಚಿಯನ್ನು ಗೌರವದಿಂದ ನಡೆಸಿಕೊಳ್ಳಲು ಕಾರಣವಾ ಗುತ್ತದೆ. ಮುನ್ನಿನ ಇಂದ್ರ ಮಾಡಲಾಗದೆ ಬಿಟ್ಟಿದ್ದ `ಸಪ್ತರ್ಷಿ ಶಿಬಿಕಾ' ಪೂಜೆ ಮಾಡಲು ನಹುಷ ನಿರ್ಧರಿಸಿ ಅಹಂಕಾರಶೂನ್ಯನಾಗಿ ಇಂದ್ರನ ಹತ್ಯೆಕಳೆದು ಮುನ್ನಿನ ಪದವಿಯಲ್ಲಿರುವಂತೆ ಮಾಡಿ `ಅತೀಂದ್ರ' ಎಂದು ಹೊಗಳಿಸಿಕೊಳ್ಳುತ್ತಾನೆ. ಶಿಬಿಕೋತ್ಸವದ ಕಡೆಯಲ್ಲಿ ನಹುಷನ ಸಮಾಧಿ ಶಿಥಿ ಲವಾಗಿ ಆಗುವ ಅಪರಾಧಕ್ಕೆ ಅಜಗರವಾಗಿ ಹುಟ್ಟುವ ಶಿಕ್ಷೆ ವಿಧಿಸಿಕೊಂಡು ಜಗದ್ವಿಖ್ಯಾತನಾಗುತ್ತಾನೆ.

ಕಾದಂಬರಿಯ ಉತ್ತರಭಾಗವೆಲ್ಲ ನಾಯಕ ನಹುಷನ ದಿವ್ಯ ಚರಿತೆಯನ್ನೊಳಗೊಂಡಿದೆ. ಶಚಿಯೆಂದಂತೆ ನಹುಷನ ಪಾತ್ರ-`ದೇವತೆಗಳಿಗೆ, ಇಂದ್ರ ದಂಪತಿಗಳಿಗೇ ವರವನ್ನು ಕೊಡುವಂತೆ', `ಮಹಾನುಭಾವ'ನಾಗಿ ವಿಕಾಸಗೊಂಡಿದೆ. `ಮಹಾಕ್ಷತ್ರಿಯ' ಎಂಬ ಕಾದಂಬರಿ ಶೀರ್ಷಿಕೆ ಅನ್ವರ್ಥ ವಾಗಿದೆ. ಭೂಲೋಕದಲ್ಲಿ ರಾಜ್ಯಭಾರ ಮಾಡುತ್ತಿದ್ದ ನಹುಷನ ನ್ಯಾಯವಾದಿತನ, ಇಂದ್ರನಾದ ಮೇಲೂ ಆತ ಕಾಯ್ದುಕೊಳ್ಳುವ ಮಾನಸಿಕ ಸಮತೋಲನ, ಶಚೀಪ್ರಸಂಗ ಮುಂತಾದ ಸನ್ನಿವೇಶ

ಗಳು ಆ ಪಾತ್ರದ ಆಂತರಿಕ ಬೆಳವಣಿಗೆಯನ್ನೂ, ಮಾನವ ಮಹೋನ್ನತಿಯನ್ನೂ ಎತ್ತಿ ಹೇಳಿದೆ. ಕಾದಂಬರಿಯ ಆರಂಭದಲ್ಲಿ ಇಂದ್ರ ಶಚಿಯನ್ನು ಕುರಿತು "ನಾವು ಎಚ್ಚರವಾಗಿದ್ದೂ ತಪ್ಪುವುದು ಕಾಲದ ಮಹಿಮೆ"–ಎಂದು ಹೇಳುವ ಮಾತು ಮುಂದಿನ ಎಲ್ಲ ಘಟನೆಗಳಿಗೆ ದಿಕ್ಸೂಚಿಯಾಗಿದೆ. ಇಂದ್ರನ ಪಾಪ ಪ್ರಜ್ಞೆ, ಆತಂಕ, ತಳಮಳಗಳು ಅತ್ಯಂತ ಮಾನವೀಯ ಚೌಕಟ್ಟಿನಲ್ಲಿ ಬೆಸೆದಿದ್ದು ಇನ್ನೊಂದು ಲೋಕದ ಕಥೆಯನ್ನು ಓದುತ್ತಿದ್ದೇವೆ ಎಂಬ ಭಾವನೆಯೇ ಬರುವುದಿಲ್ಲ. ಐದು ಬಾರಿ ಪುನರ್ಮುದ್ರಣಗೊಂಡಿರುವುದೇ ಈ ಕಾದಂಬರಿಯ ಜನಪ್ರಿಯತೆಗೆ ಸಾಕ್ಷಿ ಎನ್ನಬಹುದು.

- ೬ -

ದೇವುಡುರವರ `ಮಹಾದರ್ಶನ'-ಅಲೌಕಿಕತೆಯನ್ನು ಅತಿಶಯವಾಗಿ ಸಾಕ್ಷಾತ್ಕಾರಿಸಿಕೊಂಡು ಅದ್ಭುತ ಶೈಲಿಯಲ್ಲಿ ಅರಳಿದ ಕಡೆಯ ಬೃಹತ್ಕಾದಂಬರಿ. ಋಷಿ ಯಾಜ್ಞವಲ್ಕ್ಯರು ಬ್ರಹ್ಮವಿದ್ಯೆ ಸಾಧಿಸಿದ ಮಹಾನ್ ಕಥೆ. `ಮಹಾದರ್ಶನ' ಎಂಬ ಹೆಸರು ಕಥಾವಸ್ತುವಿಗೆ ಪೂರಕವಾದ ಘಟನಾವ ಳಿಗಳಿಗೆ ತಕ್ಕಂತೆ ಅರ್ಥಸ್ವಾರಸ್ಯದಿಂದ ಬೆಳೆಯುತ್ತಾ ಹೋಗಿ ಯಜ್ಞವಲ್ಕ್ಯ ಹಾಗೂ ಯಾಜ್ಞವಲ್ಕ್ಯ ಇಬ್ಬರಿಗೂ ಅನ್ವಯಿಸುವಂತಿದೆ. ಕಾಮ್ಯ ಮೂಲವಾದುದು ಕರ್ಮಕಾಂಡ; ತಪ, ದಾನ, ಅಧ್ಯಯನ-ಅಧ್ಯಾಪನ ಯಾವುದರಿಂದಲೂ ದೊರೆಯದ, ತಾನಾಗಿ ಅನುಗ್ರಹವಾಗಬೇಕಾದುದು ಬ್ರಹ್ಮವಿದ್ಯೆ. ಕರ್ಮಕಾಂಡವನ್ನವಲಂಬಿಸಿ ಯೋಗಕ್ಕೆ ಅಧ್ವರ್ಯುವೆನಿಸಿದ, ತನಗಿಂತ ಪ್ರಬಲನಾದ, ಲೋಕೋತ್ತರ ನಾದ ಮಗನನ್ನು ಪಡೆಯಬೇಕೆಂಬ ದೇವರಾತ ತನ್ನ ಪತ್ನಿ ಆಲಂಬಿನೀ ದೇವಿಯ ಗರ್ಭಪ್ರವೇಶಿಸಿದ ಮಹಾಪುರುಷ ಕರ್ಮಕಾಂಡ ಬಿಡದೆ ಬ್ರಹ್ಮವಿದ್ಯೆ ಸಾಧಿಸಲಿ ಎಂದು ಮಾಡುವ ಸಂಸ್ಕಾರಗಳು ಕಾದಂ ಬರಿಯ ಆದಿಭಾಗ. ಗರ್ಭಸ್ಥ ಶಿಶುವನ್ನೇ ದೇವರಾತ ದರ್ಶಿಸಿ ತನ್ನ ಸಂಶಯಗಳನ್ನು ಪರಿಹರಿಸಿ ಕೊಳ್ಳುವ ಭಾಗ ಅಲೌಕಿಕ ಸೌಂದರ್ಯದಿಂದ ಕೂಡಿದೆ.

ಹುಟ್ಟಿದ ಮಗುವಿಗೆ ಯಾಜ್ಞವಲ್ಕ್ಯ ಎಂದೇ ಹೆಸರಿಟ್ಟು ಜಾತಕರ್ಮ ಉಪನಯನ, ಸಕಲ ಉಚಿತ ಸಂಸ್ಕಾರಗಳನ್ನು ಮಾಡಿ ವೈಶಂಪಾಯನರ ಬಳಿ ಗುರುಕುಲವಾಸಕ್ಕೆ ದೇವರಾತ ಬಿಡುವ ವಿವರವೆಲ್ಲಾ ಅನ್ಯಾದೃಶವಾಗಿ ಚಿತ್ರಿತವಾಗಿದೆ. ಕುಲಪತಿ ವೈಶಂಪಾಯನರ ಸಿಟ್ಟಿಗೆ ಪಾತ್ರನಾಗಿ ಅಲ್ಲಿಂದ ಹೊರಟು ಋಗ್ವೇದ, ಸಾಮವೇದಗಳನ್ನರಿತು ಯಜ್ಞೇಶ್ವರನನ್ನು ದರ್ಶಿಸುತ್ತಾನೆ. ಪ್ರಾಣದೇವ, ಅಗ್ನಿ ದೇವರನ್ನು ಒಲಿಸಿಕೊಂಡು ಆದಿತ್ಯನನ್ನು ಅನುಸಂಧಾನ ಮಾಡಿ `ಮಹರ್ಷಿ' ಎಂದು ಹೊಗಳಿಸಿ ಕೊಳ್ಳುತ್ತಾನೆ. ಇಂದ್ರದಂಪತಿಗಳ ದರ್ಶನದಿಂದ ಬ್ರಹ್ಮ ವಿದ್ಯಾಸಂಪನ್ನನಾಗುವ ಸೂಚನೆಗಳು ದೊರೆ ಯುತ್ತವೆ. ಧರ್ಮಚಾರಿಣಿಯಾದ ಕಾತ್ಯಾಯಿನಿ ಮುಂದಿನ ಸಾಧನೆಗೆ ಪತ್ನಿಯಾಗಿ ನೆರವಾಗುತ್ತಾಳೆ. ಆದಿತ್ಯನ ಅನುಗ್ರಹವಾಗಿ ಸರ್ವಜ್ಞತ್ವ, ಬ್ರಹ್ಮರ್ಷಿತನ ಪ್ರಾಪ್ತವಾಗುತ್ತದೆ. ಯಜುರ್ವೇದ, ಶತ ಪಥ ಬ್ರಾಹ್ಮಣಗಳ ರಚನೆಯಾಗುತ್ತದೆ. ಬ್ರಹ್ಮವಾದಿನಿ ಮೈತ್ರೇಯಿಯೂ ಪತ್ನಿಯಾಗಿರುತ್ತಾಳೆ. ಬ್ರಹ್ಮವಾದಿನಿ ಗಾರ್ಗಿಯೂ ಗೌರವಿಸುವಂಥ ಮಹಾಚೇತನವಾಗಿ ಯಾಜ್ಞವಲ್ಕ್ಯರು ಬೆಳೆಯುತ್ತಿದ್ದಂತೆ ಜನಕರಾಜನ ಯಜ್ಞಸಭೆಯಲ್ಲಿ ಶಾಕಲ್ಯಮುನಿಯಿಂದ ಸರ್ವಜ್ಞತ್ವದ ಪರೀಕ್ಷೆಯೂ ನಡೆದು ರಾಜನಿಂದ ಸರ್ವಜ್ಞ ಪಟ್ಟಾಭಿಷೇಕವಾಗುತ್ತದೆ.

ದೇವತೆಗಳು ಬೇರೆ ಬೇರೆ ಎಂದು ಖಂಡೋಪಾಸನೆ ಮಾಡಿದ್ದ ದೇವರಾತನಿಗೂ ಮಗನ

ಸರ್ವಜ್ಞತ್ವ ಕಂಡು ಭ್ರಾಂತಿಯಿಂದ ಪ್ರಶ್ನಿಸುವಂತಾಗಿ ಅಭೂತಪೂರ್ವ ವಿಚಿತ್ರಾನುಭವದ ಪರಿಣಾಮವಾಗುತ್ತದೆ. ಎಲ್ಲವೂ ತಾನೇ ಆಗುವುದು ಅಮೃತತ್ವ; ಅದೇ ಮಹಾದರ್ಶನ. ಅದನ್ನು ಪಡೆದು ಧನ್ಯರಾದ ಯಾಜ್ಞವಲ್ಕ್ಯರು ಸಂನ್ಯಾಸ ಸ್ವೀಕರಿಸುತ್ತಾರೆ.

ಕನ್ನಡ-ಸಂಸ್ಕೃತ ಸಂಪನ್ನ ಭಾಷಾಸತ್ವವನ್ನು ಪುರಾಣಪ್ರಸಿದ್ಧ ವಸ್ತು ನಿರೂಪಣೆಯಲ್ಲಿ ಕನ್ನಡದಲ್ಲಿ ದೇವುಡುರವರಂತೆ ಮೆರೆದವರು ಯಾರು ಎನ್ನುವಷ್ಟು ಬಹುಶಃ ಉಳಿದೆರಡು ಕಾದಂಬರಿಗಳನ್ನೂ ಮೀರಿ `ಮಹಾದರ್ಶನ' ಸಾಧಿಸಿ ತೋರಿಸಿದೆ. ವೈದಿಕ ಪ್ರಜ್ಞಾಮೂಲವಾದ ವಿಚಾರಗಳು, ತರ್ಕಸರಣಿ ಮುಂತಾದವು ಸುಲಭಗ್ರಾಹ್ಯವಲ್ಲವಾದರೂ ಸಾಹಿತ್ಯಕವನ್ನಾಗಿಸಲು ದೇವುಡು ಕೈಗೊಂಡಿರುವ ಸಾಹಸ ಮಾತ್ರ ಅದ್ವಿತೀಯ.

ಅಂತರಂಗ, ಮಲ್ಲಿ, ಎರಡನೆಯ ಜನ್ಮ ಮುಂತಾದ ಸಾಮಾಜಿಕ ವಸ್ತುಸಂವಿಧಾನವನ್ನೊಳಗೊಂಡ ಕಾದಂಬರಿಗಳನ್ನು ದೇವುಡು ಸೃಷ್ಟಿಸಿದ್ದಾರೆ. ಮನಸ್ಸಿನ ಸೂಕ್ಷ್ಮ ಪ್ರವೃತ್ತಿ, ದಾಂಪತ್ಯ ಜೀವನದ ಆಗುಹೋಗುಗಳು, ಕಾಮಜೀವನದ ಸಮಸ್ಯೆಗಳನ್ನು ಈ ಕೃತಿಗಳಲ್ಲಿ ದೇವುಡು ಸಮೃದ್ಧವಾಗಿ ಪ್ರತಿಪಾದಿಸಿದ್ದಾರೆ. ಅಂತರಂಗ ಕಾದಂಬರಿಯಂತೂ ಕನ್ನಡದ ಮೊತ್ತಮೊದಲನೆಯ ಮನೋವೈಜ್ಞಾನಿಕ ಕಾದಂಬರಿಯೆಂದು ಹೆಸರು ಗಳಿಸಿದೆ. ವಾಸ್ತವವಾಗಿ ಇಲ್ಲಿ ಮಾನಸಿಕ ವಿಶ್ಲೇಷಣೆಯ ಒಳಪದರುಗಳನ್ನು ಕಾಣಬಹುದಾಗಿದೆ. ಶಾಸ್ತ್ರ-ವಿದ್ಯೆಯಂತೆ ಅಂತರಂಗ ಸ್ಫುರಿತ ದೃಢ ನಂಬಿಕೆಯೂ ಪ್ರಬಲ ಶಕ್ತಿಯಾಗುವ ಸಂಘರ್ಷವೂ ಅತ್ಯಂತ ಮಾರ್ಮಿಕವಾಗಿ ಚಿತ್ರಿತವಾಗಿದೆ. ವಿಸ್ತಾರ ಭಯದಿಂದ ಇವುಗಳ ಪರಿಶೀಲನೆಗೆ ಹೋಗಲಾಗಿಲ್ಲ. ಆದರೆ,–"ತನ್ನ ಅಪೂರ್ವವಾದ ಬುದ್ಧಿಶಕ್ತಿಯಿಂದ, ವಿದ್ವತ್ತೆಯಿಂದ ಪಾತ್ರಗಳ ಮನಸ್ಸನ್ನು ಪೃಥಕ್ಕರಿಸಿ ನೋಡುವ ಕಲೆ ದೇವುಡು ಅವರ ವೈಯಕ್ತಿಕ ಪ್ರತಿಭೆಯಾಗಿದೆ. ಬುದ್ಧಿಶಕ್ತಿ ಹಾಗೂ ನೈಜ ಪ್ರತಿಭೆಗಳನ್ನು ಸಮಾನವಾಗಿ ಮೇಳವಿಸಿಕೊಂಡ ಕೆಲವೇ ಲೇಖಕರಲ್ಲಿ ಅವರೊಬ್ಬರಾಗಿದ್ದಾರೆ"- (೬) ಎಂಬ ವಿಮರ್ಶೆ ಸೂಕ್ತವಾಗಿದೆ. ಹಾಗೇ ಕೆಲವು ಪಾತ್ರ ಚಿತ್ರಣದ ವಿಪರೀತ ದೃಷ್ಟಿಯ ಅವರ ದೌರ್ಬಲ್ಯವನ್ನು ವಿಮರ್ಶಕರು ಗುರುತಿಸಿದ್ದಾರೆ.

ಆದಿಶಂಕರರನ್ನು ಕುರಿತ `ಮಹಾಸಂನ್ಯಾಸಿ' ಎಂಬ ಗ್ರಂಥವನ್ನು ದೇವುಡುರವರು ಪೂರ್ಣಗೊಳಿಸಲಾಗಿಲ್ಲವೆಂದು ತಿಳಿಯುತ್ತದೆ. `ಅದೂ ಪೂರ್ಣಗೊಂಡು ದೊರೆಯುವಂತಾಗಿದ್ದರೆ'-ಎಂದು ಉದ್ಗಾರವೆಳೆಯುವುದರ ವಿನಾ ಕನ್ನಡದ ಅಭ್ಯುದಯಕ್ಕಾಗಿ ಹೋರಾಡಿದ ಈ ಮಹಾವ್ಯಕ್ತಿಗೆ ನಾವು ಸಲ್ಲಿಸುವ ಕಾಣಿಕೆಯಾದರೂ ಏನು ?

★

---

(೬) *ಯುಗಧರ್ಮ ಹಾಗೂ ಸಾಹಿತ್ಯದರ್ಶನ*

ಮಹಾಬ್ರಾಹ್ಮಣ ದೇವುಡು

ಶ್ರೀ ಎಂ.ವಿ. ಶರ್ಮಾ

ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ, ಮಯೂರ, ಅಂತರಂಗ ಕನ್ನಡಕ್ಕೆ ಈ ಕಾದಂಬರಿಗಳನ್ನಿತ್ತ ದೇವುಡು ನರಸಿಂಹಶಾಸ್ತ್ರಿಗಳು ಕಾಲವಾಗಿ ಬಹು ದಿನವಾಯಿತು.

ಸಾಮಾನ್ಯ ಉಪಾಧ್ಯಾಯರಾಗಿದ್ದು, ಕೊನಗೆ ಬೆಂಗಳೂರಿನ ಆರ್ಯವಿದ್ಯಾಶಾಲಾ ಮುಖ್ಯೋಪಾಧ್ಯಾಪಕರಾದ ದೇವುಡು ಸಂಸ್ಕೃತದಲ್ಲಿ ಅಖಂಡ ಪಂಡಿತ ಮನೆತನದವರಾಗಿ ಘನವಿದ್ವಾಂಸರಾಗಿದ್ದರು. ಪತ್ರಿಕೋದ್ಯೋಗಿಯಾಗಿಯೂ ಇದ್ದರು.

ದೇವಲೋಕ ಮರ್ತ್ಯಲೋಕಕ್ಕೆ ಸೇತುವೆ ಕಟ್ಟಿ ತೋರಿದ ಮಹಾನುಭಾವ ದೇವುಡು. ಅವರು ಬರೆಯಬೇಕೆಂದಿದ್ದ ಆಚಾರ್ಯ ಶಂಕರರನ್ನು ಕುರಿತ ಪುಸ್ತಕವನ್ನು ಇನ್ನಾರು ಬರೆದಾರು?

ದೇವುಡು ಪರಂಪರಾಪ್ರಿಯವಾದ ಧಾರ್ಮಿಕ ಮನೆತನದಲ್ಲಿ ಹುಟ್ಟಿ ಬೆಳೆದವರು. ಧಾರ್ಮಿಕ ಶಾಸ್ತ್ರ ಗ್ರಂಥಗಳನ್ನು ಅರೆದು ಕುಡಿದವರು. ಅವರು ಕಾಲೇಜಿನಲ್ಲಿ ಓದುತ್ತಿರುವಾಗ ಇಂದಿನ ರಾಷ್ಟ್ರಪತಿ ಮಹಾದಾರ್ಶನಿಕ ರಾಧಾಕೃಷ್ಣನ್ ದುತ್ತು ಕನ್ನಡದಲ್ಲಿ ಎಲ್ಲಾ ಆಗಬೇಕೆಂಬ ಕನಸುಳ್ಳ ಎನ್. ಎಸ್. ಸುಬ್ಬರಾಯರು ಅವರ ಗುರುಗಳಾಗಿದ್ದರು.

ದೇವುಡು ತಮ್ಮ ಕೃತಿ ರಚನೆಗಳಿಂದ ತಮ್ಮ ಗುರುಗಳ ಋಣ ತೀರಿಸಿದರು. ಅವರ ಮೀಮಾಂಸಾದರ್ಪಣ; ಕರ್ನಾಟಕ ಸಂಸ್ಕೃತಿ ಮತ್ತು ಯೋಗ ವಾಸಿಷ್ಠ ಉತ್ಕೃಷ್ಟ ಗ್ರಂಥಗಳು. ಅಲ್ಲದೆ ಐದು ಕಾದಂಬರಿಗಳು ಕನ್ನಡದ ವೈಶಿಷ್ಟ್ಯವನ್ನು ಮೆರೆಯಲು ಸಾಲವೇ?

ಎಂ.ಎ. ಪದವೀಧರರಾಗಿಯೂ ಆ ಕಾಲದಲ್ಲಿ ಸುಲಭವಾಗಿ ದೊರೆಯಬಹುದಾಗಿದ್ದ ಸರಕಾರಿ ನೌಕರಿಯನ್ನು ದೇವುಡು ಹಿಡಿಯಲಿಲ್ಲ. ಒಂದಲ್ಲ, ಎರಡು ಪಾಠಶಾಲೆಯನ್ನು ನಡೆಸಿ ಆ ಕಾರ್ಯವು ಬಂಧನವೆನ್ನಿಸಿದಾಗ ಕೈ ತೊಳೆದುಕೊಂಡರು. ಆರ್ಯವಿದ್ಯಾಶಾಲೆ ಅವರು ತೀರ ತರುಣರಾಗಿದ್ದಾಗ ಹುಟ್ಟಿದ್ದು. ಗಾಂಧೀನಗರ ಪ್ರೌಢಶಾಲೆ ಈಚಿನ ವರ್ಷಗಳದು. ಬದುಕಿನ ಈ ಎರಡು ಅವಸ್ಥೆಗಳಲ್ಲೂ ಬಂಧನ ಅವರಿಗೆ ಆಗಿ ಬರಲಿಲ್ಲ. ಆದರೂ ಅವರು ಮಾಡಲೇ ಬೇಕೆಂದಿದ್ದ "ಗುರುಕುಲ" ದ ಕನಸು ಹಾಗೇ ಉಳಿದುಕೊಂಡಿತು.

ಆಗಲೇ ಮಕ್ಕಳಿಗಾಗಿ "ಮಕ್ಕಳ ಪುಸ್ತಕ" ಸ್ನೇಹಿತರೊಡಗೂಡಿ ಮಾಡಿದ ಕೆಲಸ. ಮುಂದೆ ಸ್ವಂತವಾಗಿ "ನಮ್ಮ ಪುಸ್ತಕ" ಹೊರಡಿಸಿದರು.

ದೇವುಡು ನಿರ್ಮಲ ಮನಸ್ಸುಳ್ಳವರು. ಹಾಸ್ಯವು ಕೂಡ ಅವರಲ್ಲಿ, ಅವರ ಕೃತಿಗಳಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿತು.

"ನರಸಿಂಹ ಶಾಸ್ತ್ರಿಗಳೇ, ನಿಮ್ಮಿಂದ ಒಂದು ಪುಸ್ತಕವಾಗಬೇಕು" ಎಂದು ಯಾರಾದರೂ ಪ್ರಕಾಶಕರು ಬಂದು ಕೇಳಿದರೆ-

"ಹುಂ! ಯಾವುದು ಬೇಕು? ಕತೆಯೇ? ಕಾದಂಬರಿಯೇ? ಪತ್ತೇದಾರಿಯೇ? ರಾಮಾಯಣವೇ? ಭಾರತವೇ? ವೇದವೇ? ಉಪನಿಷತ್ತೆ? ಯಾವುದು ಬೇಕಾದರೂ ದೇವುಡು ಸಿದ್ಧ" ಎನ್ನುವರಲ್ಲದೆ ಬರೆದುಕೊಟ್ಟು ಬಿಡುವರು. ಹಾಗೆ ದೇವುಡು ಸವ್ಯಸಾಚಿ ಲೇಖಕರು.

ಸಂಸ್ಕೃತ ಕಾವ್ಯ ಪ್ರಬಂಧಗಳ ಬಗ್ಗೆ ದೇವುಡು ದಿನಗಟ್ಟಲೆ ಮಾತನಾಡಬಲ್ಲವರಾಗಿದ್ದರು ಕಾಳಿದಾಸ, ಭವಭೂತಿ, ಶೂದ್ರಕ ಮೊದಲಾದ ಹೆಚ್ಚಿನ ಹಳೆಯ ಕವಿಗಳು ಅವರ ಪಾಲಿಗೆ ನಿತ್ಯ ನೂತನರು. ಕಾವ್ಯರಸಾಸ್ವಾದನೆಯನ್ನು ಅವರಷ್ಟು ಆಳವಾಗಿ ಮಾಡಿಕೊಂಡವರು ತೀರ ವಿರಳವೆಂದೇ ಹೇಳಬಹುದು. ಹಾಗೆಯೇ ಗೀತೆಯ ಮೇಲೂ ಪಾಂಡಿತ್ಯ ಪರಿಪೂರ್ಣವಾದ ಅವರ ಮಾತುಗಳನ್ನು ಕೇಳಿದವನು ಎಂತಹ ನಾಸ್ತಿಕನಾದರೂ ಅವರ ಮಾತುಗಳನ್ನು ಕೇಳಿದಷ್ಟು ಹೊತ್ತಿನಲ್ಲಾದರೂ ಆತ ಆಸ್ತಿಕನಾಗಲೇಬೇಕು. ಅಂಥ ರಸಭರಿತವಾದ... ರಯುಕ್ತವಾದ ವಿಚಾರ ಸರಣಿ.

ಆಜಾನುಬಾಹುವಾದ ದೇಹ; ಇಷ್ಟಗಲದ ತುಂಬು ಮುಖ; ಗೌರವಕಾಂತಿ. ಒಂದು ಕಣ್ಣನ್ನು ಸಂಕುಚಿಸಿ ನೋಡುವ ನಾಟಕೀಯ ದೃಷ್ಟಿ. ಅಸ್ತವ್ಯಸ್ತ ಉಡಿಗೆ ತೊಡಿಗೆ. ಬೊಕ್ಕ ತಲೆ. ಇದು ಇವರ ದೇಹ ಪರಿಚಯ.

ದೇವುಡು ಉಪಚಾರವನ್ನರಿಯರು; ಡಾಂಭಿಕತೆಯನ್ನರಿಯರು. ಹಿರಿಯರನ್ನು ಕಂಡರೆ ದಂಡ ವತ್ ಪ್ರಣಾಮ; ಸರಿಕರನ್ನು, ಕಿರಿಯನ್ನು ಕಂಡರೆ ಬಾಚಿ ತಬ್ಬಿಕೊಂಡೇ ಮಾತನಾಡುವರು.

ದೇವುಡು ಅವರ "ಅಂತರಂಗ" ಪ್ರಕಟವಾದಾಗ ಈಗಿನ ಕಾದಂಬರಿ ಅಷ್ಟಾಗಿ ಬೆಳೆದು ಬಂದ ಕಾಲವಾಗಿದ್ದಿಲ್ಲ. ಆದರೂ ಅವರ "ಅಂತರಂಗ"ವನ್ನು ಬಹುಜನ ಮೆಚ್ಚಿದರು; ಪ್ರಶಂಸೆಗೈದರು. ಕನ್ನಡ ಸಾಹಿತ್ಯದಲ್ಲಿ ಪ್ರೀತಿಯನ್ನು ಹೆಚ್ಚಿಸಿ ಕನ್ನಡ ಸಾಹಿತ್ಯದಲ್ಲಿಯೇ ಒಳ್ಳೆಯ ಪುಸ್ತಕವನ್ನು ಬರೆಯುವವರಿದ್ದಾರೆ ಎಂಬ ಭರವಸೆಯನ್ನು ಹುಟ್ಟಿಸಿದರು. "ಅಂತರಂಗ" ಸಾಮಾನ್ಯವಾದ ಒಂದು ಚುಟುಕದಲ್ಲಿ ಹೇಳಬಹುದಾದ ಕಥೆ. ಅಂಥದನ್ನು ಸುಮಾರು ೨೦೦ ಪುಟಕ್ಕಿಂತಲೂ ಹೆಚ್ಚಾಗಿ ಬರೆದರು. ಆ ಶೈಲಿ, ಪಾತ್ರ ಪರಿಪೋಷಣೆ ಅಮೋಘವಾದುದು.

ಅವರ "ಮಯೂರ" ಇತಿಹಾಸದ ಕಾದಂಬರಿಗೆ ಮಾದರಿಯಾಗಿದೆ. ಇದರಲ್ಲಿ ಇತಿಹಾಸವನ್ನು ಹೆಣೆದ ರೀತಿ ಬಹು ಸೊಗಸಾಗಿದೆ. ಅನಂತರ "Trial of Jesus" ಎಂಬ ಒಂದು ನಾಟಕವನ್ನು "ವಿಚಾರಣೆ"ಯೆಂದು ಕನ್ನಡಿಸಿದರು.

ಹಾಗೆಯೇ "ಮಹಾಬ್ರಾಹ್ಮಣ". ಈ ಕಾದಂಬರಿಯಂತೂ ದೇವುಡು ಅವರ ಉಜ್ವಲ ಪ್ರತಿಭೆಗೆ ರನ್ನ ಕಲಶವಾಗಿದೆ. ಪೌರಾಣಿಕ ವ್ಯಕ್ತಿಯಾದ ವಿಶ್ವಾಮಿತ್ರನ ಜೀವನದ ಸುತ್ತಲೂ ಈ ಕಥಾವಸ್ತು ಹೆಣೆದುಕೊಂಡಿದೆ. ಕ್ಷತ್ರಿಯನಾದ ವಿಶ್ವಾಮಿತ್ರ ತನ್ನ ಸಾಧನೆಯಿಂದ, ತನ್ನ ಪೌರುಷದಿಂದ, ತನ್ನ ತಪಸ್ಸಿನಿಂದ ಮಹಾಬ್ರಾಹ್ಮಣನಾದನೆಂದು ೪೦೦ ಪುಟದಲ್ಲಿ ದೀರ್ಘವಾಗಿ ಚರ್ಚಿಸಿದ್ದಾರೆ. ಗಾಯಿತ್ರಿ, ಸಂಧ್ಯಾವಂದನೆ, ಬ್ರಾಹ್ಮಣಿಕೆಯ ವಿಧಿ, ಈ ಎಲ್ಲ ತಂತ್ರಗಳು ಇದರಲ್ಲಿ ಅಡಕವಾಗಿವೆ. ಇಂಥ ವೇದಾಂತದ ಒಣ ಚರ್ಚೆಯಿದ್ದರೂ ಕಾದಂಬರಿ ಅಪೂರ್ವವಾಗಿದೆ. ಬೇಸರ ಹುಟ್ಟಿಸದೆ ಇರುವಂಥದಾಗಿದೆ, ಕುತೂಹಲಕಾರಿಯಾಗಿದೆ. ಅವರ ತೇಜಸ್ವಿ ಶೈಲಿ, ಅವರದೇ ಆದ ಒಂದು ಪಂಥವನ್ನು ನಮ್ಮ ಸಾಹಿತ್ಯದಲ್ಲಿ ಹಾಕಿಕೊಟ್ಟಿತೆಂದರೂ ಅತಿಶಯೋಕ್ತಿಯಾಗಲಾರದು.

ನಾಟಕ ನೋಡುವವನು ರಂಗಭೂಮಿಯಲ್ಲಿ ಉತ್ತಮ ನಟನ ನಟನೆಯನ್ನು ನೋಡಿ ಹೇಗೆ ತಾದಾತ್ಮ್ಯ ಹೊಂದುವನೋ ಅದೇ ರೀತಿ ದೇವುಡು ಅವರ ಪುಸ್ತಕದಲ್ಲಿನ ಪಾತ್ರಗಳು ಓದುಗನ ಮನಸ್ಸನ್ನು ಸೂರೆಗೊಳ್ಳುವುವು.

ನಾಟಕದ ಸೂತ್ರವೂ ಅವರದೊಂದಿದೆ– `ತಾನೂ ಬೇರೊಂದಾಗಿ ವಾಸ್ತವಿಕತೆಯ ಭ್ರಮೆ ಹುಟ್ಟಿಸುವುದೇ ನಟನ ಕಲೆ' ಎಂಬುದು.

ಈ ಬ್ರಾಹ್ಮಣ ಬಣ್ಣ ಬಳಿದು ವೇಷ ಕಟ್ಟಿ ರಂಗದ ಮೇಲೆ ಕುಣಿದಿದ್ದನ್ನು ಕಂಡವರು ಮರೆಯಲಾರರು. ನಚಿಕೇತದ ವಾಜಸ್ರವಸ. ಆ ಪಾತ್ರ ದೇವಡುರವರಿಗಾಗಿಯೇ ರಚಿತವಾಯಿತೇನೋ. ಆ ಮಹರ್ಷಿಯ ರಾಜಸ ತಳಮಳ ಅವರದೇ. ಬುದ್ಧ–ಆ ಶಾಂತ ಗಂಭೀರ ಪಾತ್ರಕ್ಕೆ ದೇವುಡು ಕೈ ಸೆರೆ. ತೆನ್ನಾಲಿರಾಮನ ಹುಡುಗಾಟವೂ ಇವರಿಗೆ ಸಹಜ ಲೀಲೆ.

ಅದು ಅವರ ಆಳವಾದ ಪಾಂಡಿತ್ಯ, ಆಳವಾದ ಅಭ್ಯಾಸ; ಇವಕ್ಕೆಲ್ಲ ಮುಖ್ಯವಾಗಿ ಇದ್ದದ್ದು ಅವರ ನಿರ್ಮಲ ಮನಸ್ಸು.

ಅವರು ಮಕ್ಕಳ ಬಗ್ಗೆಯೂ ದುಡಿದಿದ್ದಾರೆ. ನಾಟ್ಯ ಕಲೆಯ ಬಗ್ಗೆ ಹೆಣಗಾಡಿದ್ದಾರೆ. ಒಂದೇ, ಎರಡೇ? ಕನ್ನಡ ನುಡಿ, ಕನ್ನಡ ಸಾಹಿತ್ಯ, ಬದುಕು ದೊಡ್ಡದಾಗಬೇಕು ಎಂದು ದೇವುಡು ಅವರು ತಮ್ಮ ಜೀವನದುದ್ದಕ್ಕೂ ದುಡಿದಿದ್ದಾರೆ. ಆದರೆ ಇದರಿಂದೆಲ್ಲ ಅವರಿಗೆ ಸಿಕ್ಕಿದ ಪ್ರತಿಫಲವೇನು?

ದೇವುಡು ಅಂತಹ ಮೇಧಾವಿ. ಇಂಥವರಿಗೆ ಬಡತನದ ಬಳುವಳಿ. ಅಸಂಗ್ರಹ ಇವರಿಗೆ ಸಹಜ ಕ್ರಿಯೆ, ಜೇಬು ಸದಾ ಖಾಲಿ.

ಪಾಂಡಿತ್ಯ ಪ್ರದರ್ಶನ ಅವರಿಂದಾಗದು. ಅದಕ್ಕೆ ಬೇಕಾದ ಶಿಷ್ಟಾಚಾರವನ್ನು ಅವರರಿಯರು. ಎಂತಲೇ ಇಂದಿನ ನಾಗರಿಕ ಜಗತ್ತಿನಲ್ಲಿ ದೇವುಡು ಸಂತ್ರಸ್ತ ಸಾಹಿತಿಯಾಗಿಯೇ ಬದುಕಬೇಕಾಯಿತು. ಕೈಗೆ ಬಂದ ಹಿರಿಯ ಮಗ ಅಕಾಲ ಮೃತ್ಯುವಿಗೆ ತುತ್ತಾದ. ಮಧುಮೇಹದಿಂದಾಗಿ ಅವರದೊಂದು ಕಾಲನ್ನು ಕತ್ತರಿಸಬೇಕಾಯಿತು. ರಥ ಮುಗ್ಗರಿಸಿದಂತಾಯಿತು. ಆದರೂ ಮುಂದೆರಡು ವರ್ಷ ತೇರನ್ನೆಳೆದುಕೊಂಡು ಬದುಕಿದರು.

ಶಾಸ್ತ್ರ ಗ್ರಂಥಗಳ ದಂಡಕಾರಣ್ಯದಲ್ಲಿ ದೇವುಡು ಹರಿತ ಬುದ್ಧಿಯ, ಅಚಲ ಶ್ರದ್ಧೆಯವರಾಗಿದ್ದರು. ಆದರೆ ವಿಧಿಯ ಆಟ ಬೇರೆಯಾಗಿತ್ತು.

ಅಂತಹ ಮಹಾನುಭಾವನ ಬಾಳು ಕೊನೆಗೆ ಹೀಗಾಗುವಂತಾಯಿತೇ ಎಂದು ಮರುಗುವುದು ಮಾತ್ರ ನಮ್ಮ ಪಾಲಿಗೆ ಉಳಿದಿದೆ.

★

ಮಹಾಸರಸಿ ದೇವುಡು ನರಸಿಂಹಶಾಸ್ತ್ರಿ

ಶ್ರೀ ಬಿ.ಎಸ್. ಕೇಶವಮೂರ್ತಿ

ಬೆಂಗಳೂರು, ೧೯೩೦ರ ಸುಮಾರು, ಬಳೇಪೇಟೆಯ ಒಂದು ತಿರುವು, ಸಂಜೆಯಾಗುತ್ತಿದ್ದಂತೆ ಅಲ್ಲೊಬ್ಬ ಅಯ್ಯರ್ ಬಿಸಿಬಿಸಿಯಾಗಿ ಪೂರಿ, ಬೋಂಡಾಗಳನ್ನು ದಿನನಿತ್ಯ ಮಾರುತ್ತಿದ್ದ. ಒಂದು ಸಂಜೆ ಸೈಂಧವನಂತಿದ್ದ ವ್ಯಕ್ತಿಯೊಬ್ಬರು ಅಲ್ಲಿಗೆ ಬಂದವರೆ ಬೆಂದು ಉಬ್ಬುತ್ತಿದ್ದ ಪೂರಿಗಳನ್ನೇ ದಿಟ್ಟಿಸುತ್ತ `ಹೇಗಯ್ಯಾ ಇದರ ಬೆಲೆ' ಎನ್ನಲು, ಆರಡಿಗೂ ಎತ್ತರವಿದ್ದು ಭೀಮ ಬಾಹುಗಳನ್ನು ಹೊಂದಿದ್ದ ಆ ಆಜಾನುಬಾಹುವನ್ನು ದಿಟ್ಟಿಸಿದ ಅಯ್ಯರ್ `ಎಲೆಗೆ ಎರಡಾಣೆ ಸ್ವಾಮಿ' ಎಂದು ಮೆದುವಾಗಿ ನುಡಿಯಲು, `ಎಲೆಗೆ ಎಂದರೆ ಎಷ್ಟು, ಹೇಗೆ' ಎಂದು ಪ್ರಶ್ನಿಸಿತು ಆ ವ್ಯಕ್ತಿ ತುಸು ಗಡಸು ಧ್ವನಿಯಲ್ಲಿ. ಅಯ್ಯರ್, ಮತ್ತಷ್ಟು ಕುಗ್ಗಿದ ಸ್ವರದಲ್ಲಿ `ನಾಕು ಪೂರಿ, ತಕ್ಕಷ್ಟು ಸಾಗು, ಮೇಲಷ್ಟು ಕಾಯಿ ಚಟ್ನಿ– ಇವಿಷ್ಟಕ್ಕೆ ಒಂದೆಲೆ ಎಂದರ್ಥ. ಅಂದ ಹಾಗೆ ತಮಗೆಷ್ಟು ಬೇಕು?' ಎನ್ನಲು ಪಕ್ಕದ ಜಗುಲಿಯ ಮೇಲೆ ಪಟ್ಟಾಗಿ ಪದ್ಮಾಸನ ಹಾಕಿ ಬ್ರಹ್ಮ ರಾಕ್ಷಸನಂತೆ ಭದ್ರವಾಗಿ ಕೂತ ಆ ವ್ಯಕ್ತಿ `ಇದರಲ್ಲೆಲ್ಲಾ ಇಷ್ಟೂ, ಅಷ್ಟೂ ಅನ್ನುವುದೇನಿದೆ, ನೀನು ಮಾಡುವಷ್ಟು ಪೂರಿಯೂ ನನಗೊಬ್ಬನಿಗೇ ಇರಲಿ' ಎಂದಾಗ, ಆ ವ್ಯಕ್ತಿ ಆಡಿದ ಮಾತು ಏನೊಂದೂ ಅರ್ಥವಾಗದೆ-ಪಟ್ಟೆ ಪಟ್ಟೆ ವಿಭೂತಿಯನ್ನು ಎದ್ದು ತೋರುವಂತೆ ನೆತ್ತಿಯ ಮೇಲೆ ಬಳಿದುಕೊಂಡು ದಟ್ಟನೆಯ ಹುಬ್ಬುಗಳ ನಡುವೆ ಕಾಸಗಲದ ಕುಂಕುಮವನ್ನಿರಿಸಿಕೊಂಡು, ಭದ್ರಾಸೀನನಾಗಿ ಬೈಠಾಕ್ ಹೂಡಿದ್ದ ಆ " ಮಹಾ ಬ್ರಾಹ್ಮಣ"ನ ಬಳಿ ಸಾರಿ ಕೈ ಕೈ ಹೊಸೆಯುತ್ತಾ-`ಮಹಾ ಸ್ವಾಮಿ. ನಾನು ಕಲೆಸಿರುವ ಹಿಟ್ಟಿನಲ್ಲಿ ಏನಿಲ್ಲವೆಂದರೂ ಸುಮಾರು ಎಪ್ಪತ್ತೈದು ಪೂರಿಗಳಾದೀತು. ಅಷ್ಟನ್ನೂ ತಾವೊಬ್ಬರೇ ತಿನ್ನುತ್ತೀರಾ. ತಮ್ಮದೇನು ಹೊಟ್ಟೆಯೋ ಅಥವಾ ಕನ್ನಂಬಾಡಿ ಕಟ್ಟೆಯೋ' ಎಂದು ನಗಲು, ಅಯ್ಯರ್ ಆಡಿದ ಈ ಮಾತುಗಳನ್ನಾಲಿಸಿದ ಆ ವ್ಯಕ್ತಿಯ ಮುಖಮಂಡಲ ಕೆಂಡಾಮಂಡಲವಾಗಿ, ಸಿಂಡರಿಸಿಕೊಂಡ ಧ್ವನಿಯಿಂದ `ಪೂರಿಗಳನ್ನು ಹಾಕುವುದು ನಿನ್ನ ಕೆಲಸ, ತಿನ್ನುವುದು ನನ್ನ ಕೆಲಸ. ತಲೆಹರಟೆ ಮಾಡದೆ ಹೇಳಿದಷ್ಟು ಮಾಡಯ್ಯ' ಎಂದು ಗುಡಗಲು, ಆ ಕ್ಷಣ ಅಲ್ಲಾಡುವಂತಾದರೂ ಅಧೈರ್ಯಗೊಳ್ಳದ ಆ ಅಯ್ಯರ್ ಅತಿ ವಿನಯದಿಂದ `ಅಪ್ಪಣೆ. ನಾನಿರುವುದೇ ಪೂರಿ ಮಾರುವುದಕ್ಕೆ. ಆದರೊಂದು ಮಾತು. ಈ ಹಿಟ್ಟಿನಲ್ಲಾಗುವಷ್ಟು ಪೂರಿಗಳನ್ನು ನೀವೊಬ್ಬರೇ ತಿಂದದ್ದಾದರೆ ನೀವು ಅದರ ಬಾಬ್ತು ಒಂದು ಬಿಲ್ಲೆಯನ್ನು ನನಗೆ ಕೊಡಬೇಕಾದ್ದಿಲ್ಲ. ಆದರೆ ನೀವು ತಿನ್ನಲಾಗದೆ ಕೊನೆಯಲ್ಲಿ ಒಂದೇ ಒಂದು ಪೂರಿ ಉಳಿದುಕೊಂಡರೂ, ನೀವು ತಿಂದಷ್ಟು ಪೂರಿಗಳ ಎರಡರಷ್ಟನ್ನು ನನಗೆ ಕೊಡಬೇಕಾಗುತ್ತದೆ. ಒಪ್ಪಿಗೆಯೋ?' ಎಂದು ಸವಾಲು ಹಾಕಿದ ಅಯ್ಯರ್. ನಗು ನಗುತ್ತಲೇ ಈ ಸವಾಲನ್ನು ಸ್ವೀಕರಿಸಿದ ಆ ವ್ಯಕ್ತಿ. ಅಯ್ಯರ್ ಹಾಕಲಾರಂಭಿಸಿದ ಬಿಸಿ ಬಿಸಿ ಪೂರಿಗಳನ್ನು ಬಕಬಕನೆ ಬಕಾಸುರನಂತೆ ತಿನ್ನಲಾರಂಭಿಸಿತು. ಅರೆ ತಾಸಿನಲ್ಲಿ ಅಯ್ಯರ್ ಕಲೆಸಿದ್ದ ಅಷ್ಟು ಹಿಟ್ಟೂ ಕಲಾಸಾಗಿ ಹೋಯಿತು. ದಿಗ್ಭ್ರಾಂತನಾದ ಆ ಅಯ್ಯರ್ `ಮಹಾಸ್ವಾಮಿ, ತಪ್ಪಾಯಿತು. ಕ್ಷಮಿಸಬೇಕು. ತಾವಾರೋ ನನಗೆ ತಿಳಿಯದು. ಸವಾಲು ಹಾಕಿ ಸೋತೆ. ಆದರೆ ಇಷ್ಟು ಸೊಗಸಾಗಿ ತಿನ್ನುವುದಕ್ಕೂ ಪುಣ್ಯ ಪಡೆದಿರ

ಬೇಕು. ನೀವು ಸಾಮಾನ್ಯರಲ್ಲ. ಮಹಿಮೆಯುಳ್ಳವರೆಂದು ನನಗನ್ನಿಸುತ್ತಿದೆ. ತಾವು ಇತ್ತಕಡೆ ಬಂದಾಗಲೆಲ್ಲಾ ತಮ್ಮ "ಮಹಾದರ್ಶನ"ವನ್ನು ಕರುಣಿಸಬೇಕು' ಎನ್ನಲು ಯುದ್ಧದಲ್ಲಿ ಗೆದ್ದ ಒಬ್ಬ "ಮಹಾಕ್ಷತ್ರಿಯ"ನಂತೆ ಮೇಲೆದ್ದ ಆ ವ್ಯಕ್ತಿ `ನೋಡಯ್ಯ, ಈ ವೃಕೋದರನ ವಕ್ರ ದೃಷ್ಟಿ ಪದೇ ಪದೇ ನಿನ್ನ ಮೇಲೆ ಬಿದ್ದದ್ದೇ ಆದರೆ ಪಾಪದವನಾದ ನೀನು ಪಾವನನಾಗುವ ಬದಲು ಪಾಪರ್ ಆಗಿಬಿಡುತ್ತೀಯ' ಎಂದು ಆ ಅಯ್ಯರಿಗೆ, ಎಷ್ಟೇ ಬೇಡವೆಂದರೂ ಬಿಡದೆ ಐದು ರೂಪಾಯಿಯನ್ನು ಅವರ ಕೈಯ್ಯಲ್ಲಿರಿಸಿ ಕತ್ತಲೆಯಲ್ಲಿ ಕರಗಿ ಹೋದ ಆ ಮಹಾ ವ್ಯಕ್ತಿಯೇ ಸಾಹಿತ್ಯ ಲೋಕದಲ್ಲಿ ದಿಗ್ಗಜರಲ್ಲೊಬ್ಬರೆನಿಸಿರುವ ದೇವುಡು ನರಸಿಂಹಶಾಸ್ತ್ರಿಗಳು. ಇದು, ಅವರ ಸರಳ ಬದುಕಿಗೆ ಒಂದು ನಿದರ್ಶನ.

೧೯೨೨ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದ ದೇವುಡು ಅಲ್ಲಿ ವೇದಾಂತ ವಿಷಯದ ಉಪನ್ಯಾಸಕರಾಗಿದ್ದ ಸರ್ವಪಲ್ಲಿ ರಾಧಾಕೃಷ್ಣನ್‌ರವರ ಅಚ್ಚುಮೆಚ್ಚಿನ ಶಿಷ್ಯ. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ., ಗಳಿಸಿದ ದೇವುಡು ಸಂಸ್ಕೃತ ಹಾಗೂ ಆಂಗ್ಲ ಭಾಷೆಯಲ್ಲೂ ಪ್ರಖಾಂಡ ಪಾಂಡಿತ್ಯ ಪಡೆದಿದ್ದವರು, ಬಾಲ್ಯದಲ್ಲೇ ಭಾರತ, ಭಾಗವತ, ಬ್ರಹ್ಮಾಂಡ ಪುರಾಣ, ರಾಮಾಯಣ ಮೊದಲಾದುವುಗಳನ್ನು ಓದಿ ಸ್ಫೂರ್ತಿ ಪಡೆದಿದ್ದ ದೇವುಡು ಮೊಟ್ಟಮೊದಲಿಗೆ ಬರೆದ `ಸಾಹಸವರ್ಮ' ಎಂಬ ಕಾದಂಬರಿ ಪ್ರಕಟವಾದದ್ದು ೧೯೧೨ರಲ್ಲಿ.

ಬಾಲ್ಯದಿಂದಲೂ ಸಮಯಸ್ಫೂರ್ತಿಗೆ ಹೆಸರಾದವರು ದೇವುಡು. ನಾವು ಒಂದು ವರ್ಗದವರನ್ನು ಅಸ್ಪೃಶ್ಯರೆಂದು ಪರಿಗಣಿಸಿದ್ದ ಕಾಲದಲ್ಲಿ. ಅಂತಹ ನಿರ್ಭಾಗ್ಯರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳುತ್ತಿದ್ದ ಕ್ರಿಶ್ಚಿಯನ್ ಪಾದ್ರಿಗಳ ಕಾರ್ಯಾಚರಣೆಯ ಕಾಲ. ಹಿರಿಯರೆಲ್ಲಾ ಸೇರಿದ್ದ ಒಂದು ಸಭೆ. ಒಬ್ಬ ಪಾದ್ರಿ ಮಾತನಾಡುತ್ತ ನಿಮ್ಮ ಕೃಷ್ಣ ಕೊಳಲನ್ನೂದುತ್ತಲೇ ಒಣಗಿದ್ದ ಗಿಡಮರಗಳೆಲ್ಲಾ ಚಿಗುರಿದುವು ಎಂದು ನಿಮ್ಮ ಪುರಾಣ ಪುಣ್ಯ ಕಥೆಗಳಲ್ಲಿ ಹೇಳಿದೆ. ಆದರೆ ಆ ಕೃಷ್ಣ ಊದುತ್ತಿದ್ದ ಬಿದಿರಿನ ಕೊಳಲು ಮಾತ್ರ ಏಕೆ ಚಿಗರಲಿಲ್ಲ?' ಎಂದು ಸವಾಲೆಂಬಂತೆ ಒಂದು ಪ್ರಶ್ನೆಯನ್ನೆಸೆದ. ಅಲ್ಲಿದ್ದ ಹಿರಿಯರಾರಿಗೂ ಈ ಸಾಮಾನ್ಯವೆನಿಸಿದರೂ ತೊಡಕಾಗಿದ್ದ ಪ್ರಶ್ನೆಗೆ ಉತ್ತರಿಸಲಾಗದೆ ತೆಪ್ಪನಿದ್ದಾಗ ಅವರ ಗುಂಪಿನಲ್ಲಿದ್ದ ಬಾಲಕ ದೇವುಡು `ಕಾರಣವನ್ನು ನಾನು ಹೇಳಲೇ' ಎನ್ನಲು, ಬೆರಗಾದ ಆ ಪಾದ್ರಿ `ಆಗಬಹುದು' ಎಂದ. ಆಗ ದೇವುಡು `ಕೃಷ್ಣನ ಕೊಳಲಿನ ನಾದ ಮಾಧುರ್ಯಕ್ಕೆ ಮರ ಗಿಡಗಳು ಚಿಗುರಿದಂತೆ ಆ ಬಿದರಿನ ಕೊಳಲೂ ಚಿಗುರುತ್ತಿತ್ತು. ಆದರೆ ಹಾಗೆ ಚಿಗುರಿದರೆ ತನ್ನನ್ನೆಲ್ಲಿ ಕೃಷ್ಣ ಎಸೆದುಬಿಡುತ್ತಾನೋ ಎಂದು ಹೆದರಿದ ಆ ಕೊಳಲು ಚಿಗುರಲಿಲ್ಲ' ಎಂದಾಗ, ನೆರೆದಿದ್ದವರೆಲ್ಲಾ ಈ ಹುಡುಗನ ಚುರುಕುಮತಿಯನ್ನು ಮೆಚ್ಚಿ ತಲೆದೂಗಿದಾಗ, ಆ ಪಾದ್ರಿಯೂ ನಗುತ್ತ ದೇವುಡುವಿನ ಭುಜ ತಟ್ಟಿ `ಭೇಷ್ ಭೇಷ್ ಹಾಗಿದ್ದಿರಬೇಕು' ಎಂದನಂತೆ.

ಪ್ರೌಢಶಾಲೆಗೆ ಬರುವ ಮುನ್ನವೇ ಶಬ್ದಮಣಿ ದರ್ಪಣವನ್ನು ಕಂಠಪಾಠ ಮಾಡಿಕೊಂಡಿದ್ದ ದೇವುಡೂಗೆ ತಾರುಣ್ಯದಲ್ಲಿ ರಂಗಭೂಮಿಯ ಗೀಳು ಆವರಿಸಿ ನಾಟಕ ಶಿರೋಮಣಿ ವರದಾಚಾರ್ಯರು ಹಾಗೂ ಬಳ್ಳಾರಿ ರಾಘವಾಚಾರ್ಯರ ಕಂಪೆನಿ ಸೇರಿ ಅವರೊಡನೆ ಪಾತ್ರವಹಿಸಿದ್ದೂ ಉಂಟು. ಆ ಸಮಯದಲ್ಲಿ ಚಿತ್ರ ಜಗತ್ತಿನಲ್ಲೂ ಮಿಂಚಬೇಕೆಂಬ ಹಂಬಲದಿಂದ ಗುಬ್ಬಿ ವೀರಣ್ಣನವರ ಜೊತೆ

ಪಾಲುದಾರರಾಗಿ ಸೇರಿ ಗಯ್ಚಟೆಯ `ಫೆಲೋ ಕಲ್ಪ್ರಿಟ್ಸ್' ಎಂಬ ಕಥೆಯನ್ನಾಧರಿಸಿ ತಾವೇ ರಚಿಸಿದ್ದ ಚಿತ್ರಕಥೇ `ಕಳ್ಳರ ಕೂಟ'ವನ್ನು ತಯಾರಿಸುವ ಸನ್ನಾಹ ಕಥೆಯನ್ನಾಧರಿಸಿ ತಾವೇ ರಚಿಸಿದ್ದ ಚಿತ್ರಕಥೆ `ಕಳ್ಳರ ಕೂಟ'ವನ್ನು ತಯಾರಿಸುವ ಸನ್ನಾಹ ನಡೆಸಿದರು. ಟಾಕಿ ಇರದಿದ್ದ ಆ ಕಾಲದಲ್ಲಿ. ೧೯೨೬ ರಲ್ಲಿ. ಮೂಕಿಯಾಗಿ ರೂಪು ಪಡೆಯಲಾರಂಭಿಸಿದ ಈ ಚಿತ್ರದಲ್ಲಿ ದೇವುಡು, ಗುಬ್ಬಿವೀರಣ್ಣ, ಕಲ್ಚರ್ಡ್ ಕಮೆಡಿಯನ್ ಹಿರಣ್ಣಯ್ಯ ಮುಂತಾದವರು ಪಾತ್ರ ವಹಿಸಿದ್ದು ಅದರ ಮೂರು ರೀಲುಗಳೂ, ಈ ಮೂವರೂ ಸೇರಿ ಮಲ್ಲೇಶ್ವರದಲ್ಲಿ ಸ್ಥಾಪಿಸಿದ್ದ ಮನೆಯೊಂದರಲ್ಲಿ ಸಿದ್ಧವಾಯಿತು. ಆ ಮನೆಯೇ ಕನ್ನಡ ನಾಡಿನಲ್ಲಿ ಆರಂಭಗೊಂಡ ಮೊಟ್ಟ ಮೊದಲ ಸ್ಟುಡಿಯೋ ಎನ್ನಬಹುದು. ಆದರೆ ಈ ಚಿತ್ರ ಕಾರಣಾಂತರದಿಂದ ಪೂರ್ಣಗೊಳ್ಳಲಿಲ್ಲ.

ಸ್ವಯಂ ಉತ್ತಮ ನಟರೂ, ನಾಟಕಕಾರರೂ, ರಂಗ ನಿರ್ದೇಶಕರೂ ಆಗಿದ್ದ ದೇವುಡು `ರಂಗಭೂಮಿ' ಪತ್ರಿಕೆಯ ಸಂಪಾದಕರಾಗಿ ಮೂರು ವರುಷ ಸೇವೆ ಸಲ್ಲಿಸಿರುವುದು ಸ್ತುತ್ಯರ್ಹ. ಅಲ್ಲದೆ `ನಮ್ಮ ಪುಸ್ತಕ' ಪತ್ರಿಕೆಯ ಸಂಪಾದಕರಾಗಿ ಇಪ್ಪತ್ತೈದು ವರುಷ. `ಮಕ್ಕಳ ಪುಸ್ತಕ' ಸಂಚಿಕೆಯ ಸಂಪಾದಕರಾಗಿ ಎಂಟು ವರುಷ. `ನವಜೀವನ' ಪತ್ರಿಕೆಯ ಸಂಪಾದಕರಾಗಿ ಹಲವು ವರುಷ ಅವಿಶ್ರಾಂತವಾಗಿ ದುಡಿದ ದೇವುಡುರವರನ್ನು ಮರೆಯಲಾದೀತೇ?

ಮಹಾ ಸರಸಿ ಎಂದೇ ಚಿರಪರಿಚಿತರಾಗಿದ್ದ ದೇವುಡುರವರನ್ನು `ಜೀವನ' ಪತ್ರಿಕೆ ನಡೆಸುತ್ತಿದ್ದ ಮಾಸ್ತಿ ಒಮ್ಮೆ ಭೇಟಿಯಾದಾಗ ನಯವಾಗಿ `ನನ್ನ ಜೀವನ'ಕ್ಕೆ ಏನಾದರೂ ಕೊಡಬಾರದೆ ದೇವುಡು' ಎಂದದ್ದಕ್ಕೆ ತಕ್ಷಣವೇ ದೇವುಡು ಅಷ್ಟೇ ನಯವಾಗಿ `ನನ್ನ ಜೀವನಕ್ಕೂ ಏನಾದರೂ ಕೊಡೋ ದಾದ್ರೆ ಖಂಡಿತ ನಿಮ್ಮ `ಜೀವನ'ಕ್ಕೆ ನಾನೂ ಏನಾದರೂ ಕೊಡುತ್ತೇನೆ' ಎಂದಾಗ, ಮಾಸ್ತಿ `ಹಾಗೆ ನೀವೆನ್ನುವುದಾದರೆ ನನ್ನ `ಜೀವನ'ವನ್ನೇ ನಿಮ್ಮ ಜೀವನಕ್ಕಾಗಿ ಒಪ್ಪಿಸಿಕೊಳ್ಳಿ' ಎನ್ನಲು ಗಹಗಹಿಸಿ ನಗಲಾರಂಭಿಸಿದ ಈ ಸಾಹಿತ್ಯ ದಿಗ್ಗಜರು ಒಬ್ಬರನ್ನೊಬ್ಬರು ಅಪ್ಪಿಕೊಂಡರಂತೆ. ಮೊಟ್ಟಮೊದಲ ಮನೋವೈಜ್ಞಾನಿಕ ಕಾದಂಬರಿ `ಅಂತರಂಗ'ವೂ ಸೇರಿದಂತೆ ಹನ್ನೆರಡು ಕಾದಂಬರಿಗಳು, ನಾಲ್ಕು ನಾಟಕಗಳು. ರೇಡಿಯೋ ರೂಪಕಗಳು, ಆರು ಸಣ್ಣ ಕಥಾ ಸಂಕಲನಗಳು. ಹತ್ತು ಭಾಷಾಂತರಗಳು, ಜಯಚಾಮರಾಜೇಂದ್ರ ಒಡೆಯರ ಅಪೇಕ್ಷೆಯಂತೆ ಸಂಸ್ಕೃತದಲ್ಲಿದ್ದ `ಯೋಗ ವಾಸಿಷ್ಠ'ವನ್ನು ಕನ್ನಡಕ್ಕೆ ತರ್ಜುಮಿಸಿಕೊಟ್ಟ ಅವರ ಹದಿನೆಂಟು ಬೃಹತ್ ಸಂಪುಟಗಳು. ನೂರಕ್ಕೂ ಹೆಚ್ಚು ಮಕ್ಕಳ ಕಥೆಗಳು. ವಿಶ್ವಕೋಶದ ಮಾದರಿಯಲ್ಲಿ-ಮಕ್ಕಳ ವಿಭಾಗ. ಯುವಕರ ವಿಭಾಗ, ಹಿರಿಯರ ವಿಭಾಗ ಹಾಗೂ ಮಹಿಳೆಯರ ವಿಭಾಗಗಳನ್ನು ಒಳಗೊಂಡ `ಮಕ್ಕಳ ಸಾಹಿತ್ಯ' ಎಂಬ ಬೃಹದ್‌ಗ್ರಂಥ ಇವೆಲ್ಲಾ ದೇವುಡುರವರು ಸಾರಸ್ವತ ಲೋಕಕ್ಕೆ ಇತ್ತಿರುವ ಮಹತ್ತರ ಕೊಡುಗೆ.

ದ್ರಷ್ಟಾರರೆನಿಸಿದ್ದ ದೇವುಡು ೧೯೪೯ರಷ್ಟು ಪೂರ್ವದಲ್ಲೇ ಕೇವಲ ಐದು ಅಕ್ಷರಗಳ ಬಳಕೆಯಿಂದಲೇ ಓದು ಬರಹವನ್ನು ಯಾರಿಗಾದರೂ ಕಲಿಸಬಲ್ಲ ವಿಧಾನವನ್ನು ಕಂಡುಹಿಡಿದು ವಯಸ್ಕರ ಶಿಕ್ಷಣ ಸಮಿತಿಯ ಆವತರಣಿಕೆಗೆ ಅಡಿಪಾಯ ತೋಡಿದವರು. ಜಾನಪದ ಸಾಹಿತ್ಯವನ್ನು ಕುರಿತು ಅವರು ರಚಿಸಿರುವ `ಕರ್ನಾಟಕ ಸಂಸ್ಕೃತಿ' ಬಹು ಹಿಂದೆ, ಅಂದರೆ ೧೯೩೫ರಷ್ಟು ಹಿಂದೆಯೇ ದೇವುಡು ನಮಗಿತ್ತಿರುವ ಮತ್ತೊಂದು ಮಹೋನ್ನತ ಕೊಡುಗೆ. ಅವರು ಪ್ರಕಟಿಸಿರುವ `ಮೀಮಾಂಸ ದರ್ಪಣ'

ಕನ್ನಡದಲ್ಲೇ ಒಂದು ವಿಶಿಷ್ಟ ಗ್ರಂಥ. ಇದಲ್ಲದೆ ಸಂಸ್ಕೃತವನ್ನು ಸುಲಭವಾಗಿ ಕಲಿಸಲು ಅವರು ರಚಿಸಿ ರೂಪಿಸಿರುವ `ಮೂಲ ಸಂಸ್ಕೃತ' ಒಂದು ಉಪಯುಕ್ತ ಕೃತಿ. ಇದಲ್ಲದೆ ಕಾಳಿದಾಸನನ್ನು ಮಕ್ಕಳಿಗೆ ಪರಿಚಯಿಸಲು ಅವರು ಬರೆದಿರುವ `ಕುಮಾರ ಕಾಳಿದಾಸ'. `ಕುಮಾರ ಮೇಘ ಸಂದೇಶ'. ಇವುಗಳು ನಿರಂತರ ನೆನಪಿನಲ್ಲುಳಿಯುವ ಕೃತಿಗಳು, ಮಕ್ಕಳ ದೃಷ್ಟಿಯಿಂದ.

ದೇವುಡುರವರ ಸಾಹಿತ್ಯ ಕೃಷಿ ಇಷ್ಟಕ್ಕೆ ಮುಗಿಯುವುದಿಲ್ಲ. ರಾಮಾಯಣ, ಮಹಾಭಾರತ, ಭಾಗವತವನ್ನೂ ನಾನಾ ರೂಪದಲ್ಲಿ ರಚಿಸಿದ್ದಾರವರು.

೧೯೫೪ರಲ್ಲಿ ಮುಖ್ಯಮಂತ್ರಿಗಳಾಗಿದ್ದ ಹನುಮಂತಯ್ಯನವರಿಗೆ ಸಾಹಿತ್ಯ ಸಂಸ್ಕೃತಿ ಪ್ರಚಾರ ಕಾರ್ಯವನ್ನು ಹಮ್ಮಿಕೊಳ್ಳುವಂತೆ ಸೂಚಿಸಿದ್ದು ದೇವುಡುರವರೆ. ಇದಕ್ಕಾಗಿ ಒಂದು ಇಲಾಖೆಯನ್ನೇ ರಚಿಸಿದ ಹನುಮಂತಯ್ಯನವರು ಆ ಇಲಾಖೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಬೇಕೆಂದು ದೇವುಡುರವರನ್ನು ಬೇಡಿದರು. ದೇವುಡು ಒಪ್ಪಲಿಲ್ಲ. ಆ ಸ್ಥಾನಕ್ಕೆ ಸಿ.ಕೆ. ವೆಂಕಟರಾಮಯ್ಯನವರ ಹೆಸರನ್ನು ಹೇಳಿ ಆ ಪ್ರತಿಷ್ಠಿತ ಪಟ್ಟ ಅವರಿಗೆ ದೊರೆಯುವಂತೆ ಎಡೆಮಾಡಿಕೊಟ್ಟ ಹೃದಯವಂತರು ದೇವುಡು.

ಹಿನ್ನೆಲೆಯಲ್ಲಿ ನಡೆದಿದ್ದ ಈ ವಿಚಾರವನ್ನರಿಯದೆ ಆ ಇಲಾಖೆಯ ನಿರ್ದೇಶನ ಪಟ್ಟ ಪಡೆದಿದ್ದ ಸಿ.ಕೆ.ವಿ. ಆ ಸಂತಸದ ಸುದ್ದಿಯನ್ನು ಮೊಟ್ಟ ಮೊದಲು ತಮ್ಮ ಆಪ್ತ ದೇವುಡುರವರಿಗೆ ತಿಳಿಸಲು ದೌಡೋಡಿ ಬಂದು, "ಅಯ್ಯಾ ದೇವುಡು, ನಾನೀಗ ಈ ಇಲಾಖೆಯ ನಿರ್ದೇಶಕನಾಗಿದ್ದೇನೆ. ನೀನು ನನ್ನ ಸಹಾಯಕನಾಗಿ ಸೇವೆ ಸಲ್ಲಿಸುವುದಾದರೆ ಹನುಮಂತಯ್ಯನವರಿಗೆ ನಿನ್ನ ಹೆಸರನ್ನು ಶಿಫಾರ್ಸು ಮಾಡಿ ಸಹಾಯಕ ನಿರ್ದೇಶಕನ ಸ್ಥಾನ ನಿನಗೆ ಸಿಗುವಂತೆ ಮಾಡುತ್ತೇನೆ' ಎಂದಾಗ ದೇವುಡು ಗಟ್ಟಿಯಾಗಿ ನಕ್ಕು `ಅಲ್ಲಯ್ಯ ಮಿತ್ರ, ಆ ಇಲಾಖೆಯನ್ನು ಅಸ್ತಿತ್ವಕ್ಕೆ ತನ್ನಿ ಎಂದು ಹನುಮಂತಯ್ಯನವರಿಗೆ ಸೂಚಿಸಿದವನೇ ನಾನು. ಮತ್ತೆ, ಆ ಇಲಾಖೆಯ ನಿರ್ದೇಶಕರಾಗಿ ಎಂದವರು ಬೇಡಿದಾಗ, ಬೇಡ ನನಗಾಪದವಿ ಎಂದು ಹೇಳಿ ಆ ಸ್ಥಾನಕ್ಕೆ ನಿನ್ನನ್ನು ಸೂಚಿಸಿದವನೂ ನಾನೇ. ಈಗ ನೀನು ನನ್ನಲ್ಲಿಗೆ ಬಂದು ನನ್ನನ್ನೇ ನಿನ್ನ ಸಹಾಯಕನ ಸ್ಥಾನಕ್ಕೆ ಶಿಫಾರ್ಸು ಮಾಡಿ ಹನುಮಂತಯ್ಯನವರಿಂದ ಕೆಲಸ ಕೊಡಿಸುತ್ತೇನೆ ಎನ್ನುತ್ತಿದ್ದೀಯಲ್ಲಾ, ನಿನ್ನ ಬುದ್ಧಿಗೆ ಏನು ಹೇಳಲಿ' ಎಂದು ಮತ್ತೆ ಗಹಗಹಿಸಿ ನಕ್ಕಾಗ ತಬ್ಬಿಬ್ಬಾದ ಸಿ.ಕೆ.ವಿ. `ಇದೇನನ್ನೂ ಹನುಮಂತಯ್ಯನವರು ನನಗೆ ಹೇಳಲೇ ಇಲ್ಲವಲ್ಲಾ' ಎಂದು ಹಣೆ ಹಣೆ ಚಚ್ಚಿಕೊಂಡರಂತೆ.

ಕರ್ನಾಟ ಬ್ರಾಹ್ಮಣ ವಂಶದಲ್ಲಿ ಜನಿಸಿದ್ದು, ಜಾತಿ ಜನಿವಾರ ಧರ್ಮ ಕರ್ಮಗಳಲ್ಲಿ ನಂಬಿಕೆಯಿದ್ದು, ಯಜ್ಞ ಯಾಗಾದಿಗಳನ್ನೂ ಮಾಡಿಸುವಷ್ಟು ಶಕ್ತಿಯಿದ್ದು, ಮಹಾರಾಜರ ಕುಟುಂಬಕ್ಕೆ ದೀಕ್ಷೆಯನ್ನಿತ್ತ ಆಚಾರ್ಯಪುರುಷ ಹಾಗೂ ಮಡಿವಂತಿಕೆಯ ಮಹಾಬ್ರಾಹ್ಮಣ ದೇವುಡು ವಿಶ್ವಮಾನವರೂ ಆಗಿದ್ದರು.

ಒಮ್ಮೆ ರೆವರೆಂಡ್ ಉತ್ತಂಗಿ ಚೆನ್ನಪ್ಪನವರನ್ನು ಕಾಣುತ್ತಿದ್ದಂತೆಯೇ ಸಂತೋಷ ಉಕ್ಕಿ ಆ ಸಂಭ್ರಮದಲ್ಲಿ `ತಾವು ನಾಳೆ ನಮ್ಮ ಮನೆಗೆ ಊಟಕ್ಕೆ ದಯಮಾಡಿಸಬೇಕು' ಎಂದು ಕರೆಯಲು ಉತ್ತಂಗಿಯವರು `ಆಗಬಹುದು' ಎಂದುಬಿಟ್ಟರು. ನಂತರ ದೇವುಡು ಅವರಿಗೆ ಹೊಳೆಯಿತು. ಅವರು

ಕಿರಸ್ತಾನರೆಂದು. ಮಡಿವಂತಿಕೆ ತಾಂಡವವಾಡುತ್ತಿದ್ದ ತಮ್ಮ ಮನೆಯಲ್ಲಿ ಉತ್ತಂಗಿಯವರನ್ನು ಆದರಿಸಿ ಉಟಕ್ಕಿಕ್ಕುವುದು ಹೇಗೆಂದು ಅರ್ಥವಾಗದೆ, ತಮಗೆ ಮೀಮಾಂಸ ಶಾಸ್ತ್ರವನ್ನು ಬೋಧಿಸುತ್ತಿದ್ದ ಮಹಮಹೋಪಾಧ್ಯಾಯ ವೈದ್ಯನಾಥ ಶಾಸ್ತ್ರಿಗಳಿಂದ `ನಿನ್ನ ಮನೆಗೆ ಸಾಕ್ಷಾತ್ ಆ ಏಸು ದೇವನೇ ಬಂದರೆ ಹೇಗೆ ಸತ್ಕರಿಸುತ್ತೀಯೋ ಹಾಗೆಯೇ ಬರಲಿರುವ ಈ ಉತ್ತಂಗಿ ಚೆನ್ನಪ್ಪನವರನ್ನು ಸತ್ಕರಿಸು' ಎಂದು ಹೇಳಲು ದೈವ ಸಾಕ್ಷಾತ್ಕಾರದಿಂದ ದೇವಾಜ್ಞೆಯನ್ನೇ ಪಡೆದಷ್ಟು ಆನಂದಗೊಂಡ ದೇವುಡು ಮನೆಗೆ ಹಿಂತಿರುಗಿದರು.

ಮಾರನೆಯ ದಿನ ಉತ್ತಂಗಿಯವರು ಮನೆಗೆ ಬಂದೊಡನೆ ದೇವುಡು ತಮ್ಮ ಧರ್ಮಪತ್ನಿಯೊಡನೆ ಚೆನ್ನಪ್ಪನವರ ಪಾದ ತೊಳೆದು ತೀರ್ಥವನ್ನು ತಮ್ಮ ತಲೆಯ ಮೇಲೆ ಪ್ರೋಕ್ಷಿಸಿಕೊಂಡಾಗ ಉತ್ತಂಗಿಯವರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ನಂತರ ಉತ್ತಂಗಿಯವರನ್ನು ಪೂರ್ವಾಭಿಮುಖವಾಗಿ (ದೇವತಾ ಸ್ಥಾನ) ಕುಳ್ಳಿರಿಸಿ ತಾವು ಉತ್ತರಾಭಿಮುಖವಾಗಿ (ಪೂಜಿಸುವವ ಕೂರುವ ಸ್ಥಾನ) ಕೂತು ಸಂತೋಷದಿಂದ ಸಂಭಾಷಿಸುತ್ತ ಊಟ ಮಾಡಿದರು. ಇದು ಉತ್ತಂಗಿಯವರಿಗೆ ದೇವುಡು ಅವರಿಂದ ಆದ ಅನುಭವ.

ಕ್ರೂರ ವಿಧಿ ದೇವುಡುರವರ ಎಡಗಾಲನ್ನೇ ಕಸಿದುಕೊಂಡಾಗ ಧೃತಿಗೆಡದೆ ಕನ್ನಡದ ಕಾರ್ಯವನ್ನು ಮುಂದುವರಿಸಲಾರಂಭಿಸಿದ ಅವರಿಗೆ ಆಗ ಅರವತ್ತೆರಡರ ಪ್ರಾಯ. `ಎಡಗಾಲು ಹೋದರೇನು, ಕೆಲಸ ಮಾಡಲು ನನ್ನ ಬಲಗಾಲು ಭದ್ರವಾಗಿದೆ' ಎಂದು ತಮ್ಮನ್ನು ನೋಡಲು ಬಂದಿದ್ದ ಕೀರ್ತಿನಾಥ ಕುರ್ತಕೋಟಿ ಹಾಗೂ ಬಿ.ಜಿ. ಜೋಷಿಯವರೆದುರು ತೊಡೆತಟ್ಟಿ ಗುಡುಗಿದವರು ದೇವುಡು.

`ನಿಮ್ಮ ಮಾತನ್ನು ನಾವು ಕೇಳಲೇ ಬೇಕು' ಎಂದು ತೆವಳುತ್ತಿದ್ದ ದೇವುಡುರವರಿಗೆ ದುಂಬಾಲು ಬಿದ್ದು ಅವರನ್ನು ವೇದಿಕೆಯೊಂದರ ಮೇಲಕ್ಕೆ ನಾಕು ಮಂದಿ ಹೊತ್ತು ತಂದು ಕೂರಿಸಿದಾಗ, ಸಭಿಕರನ್ನು ದಿಟ್ಟಿಸಿದ ದೇವುಡು `ಬದುಕಿರುವಾಗಲೇ ನಾಕು ಜನರಿಂದ ಹೊರಿಸಿಕೊಳ್ಳುವ ಇಂತಹ ಸೌಭಾಗ್ಯ ಯಾರಿಗೆ ತಾನೇ ಸಿಕ್ಕಿತು. ನಾನೊಬ್ಬ ಭಾಗ್ಯಶಾಲಿ' ಎಂದಾಗ ಆ ಮಾತುಗಳನ್ನು ಕೇಳಿದ ಅನೇಕರಿಗೆ ಕರುಳು ಕತ್ತರಿಸಿದಂತಾಯಿತು.

೨೯-೧೨-೧೮೯೬ರಂದು ಅವತರಿಸಿದ ಈ ಅವತಾರಪುರುಷ ದೇವುಡು ನರಸಿಂಹ ಶಾಸ್ತ್ರಿಗಳು ಸುಮಾರು ನಾಲ್ಕುವರೆ ದಶಕಗಳಿಗೂ ಮೀರಿ ಕನ್ನಡದ ಕೆಲಸವನ್ನು ಅನವರತ ಮಾಡಿ ತಮ್ಮ ಅರವತ್ತಾರರ ವಯಸ್ಸಿನಲ್ಲಿ ೨೭-೧೦-೧೯೬೨ರಂದು ಚಿತ್ರಸ್ತರಾಗಿ ಹೋದರು. ಅಷ್ಟೆಲ್ಲಾ ಕೆಲಸ ಮಾಡಿದ ಅವರು ಅದೃಷ್ಟವಂತರು. ಬದುಕಿದ್ದಾಗ ಅವರಿಗೆ ಕಡ್ಡಾಯವಾಗಿ ಸಲ್ಲಿಸಬೇಕಿದ್ದ ಸೂಕ್ತ ಸ್ಥಾನ, ಪ್ರಶಸ್ತಿ, ಸವಲತ್ತುಗಳನ್ನು ಸಲ್ಲಿಸದ ನಾವು ಕನ್ನಡಿಗರು ನಿಜಕ್ಕೂ ನತದೃಷ್ಟರು ಹಾಗೂ ನಿರ್ಭಾಗ್ಯರು. ಮತ್ತೆ, ಹಿಂದೊಮ್ಮೆ ಅ.ನ.ಕೃ. ಹೇಳಿದಂತೆ `ಸತ್ತವರ ಸಮಾಧಿಯನ್ನು ನಿರ್ಮಿಸುವುದರಲ್ಲಿ ನಾವು ನಿಸ್ಸೀಮರು'.

★

ಕನ್ನಡ ಸಾರಸ್ವತ ಲೋಕದ ಉದ್ದಾಮ ಪಂಡಿತ

ಶ್ರೀ ಶಿಕಾರಿಪುರ ಈಶ್ವರ ಭಟ್ಟ

`ದೇವುಡು ನರಸಿಂಹ ಶಾಸ್ತ್ರಿ (೧೮೯೬-೧೯೬೨) ಕನ್ನಡ ಸಾರಸ್ವತ ಲೋಕ ಕಂಡ ಉದ್ದಾಮ ಪಂಡಿತ. ಸಾಹಿತಿ, ಪತ್ರಕರ್ತ-ಶಿಕ್ಷಣ ತಜ್ಞ, ನಟ-ನಾಟಕಕಾರ. ಇದೀಗ ನಾಡಿನಾದ್ಯಂತ ದೇವುಡು ರವರ ಜನ್ಮಶತಾಬ್ದಿ ಸಂಸ್ಮರಣ ಕಾರ್ಯಕ್ರಮಗಳು ನಡೆದಿವೆ. ದೇವುಡು ಅವರದು ಆಕರ್ಷಕ ವ್ಯಕ್ತಿತ್ವ. ದುಂಡು ಮುಖ. ಧೀರ-ಗಂಭೀರ ನಿಲುವು. ತಮ್ಮ ಕೃತಿಗಳ ಮೂಲಕ ನಮ್ಮ ಪುರಾತನ ಋಷಿಮುನಿ ಪರಂಪರೆಯ `ದರ್ಶನ' ಮಾಡಿಸಿದ ಮಹಾನುಭಾವ. ಕನ್ನಡ, ಸಂಸ್ಕೃತ, ತೆಲುಗು ಹಾಗೂ ಇಂಗ್ಲಿಷ್ ಹೀಗೆ ಚತುರ್ಭಾಷಾ ಪಂಡಿತ.

ದೇವುಡು ಜನ್ಮವೆತ್ತಿದ್ದು ಮೈಸೂರಿನಲ್ಲಿ. ತಂದೆ ದೇವುಡು ಕೃಷ್ಣಶಾಸ್ತ್ರಿ–ತಾಯಿ ಸುಬ್ಬಮ್ಮ. ಅವರದು ಮೈಸೂರು ಅರಸರ ರಾಜಪುರೋಹಿತರ ಮನೆತನ. ದೇವುಡು ಪೂರ್ವಜರು ಪ್ರಕಾಂಡ ಪಂಡಿತ ಪರಂಪರೆಗೆ ಸೇರಿದವರು. ಸಹಜವಾಗಿಯೇ ದೇವುಡುರವರಲ್ಲಿ ಪಾಂಡಿತ್ಯದ ಛಾಪು ಎದ್ದು ಕಾಣುತ್ತಿತ್ತು. ಬಾಲಕ ನರಸಿಂಹನಿಗೆ ವೇದ-ಪುರಾಣ, ರಾಮಾಯಣ-ಭಾರತ-ಭಾಗವತಗಳು ಹಿರಿಯರಿಂದ ಬಂದ ಬಳುವಳಿ.

ಐವತ್ತಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ನೀಡಿರುವ ದೇವುಡು, ಪೌರಾಣಿಕ ಕಾದಂಬರಿಕಾರರಾಗಿಯೇ ಹೆಚ್ಚು `ಪರಿಚಿತರು. `ಮಹಾಬ್ರಾಹ್ಮಣ',`ಮಹಾಕ್ಷತ್ರಿಯ', `ಮಹಾದರ್ಶನ' ಕಾದಂಬರಿಗಳಿಗಾಗಿಯೇ ದೇವುಡು ಕನ್ನಡ ಸಾಹಿತ್ಯದಲ್ಲಿ ಶಾಶ್ವತ ಸ್ಥಾನ ಗಳಿಸಿಕೊಂಡಿದ್ದಾರೆ. ಈ ಕಾದಂಬರಿ ರತ್ನತ್ರಯಗಳು ಪೌರಾಣಿಕ ಕಾದಂಬರಿಗಳಿಗೇ ಮಾದರಿಯಾಗಿ ನಿಲ್ಲುವಂತವುಗಳು. ದೇವುಡು ಮನಃಪಟಲದಲ್ಲಿ ಮೂಡಿದ್ದ ಆದಿ ಶಂಕರಾಚಾರ್ಯರ ಕುರಿತ `ಮಹಾಸನ್ಯಾಸಿ' ಗ್ರಂಥಸ್ಥವಾಗದೆ ಉಳಿದದ್ದು ಕನ್ನಡಿಗರ ಪಾಲಿಗೆ ದೌರ್ಭಾಗ್ಯದ ಸಂಗತಿ.

ದೇವುಡುರವರ ಆಸಕ್ತಿಯ ವಿಷಯಗಳು ಹತ್ತು ಹಲವು. ಅವರು ಮೂಲತಃ ನಟರು. ನಾಟಕಗಳಲ್ಲಿ ವಿಶೇಷ ಆಸ್ಥೆ. ಬೆಂಗಳೂರಿನ `ಅಮೆಚೂರು ಡ್ರಮಾಟಿಕ್ ಅಸೋಸಿಯೇಶನ್ (ಎಡಿಎ) ಸದಸ್ಯರಾಗಿ. ಎಡಿಎ ಪ್ರಕಟಿಸುತ್ತಿದ್ದ `ರಂಗಭೂಮಿಯ'ಯ ಸಂಪಾದಕರಾಗಿ ದೇವುಡು ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ವರದಾಚಾರ್-ರಾಘುವಾಚಾರ್ ಅವರ ಪ್ರಭಾವ. ನಚಿಕೇತ, ಗೌತಮಬುದ್ಧ, ಸಾವಿತ್ರಿ, ಮಂಡೋದರಿ, ತೆನಾಲಿರಾಮ ಹೀಗೆ ವೈವಿಧ್ಯಮಯ ಪಾತ್ರ ಪೋಷಣೆ-ನಟನೆ. ಯಮ-ರಾಮ-ತೆನಾಲಿರಾಮ ಹೀಗೆ ದೇವುಡು ಪಾಲಿಗೆ ಯಾವ ಪಾತ್ರವಾದರೂ ಸರಿಯೆ, ಪಾತ್ರದಲ್ಲಿ ಸಂಪೂರ್ಣ ತನ್ಮಯತೆ.

ದೇವುಡುಗೆ ಮಕ್ಕಳ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ. ಶಿಶುಸಾಹಿತ್ಯಕ್ಕೆ ಮೀಸಲಾದ `ನಮ್ಮ ಪುಸ್ತಕ' ಮಾಸ ಪತ್ರಿಕೆಗಳನ್ನು ೨೫ ವರ್ಷ ಕಾಲ ಮುನ್ನಡೆಸಿದ ದೇವುಡು ಮಕ್ಕಳ ಸಾಹಿತ್ಯ ಭಂಡಾ

ರದ ಮೂಲಕ ಮಕ್ಕಳಿಗಾಗಿಯೇ ಐವತ್ತಕ್ಕೂ ಮಿಕ್ಕು ಪುಸ್ತಕಗಳನ್ನು ಪ್ರಕಟಿಸಿದರು. ಜೊತೆ ಜೊತೆಗೇ ಅಕ್ಷರ ಪ್ರಚಾರದ ಕಾರ್ಯವನ್ನೂ ಕೈಗೆತ್ತಿಕೊಂಡ ದೇವುಡುರವರು ವಯಸ್ಕರ ಶಿಕ್ಷಣಕ್ಕಾಗಿ ಒಂದು ಹೊಸ ಪದ್ಧತಿಯನ್ನೇ ಆವಿಷ್ಕಾರ ಮಾಡಿದರು. ಅದನ್ನು ಮೆಚ್ಚಿಕೊಂಡ ಸರಕಾರ ತಾನೇ ಮುಂದೆ ಬಂದು ದೇವುಡುರವರು ಆವಿಷ್ಕರಿಸಿದ ಪದ್ಧತಿಯನ್ನು ಜಾರಿ ಮಾಡಿತು. ವಯಸ್ಕ ಶಿಕ್ಷಣ ಕಾರ್ಯಕಾರಿ ಸಮಿತಿಯ ಆಜೀವ ಸದಸ್ಯರನ್ನಾಗಿ ನೇಮಿಸಿ ಗೌರವ ಸಲ್ಲಿಸಿತು.

ಉಡುಪಿಯಲ್ಲಿ ನಡೆದ ದ್ವೈತ ಸಮ್ಮೇಳನದಲ್ಲಿ `ಅದ್ವೈತಿ' ದೇವುಡು ದ್ವೈತ ಸಂಪ್ರದಾಯದ ಮೇಲೆ ಮಾಡಿದ ವಿದ್ವತ್ಪೂರ್ಣ ಭಾಷಣ ಆ ಕಾಲಕ್ಕೆ ಎಲ್ಲರ ಗಮನ ಸೆಳೆಯಿತು, ಮೆಚ್ಚುಗೆಗೂ ಪಾತ್ರವಾಯ್ತು.

೧೯೪೨ರ `ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಭಾಗವಹಿಸಿದ ದೇವುಡು ಅದಮ್ಯ ಸ್ವಾತಂತ್ರ್ಯ ಪ್ರೇಮಿಯಾಗಿದ್ದರು. ಚಳುವಳಿಯಲ್ಲಿ ಲಾಠಿ ಏಟು ತಿಂದ ದೇವುಡು ಒಂದು ತಿಂಗಳ ಕಾಲ ಕಾಲಿನ ನೋವು ಅನುಭವಿಸಿದರು. ಆದಾಗ್ಯೂ ಸ್ವಾತಂತ್ರ್ಯ ಹೋರಾಟಗಾರರಿಗೆ ಸರಕಾರ ಮಾಸಾಶನ ನೀಡಲು ಮುಂದೆ ಬಂದಾಗ ಅದನ್ನು ಖಡಾಖಂಡಿತವಾಗಿ ತಿರಸ್ಕರಿಸಿದರು. `ಮಾಸಾಶನಕ್ಕಾಗಿ ಚಳುವಳಿ ಮಾಡಲಿಲ್ಲ. ಸ್ವಾತಂತ್ರ್ಯಕ್ಕಾಗಿ ಮಾಡಿದೆ. ಅದು ನನ್ನ ಕರ್ತವ್ಯವಾಗಿತ್ತು, ಎಂದುತ್ತರಿಸಿದ ಧೀರರವರು.

ಎಂ.ಎ. ಪದವಿ ಪಡೆದಿದ್ದರೂ ಸರಕಾರಿ ಕೆಲಸವನ್ನು ಬಯಸದ ದೇವುಡು ಸ್ವತಂತ್ರರಾಗಿರಲು ಬಯಸಿದರು. ಆರ್ಯವಿದ್ಯಾಶಾಲೆಯಲ್ಲಿ ಶಿಕ್ಷಕರಾಗಿ ದುಡಿದರು. ಗಾಂಧೀನಗರ ಹೈಸ್ಕೂಲು ಸ್ಥಾಪಿಸಿದರು. ಸಂಸ್ಕೃತ ಕಲಿಕೆಯನ್ನು ಪ್ರೋತ್ಸಾಹಿಸಿದರು. ಒಂದೊಮ್ಮೆ ಅಖಿಲಭಾರತ ಸಂಸ್ಕೃತ ಸಮ್ಮೇಳನದಲ್ಲಿ ಮೈಸೂರು ರಾಜ್ಯದ ಪ್ರತಿನಿಧಿಯಾಗಿ ಭಾಗವಹಿಸಿದರು. ಸಂಗೀತ-ವೀಣೆಯನ್ನೂ ಅಭ್ಯಾಸ ಮಾಡಿದರು. ಕರ್ನಾಟಕ ಏಕೀಕರಣ ಚಳವಳಿಯಲ್ಲೂ ಪಾಲ್ಗೊಂಡರು. ವೇದೋಪನಿಷತ್ಗಳಲ್ಲಿ ಅಪಾರ ಪಾಂಡಿತ್ಯ ಗಳಿಸಿಕೊಂಡರು. ಆ ಕಾಲದ ಆಚಾರ-ವಿಚಾರ, ರೀತಿ-ನೀತಿ, ಜನಜೀವನ–ಸಂಸ್ಕೃತಿಗಳನ್ನು ತಮ್ಮ ಕಾದಂಬರಿಗಳ ಮೂಲಕ ಕನ್ನಡಿಗರಿಗೂ ಪರಿಚಯಿಸಿದರು. ಇದೆಲ್ಲವೂ ದೇವುಡುರವರ ವೃತ್ತಿ-ಪ್ರವೃತ್ತಿಗಳ ಮೇಲೆ ಬೆಳಕು ಚೆಲ್ಲುವ ಅಂಶಗಳು.

ದೇವುಡು ಮಹಾಬ್ರಾಹ್ಮಣ ಮಹಾಕ್ಷತ್ರಿಯ, ಮಹಾದರ್ಶನ ಕಾದಂಬರಿಗಳ ಮೂಲಕ ನಮಗೆ ವಿಶ್ವಾಮಿತ್ರನ ಸಾಧನೆ-ತಪಸ್ಸು; ನಹುಷನ ವ್ಯಕ್ತಿತ್ವದ, ಯಾಜ್ಞವಲ್ಕ್ಯರ ಪಾತ್ರಗಳನ್ನು ಪರಿಚಯಿಸಿದ್ದಾರೆ. ಅಲ್ಲಿ ವೇದಾಂತಿಯ ಒಳನೋಟವಿದೆ. ಜೊತೆಗೇ ಆಧುನಿಕ ದೃಷ್ಟಿಕೋನವೂ ಮೇಳೈಸಿದೆ. ವೈದಿಕ ಹಾಗೂ ಆಧುನಿಕ ದೃಷ್ಟಿಕೋನಗಳ ಸುಂದರ ಸಮನ್ವಯ ಅಲ್ಲಿದೆ. ಕನ್ನಡ ಸಾಹಿತ್ಯ ಲೋಕದಲ್ಲಿ ದೇವುಡು ಹೆಸರನ್ನು ಶಾಶ್ವತವಾಗಿರಿಸಲು ಈ ಮೂರು ಕಾದಂಬರಿಗಳೇ ಸಾಕು. ದೇವುಡುರವರ ಸಾಹಿತ್ಯ ಕೃಷಿ ಅಲ್ಲಿಗೇ ನಿಲ್ಲುವುದಿಲ್ಲ. `ಅಂತರಂಗ' (ಮನೋವೈಜ್ಞಾನಿಕ ಕಾದಂಬರಿ); `ಎರಡನೆಯ ಜನ್ಮ' (ಲೈಂಗಿಕ ಸಮಸ್ಯೆ ಕುರಿತು ಕಾದಂಬರಿ); `ಗೆದ್ದವರು ಯಾರು,'? `ಕಳ್ಳರ ಕೂಟ', `ಮಯೂರ' ಇತ್ಯಾದಿ ಕಾದಂಬರಿಗಳು ದೇವುಡುರವರ ಸಾಹಿತ್ಯದ ವಿವಿಧ ಮುಖಗಳನ್ನು ತೆರೆದಿಡುತ್ತವೆ. ದೇವುಡು ಕಾದಂಬರಿಗಳ ಜೊತೆಗೆ ಸ್ವಾಮಿ ವಿವೇಕಾನಂದರ ಭಾಷಣವನ್ನು ಅನುವಾದಿ

ಸಿದ್ದಾರೆ. ಜಾನ್‌ಮೆಸಫೀಲ್ಡ್‌ನ `ದಿ ಟ್ರಯಲ್ ಆಫ್ ಜೀಸಸ್) (The Trial of Jesus) ನಾಟಕದ ಭಾಷಾಂತರ ಮಾಡಿದ್ದಾರೆ. ದೇವುಡು ಮೈಸೂರು ವಿ.ವಿ. ಆಶ್ರಯದಲ್ಲಿ ಮಾಡಿದ ಭಾಷಣ ಮಾಲಿಕೆ `ಕರ್ನಾಟಕ ಸಂಸ್ಕೃತಿದರ್ಶನ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಅದೊಂದು ಅಮೂಲ್ಯ ಕೃತಿ.

ದೇವುಡು ಸಾಹಿತ್ಯದಂತೆಯೇ ಅವರ ವ್ಯಕ್ತಿತ್ವವೂ ಅಷ್ಟೇ ಆಕರ್ಷಕ. ದೇವುಡು ಉತ್ತಮ ವಾಗ್ಮಿ. ತಮ್ಮ ಕಂಚಿನ ಕಂಠ, ಸರಸ ಸಂಭಾಷಣೆ, ಮೋಡಿ ಮಾಡುವ ಮಾತಿನ ವೈಖರಿ, ತೇಜೋಮಯ ಕಣ್ಣುಗಳು, ಗಹನ ಚರ್ಚೆ ಆದರೆ ಸರಳ ವಿಚಾರಣೆಗಳಿಂದಾಗಿ ಎಂತಹ ಸಭೆ ಸಮಾರಂಭಗಳಲ್ಲೂ ಜನರನ್ನು ಮಂತ್ರಮುಗ್ಧರನ್ನಾಗಿಸುವ, ವಿಶೇಷ ಶಕ್ತಿ ಪಡೆದವರಾಗಿದ್ದರು.

ದೇವುಡುರವರಿಗೆ ಬಾಲ್ಯದಿಂದಲೂ ಕಷ್ಟ ಪರಂಪರೆಯೊಡನೆ ಸರಸವಾಡುವ ಪ್ರವೃತ್ತಿ. ಐದು ವರ್ಷ ಪ್ರಾಯದಲ್ಲೇ ತಂದೆಯ ಮರಣ. ತಾಯಿಯ ಆಸರೆ. ಕಷ್ಟದಲ್ಲಿ ವಿದ್ಯಾಭ್ಯಾಸ. ದಿ॥ ಸರ್ವಪಲ್ಲಿ ರಾಧಾಕೃಷ್ಣರಂತವರು ಗುರುಗಳಾಗಿ ದೊರೆತದ್ದೊಂದು ಅದೃಷ್ಟ. ಕೊನೆಗಾಲದಲ್ಲಿ ಮಗನ ಸಾವು. ಮಧುಮೇಹ ರೋಗ ಕಾಲನ್ನೇ ಬಲಿತೆಗೆದುಕೊಂಡಿತು. ಚಿತ್ರೋದ್ಯಮ-ವ್ಯಾಪಾರದಲ್ಲಿ ನಷ್ಟ. ಆದಾಗ್ಯೂ ಕಷ್ಟ-ನಷ್ಟಗಳಿಗೆ ಜಗ್ಗದ-ಕುಗ್ಗದ ಧೀರೋದಾತ್ತ ಚೇತನ. ಕಾಲನ್ನು ಕಳೆದುಕೊಂಡು ಮತ್ತೂ ಮೂರುಚಿಲ್ಲರೆ ವರ್ಷ ಬದುಕಿದ ದೇವುಡು ಆ ಕಾಲದಲ್ಲಿ ಮಹಾದರ್ಶನ ಬರೆದು ಮುಗಿಸಿದರು.

೧೯೬೨ ಅಕ್ಟೋಬರ್ ೨೪ರಂದು ದೇವುಡು ಈ ಲೋಕಯಾತ್ರೆಗೆ ಮಂಗಳ ಹಾಡಿದರು. ಮರಣಾನಂತರ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ೧೯೯೬ ಡಿಸೆಂಬರ್ ೧೯ಕ್ಕೆ ದೇವುಡು ಬದುಕಿದ್ದಿದ್ದರೆ ಅವರಿಗೆ ನೂರು ವರ್ಷ ತುಂಬಿರುತ್ತಿತ್ತು. ಆದರೆ ಭೌತಿಕವಾಗಿಂದು ದೇವುಡು ನಮ್ಮ ಮಧ್ಯೆ ಇಲ್ಲದಿರಬಹುದು ಅವರ ಸಾಹಿತ್ಯವಂತೂ ಇದ್ದೇ ಇದೆ.

★

ಪುರಾಣಗಳಿಗೆ ಮರುಸೃಷ್ಟಿ ನೀಡಿದ ದಾರ್ಶನಿಕ

ಶ್ರೀ ಜಿ.ಎನ್. ಉಪಾಧ್ಯಾಯ

ಆದರ್ಶ ಶಿಕ್ಷಕರಾಗಿ ಕಥೆಗಾರರಾಗಿ, ಪತ್ರಿಕೋದ್ಯಮಿಯಾಗಿ ಕಾದಂಬರಿಕಾರರಾಗಿ, ಸಮಾಜ ಸುಧಾರಕರಾಗಿ ಹೀಗೆ ಹಲವು ಕ್ಷೇತ್ರಗಳಲ್ಲಿ ದುಡಿದ ದೇವುಡು ನರಸಿಂಹ ಶಾಸ್ತ್ರೀ ಅವರದ್ದು ಪ್ರಯೋಗಶೀಲ ಹಾಗೂ ಪ್ರಗತಿಶೀಲ ಮನಸ್ಸು. ಕನ್ನಡ ವಾಙ್ಮಯದಲ್ಲಿ ದೇವುಡು ಅವರಿಗೆ ವಿಶಿಷ್ಟ ಸ್ಥಾನ ಮಾನವಿದೆ.

ಸಂಖ್ಯೆಯ ದೃಷ್ಟಿಯಿಂದ ನೋಡಿದರೆ ಅವರು ಬರೆದ ಕೃತಿಗಳು ಹೆಚ್ಚಾದರೂ, ಜನತೆಗೆ ಪರಿಚಯವಿರುವುದು ಬೆರಳೆಣಿಕೆಯನ್ನು ದಾಟಲಾರವು. ಆದರೂ ಕನ್ನಡದ ಸಂದರ್ಭದಲ್ಲಿ ಅವರನ್ನು ಮೂರು ವಿಧದಲ್ಲಿ ಗುರುತಿಸಬಹುದು. ಒಂದು ಶಿಶು ಸಾಹಿತ್ಯವನ್ನು ಕಟ್ಟಿ ಬೆಳೆಸಿದವರು, ಎರಡು ಕಾದಂಬರಿಕಾರರಾಗಿ ಸೈ ಎನಿಸಿಕೊಂಡವರು, ಮೂರು ಅನುವಾದಕ ಅಥವಾ ಭಾಷಾಂತರಕಾರರಾಗಿ ಅವರು ಮಾಡಿದ ಮಹತ್ವದ ಕೆಲಸಗಳು. ಆದರೂ ನಮಗೆ ದೇವುಡು ಎಂದೊಡನೆ ಫಕ್ಕನೆ ನೆನಪಾಗುವುದು ಅವರ ಮಹಾ ಕಾದಂಬರಿಗಳು.

ಪುರಾಣಗಳ ಮರುಸೃಷ್ಟಿ

ದೇವುಡು ಅವರು ಬರೆದ ಕಾದಂಬರಿಗಳು ವೈಶಿಷ್ಟ್ಯಪೂರ್ಣವಾದವು. ಅವು ಮೇಲು ನೋಟಕ್ಕೆ ಪೌರಾಣಿಕ ಕಾದಂಬರಿಗಳೆನಿಸುತ್ತವೆ. ಅಲ್ಲಿ ಪುರಾಣಗಳ ಪುನರಾವರ್ತನೆಯಾಗಿದೆ ಎಂದು ಸುಲಭದಲ್ಲಿ ಅಂದು ಬಿಡಬಹುದು; ಇಷ್ಟು ಮಾತ್ರ ಆಗಿದ್ದರೆ ದೇವುಡು ಅಷ್ಟು ಜನಪ್ರಿಯರಾಗುತ್ತಿದ್ದಿಲ್ಲ. ತಮ್ಮ ಕಾದಂಬರಿಗಳಲ್ಲಿ ದೇವುಡು ಅವರು ಪುರಾಣವನ್ನು ಮರುಸೃಷ್ಟಿ ಮಾಡಿದ್ದಾರೆ. ಕಾಲ್ಪನಿಕ ಜಗತ್ತಿನಿಂದ ಆ ಪಾತ್ರಗಳನ್ನು ಬಿಡಿಸಿ ತಂದು ಸಮಕಾಲೀನ ಪ್ರಪಂಚದ ವೇಷತೊಡಿಸಿದ್ದಾರೆ. ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ಪುರಾಣದ ಪ್ರತಿಯೊಂದು ಪಾತ್ರ ಹಾಗೂ ಸನ್ನಿವೇಶಗಳನ್ನು ಸಂಯಮದಿಂದ ಅರ್ಥೈಸುವ ಪ್ರಯತ್ನ ಮಾಡಿ ಅದರಲ್ಲಿ ಗೆಲುವು ಸಾಧಿಸಿದ್ದಾರೆ. ತಮ್ಮ ಕೃತಿಗಳ ಮೂಲಕ ಅವರು ಸರಳವಾಗಿ, ಲಲಿತವಾಗಿ ವೇದ ವೇದಾಂತಗಳ ದರ್ಶನ ಮಾಡಿಸಿದ್ದಾರೆ.

ದೇವುಡು ಅವರು ೧೮೯೬ ಡಿಸೆಂಬರ್ ೨೯ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ದೇವುಡು ಕೃಷ್ಣಶಾಸ್ತ್ರಿ. ತಾಯಿ ಸುಬ್ಬಮ್ಮ. ಕೃಷ್ಣಶಾಸ್ತ್ರಿಗಳು ಪ್ರಕಾಂಡ ಪಂಡಿತರಾಗಿದ್ದರಲ್ಲದೆ ಮೈಸೂರು ಅರಮನೆಯ ಋತ್ವಿಕರಾಗಿ, ರಾಜಕುಲಗಳ ಪುರೋಹಿತರಾಗಿ ಸಾಕಷ್ಟು ಪ್ರಸಿದ್ಧರಾಗಿದ್ದರು. ಚಿಕ್ಕಂದಿನಲ್ಲಿಯೇ ಬಾಲಕ ನರಸಿಂಹನನ್ನು ಆಕರ್ಷಿಸಿದ್ದು ಪುರಾಣ ಪ್ರಪಂಚ, ಭಾಗವತ, ಉಪನಿಷತ್ತು, ರಾಮಾಯಣ, ಮಹಾಭಾರತ. ಇವೆಲ್ಲವನ್ನು ಹನ್ನೆರಡನೇ ವರ್ಷದ ಹೊತ್ತಿಗೇ ಓದಿ ಮುಗಿಸಿದ್ದರಂತೆ. ಇದೇ ಅವರ ಸಾಹಿತ್ಯಾಭಿರುಚಿಗೂ ಪ್ರೇರಣೆಯಾಯಿತು. ದೇವುಡು ಅವರು ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರು. ತಂದೆಯವರ ಪಾಂಡಿತ್ಯ ಬಾಲಕ ನರಸಿಂಹನ ಮೇಲೆ ಸಾಕಷ್ಟು ಪ್ರಭಾವ

ಬೀರಿತ್ತು. "ನಮ್ಮ ತಂದೆಯವರು ಕವಿತ್ವಗಳನ್ನು ಮಾಡುತ್ತಿದ್ದರು. ಅವುಗಳನ್ನು ಕೇಳಿದ್ದ ನನಗೂ ಕವಿಯಾಗಬೇಕು ಎನ್ನಿಸಿತು. ಮನೆತನದ ವಾಹಿನಿಗೆ ಅನುಸಾರವಾಗಿ ಸಂಸ್ಕೃತಾಧ್ಯಯನಕ್ಕೆ ತಿರುಗಿ ಸಂಸ್ಕೃತ ಕವಿತ್ವಕ್ಕೆ ಹೊರಳಬೇಕಾಗಿದ್ದ ನನ್ನ ಮನಸ್ಸು ಕನ್ನಡದ ಕಡೆ ತಿರುಗಿತು. ಸುಮಾರು ೧೯೧೨ ರ ವೇಳೆಗೆ ನಾನು ಛಂದಸ್ಸು, ವ್ಯಾಕರಣಗಳನ್ನು ಓದಿ ಪದ್ಯಗಳನ್ನು ಬರೆದಿದ್ದೆ' ಎಂದು ತಮಗೆ ಸಾಹಿತ್ಯದಲ್ಲಿ ಆಸಕ್ತಿ ಮೂಡಿದ ಬಗೆಯನ್ನು ಆತ್ಮಕಥನದಲ್ಲಿ ಅವರೇ ಹೇಳಿಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ಅವರಿಗೆ ನಾಟಕದ ಗೀಳು ಅಂಟಿಕೊಂಡಿತು. ನಾಟಕ ಬರೆಯುವ ಹುಚ್ಚು ನಾಟಕ ಶಿರೋಮಣಿಗಳ ಹತ್ತಿರಕ್ಕೂ ದೇವುಡು ಅವರನ್ನು ಎಳೆದುಕೊಂಡು ಹೋಯಿತು. ನಟಸಾರ್ವಭೌಮ ರಾಘಾವಾಚಾರ್ಯರೊಂದಿಗೆ ಗಂಡೆದೆಯಿಂದ ನಟಿಸಿದರು. ಸಾಕಷ್ಟು ಅನುಭವವೂ ರಂಗಭೂಮಿಯಲ್ಲಿ ದೊರೆಯಿತು. ಆದರೂ ತಾನು ರಂಗಭೂಮಿಯಲ್ಲಿ ವರದಾಚಾರ್ಯರ ಶಿಷ್ಯ ಎಂದು ಹೆಮ್ಮೆಯಿಂದ ಅವರೇ ಹೇಳಿಕೊಂಡಿದ್ದಾರೆ.

ನವೋದಯ ಸಾಹಿತ್ಯ ಕಣ್ಣು ಬಿಡುವ ಹೊತ್ತಿಗೆ ದೇವುಡು ಬರೆಯಲು ಪ್ರಾರಂಭಿಸಿದ್ದರು. ಆಗ ಕನ್ನಡದಲ್ಲಿ ಅನುವಾದಗಳ ಮಹಾಪೂರವೇ ಒದಗಿ ಬಂದಿತ್ತು. ಬಂಗಾಳಿ ಸಾಹಿತ್ಯದ ಬಂಕಿಮಚಂದ್ರ ಕಾದಂಬರಿಗಳನ್ನು ದೇವುಡು ಓದಿ ಮೆಚ್ಚಿಕೊಂಡರು. ದೇವುಡು ಅವರ ಕಾದಂಬರಿಗಳ ಮೇಲೆ ಬಂಕಿಮಚಂದರ ಪ್ರಭಾವವಾದುದನ್ನು ಗಮನಿಸಬಹುದು. ಅವರದು ದ್ವಿತೀಯ ಭಾಷೆ ಸಂಸ್ಕೃತವಾಗಿದ್ದರೂ ಬಿ.ಎ. ತರಗತಿಗಳಿಗೆ ಪಾಠ ಹೇಳುತ್ತಿದ್ದರು. ಯಾರೋ ಒಬ್ಬರು ಕನ್ನಡ ಕಾದಂಬರಿಯನ್ನು ಪಾಠ ಕೇಳಿದ್ದಕ್ಕೆ ಕಾಣಿಕೆಯಾಗಿ ಕೊಟ್ಟರಂತೆ. ಹೈಸ್ಕೂಲಿಗೆ ಬರುವ ವೇಳೆಗೆ ಶಬ್ದಮಣಿ ದರ್ಪಣವನ್ನು ಅವರು ಕಂಠಪಾಠ ಮಾಡಿದ್ದರು.

ದೇವುಡು ಅವರು ೧೯೨೫ರಲ್ಲಿ ಬೆಂಗಳೂರಿಗೆ ಬಂದರು. "ಮೈಸೂರು ನನ್ನ ಸಾಧನರಂಗ; ಬೆಂಗಳೂರು ನನ್ನ ಕಾರ್ಯರಂಗ" ಎಂದು ಅವರು ಯಾವತ್ತೂ ಗೆಳೆಯರಲ್ಲಿ ಹೇಳಿಕೊಳ್ಳುತ್ತಿದ್ದರು. "೧೯೨೧ರ ಹೊತ್ತಿಗೇ ಕಾವ್ಯ ಒಂದನ್ನು ಬರೆದರೂ ಪ್ರಕಟಿಸುವ ಧೈರ್ಯ ಬರಲಿಲ್ಲ." ಸಾಹಿತಿಯಾಗಿ ನಿಲ್ಲುವುದಕ್ಕೆ ಆಸೆಯೇನೋ ಇತ್ತು; ಆದರೆ ಪರಿಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ; ಯಾವುದೇ ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಳ್ಳಲು ಅವರು ಸಿದ್ಧರಿರಲಿಲ್ಲ.

ದೇವುಡು ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆ, ಸಾಹಿತ್ಯದಲ್ಲಿ ಸಾಕಷ್ಟು ಪಳಗಿದ್ದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ವೇದಾಂತವನ್ನು ಮುಖ್ಯ ವಿಷಯವನ್ನಾಗಿಟ್ಟುಕೊಂಡು ಬಿ.ಎ. ಮುಗಿಸಿದರು. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಮೆಚ್ಚಿನ ಶಿಷ್ಯ ಎಂಬ ಹೆಗ್ಗಳಿಕೆ ದೇವುಡು ಅವರದು.

ಕೆಲಕಾಲ ದೇವುಡು ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ ಸಹ ಕೆಲಸ ಮಾಡಿದರು. ಗಾಂಧೀಜಿ ಅವರ ಕರೆಗೆ ಓಗೊಟ್ಟು ಕೆಲಸಕ್ಕೆ ರಾಜೀನಾಮೆ ನೀಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು.

ದೇವುಡು ೧೯೨೬ರಲ್ಲಿ ಅಮೆಚೂರ್ ನಾಟಕ ಕಂಪನಿಯ ಸದಸ್ಯರಾದರು, ರಾಘವಾಚಾರ್ಯರು ಇವರ ಅಭಿನಯವನ್ನು ಕಂಡು ಖುಷಿಪಟ್ಟು ಬೆನ್ನುತಟ್ಟಿದರು. ನಚಿಕೇತ, ಮಂಡೋ

ದರಿ, ರಾಮಕೃಷ್ಣ ಯಶೋಧರ, ಮಾರ್ಕಂಡೇಯ ಮೊದಲಾದ ನಾಟಕಗಳಲ್ಲಿ ದೇವುಡು ಅವರಿಗೆ ಮುಖ್ಯ ಪಾತ್ರಗಳನ್ನು ನೀಡಲಾಗುತ್ತಿತ್ತು. ವಾಜಶ್ರವಸ್, ರಾವಣ, ಯಮ, ರಾಮಕೃಷ್ಣ, ಗೌತಮ ಮೊದಲಾದ ಪಾತ್ರಗಳನ್ನು ದೇವುಡು ಅವರು ಸಮರ್ಥವಾಗಿ ಅಭಿನಯಿಸಿ ರಸಿಕ ವರ್ಗದ ಮೆಚ್ಚುಗೆ ಗಳಿಸಿದರು.

ಶಿಶು ಸಾಹಿತ್ಯ ರಚನೆ

ಶಿಶು ಸಾಹಿತ್ಯದಲ್ಲಿಯೂ ದೇವುಡು ಅವರು ಸಾಕಷ್ಟು ಪ್ರಯೋಗಗಳನ್ನು ಮಾಡಿದರು. ಮಕ್ಕಳಿಗಾಗಿಯೇ ಬರೆದ `ಬುದ್ಧಿಯ ಕತೆಗಳು' ಕೃತಿಗೆ ಬಹುಮಾನವೂ ಪ್ರಾಪ್ತವಾಯಿತು. ಈ ಸಂದರ್ಭ ದಲ್ಲಿ ಆಗ ಸಾಕಷ್ಟು ಹೆಸರು ಮಾಡಿದ ಪಂಜೆ ಮಂಗೇಶರಾಯರು ದೇವುಡು ಅವರನ್ನು ಕಂಡು "ಕರ್ನಾಟಕದಲ್ಲಿ ಮಕ್ಕಳಿಗೆ ಬರೆಯುವವರು ಇರಲಿಲ್ಲವಲ್ಲಾ ಎಂದು ಯೋಚಿಸುತ್ತಿದ್ದೆ. ನಿಮ್ಮ ಬುದ್ಧಿಯ ಕಥೆಗಳನ್ನು ಕಂಡು ಹುಸ್ಸಪ್ಪಾ ಇನ್ನು ನಾನು ನಿರಾತಂಕವಾಗಿ ಸಾಯಬಹುದು" ಎಂದು ಅವರನ್ನು ಮುಂದೂ ಬರೆಯುವಂತೆ ಪ್ರೋತ್ಸಾಹಿಸಿದರಂತೆ. ಮಕ್ಕಳಿಗೆ ಬರೆಯುವವರು ತಾವು ಅಗಾ ಧವಾದ ಕೃಷಿ ಮಾಡಿ ತಮ್ಮ ಕೃಷಿಯ ಫಲವನ್ನು ಮಕ್ಕಳ ಮಟ್ಟಕ್ಕೆ ತಂದು ಕೊಡಬೇಕು ಎಂಬ ಧ್ಯೇಯ ಅವರದಾಗಿತ್ತು. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬುದ್ಧಿಯ ಕಥೆಗಳು, ದೇಶಾಂತರ ಕಥೆಗಳು ಮೊದಲಾದ ಕಥಾ ಸಂಕಲನಗಳನ್ನು ಪ್ರಕಟಿಸಿದರು.

ಮೇರು ಕೃತಿಗಳು

ದೇವುಡು ಆದರ್ಶ ಉಪಾಧ್ಯಾಯರಾಗಿ, ದಾರ್ಶನಿಕರಾಗಿ, ಕಲಾವಿದರಾಗಿ, ವಿವಿಧ ಸಂಘ ಸಂಸ್ಥೆಗಳ ಸ್ಥಾಪಕರಾಗಿ ಕೆಲಸ ಮಾಡಿದರೂ ಕನ್ನಡದ ಜನ ಇಂದೂ ಅವರನ್ನು ಗುರುತಿಸುವುದು ಕಾದಂಬರಿಕಾರರೆಂದೇ. ಕನ್ನಡ ಸಾರಸ್ವತ ಲೋಕಕ್ಕೆ ಮೂರಿ ಮೇರು ಕೃತಿಗಳನ್ನು ಅವರು ನೀಡಿದ್ದಾರೆ. ಅವು "ಮಹಾಕ್ಷತ್ರಿಯ", "ಮಹಾಬ್ರಾಹ್ಮಣ", "ಮಹಾದರ್ಶನ". ಇದಲ್ಲದೇ "ಚಿನ್ನಾ", "ಅಂತರಂಗ", "ಸೋಲೋ ಗೆಲವೋ" ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಶೂದ್ರನನ್ನು ಬ್ರಾಹ್ಮಣನನ್ನಾಗಿ ಪರಿವರ್ತಿಸುವ ವಿಶ್ವಾಮಿತ್ರನ ಜಗದೋದ್ಧಾರ ಸಾಹಸದ ಕಥೆಯೇ ಮಹಾಬ್ರಾಹ್ಮಣ ಕಾದಂಬ ರಿಯ ತಿರುಳು. ವೇದಕಾಲೀನ ಪುರಾಣ ಇತಿಹಾಸವನ್ನೆಲ್ಲ ಮಥಿಸಿ ಈ ಕಾದಂಬರಿಗೆ ಜೀವ ತುಂಬಿದ್ದಾರೆ. "ಮಹಾದರ್ಶನ" ಕಾದಂಬರಿಯಲ್ಲಿ ಬ್ರಹ್ಮರ್ಷಿ ಯಾಜ್ಞವಲ್ಕ್ಯರು ಬ್ರಹ್ಮವಿದ್ಯೆ ಸಾಧಿಸಿದ ಸ್ವಾರಸ್ಯದ ಕತೆ ಇದೆ. ಅವರು ಬರೆದ "ಮಹಾಕ್ಷತ್ರಿಯ" ಕಾದಂಬರಿ ಕನ್ನಡದ ಸರ್ವಶ್ರೇಷ್ಠ ಕಾದಂಬರಿಗಳ ಸಾಲಿನಲ್ಲಿ ನಿಲ್ಲಬಲ್ಲದು. ತಮ್ಮ ಕಾದಂಬರಿಗಳ ಮೂಲಕ ಪುರಾಣ ಪುರುಷರ ಬದುಕನ್ನು ಅಲ್ಲಿನ ಏರಿಳಿತಗಳನ್ನು ಬಹುರಮ್ಯವಾಗಿ ಚಿತ್ರಿಸಿ ಓದುಗರನ್ನು ಸೆಳೆಯುವಲ್ಲಿ ದೇವುಡು ಯಶಸ್ವಿಯಾದರು.

ದೇವುಡು ಅವರ ಕಾದಂಬರಿಗಳಲ್ಲಿ ಮುಖ್ಯವಾಗಿ ಎದ್ದು ಕಾಣುವ ಧ್ವನಿ ಎಂದರೆ ಭಾರತೀ ಯತೆ. ಈ ಸಮೃದ್ಧ ಸಂಸ್ಕೃತಿ ಬೇರು ಕಳಚಿಕೊಳ್ಳದಿರಲಿ ಎಂಬ ಆಶಯ ಅವರದಾಗಿತ್ತು. ಪೌರಾಣಿಕ ವಿಷಯಗಳನ್ನು ಕುರಿತು ಬರೆದರೂ ತಾನು ಬದುಕಿ ಬಾಳಿದ್ದು ಆಧುನಿಕ ಯುಗದಲ್ಲಿ ಎಂಬ ಅಂಶ

ಅವರಿಗೆ ಚೆನ್ನಾಗಿ ಅರಿವಿತ್ತು. ಹಾಗೆಂದು ದೇವುಡು ತೀರಾ ಸಂಪ್ರದಾಯಸ್ಥರಲ್ಲ. ಇಂಗ್ಲೀಷ್ ಸಾಹಿತ್ಯವನ್ನು ಓದಿಕೊಂಡವರು. ಕನ್ನಡದ ಮೇಲಾದ ಪಾಶ್ಚಾತ್ಯ ಪ್ರಭಾವವನ್ನು ಒಪ್ಪಿಕೊಂಡವರು. ಆದರೆ, ಅದರಿಂದಾಗಿ ನಮ್ಮ ಸ್ವಂತಿಕೆಗೆ ಕೊಡಲಿ ಏಟು ಬೀಳದಿರಲಿ ಎಂದು ಎಚ್ಚರಿಸಿದವರು.

ದೇವುಡು ಅವರ ಬರವಣಿಗೆಯ ಮುಖ್ಯ ಕಾಳಜಿ ಎಂದರೆ ಮನುಷ್ಯ ಸುಸಂಸ್ಕೃತನಾಗಬೇಕೆಂಬುದು. ಆದ್ದರಿಂದಲೇ ಮಕ್ಕಳ ಭವಿಷ್ಯದ ಕಡೆಗೆ ಚಿಂತಿಸಿ ಅದಕ್ಕಾಗಿ ಅಹರ್ನಿಶಿ ದುಡಿದರು. ನೀತಿವಂತ ಪ್ರಜ್ಞೆಯೇ ಈ ನಾಡಿನ ಆಸ್ತಿ ಎಂದವರು ನಂಬಿಕೊಂಡಿದ್ದರು.

ವಯಸ್ಕರ ಶಿಕ್ಷಣ ರೂವಾರಿ

ಇದಕ್ಕಾಗಿ ಹಳೇ ಮೈಸೂರಿನ ಭಾಗದಲ್ಲಿ ವಯಸ್ಕರ ಶಿಕ್ಷಣವನ್ನು ಪ್ರಾರಂಭಿಸಿದರು. ದೇವುಡು ಪುರೋಹಿತಶಾಹಿಯನ್ನು ಪ್ರತಿಪಾದಿಸುತ್ತಾರೆ ಎಂಬ ಟೀಕೆಯೂ ಕೇಳಿ ಬಂದಿತ್ತು. ಅದಕ್ಕೆ ಅವರು ಕಿವಿಗೊಟ್ಟವರಲ್ಲ. ಪುರಾಣದರ್ಶನ ಮಾಡುವ ಸಂದರ್ಭದಲ್ಲಿ ದೇವುಡು ಅದನ್ನು ಸಮಕಾಲೀನ ಹಾಗೂ ಸರ್ವ ಸಮ್ಮತವಾಗಬಲ್ಲುದೆ ಎಂದು ಚಿಂತನ ಮಂಥನ ಮಾಡಿ ಬರೆಯುತ್ತಿದ್ದರಂತೆ. ರಾಮಕೃಷ್ಣ ವಿವೇಕಾನಂದರ ವಿಚಾರಧಾರೆಗಳಲ್ಲಿ ಅವರಿಗೆ ಅಚಲ ವಿಶ್ವಾಸವಿತ್ತು. ಗಾಂಧೀಜಿಯವರ ತತ್ವಗಳನ್ನು ಮೆಚ್ಚಿಕೊಂಡಿದ್ದರು. ಆದ್ದರಿಂದ ೨೦ನೇ ಶತಮಾನದ ಆದಿಯಲ್ಲೇ ಅವರು ಪ್ರಗತಿಶೀಲ ಧೋರಣೆಯನ್ನು ಹೊಂದಿದ ಲೇಖಕರೆನಿಸಿದ್ದರು.

ದೇವುಡು ಅವರದ್ದು ಹೋರಾಟದ ಬದುಕು. ಮನಸ್ಸು ಮಾಡಿದ್ದರೆ ಅರಮನೆಯ ಸುಖಭೋಗದಲ್ಲಿ ಹಾಯಾಗಿರಬಹುದಿತ್ತು. ಆದರೆ ಚಿಕ್ಕಂದಿನಲ್ಲೇ ಅವರನ್ನು ಸಾಹಿತ್ಯದ ಗೀಳು ಅಂಟಿಕೊಂಡಿತು. ಬದುಕಿನ ಮುಸ್ಸಂಜೆಯ ದಿನಗಳಲ್ಲಿ ಅವರು ವಿಪರೀತ ಸಕ್ಕರೆ ಖಾಯಿಲೆಯಿಂದ ನರಳುತ್ತಿದ್ದರು. ಅದು ಜಾಸ್ತಿಯಾಗಿ ಒಂದು ಕಾಲನ್ನೂ ಕತ್ತರಿಸಿ ತೆಗೆಯಬೇಕಾಯಿತು. ಈ ಸಂದರ್ಭದಲ್ಲಿಯೂ ಧೃತಿಗೆಡದೇ ಸಾವಿನ ಹಾಸಿಗೆಯಲ್ಲೇ ಮಲಗಿ ಮಹಾದರ್ಶನ ಕಾದಂಬರಿಯನ್ನು ಬರೆದರು. ೧೯೬೨ರಲ್ಲಿ ಅವರು ನಿಧನರಾದರು. ಅನಂತರ ಈ ಕೃತಿ ಪ್ರಕಟವಾಯಿತು.

ಕರ್ನಾಟಕ ಸಂಸ್ಕೃತಿ, ಯೋಗವಾಸಿಷ್ಠ, ರಾಮಾಯಣದ ಮಹಾಪುರುಷರು ಮೊದಲಾದ ಕೃತಿಗಳೂ ಕನ್ನಡಕ್ಕೆ ಅವರ ಮಹತ್ವದ ಕೊಡುಗೆಗಳು. ಜೀವಿತದುದ್ದಕ್ಕೂ ದೇವುಡು ಅವರು ಅನುಭವಿಸಿದ ಕಷ್ಟನಷ್ಟಗಳು ಹಲವು, ಮಾಡಿದ ಪ್ರಯೋಗಗಳು ಅದೆಷ್ಟೋ. ಚಾರಿತ್ರಿಕ ಹಿನ್ನೆಲೆಯಲ್ಲಿ ಅವರು ಬರೆದ `ಮಯೂರ' ಕಾದಂಬರಿ ಸಿನಿಮಾ ಆಗಿ ಅಪಾರ ಯಶಸ್ಸು ಗಳಿಸಿತು. ಯಾವುದೇ ಪ್ರಶಸ್ತಿ ಪದವಿಗಾಗಿ ಅವರು ಸಾಹಿತ್ಯವನ್ನು ಬೆನ್ನಿಗೆ ಕಟ್ಟಿಕೊಂಡವರಲ್ಲ. ದೇವುಡು ಬದುಕಿದ್ದಾಗ ಯಾವ ಪುರಸ್ಕಾರವೂ ಅವರನ್ನು ಆರಸಿಕೊಂಡು ಬರಲಿಲ್ಲ. ಅವರ ಅಂದಿನ ಕರ್ನಾಟಕದ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ನಿಕಟವರ್ತಿಯಾಗಿದ್ದರು. ಮೈಸೂರು ಮಹಾರಾಜರಂತೂ ಆಪ್ತರಾಗಿದ್ದರು. ಸಮಾಜದ ಒಳಿತಿಗೆ ಬರೆದ ದೇವುಡು ಅವರ ಬದುಕು ಬರಹ ಪ್ರಾಂಜಲ ಮನಸ್ಸಿನದು. ಸಾಹಿತ್ಯದಿಂದ ಸಿಗುವ ಫಲ `ಪರಮಾನಂದ' ಎಂಬ ನಿಲುವು ಅವರದಾಗಿತ್ತು.

★

ಪೂಜ್ಯ ದೇವುಡು-ಅವರು

ಶ್ರೀಮತಿ ಮಳವಳ್ಳಿ ಸುಂದರಮ್ಮ

ಪೂಜ್ಯ ದೇವುಡು ಅವರ ಹೆಸರನ್ನು ಕೇಳದ ಕನ್ನಡಿಗರೇ ಇಲ್ಲ. ಅವರ ಹೆಸರು ಹೇಳಿದ ಕೂಡಲೇ ಅವರ `ಮಹಾಬ್ರಾಹ್ಮಣ' `ಮಹಾಕ್ಷತ್ರಿಯ' ನೆನಪಿಗೆ ಬರುತ್ತದೆ. ಕನ್ನಡ ಸಾಹಿತ್ಯ ರಂಗದಲ್ಲಿ ಒಂದು ರತ್ನ ಎಂದು ಖ್ಯಾತರಾಗಿದ್ದ ಇವರು ರಂಗಭೂಮಿಯಲ್ಲಿಯೂ ಅಮರತೆ ಗಳಿಸಿದರು. ಚಲನಚಿತ್ರರಂಗ ಕೇವಲ ಅವಿದ್ಯಾವಂತರ ಕ್ಷೇತ್ರವಲ್ಲ; ವಿದ್ಯಾವಂತರ, ಕಲಾಭಿಮಾನಿಗಳ ಕ್ಷೇತ್ರವೂ ಹೌದು ಎಂಬುದನ್ನು ತೋರಿಸಲು ಶ್ರಮಿಸಿದವರಲ್ಲಿ ಶಾಸ್ತ್ರಿಗಳಿಗೆ ಗಣ್ಯ ಸ್ಥಾನವಿದೆ.

ಜಿ.ಎಚ್. ವೀರಣ್ಣ, ಕೆ.. ಶ್ರೀನಿವಾಸಮೂರ್ತಿ, ನಿರ್ದೇಶಕ ಭವನಾನಿ, ಟಿ.ಪಿ. ಕೈಲಾಸಂ, ಎಚ್.ಕೆ. ವೀರಣ್ಣಗೌಡ, ಕಮಲಾದೇವಿ ಚಟ್ಟೋಪಾಧ್ಯಾಯ, ಏಣಾಕ್ಷಿ ರಾಮರಾವ್ ಮುಂತಾದ ವಿದ್ಯಾಭಿಮಾನಿಗಳ ಜೊತೆಯಲ್ಲಿ ಕನ್ನಡ ಚಲನಚಿತ್ರರಂಗಕ್ಕೆ ಕಾಲಿಟ್ಟು ಅದರ ಅಸ್ತಿಭಾರ ಶಿಲೆಯನ್ನು ಕನ್ನಡ ನಾಡಿನಲ್ಲಿ ಸ್ಥಾಪಿಸಲು ಶ್ರಮಿಸಿದವರಲ್ಲಿ ದೇವುಡು ಪ್ರಮುಖರು.

ಇವರು ಸಾಹಿತಿ, ಸಂಗೀತಗಾರರನ್ನೆಲ್ಲಾ ಒಂದೆಡೆ ಕಲೆ ಹಾಕಿ ಕನ್ನಡ ಚಿತ್ರದ ನಿರ್ಮಾಣದ ಸಾಹಸಕ್ಕಿಳಿದರು. ಅವರ ಈ ಸಾಹಸದ ಫಲವೇ "ದಿ ಕರ್ನಾಟಕ ಟಾಕೀಜ್ ಲಿ., (ಧಾರವಾಡ) ಲಾಂಛನದಡಿಯಲ್ಲಿ ನಿರ್ಮಾಣವಾದ ಭಕ್ತಿರಸ ಪ್ರಧಾನವಾದ ಕನ್ನಡ ವಾಕ್ಚಿತ್ರ `ಚಿರಂಜೀವಿ' ಅಥವಾ `ಮಾರ್ಕಂಡೇಯ'. ದೇವುಡು ಅವರಿಗೆ ನನ್ನ ತಂದೆಯವರೆಂದರೆ ಎಲ್ಲಿಲ್ಲದ ಗೌರವ. ಇಬ್ಬರೂ ಒಂದೆಡೆ ಕಲೆತರೆ ಸಾಕು ಸಂಗೀತ, ಸಾಹಿತ್ಯದ ಅನೇಕ ವಿಷಯಗಳ ಚರ್ಚೆಯಲ್ಲಿ ಮಗ್ನರಾಗಿ ಬಿಡುತ್ತಿದ್ದರು. ದೇವುಡು ಎಂದರೆ ನನಗೂ ತಂದೆಯವರಲ್ಲಿದ್ದಷ್ಟೇ ಭಕ್ತಿ, ಎಂದೂ ಅವರ ಮಾತಿಗೆ ಬದಲು ಹೇಳಿದವಳಲ್ಲ.

ಚಲನಚಿತ್ರ ರಂಗದ. ಪ್ರವೇಶ ನನಗೆ ಖಂಡಿತ ಇಷ್ಟವಿರಲಿಲ್ಲ. ಆದರೆ ದೇವುಡು ಅವರ ಮಾತಿಗೆ ಬದಲು ಹೇಳಲು ಸಾಧ್ಯವೇ? ಈ ಚಿತ್ರದ ನಿರ್ಮಾಣ ಕಛೇರಿ ಧಾರವಾಡದಲ್ಲಿದ್ದುದರಿಂದ ಅವರ ಜೊತೆಯಲ್ಲಿ ಅಲ್ಲಿಗೆ ತೆರಳಿದೆ. ಚಿತ್ರಕಥಾ ಲೇಖಕರಾದ ದೇವುಡು, ಚಿತ್ರದ ಸಂಭಾಷಣೆ-ಗೀತೆಗಳ ಬಗ್ಗೆ ನನಗೆ ಶಿಕ್ಷಣ ಕೊಟ್ಟರು. ಚಿತ್ರದ ಚಿರಂಜೀವಿಯ ತಾಯಿ ಮರುಧ್ವತಿಯ ಪಾತ್ರಕ್ಕೆ ಆಯ್ಕೆಯಾಗಿದ್ದೆ. ಈಗಿನಂತೆ ಹಿನ್ನಲೆ ಗಾಯನ ಪದ್ಧತಿ ಇರಲಿಲ್ಲವಾದ್ದರಿಂದ ಕಲಾವಿದರೇ ಸ್ವತಃ ಹಾಡಬೇಕಾಗಿತ್ತು. ಶಾಸ್ತ್ರೀಯ ಸಂಗೀತ ಜ್ಞಾನವಿದ್ದವರಂತೂ ಚಲನಚಿತ್ರ ಸಂಗೀತವೆಂದರೆ ಮೂಗು ಮುರಿಯುತ್ತಿದ್ದ ಕಾಲ ಅದು. ಸರಿ, ಸಂಗೀತ ಮತ್ತು ಸಂಭಾಷಣೆಯ ಅಭ್ಯಾಸ ಮುಕ್ತಾಯವಾದ ನಂತರ ಪೂನಾಕ್ಕೆ ತೆರಳಿದೆ. ಹಿಂದೂಸ್ಥಾನೀ ಸಂಗೀತದ ಅಪೂರ್ವನಿಧಿ ಎಂದು ಖ್ಯಾತರಾಗಿರುವ ಮಲ್ಲಿಕಾರ್ಜುನ ಮನ್ಸೂರ್ ಅವರು ನಾರದನ ಪಾತ್ರ ವಹಿಸಲು ಬಂದಿದ್ದರು. ಅಂದು ಕರ್ನಾಟಕದ ಕೋಗಿಲೆ ಎಂದು ಹೆಸರಾಗಿದ್ದ ಅಮೀರ್ ಬಾಯ್ ಕರ್ನಾಟಕೀ ಅವರಿಗೂ ಪ್ರಮುಖ ಪಾತ್ರವನ್ನು ಕೊಡಲಾಗಿತ್ತು.

ನನ್ನ ಅಕ್ಕ ಪಾರ್ವತಮ್ಮನೂ ಪಾತ್ರವನ್ನು ನಿರ್ವಹಿಸಲು ನನ್ನ ಜೊತೆಯಲ್ಲಿಯೇ ಬಂದಿದ್ದಳು. ಆರ್.ಎಸ್. ಮೂರ್ತಿ, ಶಾರದಾ ಮೊದಲಾದವರೂ ಇತರ ಪ್ರಮುಖ ಪಾತ್ರಗಳಿಗೆ ಗೊತ್ತಾಗಿದ್ದರು. ಸಂಗೀತ ನಿರ್ದೇಶನದ ಹೊಣೆಯನ್ನು ಶ್ರೀ ಎಚ್.ಕೆ. ಶೇಷಗಿರಿರಾಯರು ಹೊತ್ತಿದ್ದರು ಪುರೋಹಿತ್ ಎಂಬುವರು ಛಾಯಾಗ್ರಾಹಕರು. ಚಿತ್ರದ ಸೂತ್ರಧಾರರು ಕೆ.ಪಿ. ಭಾವೆ ಎಂಬುವರು. ಪುಣೆಯ ಸರಸ್ವತಿ ಸಿನಿಟೋನ್‌ನಲ್ಲಿ ಚಿತ್ರೀಕರಣವನ್ನು ನಡೆಸಲಾಯಿತು. ಯಾವ ತಂಟೆ ತಕರಾರೂ ಇಲ್ಲದೆ ಮೂರು-ನಾಲ್ಕು ತಿಂಗಳ ಅವಧಿಯಲ್ಲಿ ಚಿತ್ರ ನಿರ್ಮಾಣವಾಗಿ ಧಾರವಾಡದ ಬ್ಯಾಂಕು ಬೀದಿಯಲ್ಲಿದ್ದ ಮೋಹನ್ ಮತ್ತು ಕಂಪನಿಯ ಮುಖಾಂತರ ಬಿಡುಗಡೆಯಾಯಿತು. ಬೆಂಗಳೂರಿನ ಮೆಜೆಸ್ಟಿಕ್ ಚಿತ್ರಮಂದಿರದಲ್ಲಿ ಚಿತ್ರ ತೆರೆಕಂಡಿತು. (೧೯೩೭ರ ಜೂನ್ ತಿಂಗಳಲ್ಲಿ ಎಂದು ನನಗೆ ಜ್ಞಾಪಕ) ಚಿತ್ರವನ್ನು ಕನ್ನಡ ಕಲಾಭಿಮಾನಿಗಳು ಅಧಿಕ ಸಂಖ್ಯೆಯಲ್ಲಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಚಿತ್ರವನ್ನು ಸರ್.ಸಿ.ವಿ. ರಾಮನ್, ಸರ್. ಪುಟ್ಟಣ್ಣಚೆಟ್ಟಿ, ಕೆ. ಶಂಕರನಾರಾಯಣರಾವ್, ಶ್ರೀ ಸುಬ್ಬರಾಮಶೆಟ್ಟಿ, ಪ್ರೊ ಬಿ.ಎಂ. ಶ್ರೀಕಂಠಯ್ಯ, ಲೇಡಿ ಮಿರ್ಜಾ ಇಸ್ಮಾಯಿಲ್, ಲೇಡಿ ರಾಮನ್, ಲೇಡಿ ಪುಟ್ಟಣ್ಣ ಚೆಟ್ಟಿ ಮೊದಲಾದವರು ನೋಡಿದರು. ಚಿತ್ರವನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ಕರ್ನಾಟಕ ಟಾಕೀಜ್‌ನ ಪರವಾಗಿ ಒಂದು ಸ್ವರ್ಣಪದಕವನ್ನು ಕನ್ನಡದ ಕಣ್ವ ಬಿ.ಎಂ. ಶ್ರೀಕಂಠಯ್ಯನವರ ಅಮೃತ ಹಸ್ತದಿಂದ ನನಗೆ ಕೊಡಿಸಿದರು. ಈ ಚಿತ್ರದಿಂದ ನನಗೆ ಸಾಕಷ್ಟು ಹೆಸರು ಬಂದಿತ್ತು

★

ಚಿರಂಜೀವಿ ವಾಕ್ಚಿತ್ರದಲ್ಲಿ
ಶ್ರೀ ದೇವುಡು ನರಸಿಂಹಶಾಸ್ತ್ರಿಗಳು

ಡಾ|| ನಾಡಗೀರ ಕೃಷ್ಣ

ಧಾರವಾಡ, ಜಿಲ್ಲಾಕೇಂದ್ರವಾದರೂ ದೊಡ್ಡ ಊರೇನಿದ್ದಿಲ್ಲ. ೪-೬ ಪೇಟೆಗಳೇ ಮುಖ್ಯಭಾಗಗಳಾಗಿದ್ದವು. ೧೯೧೦-೨೦ರ ನಡುವೆ ಕಾಮನಕಟ್ಟೆಯ ಹತ್ತಿರ ನಾಟಕಕ್ಕಾಗಿ `ಗರಗ'ದವರ ಥಿಯೇಟರ್ ಒಂದಿತ್ತು. ನಂತರ ಆದಿತ್ಯವಾರ ಪೇಟೆಯ ಹತ್ತಿರ `ಬಟ್ಟೇಪಾಟಿ' ಅವರ ಥಿಯೇಟರ್ ಬಂದಿತು. ೧೯೨೦-೨೫ರ ನಡುವೆ ಅಕ್ಕಿಪೇಟೆಯ ಹತ್ತಿರ `ಗೋಪಾಲಗಿರಿ' ಅವರ ಅನ್ನಪೂರ್ಣ ಎಂಬ ಥಿಯೇಟರ ಬಂದಿತು. ಇವೆಲ್ಲ ನಾಟಕದ ಪ್ರಯೋಗಗಳಿಗಾಗಿಯೇ ಕಟ್ಟಿಸಿದವು. ಸಿನಿಮಾಗಳು ಬರತೊಡಗಿದಂತೆ `ಬಟ್ಟೇ ಪಾಟಿಯವರ' ಥಿಯೇಟರ್ `ರಾಮ ಸಿನೀಮಾ' ಎಂದು ಪರಿವರ್ತಿತವಾಯಿತು. ನಂತರ ೧೯೩೦-೩೧ರಲ್ಲಿ ಶ್ರೀ ಮುಧೋಳ್‌ಕರ್ ಬಂಧುಗಳು `ಅನ್ನಪೂರ್ಣ' ಥಿಯೇಟರ್ ಬಾಡಿಗೆಗೆ ಪಡೆದು `ವಿಜಯ' ಟಾಕಿಸ್ ಎಂದು ಸಿನೀಮಾ ಗೃಹವಾಯಿತು. ನಂತರಕ್ಕೆ ನಿಧಾನವಾಗಿ `ಲಕ್ಷ್ಮೀ' ಟಾಕೀಜ, ಶ್ರೀನಿವಾಸ-ಪದ್ಮಾ ಟಾಕೀಸ್‌ಗಳು `ಮಾಡರ್ನ' ರೀಗಲ್ ಟಾಕಿಸ್ ಮೊದಲಾದವು ಬಂದಿವೆ.

ಶ್ರೀ ಮುಧೋಳಕರ ಬಂಧುಗಳಲ್ಲಿ ಕಿರಿಯವರಾದ ವೆಂಕಟರಾಯರು ಬೆಳಗಾವಿಯಲ್ಲಿ `ರಿಝಾ' ಟಾಕೀಜ ಪ್ರಾರಂಭಿಸಿದರು. ಅವರ ಜೊತೆಗೆ ಕಲಾದೀಕರ ಎನ್ನುವರರು ಪಾಲುದಾರರಾಗಿ ಸಾಂಗಲೀ ಕರಾಡ್‌ಗಳಲ್ಲಿ ಟಾಕೀಜು ಪ್ರಾರಂಭ ಮಾಡಿದರು. ಶ್ರೀ ಮುಧೋಳಕರ ಬಾಬೂರಾಯರು (ಹಿರಿಯವರು) ಧಾರವಾಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಮುಖ್ಯ `ಟಾಕೀಸ್'ಗಳ ಒಂದು ಸಂಸ್ಥೆ ಮಾಡಿ ಅದಕ್ಕೆ ಕರ್ನಾಟಕ ಟಾಕೀಸ್ ಎಂದು ನಾಮಕರಣ ಮಾಡಿ, ಈ ಪ್ರದೇಶದ ಟಾಕೀಸ್‌ಗಳಲ್ಲಿ ಚಿತ್ರಪ್ರದರ್ಶನ ನಿಯಂತ್ರಕರ ಹೊಂದಾಣಿಕೆಯ ಬಗ್ಗೆ ಸಮನ್ವಯ ಮಾಡಲು ಒಂದು ಕಾರ್ಯಕಾರೀಮಂಡಲ ನಿರ್ಮಿಸಿದರು. ಅದರಲ್ಲಿ ಮುಧೋಳ್‌ಕರ ಬಂಧುಗಳು ಹುಬ್ಬಳ್ಳಿಯ ಡೀಕಪ್ಪ, ಬೆಳಗಾವಿಯ ಕರಂದ್ಕೀರ್ ಪಂಡಿತ್ ತಾರಾನಾಥ ಹಾಗೂ ಆರ್.ಆರ್. ರಾವ್ ಎನ್ನುವವರು ಸೇರಿದ್ದರು. ಆಗ ಕರ್ನಾಟಕ ಟಾಕೀಜದವರು ಒಂದು ಕನ್ನಡದ ಚಿತ್ರ ತೆಗೆಯಬೇಕೆಂದು ವಿಚಾರ ಮಾಡಿದರು. ಪಂಡಿತ್ ತಾರಾನಾಥರು, ಗುಂಜೀಕರ ದೀರೇಂದ್ರರವರು. `ಕಬೀರ ದಾಸ' ಎಂಬ ಚಿತ್ರ ತೆಗೆಯಬೇಕೆಂದು ಸೂಚಿಸಿದರು. ಆದರೆ ಅದು ಕಾರಣಾಂತರದಿಂದ ಆಗದೇ ಹೋಯಿತು.

ಶ್ರೀ ಆರ್.ಆರ್. ರಾವ್ ಎನ್ನುವವರು ಬೆಂಗಳೂರಿಗೆ ಹೋಗಿ ಸಾಹಿತಿಗಳೂ ಸಂಸ್ಕೃತ ಪಂಡಿತರೂ ಆದ ಶ್ರೀ ದೇವುಡು ನರಸಿಂಹಶಾಸ್ತ್ರಿಗಳನ್ನು ವಿಚಾರಿಸಿ `ಮಾರ್ಕಂಡೇಯ ಎಂಬ ಚಿತ್ರದ ಚಿತ್ರೀಕರಣಕ್ಕೆ ಒಪ್ಪಿಗೆ ಪಡೆದರು. ನಂತರ ಅದರ ಕಥೆ, ಸಂಭಾಷಣೆ, ಸೀನುಗಳನ್ನು ಬರೆಯಲು, ಶ್ರೀ ದೇವುಡುರವರಿಗೇ ಬಿನ್ನವಿಸಿಕೊಂಡರು. ಅದಕ್ಕೆ ಒಪ್ಪಿಗೆಯಾಗಿ ಧಾರವಾಡದಲ್ಲಿ ಬಂದು ಒಂದೆರಡು ತಿಂಗಳು ವಾಸಮಾಡಿ ಬರೆಯಲು ಸಿದ್ಧರಾದರು. ಆ ಹೊತ್ತಿಗೆ ಅವರ `ಮಯೂರ ಕಾದಂಬರಿ'

ಪ್ರಸಿದ್ಧಿಯಾಗಿ ಕಾಲೇಜಿನಲ್ಲಿ ಪಠ್ಯವೂ ಆಗಿತ್ತು. ಅವರ ವಾಸ್ತವಕ್ಕೆ ಧಾರವಾಡದ ರೇಲ್ವೆ ಬಂಗಲೆಯಲ್ಲಿ (Guard Home) ಈಗಿನ ಅಕಾಶವಾಣಿಯ ಹತ್ತಿರ ಬಾಡಿಗೆ ಪಡೆದು ವ್ಯವಸ್ಥೆ ಮಾಡಲಾಯಿತು. ಶ್ರೀ ದೇವುಡುರವರು ಅದರ ಕತೆ ಪಾತ್ರಗಳು ಇವನ್ನು ಬರೆದು ತಿಳಿಸಿ. ಬೇಕಾದ ಪಾತ್ರಗಳಿಗೆ ವ್ಯಕ್ತಿಗಳನ್ನು ಆರಿಸ ಹೇಳಿದರು. ಮತ್ತು ತಾವೇ ಮೃಕಂಡು ಮುನಿಯ ಪಾತ್ರ ಮಾಡುವುದಾಗಿ ತಿಳಿಸಿ, ಶ್ರೀಮತಿ ಮಳವಳ್ಳಿ ಸುಂದರಮ್ಮನವರಿಗೆ ಮುನಿಪತ್ನಿಯಾಗಿ ಆಹ್ವಾನಿಸಲು ತಿಳಿಸಿದರು. ಉತ್ತರ ಕರ್ನಾಟಕದ ಈ ಪ್ರಯತ್ನಕ್ಕೆ ಇಲ್ಲಿಯವರನ್ನೇ ಕೆಲವರನ್ನು ಆರಿಸಲು ಶ್ರೀ ಮುಧೋಳಕರರು ತಮ್ಮ ಕೆಲವು ಹೆಸರಿನ ಸೂಚನೆ ಇಟ್ಟರು. ಅದರಲ್ಲಿ ಒಳ್ಳೇ ಸಾಹಿತಿ-ಬರೆಹಗಾರ, ವಕ್ತಾರ ಮತ್ತು ರಾಜಕೀಯ ಹಿರಿಯ ಎಂದು ಪ್ರಸಿದ್ಧರಾದ ಮುದವೀಡು ಕೃಷ್ಣರಾಯರು ಮೊದಲಿನವರು. ನಂತರ ಚೆನ್ನಾಗಿ ಹಾಡಬಲ್ಲವರನ್ನು ನಾಟಕದ ಅನುಭವವಿದ್ದ ಮನಸೂರ ಬಸವರಾಜರು ಮುಂದಾದರು. ಅವರು ಮಲ್ಲಿಕಾರ್ಜುನ ಮನಸೂರ ಅವರ ಅಣ್ಣಂದಿರು. ಅವರನ್ನು ನಾರದನ ಪಾತ್ರಕ್ಕೆ ಆಯ್ಕೆ ಮಾಡಿದರು.

ಚಿರಂಜೀವಿಯ ಪಾತ್ರಕ್ಕೆ ಮಂಗಳೂರಿನ ಕು. ನಾರಾಯಣ್, ಶಿವನಾಗಲು ಆರ್.ಎಸ್. ಮೂರ್ತಿ, ಹಾಗೂ ಕೆಲವು ಹೆಣ್ಣು ಪಾತ್ರಗಳಿಗಾಗಿ ಅಮೀರಬಾಯಿ ಕರ್ನಾಟಕಿ ಹಾಗೂ ಹಾನಗಲ್ ಶಾರದಾಗಂಗೂ ಮೊದಲಾದವರನ್ನು ಆರಿಸಲಾಯಿತು.

ಮುಧೋಳಕರ ವೆಂಕಟರಾವ್ ಮತ್ತು ಕರಂಬೇಕರ್ ಅವರು ಪುಣೆಯ ಸರಸ್ವತಿ ಸೀನೇಟೋನ್ ಕಂಪನಿಯವರನ್ನು ಭೇಟಿ ಮಾಡಿ ಅಲ್ಲಿಯೇ ಚಿತ್ರೀಕರಣ ನಡೆಯಬೇಕೆಂದು ಹೊಂದಿಸಿದರು. ಮತ್ತು ಅಲ್ಲಿಯ ಶ್ರೀ ಭಾವೇ ಎನ್ನುವವರನ್ನು ಚಿತ್ರದ ಡೈರೆಕ್ಟರ್ ಎಂದು ಒಪ್ಪಿಸಿ ಕಥೆ ಹಾಗೂ ಸಂಭಾಷಣೆ ಸೀನರಿ ಇವುಗಳ ಇಂಗ್ಲಿಷ್ ಅನುವಾದ ಕೊಟ್ಟರು.

ಹೀಗೆ ಚಿತ್ರೀಕರಣ ೧೯೩೬ರಲ್ಲಿ ಪ್ರಾರಂಭವಾಯಿತು. ಪಾತ್ರಗಳು ಉಳಿದುಕೊಳ್ಳಲು ಪುಣೆಯ ಹೊರವಲಯದಲ್ಲಿ ಒಂದು ಬಂಗ್ಲೆ ಬಾಡಿಗೆಗೆ ತೆಗೆದು ಅಲ್ಲಿ ಪಾತ್ರವರ್ಗದವರಿಗೆ ಉಳಿಯುವುದಕ್ಕೂ ಊಟ ಉಪಚಾರಕ್ಕೂ ವ್ಯವಸ್ಥೆ ಮಾಡಲಾಯಿತು. ಶ್ರೀ ಮುದವೀಡು ಕೃಷ್ಣರಾಯರು ಆಗಾಗ ತಮ್ಮ ಕೆಲಸಕ್ಕೆಂದು ಬೊಂಬಾಯಿಗೆ ಹೋಗಿಬರುತ್ತಿದ್ದರು. ಮುಧೋಳಕರ ಅವರಿಗೆ ಸರಸ್ವತಿ ಸಿನೀಟೋನ್ ಹಾಗೂ ಭಾವೇರವರನ್ನು ನೋಡುವ ಇಚ್ಛೆ ತೋರಿಸಿದಾಗ ಅವರನ್ನು ಒಮ್ಮೆ ಪುಣೆಯಲ್ಲಿ ಇಳಿಸಿಕೊಂಡು ಕರೆದೊಯ್ದು. ಅವರನ್ನು ಚಿತ್ರದ ಯಮರಾಗುವವರೆಂದು ಪರಿಚಯ ಮಾಡಿದರು. ಆಗ ಭಾವೆಯವರು ಅವರು ಚಿತ್ರಗುಪ್ತನ ಪಾತ್ರ ಮಾಡಬೇಕೆಂದು ಬೇರೆ ಒಬ್ಬ ಮೈಕೈ ತುಂಬಿದ ಯುವಕನನ್ನು ಯಮನನ್ನಾಗಿ ಆರಿಸಬೇಕೆಂದೂ ಸೂಚನೆ ಇತ್ತರು.

ಶ್ರೀ ಬಾಬೂರಾಯರು ತಿರುಗಿ ಧಾರವಾಡಕ್ಕೆ ಬಂದು, ಯಮನ ಪಾತ್ರದ ಬಗ್ಗೆ ಯೋಚಿಸುತ್ತ ತಮ್ಮಲ್ಲಿ ಲೆಕ್ಕ ಬರೆಯುತ್ತಿದ್ದ ಅಲೂರ ಅವರಿಗೆ ಈ ವಿಚಾರ ತಿಳಿಸಿದರು. ಶ್ರೀ ಆಲೂರ ಅವರು ಧಾರವಾಡದವರು ಊರಲ್ಲಿ ಒಂದು ಮನೆಮಾಡಿ ಸಂಸಾರದೊಂದಿಗೆ ಇದ್ದರು. ಅವರ ಮಿತ್ರ ಹೊಸೂರು ಹನುಮಂತರಾಯ. ಅವರು ಕಾಂಗ್ರೆಸ್ ಕಮೀಟಿಯಲ್ಲಿ ಕೆಲಸಕ್ಕಿದ್ದರು. ಅಲ್ಲಿ ಮರು

ದಿನ ಆಲೂರ್ ಅವರು ಹೊಸೂರ ಅವರನ್ನು ಭೆಟ್ಟಿಯಾಗಿ ಅವರ ಮುಂದೆ ಯಮನ ಪಾತ್ರದ ವಿಚಾರ ಇಟ್ಟು `ನಾಡಿಗೇರ ಕೃಷ್ಣನ್ನ ಕೇಳಿದರ ಹ್ಯಾಂಗ್ಯ" ಅಂದರು. ಅದಕ್ಕೆ ಹೊಸೂರ ಅವರು `ಏ ಅರ್ಭಾಟ್ ಆಗ್ತದ. ಅದಕ್ಯಾಕ್ ಕಾಳಜೀ ಮಾಡ್ತೀ. ಅವಗs ಹೂಂ ಅನ್ನೂಣ. ನಾಳೆ ಸಂಜಿಕ ಐದೂವರೆ ಗಂಟೆಕ್ಕ ಬಾ ಇಲ್ಲೆ. ವ್ಯಾಯಾಮ ಶಾಲಕ್ಕ ಹೋಗೋಣ. ಅವನು ಹೇಳಿ ಹೂ ಅನ್ನೋಣ" ಎಂದು ಹೇಳಿದರು, ಅದರ ಪ್ರಕಾರ ಮರುದಿನ ಆಲೂರ ಬಂದು ರಾಯರು ಹೊಸೂರನ್ನು ಮಂತಾಚಾರ್ಯರು, ಆಗ ವಿಕ್ಟೋರಿಯಾ ಹೈಸ್ಕೂಲಿನಲ್ಲಿದ್ದ ಮಲ್ಲಸಜ್ಜನ ವ್ಯಾಯಾಮ ಶಾಲೆಗೆ ಬಂದರು ಆಗ ಸಂಜೆ ೬ ಗಂಟೆಗೆ ವ್ಯಾಯಾಮದ ವರ್ಗ ನಡೆದಿತ್ತು. ಅದನ್ನು ನಾಡಗೀರ ಕೃಷ್ಣನೇ ತೆಗೆದು ಕೊಳ್ಳುತ್ತಿದ್ದ. ಇವರು ಬಂದಿದ್ದನ್ನು ಕೃಷ್ಣ ನೋಡಿದರು. ವರ್ಗ ಮುಗಿದ ನಂತರ ಇವರ ಕಡೆಗೆ ಬಂದ ಆಗ ಶ್ರೀ ಹೊಸೂರರು `ಬಾ, ನಾವು ನಿನ್ನ ಕಡಿಗೇ ಒಂದು ಕೆಲಸಕ್ಕೆ ಬಂದೇವಿ, ಕೂಡು" ಎಂದು ಹತ್ತಿರ ಕೂಡಿಸಿಕೊಂಡರು.

"ನಿನಗ ಸಿನೀಮಾ ಎಷ್ಟು ಸೇರುತ್ತದೆಯೋ ಗೊತ್ತಿಲ್ಲ" ಎಂದು ಪ್ರಾರಂಭಿಸಿದವರು ಆಲೂರ ಅವರು. "ಯಾವುದಾದರೂ ಒಳ್ಳೇ ಪಿಕ್ಚರ್ ಇದ್ದು ಮಿತ್ರರು ಹೋಗೋಣ ಎಂದರೆ ಅವರೊಡನೆ ಹೋಗುತ್ತೇನೆ-ನೋಡುತ್ತೇನೆ. ಆದರೆ ಅದರ ಚಟ ಇಲ್ಲ" ಎಂದು ನಾಡಗೀರ ಉತ್ತರಿಸಿದ.

"ಅದಿರಲಿ. ಸಿನೀಮಾದೊಳಗ ಪಾತ್ರ ಮಾಡುವ ಸಂದರ್ಭ ಬಂದರ ಅದರೊಳಗ ಪಾರ್ಟ ಮಾಡಬಹುದಲ್ಲ. ಹ್ಯಾಂಗೂ ಬೇಂದ್ರೆ ಮಾಸ್ತರು, ನಿನ್ನ ಕಡೀಂದ ಪೋಲಿಕಿಟ್ಟಿ ಸಾಲೀಒಳಗ ಮಾಡಿಸ್ಯಾರ. ಮುಂದ ಮುದವೀಡಕರ ಕೃಷ್ಣರಾಯರು ಕಂಠೀರವನ ಪಾತ್ರ ಮಾಡಿಸ್ಯಾರ-ಮತ್ತು ನೋಡಲಿಕ್ಕಾ ಗಟ್ಟಿಮುಟ್ಟಗಿದ್ದೀ ಅದಕ್ಕಾ ದೇವತೆಯ ಪಾತ್ರ ಮಾಡಬಹುದಲ್ಲ" ಹೊಸೂರ ಅಂದರು.

`ಅದೇನು ಬಿಡಿಸಿ ಹೇಳ್ರಿ-ಹೊಗಳೋದು ಏನು ಬಂತು' ಅಂದ ಕೃಷ್ಣ-"ಇಲ್ಲಿ ನೋಡು ಇಲ್ಲಿಯ ಮುಧೋಳಕರ ಬಂಧುಗಳು ಒಂದು ಪೌರಾಣಿಕ-ಚಿತ್ರ ಆರಿಸಿ-ಬರೆಸಿಸಿ, ಅದನ್ನ ಚಿತ್ರೀಕರಣ ಪ್ರಾರಂಭ ಮಾಡ್ಯಾರ. ಅದರೊಳಗ ಯಮನ ಪಾತ್ರ ಅದ, ಅದನ್ನ ಮುದವೇಡಕರ ಕೃಷ್ಣರಾಯರು ಮಾಡಬೇಕಿತ್ತು. ಆದರೆ ಡಾಯರೆಕ್ಟರು ಅವರಿಗೆ ಚಿತ್ರಗುಪ್ತನ ಪಾರ್ಟು ಕೊಟ್ಟು ಯಮನ ಪಾತ್ರಕ್ಕೆ ನಿನ್ನಂಥವನೊಬ್ಬನ್ನ ಆರಿಸಿ ಕರಕೊಂಡ ಬರಲಿಕ್ಕ ಹೇಳ್ಯಾರ "ಎಂದು ಮುಂದುವರಿಸಿದರು." ಅದಕ್ಕೆ ನಮಗ ಥಟ್ಟನ ಹೊಳೆದ ವಿಚಾರ ನಿಂದು. ನಿನ್ನ ಕೇಳಿಕೊಂಡು ಬರಲಿಕ್ಕೆ ಹೇಳ್ಯಾರ. ಬಾಬೂರವರು-ನೀ ಹೂಂ ಅನ್ನು"

"ಹೌದಲೇ ಡಾಯರೆಕ್ಟರ್ ಒಂದು ಒಪ್ಪಬೇಕಲ್ಲ" ಎಂದು ಕೃಷ್ಣ ಕೇಳಿದ. "ಈಗ ಅದಕ್ಕಾ ಬಂದದ್ದು. ನಿನ್ನ ಪುಣೇಕ್ಕ ಕರಕೊಂಡು ಹೋಗಿ. ಡಾಯರೆಕ್ಟರ್ ಅವರಿಗೆ ಭೆಟ್ಟಿ ಮಾಡಿಸಿ ಅವರ ಒಪ್ಪಿಗಿ ಪಡೀಲಿಕ್ಕೆ ಆಲೂರ ನಿನ್ನ ಕರಕೊಂಡು ಹೋಗ್ತಾರ-ಹೋಗಿ ಬಾ, ನಿನಗೂ ಒಂದು ಅನು ಭವ ಬರ್ತದ" ಎಂದು ನುಡಿದರು ಹೊಸೂರ ಅವರು.

೨-೩ದಿನ ಬಿಟ್ಟು ಆಲೂರ ಅವರು ನಾಡಗೀರನನ್ನು ಪುಣೆಗೆ ಕರೆದೊಯ್ದರು. ಪುಣೆಯಲ್ಲಿ ಬಡಾವಣೆಯೊಂದರಲ್ಲಿ ಒಂದು ದೊಡ್ಡ ಬಂಗಲೆಯನ್ನು ಬಾಡಿಗೆ ತೆಗೆದು ಅದರಲ್ಲಿ ಇರಲು ನಟ

ರಿಗೆ ವ್ಯವಸ್ಥೆ ಮಾಡಿದ್ದರು. ಫಿಲ್ಮು ಚಿತ್ರೀಕರಣವೂ ಪ್ರಾರಂಭವಾಗಿತ್ತು. ಶ್ರೀ ದೇವುಡು, ಚಿ. ನಾರಾಯಣ್, ಮೂರ್ತಿ, ಪಾರ್ವತಿ, ಸುಂದರಮ್ಮ ಬಂದು ಅಲ್ಲಿಯೇ ಇದ್ದರು.

ಆಲೂರ ಮತ್ತು ನಾಡಗೀರ ಇಬ್ಬರೂ ಉಪಹಾರ ಮುಗಿಸಿ ಸರಸ್ವತಿ ಸಿನೀಟೋನಿಗೆ ಹೋಗಲು ಸಿದ್ಧರಾದರು. ಆ ಮೊದಲು ಕಥೆ, ಸಂವಾದ, ಹಾಡು ಬರೆದ ಶ್ರೀ ದೇವುಡು ಅವರಿಗೆ ನಾಡಗೀರ ಅವರನ್ನು ಆಲೂರ ಪರಿಚಯಿಸಿ ಯಮನ ಪಾತ್ರಕ್ಕೆ ತೋರಿಸಲು ಕರೆತಂದಿರುವುದಾಗಿ ಹೇಳಿದರು. ಅದಕ್ಕೆ ಶಾಸ್ತ್ರಿಗಳು "ಅಯ್ಯೋ', ತುಂಬಾ ಚನ್ನಾಗಿದ್ದಾರಪ್ಪ, ಭಾವೆ ಇವರನ್ನ ಒಪ್ಪದೇ ಇರ್ತಾರೆಯೇ ಒಳ್ಳೇದಾಗಲಿ. ಹೋಗಿಬಿಟ್‌ಬನ್ನಿ' ಎಂದು ಆಶೀರ್ವದಿಸುತ್ತ ಹೇಳಿದರು. ದೇವುಡು ಅವರನ್ನು ನೋಡುವ ಸಂದರ್ಭ ಒದಗಿದ್ದು ನಾಡಗೀರನಿಗೆ ಅದೇ ಮೊದಲು. ಅವರ ವ್ಯಕ್ತಿತ್ವದಿಂದ ಪ್ರಭಾವಿತನಾದ.

ಒಂದು ಅರ್ಧಗಂಟೆಯೊಳಗೆ ಸಿನೀಟೋನಿಗೆ ಬಂದರು ಇಳಿದು ಸ್ಟುಡಿಯೋನಲ್ಲಿ ಹೋಗಿ ವಿಚಾರಿಸಿದಾಗ ಭಾವೆ ಅವರು ಇನ್ನು ಬಂದಿರಲಿಲ್ಲ. ಚಿತ್ರಗ್ರಾಹಕ `ಈಗ ಬರಬಹುದು. ಕೂತಿರಿ' ಎಂದ. ಆಗ ಆಲೂರ ಕೃಷ್ಣನನ್ನು ಹೊರಗೆ ಕರೆದೊಯ್ದು. ಅಲ್ಲಲ್ಲಿ ಷೂಟಿಂಗ್‌ಗಾಗಿ ಇರುವ ಸೆಟ್ ಮತ್ತು ಪರಿಸರ ತೋರಿಸಿಕೊಂಡು ಬರುವ ಹೊತ್ತಿಗೆ ಸರಿಯಾಗಿ ದಿಗ್ದರ್ಶಕರೂ ಬಂದರು. ಆಲೂರ ನಾಡಗೀರನನ್ನು ಪರಿಚಯಿಸಿ ಬಾಬೂರಾಯರು, ಯಮನ ಪಾತ್ರಕ್ಕೆ ತೋರಿಸಿಕೊಂಡು ಬರಲು ಹೇಳಿದ್ದಾರೆ ಎಂದು ತಿಳಿಸಿದರು. ಅದಕ್ಕೆ ಅವರು `ಬರ ಝಾಲ ಬಸಾ' ಎಂದು ಹೇಳಿ, Photographerನಿಗೆ `ಹೇ ಮೇಕ ಅಪ್ ಚಾಲೋಕ ಕುಠ ಆಹೇ ಬುಲವಾ' ಎಂದರು. ಅವರು ಬಂದಾಗ ಅವರಿಗೆ ಕೃಷ್ಣನನ್ನು ತೋರಿಸಿ `ಹ್ಯಾನಾ ಯಮ್ ಚಾ ಮೇಕ್ ಅಪ್ ಕರಾ' ಎಂದು ಹೇಳಿದರು. ಆಗ ನನ್ನನ್ನು ಆ ವೇಷದಲ್ಲಿ ನೋಡಿ ಆಲೂರ ನಗತೊಡಗಿದ. ಭಾವೆ ಅವರು. `ಛಾನ ದಿಸತ್ ಆಹೇತ್' ಅಂದು Photographerನಿಗೆ Focus ಮಾಡ ಹೇಳಿದರು. ನಾಡಗೀರನಿಂದ ಬೇರೆ ಬೇರೆ ಮುಖಭಾವನೆ ಮಾಡಿಸಿ. ೩-೪ ಭಂಗಿಗಳಲ್ಲಿ ನಿಲ್ಲಹೇಳಿ Still Photograph ತಗಿಸಿದರು.

ಅರ್ಧ ಗಂಟೆ ಆಗುವುದರಲ್ಲಿ Photographer Print ತಂದು ತೋರಿಸಿದ. ಅವನ್ನು ನೋಡಿ. `ಕಾಹೀ ಹರಕತ್ ನಾಹೀ ಬರ ಆಹೇ. ಮುಧೋಳಕರಾನಾ ಕಳವಾ. ಹೇ ಯಮ್ ಹೋವುದೇ ಆಣೆ. ಶ್ರೀ ಮುಗವೇಡಕರಾನಿ ಚಿತ್ರಗುಪ್ತ ಹೋವುದೇ `ನಮಸ್ಕಾರ' ಎಂದು ಬೀಳ್ಕೊಟ್ಟರು. ಮತ್ತೆ ಮರಳಿ ಬಂಗಲೆಗೆ ಬಂದೆವು.

ಅಂದೇ ರಾತ್ರಿ ಒಂದು ಷೂಟಿಂಗ್ ಆಗುವುದಿತ್ತು. ಅದು ಮೃಕಂಡು ಮುನಿ-ಪತ್ನಿ ಮರುದ್ವತಿಯರ ಸಂವಾದ, ಮಗ ಚಿರಂಜೀವಿಯ ಬಗ್ಗೆ. ಅದನ್ನು ನೋಡುವ ಕುತೂಹಲ ನಾಡಗೀರನಿಗೆ, ಆದ್ದರಿಂದ ಆಲೂರನಿಗೆ ಹೇಳಿದ `ನೋಡಪಾ ನಿನ್ನ ಕೆಲಸ ಆದ್ಹಂಗ ಆತು, ಮತ್ತ Film Shooting ಹ್ಯಾಂಗ ಮಾಡ್ತಾರ ತೋರಸ್ಯಾರ ತೊರ್ಸಲಾ ನನಗ. ಬಿಂದೂರಾಯ `ಇವತ್ತs ಅದ ಹೋಗೋಣು ರಾತ್ರಿ' ಸಾಯಂಕಾಲವಿಡೀ ಪೇಟೆಯಲ್ಲಿ ಸುತ್ತಾಡಿಕೊಂಡು ಬಂದರು. ರಾತ್ರಿಯ ಊಟವಾದ ಮೇಲೆ

ಅಂದಿನ Scene ನಲ್ಲಿಯ ಪಾತ್ರವರ್ಗದವ Trip ಆಯಿತು. ಎರಡನೇ ಟ್ರಿಪ್ಪು ಉಳಿದವರು ಹೋಗ ಬೇಕಿತ್ತು. ಅಷ್ಟರಲ್ಲಿ ಶ್ರೀ ಮುಧೋಳಕರ ಬಾಬೂರಾಯರು ಮತ್ತು ಸತ್ಯಜ್ಞಾನ ಗುಡಿ ಇಬ್ಬರೂ ಧಾರವಾಡದಿಂದ ಬಂದಿಳಿದರು. ಎಲ್ಲರೂ ಕೂಡಿ ಸಿನೀಟೋನಿಗೆ ಹೊರಟರು.

ಸಾಮಾನ್ಯವಾಗಿ ರಾತ್ರಿಯಲ್ಲಿಯೇ ಷೂಟಿಂಗ್ ನಡೆಯುತ್ತಿತ್ತು. ಅಂದಿನ ಪಾತ್ರಗಳು ಮೇಕಪ್ ಮಾಡಿಸಿಕೊಂಡು ಸಿದ್ಧರಾಗಿದ್ದರು. ಗುಡಿ ಸತ್ಯಜ್ಞಾನ ನಮ್ಮ ಮನೆಯ ಹಿಂದಿನ ಓಣಿಯವ ನಾಡಗೀರಗಿಂತ ಕೊಂಚ ಹಿರಿಯ ಇಬ್ಬರೂ ಒಂದೇ ಶಾಲೆಯಲ್ಲಿ ಕಲಿತವರು. ಒಳ್ಳೇ ಎತ್ತರ ತೆಳುವಾದ ಮೈಕಟ್ಟು. ಖಾದೀ ವಸ್ತ್ರಧಾರಿ. ವಾಚಾಳಿ ಚೇಷ್ಟೆ ಚೋರ. ಜನರ ಅನುಕರಣೆ ಮಾಡಿ ಗೇಲಿ ಮಾಡುತ್ತಿದ್ದ. ಕಾರಾಣಾಂತರದಿಂದ ಶ್ರೀ ಮುಧೋಳಕರರ ಪರಿಚಯವಾಗಿ ಸಲಿಗೆ ಬೆಳೆದಿತ್ತು. ಅವರಿಗೆ ಅವನ ಚೇಷ್ಟೆ ಬಹಳ ಹಿಡಿಸುತ್ತಿತ್ತು. ಹೀಗಾಗಿ ಹತ್ತಿರದವನಾಗಿದ್ದ ಚಿತ್ರಪಟ ಶುರು ಆದಾಗಿನಿಂದ ಆಗಾಗ ಅವರೊಡನೆ ಪುಣೆಗೆ ಬರುತ್ತಿದ್ದ. ಎಲ್ಲರೊಡನೆ ಚೇಷ್ಟೆಯ ಮಾತಾಡುತ್ತಾ ಬೇಕಾದವನಾಗಿದ್ದ.

"ಯಾಕೋ ಕೃಷ್ಣಾ ನೀ ಇಲ್ಲೆ!' ಅಂದು ತಾನೇ ಉತ್ತರಿಸುವವನಂತೆ `ನನಗ ಬಾಬೂರಾಯರು ಎಲ್ಲಾ ಹೇಳ್ಯಾರ. ಛಲೋ ಆತು ಬಿಡು. ನಮ್ಮ ಓಣಿಯವ ಒಬ್ಬನನ್ನ ಚಿತ್ರದೊಳಗ ನೋಡೋ ಹಾಂಗ ಆತು' ಅಂದ ಬಾಬೂರಾಯರು "ನೀವಿಬ್ಬರೂ ಅದ ಪ್ಯಾಟೀ ಅವರೇನು?" ಎಂದು ಕೇಳಿದರು. ಗುಡಿ-"ಪ್ಯಾಟಿ ಯಾಕ್ರಿ ಅದ ಓಣೆಯವರು. ಬೆಂಗಳೂರಿಗೆ ಹೋಗಿ ವ್ಯಾಯಾಮ ಕಲಿತು-ಅಯ್ಯರ್ ಅವರ ಹತ್ತಿರ ಇದ್ದು ಧಾರವಾಡದ ಮಲ್ಲಸಜ್ಜನ ವ್ಯಾಯಾಮ ಶಾಲಾ ನಡಸ್ತಾನ. ನೋಡಿ, ಹ್ಯಾಂಗ್ ಇದ್ದಾನ, ನೀವು ಛಲೋ ಆಸಾಮೀನ್ನ ಆರಿಸ್ತೀರಿ. ಅತ್ಲಾಗ ಮುದವೀಡ ಕೃಷ್ಣರಾಯರು ಇತ್ಲಾಗ ನಾಡಗೀರ ಕೃಷ್ಣ ನಿಮ್ಮ ಮನಸ್ಸೂರ ಬಸವರಾಜರು. ಅಮೀರ ಬಾಯಿ, ಮೈಸೂರ ಕಡೀಂದ ಬರದು ಕಥೀ ಬಂದು ಸಂವಾದ ಹಾಡೂ ಒದಗಿಸಿ ಪಾರ್ಟ್ ಮಾಡೊ ಖ್ಯಾತ ಸಾಹಿತಿ ದೇವುಡು ಅವರು. ಒಳ್ಳೇ ನಟಿ, ಸುಂದರಮ್ಮ, ಮಂಗಳೂರ ಕಡೀಂದ ಕುಮಾರ ನಾರಾಯಣ್-ಮೂರ್ತಿ, ಇದು ಖರೇ ಅಖಿಲ ಕರ್ನಾಟಕ ಪಿಕ್ಚರ್, Picture ಫಸ್ಟ್ ಕ್ಲಾಸ್ ಆಗ್ತದ ತಗೊಳ್ರಿ," ಇವತ್ತು ಪಿಚ್ಚರ್ ಷೂಟಿಂಗ್‌ಗೆ ಬಂದೇವಿ ನಡೀರಿ ಹೊರಡೋಣ" ಅಂದು ಹುರಿದುಂಬಿಸಿದರು.

ಎಲ್ಲರೂ ಸಿನೀಟೋನ್‌ಗೆ ಬಂದೆವು. ಅಲ್ಲಿ ಶಾಸ್ತ್ರಿಗಳು ಸುಂದರಮ್ಮ, ನಾರಾಯಣ್ ಎಲ್ಲರೂ ಮೇಕ್ ಅಪ್ ಮಾಡಿಸಿಕೊಂಡು ತಯಾರು ಆಗಿದ್ರು. ಡಾಯರೆಕ್ಟರ ಭಾವೆ ಅವರು-"ಕಾಯ್ ಮುಧೋಳಕರ ಕೆವ್ಹಾ ಅಲಾ ತುಮ್ಹೀ-ಯಾ, ನೇರ ಝಾಲ, ಬಸಾ" ಎಂದು ಹೇಳಿ ತಮ್ಮ ಸಿದ್ಧತೆಗೆ Cameraman-Sound Recordist, Light Controller ಮೊದಲಾದವರಿಗೆ ಸಲಹೆ ನೀಡಿ ಮೃಕಂಡು ಮರುದ್ವತಿಯ ಸಂವಾದಕ್ಕೆ ಅವರನ್ನು ಯೋಗ್ಯ ಭಂಗಿಯಲ್ಲಿ ಕೂಡಿಸಿ. ನಿಲ್ಲಿಸಿ ಸಂಭಾಷಣೆ ಜ್ಞಾಪಿಸಿಕೊಳ್ಳಲು ಹೇಳಿದರು.

ಎಲ್ಲರೂ ಸಿದ್ಧರಾಗಲು ೧೫-೨೦ ನಿಮಿಷಗಳೇ ಬೇಕಾದವು. ಆಗ ಎಲ್ಲರಿಗೂ ರೆಡೀ ಹೇಳಿ ಭಾವೆ ಅವರು "Sile....nce ಎಂದು ಕೂಗಿಕೊಂಡರು. Camera-sound Ready-Lights"

ಅಂದರು ಝಗ್ ಎಂದು ದೀಪಗಳು ಹತ್ತಿಕೊಂಡವು "Clapper-clap" ಎಂದು ಆಜ್ಞೆಯಾಯಿತು.

ಮೃಕಂಡು-ಮರುದ್ವತಿಯರು ಮಗನ ಅಲ್ಪಾಯುಷ್ಯ. ಅದಕ್ಕೆ ಪರಿಹಾರ-ಇವುಗಳ ಸಂವಾದ ಪ್ರಾರಂಭವಾಯಿತು. ನಡ ನಡುವೆ ಕಟ್, ಕಟ್ ಎಂದು ನಿಲ್ಲುಸುವಿಕೆ. ರೀಟೇಕ್ ಇವೆಲ್ಲ ನಡೆದು. ಆ ಸೀನ್ ಮುಗಿಯಿತು. ಆ ಹೊತ್ತಿಗೆ ರಾತ್ರಿ ೨ ಗಂಟೆ.

ನಂತರ ಪಾತ್ರದವರು Makeup ತೆಗೆಸಿಕೊಂಡು ಹೋಗುವುದಕ್ಕೆ ಸಿದ್ಧರಾಗಲು ೩-೪ ಗಂಟೆ. ಅವರೆಲ್ಲ ಒಂದನೇ ಟ್ರಿಪ್‌ನಲ್ಲಿ ಬಂಗಲೆಗೆ ತೆರಳಿದರು. ೨ನೇ ಟ್ರಿಪ್‌ನಲ್ಲಿ ನಾವುಗಳೆಲ್ಲಾ ಕಾರಿನಲ್ಲಿ ಕುಳಿತು ಹೊರಟೆವು. ಆಗ ಸತ್ಯಜ್ಞಾನ "ಬಾಬೂರಾವ್! ಯಾಕೋ ಇವತ್ತ ಶಾಸ್ತ್ರಿಗಳು ಮೂಡಿನ್ಯಾಗ ಇದ್ದಾಂಗ ಕಾಣಿಸಲಿಲ್ರೆಪಾ, ಮರುದ್ವತೀನೂ ಮಾರೀ ಬಿಗದ ಇದ್ಲು. ಗಂಡಾ-ಹೆಂಡತಿ ಸಲಿಗಿ ಇದ್ದಿಲ್ಲ ನೋಡ್ರಿ" ಅಂದ. ಬಾಬೂರಾಯರು ನಕ್ಕು ಸುಮ್ಮನಾದರು "ನಾಳೆ ನಾನs ಕೇಳ್ತೇನೇಳ್ರಿ ಶಾಸ್ತ್ರಿಗಳನ್ನ" ಅಂದ ಗುಡಿ. ಬಂಗಲೆಗೆ ಬಂದು ಎಲ್ಲರೂ ಮಲಗಿದರು.

ಬೆಳಿಗ್ಗೆ ಎದ್ದು ಪ್ರಾತರ್ವಿಧಿಗಳೆಲ್ಲಾ ಮುಗಿದು ತಿಂಡಿ ಕಾಫಿ ಆದಾಗ ೧೦ ಗಂಟೆ ಬಾಬೂರಾಯರು ತಮ್ಮ ಮಿತ್ರ ತರಂದೀಕರರನ್ನು ಕಾಣಲು ಹೊರಗೆ ಹೋದರು. ಆಗ ಹೊರಗಿನ ಹಾಲಿನಲ್ಲಿ ಶಾಸ್ತ್ರಿಗಳು, ಆಲೂರ, ಸತ್ಯಜ್ಞಾನ ನಡಗೀರ ಕುಳಿತುಕೊಂಡರು ಶಾಸ್ತ್ರಿಗಳು "ಏನು ನಾಡಗೀರ ಅವರೇ ಧಾರವಾಡದಲ್ಲಿ ಏನು ಕೆಲಸ?" ಎಂದು ಕೇಳಿದರು. ಅದಕ್ಕೆ-"ಶಾಲೆಯೊಂದರಲ್ಲಿ ವ್ಯಾಯಾಮ ಶಿಕ್ಷಕನಾಗಿದ್ದೇನೆ. ಅಲ್ಲದೆ ಸಾರ್ವಜನಿಕರಿಗಾಗಿ ಒಂದು ವ್ಯಾಯಾಮ ಶಾಲೆಯನ್ನು ನಡೆಸುತ್ತಿದ್ದೇನೆ. ನನ್ನ ಕಾಲಾವಧಿಯಲ್ಲಿ ಶ್ರೀ ಬೇಂದ್ರೆಯವರು ನಮಗೆ ಶಿಕ್ಷಕರಾಗಿದ್ದರು. ಮ್ಯಾಟ್ರಿಕ್ ಆದಮೇಲೆ ಬೆಂಗಳೂರಿನ ಡಾ|| ಕೆ.ವಿ. ಅಯ್ಯರ್ ಅವರಲ್ಲಿ ೬-೮ತಿಂಗಳು ಇದ್ದು ಆಧುನಿಕ ವ್ಯಾಯಾಮ ಪದ್ಧತಿ ಕಲಿತಿದ್ದೇನೆ.' ಎಂದು ನಾಡಗೀರ ಉತ್ತರಿಸಿದ. ಅದಕ್ಕೆ "ತುಂಬಾ ಸಂತೋಷ. ಅಂತೂ ಬೆಂಗಳೂರು ವಾಸ ಆಗಿದೆ. ಅಯ್ಯರ್ ಅವರು ನನಗೆ ಗೊತ್ತು. ತುಂಬಾ ದೊಡ್ಡ ಮನುಷ್ಯರು. ನೋಡಿ ಬೆಂಗಳೂರ ಟ್ರೈನಿಂಗ್ ನಿಮ್ಮನ್ನು ಇಲ್ಲಿಗೆ ಕರಕೊಂಡು ಬಂತು. ನಿಮ್ಮ ಪರಿಚಯ ಆಯಿತು" ಎಂದು ಶಾಸ್ತ್ರಿಗಳು ನುಡಿದರು.

ಅಷ್ಟರಲ್ಲಿ ಸತ್ಯಜ್ಞಾನ "ಆತೆನಪಾ ಕೃಷ್ಣಾ, ನಿನ್ನ ಪರಿಚಯ. ದೇವುಡು ನರಸಿಂಹಶಾಸ್ತ್ರಿಗಳಂದರೆ ಏನಂತ ಮಾಡೀ. ಅದ್ಭುತ ವ್ಯಕ್ತಿ. ಸಂಸ್ಕೃತ-ವೇದ, ತಪಶ್ಚರ್ಯ, ಸಾಹಿತ್ಯ, ಸಂಗೀತ, ಕಾವ್ಯ, ನಾಟಕ ಎಲ್ಲಾದರ ಆಗರ ಇದ್ದಾಂಗ ಇದ್ದಾರ. ಅಲ್ಲಿ ಧಾರವಾಡದಾಗ ಬೇಂದ್ರೆ ಮಾಸ್ತರ ಕೈಯಾಗ ಕಲಿಯೋ ಸುಯೋಗ, ಈಗ ಪುಣೇದಾಗ ದೇವುಡು ಅವರ ಸಂಗತಿ ಹರಟೇ ಹೊಡೀತೇವಿ. ಶಾಸ್ತ್ರಿಗಳ ಅನುಭವ ಕೇಳಬೇಕು! ಹೂಂ ಇರ್ಲಿ. ಶಾಸ್ತ್ರಿಗಳ! ನಿನ್ನೆ ನಿಮ್ಮ ಮೂಡ್ ನೆಟ್ಟಗೆsಇದ್ದಿಲ್ಲೇನು? ಯಾಕೋ ನಿಮ್ಮಿಬ್ಬರ ಸಂಭಾಷಣೇ ಒಳಗ ಸಲಿಗಿ ಕಾಣಿಸಲಿಲ್ಲ. ನನಗ ಹಾಂಗ್ ಅನಿಸ್ತೋ ಏನೋ"

ಶಾಸ್ತ್ರಿಗಳು `ಹೌದು ಸಂದರ್ಭವೇ ಹಾಗೆ ಇತ್ತು. ಮಗನ ಆಯುಷ್ಯ, ಅವನ ಮರಣ ತಪ್ಪಿಸುವದು. ಇದರಲ್ಲಿ ಸ್ವಲ್ಪ ಗಾಂಭೀರ್ಯವು ಇರಬೇಕಾದದ್ದೇ. ಅದು ಕೊಂಚ ಹೆಚ್ಚು ಎಂದು ನಿಮಗೆ ಅನ್ನಿಸಿರಲೂಬಹುದು. ಅದೂ ಅಲ್ಲದೇ ಹೆಣ್ಣುಮಕ್ಕಳಿಗೆ ಮತ್ತೆ ಮತ್ತೆ-ಹೇಳುವದೂ ಕಷ್ಟ

ಅನ್ನಿ. ಪಾಪ ಅವರಿಗೆ ತಮ್ಮದೇ ಆದ ಏನೇನೋ ಕಿರುಕುಳಗಳಿರತ್ವೆ. ಜನರ ಮುಂದೆ ಹೇಳೋಕೆ ಸಂಕೋಚವೂ ಆಗುತ್ತೆ ಅಂತಿಟ್ಟುಕೊಳ್ಳಿ. ಹೀಗಾಗಿ ನಿಮಗೆ ಹಾಗೆ ಅನ್ನಿಸಿರಬಹುದೆಂದೇ ನನ್ನ ತರ್ಕ" ಎಂದು ಉತ್ತರಿಸಿದರು.

ಕೃಷ್ಣನಿಗೆ ದೇವುಡುರಂತಹ ವಿದ್ವಾಂಸರೊಡನೆ ಹೆಚ್ಚು ಮಾತಾಡಲು ಅಂಜಿಕೆಯೂ ಬಂತು.

ಮಾರನೇ ದಿನ. ಯಮ ಚಿರಂಜೀವಿಯನ್ನು ಒಯ್ಯಲು ಬಂದ ದೃಶ್ಯದ ಷೂಟಿಂಗ್ ಆಗಬೇಕು. ಅದರಂತೆ ಮರುದಿನ ರಾತ್ರಿಗೆ ಅಲ್ಲಿಗೆ ಹೋದರು. ಕೋಣನ ಮೇಲೆ ಕುಳಿತು ಪಾಶ ಬೀಸುವ ದೃಶ್ಯ. ಅದೂ ಒಂದು ಅನುಭವವೇ ಆಯಿತು. ಒಳ್ಳೇ ಮೈತುಂಬಿ ಬೆಳೆದ ಕೋಣ ಅಂಜಿಕೆ ಬರುವಂತಿತ್ತು. ಅದನ್ನು ಸಾಕಿದ ಯಜಮಾನ. ಅದರ ಮೂಗುದಾರ ಹಿಡಿದು ನಿಂತಿದ್ದ. `ಕಾಯ್ ಘಾಬರೂ ನಕಾ ಸಾಹೇಬ್ ತುಮ್ಹಿ ಚಡವಾ' ಅಂದ. ಕುಳಿತಾದ ಮೇಲೆ ಒಂದು ಭಾರವಾದ ಮರದ ಗದೆ ಎಡಗೈಗೆ ಬಲದ ಕೈಗೆ ಪಾಶ. ಅಂತೂ ಆ ದೃಶ್ಯ ಮುಗಿಯಿತು. ನಂತರ ಈಶ್ವರ ಪ್ರತ್ಯಕ್ಷವಾದ ಒಂದು ಷಾಟ್ ಆಗಬೇಕಿತ್ತು. ಅದಕ್ಕೆ ಶಿವ ಶಿವಲಿಂಗದ ಹಿಂದೆ ಬಂದು ನಿಂತ. ಆದರೆ ಅವನಿಗೆ ೪ ಕೈ ಆಗಬೇಕು ಅದಕ್ಕೇನು ಎಂದಾಗ ನಮ್ಮ ಜೊತೆ ಇದ್ದ ಆಲೂರ್ ಅವರಿಗೆ ಶರ್ಟು ತೆಗೆದು ಶಿವನ ಹಿಂದೆ ಬಂದು ನಿಲ್ಲಲು ಕೇಳಿದರು. ಶಿವನಾದವ ಎತ್ತರಕ್ಕಿದ್ದದರಿಂದ, ಆಲೂರ ಕಾಣದೇ ತನ್ನ ಕೈಗಳನ್ನೆತ್ತಿ ಒಂದು ಕೈಯಲ್ಲಿ ಡಮರು ಇನ್ನೊಂದರಲ್ಲಿ ತ್ರಿಶೂಲ ಹಿಡಿದ. ಶಿವನಿಗೆ ಕೊರಳ ಹಾವು ಆಗಬೇಕು. ಅದಕ್ಕೆ ಒಂದು ಹಲ್ಲಿಲ್ಲದ ಹಾವನ್ನು ತರಿಸಿದ್ದರು. ಅದನ್ನು ಶಿವನ ಕೊರಳಿಗೆ ಹಾಕಿದರು. ಹಾವು ಸುಮ್ಮನಿರದೇ ಮುಖ ಅತ್ತ-ಇತ್ತ ಆಡಿಸತೊಡಗಿತು. ಇನ್ನೇನು ಆರಂಭ ಅನ್ನಬೇಕು ಅಷ್ಟರಲ್ಲಿ ಆಲೂರ ಚೀರುತ್ತ ಡಮರು ತ್ರಿಶೂಲ ಒಗೆದು ಹಿಂದೆ ಜಿಗಿದ. ಯಾಕಂದರೆ ಹಾವು ಶಿವನ ಕತ್ತಿನ ಹಿಂದೆ ಹೋಗಿ ಆಲೂರನ ಮೂಗು ಮೂಸಿತ್ತು. ಆ ಘಟನೆ ಇಂದಿಗೂ ನೆನಪಾದರೆ ನಗೆ ತರಿಸುತ್ತದೆ. ಅಂತೂ ಮತ್ತೆ ಬಂದು ನಿಂತಾದ ಮೇಲೆ ಆ ದೃಶ್ಯದ ಷೂಟಿಂಗ್ ಆಯಿತು.

ಮರುದಿನ ನಾಡಿಗೇರ ಶಾಲೆಗೆ ತಿರುಗಿ ಧಾರವಾಡಕ್ಕೆ ಹೊರಟ. ರಾತ್ರಿ ಮೇಲೆ ಇದ್ದದರಿಂದ ಮಧ್ಯಾಹ್ನ ಮತ್ತೆ ಶಾಸ್ತ್ರಿಗಳೊಡನೆ ಮಾತಾಡುವ ಸಂದರ್ಭ ಬಂದಿತು.

ಊರಿಗೆ ಹೋಗುವುದಾಗಿ ಹೇಳಲು ಹೋದಾಗ ಶಾಸ್ತ್ರಿಗಳು ಕೊಡ ಹೇಳಿದರೆ "ಏನ್ ಸಮಾಚಾರ. ನೀವು ಮೇಷ್ಟ್ರೇನು?" "ಹೌದು. ತಂದೆ ರಿಟೈರ್ ಆದ್ದರಿಂದ ಅಣ್ಣತಮ್ಮಂದಿರು ಕಾಲೇಜಿನಲ್ಲಿರುವುದರಿಂದ ಕೆಲಸ ಮಾಡಬೇಕಿದೆ. ನನಗೇನೂ ಬೇಜಾರಿಲ್ಲ' "ಅಂದ ಕೃಷ್ಣ." ಸರಿ, ಬೆಂಗಳೂರು ಹೇಗಿದೆ.?" ತುಂಬಾ ಚೆನ್ನಾಗಿದೆ. ೧೯೩೭ರ ವಾಸ್ತವ್ಯ. ಬೆಂಗಳೂರು ಮರೆಯದಂತೆ ಮಾಡಿದೆ! ಅಂದ. ಯಾರಿಗೆ ಗೊತ್ತು ಧಾರವಾಡಕ್ಕೂ ಬೆಂಗಳೂರಿಗೂ ಸಂಬಂಧವೂ ನಿಮಗೆ ಬರಬಹುದು. ಈಗ ನೋಡಿ ನಾನು ಧಾರವಾಡಕ್ಕೆ ಬಂದು ಸ್ಕ್ರಿಪ್ಟ್ ಬರೆದು ಇಲ್ಲಿಯ ಚಿತ್ರಪಟದಲ್ಲಿ ಪಾತ್ರ ವಹಿಸಿಲ್ಲವೇ' ಅಂದು ಸುಮ್ಮನಾದರು.

ಗುಡಿಸತ್ಯಜ್ಞಾನ. ಶಾಸ್ತ್ರಿಗಳಿಗೆ ಅವರ ಅಭ್ಯಾಸ, ಮೈಸೂರು ಅಲ್ಲಿಯ ವಾಸ್ತವ್ಯ ಇದರ ಬಗ್ಗೆ ಕೇಳಿದಾಗ. ಅಲ್ಲಿಯ ಪರಿಪರ ತಾವು ಅಭ್ಯಾಸ ಮಾಡುವುದಕ್ಕೆ ಅನುಕೂಲ. ಸಂಸ್ಕೃತ ಅಭ್ಯಾಸ.

ವೇದ ಪುರಾಣಗಳ ಅಭ್ಯಾಸ ಅಲ್ಲಿಯ ಕುಕ್ಕನ ಹಳ್ಳಿಯ ಕೆರೆ. ಅಲ್ಲಿ ತಾವು ನಿತ್ಯ ಸಂಧ್ಯಾವಂದನೆ ಮಾಡಿ ಜಪ ಮಾಡುವದು. ಸಾಯಂಕಾಲ ಸೂರ್ಯನನ್ನು ನೋಡುತ್ತಾ ಗಾಯತ್ರಿ ಮಂತ್ರ ಹೇಳುತ್ತಾ ಮಗ್ನನಾಗುವದು ಎಲ್ಲ ವಿವರವಾಗಿ ಹೇಳಿದರು. ಅದನ್ನು ಕೇಳಿದಾಗ ಒಳ್ಳೇ ತಪಸ್ವಿಯ ಅನುಭವ ಕೇಳಿದಂತಾಯಿತು.

"ಇಂಥ ನಿಷ್ಠುರ ಜೀವನ ನಡೆಸಿ ಗಾಯತ್ರಿ ಮಂತ್ರದಲ್ಲಿ ಸೂರ್ಯನನ್ನು ನೋಡುವಾಗ ಆದ ನಿಮ್ಮ ಅನುಭವ ಬಹಳ ಗಂಭೀರವಾದದ್ದು.' "ಎಂದು ನಾಡಗೀರ ಅಂದ. ಅದಕ್ಕೆ ಶಾಸ್ತ್ರಿಗಳು `ಅದರ ಅನುಭವ ಅನುಪಮವಾಗಿದ್ದದ್ದು. ಒಂದು ದಿನವಂತೂ ಸಾಯಂಕಾಲದ ಅಸ್ತಂಗತವಾಗುತ್ತಲಿರುವ ಸೂರ್ಯನ ಕಿರಣಗಳು ಸುತ್ತುತ್ತಾ ವರ್ತುಲಾಕೃತಿಯಲ್ಲಿ ನನ್ನ ಕಣ್ಣು ಭೇದಿಸುತ್ತಿದ್ದವು. ಹಾಗೆಯೇ ಸಂತೋಷದಿಂದ ನಿಟ್ಟಿಸಿ ನೋಡುತ್ತಿದ್ದಾಗ ಸೂರ್ಯನೇ ನನ್ನಲ್ಲಿ ಬಂದಂತಾಗಿತ್ತು. ಆದ್ದರಿಂದ ಅನುಪಮ!`ಎಂದರು. ಮನೋಭೂಮಿಕೆಯೋ ತಾದಾತ್ಮ್ಯವೋ ಗೊತ್ತಿಲ್ಲ' ಎಂದು ಸುಮ್ಮನಾದರು.

ನಾವೆಲ್ಲ ಪೇಟೆಗೆ ಹೋಗಿ ಹಣ್ಣು ತಂದು ಆಲೂರ ನಾನು ತಿರುಗಿ ಧಾರವಾಡಕ್ಕೆ ಗಾಡಿ ಹಿಡಿದೆವು. ಆಗ ಶಾಸ್ತ್ರಿಗಳು ಆಡಿದ ಮಾತು ನೆನಪಾದರೆ ಅವರೇ ಎದುರಿನಲ್ಲಿ ಬಂದು ನಿಂತಂತಾಗುತ್ತದೆ. ಆ ಮುಖದಲ್ಲಿಯ ತೇಜ. ಅವರ ದಾರ್ಶನಿಕತೆ ಅದ್ಭುತವಾದುದು.

ಮುಂದೆ ಅವರು ಬರೆದ ಕತೆಯ Synopsis ಓದಿದಾಗ ಅದರಲ್ಲಿಯ ಒಂದು ವಾಕ್ಯ ಅವರ ಮನೋನಿಯಂತ್ರಣ ಜೀವನದ ಸುಖ-ದುಃಖಗಳ ಬಗ್ಗೆ ಇದ್ದ ವಿಚಾರ ಸ್ಫುಟವಾಗಿ ತಿಳಿದು ಬರುತ್ತದೆ." "ದುಃಖವೆಂಬುದು ದುಪ್ಪಟ ಇದ್ದಂತೆ. ಹೊದೆದುಕೊಂಡರೆ ಮೈಮೇಲಿರುತ್ತದೆ. ಬಿಸಾಕಿದರೆ ಮೂಲೆಯಲ್ಲಿ ಬಿದ್ದಿರುತ್ತದೆ". ಇದನ್ನೆಷ್ಟು ಜನ ಅರ್ಥ ಮಾಡಿಕೊಳ್ಳುತ್ತಾರೆ. ಮೈಗೂಡಿಸಿ ಕೊಳ್ಳುವದಂತೂ ಬಹಳ ದೂರ.

ಮಿತ್ರ ಎನ್ಕೆಯವರು ರೇಡಿಯೋಕ್ಕಾಗಿ ಅವರನ್ನು ಭೇಟಿಯಾದಾಗ ಅವರಿಗೆ ಮಧುಮೇಹದಿಂದಾಗಿ ಒಂದು ಕಾಲು ಹೋಗಿತ್ತು. ಆಗ ಅಂದರಂತೆ "ನೋಡಿ ಎನ್ಕೆಯವರೆ, ಕಾಲು ಹೋದರೂ ಆ ವೈಕುಂಠವಾಸ ಈ ಕುಟನನ್ನು ಇನ್ನು ವೈಯುತ್ತಾ ಇಲ್ಲ. ಇನ್ನು ಏನು ಅನುಭವಿಸಬೇಕೆಂದು ಅವನಾಶೆಯೋ ಆಗಲಿ!" ಎಂದರಂತೆ. ಎಂಥ ಸಮತೆ, ಸಹನೆ, ದೇವುಡು ನರಸಿಂಹಶಾಸ್ತ್ರಿಯಂಥವರ ಸಾನ್ನಿಧ್ಯ ನಾಲ್ಕು ದಿನ ಲಭಿಸಿತಲ್ಲ. ನಾನೇ ಧನ್ಯ.

★

ಶ್ರೀ ದೇವುಡು ನರಸಿಂಹಶಾಸ್ತ್ರಿಗಳು

ಪ್ರಬುದ್ಧ ಕರ್ನಾಟಕ

ಕನ್ನಡ ಸಾಹಿತ್ಯದ ಅಭಿವೃದ್ಧಿಗಾಗಿ ನಾನಾ ಬಗೆಯಲ್ಲಿ ಶ್ರಮಿಸಿದ ಗಣ್ಯ ಪ್ರತಿಭಾಶಾಲಿಗಳಲ್ಲಿ ಒಬ್ಬರಾಗಿದ್ದವರು ಶ್ರೀಮಾನ್ ದೇವುಡು ನರಸಿಂಹಶಾಸ್ತ್ರಿಗಳು. ಕನ್ನಡ ಸಾಹಿತ್ಯದ ನವೋದಯದ ಕಾಲದಲ್ಲಿ ಶ್ರೀ ದೇವುಡುರವರು ಕೈಕೊಂಡ ಕಾರ್ಯಗಳು ಒಂದಲ್ಲ, ಎರಡಲ್ಲ, ಹಲವಾರು ಸಣ್ಣಕತೆಗಳನ್ನು ರಚಿಸಿ ಹೊಸ ಅಭಿರುಚಿಯನ್ನು ಉಂಟು ಮಾಡಿದರು. ಕಾದಂಬರಿಯ ಹೆಸರೇ ಬಹು ವಿರಳವಾಗಿದ್ದಂತಹ ಸಮಯದಲ್ಲಿ ಶಕ್ತಿಪೂರ್ಣವಾದ ಕಾದಂಬರಿಗಳನ್ನು ಬರೆದು ಎಲ್ಲರ ಆದರಕ್ಕೂ ಪಾತ್ರರಾದರು. ಅವರಿಂದ ರಚಿತವಾದ `ಅಂತರಂಗ' `ಮಯೂರ' ಮತ್ತು `ಮಹಾಬ್ರಾಹ್ಮಣ' ಇವೇ ಮೊದಲಾದ ಕೃತಿಗಳನ್ನು ಓದಿ ತಲೆದೂಗದವರಾರು?

ಶ್ರೀ ದೇವುಡು ಅವರು ಸಂಸ್ಕೃತ, ಇಂಗ್ಲೀಷ್ ಮತ್ತು ಕನ್ನಡಗಳಲ್ಲಿ ಸರಿಸಮನಾದ ಪಾಂಡಿತ್ಯವನ್ನು ಪಡೆದಿದ್ದರು. ಶ್ರೀ ಮದ್ವಾಲ್ಮೀಕಿ ರಾಮಾಯಣ, ವ್ಯಾಸಭಾರತ, ಭಾಗವತ ಮತ್ತು ಭಗವದ್ಗೀತೆಗಳನ್ನು ಕುರಿತು ಅವರು ಬರೆದ ಗ್ರಂಥಗಳನ್ನು ಓದಿದವರಾಗಲಿ, ಅವುಗಳನ್ನು ಕುರಿತು ಅವರು ಮಾಡಿದ ವಿದ್ವತ್ಪೂರ್ಣವಾದ ಭಾಷಣಗಳನ್ನು ಕೇಳಿದವರಾಗಲಿ ಎಂದೆಂದಿಗೂ ಅವರನ್ನು ಮರೆಯಲಾರರು. ಶ್ರೀ ದೇವುಡು ಅವರು ನಮ್ಮ ಶ್ರೇಷ್ಠ ವಾಗ್ಮಿಗಳಲ್ಲಿ ಒಬ್ಬರಾಗಿದ್ದರು. ಸ್ವಭಾವತಃ ಅವರು ಅಭಿನಯದಲ್ಲಿಯೂ ನಿಷ್ಣಾತರಾಗಿದ್ದುದರಿಂದ ಮನಕರಗುವಂತೆ ಮಾತನಾಡಲು ಶಕ್ತರಾಗಿದ್ದರು.

ಶ್ರೀ ದೇವುಡು ಅವರು ಲೇಖಕರು ಮಾತ್ರವೇ ಅಲ್ಲದೆ, ಎಷ್ಟೋ ಸಂಘ ಸಂಸ್ಥೆಗಳ ಸ್ಥಾಪಕರೂ ಆಗಿದ್ದರು. ಅಧ್ಯಾಪಕ ವೃತ್ತಿಯೆಂದರೆ ಅವರಿಗೆ ಅತ್ಯಂತ ಅಭಿಮಾನ. ಬೆಂಗಳೂರಿನ ಆರ್ಯ ವಿದ್ಯಾಶಾಲೆಯಲ್ಲಿ ಅವರು ಕೆಲವು ಕಾಲ ಕೆಲಸ ಮಾಡಿದುದಲ್ಲದೆ, ಈಗ ಪ್ರಸಿದ್ಧವಾಗಿರುವ "ಗಾಂಧಿ ನಗರ ಪ್ರೌಢಶಾಲೆ"ಯನ್ನು ಪ್ರಾರಂಭಿಸಿದವರು ಅವರು. "ಮಕ್ಕಳ ಪುಸ್ತಕ"ದ ಸಂಪಾದಕರಾಗಿ ಕೆಲಸ ಮಾಡಿದುದಲ್ಲದೆ, "ನಮ್ಮ ಪುಸ್ತಕ" ಎಂಬ ಮಕ್ಕಳ ಪುಸ್ತಕವನ್ನು ಅವರೇ ನಡೆಸಿಕೊಂಡು ಹೋಗುತ್ತಿದ್ದರು. ಸಾಹಿತಿಯಾಗಿದ್ದುಕೊಂಡು ಸಾರ್ವಜನಿಕ ಕ್ಷೇತ್ರದ ಹಲವಾರು ಕಾರ್ಯಗಳನ್ನು ಶ್ರೀ ದೇವುಡು ಅವರಂತೆ ಯಶಸ್ವಿಯಾಗಿ ನಿರ್ವಹಿಸಿದವರು ನಮ್ಮಲ್ಲಿ ತುಂಬ ವಿರಳ.

ಜ್ಞಾನವೃದ್ಧರೂ, ವಯೋವೃದ್ಧರೂ, ಕಾರ್ಯಪಟುಗಳೂ ಆಗಿದ್ದ ಶ್ರೀ ದೇವುಡು ನರಸಿಂಹಶಾಸ್ತ್ರಿಗಳು ಇಂದು ನಮ್ಮ ಕಣ್ಮರೆಯಾಗಿರುವುದು ನಮ್ಮ ದುರ್ದೈವವೇ ಸರಿ. ಅವರು ತಮ್ಮ ಜೀವಮಾನದ ಉದ್ದಕ್ಕೂ ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು. ಅವರ ಸ್ವಾತಂತ್ರ್ಯಪ್ರಿಯತೆ, ವಿಚಾರಾಭಿಮಾನ, ತೀಕ್ಷ್ಣವಾದ ವಿಮರ್ಶಕ ದೃಷ್ಟಿಗಳು ಅವರನ್ನು ಒಮ್ಮೊಮ್ಮೆ ಎಂತಹ ನಿಷ್ಠುರ ಸ್ವಭಾವದವರು ಎಂಬಂತೆ ತಪ್ಪೆಣಿಸಲು ಅವಕಾಶವುಂಟಾಗುತ್ತಿತ್ತು. ಆದರೆ ಅವರನ್ನು ಚೆನ್ನಾಗಿ ಬಲ್ಲವರು ಅವರ ಈ ಗುಣಗ್ರಾಹಕ ಶಕ್ತಿಯನ್ನು ಕಂಡು ಮೆಚ್ಚದೆ ಇರುತ್ತಿರಲಿಲ್ಲ. ಇಂಥ ವಿದ್ವನ್ಮಣಿಗೆ ನಮ್ಮ ನಾಡಿನಲ್ಲಿ ಎಂಥ ಸನ್ಮಾನವು ಲಭಿಸಬೇಕಿತ್ತೋ ಅದು ದೊರೆಯದೆ ಹೋದುದು ಅತ್ಯಂತ

ವಿಷಾದಕರವಾದುದೇ ಸರಿ. ಅವರ ಕೃತಿಗಳು ಅವರ ಕೀರ್ತಿಯನ್ನು ಅನಂತಕಾಲವೂ ಬೆಳಗಿಸಬಲ್ಲವು. ವಿಚಾರ ವೈವಿಧ್ಯ, ವಿಧಾನ ವೈವಿಧ್ಯಗಳಿಂದ ಕೂಡಿರುವ ಅವರ ವಿಪುಲವಾದ ಗ್ರಂಥರಾಶಿಯನ್ನು ಕನ್ನಡಿಗರು ಪುನಃ ಪುನಃ ಓದಿ ಕೃತಾರ್ಥರಾಗಬೇಕು. ಶ್ರೀ ದೇವುಡು ಅವರ ಹೆಸರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿ ವಿರಾಜಿಸುತ್ತದೆ ಎಂದು ಹೃತ್ಪೂರ್ವಕವಾಗಿ ಹೇಳಬಯಸುತ್ತೇವೆ.

★

ನಮ್ಮ ತಂದೆ ದೇವುಡು ನರಸಿಂಹ ಶಾಸ್ತ್ರಿಗಳು

ಶ್ರೀ ಗಂಗಾಧರ ದೇವುಡು

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ವೈಶಿಷ್ಟ್ಯ ಹೊಂದಿದ್ದ ಸಾಹಿತಿಗಳ ಪೈಕಿ ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು ಬಹುಮುಖ ಪ್ರತಿಭೆಯ ವಿದ್ವಾಂಸರು. ಕನ್ನಡ ನಾಡಿಗಾಗಿ, ಕರ್ನಾಟಕ ಏಕೀಕರಣಕ್ಕಾಗಿ, ಕನ್ನಡ ಸಾಹಿತ್ಯ ಅಭಿವೃದ್ಧಿಗಾಗಿ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ದೇವುಡು ಅವರು ೧೮೯೬ ಡಿಸೆಂಬರ್ ೨೯ರಂದು ಮೈಸೂರಿನಲ್ಲಿ ಅಚ್ಚ ವೈದಿಕ ಮನೆತನದಲ್ಲಿ ಹುಟ್ಟಿದರು. ತಂದೆ ದೇವುಡು ಕೃಷ್ಣ ಶಾಸ್ತ್ರಿ, ತಾಯಿ ಸುಬ್ಬಮ್ಮ. ಇವರಿಗೆ ಇಬ್ಬರು ತಂಗಿಯರು. ದೇವುಡು ಅವರ ಮಾತೃಭಾಷೆ ತೆಲುಗು. ನಾಲ್ಕು ತಲೆಮಾರಿನ ಹಿಂದೆ, ಇವರ ಹಿರಿಯರು ಆಂಧ್ರದಿಂದ ಬಂದು ಮೈಸೂರಿನಲ್ಲಿ ನೆಲೆಸಿದರು. ಇವರ ತಂದೆ ಮೈಸೂರು ಅರಮನೆಯಲ್ಲಿ ಮುಖ್ಯ ಪುರೋಹಿತರಾಗಿದ್ದರು. ಕೇವಲ ಐದು ವರ್ಷ ಪ್ರಾಯದವರಾಗಿದ್ದಾಗಲೇ ದೇವುಡು ಅವರು ತಮ್ಮ ತಂದೆಯವರನ್ನು ಕಳೆದುಕೊಂಡು ತಾಯಿಯ ಆಶ್ರಯದಲ್ಲಿ ಬೆಳೆದರು.

ಬಾಲ್ಯದಿಂದಲೇ ಇವರ ಬುದ್ಧಿ ಬಹಳ ಚುರುಕಾಗಿತ್ತು. ೧೧-೧೨ವರ್ಷ ವಯಸ್ಸಿನವರಾಗಿದ್ದಾಗಲೇ ಇವರು ರಾಮಾಯಣ, ಭಾರತ, ಭಾಗವತವನ್ನು ಓದಿ ಮುಗಿಸಿ, ಅಷ್ಟರಲ್ಲಿ ವೇದಾಭ್ಯಾಸವನ್ನು ಮುಗಿಸಿದ್ದರು. ದೇವುಡು ಅವರಿಗೆ ಮೊದಲಿನಿಂದಲೂ ಓದಲು ಬಹಳ ಆಸಕ್ತಿ ಇತ್ತು.

೧೯-೨೨ರಲ್ಲಿ ಸಂಸ್ಕೃತದಲ್ಲಿ ಎಂ.ಎ. ಪಾಸು ಮಾಡಿದರು. ಕಾಲೇಜಿನಲ್ಲಿ ಓದುತ್ತಿದ್ದಾಗ ದೇವುಡು ಅವರು ಸರ್ ಎಸ್. ರಾಧಾಕೃಷ್ಣನ್ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಸರ್ ಎಸ್. ರಾಧಾಕೃಷ್ಣನ್ ಅವರು ಆಗ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ತತ್ತ್ವಶಾಸ್ತ್ರವನ್ನು ಬೋಧಿಸುತ್ತಿದ್ದರು. ಗುರುಶಿಷ್ಯರ ಬಾಂಧವ್ಯ ಎಷ್ಟರಮಟ್ಟಿಗೆ ಇತ್ತೆಂದರೆ ಉಪರಾಷ್ಟ್ರಪತಿಯಾಗಿದ್ದಾಗಲೂ ರಾಷ್ಟ್ರಪತಿಯಾಗಿದ್ದಾಗಲೂ ಸರ್ ರಾಧಾಕೃಷ್ಣನ್ ಅವರು ಬೆಂಗಳೂರಿಗೆ ಬಂದಾಗ ತಪ್ಪದೇ ದೇವುಡು ಅವರನ್ನು ಹೇಳಿ ಕರೆಸಿಕೊಳ್ಳುತ್ತಿದ್ದರು.

ದೇವುಡು ನೋಡಲು ಆಕರ್ಷಕ ನಿಲುವು ಹೊಂದಿದ್ದರು. ಆಜಾನುಬಾಹು, ಸುಂದರವಾದ ದುಂಡುಮುಖ, ಸ್ವಚ್ಛವಾದ ಬಿಳಿ ಬಣ್ಣ, ತೇಜಸ್ಸಿನಿಂದ ಕೂಡಿದ್ದ ಕಣ್ಣುಗಳು-ಯಾರು ನೋಡಿದರೂ ಮತ್ತೊಮ್ಮೆ ನೋಡಬೇಕು ಎಂಬಂಥ ಕುತೂಹಲ ಹುಟ್ಟಿಸುವ ಆಕರ್ಷಕ ವ್ಯಕ್ತಿ. ದೇವುಡು ಅವರು ಒಳ್ಳೆಯ ಮಾತುಗಾರರು. ಯಾವ ವಿಷಯದ ಮೇಲಾಗಲಿ ಅಧಿಕಾರವಾಣಿಯಿಂದ ಮಾತನಾಡಬಲ್ಲ ಚಾತುರ್ಯವನ್ನೂ ಪಾಂಡಿತ್ಯವನ್ನೂ ಹೊಂದಿದ್ದರು. ಯಾವಾಗಲೂ ಹಸನ್ಮುಖಿಯಾಗಿರುತ್ತಿದ್ದು, ಮನಸ್ಸಿನಲ್ಲಿ ಎಷ್ಟೇ ದುಗುಡವಿದ್ದರೂ ಅದನ್ನು ಯಾವತ್ತೂ ಆಚೆ ತೋರಿಸಿಕೊಳ್ಳದೇ ಇರುವುದು ಅವರ ಸ್ವಭಾವವಾಗಿತ್ತು. ಮಾತನಾಡಲು ಪ್ರಾರಂಭಿಸಿದರೆ ಕೆಲವು ಗಂಟೆಗಳ ಕಾಲ ಮಾತಾಡುತ್ತಿದ್ದರು. ಅಂದರೇ ಬರೀ ಕಾಡು ಹರಟೆ ಅಲ್ಲ. ಗಹನವಾದ ವಿಷಯಗಳನ್ನು ವಿವರಿಸುವುದೆಂದರೆ ಅವರಿಗೆ ಎಲ್ಲಿಲ್ಲದ ಆಸಕ್ತಿ. ಮಕ್ಕಳಾದ ನಮ್ಮನ್ನೂ ತಮ್ಮೊಡನೆ ಕೂಡಿಸಿಕೊಂಡು ಗಹನ

ವಾದ ವಿಷಯಗಳನ್ನು ನಮಗೆ ಅರ್ಥವಾಗುವಂತೆ ಬಹಳ ಸರಳವಾಗಿ ತಿಳಿಯ ಹೇಳುತ್ತಿದ್ದುದು ಅವರ ವೈಶಿಷ್ಟ್ಯ. ಹಾಗೆಯೇ ಭಾಷಣ ಮಾಡುವಾಗ, ನಿರರ್ಗಳವಾಗಿ, ಲೀಲಾಜಾಲವಾಗಿ ಬರುತ್ತಿದ್ದ ಮಾತಿನ ವೈಖರಿಗೆ ಎಂಥವರನ್ನೂ ಮೋಡಿ ಮಾಡುವ ಆಕರ್ಷಣೆ ಇತ್ತು.

ದೇವುಡು ಅವರಿಗೆ, ರಂಗಭೂಮಿ, ನಾಟಕ ಎಂದರೇ ಮೊದಲಿನಿಂದಲೂ ಅಂದರೆ ಚಿಕ್ಕವರಾಗಿದ್ದಾಗಿನಿಂದಲೂ ಬಹಳ ಇಷ್ಟ. ಹುಡುಗರಾಗಿದ್ದಾಗಲೇ ವರದಾಚಾರ್, ರಾಘವಾಚಾರ್ ಅವರುಗಳ ನಾಟಕಗಳನ್ನು ಮೈಸೂರಿನಲ್ಲಿ ನೋಡಿ, ಅವುಗಳಿಂದ ಪ್ರಭಾವಿತರಾಗಿ, ಆಗಲೇ ರಂಗಭೂಮಿಯನ್ನು ಪ್ರವೇಶಿಸಿದ್ದರು. ಅವರ ಪ್ರಭಾವವೇ ಅವರಿಗೆ ನಾಟಕಗಳನ್ನು ಆಡಲು ಒಂದು ಹವ್ಯಾಸಿ ನಾಟಕರಂಗ ಆಗಬೇಕೆಂದು, ೧೯೩೭ರಲ್ಲಿ ಕನ್ನಡ ಸಾಹಿತ್ಯ ಸಮಾಜ ಎಂಬ ಹೆಸರಿನಲ್ಲಿ ಸಂಸ್ಥೆಯೊಂದನ್ನು ಹುಟ್ಟು ಹಾಕಿದರು. ಅದರ ಆಶ್ರಯದಲ್ಲಿ, ನಚಿಕೇತ, ಮಂಡೋದರಿ, ತಿರುಪಾಣಿ, ಗೌತಮ ಬುದ್ಧ, ತೆನಾಲಿ ರಾಮಕೃಷ್ಣ, ಸಾವಿತ್ರಿ ಹೀಗೆ ಹಲವಾರು ನಾಟಕಗಳಲ್ಲಿ ಮುಖ್ಯ ನಟರಾಗಿ, ನಿರ್ದೇಶಕರೂ ಆಗಿ ಕನ್ನಡ ರಂಗಭೂಮಿಗೆ ಹೊಸ ತಿರುವನ್ನು ಕೊಟ್ಟರು. ಅವರು ಮಾಡುತ್ತಿದ್ದ ಯಾವುದೇ ಪಾತ್ರಗಳಲ್ಲಾಗಲೀ, ಅವರು ತಮ್ಮನ್ನು ಸಂಪೂರ್ಣವಾಗಿ ಮರೆತು ಬಿಡುತ್ತಿದ್ದರು. ಒಮ್ಮೆ, ಸಿ.ಕೆ. ವೆಂಕಟರಾಮಯ್ಯನವರ ಮಂಡೋದರಿ ನಾಟಕದಲ್ಲಿ ದೇವುಡು ಅವರದು ರಾವಣನ ಪಾತ್ರ, ಆನೂರು ಶಾಮಣ್ಣ ಎನ್ನುವವರು ಮಂಡೋದರಿ ಪಾತ್ರ ವಹಿಸಿದ್ದರು. ಆಗಿನ ಕಾಲದಲ್ಲಿ ನಾಟಕಗಳಲ್ಲಿ ಗಂಡಸರೇ ಇನ್ನೂ ಹೆಂಗಸರ ಪಾತ್ರ ಹಾಕುವುದು ರೂಢಿಯಲ್ಲಿತ್ತು. ಒಂದು ದೃಶ್ಯದಲ್ಲಿ ರಾವಣನು ಮಂಡೋದರಿಗೆ ಒಂದು ಸನ್ನಿವೇಷದಲ್ಲಿ "ಭಲೇ, ಮೊಡೋದರಿ" ಎಂದು ಭುಜತಟ್ಟಿ ಶಹಭಾಸ್‌ಗಿರಿಯನ್ನು ಕೊಡಬೇಕು. ಅದರಂತೆಯೇ ದೇವುಡು, ಭಲೇ ಮಂಡೋದರಿ ಎಂದು ಭುಜ ತಟ್ಟಿದ್ದಾರೆ. ಶಾಮಣ್ಣನವರಿಗೆ ಚುರುಚುರು ಎಂದು ಭುಜ ತಟ್ಟಿದ್ದಲ್ಲಿ ನೋವಾಗುವುದಕ್ಕೆ ಶುರುವಾಯಿತು. ಯಾವಾಗ ದೃಶ್ಯ ಮುಗಿಯುವುದೋ ಎಂದು ಕಾದಿದ್ದ ಶಾಮಣ್ಣನವರು, ಒಳಗೆ ಹೋಗಿ ಭುಜ ನೋಡಿಕೊಂಡರೇ ಐದು ಬೆರಳುಗಳೂ ಬೆನ್ನಿನ ಮೇಲೆ ಬಿದ್ದಿದ್ದು ಕಂಡು ಬಂದಿತು. ಆಗ ಶಾಮಣ್ಣನವರು, "ಶಾಸ್ತ್ರಿಗಳೇ, ಇನ್ನು ಮೇಲೆ ಈ ರೀತಿ ನೀವು ಶಹಭಾಸ್‌ಗಿರಿ ಕೊಟ್ಟರೇ ನಿಮ್ಮ ಜೊತೆಯಲ್ಲಿ ಪಾರ್ಟ್ ಮಾಡೊಲ್ಲ ಎಂದರಂತೆ. ಹಾಗೆಯೇ, ಯಮನ ಪಾತ್ರದಲ್ಲಿ ದೇವುಡು ಅವರನ್ನು ನೋಡಿದ ಯಾರಾದರೂ ನಡುಗಬೇಕು, ತೆನಾಲಿರಾಮಕೃಷ್ಣನಾಗಿ ಎಲ್ಲರನ್ನು ನಕ್ಕುನಗಿಸುತ್ತಿದ್ದುದನ್ನು ನಾನು ನೋಡಿದ್ದೇನೆ. ಈ ರೀತಿ ಯಾವುದೇ ಪಾತ್ರವಹಿಸಿದರೂ ಅದರಲ್ಲಿ ತಾವು ತಮ್ಮನ್ನು ಸಂಪೂರ್ಣವಾಗಿ ಮರೆಯುತ್ತಿದ್ದರು.

ಭಾರತಕ್ಕೆ ಇನ್ನೂ ಸ್ವಾತಂತ್ರ್ಯ ಬರದಿರುವ ಕಾಲದಲ್ಲಿ ಎಂ.ಎ. ಪದವೀಧರರಾದರೂ ಗಾಂಧೀಜಿಯವರ ಸ್ವಾತಂತ್ರ್ಯದ ಕರೆಗೆ ಮನಸೋತು, ಸರಕಾರದ ಯಾವ ಕೆಲಸಕ್ಕೂ ಸೇರಕೂಡದೆಂಬ ನಿಲುವನ್ನು ತಾಳಿ, ಜೀವನ ಪೂರ್ತಿ ಸ್ವತಂತ್ರ ವೃತ್ತಿಯಿಂದಲೇ, ಕಡೆಯವರೆಗೂ, ಅದೇ ರೀತಿ ನಡೆದುಕೊಂಡ ಧೀಮಂತ ವ್ಯಕ್ತಿ ದೇವುಡು ಅವರು. ಅವರು ಮೊದಲಿನಿಂದಲೂ ಸ್ವತಂತ್ರ ಮನೋಧರ್ಮವನ್ನು ರೂಢಿಸಿಕೊಂಡಿದ್ದರು. ೧೯೪೨ರಲ್ಲಿ "ಕ್ವಿಟ್ ಇಂಡಿಯಾ" ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಕಾಲಿಗೆ ಲಾಠಿ ಏಟುತಿಂದು ಒಂದು ತಿಂಗಳು ಕಾಲ ಚಿಕಿತ್ಸೆ ಪಡೆಯಬೇಕಾಯಿತು. ಸ್ವಾತಂತ್ರ್ಯ ಬಂದ

ಮೇಲೆ ಸರಕಾರವು ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಟ್ಟ ಮಾಸಾಶನವಾಗಲೀ ಅಥವಾ ಯಾವುದೇ ಸೌಲಭ್ಯಗಳನ್ನಾಗಲೀ ಅವರು ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಳ್ಳಲಿಲ್ಲ. ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಹನುಮಂತಯ್ಯನವರು "ನೀವು ಒಂದು ಅರ್ಜಿ ಕೊಡಿ ಶಾಸ್ತ್ರಿಗಳೇ ನಾನು ಸರಕಾರದಿಂದ ಪೆನ್‌ಷನ್ ಕೊಡಿಸ್ತೀನಿ, ಹಾಗೇ ಒಂದು ಸೈಟ್ ಕೊಡಿಸ್ತೀನಿ" ಎಂದಿದ್ದಕ್ಕೆ ಸ್ವಾಮಿ, "ನಾನು ಭಾರತ ಸ್ವತಂತ್ರ ಆಗುವುದಕ್ಕೆ ಭಾಗವಹಿಸಿದ್ದು, ಅದರಿಂದ ಪೆನ್‌ಷನ್ ಅಥವಾ ಇನ್ನು ಯಾವ ಸೌಲಭ್ಯ ತೆಗೆದುಕೊಳ್ಳುವುದಕ್ಕೆ ಅಲ್ಲ. ನಮಗೆ ಸ್ವಾತಂತ್ರ್ಯ ಬರಬೇಕು." ಎಂದು ಹೇಳಿದರು. ದೇವುಡು ಅವರಿಗೆ ಮಕ್ಕಳೆಂದರೆ ಬಹಳ ಪ್ರೀತಿ ಅಷ್ಟು ದೊಡ್ಡವರಾಗಿದ್ದರೂ ಮಕ್ಕಳ ಜೊತೆ ಸರಿಸಮಾನವಾಗಿ ಕೂತು ಆಟ ಆಡುತ್ತಿದ್ದುದನ್ನು ನೆನೆಸಿಕೊಂಡರೆ ಅವರ ಸರಳ ಮನೋಭಾವವನ್ನು ತೋರಿಸುತ್ತದೆ. ಅರವತ್ತು ವರ್ಷಗಳ ಹಿಂದೆ ಮಕ್ಕಳಿಗಾಗಿ ಶಿಶು ಸಾಹಿತ್ಯ ಅಷ್ಟಾಗಿ ಇಲ್ಲ ಎಂದು ಮನಗಂಡು ಮಕ್ಕಳ ಮನೋವಿಕಾಸಕ್ಕೆ ಅವರ ವ್ಯಕ್ತಿತ್ವವನ್ನು ರೂಪಗೊಳಿಸುವುದಕ್ಕೆ ಶಿಶು ಸಾಹಿತ್ಯ ಬರಬೇಕೆಂದು ಯೋಚಿಸಿ "ನಮ್ಮ ಪುಸ್ತಕ" ಎಂಬ ಮಾಸಪತ್ರಿಕೆಯನ್ನು ಪ್ರತ್ಯೇಕವಾಗಿ ಮಕ್ಕಳಿಗಾಗಿಯೇ ಪ್ರಾರಂಭಿಸಿ ೨೫ ವರ್ಷಕಾಲ ನಡೆಸಿಕೊಂಡು ಬಂದರು. ಮಕ್ಕಳ ಮನೋಭಾವ, ಗ್ರಹಣಶಕ್ತಿ ಗಮನದಲ್ಲಿರಿಸಿಕೊಂಡು ಬರೆದ ಅವರ ಕಥೆಗಳಲ್ಲಿ ಬಹುಪಾಲು ನೀತಿಯುಕ್ತವಾಗಿದ್ದ `ನಮ್ಮ ಪುಸ್ತಕ' ಮಕ್ಕಳ ಮಾಸಪತ್ರಿಕೆಯ ಮೂಲಕ ಹಲವಾರು ಹೊಸ ಮಾದರಿಗಳಾದ, ಚಿತ್ರಚಿತ್ರದ ಒಗಟು ಇವುಗಳನ್ನು ನಿರೂಪಿಸಿ ಮಕ್ಕಳ ಸಾಹಿತ್ಯದ ರಚನೆ ಪಡೆದುಕೊಳ್ಳಬಹುದಾದ ವೈಜ್ಞಾನಿಕ ನೆಲೆಗಳನ್ನು ಸೂಚಿಸಿದುದು ಅವರ ಅಸಾಧಾರಣ ಸಾಧನೆಗಳಲ್ಲಿ ಒಂದು. ಇಷ್ಟ ಮಕ್ಕಳ ಸಾಹಿತ್ಯ ಭಂಡಾರ ಎಂಬುದನ್ನು ಪ್ರಾರಂಭಿಸಿ, ಸುಮಾರು ಐವತ್ತು ಪುಸ್ತಕಗಳನ್ನು ಮಕ್ಕಳಿಗಾಗಿಯೇ ಹೊರತಂದರು. ಆಗಿನ ಕಾಲದಲ್ಲಿ ಶಿಶು ಸಾಹಿತ್ಯ ಕೊರತೆಯನ್ನು ತುಂಬಿಕೊಟ್ಟವರಲ್ಲಿ ದೇವುಡು ಪ್ರಮುಖರು.

ಅದಲ್ಲದೇ ನಮ್ಮದು ಅನಕ್ಷರರ ದೇಶ, ಈ ಅನಕ್ಷರತೆಯನ್ನು ನಿರ್ಮೂಲ ಮಾಡಲು ಶೀಘ್ರವಾಗಿ ಕನ್ನಡ ಕಲಿಸುವ ವಿಧಾನ ಒಂದನ್ನೂ ಹೊಸದಾಗಿ ನಿಯೋಜಿಸಿದರು. ಈ ಹೊಸ ಕಲಿಕೆಯ ವಿಧಾನವೇನೆಂದರೆ, ಕೇವಲ ಕನ್ನಡದ ಐದು ಅಕ್ಷರಗಳಿಂದ, ಅಂದರೇ-ಲ, ಎ, ದ, ರ, ಒ ಇವುಗಳಿಂದ ಕನ್ನಡದ ವರ್ಣಮಾಲೆಯನ್ನು ಕಲಿಸುವುದು, ಅದನ್ನು ೧೫ ದಿವಸಗಳಲ್ಲಿ ಕಲಿಸಲು ಸಾಧ್ಯ ಎಂಬುದನ್ನು "ಅಕ್ಷರ ಪ್ರಚಾರ ಮಾಲೆ"ಯ ಮೂಲಕ ಕಲಿಕೆ ಶಿಬಿರಗಳನ್ನೂ ನಡೆಸಲು ಬೆಂಗಳೂರು, ಮೈಸೂರು, ಹಾಸನ ಮತ್ತು ಇತರ ಜಿಲ್ಲೆಗಳಲ್ಲಿ ಅಕ್ಷರ ಪ್ರಚಾರವನ್ನು ಮಾಡಿಸಿದರು. ಆಗಿನ ಮೈಸೂರು ಸರಕಾರವು ಈ ಹೊಸ ಪದ್ಧತಿಯ ವಯಸ್ಕರ ಶಿಕ್ಷಣ ಪದ್ಧತಿಯನ್ನು ಮೆಚ್ಚಿ ಸರಕಾರವೇ ಇದನ್ನು ನಡೆಸುವುದಕ್ಕೆ ದೇವುಡು ಅವರ ಒಪ್ಪಿಗೆಯನ್ನು ಪಡೆದರು. ಸರಕಾರವು ಆಗ ಪ್ರಾರಂಭಿಸಿದ ವಯಸ್ಕರ ಶಿಕ್ಷಣ ಸಂಸ್ಥೆಗೆ ದೇವುಡು ಅವರನ್ನು ಆಜೀವ ಪರ್ಯಂತ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಿಸಿ ಗೌರವಿಸಿತು.

ಮೊದಲೇ ತಿಳಿಸಿದ್ದಂತೆ, ಅಚ್ಚ ವೈದಿಕ ಮನೆತನದಲ್ಲಿ ದೇವುಡು ಅವರು ಹುಟ್ಟಿದ್ದರು. ಅವರು ವೈದಿಕ ನಿಷ್ಠರಾಗಿದ್ದರೇ ಹೊರತು ಮಡಿವಂತ ಬ್ರಾಹ್ಮಣನಂತೆ ವರ್ತಿಸಲಿಲ್ಲ. ಅವರ ಚಿಂತನೆಗಳು ಪುರಾತನ ಸಂಸ್ಕೃತಿಯ ಬೇರುಳ್ಳ ಆಧುನಿಕ ದೃಷ್ಟಿಯಿಂದ ಕೂಡಿದ್ದವು. ದೇವುಡು ಅವರು

ಇತರೆ ಜಾತಿ, ಧರ್ಮಗಳನ್ನು ಅಷ್ಟೇ ಗೌರವದಿಂದಲೂ ಸಮಾನತೆಯಿಂದಲೂ ನೋಡುತ್ತಿದ್ದರು. ಚೆನ್ನಪ್ಪ ಉತ್ತಂಗಿ ಉದಾಹರಣೆ: ಒಮ್ಮೆ ವಿಶ್ವಧರ್ಮ ಸಮ್ಮೇಳನ ಉಡುಪಿಯಲ್ಲಿ ನಡೆದಾಗ ಇವರನ್ನು ಆಹ್ವಾನಿಸಿದ್ದರು. ಅದ್ವೈತ ಸಂಪ್ರದಯಾಸ್ಥರಾಗಿದ್ದರೂ, ದ್ವೈತ ಸಂಪ್ರದಾಯದ ಮೇಲೆ ಮಾಡಿದ ಭಾಷಣವನ್ನು ಕೇಳಿದ ಉಡುಪಿ ಸ್ವಾಮಿಗಳು ಇವರ ವಿದ್ವತ್ ಪ್ರತಿಭೆಯನ್ನು ಮೆಚ್ಚಿ ವಿಶೇಷವಾದ ಮನ್ನಣೆಯಿತ್ತರು. ಒಂದು ಸಲ ಡಾ|| ರೆ. ಚೆನ್ನಪ್ಪ ಉತ್ತಂಗಿಯವರನ್ನು ಮನೆಗೆ ಊಟಕ್ಕೆ ಕರೆದಾಗ, ಏಸುವೇ ನಮ್ಮ ಮನೆಗೆ ಬಂದಿದ್ದಾನೆ ಎಂಬ ನಂಬಿಕೆಯಿಂದ, ಅವರಿಗೆ ಸ್ವತಃ ಕಾಲುತೊಳೆದು ಮನೆಯೊಳಕ್ಕೆ ಬರಮಾಡಿಕೊಂಡರು ಎಂಬುದನ್ನೂ ನೆನೆಸಿದರೆ ಇವರು ಪರಧರ್ಮಕ್ಕೆ ಎಷ್ಟು ಗೌರವವನ್ನು ಕೊಡುತ್ತಿದ್ದರು ಎಂಬುದಕ್ಕೆ ನಿದರ್ಶನವಾಗಿರುತ್ತದೆ.

ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿರುವ ಅತಿಮುಖ್ಯ ಸಾಹಿತಿಗಳಲ್ಲಿ ದೇವುಡು ಅವರ ಹೆಸರು ಚಿರಸ್ಥಾಯಿಯಾಗಿ ನಿಲ್ಲುವಂತಹದು. ಕನ್ನಡ ಸಾರಸ್ವತ ಲೋಕಕ್ಕೆ ಅವರು ಕೊಟ್ಟಿರುವ ಮೂರು ಪೌರಾಣಿಕ ಕಾದಂಬರಿಗಳಾದ-ಮಹಾದರ್ಶನ, ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಅತ್ಯಮೂಲ್ಯವಾದ ಕೃತಿರತ್ನಗಳು. ಇದಲ್ಲದೇ, ಮನೋವೈಜ್ಞಾನಿಕ, ಚಾರಿತ್ರಿಕ, ಸಾಮಾಜಿಕ ಹಿನ್ನೆಲೆಯಲ್ಲಿ ಬಹಳಷ್ಟು ಕಾದಂಬರಿಗಳನ್ನೂ, ಸಣ್ಣಕಥೆಗಳನ್ನೂ ಬರೆದಿದ್ದಾರೆ. ಅವರ ಸಾಹಿತ್ಯ ಶೈಲಿ ಬಹಳ ಸರಳವಾಗಿದ್ದು, ಮಕ್ಕಳಿಂದ, ದೊಡ್ಡವರಿಗೂ ಅರ್ಥವಾಗುವಂತಿತ್ತು. ಅವರು ಬರೆಯುತ್ತಿದ್ದಾಗ ಯಾರಾದರೂ ತೊಂದರೆ ಮಾಡಿದರೆ ಅವರಿಗೆ ಬಹಳ ಕೋಪ ಬರುತ್ತಿತ್ತು. ಹತ್ತು ಹದಿನೈದು ಪುಟಗಳನ್ನು ಬರೆದು ಅದನ್ನು ನಮಗೆ ಕೊಟ್ಟು ಓದಿ ನಿಮ್ಮ ಅಭಿಪ್ರಾಯ ಏನು ಎಂದು ಕೇಳುತ್ತಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಶಸ್ತಿ ಪಡೆದ ಅವರ ಕಾದಂಬರಿ "ಮಹಾಕ್ಷತ್ರಿಯ"ವನ್ನು ಪ್ರಾರಂಭಿಸಿ ಸುಮಾರು ಮೂವತ್ತು ಪುಟವನ್ನು ನನ್ನ ಕೈಗೆ ಕೊಟ್ಟು "ಇದು ಹೇಗಿದೆ ಓದಿ ಹೇಳು" ಎಂದರು. ಮೇಲೆ ನಾನು, ಇದು ಬಹಳ ಗಹನವಾದ ವಿಷಯ, ಸಾಮಾನ್ಯರಿಗೆ ಅರ್ಥವಾಗೋದಲ್ಲ ಎಂದೆ. ಅದಕ್ಕೆ ಅವರು ಉತ್ತರವಾಗಿ, ನಾನು ಬರೆಯೋದು, ಇದನ್ನು ಓದಿ ಪ್ರಭಾವಿತರಾಗಿ ಅದರಿಂದ ಪ್ರಚೋದನೆ ಹೊಂದಿ, ಭಾರತೀಯ ಸಂಸ್ಕೃತಿಯ ಮೇಲೆ ಅವರು ಅಭಿಮಾನ ಹೊಂದುವಂತಾಗಬೇಕೆಂದು ಹೇಳಿದುದು ನನಗೆ ಚೆನ್ನಾಗಿ ನೆನಪಿದೆ. ಅವರಿಗೆ ಭಾರತೀಯ ಸಂಸ್ಕೃತಿಯ ಮೇಲೆ ಅಪಾರವಾದ ಮಮತೆ, ಭಾರತ ದೇಶವು ಮಿಕ್ಕ ಪ್ರಪಂಚ ದೇಶಗಳಿಗೆ ಒಂದು ಮಾರ್ಗದರ್ಶನವಾದ ದೇಶವಾಗಬೇಕೆಂಬ ಹೆಬ್ಬಯಕೆ ಅವರದಾಗಿತ್ತು.

ಹನುಮಂತಯ್ಯನವರು ಸುಸಂಸ್ಕೃತರು. ಕನ್ನಡದ ಬಗ್ಗೆ ಆಸಕ್ತಿ ಇದ್ದವರು. ಕನ್ನಡವನ್ನು ಚೆನ್ನಾಗಿ ಓದಿಕೊಡವರು. ಹನುಮಂತಯ್ಯನವರಿಗೆ ದೇವುಡು ನರಸಿಂಹಶಾಸ್ತ್ರಿಗಳನ್ನು ಕಂಡರೆ ವಿಶ್ವಾಸ, ಅಭಿಮಾನ, ಗೌರವ. ಆಗಾಗ ದೇವುಡು ಅವರನ್ನು ಕಾಣಲು ಅವರ ಮನೆಗೆ ಬರುತ್ತಿದ್ದರು. ಅವರು ಮುಖ್ಯಮಂತ್ರಿಗಳಾದ ಮೇಲೂ ಹೀಗೆ ಬರುತ್ತಿದ್ದುದುಂಟು. ಹೀಗೆ ಇವರಿಬ್ಬರೂ ಒಮ್ಮೆ ಮಾತನಾಡುತ್ತಾ ಇರುವಾಗ ಸಂಸ್ಕೃತ ವರ್ಧನೆಯ ಮಾತು ಬಂದಿತು. ದೇವುಡು ಅವರು ಸಂಸ್ಕೃತಿ ಪ್ರಸಾರಕ್ಕಾಗಿ ಒಂದು ಇಲಾಖೆಯನ್ನೇ ಸರಕಾರ ಆರಂಭಿಸಿ ಒಬ್ಬ ವಿದ್ವಾಂಸರಾದ, ಕನ್ನಡದಲ್ಲಿ ಅಭಿಮಾನವುಳ್ಳ ಅಧಿಕಾರಿಯನ್ನು ಈ ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಿಸಿ ಸಾಂಸ್ಕೃತಿಕ ಚಟುವಟಿಕೆಗಳಿಗೆ

ಉತ್ತೇಜನ ಕೊಡಬೇಕು ಎನ್ನುವ ಸಲಹೆಯನ್ನು ನೀಡಿದರು. ಈ ಸಲಹೆ ಹನುಮಂತಯ್ಯನವರಿಗೆ ಹಿಡಿಸಿತು. ಅವರು ಕೆಲವು ದಿನಗಳಲ್ಲಿ ಈ ರೀತಿಯ ಒಂದು ಸಂಸ್ಥೆಯನ್ನು ಆರಂಭಿಸಿದರು. ಹನುಮಂತಯ್ಯನವರು ದೇವುಡು ನರಸಿಂಹಶಾಸ್ತ್ರಿಗಳನ್ನು ಈ ಇಲಾಖೆಯ ಮುಖ್ಯಸ್ಥರಾಗುವಂತೆ ಕೇಳಿದರು. ಆದರೆ ದೇವುಡುರವರು ಇದಕ್ಕೆ ಒಪ್ಪಲಿಲ್ಲ. ಅವರು ತಮಗೆ ಸ್ನೇಹಿತರಾದ ಸರ್ಕಾರದ ಸೇವೆಯಲ್ಲಿಯೇ ಇದ್ದ ಸಾಹಿತಿಗಳು ಹಿರಿಯರೂ ಆದ ಸಿ.ಕೆ. ವೆಂಕಟರಾಮಯ್ಯನವರು ಈ ಹುದ್ದೆಗೆ ಅರ್ಹರಾದವರು ಎಂದು ಹನುಮಂತಯ್ಯನವರಿಗೆ ಹೇಳಿದರು. ಸಿ.ಕೆ. ವೆಂಕಟರಾಮಯ್ಯನವರನ್ನು ಆ ಇಲಾಖೆಯ ಮುಖ್ಯಸ್ಥರಾಗಿ ಸರ್ಕಾರ ನೇಮಿಸಿತು.

ಒಂದು ದಿನ ಸಿ.ಕೆ. ವೆಂಕಟರಾಮಯ್ಯನವರು ನಮ್ಮ ಮನೆಗೆ ಬಂದು ತಮಗೆ ಈ ಕೆಲಸವನ್ನು ಸರ್ಕಾರ ಒಪ್ಪಿಸಿರುವ ವಿಷಯವನ್ನು ತಿಳಿಸಿದರು. ದೇವುಡುರವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಅವರನ್ನು ಅಭಿನಂದಿಸಿದರು. ಸಿ.ಕೆ. ವೆಂಕಟರಾಮಯ್ಯನವರು ನಮ್ಮ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರು ಬೇಕಾಗಿದ್ದಾರೆ. ನೀವು ನನ್ನ ಜೊತೆಯಲ್ಲಿ ಕೆಲಸ ಮಾಡುವುದಾದರೆ ಸಂತೋಷ ಎನ್ನುವ ಅರ್ಥಬರುವಂತೆ ಹೇಳಿದರು. ನಮ್ಮ ತಂದೆಯವರು ನಕ್ಕು, `ಸರ್ಕಾರಿ ಹುದ್ದೆಗೂ ನನಗೂ ದೂರ, ಬೇಡ' ಎಂದು ಹೇಳಿದರು.

ಉಡುಪಿ ಶ್ರೀ ಕೃಷ್ಣನು ನೆಲೆಸಿರುವ ಸ್ಥಳ. ದ್ವೈತ ಮತಾಚಾರ್ಯರಾದ ಶ್ರೀ ಮಧ್ವಾಚಾರ್ಯರ ಜನ್ಮಸ್ಥಳ. ಅವರೇ ಪ್ರತಿಷ್ಠಾಪಿಸಿದ ಶ್ರೀಕೃಷ್ಣ. ಅಷ್ಟಮಠಗಳ ಕೇಂದ್ರ. ದ್ವೈತಮತದ ಅತ್ಯಂತ ಪ್ರಮುಖ ಸ್ಥಳವಾದ ಉಡುಪಿಯಲ್ಲಿ ದ್ವೈತಮತವನ್ನು ಕುರಿತು ಕಟ್ಟಾ ಅದ್ವೈತಿಗಳಾದ ಶ್ರೀ ದೇವುಡು ನರಸಿಂಹಶಾಸ್ತ್ರಿಗಳಿಗೆ ಮಾತನಾಡಲು ಆಹ್ವಾನ. ಈ ಆಹ್ವಾನ ಬಂದುದು ಪರ್ಯಾಯ ಪೀಠಸ್ಥರಾದ ಸ್ವಾಮಿಗಳಿಂದ. ವೇದ ಉಪನಿಷತ್ತುಗಳನ್ನು ಅಧ್ಯಯನ ಮಾಡಿದ್ದ, ತತ್ತ್ವಶಾಸ್ತ್ರದಲ್ಲಿ ಪಾರಂಗತರಾದ ದೈವಭಕ್ತರಾದ ಶ್ರೀ ದೇವುಡು ಅವರಿಗೆ ಈ ಆಮಂತ್ರಣದಿಂದ ಮಹದಾನಂದವಾಯಿತು. ಅನಾಯಾಸವಾಗಿ ದೊರೆಯುವ ಶ್ರೀ ಕೃಷ್ಣನ ದರ್ಶನಕ್ಕಾಗಿ ನಮ್ಮ ತಾಯಿ ಗೌರಮ್ಮನವರನ್ನು ಕರೆದುಕೊಂಡು ಅತ್ಯುತ್ಸಾಹದಿಂದ ಉಡುಪಿಗೆ ಪ್ರಯಾಣ ಬೆಳೆಸಿದರು.

ಶ್ರೀ ಕೃಷ್ಣನ ಸನ್ನಿಧಿಯಲ್ಲಿ ಪ್ರವಚನ ನಡೆಯುತ್ತಲಿತ್ತು. ನಡುವೆಯೇ ಶಾಸ್ತ್ರಿಗಳಿಗೊಂದು ತಂತಿ. ಪಾಪ! ಅವರು ಕನಸಿನಲ್ಲಿಯೂ ಊಹಿಸಲಾರದಂತಹ ದುಃಖ ಸಂಗತಿಯನ್ನು ಅವರಿಗಾಗಿ ಹೊತ್ತು ತಂದಿತ್ತು ಆ ತಂತಿಯ ಸಂದೇಶ. ಹಿರಿಯ ಮಗ, ಯುವಕ ರಾಮು ದೈವಾಧೀನನಾದನೆಂಬ ದಾರುಣ ವಾರ್ತೆ. ಕನ್ನಡ ಎಂ.ಎ. ಮಾಡಿಕೊಂಡು, ಕೋಲಾರದ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಸೇವೆ ಸಲ್ಲಿಸುತ್ತಿದ್ದ ಕಿರಿಯ ವಯಸ್ಸಿನವನು. ಇನ್ನೂ ಅನೇಕ ಕ್ಷೇತ್ರಗಳಲ್ಲಿ ಬೆಳವಣಿಗೆಯಾಗುತ್ತಾನೆಂಬ ಭರವಸೆಯನ್ನು ಮೂಡಿಸಿದ್ದ. ತಂದೆ-ತಾಯಿಗಳಿಗೆ ತಮ್ಮ ಇಳಿವಯಸ್ಸಿನಲ್ಲಿ ಬೆಂಬಲವಾಗಿ ನಿಲ್ಲಬೇಕಾದವನು ಹಠಾತ್ ಆಗಿ ವಿಧಿವಶನಾಗಿದ್ದ. ತಾಯಿ ಗೌರಮ್ಮನನ್ನು ಹೇಗೆ ಸಮಾಧಾನ ಪಡಿಸಿದರು. ತಾವು ಆ ನೋವನ್ನು ಹೇಗೆ ಸಹಿಸಿಕೊಂಡರು ಎಂಬುದನ್ನು ಊಹಿಸುವುದೂ ಕಷ್ಟ. ತಮ್ಮ ಉಪನ್ಯಾಸವನ್ನು ಮುಗಿಸಿ ಕೂಡಲೇ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ದೈವ ಅವರನ್ನು ಸಮಾಧಾನದಿಂದ ಇರಲು ಬಿಡಲಿಲ್ಲ.

ಮುನಿಸ್ವಾಮಪ್ಪ ಮತ್ತು ನಮ್ಮ ತಂದೆಯವರು ಒಂದೇ ಬಡಾವಣೆಯ ವಾಸಿಗಳು. ಪರಸ್ಪರ ಪರಿಚಿತರು. ನಮ್ಮ ತಂದೆಯವರನ್ನು ಕಂಡರೆ ಮುನಿಸ್ವಾಮಪ್ಪನವರಿಗೆ ಗೌರವ, ಅಭಿಮಾನ. ಅವರು ಆಗಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ಸೇರಿದ ಕೆಲವು ಎಕರೆಗಳಷ್ಟು ಸ್ಥಳವನ್ನು ಬೆಂಗಳೂರು ನಗರಾಭಿವೃದ್ಧಿ ಮಂಡಲಿ ಒಂದು ಪ್ರಕಟಣೆಯನ್ನು ನೀಡಿ ಅವರಿಗೆ ಆಜ್ಞೆಯನ್ನು ಹೊರಡಿಸಿತು. ಅವರಿಗೆ ಆಧಾರವಾಗಿದ್ದುದು ಕೇವಲ ಈ ಜಮೀನು ಮಾತ್ರ. ನಗರಾಭಿವೃದ್ಧಿ ಮಂಡಲಿ ತೆಗೆದುಕೊಂಡರೆ ಇವರಿಗೆ ಪರಿಹಾರವಾಗಿ ನೀಡುವ ಜಮೀನಿನ ಬೆಲೆ ಬಹಳ ಕಡಿಮೆಯಾಗುತ್ತಿತ್ತು. ಅವರ ಮಕ್ಕಳಿಗೆ ಜೀವನೋಪಾಯಕ್ಕೆ ಇದಲ್ಲದೆ ಬೇರೆ ಆಧಾರವಿರಲಿಲ್ಲ. ಅದನ್ನು ಚಿಕ್ಕ ಚಿಕ್ಕ ನಿವೇಶನಗಳನ್ನಾಗಿ ಮಾಡಿ ಮಾರುವುದರಿಂದ ಕೊಂಚ ಹೆಚ್ಚಿಗೆ ಹಣ ಗಳಿಸಬಹುದು ಎಂಬುದು ಅವರ ಆಸೆ.

ದೇವುಡು ನರಸಿಂಹಶಾಸ್ತ್ರಿಗಳಿಗೂ ಆಗಿನ ಮುಖ್ಯಮಂತ್ರಿಗಳಿಗೂ ಚೆನ್ನಾಗಿ ಪರಿಚಯವಿರುವ ವಿಷಯ ಮುನಿಸ್ವಾಮಪ್ಪನವರಿಗೆ ಗೊತ್ತಿತ್ತು. ಮುಖ್ಯಮಂತ್ರಿಗಳು ಶಾಸ್ತ್ರಿಗಳನ್ನು ಬಹಳ ಗೌರವದಿಂದ ಕಾಣುತ್ತಿದ್ದರು ಹಾಗೂ ಅವರ ಮನೆಗೆ ಬರುತ್ತಿದ್ದುದುಂಟು. ಶಾಸ್ತ್ರಿಗಳಲ್ಲಿ ತಮ್ಮ ದುಃಖವನ್ನು ಹೇಳಿಕೊಂಡು ಸಮಸ್ಯೆಯನ್ನು ವಿವರಿಸಿದರು, ಮತ್ತು ಸಹಾಯಕ್ಕಾಗಿ ಪ್ರಾರ್ಥಿಸಿದರು. ಸರ್ಕಾರಿ ಪ್ರಕಟಣೆಯನ್ನು ಹಿಂತೆಗೆದುಕೊಳ್ಳುವಂತೆ ಮಾಡಿದರೆ ತಮಗೆ, ತಮ್ಮ ಸಂಸಾರಕ್ಕೆ ಬಹಳ ಸಹಾಯಕವಾಗುತ್ತದೆ ಎಂದು ವಿನಂತಿಸಿಕೊಂಡರು.

ದೇವುಡುರವರಿಗೆ ಅವರ ಕಷ್ಟದ ಅರಿವಾಯಿತು. ಅವರು ಪ್ರಯತ್ನಪಡುವುದಾಗಿ ಆಶ್ವಾಸನೆ ನೀಡಿದರು. ಮುಖ್ಯಮಂತ್ರಿಗಳಿಗೆ ವಿಷಯವನ್ನು ವಿವರಿಸಿ ಸಹಾಯ ಮಾಡುವಂತೆ ಕೇಳಿಕೊಂಡರು. ಶಾಸ್ತ್ರಿಗಳು ತಮ್ಮ ಸ್ವಾರ್ಥಕ್ಕಾಗಿ ಏನನ್ನೂ ಕೇಳಿದವರಲ್ಲ; ಏನನ್ನೂ ಕೇಳುವವರೂ ಅಲ್ಲ. ಈಗ ತಮ್ಮ ಪರಿಚಿತರ ಸಹಾಯಕ್ಕಾಗಿ ಕೇಳುತ್ತಿದ್ದಾರೆ ಎಂಬುದನ್ನು ತಿಳಿದುಕೊಂಡ ಹನುಮಂತಯ್ಯನವರು ಸಂಬಂಧಪಟ್ಟ ಅಧಿಕಾರಿಗಳೊಡನೆ ಮಾತನಾಡಿ, ಸರ್ಕಾರಿ ಪ್ರಕಟಣೆಯನ್ನು ಹಿಂತಿಗೆದುಕೊಳ್ಳುವಂತೆ ಆದೇಶಿಸಿದರು.

ಮುನಿಸ್ವಾಮಪ್ಪನವರಿಗೆ ಬಹಳ ಸಂತೋಷವಾಯಿತು. ಅವರು ದೇವುಡುರವರನ್ನು ಕಂಡು ತಮ್ಮ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸಿದರು. ಆನಂತರ ಮುನಿಸ್ವಾಮಪ್ಪನವರು ತಮ್ಮ ಯೋಜನೆಯಂತೆ ಆ ಸ್ಥಳವನ್ನು ನಿವೇಶನಗಳನ್ನಾಗಿ ಮಾಡಿ, ಮಾರಿದರು. ಒಂದು ದಿನ ನಮ್ಮ ಮನೆಗೆ ಬಂದು ನಮ್ಮ ತಂದೆಯವರೊಡನೆ, "ಶಾಸ್ತ್ರಿಗಳೇ ನಿಮಗೆ ಇಬ್ಬರು ಗಂಡು ಮಕ್ಕಳಿದ್ದಾರೆ, ಹೇಗೂ ನಾನು ನಿವೇಶನಗಳನ್ನು ಮಾರಿ ನಾಲ್ಕು ಕಾಸು ಸಂಪಾದಿಸಿಕೊಳ್ಳುತ್ತಿದ್ದೇನೆ. ನಿಮ್ಮ ಇಬ್ಬರು ಮಕ್ಕಳ ಹೆಸರಿನಲ್ಲಿ ಒಂದೊಂದು ಸೈಟನ್ನು ಕೊಡುತ್ತೇನೆ. ನೀವು ಇದಕ್ಕೆ ಒಪ್ಪಬೇಕು' ಎಂದು ವಿನಂತಿಸಿಕೊಂಡರು.

ಶಾಸ್ತ್ರಿಗಳು ಇದಕ್ಕೆ ಸುತರಾಂ ಒಪ್ಪಲಿಲ್ಲ. ಅಷ್ಟೇ ಅಲ್ಲ ಅವರು ಈ ವಿಷಯದಲ್ಲಿ ತೀರ ಒತ್ತಾಯ ಮಾಡಿದಾಗ, ಒಂದು ಬಾರಿ, "ಮುನಿಸ್ವಾಮಪ್ಪನವರೇ ನನ್ನ ಮಕ್ಕಳಿಗೆ, ನನಗೆ ಸೈಟನ್ನು ಪಡೆಯಲು ನಾನು ಈ ಕಾರ್ಯವನ್ನು ಮಾಡಲಿಲ್ಲ. ನೀವು ಈ ವಿಷಯವಾಗಿ ಬಲವಂತಪಡಿಸಬಾರದು. ಇನ್ನು ಮುಂದೆ ಈ ವಿಷಯವನ್ನು ಬಿಟ್ಟು ಬೇರೆ ಏನನ್ನಾದರೂ ಮಾತನಾಡುವುದಾದರೆ

ನಮ್ಮ ಮನೆಗೆ ಬನ್ನಿ" ಎಂದು ಸ್ವಲ್ಪ ಕಟುವಾಗಿಯೇ ಹೇಳಿದರು. ಮುನಿಸ್ವಾಮಪ್ಪನವರಿಗೆ ಇದರಿಂದ ನಿರಾಸೆಯಾಯಿತು. ಆದರೆ ನಮ್ಮ ತಂದೆಯವರಿಗೆ ಒಂದು ಒಳ್ಳೆಯ ಕೆಲಸ ಮಾಡಿದೆನೆಂಬ ಸಂತೋಷವಾಯ್ತು. ಇಂತಹ ನಿಸ್ವಾರ್ಥ ಮನೋಭಾವ ಈಗ ಕಾಣುವುದೇ ವಿರಳ. ಯಾವುದೇ ಸಣ್ಣ ಸಂದರ್ಭವನ್ನು ತಮ್ಮ ಸ್ವಂತಲಾಭಕ್ಕಾಗಿ ಬಳಸಿಕೊಳ್ಳುವುದನ್ನು ನಾವು ಈಗ ನೋಡುತ್ತಿದ್ದೇವೆ. ಇಂತಹ ವ್ಯಕ್ತಿಗಳು ಇದ್ದರೇ ಎಂದು ನಾವು ಆಶ್ಚರ್ಯಪಡುವಂತಹದು.

ದೇವುಡು ಅವರು ಹುಟ್ಟು ಹೋರಾಟಗಾರರು. ಸ್ವತಂತ್ರ ಮನೋಧರ್ಮವನ್ನು ಕಂಡುಕೊಂಡಿದ್ದ ದೇವುಡು ಅವರು ಜೀವನದಲ್ಲಿ ಎಷ್ಟೇ ತೊಂದರೆಗಳು ಬಂದರೂ ಹೆದರದೆ, ಅವುಗಳನ್ನು ಧೈರ್ಯವಾಗಿ ಎದುರಿಸಿದರು. ಹಣಕಾಸಿನ ಮುಗ್ಗಟ್ಟು, ವ್ಯಾಪಾರ ಮಾಡಲು ಹೋಗಿ ನಷ್ಟ ಅನುಭವಿಸಿ, ಇದ್ದ ಹಣವನ್ನೆಲ್ಲಾ ಕಳೆದುಕೊಂಡರು. ಚಿತ್ರ ತಯಾರಿಕೆಯಲ್ಲಿ ಕೈಹಾಕಿ ಸೋತರು. ಕೈಗೆ ಬಂದಿದ್ದ ಮಗನನ್ನು ಕಳೆದುಕೊಂಡರು. ಮಧುಮೇಹ ರೋಗದಿಂದ ಅವರು ಕಾಲು ಕಳೆದುಕೊಳ್ಳಬೇಕಾಯ್ತು. ಹೀಗೆ ಹಲವಾರು ಕಷ್ಟ ಪರಂಪರೆಯನ್ನೇ ಅವರು ಅನುಭವಿಸಬೇಕಾದುದು ಅವರ ದುರಂತ.

ಅವರ ಧೀಮಂತ ಶಕ್ತಿತ್ವಕ್ಕೆ ಒಂದು ಉದಾಹರಣೆಯಾಗಿ ಹೇಳುವುದಾದರೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅವರು ಮಧುಮೇಹ ರೋಗದಿಂದ ಕಾಲು ಕತ್ತರಿಸಿಕೊಂಡು ಮಲಗಿದ್ದಾಗ, ಅವರ ಸಂಬಂಧಿಗಳೊಬ್ಬರು ಬಂದು `ಅಯ್ಯೋ, ದೇವುಡು ದೇವರು ಎಂತಹ ಅನ್ಯಾಯ ಮಾಡಿಬಿಟ್ಟನೋ' ನಿನಗೆ ಹೀಗೆ ಆಗಬಾರದಾಗಿತ್ತು' ಎಂದು ಅಳುವುದಕ್ಕೆ ಷುರು ಮಾಡಿದರು. ಅದಕ್ಕೆ ಅವರು ಉತ್ತರ ಕೊಟ್ಟಿದ್ದು-"ಏ ಹೋಗೋ ನಾನು ನಂಬಿದ ದೇವರಿಗೆ ನನ್ನ ಒಂದು ಕಾಲು ಬೇಕಾಗಿತ್ತು. ತೆಗೆದುಕೊಂಡ. ಆದರೂ ನಾನು ಇರುತ್ತೇನೆ ನೋಡು" ಎಂದು. ಈ ಮಾತನಾಡಿದಾಗ ನಾನು ಪಕ್ಕದಲ್ಲಿದ್ದೆ. ಇದಾದ ಮೇಲೆ ಮೂರುವರೆ ವರ್ಷ ಜೀವಿಸಿದ್ದು. ಆ ಸಮಯದಲ್ಲೇ ಅವರ ಕಟ್ಟಕಡೆಯ ಕೃತಿ "ಮಹಾದರ್ಶನ" ಹೊರ ಬಂದಿದ್ದು.

ಇಷ್ಟಾದರೂ ಧೈರ್ಯದಿಂದ ನಿರ್ಭಯದಿಂದ ಜೀವನವನ್ನು ಎದುರಿಸಿದ ಧೀಮಂತ ವ್ಯಕ್ತಿ ದೇವುಡು ನಮ್ಮ ತಂದೆ.

★

V೧

ಆತ್ಮಕಥನ

ದೇವುಡು ನರಸಿಂಹಶಾಸ್ತ್ರಿ

ಇನ್ನೆರಡು ದಿನವಾದರೆ ಕ್ರಿಶ್ಚಿಯನ್‌ರ ಹೊಸ ವರ್ಷ, ೧೮೯೭. ಆ ದಿನ ದುರ್ಮುಖ ಸಂವತ್ಸರದ ಮಾರ್ಗಶಿರ ಬಹುಳ ದಶಮಿ ಮಂಗಳವಾರ (೩೦/೨೯-೧೨-೧೮೯೬) ಜನನ. ತಾಯಿ ಕೋಲಾರದ ಮಣಿಕುಂಡಲ ವಂಶದವರು. ತಂದೆ ಕಂಭಾಲೂರ ವಂಶದವರು. ಅರಮನೆಯ ಋತ್ವಿಕ್ಕರಾಗಿ, ರಾಜಕುಲಗಳ ಪುರೋಹಿತರಾಗಿ ವೇದಶಾಸ್ತ್ರ ಸಂಪನ್ನರೆಂದು ಪ್ರಸಿದ್ಧರಾದ ವಂಶ. ತುಂಬಿದ ಮನೆಯ ತುಂಬು ಸಂಸಾರದವರಾದರೂ ತಂದೆಯವರು ಅಂತರ್ಮುಖಿಗಳೆಂದು ಪ್ರಸಿದ್ಧರು. ಸುಮಾರು ೧೮೮೦ರಲ್ಲಿ ಮೈಸೂರಿನಲ್ಲಿ ಲಕ್ಷ್ಮೀನರಸಿಂಹ ಪ್ರೆಸ್ ಎಂದು ಒಂದು ಸ್ಥಾಪನೆಯಾಯಿತು. ಪುರಾತನ ಶಾಸ್ತ್ರಗಳನ್ನು ಪ್ರಕಟಿಸಬೇಕು ಎಂಬುದು ಅದರ ಉದ್ದೇಶ. ಅದರ ಸ್ಥಾಪಕರಲ್ಲಿ ಇವರೂ ಒಬ್ಬರು. ೧೯೦೨ರಲ್ಲಿ ಪ್ಲೇಗಿಗೆ ತುತ್ತಾಗದೆ ಇದ್ದರೆ ಇವರು ನಿರ್ಣಯಸಾಗರ ಪ್ರೆಸ್ಸಿನಲ್ಲಿ ಸಂಶೋಧಕರಲ್ಲಿ ಒಬ್ಬರಾಗುತ್ತಿದ್ದರು. (ತಂದೆ ತೀರಿಕೊಂಡಾಗ ಆರು ವರುಷದ ಬಾಲಕ)

ಪಿತೃವಿಯೋಗವಾದ ಮೇಲೆ ಮನೆಯಲ್ಲಿ ಅನಾಯಕವಾಯಿತು. ಓದುವ ಹಂಬಲ ಹೆಚ್ಚಾಗಿರುವ ಹುಡುಗರಿಗೆ ಸ್ವಚ್ಛಂದತೆಯು ಇರುವುದೇ ಒಳ್ಳೆಯದೆಂದು ತೋರುತ್ತದೆ. ಅಂತೂ ಹತ್ತು ಹನ್ನೆರಡು ವರ್ಷಗಳ ವೇಳೆಗೆ ರಾಮಾಯಣ, ಭಾರತ, ಭಾಗವತ, ಬ್ರಹ್ಮಾಂಡ ಪುರಾಣ (ಆಗಲೇ ಕನ್ನಡದಲ್ಲಿ ಆಗಿತ್ತು.) ಮೊದಲಾದುವುಗಳನ್ನು ಓದಿದ್ದೆ. ಬೇಸಿಗೆಯ ರಜೆ ಬಂದಾಗ ಮೈಸೂರು ಕೋಟೆಯಿಂದ ಓರಿಯಂಟಲ್ ಲೈಬ್ರರಿಗೆ ಓದುವುದಕ್ಕೆ ಹೋಗುತ್ತಿದ್ದೆ. ಆಗ ಗೋಲಿ, ಚಿನ್ನಿಕೋಲು, ಫುಟ್‌ಬಾಲು, ಇವು ನಮ್ಮ ಆಟಗಳು. ಆದರೂ ನಮ್ಮ ಬೀದಿಯಲ್ಲಿ ಹಿರಿಯರದೊಂದು ಸಂಧ್ಯಾ ಸಂಘವಿತ್ತು. ಅಲ್ಲಿ ಹೋಗಿ ಕುಳಿತು ಅವರ ಹರಟೆಗಳನ್ನು ಕೇಳುವುದರಲ್ಲಿ, ಮಧ್ಯಾಹ್ನದ ಹೊತ್ತು ಹೆಂಗಸರು ಹೇಳುವ ಹಾಡುಗಳನ್ನು ಕೇಳುವುದರಲ್ಲಿ ಹೆಚ್ಚು ಆಸಕ್ತಿ. ಬೇಗ ಬೇಗ ಬರೆಯುತ್ತಿದ್ದೆನೆಂದು ಹೆಂಗಸರು ತಿಂಡಿಕೊಟ್ಟು ಹಾಡುಗಳನ್ನು ಬರೆಸುವರು. ಲಿಂಗರಾಜ ಅರಸಿನವರ ಚಂದ್ರಾವಳಿಯನ್ನು ಸುಮಾರು ಒಂದು ವಾರದೊಳಗಾಗಿ ಬರೆದಿದ್ದೆ. ಹೀಗೆ ಹಿರಿಯರ ಸಂಧ್ಯಾ ಸಂಘದಲ್ಲೂ ಒಂದು ದಿನ ಒಂದು ಪ್ರಸಂಗ ನಡೆದು ಅಲ್ಲಿ ನನಗೆ ಒಂದು ಸ್ಥಾನ ಸಿಕ್ಕಿತು.

ಕ್ರಿಶ್ಚಿಯನ್ ಪಾದ್ರಿಗಳ ಹೋರಾಟದ ಕಾಲ ಅದು. ಸಾಧ್ವೀ-ವೃತ್ತಾಂತ ಪತ್ರಿಕೆಗಳು ಹಿಂದೂ ಕ್ರಿಶ್ಚಿಯನ್ ಪ್ರತಿನಿಧಿಗಳು. ಒಬ್ಬ ಪಾದ್ರಿಯು, "ಕೃಷ್ಣನು ಕೊಳಲು ಊದಿದಾಗ ಒಣಗಿದ್ದ ಗಿಡಮರಗಳೆಲ್ಲ ಚಿಗುರಿದವಲ್ಲ; ಕೈಯಿಂದ ಕೊಳಲೇಕೆ ಚಿಗುರಲಿಲ್ಲ?" ಎಂದು ಒಂದು ಸವಾಲ್ ಹಾಕಿದ್ದ. ಹಿರಿಯರ ಸಂಘದಲ್ಲಿ ಈ ಸವಾಲ್ ಚರ್ಚೆ ನಡೆಯುತ್ತಿದ್ದಾಗ ನಾನು ಹೇಳಲೇ ಎಂದೆ. ಆಗಬಹುದು ಎಂದರು. "ಚಿಗುರಿದರೆ ತನ್ನನ್ನು ಎಸೆದುಬಿಡುವನು ಎಂದು ಹೆದರಿಕೊಂಡು ಚಿಗುರಲಿಲ್ಲ" ಎಂದೆ. ಎಲ್ಲರೂ ಭೇಷ್, ಭೇಷ್ ಎಂದರು. ಕೃತವಿದ್ಯರೂ, ಕೃತಮತಿಗಳೂ ಆದ ಅನೇಕರು ಅಲ್ಲಿ ಸೇರುವರು. ಪುರುಷಾರ್ಥ ಚತುಷ್ಟಯ ಚಿಂತಾವಿಚಾರವೂ ನಡೆಯುವುದು. ಅದನ್ನು ಕೇಳಿ ಕೇಳುತ್ತಾ

ನನಗೆ ಎಷ್ಟೋ ಸಂಸ್ಕಾರವಾಯಿತು. ನಮ್ಮ ತಂದೆಯವರು ಕವಿತ್ವಗಳನ್ನು ಮಾಡುತ್ತಿದ್ದರು. ಅವುಗಳನ್ನು ಕೇಳಿದ್ದ ನನಗೂ ಕವಿಯಾಗಬೇಕು ಎನ್ನಿಸಿತು. ಮನೆತನದ ವಾಹಿನಿಗೆ ಅನುಸಾರವಾಗಿ ಸಂಸ್ಕೃತಾಧ್ಯಯನಕ್ಕೆ ತಿರುಗಿ, ಸಂಸ್ಕೃತ ಕವಿತ್ವಕ್ಕೆ ಹೊರಳಬೇಕಾಗಿದ್ದ ಮನಸ್ಸು ಕನ್ನಡದ ಕಡೆ ತಿರುಗಿತು. ಸುಮಾರು ೧೯೧೨ರ ವೇಳೆಗೆ ನಾನು ಛಂದಸ್ಸು, ವ್ಯಾಕರಣಗಳನ್ನು ಓದಿ ಪದ್ಯಗಳನ್ನು ಬರೆದಿದ್ದೆ. ನಾಟಕ ಬರೆಯುವ ಹುಚ್ಚು ಹಿಡಿಯಿತು. ಹುಡುಗರ ಕಂಪೆನಿ ನಾಟಕಗಳಿಗೆ ಪದ್ಯ ಬರೆಯುವುದರಿಂದ ಪಾರ್ಟು ಮಾಡುವವರೆಗೆ ಎಲ್ಲದರಲ್ಲೂ ನಾನುಂಟು. ೧೯೧೨ರಲ್ಲಿ ನಾನು ಬರೆದಿದ್ದ `ಸಾಹಸ ವರ್ಮ' ಎಂಬ ನಾವೆಲ್ಲನ್ನು ಪ್ರಕಟಿಸಿದೆ. `ಮಧುರವಾಣಿ' ನನ್ನ ಪದಗಳನ್ನು ಪ್ರಕಟಿಸುತ್ತು. ನಾಟಕ ಬರೆಯುವ ಹುಚ್ಚು ನಾಟಕ ಶಿರೋಮಣಿಗಳ ಹತ್ತಿರಕ್ಕೂ ಎಳೆದುಕೊಂಡು ಹೋಯಿತು. ಅವರ ಕಂಪನಿಯಲ್ಲಿ ಪಾರ್ಟು ಮಾಡಿದ್ದೆ. ಮುಂದೆ ರಾಘವಾಚಾರ್ಯರ ಜೊತೆಯಲ್ಲಿ ಪಾರ್ಟು ಮಾಡಿದೆ. ಆದರೂ ನಾನು ರಂಗಭೂಮಿಯಲ್ಲಿ ವರದಾಚಾರ್ಯರ ಶಿಷ್ಯ.

ರತ್ನಾವಳಿ ಕಂಪನಿಯಲ್ಲಿ ರಾಜಕವಿ ಶ್ರೀನಿವಾಸಯ್ಯಂಗಾರ್ಯರ ಪರಿಚಯವಾಯಿತು. ಅವರು ನಾಟಕ ಬರೆಯುವುದು, ಪದ್ಯ ಕಟ್ಟುವುದು ಮೊದಲಾದವುಗಳನ್ನೆಲ್ಲ ಕಲಿಸಿದರು. ೧೯೧೬ರಲ್ಲಿ ನಾನೇ ನಾಟಕ ಬರೆದು ಅಭ್ಯಾಸ ಮಾಡಿಸಿ ಆಡಿಸಿದ್ದೆ. ಪಂಡಿತ ಕರಿಬಸವ ಶಾಸ್ತ್ರಿಗಳಲ್ಲಿಗೂ ಆಗಾಗ ಹೋಗುತ್ತಿದ್ದೆ. ಶ್ರೀನಿವಾಸಯ್ಯಂಗಾರ್ಯರ ಪ್ರಭಾವವೇ ನನ್ನ ಸಾಹಿತ್ಯ ವೃತ್ತಿಯನ್ನು ರೂಪಿಸಿದುದು.

೧೯೦೮ರ ವೇಳೆಗೆ ಮೈಸೂರಿನಲ್ಲಿ ಬಂಕಿಂಚಂದ್ರರ ನಾವೆಲ್ಲುಗಳು ಪ್ರಕಟವಾದುವು. ಯಾರಾದರೂ ವೆಂಕಟಾಚಾರ್ಯರ ನಾವೆಲ್ ಎಂದರೆ ನನಗೇಕೋ ಕೋಪ. ಕನ್ನಡ ಬರದೆ ಬಂಗಾಳಿ ಬಲ್ಲವರೊಬ್ಬರು ರಜಪೂತ ಜೀವನ ಸಂಧ್ಯಾ ಎಂಬ ಪುಸ್ತಕವನ್ನು ಕನ್ನಡಕ್ಕೆ ಬರೆದರು. ಅವನ್ನೆಲ್ಲ ತಿದ್ದಿ ಬರೆದಿದ್ದೆ. ನನ್ನ ದ್ವಿತೀಯ ಭಾಷೆ ಸಂಸ್ಕೃತವಾಗಿದ್ದರೂ ಎಫ್.ಎ.ಬಿ.ಎ.ಗಳಿಗೆ ಕನ್ನಡ ಪಾಠ ಹೇಳುತ್ತಿದ್ದೆ. ಒಬ್ಬರು ಕನ್ನಡ ಕಾದಂಬರಿಯನ್ನು ಪಾಠ ಹೇಳಿದ್ದಕ್ಕೆ ಕಾಣಿಕೆಯಾಗಿ ಕೊಟ್ಟರು. ಹೈಸ್ಕೂಲಿಗೆ ಬರುವ ವೇಳೆಗೆ ಶಬ್ದಮಣಿದರ್ಪಣ ಕಂಠಪಾಠವಾಗಿತ್ತು. ಛಂದೋಂಬುಧಿ ಚೆನ್ನಾಗಿ ಓದಿದ್ದೆ.

ಬಂಕಿಂಚಂದ್ರರ ನಾವೆಲ್ಲು ನನಗೆ ಪಂಚಪ್ರಾಣ. ಆದರೂ ಅವು ಭಾಷಾಂತರಗಳು, ದೇಶಾಂತರ ಕಥೆಗಳು ಎಂದು ಸಂಕಟ. ಹೈಸ್ಕೂಲಿನಲ್ಲಿ ಡೂಮಾ ಸ್ಕಾಟ್ ಮೊದಲಾದವರನ್ನು ಓದಿದಾಗ ಬಂಕಿಂರ ಮೂಲ ಎಲ್ಲಿದೆ ಎಂದು ತಿಳಿಯಿತು. ಅಂದಿನಿಂದ ಎಂದರೆ ೧೯೦೮ರಿಂದ ನಾವೆಲ್ಲ ಬರೆಯುವ ಹುಚ್ಚು. ೧೯೨೮ರಲ್ಲಿ ಕಳ್ಳರ ಕೂಟ ಎಂಬ ಕಥೆಯನ್ನು ಗಮಟೆಯವರ ಫೆಲ್ ಕಲ್ಪ್ರಿಟ್ಸ್ ಎಂಬ ಕಥೆಯ ಆಧಾರದ ಮೇಲೆ ಬರೆದೆ. ೧೯೩೨ರಲ್ಲಿ ಅಂತರಂಗ, ಮಯೂರಗಳು ಬಂದುವು. ಇಂದಿಗೂ ನಮ್ಮ ವಿಮರ್ಶಕರು ಯಾರೂ ಬಂಕಿಂರ ನಾವೆಲ್ಲಿಗೂ ನನ್ನ ನಾವೆಲ್ಲಿಗೂ ಇರುವ ಸಂಬಂಧವನ್ನು ವಿಮರ್ಶಿಸಿಲ್ಲ.

ನಾನು ೧೯೨೫ರಲ್ಲಿ ಬೆಂಗಳೂರಿಗೆ ಬಂದೆ. ಅಥವಾ ತಾತಾಚಾರ್ಯ ಶರ್ಮ ಮತ್ತು ಮಿತ್ರರು ನನ್ನನ್ನು ಅಲ್ಲಿಗೆ ಎಳೆದರು. ಅಲ್ಲಿಂದ ನನ್ನ ಜೀವನದಲ್ಲಿ ಇನ್ನೊಂದು ಹೊಸ ಅಧ್ಯಾಯ ಆರಂಭಿಸಿತು. ಮೈಸೂರು ನನ್ನ ಸಾಧನರಂಗ. ಬೆಂಗಳೂರು ನನ್ನ ಕಾರ್ಯರಂಗ. ನಾನು ಸಾಧನ, ಕಾರ್ಯಗ

ಳಿಗಾಗಿ ಒದ್ದಾಡಿದಷ್ಟು ಸಿದ್ಧಿಗಾಗಿ ಒದ್ದಾಡಲಿಲ್ಲ. ನನಗೆ ಸಿದ್ಧಿಯಲ್ಲಿ ಅಷ್ಟು ವಿಶ್ವಾಸವಿಲ್ಲ. ೧೯೨೧ ರಲ್ಲಿ ನಾನು ಒಂದು ಸಣ್ಣ ಕಾವ್ಯವನ್ನು ಬರೆದಿದ್ದೆ. ಮೇಘ-ಚಾತಕಗಳ ಸಂಬಂಧವನ್ನು ಕಂಡು ಒಬ್ಬ ವಿಚಾರಪರನು ಆಡುವ ಮಾತದು. (ಅದರ ಹಿಂದೆ ನನ್ನದೇ ಒಂದು ಪ್ರಣಯಾಧ್ಯಾಯವಿತ್ತು' ಅದಕ್ಕಾಗಿ ಅದನ್ನು ಪ್ರಕಟಿಸಲಿಲ್ಲ.) ಅದರಲ್ಲಿ ಸಂತೋಷವೆಂದರೇನು ಎಂದು ವಿಚಾರ ಮಾಡುತ್ತ ಅತೃಪ್ತ ಆಶೆಗಾಗಿ ಹೆಣಗುವುದೇ ಸಂತೋಷ ಎಂಬ ಸಿದ್ಧಾಂತಕ್ಕೆ ಬಂದಿದ್ದೆ. ಅದಿನ್ನೂ ನನಗೆ ಹೋಗಿಲ್ಲ. ಗಮ್ಯವನ್ನು ಕೈಗೆ ಸಿಕ್ಕುವಷ್ಟು ಕೆಳಗಿಟ್ಟು ಸಾಧಿಸುವ ಸಿದ್ಧನಾಗುವುದಕ್ಕಿಂತ "ಅತ್ಯತಿಷ್ಠದ್ದಶಾಂಗುಲಂ" ಆಗಿ, ನಾವು ಐದು ಅಡಿ ಬೆಳೆದರೆ ಐದು ಅಡಿ ಹತ್ತಂಗುಲದಲ್ಲಿದ್ದು ಹತ್ತಡಿ ಬೆಳೆದರೆ ಹತ್ತು ಅಡಿ ಹತ್ತು ಅಂಗುಲದಲ್ಲಿರುವ ಗಮ್ಯವನ್ನು ಕುರಿತು ಸಾಧಕನಾಗಿರುವುದೇ ಹಿರಿದು ಎಂದು ನನ್ನ ಭಾವನೆ.

ಸಾಹಿತಿಯಾಗಿ ನಿಲ್ಲುವುದಕ್ಕೆ ಆಸೆಯಿದ್ದರೂ ಇನ್ನೂ ಸ್ಥಿತಿ ಚೆನ್ನಾಗಿ ಇರಲಿಲ್ಲ. ಇನ್ನೂ ಆಗ ಹೇಗಿರಬೇಕು? ಜೊತೆಗೆ ಜನತೆಯು ಇನ್ನು ಸಾಹಿತ್ಯದ ಸೊಬಗನ್ನೇ ಅರಿಯುವಷ್ಟು ಮಟ್ಟಕ್ಕೆ ಬಂದಿಲ್ಲ. ಐದು ಹತ್ತು ರೂಪಾಯಿ ಕೊಟ್ಟು ಸಂಗೀತ ಕೇಳುವ ಜನ ಬೆಂಗಳೂರಲ್ಲಿ ಎಷ್ಟೋ ಸಾವಿರ ಜನ ರಿದ್ದಾರೆ. ಆದರೆ ಒಂದು ರೂಪಾಯಿ ಕೊಟ್ಟು ಪುಸ್ತಕ ಕೊಳ್ಳುವ ಸಾವಿರ ಜನ ಕೂಡ ಸಿಕ್ಕುವುದಿಲ್ಲ. ನಾಟಕ-ಸಿನೇಮಾಗಳಲ್ಲಿದ್ದ ಲಾಭವು ಪುಸ್ತಕ ಬರೆಯುವುದರಲ್ಲಿದೆಯೇ? ಸಿನೇಮಾಕ್ಕೆ ದುಡ್ಡು ಸೂರಿ ಯಾಗುತ್ತಿರುವುದನ್ನು ದಿನಾಲು ನೋಡುತ್ತಿದ್ದೇವೆ. ಹೀಗೆ ಒಂದು ಪುಸ್ತಕವಾದರೂ ದುಡಿಯುವದೇ? ೧೯೪೬ರಲ್ಲಿ ಈ ವರ್ಷ, ಪಠ್ಯಪುಸ್ತಕವಲ್ಲದ ಯಾವ ಪುಸ್ತಕವೇ ಆಗಲಿ ೫೦೦೦, ಹೋಗಲಿ ೨೦೦೦, ಬಿಡಲಿ ೨೦೦೦ ನಾದರೂ ಮುದ್ರಿಸಲ್ಪಟ್ಟಿದೆಯೇ?

ಕೆಲವರು ಜನಕ್ಕೆ ಹಿಡಿಯುವ ಪುಸ್ತಕ ಬರೆದರೆ ಯಾಕೆ ಆಗುವುದಿಲ್ಲ ಎನ್ನುತ್ತಾರೆ. ನಾನು `ಓದುವವರ ಮಟ್ಟಕ್ಕೆ ಪುಸ್ತಕ ಇಳಿದರೆ, ಹೋಟೆಲ್ ತಿಂಡಿಗೂ ಇದಕ್ಕೂ ವ್ಯತ್ಯಾಸವೇನು? ಓದುವ ವನು ಬರೆಯುವವನ ಮಟ್ಟಕ್ಕೆ ಏರಬೇಕು. ಬೇರು ನೆಲದಲ್ಲಿಯೇ ಬಿಟ್ಟರೂ ಹೂ ಮಾತ್ರ ಗಿಡದ ತಲೆಯಲ್ಲಿಯೇ ಬಿಡುವುದು. `ಹಾಗೇ ಸಾಹಿತ್ಯ' ಎನ್ನುತ್ತೇನೆ. ಅಲ್ಲದೆ ಮನಃಪೂರ್ವಕ ಪ್ರಯತ್ನ ಓದಿನಲ್ಲಿರಬೇಕು. ಆ ಪ್ರಯತ್ನ ಬಹಳ ಕಡೆ ಇನ್ನು ಬೆಳೆಯಬೇಕು.

ಹೋಗಲಿ, ಹಣವಾದರೂ ಬರುವುದೆಂದರೆ ಅದಾದರೂ ಉಂಟೇನು? ಒಂದು ಕೋಟಿ ಇಪ್ಪತ್ತು ಲಕ್ಷ ಜನರಿರುವ ಕರ್ನಾಟಕದಲ್ಲಿ ಒಂದು ಸಾವಿರ ಪುಸ್ತಕ ಉಂಟೆ? ಸಾವಿರ ಹಾಕಿ, ಅದು ಕ್ರಯವಾಗಲು ಐದಾರು ವರ್ಷವಾದರೂ ಕಾದಿರಬೇಕು. ಈಚೆಗೆ ಕೆಲವಲ್ಲದೆ, ಅಖಿಲ ಕರ್ನಾಟಕ ದಲ್ಲೆಲ್ಲಾ ಏಜೆನ್ಸಿಗಳಿರುವ ಪುಸ್ತಕ ವ್ಯಾಪಾರಿಗಳೆಷ್ಟು ಜನ? ಇವೆಲ್ಲವನ್ನೂ ಕುರಿತು ಚಿಂತಿಸಿ ಏನು ಮಾಡಿದರೆ ಈ ಸ್ಥಿತಿ ತಪ್ಪುವುದು ಎಂದು ಆಲೋಚಿಸಿ ಅಕ್ಷರ ಪ್ರಚಾರಕ್ಕೆ ಇಳಿದೆ.

ಅಕ್ಷರ ಪ್ರಚಾರ ಸರ್ಕಾರದವರ ಗಮನಕ್ಕೆ ಬಂತು. ಸರ್ಕಾರವು ಲಕ್ಷಾಂತರ ಹಣಕೊಟ್ಟು ಈಗ ಈ ಕಾರ್ಯವನ್ನು ಒಂದು ಸಭೆಯ ಮೂಲಕ ಮಾಡಿಸುತ್ತದೆ.

ಅಕ್ಷರ ಪ್ರಚಾರ ಮುಂದಿನ ಸಾಹಿತಿಗಳ ಕಾಮಧೇನು.

★

೧೯೨೬ರಲ್ಲಿ ಅಮೆಚೂರ್ ಕಂಪನಿಯ ಮೆಂಬರಾದೆ. ಶ್ರೀ ರಾಘುವಾಚಾರ್ಯರು, ರಂಗಸ್ವಾಮಿ, ವಾಸುದೇವರಾವ್ ಮೊದಲಾದವರ ಅಭಿನಯವನ್ನು ನೋಡಿದಾಗ ನನ್ನಲ್ಲಿದ್ದ ನಟ ವೃತ್ತಿಯು ಎದ್ದು ಕುಣಿಯುವುದು. ಹಿಂದೆ ೧೯೨೧ರಲ್ಲಿ ಕೆಲವು ದಿನ ಚಾಮುಂಡೇಶ್ವರಿ ಕಂಪೆನಿಯಲ್ಲಿದ್ದೆ. ದೇವುಡು ಶಾಸ್ತ್ರಿಗಳನ್ನು ಒಪ್ಪಿಸುವುದು ಕಷ್ಟ; ಅವರು ತೋರಿಸಿದ ಆಕ್ಟ್ ಮಾಡುವುದು ಇನ್ನೂ ಕಷ್ಟ ಎಂದು ಅಲ್ಲಿನ ಆಕ್ಟರುಗಳು ಹೇಳುತ್ತಿದ್ದರು.

ಅಮೆಚೂರಿನಲ್ಲಿ ರಾಘುವಾಚಾರ್ಯರು ನನ್ನನ್ನು ತಮ್ಮ ಲೆಫ್ಟಿನೆಂಟ್ ಮಾಡಿಕೊಂಡರು. ಮುಂದೆ ಕನ್ನಡದ ಲೆಫ್ಟಿನೆಂಟ್ ಜನರಲ್ ಆದೇನು. ನಚಿಕೇತ, ಮಂಡೋದರಿ, ಮಾರ್ಕಂಡೇಯ, ರಾಮಕೃಷ್ಣ, ಯಶೋಧರಾ ನಾಟಕಗಳಲ್ಲಿ ವಾಜಾಶ್ರವಸ್, ರಾವಣ, ಯಮ, ರಾಮಕೃಷ್ಣ, ಗೌತಮ ಪಾತ್ರಗಳನ್ನು ವಹಿಸುವ ಅವಕಾಶ ಬಂತು. ಬಹುಶಃ ಚೆನ್ನಾಗಿತ್ತು ಎಂದು ತೋರುತ್ತದೆ.

ಇದೆಲ್ಲ ಬರೆಯುತ್ತಾ ಹೋದರೆ, ಅದೇ ಒಂದು ಗ್ರಂಥವಾದೀತು! ಆದರೇನು ನನ್ನದು ರಾಘುವಾಚಾರ್-ವರದಾಚಾರ್ ಇಬ್ಬರ ಸಂಪ್ರದಾಯವನ್ನು ಬೆರೆಸಿದ ಅಭಿನಯ. ರಾಘುವಾಚಾರ್ಯರು ಧ್ವನಿಯನ್ನು ಬದಲಾಯಿಸುವುದರಲ್ಲಿ ವಿಶ್ವಕರ್ಮ. ವರದಾಚಾರ್ಯರು ತೂಕವಾದ ಮುದ್ರೆಭಾವಗಳನ್ನು ತೋರಿಸುವುದರಲ್ಲಿ ಅದ್ವಿತೀಯ. ಇದುವರೆಗೆ ಈ ಇಬ್ಬರು ಮಹನೀಯರನ್ನು ಅನುಕರಿಸುವವರೂ ಹುಟ್ಟಲಿಲ್ಲ. ನಾನು ಗರುಡರವರನ್ನು ಕಂಡಿದ್ದೇನೆ. ಅವರೊಬ್ಬ ಉತ್ತಮ ನಟರು. ವೀರಣ್ಣನವರು ಹೆಸರು ಪಡೆದ ಅದೃಷ್ಟವಂತರು. ಅವರು ಜನಮೆಚ್ಚಿದ ನಕಲಿಗಾರರು. ಈಗಿನವರು ಸಾಮಾನ್ಯವಾಗಿ ವೀರಣ್ಣನವರ ಗುಂಪು. ವರದಾಚಾರ್ಯರ, ರಾಘುವಾಚಾರ್ಯರ ಜಾತಿ ಇನ್ನೂ ಬಂದಿಲ್ಲ ಬರಬೇಕಾದರೆ ಕನ್ನಡ ಶಾರದೆ, ರಂಗಭೂಮಿಯ ದೇವಿ, ತಪಸ್ಸು ಮಾಡಬೇಕು. ಪಂಡಿತನಾಗಿ, ಪಂಡಿತನಾದರೂ ಅಭ್ಯಾಸ ಜಡನಲ್ಲದ, ಪಾದರಸದಂತೆ ಆಡಬಲ್ಲ, ನಟವರನಾರು? ಅಥವಾ ಅಂಥವನು ಬಂದರೆ ನಮ್ಮ ಜನತೆಯು ಅವನನ್ನು ಒಪ್ಪುವುದೇನು?

ಈ ಸಂದರ್ಭದಲ್ಲಿ ಹಿಂದೆ ಕಾಲೇಜಿನಲ್ಲಿದ್ದಾಗ ನಡೆದ ಬಂದು ಸಂಗತಿ ನೆನಪಾಗುತ್ತದೆ. ಒಂದು ಆಶುಭಾಷಣ ಸ್ಪರ್ಧೆ ನಡೆಯಿತು. ಅದು ಅಂಡರ್ ಗ್ರ್ಯಾಜುಯೇಟುಗಳಿಗೆ ಮಾತ್ರ. ಆಗಿನ ಕನ್ನಡ ಪ್ರೊಫೆಸರ್ ಬಲವಂತ ಮಾಡಿ ನನ್ನನ್ನು ಸೇರಿಸಿದರು. ಜನತೆಯೂ ಸಾಹಿತ್ಯವೂ ಎಂಬುದು ಭಾಷಣದ ವಿಷಯ. ನಾನು ಸ್ವತಂತ್ರವಾಗಿ ತೋರಿದ ಎರಡು ಮಾತು ಹೇಳಿದೆ. ಇನ್ನೊಬ್ಬ ಅಂಡರ್ ಗ್ರ್ಯಾಜುಯೇಟ್ ಡಿ.ವಿ. ಗುಂಡಪ್ಪನವರ ಯಾವುದೋ ಒಂದು ಪ್ರಿಂಟಾಗಿದ್ದ ಉಪನ್ಯಾಸದ ಭಾಗ ಚೆನ್ನಾಗಿ ಗಟ್ಟಿಮಾಡಿ ಹೇಳಿದ. ಜಡ್ಜಿಗಳೆಲ್ಲರೂ "ದೇವುಡು ಭಾಷಣಕ್ಕೆ ಬಹುಮಾನ" ಎಂದರು. ವಿದ್ಯಾರ್ಥಿಗಳೆಲ್ಲಾ " ಗುಣದಲ್ಲಿ ಅದೇ ಹೆಚ್ಚು. ಆದರೂ ಬಹುಮಾನ ಆ ಅಂಡರ್ ಗ್ರ್ಯಾಜುಯೇಟಿಗೇ ಬರಬೇಕು" ಎಂದರು. ಹಾಗೇ ಆಯಿತು.

★

ನನಗೆ ಇತರ ಸರ್ಟಿಫಿಕೇಟ್ ತೋರಿಸಿಕೊಂಡು ಮೆರೆಯುವ ಹುಚ್ಚು ಬಹುಬೇಗ ಬಿಟ್ಟು ಹೋಯಿತು. ಇಲ್ಲದಿದ್ದರೆ, ಬುದ್ಧಿಯ ಕಥೆಗಳಿಗೆ ಬಂದ ಸರ್ಟಿಫಿಕೇಟ್‌ಗಳನ್ನು ಮೆರೆಸುತ್ತಿದ್ದೆ.

ಪಂಜೆ ಮಂಗೇಶರಾಯರು ನನ್ನನ್ನು ತಬ್ಬಿಕೊಂಡು "ಕರ್ನಾಟಕದಲ್ಲಿ ಮಕ್ಕಳಿಗೆ ಬರೆಯುವವರು ಇಲ್ಲವಲ್ಲಾ ಎಂದು ಯೋಚಿಸುತ್ತಿದ್ದೆ. ನಿಮ್ಮ ಬುದ್ಧಿಯ ಕಥೆ ಕಂಡು `ಹುಸ್ಸಪ್ಪಾ, ಇನ್ನು ನಾನು ನಿರಾತಂಕವಾಗಿ ಸಾಯಬಹುದು' ಎಂದುಕೊಂಡೆ" ಎಂದರು. ಅಲ್ಲಿಂದೀಚಿಗೆ ಎಷ್ಟೋ ಮಕ್ಕಳ ಕಥೆಗಳು ಬಂದಿವೆ, ವಿಮರ್ಶಕರೂ ಕೊಡಾಡಿದ್ದಾರೆ. ಆದರೆ ಇವೆಲ್ಲವೂ ಮುಂಗಾರಿನ ಮೊದಲ ಮಳೆಯಾದ ಮೇಲೆ ಹುಟ್ಟುವ ಸಸಿಗಳಂತೆ. ಇವೆಲ್ಲವೂ ಸತ್ತು ಗೊಬ್ಬರವಾದ ಮೇಲೆ, ಆ ಗೊಬ್ಬರ ತಿಂದು ವೃಕ್ಷರಾಜನು ಹುಟ್ಟುತ್ತಾನೆ. ಇಲ್ಲಿಯೂ ಇನ್ನು ಸಂಧಿಕಾಲ.

★

ಮಕ್ಕಳ ಪುಸ್ತಕ ಈ ಸಂದರ್ಭದಲ್ಲಿ ಮಾಡಿರುವ ಕೆಲಸ ಸ್ತೋತ್ರಾರ್ಹವಾದುದು. ಆದರೆ ಸುಮಾರು ೧೫-೨೦ ಸಾವಿರ ವಾರಪತ್ರಿಕೆಗಳು ಖರ್ಚಾಗುವ ಈ ಕಾಲದಲ್ಲಿಯೂ ಅದೆಷ್ಟು ಖರ್ಚಾಗುತ್ತಿದೆ.

ಮಕ್ಕಳ ಪುಸ್ತಕಕ್ಕೂ ನನಗೂ ಮೂರು ಸಲ ಸಂಬಂಧ ಬಿತ್ತು. ಮೂರನೆಯ ಸಲ ನಾಲ್ಕು ವರುಷ ಅದರ ಕಚೇರಿಯಲ್ಲಿದ್ದೆ. ಮುಂದೆ ನಾನೇ ಸ್ವತಂತ್ರವಾಗಿ `ನಮ್ಮ ಪುಸ್ತಕ' ಎಂದು ಹೊರಡಿಸಿದೆ. ಅದು ಮೊದಲನೆಯ ಸಂಚಿಕೆ ಎರಡು ಸಾವಿರ ಸಾಲದೆ ಇನ್ನೆರಡು ಸಾವಿರ ಹಾಕಿಸಿದೆ. ಕಾರಣ ಸಹಜವಾಗಿ ಕೊಳ್ಳುವವರ ಪ್ರೀತಿಯಲ್ಲ. ಸಿಟಿಯಲ್ಲಿ ನಡೆದ ಲೇಖನ ಸ್ಪರ್ಧೆಗೂ ನಮ್ಮ ಪುಸ್ತಕಕ್ಕೂ ಗಂಟು ಬಿದ್ದಿತ್ತು. ಮುಂದೆ ಬಾಲಕರ ಡಿಸ್ಟ್ರಿಕ್ಟ ಬೋರ್ಡುಗಳು ತೆಗೆದುಕೊಂಡಾಗ ನಮ್ಮ ಪುಸ್ತಕ ಐದು ಸಾವಿರಕ್ಕೆ ಹೋಯಿತು. ಆದರೂ ಅದೆಲ್ಲ `Artificial Respiration' ಇದ್ದ ಹಾಗೆ. ಕೃತ್ರಿಮ, ಸಹಜವಲ್ಲ.

★

ತಾತಯ್ಯನವರು ಇದ್ದಾಗ ನನ್ನ ಲೇಖನಗಳು ಸಾಧ್ವಿಯಲ್ಲಿ ಬಂದಿದ್ದವು. ನಾನು ಯೂನಿವರ್ಸಿಟಿ ಯೂನಿಯನ್ನಿನಲ್ಲಿ ಓದಿದ ಬಂಕಿಂಚಂದ್ರ ಎಂಬ ಲೇಖನವನ್ನು ಕನ್ನಡಿಸಿ ಪ್ರಕಟಿಸಿದ್ದರು. ಜಯಕರ್ನಾಟಕದಲ್ಲಿ ಆಲೂರರ ಒತ್ತಾಯದಿಂದ ವೈಣಿಕ ಶಿಖಾಮಣಿ ಶೇಷಣ್ಣನವರ ಮೇಲೆ ಬರೆದ ಲೇಖನವೊಂದು ಪ್ರಕಟವಾಗಿತ್ತು. ನನಗೆ ಆಗಿನಿಂದಲೂ `ಸುಪೀರಿಯಾರಿಟಿ ಕಾಂಪ್ಲೆಕ್ಸ್' ಅಲ್ಲದೆ, ಅದೇನೋ ಹೊಗಳಿಕೊಳ್ಳಬೇಕೆಂಬ ಆಸೆಯಿಲ್ಲ. ಯಾರ ಲೇಖನವನ್ನು ನೋಡಿದರೂ "ಇದೋ! ಏನು ಮಹಾ!" ಎಂದು ಅದರಲ್ಲಿರುವ ದೋಷಗಳನ್ನೇ ಎತ್ತಿ ಹಾಕುವುದು-ಇಂತಹದು ಬರೆಯದೆ ಹೋದರೆ ಏನು ನಷ್ಟ ಎನ್ನುವದು. ಹೀಗೆ ಇತ್ತು.

ಕನ್ನಡಿಗರೂ ಕನ್ನಡದಲ್ಲಿ ಮಾತನಾಡಿದರೆ ನಾಲಗೆ ತೊಳೆದುಕೊಳ್ಳಬೇಕು ಎನ್ನುತ್ತಿದ್ದ ಕಾಲದಲ್ಲಿ ಕನ್ನಡ ಕನ್ನಡ ಎಂದು ಕೂಗುತ್ತಿದ್ದ ಅಥವಾ ಗರ್ಜಿಸುತ್ತಿದ್ದ ನಮ್ಮ ತಾತಾಚಾರ್ಯಶರ್ಮ, ಕತ್ತಿನ ಮೇಲೆ ಕೂತು ಲೇಖನಗಳನ್ನು ಬರೆಸಿದರು. ಮೈಸೂರ್ ಕ್ರಾನಿಕಲ್, ವಿಶ್ವಕರ್ನಾಟಕದಲ್ಲಿ ಲೇಖನಗಳು ಬಂತು.

ಮುಂದೆ ನವಜೀವನ ಬಂದಾಗ ಅದರ ಅನಾಮಧೇಯ ಸಂಪಾದಕನಾದೆ. ಆಗ ಯುದ್ಧ,

ಕನ್ಯಾಪಹರಣ, ಹಿಂದೂ ಮುಸ್ಲಿಂ ದೊಂಬಿ, ಮೊದಲಾದ ಉದ್ರೇಕವಿಲ್ಲದಿದ್ದರೂ ಪತ್ರಿಕೆಯು ಐದು ಸಾವಿರಕ್ಕೆ ಹೋಯಿತು. ಆದರೂ ಅದರಿಂದ ನನಗೆ ಆರ್ಥಿಕ ಏನೂ ಲಾಭವಿರಲಿಲ್ಲ.

ಬಹುಶಃ ಕನ್ನಡದ ದಿನಪತ್ರಿಕೆಗಳಲ್ಲಿ ಧಾರವಾಹಿ ಕಥೆ; ವಿಜ್ಞಾನದ ಲೇಖನಗಳು, ಇವುಗಳನ್ನು ಪ್ರಕಟಿಸಿದುದು ಮೊದಲು ನವಜೀವನದಲ್ಲಿಯೇ ಎಂದು ತೋರುತ್ತದೆ.

ಒಂದು ದಿನ ಸಾಮಾಜಿಕ ಪ್ರತಿಷ್ಠೆಯನ್ನು ಗಳಿಸುವದೇ? ಅಥವಾ ಸದ್ಗತಿಯನ್ನು ಗಳಿಸುವದೇ? ಎಂಬ ವಿಚಾರ ತೀವ್ರವಾಗಿ ಬಂತು. ಎಷ್ಟಾದರೂ ಬ್ರಾಹ್ಮಣನ ಮನಸ್ಸು, ಸದ್ಗತಿಯನ್ನು ಗಳಿಸುವುದೇ ಹೆಚ್ಚು ಎನ್ನಿಸಿತು. ನವಜೀವನಕ್ಕೂ ನನಗೂ ಬಿಟ್ಟು ಹೋಯಿತು.

★

ಬೆಂಗಳೂರಿಗೆ ಬಂದುದು ಆರ್ಯಲೋಕ ಸೆಕೆಂಡರಿ ಸ್ಕೂಲಿನ ಹೆಡ್ ಮಾಸ್ಟರಾಗಿ ನಾನು ಅಲ್ಲಿ ಐದು ವರ್ಷಗಳಿದ್ದೆ. ಮೈಸೂರಿನಲ್ಲಿ ಸದ್ವಿದ್ಯಾ ಶಾಲೆಯ ಹೆಡ್‌ಮಾಸ್ಟರಾಗಿದ್ದಾಗ "ಇನ್ನು ಮೇಲೆ ಒಬ್ಬರ ಕೆಳಗೆ ಕೆಲಸ ಮಾಡಬಾರದು" ಎನ್ನಿಸಿತ್ತು. (೧೯೨೩-೪೪) ಶೃಂಗೇರಿ ಮಠದ ಸರ್ವೀಸಿನಲ್ಲಿ (೧೯೨೪) ಆ ಭಾವ ರೂಢಮೂಲವಾಯತು. ಇಲ್ಲಿ ನನಗೆ ಸರ್ವತಂತ್ರ್ಯ ಸ್ವಾತಂತ್ರ್ಯ ಸಿಕ್ಕಿತ್ತು. ಸ್ಕೂಲಿಗೆ ಬೆಂಬಲ ಕೊಡುವ ಒಂದು ಕಾರ್ಪೊರೇಟ್ ಸಂಸ್ಥೆಯಿರಬೇಕೆಂದು ಹಿರಿಯರ ಸಂಘ ಒಂದು ಏರ್ಪಾಡು ಮಾಡಲಾಯಿತು.

★

ನವಜೀವನದಲ್ಲಿ ಒಮ್ಮೆ "ಮೈಸೂರಿನಿಂದ ದಿನಕ್ಕೆ ೪೦ ಸಾವಿರ ರೂಪಾಯಿ ಸಿನೀಮಾ ಮೂಲಕವಾಗಿ ಹೊರಗೆ ಹೋಗುತ್ತಿದ್ದೆ." ಎಂದು ಬರೆದ ಲೇಖನವು ನನ್ನನ್ನು ಸಿನಿಮಾ ಪ್ರಪಂಚಕ್ಕೆ ಎಳೆಯಿತು. ಒಂದು ಲಿಮಿಟೆಡ್ ಕಂಪೆನಿ ಆಯಿತು. ಕಾರಣಾಂತರಗಳಿಂದ ನಾನು ಅದನ್ನು ಬಿಡಬೇಕಾಗಿಯೂ ಬಂತು.

ಮುಂದೆ ಧ್ರುವಕುಮಾರದಲ್ಲಿ ಮತ್ತೆ ಸಿನಿಮಾ ಸಂಬಂಧ. ಆಗ ನನಗೆ ಚಲನಚ್ಚಿತ್ರಗಳ ಟೆಕ್ನಿಕ್ ಕಲಿಯಲು ಒಳ್ಳೆಯ ಅವಕಾಶವಾಯಿತು. ಮುಂದೆ `ಚಿರಂಜೀವಿ' ಬಂದಾಗ, ಸ್ವತಂತ್ರವಾದ ಸ್ಟೂಡಿಯೋಯಿಲ್ಲದೆ ಇನ್ನೊಬ್ಬರ ಕೈ ಕಾದು ಕುಳಿತಿರಬಾರದು ಎಂಬ ಅನುಭವ ಚೆನ್ನಾಯಿತು.

★

ಸಿನೀಮಾ ಕಂಪೆನಿಯನ್ನು ಬಿಟ್ಟು (೧೯೩೦) ಏನು ಮಾಡುವುದು ಎಂಬ ಚಿಂತೆಯಲ್ಲಿದ್ದಾಗ ಶ್ರೀ ಎಸ್.ಜಿ. ಶಾಸ್ತ್ರಿಗಳ ದಯೆಯಿಂದ ಒಂದು ಎಕ್ಸ್‌ಟೆರ್ಷ್ ಲೆಕ್ಚರ್ ಸಿಕ್ಕಿತು. ಅದರ ಫಲವಾಗಿ ಕರ್ನಾಟಕ ಸಂಸ್ಕೃತಿ ಪುಸ್ತಕ ಬಂತು (೧೯೩೨) ಇದುವರೆಗೆ ಕನ್ನಡದಲ್ಲಿ ಕರ್ನಾಟಕ ಸಂಸ್ಕೃತಿಯ ವಿಸ್ತಾರವಾದ ವಿಮರ್ಶೆ ಬಂದಿರಲಿಲ್ಲ. ಆದರೂ ಎಲ್ಲೆಲ್ಲೂ ಸಂಸ್ಕೃತಿಯೆಂಬ ಮಾತು ಕೇಳಿಸುತ್ತಿದೆ. ಅದು ನನ್ನ ಪುಸ್ತಕದಿಂದ ಆಯಿತು ಎನ್ನುವುದಕ್ಕಿಂತ ಕಾಲಮಹಿಮೆ ಎನ್ನುವುದು ಸರಿ.

★

ಬರೆದರೆ ಬೇಡ ಎನ್ನುವುದಿಲ್ಲ; ಬಂದರೆ ಹೋಗು ಎನ್ನುವುದಿಲ್ಲ. ಬೇಕಾದ್ದು ಬರೆಯಿರಿ ಪ್ರಕಟಿಸುತ್ತೇವೆ ಎನ್ನುತ್ತಾರೆ. ಕೆಲವರಾದರೂ ಪ್ರಕಾಶಕರು, ನನ್ನ ಮಿತ್ರರು ಏಕಯ್ಯಾ ಬರೆಯಲಿಲ್ಲ ಎನ್ನುತ್ತಾರೆ. ಬರೆಯುವ ಮೋಹದಲ್ಲಿ ಸಿಕ್ಕಿ ಏನಾದರೂ ಬರೆದೇ ತೀರಬೇಕೆಂಬ ಹಟವಿಲ್ಲ. ಬರೆಯುವದಿಲ್ಲವೆಂಬ ಹಟವೂ ಇಲ್ಲ. ನನ್ನ ಹರಟೆ, ನನ್ನ ಭೀರ್ಕಾ, ನನ್ನ ಗಫಾಲಜಿಗಳಿಗೆ ಇನ್ನೂ ನನ್ನ ಮಿತ್ರರಲ್ಲಿ ಗೌರವವಿದೆ, ನನಗೇನಾಗಬೇಕು?

★

ಮಾಡಬೇಕೆಂದಿರುವ ಕೆಲಸ. ಅದು ಮಾತ್ರ ನಾನು ಯೋಚಿಸುವುದಿಲ್ಲ. ನನ್ನ ಜೀವನದಲ್ಲಿ ಪರೇಚ್ಛಾ ಪ್ರಾರಬ್ಧ ಬಹಳ ಹೆಚ್ಚು. ನಾನು ವಿನಾಯಕನನ್ನು ಮಾಡಬೇಕೆಂದು ಹೊರಡುತ್ತೇನೆ. ಪರೇಚ್ಛಾ ಪ್ರಾರಬ್ಧವು ಅದನ್ನು ಹನುಮಂತರಾಯನನ್ನು ಮಾಡುತ್ತದೆ. ಒಳಗಿನಿಂದ ಏನೋ ಒಂದು `ದನಿ' ನಿನ್ನ ಕನ್ನಡದ ಸೇವೆ ಸಾಕು, ಇಂಗ್ಲಿಷಿಗೆ ತಿರುಗು. ಈ ಯುಗ Provincial, national ಎರಡೂ ಅಲ್ಲ International" ಎನ್ನುತ್ತದೆ. ಹಿಂದೆ ಬಿ.ಎ. ಓದುತ್ತಿದ್ದಾಗ ಕನ್ನಡದಲ್ಲಿ ಹೆಸರಾಂತ ಮಿಕ್ಕೆಲ್ಲ ಕೆಲಸ, "charity begins at home" ಎಂದುಕೊಂಡಿದ್ದುದು ನೆನಪಾಗಿ ಕನ್ನಡದ ಸಹಕಾರದಲ್ಲಿ ಇದಕ್ಕಿಂತ ಇನ್ನೇನು ಖ್ಯಾತಿ! ಸಾಕು, ಹೊರಡು ಎನ್ನುತ್ತಿದೆ. ಆದರೂ ಹಳೆಯ ಅಭಿಮಾನ ಕನ್ನಡ ಕನ್ನಡ ಎನ್ನುತ್ತಿದೆ.

★

ಮಾಡಿದರೆ ಸಂಸ್ಕೃತ ಪ್ರಚಾರ ಮಾಡಬೇಕು. ಅದಕ್ಕೆ ಒಂದು ಕ್ರಮ ಸಿದ್ಧವಾಗಿದೆ. ೬೦ ದಿನ ದಿನಕ್ಕೊಂದು ಗಂಟೆ ಶ್ರಮಪಟ್ಟರೆ ೬೧ನೆಯ ದಿನ ಸ್ವತಂತ್ರವಾಗಿ ಗೀತೆ ಓದಬಹುದು. ಆದರೆ? ಅದಷ್ಟು ಸಾಲದು. ಧರ್ಮ, ಅರ್ಥ, ಕಾಮ, ಮೋಕ್ಷ ನಾಲ್ಕೂ ಒಳಗೊಂಡಿರುವುದು ಸನಾತನ ಧರ್ಮ. ಅದರ ಸ್ವರೂಪ ಮನಸ್ಸಿಗೆ ಹಿಡಿಯುವಂತೆ ಮಾಡಬೇಕಾದರೆ, ವೇದಗಳಿಂದ ಹಿಡಿದು ಹಲ್ಲೀ ಶಕುನದವರೆಗೆ ಎಲ್ಲಾ ತಿಳಿಯಬೇಕು. ಅದಕ್ಕೆ ಎಲ್ಲಾ ಸಂಗ್ರಹ ಮಾಡುತ್ತಿದ್ದೇನೆ. ಅರ್ಧಾಂತವಾಗಿ ಮಾಡಲು ಇಷ್ಟವಿಲ್ಲ. ಎಲ್ಲಾ ಒಟ್ಟಿಗೆ ಬರಲು ಒಂದು ಲಕ್ಷರೂಪಾಯಿ ಬೇಕು. ಭಿಕ್ಷೆ ಬೇಡಲು ಇಷ್ಟವಿಲ್ಲ. ಎಲ್ಲಿಂದಲೋ ಬರುವುದು ಎಂಬ ನಂಬಿಕೆ ಬೆಟ್ಟದಷ್ಟಿದೆ. ಇದೂ ಮಾಡಬೇಕಾದವರು ಕನ್ನಡದಲ್ಲೋ ಇಂಗ್ಲಿಷಿನಲ್ಲೋ? ಇಂಗ್ಲಿಷಿನಲ್ಲಾದರೆ ಗೆಲ್ಲುತ್ತದೆ ಎಂಬ ನಂಬಿಕೆ. ಕನ್ನಡದಲ್ಲಾದರೆ ಹುಟ್ಟುವುದಕ್ಕಿಂತ ಮುಂಚೆಯೇ ಸಾಯುತ್ತದೆ ಎಂಬ ದಿಗಿಲು.

★

ಕನ್ನಡದಲ್ಲಿ ಒಂದು ವಿಶ್ವಕೋಶ ಆಗಬೇಕು. ಅದು ಇನ್ನೂ ಐದು ವರುಷ ಬಿಟ್ಟು ಸುಮಾರು 1950ರಲ್ಲಿ ಆರಂಭಿಸುವ ಕೆಲಸ. ಅದಕ್ಕೆ ಬರೆಯುವವರು ಬೇಕು, ಪ್ರಕಾಶಕರು ಬೇಕು, ಕೊಳ್ಳುವವರು ಬೇಕು. ಎಲ್ಲಕ್ಕಿಂತ ಮುಂಚೆ ಜನರಲ್ಲಿ ಈ ಬ್ರಾಹ್ಮಣ-ಅಬ್ರಾಹ್ಮಣ ಭೇದ ಸಾಯಬೇಕು. ಅದು ಸಾಯುವವರೆಗೂ ವಿಶ್ವಕೋಶ ಬರುವುದಿಲ್ಲ. ಬಂದರೂ ಬದುಕುವುದಿಲ್ಲ.

★

ವೇದಗಳದು ಒಂದು ಹುಚ್ಚು. ಇದುವರೆಗೆ ಬಂದ ಭಾಷ್ಯಗಳೆಲ್ಲ ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದಸ್ಸು, ಕಲ್ಪಗಳಿಗೂ ವೇದಕ್ಕೂ ಇರುವ ಸಂಬಂಧವನ್ನು ತೋರಿಸಿದೆ. ಆದರೆ ಷಡಂಗಗಳ ಸಿದ್ಧಾಂತವೇನು? ಅವಕ್ಕೆ ಅನುಗುಣವಾಗಿ ವೇದದ ಅರ್ಥವೇನು? ಯಾರೂ ಹೇಳಿಲ್ಲ. ಇಂದ್ರ ಸೂಕ್ತವನ್ನು ತೆಗೆದುಕೊಂಡರೆ, ಮಂತ್ರವು ಗಾಯತ್ರಿ, ಉಷ್ಣಿಕ್, ಜಗತೀ ಛಂದಸ್ಸುಗಳಲ್ಲಿದ್ದರೆ ಏನೇನು ವ್ಯತ್ಯಾಸ? ಅನೇಕರು ಒಬ್ಬನೇ ಇಂದ್ರನನ್ನು ಹಲವು ಸಲ-ಸ್ತುತಿಸಿರುವುದೇಕೆ? ಇಂದ್ರನೆಂದು ಆಕಾಶದಲ್ಲಿ ತೋರಿಸುವ ನಕ್ಷತ್ರಕ್ಕೂ ಇಂದ್ರನಿಗೂ ಏನು ಸಂಬಂಧ? ಬ್ರಹ್ಮಾಂಡದ ಇಂದ್ರನು ಪಿಂಡಾಂಡದಲ್ಲಿ ಏನಾಗಿದ್ದಾನೆ? ಯಾರಾದರೂ ಇಂದ್ರನನ್ನು ಕಂಡಿದ್ದಾರೆಯೇ? ಅಥವಾ ಇಂದ್ರದೇವತೆಯು ಶುದ್ಧ ಕಲ್ಪನೆಯೇ? ಮೊದಲಾದ ವಿಚಾರಗಳನ್ನು ವಿಮರ್ಶಿಸಬೇಕು. ಅದನ್ನು ಬರೆಯದೆ ಇಂದ್ರಂ ಹವಾಮಹೇ ಎಂಬ ಶಬ್ದಗಳಿಗೆ ಅರ್ಥ ಬರೆದರೆ ಅದೆಂತಹ ಭಾಷ್ಯ?

ಬಹುಶಃ ಇದು ನನ್ನ ಕೊನೆಯ ಪ್ರಯತ್ನ.

★

ಕಾಲೇಜಿನಲ್ಲಿದ್ದಾಗ ಮೌರ್ಲ್ಬ, ಬ್ರಾಡ್ಲಿಗಳನ್ನು ಓದಿದಾಗಿನಿಂದ ಒಂದು ಭಾರಿಯ ಹುಚ್ಚು. ಕಾಳಿದಾಸ, ವಿಕ್ರಮೋರ್ವಶೀಯ, ಮೇಘಸಂದೇಶಗಳಿಗೆ ಹಾಗೆ ವ್ಯಾಖ್ಯಾನ ಬರೆಯಬೇಕು ಎಂದು. ಮೇಘ ಸಂದೇಶ ಪೂರ್ವಭಾಗಕ್ಕೆ ಏನೋ ಬರೆದು ಹಾಕಿದ್ದೇನೆ. ವಿಕ್ರಮೋರ್ವಶೀಯಕ್ಕೂ ಬರೆಯಬೇಕು. ಆಗಲೇ ಹೇಳಿದ್ದೇನಲ್ಲ. ಕನ್ನಡದಲ್ಲಿ ಬರೆಯಲು ಅವಸರವಿಲ್ಲ. ಬರೆದರೆ ಇಂಗ್ಲೀಷಿನಲ್ಲಿ ಬರೆಯಬೇಕು. ನೋಡೋಣ.

★

ಇನ್ನು ನಾವೆಲ್ಲು, ಕಥೆ, ಮೊದಲಾದವು ಬರೆಯುವುದಿಲ್ಲ ಎಂದೂ ಇಲ್ಲ. ಮಹಾಭಾರತದ ಮಹಾಪುರುಷರು ಮುಗಿಸಿದ್ದೇನೆ. ವಾಲ್ಮೀಕಿಯ ವಾಕ್ಯಗಳಲ್ಲಿಯೇ ಸಂಗ್ರಹವಾಗಿರುವ ರಾಮಾಯಣ ಅರ್ಧವಾಗಿದೆ. `ಮಹಾಬ್ರಾಹ್ಮಣ' ಎಂಬ ನಾವೆಲ್ಲು ಅರ್ಧವಾಗಿದೆ. ಯೋಗವಾಸಿಷ್ಠ ಕನ್ನಡಕ್ಕೆ ಬರೆಯಬೇಕೆಂದು ಒಂದು ದೊಡ್ಡ ಕಡೆಯಿಂದ ಅಪ್ಪಣೆಯಾಗಿದೆ. ಆ ಕೆಲಸ ನಡೆಯುತ್ತಿದೆ.

ಗೀತೆಯ ಪ್ರಚಾರದ ಹುಚ್ಚೊಂದಿದೆ. ಗೀತೆಯ ಮೂರು ಪ್ರಕಟಣೆಗಳು ಹೊರಬರಬೇಕು. ಮೊದಲಿನದು ಸುಲಭವಾದ ಭಾಷಾಂತರ, ಇದು ಎರಡು ಆಣೆಗೊಂದರಂತೆ ಸಿಕ್ಕಬೇಕು. ಒಂದು ಲಕ್ಷ ಪ್ರತಿಗಳನ್ನು ಜನತೆಯಲ್ಲಿ ಹಂಚಬೇಕು. ಆಚಾರ್ಯತ್ರಯರ ಭಾಷ್ಯವುಳ್ಳ ಪ್ರತಿಯೊಂದು ಇದನ್ನು ಪದವೀಧರರಿಗೆಲ್ಲ ಕ್ರಿಶ್ಚಿಯನ್ ಲಿಟರರಿ ಸೊಸೈಟಿಯವರು ಬಾಯಬಲ ಕೊಡುವಂತೆ ಕೊಡಬೇಕು. ಮೂರನೆಯದು, ಇಲ್ಲಿಯವರೆಗೆ ಗೀತೆಯ ಮೇಲೆ ಯಾರಾರು ಏನೇನು ಹೇಳಿದ್ದಾರೆ, ಹೇಳಬಹುದು ಎಂಬ ವಿವೇಚನೆಯುಳ್ಳ ೨೦೦೦ಪುಟದ ಗ್ರಂಥ. ಇದಿಷ್ಟು ಮಾಡಲು ಒಂದು ಸ್ವತಂತ್ರ ಸಂಸ್ಥೆಯು ಆಗಬೇಕು.

★

ಎಲ್ಲಾ ಆಯಿತು ಎನ್ನೋಣ, ಕಸ್ಮೈ ದೇವಾಯ ಹವಿಷಾ ವಿಧೇಮ? ಕಸ್ಥ? ಕುತಃ? ಗೀತೆಯ ಒಂದು ಶ್ಲೋಕ ಹಿಡಿದುಕೊಂಡು ಚಿಂತಿಸುತ್ತಾ ಒಂದೆರಡು ಗಂಟೆ ಅದು ಒಂದೇ ಶ್ಲೋಕದ ಮೇಲೆ, ಅಸಂಬದ್ಧ ಪ್ರಲಾಪವಲ್ಲದಂತೆ, ಹರಟೆ ಹೊಡೆಯುವುದಕ್ಕಿಂತ ಇವೆಲ್ಲ ಆನಂದಕರವೆ? ಬ್ರಹ್ಮ ಸೂತ್ರಗಳಲ್ಲಿ ಒಂದನ್ನು ಹಿಡಿದು ಒಳನುಗ್ಗಿ ಅದರ ವಿಚಾರ ಚಿಂತಿಸುತ್ತ ಮೈಮರೆಯುವುದಕ್ಕಿಂತ ಇದರಲ್ಲೆಲ್ಲಾ ಸೌಖ್ಯವಿದೆಯೇ? ಅಥವಾ ಅದ್ವೈತಿಗಳು ಹೇಳುವ ಆ ಮನಸ್ಕ ಯೋಗಕ್ಕಿಂತ ಇನ್ನೇನಿದೆ?

★

ದೇವುಡು

ಎಂ.ಎನ್. ವ್ಯಾಸರಾವ್

ವೇದಸ್ಸಾರ ಉಪನಿಷತ್ತು ಶಾಸ್ತ್ರವಂತ ಪಂಡಿತ
ದ್ವೈತದೊಳಗು ಅದ್ವೈತದೊಳಗು ಜ್ಞಾನವಿತ್ತು ಕಂಡಿತ
ಅಲ್ಲೂ ಸಲ್ಲಿ ಇಲ್ಲೂ ಸಲ್ಲಿ ಎಲ್ಲೂ ಸಂದ ದೇವುಡು
ಭೂಮಿಯನ್ನ ರಂಗಭೂಮಿ ಮೂಡಿದಂಥ ಅಸಾಧ್ಯಡು !

ಅಂತರಂಗದೊಳಗೆ ಅರಳಿ ವಿಷಯ ಸುಖದ ಕಾಮ
ನೀತಿ ಅನೀತಿ ಅರಿಯದಿತ್ತು ಮೀರಿದಾಗ ನೇಮ
ನೂರು ತರಹ ವಿಧಿಯ ಬರಹ ಬರೆದರೇನು ಬಂತು
ಗಂಡು ಹೆಣ್ಣು ಕೂಡುವಂತೆ ಬೆಸೆಯಿತಾವ ತಂತು

ಅಂತರಂಗದಿಂದ ಹೊರಟ ಪಯಣ ಕಂಡ ಹಾದಿ
ಭೂಮಿಯಿಂದ ಬಾನ ತನಕ ತೆರೆಯಿತಲ್ಲಿ ದಾರಿ
ಬ್ರಹ್ಮಬಂದ ವಿಷ್ಣು ಬಂದ ವಾಗ್ದೇವಿಯೇ ಬಂದಳು
ಕೌಶಿಕ ನಹುಷ ಯಾಜ್ಞವಲ್ಕ್ಯ ಪಾತ್ರ ತಳೆದು ನಿಂತರು

ಉರುಳಿ ಹೋದ ಯುಗಗಳನ್ನು ಕಣ್ಣಮುಂದೆ ಮರಳಿಸಿ
ಮರೆತು ಹೋದ ಆಶ್ರಮಗಳನು ಮತ್ತೆ ಇಲ್ಲಿ ಸೃಷ್ಟಿಸಿ
ದೇವ ಲೋಕ ಮರ್ತ್ಯಲೋಕ ಬೆಸೆದು ಒಂದು ಗೂಡಲು
ದೈವತ್ವಕೆ ಒಯ್ದರಂದು ಮನುಜರನ್ನು ದೇವುಡು

ಇಳೆಯ ಮನುಜ ಗುಣಗಳಲ್ಲಿ ದೇವರನ್ನು ಮೀರಿದ
ಇವರ ಕೃಪೆಗಳಲ್ಲಿ ಅವನು ಅಜರಾಮರವಾಗಿಹ
ಭರತ ಖಂಡದಾತ್ಮ ಶಕ್ತಿ ಆಯ್ತು ಕೃತಿಯ ಮೂಲ
ಬೆಳಗಿನೆಲ್ಲಿ ಮರೆಯಿತಲ್ಲಿ ಹಬ್ಬ ಅದರ ಜಾಲ

ವೈಕುಂಠ ಕೈಲಾಸವನ್ನು ಸುತ್ತಿಬಂದ ದೇವುಡು
ಇಲ್ಲೇ ಇದ್ದು ಇಲ್ಲಿನೊಡನೆ ಮೈಮರೆತು ದೇವುಡು
ಸ್ವಾರ್ಥವಿರದ ಬದುಕನಂಬಿ ಬಾಳಿದಂಥ ದೇವುಡು
ಬದುಕಿಗೆಂದು ಹಲವು ದಾರಿ ತುಳಿದು ಸೋತ ದೇವುಡು

ದೇವುಡುರವರ ಕಾದಂಬರಿಗಳ ಪರಿಚಯ

ಪ್ರೊ॥ ಕೀರ್ತಿನಾಥ ಕುರ್ತಕೋಟಿ

ಬುದ್ಧಿವಿಲಾಸ ಮಾದರಿಯ ಕಾದಂಬರಿಗಳು ಯಾವ ಸಾಹಿತ್ಯದಲ್ಲಿಯೇ ಆಗಲಿ ಕಡಿಮೆ ಪ್ರಮಾಣದಲ್ಲಿವೆ. ಕಾದಂಬರಿ ಜನ ಸಾಮಾನ್ಯರ ಸಾಹಿತ್ಯ ಪ್ರಕಾರವಾಗಿ ಇರುವುದು ಇದಕ್ಕೆ ಕಾರಣವಾಗಿರಬಹುದು. ಮತ್ತು ಸಾಹಿತ್ಯದ ಗಮ್ಯವೆಲ್ಲ ಅಂತಃಕರಣದ ಕಡೆಗೆ ಒಲೆಯುವುದೂ ಇನ್ನೊಂದು ಕಾರಣವಾಗಿದೆ. ಆದರೆ ಸಾಹಿತ್ಯ ಸೃಷ್ಟಿಯಲ್ಲಿ ಲೇಖಕನ ಎಲ್ಲ ಬಾಹ್ಯ ಹಾಗೂ ಅಂತಃಕರಣಗಳೂ ಜಾಗೃತವಾಗಿ ತಮ್ಮ ಅನುಭವಗಳ ಪಾಲನ್ನೂ ಕೊಟ್ಟೇ ತೀರುತ್ತವೆ. ಕೆಲವರಲ್ಲಿ ಭಾವನೆಯ ಬಣ್ಣ ಹೆಚ್ಚಾಗಿರಬಹುದು. ಮತ್ತೆ ಕೆಲವರಲ್ಲಿ ಬೌದ್ಧಿಕತೆಯೇ ಪ್ರಧಾನವಾಗಿರಬಹುದು. ಆದರೆ ಬೌದ್ಧಿಕತೆಯಿಂದ ಸಾಹಿತ್ಯ ತನ್ನ ಸತ್ವವನ್ನು ಕಳೆದುಕೊಳ್ಳುತ್ತದೆಂಬ ಮಾತು ಕೇವಲ ಭ್ರಮೆಯಾಗಿದೆ. ಕನ್ನಡದಲ್ಲಿ ಈ ಮಾದರಿಯ ಕಾದಂಬರಿಕಾರರಲ್ಲಿ ದೇವುಡು ಒಬ್ಬರು. ದೇವುಡು ಪ್ರಾಚೀನ ಸಾಹಿತ್ಯ ಹಾಗೂ ವೇದಾಂತಗಳ ಆಳವಾದ ಅಭ್ಯಾಸದಿಂದ ಸುಸಂಸ್ಕೃತವಾದ ಜೀವನ ದೃಷ್ಟಿಯುಳ್ಳವರು, ಆದರೆ ಈ ಸಂಸ್ಕಾರ ಅವರ ಜೀವನದ ರುಚಿಯನ್ನು ಒಣಗಿಸಿಲ್ಲ.

ದೇವುಡು ನರಸಿಂಹಶಾಸ್ತ್ರಿಗಳ ಕಾದಂಬರಿಗಳ ಜಾತಿಯನ್ನು ನಿರ್ಣಯಿಸುವುದು ಕಠಿಣವಾಗಿದೆ. ಅವರ ಒಂದೊಂದು ಕಾದಂಬರಿಯೂ ಒಂದೊಂದು ಮಾದರಿಯಾಗಿ ತಿರುಗಿ ಆ ಮಾದರಿ ಬರುವುದೇ ಇಲ್ಲ. ಬಹುಶಃ ಬುದ್ಧಿ ಪ್ರಧಾನತೆಯೇ ಇವೆಲ್ಲವುಗಳ ಸಾಮಾನ್ಯ ಗುಣ ಧರ್ಮವಾಗಿದೆ. `ಅಂತರಂಗ' `ಮಲ್ಲಿ' `ಎರಡನೆಯ ಜನ್ಮ', `ಡಾ. ವೀಣಾ' ಇವು ಅವರ ಸಾಮಾಜಿಕ ಕಾದಂಬರಿಗಳು. ಬರವಣಿಗೆಯ ದೃಷ್ಟಿಯಿಂದ ಇವೆಲ್ಲ ಭಿನ್ನವಾಗಿದೆ. `ಅಂತರಂಗ'ವು ಹೆಸರೇ ಸೂಚಿಸುವಂತೆ ಮನಸ್ಸಿನ ಸೂಕ್ಷ್ಮ ವ್ಯಾಪಾರಗಳನ್ನು ಚಿತ್ರಿಸುವ ಕಾದಂಬರಿ ಪ್ರಜ್ಞಾ ಪ್ರವಾಹದ ತಂತ್ರವನ್ನು ಬಳಸಿಕೊಂಡು ದೇವುಡು ದಾಂಪತ್ಯದ ಸಮಸ್ಯೆಯೊಂದನ್ನು ಬಹಳ ಕುಶಲವಾಗಿ ಪರೀಕ್ಷಿಸಿ ನೋಡಿದ್ದಾರೆ. ಈ ತಂತ್ರದ ಉಪಯೋಗ ಮುಖ್ಯವಲ್ಲ, ಆದರೆ ಅದನ್ನುಪಯೋಗಿಸಿಕೊಂಡು ದೇವುಡು, ಎಂಥ ಬಂಗಾರದಂಥ ಸಾಹಿತ್ಯವನ್ನು ಬೆಳೆದಿದ್ದಾರೆಂಬುದು ಮುಖ್ಯವಾಗಿದೆ. ಅವರ ಇಂಗ್ಲಿಷ್ ಹಾಗೂ ಸಂಸ್ಕೃತ ಸಾಹಿತ್ಯಗಳ ಆಳವಾದ ಅಭ್ಯಾಸ ಈ ಕುಶಲತೆಯ ಬೆನ್ನೆಲುಬನ್ನು ಗಟ್ಟಿಯಾಗಿಸಿದೆ. ಕಾದಂಬರಿಯ ಕ್ರಿಯೆಯ ಕಾಲಾವಧಿಯ ವೇಗವನ್ನು ಬೇಕೆಂದೇ ಕಡಿಮೆ ಮಾಡಲಾಗಿದೆ. ಪಾತಮ್ಮನನ್ನು ಕಂಡಾಗ ಭಟ್ಟರ ಮನಸ್ಸಿನಲ್ಲಿಯ ಅನುರಾಗದ ಚಲನವಲನಗಳು, ಭಟ್ಟರ ವೈದಿಕ ಸಂಸ್ಕಾರ ಹೂಡುವ ವಾದ, ಅವರು ಅದಕ್ಕೆ ಬುದ್ಧಿವಂತಿಕೆಯಿಂದ ಕೊಡುವ ಉತ್ತರ, ಹಿನ್ನೆಲೆಗೆ ಯಾವ ಕ್ರಿಯೆಯೂ ಇಲ್ಲದೆ ಸಂಸ್ಕಾರ, ಸಂಯಮಗಳ ಪ್ರತೀಕದಂತಿದ್ದ ಭಟ್ಟರ ಹೆಂಡತಿಯ ಪಾತ್ರ ಇವೆಲ್ಲ ರೇಷ್ಮೆಯ ಎಳೆಗಳಂತೆ ಸೂಕ್ಷ್ಮವಾದರೂ ಗಟ್ಟಿಯಾದ ಸಂವಿಧಾನದ ಬಲೆಯನ್ನು ಹೆಣೆದಿವೆ. ಭಟ್ಟರ ರಸಿಕತೆಯ ಹಿಂದೆ ಕಾಳಿದಾಸನ ಸಾಹಿತ್ಯವೆಲ್ಲಾ ಅಡಗಿದೆ. ದೇವುಡು ಅವರ ಮುಂದಿನ ಕಾದಂಬರಿಗಳೂ ಹೀಗೆಯೇ ಕಾಮ ಜೀವನದ ಅನೇಕ ಸಮಸ್ಯೆಗಳನ್ನು ಎತ್ತಿಕೊಂಡಿವೆ. ಬಾಳಿನ ಮೂಲಭೂತ ಶಕ್ತಿಯಾದ ಕಾಮಕ್ಕೆ ಯಾವುದೇ ರೀತಿಯ ಅನ್ಯಾಯ ಮಾಡಿದರೂ ದುರಂತ ನಿಶ್ಚಿತವೆಂಬ ಮಾತಿಗೇ ಎಲ್ಲ ಕಾದಂಬರಿ

ಗಳೂ ಬಂದು ಮುಟ್ಟುತ್ತವೆ. ಎಳೆವರೆಯದ ಮಲ್ಲಿಯನ್ನು ಕಾಮಿಸಿದ ಪಟೇಲ ವಿಕೃತ ಜೀವಿಯಲ್ಲ. `ಎರಡನೆಯ ಜನ್ಮ'ದಲ್ಲಿಯ ಗೆಳೆಯರ ಅತೃಪ್ತಿಗೂ ಅದೇ ಕಾರಣವಾಗಿದೆ. ಕೊನೆಯಲ್ಲಿ ಬರುವ "ನೀವೆಲ್ಲಾ Sex-Neurotics ಕಣೋ" ಎಂಬ ಮಾತನ್ನು ನೋಡಬಹುದು. ರಸಿಕತೆಗೆ, ಭೋಗ ಜೀವನಕ್ಕೆ ಸಮೃದ್ಧಿಗೆ ಕೊರತೆಯಿರುವ ಈ ಕಾಲದಲ್ಲಿ ದೇವುಡು ಅವರ ಈ ದೃಷ್ಟಿ ವಿಪರೀತವೆಂದೆ ನಿಸಬಹುದು. ಅದು ನಿಜವಾಗಿದೆ. ದೇವುಡು ಅವರ ಮನೋರಚನೆಯೇ ಈ ಕಾಲದಲ್ಲವೆಂಬಂತಿದೆ.

ತಮ್ಮ ಅಪೂರ್ವವಾದ ಬುದ್ಧಿಶಕ್ತಿಯಿಂದ, ವಿದ್ವತ್ತೆಯಿಂದ ಪಾತ್ರಗಳ ಮನಸ್ಸನ್ನು ಪೃಥಕ್ಕರಿಸಿ ನೋಡುವ ಕಲೆ ದೇವುಡು ಅವರ ವೈಯುಕ್ತಿಕ ಪ್ರತಿಭೆಯಾಗಿದೆ. ಬುದ್ಧಿಶಕ್ತಿ ಹಾಗೂ ನೈಜಪ್ರತಿಭೆಗಳನ್ನೂ ಸಮಾನವಾಗಿ ಮೇಳವಿಸಿಕೊಂಡ ಕೆಲವೇ ಲೇಖಕರಲ್ಲಿ ಅವರೊಬ್ಬರಾಗಿದ್ದಾರೆ. ಆದರೆ ಇದೇ ಗುಣ ಅವರ ದುರ್ಬಲತೆತೆಯೂ ಆಗಿದೆ. ಸಾಮಾನ್ಯವಾಗಿ ದೇವುಡು ಅವರು ಸೃಷ್ಟಿಸಿದ ಪಾತ್ರಗಳೆಲ್ಲ ವಿದಗ್ಧತೆಯಿಂದ ಕೂಡಿದವುಗಳು, ಸುಸಂಸ್ಕೃತವಾದವುಗಳು. ಭಟ್ಟರ ಸಂವೇದನೆಗಳು ಕಾಳಿದಾಸ ಸಾಹಿತ್ಯದ ಭಾವ ಪ್ರಪಂಚವನ್ನು ಅನುಭವಿಸಿ ನೋಡುತ್ತವೆ. "ಮಲ್ಲಿ"ಯಲ್ಲಿಯ ಪಟೇಲ ವಿದ್ವಾಂಸನಲ್ಲ, ಆದರೆ ಅವನ ಅಭಿರುಚಿ ಪ್ರತ್ಯೇಕವೆನ್ನುವಷ್ಟು ಮೇಲು ಮಟ್ಟದಲ್ಲಿದೆ. `ಎರಡನೆಯ ಜನ್ಮ' ದಲ್ಲಿಯ ಗೆಳೆಯರೆಲ್ಲ ಮೇಧಾವಿಗಳು ಹೀಗಾಗಿ ಅವರ ಪಾತ್ರಗಳು ಸಾಮಾನ್ಯ ಸುಖ ದುಃಖಗಳಿಂದ ದೂರವಾಗಿವೆ. ಅವು ಅಭ್ಯಾಸಕ್ಕಾಗಿ ತಂದಿಟ್ಟ ಮಾನವ-ಮಾದರಿಗಳಾಗಿವೆ. ಅವುಗಳಲ್ಲಿ ಕೃತ್ರಿಮತೆ ಕಾಣದಿದ್ದರೂ ಪ್ರತ್ಯೇಕತೆ ಬೇಕಾದಷ್ಟಿದೆ. ಅವರು ಜೀವನದಿಂದ ಆರಿಸಿ ತೆಗೆದುಕೊಂಡಂತಿದ್ದಾರೆ. ತಮ್ಮ ಸ್ವಭಾವ ಹಾಗೂ ಶ್ರೀಮಂತಿಕೆಯಿಂದ ಈ ವ್ಯಕ್ತಿಗಳು ಸಾಮಾನ್ಯತೆಯಿಂದ ಒಂದು ಮೊಳ ದೂರವಾಗಿದ್ದಾರೆ. ಯಾವುದೋ ಒಂದು ಮಾನಸಿಕ ದೌರ್ಬಲ್ಯ (ಮುಖ್ಯವಾಗಿ ಕಾಮ) ಅವರನ್ನು ಮನುಷ್ಯರ ಜಾತಿಯಲ್ಲಿ ತಂದು ನಿಲ್ಲಿಸಿದೆ. ಆ ಸಮಸ್ಯೆಯೊಂದನ್ನು ಬಿಟ್ಟರೆ ಬೇರಾವ ಚಿಂತೆಯೂ ಅವರನ್ನು ಕಾಡುವುದಿಲ್ಲ. ದೇವುಡು ಅವರು ಈ ಮಾನವ ಮಾದರಿಗಳನ್ನು ಅರ್ಧ ಬೆರಗಿನಿಂದ ಅರ್ಧ ವ್ಯಂಗ್ಯವಾಗಿ ನೋಡುತ್ತಾರೆ. ಈ ಪಾತ್ರ ಸಮುದಾಯವನ್ನು ನೋಡಿದಾಗ `Huxley'ಯ ಪಾತ್ರವರ್ಗ ಕಣ್ಣಿಗೆ ಕಟ್ಟಿದಂತಾಗುತ್ತದೆ.

ಶೈಲಿಯ ದೃಷ್ಟಿಯಿಂದಲೂ ದೇವುಡು ಉಳಿದ ಲೇಖಕರಿಂದ ಪ್ರತ್ಯೇಕವಾಗಿ ಉಳಿದಿದ್ದಾರೆ. ಆಡುನುಡಿಯ ಸತ್ವದೊಡನೆ ಸಂಸ್ಕೃತದ ಅಭಿಜಾತತೆಯನ್ನೂ ಅವರ ಶೈಲಿ ಮೇಳವಿಸಿಕೊಂಡಿದೆ. ಇದು ಅವರ ವಸ್ತು ಹಾಗೂ ಪಾತ್ರಗಳಿಗೆ ಉಚಿತವಾಗಿದೆಯೆನ್ನಬಹುದು. ರಸಿಕತೆ ಹಾಗೂ ಸೌಂದರ್ಯ-ಪ್ರೀತಿ ಅವರ ಕಲೆಯ ಜೀವಾಳವಾಗಿರುವುದರಿಂದ ದೇವುಡು, ವರ್ಣನೆ ಹಾಗೂ ಪರಿಸರಗಳನ್ನು ನಿರ್ಮಿಸುವಾಗ, ವಿವರಗಳ ಕಡೆಗೆ ವಿಶೇಷ ಗಮನವನ್ನೀಯುತ್ತಾರೆ. ಕುವೆಂಪು ಅವರೊಬ್ಬರನ್ನು ಬಿಟ್ಟರೆ ಸವಿವರವಾದ ವರ್ಣನೆ ನಮಗೆ ದೇವುಡು ಅವರಲ್ಲಿಯೇ ದೊರೆಯಬೇಕು. ಸರಸತೆ ಹಾಗೂ ವಿದಗ್ಧತೆಗಳಿಂದ ಕೂಡಿದ ಈ ವರ್ಣನೆಗಳು ಬರವಣಿಗೆಯ ಶ್ರೇಷ್ಠ ಮಾದರಿಗಳಾಗಿವೆ. ಸಂಸ್ಕೃ ಆಖ್ಯಾಯಿಕೆಗಳಲ್ಲಿ ಕಂಡು ಬರುವ ರಮ್ಯತೆಯ ವಾತಾವರಣ ದೇವುಡು ಅವರ ಕೃತಿಗಳಲ್ಲಿ ವಿಪುಲವಾಗಿದೆ. ಮತ್ತು ಅದರಿಂದ ಅದೇ ಐಂದ್ರಿಯಕ ತೃಪ್ತಿಯ ಅನುಭವವಾಗುತ್ತದೆ.

ದೇವುಡು ಕಾದಂಬರಿಗಳಲ್ಲಿ ಜೀವನವನ್ನು ಸಂಸ್ಕಾರ ಬಲದಿಂದ ಪುನಃ ಸೃಷ್ಟಿಸಿ ಅದರ

ಅನಂತತೆಯನ್ನು ಸೂಚಿಸಿದರು. ಅತ್ತಿತ್ತ ಹರಿವಿಬಿದ್ದ ಬಾಳಿನ ಅವಯುವಗಳನ್ನು ಒಂದುಗೂಡಿಸಿ ಪ್ರಾಣ ಪ್ರತಿಷ್ಠೆಯನ್ನು ಮಾಡಿದರು. ಅವರ ಪಾತ್ರಗಳ, ಸಂಸ್ಕೃತ ಕಾವ್ಯ ನಾಟಕಗಳಿಂದ ಪುನರ್ಜನ್ಮ ವನ್ನು ಪಡೆದಂತೆ ಕಾಣುತ್ತದೆ. ಅವುಗಳ ಅಂತರಂಗವನ್ನು ಭೇದಿಸಿ, ಅವುಗಳ ಮೂಲ ಸ್ವರೂಪ ವನ್ನು ನಿರ್ಮಿಸುವುದು ಅವರ ಗುರಿಯಾಗಿದೆ. ಒಂದು ರೀತಿಯಿಂದ ಅವರ ಪೃಥಃಕರಣ ಸಮನ್ವಯವಾಗಿದೆ.

ದೇವುಡು ಅವರದು ನಮ್ಮ ಸಂಸ್ಕೃತ ಭಾಷ್ಯಕಾರರ ನೀತಿಯ ವಿಶ್ಲೇಷಣೆ. ಅದರಲ್ಲಿ ವಿಡಂ ಬನಕ್ಕಾಗಲಿ ವ್ಯಂಗ್ಯಕ್ಕಾಗಲಿ ಅವಕಾಶವಿಲ್ಲ. ತಿಳಿವಳಿಕೆಯನ್ನು ಮತ್ತೆ ಮತ್ತೆ ಒರೆಗೆ ತಿಕ್ಕಿ ನೋಡುವ ರೀತಿ ಅದು.

ಐತಿಹಾಸಿಕ ಕಾದಂಬರಿಯಾದ ದೇವುಡುರವರ `ಅವಳ ಕತೆ'ಯಲ್ಲಿ ವಿಜಯನಗರದ ಇತಿ ಹಾಸವೇ ಹಿನ್ನೆಲೆಯಾಗಿದೆ. ಆದರೆ ಈ ಕಾದಂಬರಿ ಸಂಪೂರ್ಣ ಐತಿಹಾಸಿಕವಾಗಿಲ್ಲ. ಇತಿಹಾಸ ಕಾಲ ದಲ್ಲಿ ನಡೆದಿರಬಹುದಾದ ಒಂದು ರಮ್ಯ ಶೃಂಗಾರದ ಕತೆ. ವಿಜಯನಗರ ಸಾಮ್ರಾಜ್ಯದ ದೈವದೊಂ ದಿಗೆ ಹೇಗೊ ಸಂಬಂಧವನ್ನು ಬೆಳೆಸಿಕೊಂಡಿದೆ. ದೇವುಡು ತಮ್ಮ ಸಾಮಾಜಿಕ ಕಾದಂಬರಿಗಳಂತೆಯೇ ಕಾಮದ ಸಮಸ್ಯೆಯನ್ನು ಬೇರೆ ಸಂದರ್ಭದ ಬೆಳಕಿನಲ್ಲಿ ಚರ್ಚಿಸಿದ್ದಾರೆ. ಕತೆಗೆ ಕೇಂದ್ರ ವ್ಯಕ್ತಿಯಾದ ವಳು ಚಿನ್ನಾಸಾನಿ. ಅದು "ಅವಳ ಕತೆ" ನಾಡಿನ ಪ್ರಮುಖ ಶಕ್ತಿಗಳೆಲ್ಲ ಇವಳಿಗೆ ಆಕರ್ಷಿತವಾಗಿವೆ. ನಟನಾದ ಗೋಪಾಲರಾಯ, ಸಾಹುಕಾರ ವೀರಭದ್ರಯ್ಯನವರು ಗುರುಗಳಾದ ಭರತಾಚಾರ್ಯರು ಈ ಪಾತ್ರಗಳೆಲ್ಲ ಮನೋಜ್ಞವಾಗಿ ಸೃಷ್ಟಿಯಾಗಿವೆ.

ಈ ಕಾದಂಬರಿಯ ವರ್ಣನೆಯ ಭಾಗಗಳೆಲ್ಲ ಶೈಲಿಯ ದೃಷ್ಠಿಯಿಂದ ಶ್ರೇಷ್ಠ ತರಗತಿಗೆ ಸೇರಿದವುಗಳಾಗಿವೆ. ದೇವುಡು ಅವರ ಪಾಂಡಿತ್ಯದ ಪ್ರಭಾವಿಕತೆ ಹಾಗೂ ಕಾವ್ಯಶಕ್ತಿಗಳು ಕಾದಂಬ ರಿಯ ತುಂಬ ಸಮೃದ್ಧವಾಗಿ ಹರಡಿವೆ. ರಾಯರ ಕಾಲದ ರಸಿಕತೆ, ಓಲಗದ ನಯ ವಿನಯಗಳು, ವೀರಭದ್ರಯ್ಯನಂಥ ಸಾಹುಕಾರರ ಸಂಸ್ಕೃತಿ ಇವುಗಳ ಚಿತ್ರಣದಲ್ಲಿ ಅಭ್ಯಾಸಪೂರ್ಣತೆಯೊಂದಿಗೆ ದೇವುಡು ಅವರ ಪ್ರತಿಭೆಯನ್ನೂ ಕಾಣಬಹುದಾಗಿದೆ.

ಶ್ರೀ ದೇವುಡು ಅವರ "ಮಯೂರ ಕಾದಂಬರಿ ಬಹಳ ಹಿಂದೆ ಪ್ರಕಟವಾಗಿದ್ದು ಸಾಕಷ್ಟು ಜನಪ್ರಿಯತೆಯನ್ನು ಗಳಿಸಿತು. ಗಳಗನಾಥರು ಹಾಗೂ ಬಿ. ವೆಂಕಟಾಚಾರ್ಯರು ಅನುವಾದಿತ ಕಥೆ ಗಳನ್ನು ಮಾತ್ರ ಕೊಟ್ಟರು. ದೇವುಡು ಅವರು, ಆ ಪರಂಪರೆಯನ್ನು ಬಿಟ್ಟು, ಸ್ವತಂತ್ರ ಕೃತಿ ರಚನೆ ಯನ್ನು ಮಾಡಿದರು. "ಮಯೂರ" ಒಂದು ಕಥೆ; ಅದರಲ್ಲಿ ದಿಟಕ್ಕಿಂತ ದಿಟದಂತೆ ತೋರುವ ಸಟೆಯೇ ಹೆಚ್ಚು ಎಂದು ಅವರು ಹೇಳಿದ್ದರೂ. ಈ ಕಥೆಗೆ ಸರಿಯಾದ ಐತಿಹಾಸಿಕ ಹಿನ್ನೆಲೆಯಿದೆ; ಪಾತ್ರರಚನೆ ಓಜಸ್ಸಿನಿಂದ ತುಂಬಿದೆ. ಪಲ್ಲವ ಹಾಗೂ ಕದಂಬ ರಾಜವಂಶಗಳ ರಾಜಕೀಯದೊಂದಿಗೆ ಆ ಕಾಲದ ಜನಜೀವನದ ಸಜೀವ ವರ್ಣನೆಯನ್ನು ಇಲ್ಲಿ ಕಾಣುತ್ತೇವೆ. ಆದರೆ ದೇವುಡು ಅವರ ಮುಂದಿನ ಕಾದಂಬರಿ (ಮುಖ್ಯವಾಗಿ ಅವಳ ಕಥೆ)ಗಳಿಗೂ ಈ ಕಾದಂಬರಿಗೂ ಇರುವ ವಿಶೇಷ ಅಂತರವನ್ನು ಲಕ್ಷ್ಯದಲ್ಲಿಡಬೇಕು. `ಮಯೂರ' ಕೇವಲ ಕಥೆಯೆಂದೇ ಓದಬೇಕಾದದ್ದು. ಅಭಿನವ ಮುದ್ರರಾಕ್ಷ

ಸದಂತೆ ನಾಯಕ ಪ್ರತಿನಾಯಕರ ಕೌಶಲ್ಯಪೂರ್ಣವಾದ ತಂತ್ರ ಪ್ರತಿತಂತ್ರಗಳೇ ಕತೆಯ ಜೀವಾಳವಾಗಿವೆ. ದೇವುಡು ಅವರ ಶೈಲಿಯ ಮಾರ್ಮಿಕತೆಯೊಂದೇ ಕತೆಯ ಮೋಹಕತೆಯನ್ನು ಕಾಪಾಡಿದೆ. ಮುಂದಿನ ಕಾದಂಬರಿಗಳಲ್ಲಿಯಂತೆ ಇಲ್ಲಿ ಮಾನವ ಜೀವನದ ಸಾರ್ವಕಾಲಿಕ ಸಮಸ್ಯೆಯೊಂದನ್ನು ದೇವುಡು ಚರ್ಚಿಸಹೋಗಿಲ್ಲ. ಅಂತಲೇ ದೇವುಡು ಅವರ ಕೃತಿಗಳಲ್ಲೆಲ್ಲ ಸಾಮಾನ್ಯವಾಗಿರುವ ಇಮ್ಮುಖವಾದ ಸೌಂದರ್ಯ ಇಲ್ಲಿ ಅನುಭವಕ್ಕೆ ಬರುವುದಿಲ್ಲ. ಮಯೂರ ಪ್ರೇಮಾವತಿಯರ ಪ್ರಣಯ ಸಂಬಂಧದಲ್ಲಿ ಒಮ್ಮೊಮ್ಮೆ ಅದು ಮಿಂಚುತ್ತದಾದರೂ ಕತೆಯ ಒಡಲಿನಲ್ಲಿ ಹಾದು ಬರುವುದಿಲ್ಲ. ಆದರೆ ಕಥಾ ರಚನೆಯ ದೃಷ್ಟಿಯಿಂದ ನೋಡಿದಾಗ ಮಾತ್ರ ಕಾದಂಬರಿಯ ಕೌಶಲ ಇಂದಿಗೂ ಬೆರಗುಗೊಳಿಸುತ್ತದೆ.

ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕತೆ ಹಾಗೂ ಚಾರಿತ್ರಿಕತೆಗಳಿಂದ ದೂರವಾದ, ಕಲ್ಪನೆಯ ಸೃಷ್ಟಿಯನ್ನು ಆಶ್ರಯಿಸಿ ಬರೆದಂಥ ಕೃತಿಗಳಲ್ಲಿ ಮಹಾ ಬ್ರಾಹ್ಮಣ ವೇವುಡುರವರ ಒಂದು ಅಪರೂಪ ಕೃತಿ.

"ಮಹಾಬ್ರಾಹ್ಮಣ" ಒಂದು ಪೌರಾಣಿಕ ಕಾದಂಬರಿ. ಅಂದರೆ ಅದರ ಜೀವನಚಿತ್ರ ವೈದಿಕ ಕಾಲದ್ದಾಗಿದೆ. ಒಂದು ದೃಷ್ಟಿಯಿಂದ ವಿಶ್ವಾಮಿತ್ರನ ಆರ್ಷ ಜೀವನದ ಸಾಹಸಗಳ ಕತೆಯಾಗಿದೆ. ವೇದೋಪನಿಷತ್ತುಗಳಲ್ಲಿ ರಾಮಾಯಣ, ಮಹಾಭಾರತದಂತಹ ಕಾವ್ಯಗಳಲ್ಲಿ ಚದರಿಬಿದ್ದಿರುವ ಅವನ ಜೀವನದ ಅಂಶಗಳನ್ನು ಒಂದೆಡೆಗೆ ಕೂಡಿಸಿ ದೇವುಡು ಅದರಲ್ಲಿ ಪ್ರಾಣಪ್ರತಿಷ್ಠಾಪನೆಯನ್ನು ಮಾಡಿ ಈ ಅಮೋಘವಾದ ಕೃತಿಯನ್ನು ನಿರ್ಮಿಸಿದ್ದಾರೆ. ವಿಶ್ವಾಮಿತ್ರ ಹಾಗೂ ವಸಿಷ್ಠರ ವೈಮನಸ್ಯದಿಂದ ಕತೆ ಪ್ರಾರಂಭವಾದದ್ದು, ವಿಶ್ವಾಮಿತ್ರ ಗಾಯತ್ರಿ ಮಂತ್ರವನ್ನು ಸೃಷ್ಟಿಸಿ ಬ್ರಹ್ಮರ್ಷಿಯಾದಾಗ ಕೊನೆಗೊಳ್ಳುತ್ತದೆ. ಈ ವ್ಯಾಪ್ತಿಯಲ್ಲಿ ವಾಮದೇವನ ಸಂದರ್ಶನ, ರುದ್ರನ ನುಪಾಸನೆ, ತ್ರಿಶಂಕುವಿನ ಸ್ವರ್ಗ ಪ್ರವೇಶ, ಮೇನಕೆಯ ಪ್ರಸಂಗ ಹೀಗೆ ಹಲವಾರು ಕಥಾಂತರಗಳು ಅಡಕವಾಗಿವೆ. ಮನುಷ್ಯರೊಡನೆ ದೇವತೆಗಳು ಇಲ್ಲಿಯ ಪಾತ್ರವರ್ಗದಲ್ಲಿ ಸಮಾವೇಶರಾಗಿದ್ದಾರೆ. ಹಲವಾರು ಅನುಷ್ಠಾನಗಳ ಕ್ರಮ, ಯಜ್ಞವಿಧಿಗಳು ದೇವತೆಗಳು ಕಾಣಿಸಿಕೊಳ್ಳುವ ರೀತಿ, ಮಂತ್ರದರ್ಶನ, ಜಟಿಲವಾದ ಧರ್ಮಸೂಕ್ಷ್ಮಗಳು ವೇದಕಾಲೀನ ಸಮಾಜ ನಿಯಮಗಳು ಇವೆಲ್ಲವುಗಳ ಸಮಗ್ರವಾದ ಚಿತ್ರಣವೂ ಇಲ್ಲಿದೆ. ಕಾದಂಬರಿಯ ರಸಾನುಭಾವವನ್ನು ಇನ್ನೂ ಹೆಚ್ಚು ಗಹನವಾಗಿಸುತ್ತದೆ.

"ಮಹಾಬ್ರಾಹ್ಮಣ"ದ ಕತೆ ಮೂರು ಯುಗಗಳ ಅವಧಿಯಲ್ಲಿ ನಡೆಯುವಂಥದು; ಅಲ್ಲಿಯ ವ್ಯಕ್ತಿಗಳು ಸಾವಿರ ವರ್ಷಗಳವರೆಗೆ ಜೀವಿಸುತ್ತಿರುವವರು. ದೇವತೆಗಳ ಜೊತೆಗೆ ಸಂಬಂಧವಿಟ್ಟುಕೊಂಡವರು. ಅವರ ಸಮಸ್ಯೆಗಳು ಹೆಚ್ಚಾಗಿ ಪಾರಲೌಕಿಕವಾದವುಗಳು. ಅಂದಮೇಲೆ ಸಮಕಾಲೀನತೆಗೂ ಈ ಕಾದಂಬರಿಗೂ ಏನೂ ಸಂಬಂಧವೆಂದು ಪ್ರಶ್ನೆಯೇಳುವುದು ಸಹಜವಾಗಿದೆ. ಈ ಪ್ರಶ್ನೆಗೆ ದೇವುಡು ಕಾದಂಬರಿಯನ್ನು ಬರೆದೇ ಅತ್ಯಂತ ಸಮರ್ಥವಾದ ಉತ್ತರವನ್ನು ಕೊಟ್ಟಿದ್ದಾರೆ. ರಾಜನಾಗಿ ಕ್ಷಾತ್ರ ರೋಷದಿಂದ ತುಂಬಿ ತುಳುಕುವ ಕೌಶಿಕ ವಸಿಷ್ಠರ ಜೊತೆಗೆ ಸ್ಪರ್ಧಿಸುತ್ತ ಅನೇಕ ಅನುಭವ ಪರಂಪರೆಗಳಿಗೆ ಗುರಿಯಾಗಿ ವಿಶ್ವಾಮಿತ್ರನಾಗುವ ಸಂಗತಿ ಸಾರ್ವಕಾಲಿಕತೆಯಿಂದ ಕೂಡಿದೆ. ವಸಿಷ್ಠರು ಸಿದ್ಧರು, ಕಾಲದರ್ಶಿಗಳು. ಅವರ ಸಿದ್ಧಿ, ಸಾಮರ್ಥ್ಯ ಅಲೌಕಿಕ ತೇಜಸ್ಸುಗಳು ವಿಶ್ವಾಮಿತ್ರನನ್ನು ಈ ಸಾಹ

ಸಕ್ಕೆ ಪ್ರೇರಿಸುತ್ತವೆ. ವಿಶ್ವಾಮಿತ್ರನ ಅಹಂಭಾವ ಒಳಗಿನಿಂದ ಪೌರುಷವಾಗಿ ಹೊರಗಿನಿಂದ ವಿಘ್ನವಾಗಿ ಬರುತ್ತದೆ. ವಾಮದೇವ ಅವನಿಗೆ ಅಹಂಕಾರವನ್ನು ತೊರೆಯದೇ ಸಿದ್ಧಿಯಾಗದು ಎಂದು ಹೇಳಿದ್ದಾನೆ. ಅವನು ಮಾಡಿದ ತಪಸ್ಸೆಲ್ಲಾ ಅವನ ಸಾಮರ್ಥ್ಯವನ್ನೂ ಅಹಂಭಾವವನ್ನೂ ಕೂಡಿಯೇ ಹೆಚ್ಚಿಸುತ್ತದೆ. ತ್ರಿಶಂಕುವಿಗಾಗಿ ಭಾರ್ಗವನೊಡನೆ ಅವನು ಯಜ್ಞವನ್ನು ಆರಂಭಿಸಿದಾಗ ಈ ಸತ್ಯ ಇನ್ನೂ ಸ್ಪಷ್ಟವಾಗುತ್ತದೆ. ವಸಿಷ್ಠರ ಮಕ್ಕಳನ್ನು ಮಂತ್ರಶಕ್ತಿಯಿಂದ ಸಂಹಾರ ಮಾಡಿದರೂ ಅವನ ಪ್ರಯತ್ನವೇನೂ ನಿಲ್ಲುವುದಿಲ್ಲ. ಪಡೆದುಕೊಂಡ ಅನುಭವಗಳು ಅವನ ಜ್ಞಾನದ ಸೀಮೆಯನ್ನು ಗೆರೆಹಾಕಿ ತೋರಿಸುತ್ತವೆ, ಆದರೆ ಅನುಭವ ಪಡೆಯುವುದನ್ನು ಅವನು ನಿಲ್ಲಿಸುವುದಿಲ್ಲ. `ಅನ್ಯಮಿಂದ್ರಂಕರಿಷ್ಯಾಮಿ' ಎಂಬ ಅವನ ಘೋರ ಸಂಕಲ್ಪ ಮುಂದಿನ ಕಲ್ಪದಲ್ಲಾದರೂ ಫಲಿಸುವಂಥದು. ಮೇನಕೆ ಮನುಷ್ಯಸ್ತ್ರೀಯಂತೆ ಅವನೊಡನೆ ಸಂಸಾರ ಹೂಡುತ್ತಾಳೆ. ವಿಶ್ವಾಮಿತ್ರನಿಗೆ ಆ ಅನುಭವವೂ ತ್ಯಾಜ್ಯವಾಗಿಲ್ಲ, ಮತ್ತೆ ತಪಸ್ಸು, ನಡುವೆ ಶುನಶ್ಶೇಫನ ಪ್ರಸಂಗವೊಂದು ಅವನನ್ನು ಇನ್ನೊಂದು ಸಾಹಸಕ್ಕೆ ಗುರಿಮಾಡಿದೆ. ಮಂತ್ರದ್ರಷ್ಟಾರನಾಗಿ ಮಂತ್ರಕರ್ತನಾಗುವವರೆಗೆ ಅವನ ಸಾಹಸ ನಿಲ್ಲುವುದಿಲ್ಲ. ಹೀಗೆ ಆ ಮಹಾಜೀವನದ ಮೂಲಶಕ್ತಿಯನ್ನು ಗುರುತಿಸಿ ಅದರ ಮೂಲಕ ದೇವುಡು ವಿಶ್ವಾಮಿತ್ರನ ಅಂತರಂಗ ಬಹಿರಂಗಗಳ ಆಳಕ್ಕಿಳಿದು ಈ ಕೃತಿಯನ್ನು ನಿರ್ಮಿಸಿದ್ದಾರೆ. ವಿಶ್ವಾಮಿತ್ರ ತನ್ಮಾತ್ರೆಗಳನ್ನೊಡೆದು ಪುನಃ ಅವುಗಳನ್ನು ಆ ಕ್ರಮದಲ್ಲಿಯೇ ಕೂಡಿಸಿ ತನ್ನ ಪ್ರಾಣಶಕ್ತಿಯ ಬಲದಿಂದ ಇನ್ನೊಂದು ಲೋಕವನ್ನು ಸೃಷ್ಟಿಸಿದಂತೆಯೇ ದೇವುಡು ಅವನ ಜೀವನವನ್ನು ಪುನಃ ಸೃಷ್ಟಿಸಿದ್ದಾರೆ.

ಅದಕ್ಕಾಗಿ ಈ ಕಾದಂಬರಿಯ ಬಾಹ್ಯವಿವರಗಳು ಸರಿಯಾಗಿದ್ದಷ್ಟೂ ಸಾಲದು. ವಿವರಗಳ ಜೀವಂತತನವೊಂದನ್ನೇ ನೋಡಿದರೂ ಕನ್ನಡ ಕಾದಂಬರಿಗಳಲ್ಲಿ "ಮಹಾಬ್ರಾಹ್ಮಣ"ಕ್ಕೆ ಅಗ್ರಸ್ಥಾನ ದೊರೆಯಬೇಕು. ಮೊದಲನೆಯ ಪರಿಚ್ಛೇದದಲ್ಲಿ ಗೃಧ್ರವೊಂದು ಗಿಡದ ರಂಬೆಯನ್ನು ಮುರಿದದ್ದು, ವಿಶ್ವಾಮಿತ್ರ ರುದ್ರನ ಉಪಾಸನೆ ನಡೆಸಿದಾಗ ಉಪಾಸ್ಯಬಿಂಬದ ದರ್ಶನದ ಸಮಗ್ರವರ್ಣನೆ, ಅಶ್ವಿನೀ ಕುಮಾರರು ತ್ರಿಶಂಕುವಿನ ದೇಹದ ಮೇಲೆ ನಡೆಸಿದ ಚಿಕಿತ್ಸೆ, ಅದರ ಕ್ರಮ ಮೇನಕೆಯೊಡನೆ ಹುಣ್ಣಿಮೆಯಿರುಳಲ್ಲಿ ವಿಶ್ವಾಮಿತ್ರ ಕೂಡಿದ್ದು, ಆಪೋದೇವಿಯರು ಪ್ರತ್ಯಕ್ಷವಾಗುವಿಕೆ ಈ ವರ್ಣನೆಗಳೆಲ್ಲ ವೇದಕಾಲದ ಜಗತ್ತನ್ನು ಮರೆಯಲಾಗದಂತೆ ರೂಪಿಸಿವೆ. ಈ ವರ್ಣನೆಗಳ ಔಚಿತ್ಯ ಹಾಗೂ ಪ್ರಭಾವಗಳನ್ನು ನೋಡಿದಾಗ, ದೇವುಡು ಕನ್ನಡ ಭಾಷೆಯ ಧ್ವನಿಶಕ್ತಿ ಹಾಗೂ ಅರ್ಥ ವ್ಯಕ್ತಿಗಳನ್ನು ಒಂದು ತೂಕ ಹೆಚ್ಚಿಸಿದ್ದಾರೆ. ಎಲ್ಲ ಮಹಾಕೃತಿಗಳಂತೆಯೇ "ಮಹಾಬ್ರಾಹ್ಮಣ" ಕನ್ನಡ ಭಾಷೆಯ ಸತ್ವದ ಸಂಪೂರ್ಣ ಉಪಯೋಗವನ್ನು ಮಾಡಿಕೊಂಡಿದ್ದಲ್ಲದೆ, ಆ ಸತ್ವಕ್ಕೆ ತನ್ನ ಕಾಣಿಕೆಯನ್ನು ನೀಡಿದೆಯೆನ್ನಬಹುದು.

ಶ್ರೀ ದೇವುಡು "ಅಂತರಂಗ"ದಿಂದೀಚೆಗೆ ವಿಭಿನ್ನ ಜಾತಿಯ ಹಲವಾರು ಕಾದಂಬರಿಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ "ಮಹಾಬ್ರಾಹ್ಮಣ, ಮಹಾಕ್ಷತ್ರಿಯ ಮತ್ತು ಮಹಾದರ್ಶನ" ಈ ಮೂರನ್ನು ಸುಲಭವಾಗಿ ಒಂದೇ ಗುಂಪಿಗೆ ಸೇರಿಸಬಹುದು. ಮಹಾಬ್ರಾಹ್ಮಣದ ವಿಸ್ತೃತ ಪರಿಚಯವನ್ನು ಈ ಮೊದಲೇ ಮಾಡಿಕೊಡಲಾಗಿದೆ. ಮುಂದೆ ಈ ಮೂರು ಕೃತಿಗಳ ಸಾಮರಸ್ಯವನ್ನು ನೋಡೋಣ. ಮಹಾಬ್ರಾಹ್ಮಣ ೧೯೪೭ರಲ್ಲಿ ಪ್ರಕಟವಾಯಿತು. ಮಹಾಕ್ಷತ್ರಿಯ ೧೯೬೧ರಲ್ಲಿ ಮನೋಹರ

ಗ್ರಂಥಮಾಲೆಯ ನಡೆದು ಬಂದ ದಾರಿಯ ಎರಡನೇ ಸಂಪುಟದಲ್ಲಿ ಪ್ರಕಟವಾಯಿತು. ಮೂರನೆಯ "ಮಹಾದರ್ಶನ" ಕರ್ಮವೀರ ಸಂಚಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ೧೯೬೪ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಯಿತು.

ಈ ೧೭ ವರುಷಗಳ ಅವಧಿಯಲ್ಲಿ ದೇವುಡು ಅವರು ಇವುಗಳ ಜೊತೆಗೇ ಬೇರೆ ಬಗೆಯ ಕಾದಂಬರಿಗಳನ್ನು ಬರೆದಿದ್ದಾರೆ. ಆದರೆ ಆ ಮೂರು ಕಾದಂಬರಿಗಳು ಒಂದು ಸಮಾನ ಮನೋಧರ್ಮವನ್ನು ಪ್ರತಿಬಿಂಬಿಸುತ್ತವೆ. ಈ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಲೋಕ ನಮ್ಮ ದಿನ ಬಳಕೆಯ ಜೀವನದಿಂದ ದೂರವಾದದ್ದು; ಅಲ್ಲಿಯ ವ್ಯಕ್ತಿಗಳು ಅಜ್ಞಾತರಲ್ಲದಿದ್ದರೂ ನಮಗೂ ಅವರಿಗೂ ಸುಖದುಃಖಗಳ ಸಂಬಂಧ ಏರ್ಪಡುವಷ್ಟು ಹತ್ತಿರದವರಲ್ಲ. ಅಲ್ಲಿಯ ಸಮಸ್ಯೆಗಳು ಸರ್ವಕಾಲಿಕವಾದವುಗಳು. ಈ ಕೃತಿಗಳಿಂದ ನಮಗೆ ದೊರೆಯುವ ಅನುಭವ ನಮ್ಮ ಸಂಸ್ಕಾರ ವಿಶೇಷದ ಫಲವಾಗಿ ಮಾತ್ರ ಬರುವಂಥದ್ದು. ಈ ಕಾದಂಬರಿಗಳಿಗೆ ಕಥಾ ವಸ್ತುವನ್ನು ದೇವುಡು ಅವರು, ಸಂಹಿತೆ, ಬ್ರಾಹ್ಮಣ, ಉಪನಿಷತ್ತು ಹಾಗೂ ಪುರಾಣಗಳಿಂದ ತೆಗೆದುಕೊಂಡಿದ್ದಾರೆ. ಸಾವಿರಾರು ವರ್ಷಗಳ ಹಿಂದಿನ ಜೀವನ ಕ್ರಮವನ್ನು ಹಾಗೂ ಅದಕ್ಕೆ ತಕ್ಕುದಾದ ವಾತಾವರಣವನ್ನು ನಿರ್ಮಿಸಬಲ್ಲ ಶಕ್ತಿ, ನಿಪುಣತೆಗಳು ದೇವುಡು ಅವರಲ್ಲಿ ಬೇಕಾದಷ್ಟಿವೆ. ಆಯಾ ಕಾಲದ ಜೀವಿಗಳಿಗೆ ಉಸಿರಾಡಿಸಲು ತಕ್ಕದಾದ ಹವಾಮಾನವನ್ನು ಅವರು ಸೃಷ್ಟಿಸಬಲ್ಲರು. ಆದರೆ ಇದಕ್ಕಿಂತ ಹೆಚ್ಚಿನ ಮಹತ್ವದ ಉದ್ದೇಶವೊಂದು ಅವರ ಸಾಹಿತ್ಯ ಪ್ರಯತ್ನದಲ್ಲಿ' ಅಡಗಿದೆ. ಅದಲ್ಲದೆ ಕೇವಲ ವಾತಾವರಣದ ವಿಲಾಸಕ್ಕಾಗಿಯೇ ಈ ಕಾದಂಬರಿಗಳು ಮೀಸಲಾಗಿದ್ದರೆ ಇತ್ತೀಚಿನ ಕೆಲ ಅಮೇರಿಕನ್' ಕಾದಂಬರಿಗಳಂತೆ ಇವುಗಳ ಬೆಲೆಯೂ ಪರಿಮಿತವಾಗಬಹುದಿತ್ತು. [ಉದಾ: ಬೈಬಲ್ಲಿನ ಕತೆಗಳ ಆಧಾರದ ಮೇಲೆ ರಚಿತವಾದ ಕಾದಂಬರಿಗಳು] ವಾಸ್ತವ ಜಗತ್ತಿನಲ್ಲಿ ಅರ್ಥ ಕಾಣದೆ ಬೇಸರಗೊಂಡು ಗತಜೀವನದ ರಮ್ಯತೆಯ ಕಡೆಗೆ ತಿರುಗಿದ ಮನೋವೃತ್ತಿಯೂ ಈ ಕೃತಿಗಳಲ್ಲಿಲ್ಲ.

ಹಾಗಾದರೆ ಈ ಕೃತಿಗಳನ್ನು ಬರೆಯುವ ಉದ್ದೇಶವಾದರೂ ಏನು ಎಂದು ಪ್ರಶ್ನೆಯೇಳುವುದು ಸಹಜವಾಗಿದೆ. ಈ ಕಾದಂಬರಿಗಳನ್ನು ಬರೆಯುವ ಉದ್ದೇಶ ಬೌದ್ಧಿಕ ಸ್ವರೂಪದ್ದಾಗಿದೆ. ದೇವುಡು ಅವರಿಗೆ ಸಾಹಿತ್ಯ ನಿರ್ಮಾಣ ಕರ್ಮಕಾಂಡದಂತೆಯೇ ಜ್ಞಾನಕಾಂಡವೂ ಆಗಿದೆ. ಮನುಷ್ಯ ಪಡೆದುಕೊಂಡಿರಬಹುದಾದ ಎಲ್ಲ ಬಗೆಯ ಜ್ಞಾನವನ್ನೂ, ಸಾಹಿತ್ಯದ ಸ್ವರೂಪಕ್ಕೆ ಬಾಧೆ ಬರದಂತೆ ಪ್ರಕಟಿಸುವುದು ಎಲ್ಲ ಶಿಷ್ಟ ಸಾಹಿತ್ಯದ ಮುಖ್ಯ ಲಕ್ಷಣವಾಗಿದೆ. ಈ ದೃಷ್ಟಿಯಿಂದ ದೇವುಡು ಅವರ ಕಾದಂಬರಿಗಳು ಕನ್ನಡದಲ್ಲಿಯೇ ವೈಶಿಷ್ಟ್ಯಪೂರ್ಣವಾಗಿವೆ. ಅವರ ಸಾಮಾಜಿಕ ಕಾದಂಬರಿಗಳಲ್ಲಿ ಪ್ರಾಚೀನ ಜ್ಞಾನದೊಡನೆ ಅರ್ವಾಚೀನ ಜ್ಞಾನವೂ ಹಾಸುಹೊಕ್ಕಾಗಿರುವುದನ್ನು ಕಾಣಬಹುದು. ಈ ಮೂರು ಕೃತಿಗಳು ಮಾತ್ರ ಕೇವಲ ಪ್ರಾಚೀನ ಜ್ಞಾನವಷ್ಟನ್ನೇ ಪ್ರಕಟಿಸುತ್ತವೆ. ಆ ಕಾಲದ ಅನೇಕ ರಹಸ್ಯವಿದ್ಯೆಗಳು ಅವುಗಳನ್ನು ಪಡೆಯುವ ಅನುಷ್ಠಾನಗಳ ಕ್ರಮ. ದೇವತೆಗಳ, ಸ್ವರೂಪ ಸಾಧನೆಗಳು, ಆ ಕಾಲದ ಬ್ರಹ್ಮಾಂಡದ ಕಲ್ಪನೆ, ಸೃಷ್ಟಿಕ್ರಮ, ಇವೆಲ್ಲವುಗಳ ಬಗ್ಗೆ ಶಾಸ್ತ್ರೀಯವಾಗಿ ಅಲ್ಲದೆ ಸಾಹಿತ್ಯಿಕವಾಗಿ ಕೂಡ ವಿವರಣೆಗಳು ಈ ಕೃತಿಗಳಲ್ಲಿ ವಿಪುಲವಾಗಿ ದೊರೆಯುತ್ತವೆ. ಈ ಜ್ಞಾನಕ್ಕೆಲ್ಲ ಕಾದಂಬರಿಗಳು ಹಿನ್ನೆಲೆಯನ್ನು, ಸಂದರ್ಭವನ್ನು ಒದಗಿಸುತ್ತವೆ ಅರ್ಷಜಗತ್ತಿನಲ್ಲಿ ದೊರಕಿದ ಸತ್ಯಗಳ ಉಪಬೃಂಹಣದ ಪ್ರಯತ್ನ ಈ ಕೃತಿಗಳಿಗೆ ಪ್ರೇರಣೆಯನ್ನಿತ್ತಿವೆ. ಈ ಪ್ರಯತ್ನ ಭಾರತೀಯ

ಸಾಹಿತ್ಯಕ್ಕೆ ಹೊಸದೇನಲ್ಲ. ನಮ್ಮ ಪುರಾಣಗಳೆಲ್ಲ ವೇದಾರ್ಥದ ಉಪಬೃಂಹಣಗಳೇ ಆಗಿವೆ. ಈ ಉಪಬೃಂಹಣ ಒಮ್ಮೊಮ್ಮೆ ಶಾಸ್ತ್ರೀಯವಾಗಿ ಬರಬಹುದು. ಯಾಜ್ಞವಲ್ಕ್ಯ ಈಶಾವಾಸ್ಯದ ಮಂತ್ರಗಳನ್ನು ಗಾರ್ಗಿಗೆ ವಿವರಿಸುವಾಗ ಭಾಷ್ಯವನ್ನೇ ಬರೆಯುತ್ತಾನೆ. ಒಮ್ಮೊಮ್ಮೆ ಸಾಹಿತ್ಯಕವಾಗಿ ಅಂದರೆ, ರೂಪಕಗಳ ಮುಖಾಂತರವಾಗಿ ಪ್ರಕಟವಾಗಬಹುದು. ತ್ರಿಶಂಕುವಿನ ಸಲುವಾಗಿ ವಿಶ್ವಾಮಿತ್ರ ಮಾಡುವ ಯಾಗ ಇಂಥ ಒಂದು ಭವ್ಯ ರೂಪಕವಾಗಿದೆ. ಪಂಚಭೂತಗಳನ್ನು ಆಕ್ರಮಿಸಿ ನಿಂತ ವೃತ್ರನನ್ನು ಇಂದ್ರ ಸಂಹರಿಸುವ ಸನ್ನಿವೇಶ ಇನ್ನೊಂದು ಅಂಥ ರೂಪಕವಾಗಿದೆ. ಒಟ್ಟಿನಲ್ಲಿ ಈ ಕಾದಂಬರಿಗಳ ಉದ್ದೇಶ ಬೌದ್ಧಿಕ ಸ್ವರೂಪದ್ದಾಗಿದೆ.

ಅದೇ ಕಾರಣಕ್ಕಾಗಿಯೇ ಏನೋ ಈ ಕಾದಂಬರಿಗಳ ತಂತ್ರವಿಧಾನ ಕೂಡ ಬೇರೆ ಬಗೆಯದಾಗಿದೆ. ಈ ಕಾದಂಬರಿಗಳ ಉದ್ದೇಶ್ಯ ಭಾವಾತ್ಮಕ ಪ್ರತಿಕ್ರಿಯೆಯನ್ನು ಉಂಟುಮಾಡುವುದಲ್ಲವಾದ್ದರಿಂದ ಆಧುನಿಕ ಕಾದಂಬರಿಗಳ ವೈಶಿಷ್ಟ್ಯಗಳು ಇಲ್ಲಿ ಕಂಡುಬರುವುದಿಲ್ಲ. ಇವುಗಳ ಬರವಣಿಗೆಯ ರೀತಿ ನಮ್ಮ ಪ್ರಾಚೀನ ಗದ್ಯ ಕಾವ್ಯಗಳನ್ನು ನೆನಪಿಗೆ ತರುವಂಥದಾಗಿದೆ. ಆದ್ದರಿಂದ ಸಂಘರ್ಷವೇ ಜೀವಾಳವಾಗಿರುವ ಇಂದಿನ ಕಾದಂಬರಿಗಳಂತೆ ಈ ಕೃತಿಗಳು ಪರಿಣಾಮವನ್ನು ಬೀರಲಾರವು. ಈ ಭಿನ್ನತೆ ಎಲ್ಲಕ್ಕಿಂತ ಹೆಚ್ಚಾಗಿ ಈ ಕಾದಂಬರಿಗಳ ಪಾತ್ರ ರಚನೆಯಲ್ಲಿ ಕಂಡುಬರುತ್ತದೆ. ತತ್ವಜ್ಞಾನದ ಪರಿಭಾಷೆಯಲ್ಲಿ ಹೇಳಬಹುದಾದರೆ ಈ ಕಾದಂಬರಿಯ ಪಾತ್ರಗಳು ನಾಮ ರೂಪತ್ಮಕವಾದವುಗಳು. (archetypal) ಮೂರ್ತಿ ಶಿಲ್ಪದಲ್ಲಿಯಂತೆ ಒಂದೊಂದು ಪ್ರಮಾಣಬದ್ಧವಾಗಿ ಯಾವುದೇ ವಿಶೇಷ "ಲಕ್ಷಣ"ದಿಂದ ಮಾತ್ರ ರೇಖಿತವಾದವುಗಳು. ಈ ಕಾದಂಬರಿಗಳ ಪಾತ್ರವರ್ಗದಲ್ಲಿ ಹಲವಾರು ಜಾತಿಯ ವ್ಯಕ್ತಿಗಳ ಸಮಾವೇಶವಾಗಿವೆ. ದೇವತೆಗಳು, ಮನುಷ್ಯರು, ಅಪ್ಸರೆಯರು, ಋಷಿಗಳು ಮೊದಲಾದ ಲೌಕಿಕ ಹಾಗೂ ಅಲೌಕಿಕ ಜೀವಿಗಳ ಕರೆ ಇಲ್ಲಿದೆ. ಈ ಜಾತಿಗೆ ಅನುಸಾರವಾಗಿ ಅವುಗಳ ಸ್ವಭಾವ ಬದಲಾಗುತ್ತದೆಯೇ ಹೊರತು ಅದು ವ್ಯಕ್ತಿವ್ಯಕ್ತಿಗಳ ನಡುವಿನ ಭಿನ್ನತೆ ಇಲ್ಲ. ವ್ಯಕ್ತಿತ್ವದ ಕೇಂದ್ರ ಬಿಂದುವಿನ ಸುತ್ತ ಮೂರ್ತಿಗೊಂಡ ಜೀವಿಗಳು ಕೇಂದ್ರ ಬಿಂದುವಿನ ಸುತ್ತ ಮೂರ್ತಿಗೊಂಡ ಜೀವಿಗಳು ಇಲ್ಲಿ ಬಹಳ ಕಡಿಮೆಯೆನ್ನಬಹುದು. ಅಂದರೆ ಮನೋವೈಜ್ಞಾನಿಕ ಅರ್ಥದಲ್ಲಿ ಈ ವ್ಯಕ್ತಿಗಳಿಗೆ ಅಹಂಪ್ರಜ್ಞೆಯಿಂದೊಡಗೂಡಿದ ರಹಸ್ಯಮಯವಾದ ವ್ಯಕ್ತಿತ್ವವೆಂಬುದಿಲ್ಲ. ದೇವತೆಗಳು ಪರೋಕ್ಷಪ್ರಿಯರು; ಮನುಷ್ಯರು ಸ್ವರ್ಗಕಾಮರು; ಮನುಷ್ಯರಿಗಿಂತ ದೇವತೆಗಳಾನಂದಾನುಭವ ಶಕ್ತಿ ಹೆಚ್ಚಿನದು; ದೇವತೆಗಳನ್ನು ಕರೆಯುವುದು ಎಷ್ಟು ಸುಲಭವೋ ಋಷಿಗಳನ್ನು ಕರೆಯುವುದು ಅಷ್ಟು ಸುಲಭವಲ್ಲ ಎಂಬಂಥ ಹೇಳಿಕೆಗಳು ಮತ್ತೆ ಮತ್ತೆ ಬಂದು ಈ ಭಿನ್ನತೆ ಎಂಥವೆಂಬುದನ್ನು ಸೂಚಿಸುತ್ತವೆ. ಉದಾಹರಣೆಗೆಂದು "ಮಹಾಬ್ರಾಹ್ಮಣಕ್ಕೆ ಪ್ರಾರಂಭಕ್ಕೆ ಬರುವ ವಸಿಷ್ಠ ವಿಶ್ವಾಮಿತ್ರರ ಸಂಘರ್ಷವನ್ನೇ ನೋಡಬಹುದು. ಈ ಸಂಘರ್ಷಕ್ಕೆ ಕಾರಣ ಈ ಇಬ್ಬರು ವ್ಯಕ್ತಿಗಳಲ್ಲಿಯ ಸ್ವಭಾವ ಭೇದವಲ್ಲ, ಅವರ ಜಾತಿಭೇದ, ವಿಶ್ವಾಮಿತ್ರ ಇನ್ನೂ ರಾಜಾಕೌಶಿಕ, ಕ್ಷತ್ರಿಯ; ವಸಿಷ್ಠರು ಜೀವನ್ಮುಕ್ತರಾದ ಋಷಿ. ಏನಾದರೂ ಮಾಡಿ ವಸಿಷ್ಠರ ಹೋಮಧೇನುವಾದ ನಂದಿನಿಯನ್ನು ಅಪಹರಿಸಬೇಕೆಂಬ ಯೋಚನೆ ವಿಶ್ವಾಮಿತ್ರನದು. ವಸಿಷ್ಠರು ಎಲ್ಲ ತಿಳಿದೂ ಧೀರಚಿತ್ತರಾಗಿದ್ದಾರೆ. ಶೃತಿಪ್ರಮಾಣದಂತೆ ಅಚಲರಾಗಿದ್ದಾರೆ. ಇಬ್ಬರ ನಡುವೆ ನಡೆಯುವ ವಾದ ಅವರವರ ಜಾತಿಗೆ ತಕ್ಕದಾಗಿದೆ. ವಿಶ್ವಾಮಿತ್ರನ ಕ್ಷಾತ್ರತಾಮಸದಿಂದ ವಾದ ಬಿರುಸಾಗಿ ಪ್ರಸಂಗ ಕಾವೇರುತ್ತದೆ. ಆದರೆ ಇದೆಲ್ಲ ದೈವ ಹಾಗೂ

ಕಾಲದ ಪ್ರಭಾವವೆಂಬುದು ಇಬ್ಬರಿಗೂ ಚೆನ್ನಾಗಿ ಗೊತ್ತು. ಅಂತಲೇ ನುರಿತ ಬಿಲ್ಲುಗಾರ ತನ್ನ ಬಾಣಗಳನ್ನು ಅರಿತು ಪ್ರಯೋಗಿಸುವಂತೆ ಇಬ್ಬರೂ ತಮ್ಮ ತಮ್ಮ ಭಾವನೆಗಳನ್ನು ಅರಿತು ಪ್ರಕಟಿಸುತ್ತಾರೆ. ಭಾವೋದ್ವೇಗದ ಸೆಳವಿನಲ್ಲಿ ಕೊಚ್ಚಿಕೊಂಡು ಹೋಗುವುದಿಲ್ಲ. ಯಾಕೆಂದರೇ ಇಬ್ಬರಿಗೂ ಮನಸ್ಸೆಂಬುದೇ ಕೊನೆಯ ಮಾತಲ್ಲ. ಅದನ್ನು ಮೀರಿದ ಬೇರೆ ಶಕ್ತಿ ಪ್ರಭಾವಗಳಿವೆಯೆಂಬುದನ್ನು ಒಬ್ಬರು ಅಪ್ರತ್ಯಕ್ಷವಾಗಿ ಇನ್ನೊಬ್ಬರು ಪ್ರತ್ಯಕ್ಷವಾಗಿ ಬಲ್ಲರು. ವಿಶ್ವಾಮಿತ್ರ ಮೊದಲಿನ ವರ್ಗಕ್ಕೆ ಸೇರಿದವನಾಗಿದ್ದು ಆ ವರ್ಗದ ಎಲ್ಲ ಗುಣಗಳನ್ನೂ ಒಳಗೊಂಡಿದ್ದಾನೆ. ವಸಿಷ್ಟರನ್ನು ಸೋಲಿಸಬೇಕೆಂಬ ಹಟ ಅವನ ವೈಯುಕ್ತಿಕ, ಹಟದಂತೆ ಕಂಡರೂ ಒಳಗೊಳಗೆ ಅದು ಜಾತ್ಯಂತರದ ಅದಮ್ಯವಾದ ಆಸೆಯಾಗಿದೆ. ಅಂತಲೇ ಅವನ ಅಹಂಪ್ರಜ್ಞೆ ಅವನ ಸಾಹಸಕ್ಕೆ ವಿಘ್ನವಾಗಿ ಬರುತ್ತದೆ. `ವಸಿಷ್ಠರನ್ನು ದ್ವೇಷಿಸು, ಆದರೆ ತಿರಸ್ಕರಿಸಬೇಡ ಎಂದು ವಾಮದೇವನ ಸೂಚನೆ ಅವನ ಸಾಹಸಕ್ಕೆ ಪ್ರಚೋದನೆಯನ್ನು ಕೊಡುತ್ತದೆ. ಮುಂದಿನ ಅವನ ಸಿದ್ಧಿಸಾಧನಗಳೆಲ್ಲ ವ್ಯಕ್ತಿ ನಿರಪೇಕ್ಷವಾದವುಗಳು.

ಈ ಕಾದಂಬರಿಯಲ್ಲಿಯ ವ್ಯಕ್ತಿಗಳ ಸುಖಃದುಖಃಗಳ ಬಗ್ಗೆ ವಿಚಾರ ಮಾಡಿದಾಗಲೂ ಇಂಥದೇ ಅನುಭವ ಓದುಗನಿಗಾಗುತ್ತದೆ. ಸುಖದುಃಖಗಳು ಮನುಷ್ಯನ ಕರ್ಮಗಳ ಫಲಸ್ವರೂಪವಾಗಿ ದೊರೆಯುವವೆಂಬ ಜ್ಞಾನ ಈ ವ್ಯಕ್ತಿಗಳಿಗಿದೆ. ಆದ್ದರಿಂದ ಆ ಸುಖದುಃಖಗಳನ್ನು ತಮಗೆ ಬೇಕಾದಾಗ ಬೇಕಾದಂತೆ ಉಪಯೋಗಿಸುವ ಸಾಮರ್ಥ್ಯ ಇವುಗಳಿಗಿದೆ. ನಿಯತಿಧರ್ಮಕ್ಕೆ ಭಂಗ ಬರದಂತೆ ನೋಡಿಕೊಳ್ಳುವದೇ ಅವುಗಳ ಕರ್ತವ್ಯವಾಗಿದೆ. ಕಲಿಯ ಧರ್ಮವನ್ನು ನಿಯತಗೊಳಿಸಲೆಂದು ವಸಿಷ್ಠರು ಪುತ್ರಶೋಕವನ್ನು ಸ್ವೀಕರಿಸುತ್ತಾರೆ. ಆದರೆ ಕೇವಲ ಸಂಕಲ್ಪಮಾತ್ರದಿಂದಲೇ ಈ ಶೋಕ ಹುಟ್ಟುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಕಾಲದೇಶಗಳ ಕ್ಷೇತ್ರದಲ್ಲಿ ಕರ್ಮಬೀಜ ಮೊಳಕೆಗೊಂಡು, ಗಿಡವಾಗಿ ಅದರ ಫಲವಾಗಿ ಆ ಶೋಕ ಬರಬೇಕು. ವಸಿಷ್ಠರ ಈ ಸಂಕಲ್ಪ ಕಾದಂಬರಿಯಲ್ಲಿಯ ಅನೇಕ ಸನ್ನಿವೇಶಗಳಿಗೆ ಕಾರಣವಾಗುತ್ತದೆ. ತ್ರಿಶಂಕುವಿನ ಯಾಗ ಭಂಗ ವಸಿಷ್ಠರನ್ನಾಗಲಿ ವಾಸಿಷ್ಠರನ್ನಾಗಲಿ ಕರೆಯಬೇಕೆಂಬ ವಿಶ್ವಾಮಿತ್ರನ ಹಟ. ಅದರಿಂದ ವಸಿಷ್ಠ ಪುತ್ರರ ಮರಣ, ವಸಿಷ್ಠರ ಅಸಹನೀಯವಾದ ಶೋಕ, ವಿಶ್ವಾಮಿತ್ರನ ಪ್ರಾರ್ಥನೆಯ ಫಲವಾಗಿ ಸರಸ್ವತೀ ಪ್ರವಾಹ ಆ ಶೋಕವನ್ನು ಕೊಚ್ಚಿಕೊಂಡು ಹೋಗುವುದು, ವಿಶ್ವಾಮಿತ್ರ ಅವರ ಅರ್ಧಶೋಕವನ್ನು ತೆಗೆದುಕೊಳ್ಳುವುದು, ಘೃತಾಚಿಯೊಡನೆ ಅವನ ಸಂಸಾರ ಶುನಶ್ಯೇಫನ ಪ್ರಸಂಗ ಅದರ ಫಲವಾಗಿ ತನ್ನ ಐವತ್ತು ಮಕ್ಕಳನ್ನು ಅವನು ಕಳೆದುಕೊಳ್ಳಬೇಕಾಗಿ ಬಂದದ್ದು, ಈ ಘಟನೆಗಳೆಲ್ಲ ದೈವ ಸಂಯೋಜಿತವಾದಂತೆ ನಡೆದು ಜೀವಿತದ ಋಣವನ್ನು ಮುಟ್ಟಿಸುತ್ತದೆ. ಅವುಗಳಲ್ಲಿ ಭಾಗವಹಿಸಿದ ವ್ಯಕ್ತಿಗಳಿಗೆ ಅವುಗಳಿಂದ ಬಿಡುಗಡೆ ದೊರಕುತ್ತದೆ. ದೇವತೆಗಳು ನಡೆಸುವ ಆಟದಲ್ಲಿ ಪಾತ್ರಧಾರಿಗಳಾಗಿಯೂ ಕೂಡ ಈ ವ್ಯಕ್ತಿಗಳಿಗೆ ಆತ್ಮ ಸ್ವಾತಂತ್ರ್ಯವಿದೆ.

ವಿಶ್ವಾಮಿತ್ರ ಮೇನಕೆಯರ ಪ್ರಸಂಗವೂ ಇದೇ ರೀತಿಯ ಇನ್ನೊಂದು ಸನ್ನಿವೇಶವಾಗಿದೆ. ವಿಶ್ವಾಮಿತ್ರ ಭೋಗದಿಂದ ಆಕರ್ಷಿತನಾಗಿ ಅಸಂಯಮದಿಂದ ವರ್ತಿಸುವುದಿಲ್ಲ. ಮೇನಕೆಯ ಹಾವಾಭಾವಗಳಲ್ಲಿ ಅವನಿಗೆ ದೇವತೆಗಳ ಸಂಕೇತ ಕಾಣುತ್ತದೆ. `ಸ್ವರ್ಗವೇ ನಿನ್ನ ಬಳಿಗೆ ಬಂದರೆ' ಇಂದ್ರನ ಮಾತು ನೆನಪಾಗುತ್ತದೆ. ಆದ್ದರಿಂದ ಮೇನಕೆಯನ್ನು ಒಪ್ಪಿಕೊಳ್ಳುತ್ತಾನೆ. ಮೇನಕೆ ಮಾನವ ಸ್ತ್ರೀಯಂತೆ

ಸಂಸಾರ ಹೂಡಿದರೂ ತನ್ನ ದೇವತ್ವವನ್ನು ಮರೆಯುವುದಿಲ್ಲ. ವಿಶ್ವಾಮಿತ್ರನಿಗೆ ದೊರೆಯುವ ಈ ಭೋಗ ಅವನ ತಪಸ್ಸಿನ ಸಿದ್ಧಿ, ದೇವತೆಗಳ ಅನುಗ್ರಹ; ಅಲ್ಲದೆ ಮುಂದೆ ನಡೆಯಬೇಕಾದ ಇನ್ನೊಂದು ಸನ್ನಿವೇಶಕ್ಕೆ ಪೀಠಿಕೆಯೂ ಆಗಿದೆ. ಈ ಭೋಗ ತನ್ನ ಚರಮಾವಸ್ಥೆಯನ್ನು ಮುಟ್ಟಿದಾಗ ವಿಶ್ವಾಮಿತ್ರನ ಕ್ಷಾತ್ರಕ್ಕೆ ಕೊನೆಯಾಗುತ್ತದೆ. ಅವನ ಕ್ಷಾತ್ರ ಬೀಜದಿಂದ ಹುಟ್ಟಿದ ಮಗಳು ಕಣ್ವರಂಥ ತ್ರಿಕಾಲದರ್ಶಿಗಳ ಆಶ್ರಮದಲ್ಲಿ ಬೆಳೆದು ದುಷ್ಯಂತನಂಥ ಇನ್ನೊಬ್ಬ ಕ್ಷತ್ರಿಯನನ್ನು ಮದುವೆಯಾಗಿ ದೇವಮಾನವರ ಹಿತಸಂಬಂಧವನ್ನು ಕಲ್ಪಿಸಲು ಹಾದಿಯಾಗುತ್ತದೆ. ಹೀಗೆ ಯಾವ ಸನ್ನಿವೇಶದಲ್ಲಿಯೂ ಇಲ್ಲಿಯ ವ್ಯಕ್ತಿಗಳು ತಮ್ಮ ಜಾತಿಧರ್ಮವನ್ನು ಪ್ರಕಟಿಸುತ್ತ ಆನುಷಂಗಿಕವೆನ್ನಬಹುದಾದ ಸ್ವಭಾವ ಅವುಗಳ ಮೂಲಸ್ವರೂಪವನ್ನೇ ಮತ್ತೆ ಮತ್ತೆ ಎದ್ದು ಕಾಣುವಂತೆ ಮಾಡುತ್ತದೆ. ವಿಶ್ವಾಮಿತ್ರ ಬ್ರಹ್ಮರ್ಷಿಯಾಗುವುದು ನಹುಷ ಇಂದ್ರನಾಗುವುದು ಇವೆಲ್ಲ ಜಾತ್ಯಂತರದ ಪಲ್ಲಟವಾಗುತ್ತದೆಂದೇ ಅವರ ಸುತ್ತ ಪುರಾಣರಚನೆಯಾಗಬೇಕಾಯಿತು.

ಅಂದರೆ ಈ ಪಾತ್ರಗಳಿಗೆ ಬೆಳವಣಿಗೆಯೇ ಇಲ್ಲವೆಂದು ಅರ್ಥವಲ್ಲ. ಈ ಕೃತಿಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಬದುಕಿನ ಸಾರ್ಥಕತೆ ಅವರು ಪಡೆಯುವ ಜ್ಞಾನದಲ್ಲಿದೆ. ಈ ಜ್ಞಾನವೆಂಬದು ಒಂದು ಅಮೂರ್ತವಾದ ತಿಳಿವಳಿಕೆಯಾಗಿರದೆ ಆ ವ್ಯಕ್ತಿಯ ಜೀವನಾನುಭವವಾಗಿ ಬರುತ್ತದೆ. ಅವನಿಗೆ ದೊರೆಯುವ ಸಿದ್ಧಿಗಳೆಲ್ಲ ಈ ಜ್ಞಾನದ ವಿವಿಧ ಮುಖಗಳಾಗಿ ಬರುತ್ತವೆ. ಕೌಶಿಕ ವಿಶ್ವಾಮಿತ್ರನಾಗಿ ಬ್ರಹ್ಮರ್ಷಿಯಾಗುವವರೆಗೂ ಈ ಅನುಭವವನ್ನು ಪಡೆಯುತ್ತಲೇ ಹೋಗುತ್ತಾನೆ. ಯಜ್ಞವಲ್ಕ್ಯನಿಗೆ ಅದು ಅನೇಕ ಉಪಾಸನೆ ಹಾಗೂ ದರ್ಶನಗಳ ಮೂಲಕ ಬರುತ್ತದೆ. ಇಷ್ಟೇ ಅಲ್ಲದೆ ಓದುಗನಿಗೆ ಆ ಅನುಭವ ಮನದಟ್ಟಾಗುವಂತೆ ಬರವಣಿಗೆಯ ರೀತಿ ಪರಿಣಾಮಕಾರಿಯಾಗಿದೆ. ಎಲ್ಲಕ್ಕಿಂತ ಹೆಚ್ಚು ಅದ್ಭುತವಾದದ್ದು `ಮಹಾಕ್ಷತ್ರಿಯ'ದ ನಹುಷ ಪಡೆಯುವ ಅನುಭವ. ಈ ಅನುಭವದ ನಿರ್ಮಾಣ ಕಾರ್ಯದಲ್ಲಿ ದೇವುಡು ಅವರು ತಿಳಿವಳಿಕೆಯ ಜೊತೆಗೇ ಕಲ್ಪನೆಯನ್ನೂ ಉಪಯೋಗಿಸಿದ್ದಾರೆ. ಆದ್ದರಿಂದ ದೇವುಡು ಅವರು ನಹುಷನ ಪಾತ್ರಯೋಜನೆಯಲ್ಲಿ ಮಾಡಿದ ತೀವ್ರವಾದ ಬದಲಾವಣೆ ಸಾರ್ಥಕವೆಂದೆನಿಸುತ್ತದೆ. ಇಲ್ಲಿಯ ನಹುಷ ಮಹಾಭಾರತದಲ್ಲಿಯ ತನ್ನ ಮೂಲ ಪಾತ್ರದಂತೆ ಅಹಂಕಾರಿಯಾಗುವುದಿಲ್ಲ. ತನಗೆ ದೊರೆತಿರುವ ಇಂದ್ರಪದವಿ ಶಾಶ್ವತವಲ್ಲವೆಂಬುದನ್ನು ಅವನು ಬಲ್ಲ. ಅಲ್ಲದೆ ಇವನು ಕಾಮಾಂಧನೂ ಅಲ್ಲ. ಒಂದು ನಿಯಮವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲಕ್ಕೆ ಕಟ್ಟುಬಿದ್ದು ಶಚಿಯನ್ನು ಕಾಣಬೇಕೆಂದು ಬಯಸಿದನೇ ಹೊರತು ಭೋಗದ ಅಭಿಲಾಷೆಯಿಂದಲ್ಲ. ಶಚಿ ಇಂದ್ರಾಣಿಯೋ ಅಥವಾ ಇಂದ್ರಪತ್ನಿಯೋ ಎಂಬ ವಾದ ನಡೆದು ದೇವಸಭೆ ನಿರ್ಣಯಕ್ಕೆ ಬಂದಮೇಲೆ ಕೂಡ ಅವನು ಮೋಹವಶನಾಗುವುದಿಲ್ಲ. ದೇವುಡು ಅವರು ಇಲ್ಲಿ ನಹುಷನ ನೈತಿಕತೆಯನ್ನು ಮೆರೆಸುವ ವಿಚಾರದಲ್ಲಿ ತೊಡಗಿದ್ದಾರೆಂದಲ್ಲ. ನಹುಷನ ಮುಂದಿರುವ ಪ್ರಶ್ನೆ ವೈಯಕ್ತಿಕ ನೀತಿಗೆ ಸಂಬಂಧಪಟ್ಟದ್ದಾಗಿರದೆ ದೇವಮಾನವರ ಸಂಬಂಧದ ಪ್ರಶ್ನೆಯಾಗಿದೆ. ಇಲ್ಲಿ ದೇವುಡು ಅವರು ಕತೆಯನ್ನು ಸಂಕೇತ ನಿಷ್ಠವಾಗುವಂತೆ ಮಾಡಿದ್ದಾರೆ. ವೃತ್ರ ಇಂದ್ರನಾದಾಗ ಹೇಗೆ ತನ್ನ ಅಸುರ ಸ್ವಭಾವದ ಪ್ರಕಾರ ನಡೆದುಕೊಳ್ಳುತ್ತಾನೋ ಹಾಗೆ ನಹುಷ ತನ್ನ ಮನುಷ್ಯಧರ್ಮದ ಪ್ರಕಾರ ನಡೆದುಕೊಳ್ಳುತ್ತಾನೆ. ಮಹಾಭಾರತದಲ್ಲಿಯ ನಹುಷ ಸಪ್ತರ್ಷಿಗಳು ಹೊತ್ತಿರುವ ಪಲ್ಲಕ್ಕಿಯಲ್ಲಿ ಕುಳಿತುಕೊಂಡಾಗ ಅಸಹನೆಯಿಂದ ಅವರಿಗೆ ಅಪಮಾನ ಮಾಡಿ ಸರ್ಪ

ವಾಗಿ ಹೋಗೆಂಬ ಅವರ ಶಾಪಕ್ಕೆ ಗುರಿಯಾಗುತ್ತಾನೆ. ಈ ಪ್ರಸಂಗ ನಹುಷನ ಮನುಷ್ಯತ್ವದ ಇನ್ನೊಂದು ರೂಪವಾಗಿ ಬಂದು ತನ್ನಷ್ಟಕ್ಕೆ ತಾನೇ ಅರ್ಥಪೂರ್ಣವಾಗಿದೆ. ಕಾದಂಬರಿಯಲ್ಲಿಯ ನಹುಷ ಪಲ್ಲಕ್ಕಿಯಲ್ಲಿ ಕುಳಿತುಕೊಂಡು ನಿಯತಿಯ ಪೂರ್ವಾಸೂಚನೆಯ ಮೇರೆಗೆ ತನಗೆ ತಾನೇ ನಿರ್ವಿಕಲ್ಪ ಸಮಾಧಿಯಿಂದ ವಿಚಲಿತನಾಗುತ್ತಾನೆ. ಹಾಗೆ ಯೋಗಭ್ರಷ್ಟನಾದುದಕ್ಕೆ ಅಜಗರವಾಗಿ ಹುಟ್ಟಬೇಕೆಂದು ತನಗೆ ತಾನೇ ಶಿಕ್ಷೆಯನ್ನು ವಿಧಿಸಿಕೊಳ್ಳುತ್ತಾನೆ. ತನ್ನ ಮೋಕ್ಷಕ್ಕೆ ತಾನೇ ದಾರಿಯನ್ನು ಕಂಡುಕೊಳ್ಳುತ್ತಾನೆ. ಅವನು ಇಂದ್ರನಾಗಿದ್ದಾಗ ಯಮ, ವರುಣ, ಇಂದ್ರರು ತಮ್ಮಲ್ಲಿದ್ದ ಬ್ರಹ್ಮವಿದ್ಯೆಯನ್ನೆಲ್ಲ ಕೊಟ್ಟಿದ್ದಾರೆ. ಒಂದು ದೃಷ್ಟಿಯಿಂದ ಇಂದ್ರ ಮೊದಲಾದ ದೇವತೆಗಳು ಅವನಿಂದ ಅನುಗ್ರಾಹ್ಯರೇ ಹೊರತು ಅವರಿಗೆ ಅನುಗ್ರಾಹಕರಲ್ಲ. ಆದರೆ ಅವನು ಮಾತ್ರ ಅನುಗ್ರಾಹ್ಯನಂತೆ ನಡೆದುಕೊಂಡು ತನ್ನ ಮನುಷ್ಯತ್ವವನ್ನು ಮೆರೆಯುತ್ತಾನೆ. ದೇವುಡು ಅವರ ಬದಲಾದ ಈ ಪಾತ್ರ ಮಹಾಭಾರತದ ನಹುಷನನ್ನು ಉದಾತ್ತನನ್ನಾಗಿ ಮಾಡಿ ಮೂಲ ಕಾವ್ಯದಲ್ಲಿಯ ದೋಷಗಳನ್ನು ತಿದ್ದುವುದರ ಉದ್ದೇಶದಿಂದ ಮೂಡಿ ಬಂದದ್ದಲ್ಲ. ಮೂಲಕಾವ್ಯದ ಉದ್ದೇಶಕ್ಕಿಂತ ಕಾದಂಬರಿಯ ಉದ್ದೇಶ ಭಿನ್ನವಾಗಿರುವುದರಿಂದ ಈ ಬದಲಾವಣೆ ಅವಶ್ಯವಾಯಿತು.

ದೇವುಡು ಅವರ ಪಾತ್ರನಿರ್ಮಾಣದ ಪದ್ಧತಿಯನ್ನು ಹಾಗೂ ಅವುಗಳಲ್ಲಾದ ಬದಲಾವಣೆಯನ್ನು ನೋಡಿದಾಗ ಕೆಲವೊಂದು ಮಾತುಗಳನ್ನು ಇಲ್ಲಿ ಹೇಳಬಹುದೆಂದು ತೋರುತ್ತದೆ. ಯಾವುದೇ ಸಾಹಿತ್ಯದಲ್ಲಿಯೇ ಆಗಲಿ ಒಂದು ಕೃತಿಯಲ್ಲಿಯ ಪಾತ್ರಸೃಷ್ಟಿ ಸೋದ್ದಿಶ್ಯವಾಗಿರುತ್ತದಲ್ಲದೆ ಅದು ಕೇವಲ ಮನುಷ್ಯನ ಆಚಾರ ವಿಚಾರಗಳ ವಾಸ್ತವತೆಗೆ ಮಾತ್ರ ಪರಿಮಿತವಾಗಿರದೆ ಒಂದು ಆಳವಾದ ತಾತ್ವಿಕ ನಂಬಿಕೆಯನ್ನು ಆಧಾರವಾಗಿಟ್ಟುಕೊಂಡಿರುತ್ತದೆ. ಗ್ರೀಕ್ ನಾಟಕಗಳಲ್ಲಿಯ ಪಾತ್ರವರ್ಗ ಗ್ರೀಕ್ ಜನಾಂಗವೇ ನಂಬಿಕೊಂಡಿದ್ದ ದೈವದ ದುರ್ವಿಲಾಸವನ್ನು ಪ್ರಕಟಿಸಲು ಉದ್ದೇಶಪೂರ್ವಕವಾಗಿಯೇ ರಚಿತವಾದದ್ದು. ಸೊಪೊಕ್ಲೀಸನ ಈಡಿಪಸ್ ಮಾನವ ಜಾತಿಯ ಪ್ರತಿನಿಧಿಯಾಗಿ ಅಮಾನುಷವೆನ್ನಬಹುದಾದ ರೀತಿಯಲ್ಲಿ ದೈವದ ದಾರುಣವನ್ನು ಅನುಭವಿಸುತ್ತಾನೆ. ಆದರೆ ಅವನು ಒಬ್ಬ ವ್ಯಕ್ತಿಯ ವಾಸ್ತವ ಚಿತ್ರವಲ್ಲ ಎಂಬ ಮಾತು ಸ್ಪಷ್ಟವಾಗಿದೆ. ಪಾಶ್ಚಾತ್ಯ ಸಾಹಿತ್ಯದಲ್ಲಿ ವ್ಯಕ್ತಿನಿಷ್ಠತೆಗೆ ಮಹತ್ವ ಬಂದದ್ದು ರೊಮ್ಯಾಂಟಿಕ್ ಸಂಪ್ರದಾಯ ಪ್ರಬಲವಾದ ಮೇಲೆ. ಅಂತಲೇ ರೊಮ್ಯಾಂಟಿಕ್ ಸಂಪ್ರದಾಯದ ಪಾತ್ರ ನಿರ್ಮಾಣದಲ್ಲಿ ಕೂಡ ವ್ಯಕ್ತಿನಿಷ್ಠತೆ ಬಂದುಬಿಟ್ಟಿತು. ಯೂರೋಪಿನ ತೀರ ಅತ್ಯಾಧುನಿಕವಾದ ಸಾಹಿತ್ಯ ತ್ತಿನ್ನೂ ವ್ಯಕ್ತಿವಾದ ಹಾಗೂ ಮಾನವತಾವಾದಗಳ ಪ್ರಭಾವದಿಂದ ಬಿಡುಗಡೆಯನ್ನು ಪಡೆದಿಲ್ಲ. ಕನ್ನಡದಲ್ಲಿಯೂ ಆ ಗಾಳಿ ಬೀಸಿದ್ದು ಇನ್ನೂ ಬೀಸುತ್ತಲೇ ಇದೆ. ಅದೇನೆ ಇದ್ದರೂ ದೇವುಡು ಅವರ ಕಾದಂಬರಿಗಳು ಮಾತ್ರ ಆ ಪ್ರಭಾವದಿಂದ ಮುಕ್ತವಾಗಿವೆ.

ದೇವುಡು ಅವರ ಈ ಕೃತಿಗಳ ಜಾತಿ ಈ ಮೊದಲೇ ಸೂಚಿಸಿರುವಂತೆ ನಮ್ಮ ಪ್ರಾಚೀನ ಕಾವ್ಯಗಳ ಮಾದರಿಯದು. ಅಭಿವ್ಯಕ್ತಿಯ ರೀತಿಯಲ್ಲಿ ಹೊಸತನವಿದೆಯೇ ಹೊರತು ತಿರುಳಿನಲ್ಲಿಲ್ಲ. ಈ ಕಾದಂಬರಿಗಳಲ್ಲಿ ಹೊಸದಾಗಿ ಕಲ್ಪಿಸಿದ ಪಾತ್ರಗಳು ಬೇಕಾದಷ್ಟಿವೆ. ನಹುಷನ ಹೆಂಡತಿಯಾದ ವಿರಜಾದೇವಿ ಯಾಜ್ಞವಲ್ಕ್ಯನ ತಾಯಿಯಾದ ಆಲಂಬಿ ಮೊದಲಾದವು ಪ್ರಮುಖವಾದ ನೂತನ ಪಾತ್ರಗಳು. ಇದಲ್ಲದೆ ಮೂಲದಲ್ಲಿಯ ಪಾತ್ರಗಳಲ್ಲಿ ಕೆಲವು ಬದಲಾವಣೆಯನ್ನು ಪಡೆದಿವೆ. ಮೇಲೆ

ಹೇಳಿರುಥಂತೆ ನಹುಷನ ಪಾತ್ರ ಇದಕ್ಕೆ ಉದಾಹರಣೆಯಾಗಿದೆ. ಆದರೆ ಎಲ್ಲಿಯೂ ಆಧುನಿಕವೆನ್ನ ಬಹುದಾದ ವಿಚಾರಸರಣಿ ಅವುಗಳ ಮೇಲೆ ಪ್ರಭಾವವನ್ನು ಕೆಡವಿಲ್ಲ. ನಹುಷನ ಪಾತ್ರದಲ್ಲಾದ ಪರಿವರ್ತನೆಗೆ ಕಾರಣ ಕಾದಂಬರಿಯ ಬೌದ್ಧಿಕ ದೃಷ್ಟಿಕೋನವೇ ಹೊರತು ಭಾವನಾವಶತೆಯಲ್ಲ. ಮಾನವತಾವಾದದ ಪರಿಣಾಮ ಹೊಸದಾಗಿ ತೇಲಿಬಂದಿರುವ ಉದಾತ್ತೀಕರಣದ ಕುತ್ತವಿಲ್ಲ. ಉಳಿದ ಕಾದಂಬರಿಗಳಲ್ಲಿಯಂತೆ ಪಾತ್ರಗಳ ಭಾವನೆಗಳು ಇಲ್ಲಿ ಸಂವಿಧಾನವನ್ನು ಕೂಡಿಸಿ ಹಳೆಯ ಪಾತ್ರಗಳನ್ನು ಪುನರುಜ್ಜೀವಿಸಿ ಈ ಕ್ರಮದ ಮೂಲಕವಾಗಿಯೇ ಪ್ರಾಚೀನ ಅರ್ಥಪೂರ್ಣತೆಯನ್ನು ಹೊಸದಾಗಿ ಹುಟ್ಟಿಸುವುದಾಗಿದೆ. ಇದಕ್ಕಾಗಿ ತೀವ್ರವಾದ ಕಲ್ಪನಾ ಶಕ್ತಿಯ ಜೊತೆಗೆ ಲೇಖನದಲ್ಲಿ ಶ್ರದ್ಧೆಯೂ ಅಷ್ಟೇ ಅವಶ್ಯವಾಗಿದೆ. ದೇವುಡು ಅವರಲ್ಲಿ ಇವೆರಡೂ ಸಮೃದ್ಧವಾಗಿರುವುದರಿಂದ ಅವರ ಸಾಹಿತ್ಯ ಮಾನವತಾ ವಾದದ ಭಾವುಕ ಸಾಹಿತ್ಯವಾಗದೆ ಅಭಿಜಾತ ಸಾಹಿತ್ಯವಾಗಿ ಬಂದಿದೆ.

ಹಾಗೆಂದು ಈ ಕೃತಿಗಳಲ್ಲಿ ಭಾವನಾವಶತೆ ಅದು ದೋಷವಾಗುವ ಮಟ್ಟಿಗೆ ಇಲ್ಲವೆಂದೇನೂ ಇಲ್ಲ. ಮಹಾ ಬ್ರಾಹ್ಮಣ ಹಾಗೂ ಮಹಾಕ್ಷತ್ರಿಯಗಳಲ್ಲಿ ಅದು ಕಡಿಮೆ ಪ್ರಮಾಣದಲ್ಲಿದ್ದು ಮಹಾ ದರ್ಶನದಲ್ಲಿ ಹೆಚ್ಚಾಗಿದೆ. ಮಹಾಬ್ರಾಹ್ಮಣದಲ್ಲಿ ಅರುಂಧತಿ ನಂದಿನಿಯರ ಸ್ನೇಹಾಲಾಪದಲ್ಲಿ ಭಾವನಾವಶತೆಯ ಬಣ್ಣವನ್ನು ಕಾಣಬಹುದು. ಮಹಾಕ್ಷತ್ರಿಯದಲ್ಲಿ ಇಂದ್ರ ನಹುಷರ ಮಾತುಕತೆಗಳಲ್ಲಿ ಭಾವನಾವಶತೆ ಕಾಣುತ್ತದೆ. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಮಹಾದರ್ಶನದಲ್ಲಿ ಅಂತಃಕರಣದ ದುರ್ಬಲತೆ ತಾನೇ ತಾನಾಗಿ ಯಾಜ್ಞವಲ್ಕ್ಯ ಆಲಂಬಿಯವರ ವಾತ್ಸಲ್ಯದ ಸಂಬಂಧ ಅತಿಶಯೋಕ್ತಿಯ ಭಾರದಿಂದ ಬಳಲುತ್ತದಲ್ಲದೆ ಅದಕ್ಕೆ ವಾಸ್ತವ ಅನುಭವ ಆಧಾರ ದೊರೆಯುವುದಿಲ್ಲ. ಕಾತ್ಯಾಯಿನಿ ಮೈತ್ರೇಯಿಯರ ಸ್ನೇಹ, ಬುಡಿಲರ ವಿಶ್ವಾಸ, ವಿದಗ್ಧ ಶಾಕಲ್ಯರು ಸತ್ತು ಹೋದಾಗ ಗಾರ್ಗಿಯ ಗೋಳಾಟ ಇಂಥಲ್ಲೆಲ್ಲ ಭಾವದ ಚಿತ್ರಣ ತೂಕ ತಪ್ಪಿದಂತೆ ಕಾಣುತ್ತದೆ. ಉದಾಹರಣೆಗೆಂದು ಒಂದು ಸನ್ನಿವೇಶವನ್ನು ಇಲ್ಲಿ ನೋಡಬಹುದು. ಬೃಹದಾರಣ್ಯಕೋಪನಿಷತ್ತಿನಲ್ಲಿ ಗಾರ್ಗಿ ಯಾಜ್ಞವಲ್ಕ್ಯನನ್ನು ಸೋಲಿಸಲೆಂದೇ ಒಂದರ ಮೇಲೊಂದು ಪ್ರಶ್ನೆಗಳನ್ನು ಕೇಳಿ ತರ್ಕದ ಸಾಮಾನ್ಯ ಜಾಣತನದಿಂದ ಸತ್ಯವನ್ನು ಒರೆಗೆ ಹಚ್ಚುವ ಪ್ರಯತ್ನದಲ್ಲಿದ್ದಾಳೆ. `ಬ್ರಹ್ಮಲೋಕಗಳು ಯಾವುದರಲ್ಲಿ ಹಾಸು ಹೊಕ್ಕಾಗಿವೆ?' ಎಂದ ಅವಳ ಕೊನೆಯ ಪ್ರಶ್ನೆಗೆ `ಗಾರ್ಗಿ ಇನ್ನು ಮುಂದೆ ಕೇಳಬೇಡ ನಿನ್ನ ತಲೆ ಕೆಳಗೆ ಬಿದ್ದೀತು!' (ಸಹೋವಾಚ, ಗಾರ್ಗಿ ಮಾತಿಪ್ರಾಕ್ಷೀಃ ಮಾತೇ ಮೂರ್ಧಾ ವ್ಯಪಪ್ತತ್) ಎಂದು ಸಿಡಿಲಿನಂತೆ ಗರ್ಜಿಸುತ್ತಾನೆ. ದೇವುಡು ಅವರ ಕಾದಂಬರಿಯಲ್ಲಿ ಅಲ್ಲಿಂದ ಮುಂದೆ ಕೇಳಬೇಡ ಗಾರ್ಗಿ ಎಂದಿಷ್ಟೇ ನುಡಿದು ಅದಕ್ಕೆ ಕಾರಣವೇನೆಂಬುದನ್ನು ವಿವರಿಸ ಹೋಗುತ್ತಾನೆ. ನಿನ್ನ ತಲೆ ಕೆಳಗೆ ಬಿದ್ದೀತು ಎಂಬ ವಿವರ ತಪ್ಪಿ ಹೋಗಿರುವುದು ಭಾವನಾವಶತೆಯ ಫಲವಾಗಿದೆ. ಎಲ್ಲಿ ಈ ಮಾತು ಯಾಜ್ಞವಲ್ಕ್ಯ ಗಾರ್ಗಿಯರ ಪೂರ್ವ ಸ್ನೇಹಕ್ಕೆ ಅಸಂಬದ್ಧವಾದೀತೋ ಎಂದು ಅವರು ಯೋಚಿಸಿರಬೇಕು. ಕಾದಂಬರಿಯ ಮಧ್ಯ ಭಾಗದಿಂದಲೇ ಗಾರ್ಗಿ ಯಾಜ್ಞವಲ್ಕ್ಯನ ಬಗ್ಗೆ ಆದರವನ್ನು ತಳೆದಿರುತ್ತಾಳೆ. ಆದರೆ ಸುಸಂಬದ್ಧತೆ ಯಾವಾಗಲೂ ಪ್ರತಿಭೆಯ ಲಕ್ಷಣವಲ್ಲ ಎಂದು ದೇವುಡು ಅವರು ತಿಳಿದಿರಬೇಕಾಗಿತ್ತು.

ಮಹಾದರ್ಶನದಲ್ಲಿ ಈ ಬಗೆಯ ದೋಷ ಹಲವಾರು ಕಡೆಗೆ ಕಂಡು ಬರುತ್ತದೆ. ಬಹುಶಃ

ಯಾಜ್ಞವಲ್ಕ್ಯನ ಜೀವನದ ಬಗ್ಗೆ ಸಾಕಷ್ಟು ವಿವರಗಳು ದೊರೆಯದಿರುವುದೇ ಇದಕ್ಕೆ ಕಾರಣವಾಗಿರಬಹುದು. ಒಂದು ಸಂಹಿತೆ ಒಂದು ಬ್ರಾಹ್ಮಣ ಒಂದು ಉಪನಿಷತ್ತು ಇವುಗಳ ಸೃಷ್ಟಿಗೆ ಕಾರಣನಾದ ಯಾಜ್ಞವಲ್ಕ್ಯ ತನ್ನ ಅಗಾಧ ಪ್ರತಿಭೆಯಿಂದ ಆರ್ಷಪರಂಪರೆಗೆ ಸೇರಿದುದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ವಸಿಷ್ಠ ವಿಶ್ವಾಮಿತ್ರ ಭೃಗು ಅಗಸ್ತ್ಯರಂತೆ ಇವನ ಜೀವನ ಪುರಾಣ ಕಲ್ಪನೆಯಿಂದ ವಿಕಸಿತವಾಗಲಿಲ್ಲ. ದೇವುಡು ಅವರು ಕೆಲವು ಕಡೆಗಳಲ್ಲಿ ಈ ಪುರಾಣವನ್ನು ಅತ್ಯಂತ ಸಹಜವಾಗಿ ಸೃಷ್ಟಿಸಿದ್ದಾರೆ. ಯಾಜ್ಞವಲ್ಕ್ಯ ಬಾಲ್ಯದಲ್ಲಿ ಗೋವುಗಳ ಮಾತು ಕೇಳುವುದು ಚೌಲಕರ್ಮದ ಪ್ರಸಗದಲ್ಲಿ ಅವನಿಗೆ ದೊರೆತ ಮಂತ್ರೋಪದೇಶ ವೈಶಂಪಾಯನಗರ ಆಶ್ರಮದಲ್ಲಿ ಅವನಿಗಾದ ಪಂಚಭೂತಗಳ ದರ್ಶನ ಜನಕರಾಜ ಸಭಾ ಮಂಟಪವನ್ನು ನಿರ್ಮಿಸುವಾಗ ಮನು ಹೂಳಿಟ್ಟಿದ್ದ ನಿಧಿ ಅವನಿಗೆ ದೊರೆಯುವುದು ಜನಕನ ಸಭೆಯಲ್ಲಿ ಯಾಜ್ಞವಲ್ಕ್ಯ "ನಾವು ಗೋ ಕಾಮರು ಆದ್ದರಿಂದ ಗೋವುಗಳನ್ನು ಬಯಸುತ್ತೇನೆ" ಎಂದು ಹೇಳಿದ್ದು ಈ ವಿವರಗಳೆಲ್ಲ ಪುರಾಣ ಕಲ್ಪನೆಗೆ ಅನುರೂಪವಾಗಿವೆ. ಆದರೆ ಒಂದು ಕೃತಿಯ ವಿವರಗಳೆಲ್ಲವೂ ಅದರ ಮೂಲ ಕಲ್ಪನೆಯಿಂದ ಬಣ್ಣಗೊಂಡಿರಬೇಕು. ಮೇಲೆ ಹೇಳಿರುವ ಪ್ರಸಂಗಗಳನ್ನು ಬಿಟ್ಟರೆ ಉಳಿದ ಕಡೆಗೆ ಯಾಜ್ಞವಲ್ಕ್ಯ ಜ್ಞಾನಿಯಂತೆ ಪಂಡಿತನಂತೆ ವರ್ತಿಸುತ್ತಾನೆಯೇ ಹೊರತು ಪೌರಾಣಿಕ ವ್ಯಕ್ತಿಯಂತಲ್ಲ. ಅಂಥಲ್ಲೆಲ್ಲ ಕಾದಂಬರಿ ಯಾಜ್ಞವಲ್ಕ್ಯನ ಜೀವನ ವೃತ್ತಾಂತವಾಗಿ ಬಿಟ್ಟಿದೆ. ಅವನ ಜನ್ಮದ ಪೂರ್ವದಲ್ಲಿ ದೇವರಾತ ದಂಪತಿಗಳು ಕಾಣುವ ಕನಸು ಅವನ ಜೀವನ ಧರ್ಮವನ್ನು ಸೂಚಿಸುವ ಅಲಂಕಾರವಾಗಿದೆಯೇ ಹೊರತು ತನ್ನಷ್ಟಕ್ಕೇ ಒಂದು ಅದ್ಭುತ ದರ್ಶನವಾಗಿಲ್ಲ. ನಿಜವಾದ ಅರ್ಥದಲ್ಲಿ ಅದು ಋಷಿ ಮೂಲವೇ ಅಲ್ಲವೆನ್ನುವಷ್ಟು ಸಮರ್ಪಕವಾಗಿದೆ. ದೂರದ ಕಾಡಿನಿಂದ ಬ್ರಹ್ಮರ್ಷಿಯೊಬ್ಬ ನಡೆದುಬಂದು ಆಲಂಬಿಯ ಗರ್ಭವನ್ನು ಪ್ರವೇಶಿಸಿದನೆನ್ನುವ ಸಂಗತಿಯಲ್ಲಿ ಪೌರಾಣಿಕ ಧ್ವನಿ ಏನೂ ಇಲ್ಲ, ಮುಂದೆ ಕೂಡ ಯಾಜ್ಞವಲ್ಕ್ಯನ ಚಿತ್ರ ಸದ್ಗುಣಗಳಿಂದ ಮಾತ್ರ ಮಂಡಿತವಾದಂತಿದೆ. ಅವನು ಬುಡಿಲ, ದೇವರಾತ, ಜನಕ, ಆಲಂಬಿ, ಕಾತ್ಯಾಯಿನಿ, ಮೈತ್ರೇಯ, ಗಾರ್ಗಿ ಮೊದಲಾದವರ ಪ್ರೀತ್ಯಾದರಗಳಿಗೆ ಪಾತ್ರನಾಗಿರುವ ವ್ಯಕ್ತಿ ಮಾತ್ರವಾಗಿದ್ದಾನೆ. ವಸಿಷ್ಠ, ವಿಶ್ವಾಮಿತ್ರ ವಾಮದೇವ ಇಂದ್ರ ನಹುಷ ಚ್ಯವನ ಮೊದಲಾದ ಪುರಾಣ ಪಾತ್ರಗಳ ನಿರ್ಮಮತ್ವ ಯಾಜ್ಞವಲ್ಕ್ಯನಲ್ಲಿಲ್ಲ. ಲೋಕವಾಸನೆಯಿಂದ ಕೂಡಿದ ಕಾತ್ಯಾಯಿನಿಗೆ ತನ್ನ ಅಲೌಕಿಕ ಆಸ್ತಿಯನ್ನು ಕೊಟ್ಟು ಬ್ರಹ್ಮವಾದಿನಿಯಾದ ಮೈತ್ರೇಯಿಗೆ ಅಮೃತತ್ವವನ್ನು ಕರುಣಿಸುವ ಬ್ರಹ್ಮವಿದ್ಯೆಯನ್ನು ಕೊಟ್ಟು ಸರ್ವಸಂಗ ಪರಿತ್ಯಾಗ ಮಾಡಿ ಹೊರಡುವ ಯಾಜ್ಞವಲ್ಕ್ಯ ದೇವುಡು ಅವರ ಕಾದಂಬರಿಯ ಕೊನೆಯ ಪ್ರಕರಣದಲ್ಲಿ ಭಾವಾವಿಷ್ಟವಾಗುವುದು ಅಷ್ಟು ಸರಿಯಾಗಿ ಕಾಣುವುದಿಲ್ಲ. ಕೂಡಿದವರೆಲ್ಲ ಇನ್ನೂ ಕೆಲವು ದಿನ ಇದ್ದು ಹೋಗಬೇಕೆಂದು ಪ್ರಾರ್ಥಿಸಿಕೊಂಡಾಗ "ನಾವು ಯಾವಾಗಲೂ ಬ್ರಹ್ಮಾನುಸಂಧಾನದಲ್ಲಿರುವವರು. ಅಂದ ಮೇಲೆ ಎಲ್ಲಿದ್ದರೇನು?" ಎಂದು ಅವರ ಬಿನ್ನಹವನ್ನು ಒಪ್ಪಿಕೊಂಡು ಬಿಡುತ್ತಾನೆ.

ಯಾಜ್ಞವಲ್ಕ್ಯನ ಚಿತ್ರವೊಂದೇ ಅಲ್ಲದೆ ಉಳಿದ ಪಾತ್ರಗಳ ಬಗ್ಗೆಯೂ ಇದೇ ಮಾತು ಹೇಳಬೇಕಾಗುತ್ತದೆ. ಉಪನಿಷತ್ತಿನಲ್ಲಿ ಕೇವಲ ನಾಮ ಮಾತ್ರದಲ್ಲಿ ಗೋಚರವಾಗುವ ಕೆಲ ವ್ಯಕ್ತಿಗಳನ್ನು ದೇವುಡು ಪರಿಪೂರ್ಣ ವ್ಯಕ್ತಿಗಳನ್ನಾಗಿ ಸೃಷ್ಟಿಸಿದ ಪ್ರತಿಭೆಯನ್ನು ಮೆಚ್ಚಲೇಬೇಕು. ಬೃಹದಾರಣ್ಯಕದಲ್ಲಿ ಒಂದೇ ಒಂದು ಸಂದರ್ಭದಲ್ಲಿ ಗಾಯಿತ್ರಿಯ ಉಪಾಸಕರೆಂದು ಬುಡಿಲರ ಹೆಸರು ಬರುತ್ತದೆ.

ಆದರೆ ಕಾದಂಬರಿಯಲ್ಲಿ ಯಾಜ್ಞವಲ್ಕ್ಯನ ತರುವಾಯ ಅವರದೇ ಪ್ರಮುಖ ಪಾತ್ರವೆನ್ನಬೇಕು. ಅದರಂತೆ ಮೈತ್ರೇಯಿ, ಕಾತ್ಯಾಯಿನಿಯರು ಕೂಡ ಮೈತುಂಬಿಕೊಂಡ ವ್ಯಕ್ತಿಗಳಾಗಿದ್ದಾರೆ. ಆದರೆ ಇದಕ್ಕಿಂತ ಹೆಚ್ಚಿನಗುಣ ಈ ಪಾತ್ರಗಳಿಲ್ಲಿಲ್ಲ. ಅವು ತಮ್ಮ ಪ್ರಾಚೀನವಾದ ಆದರೂ ಅದ್ಭುತವಾದ ನಡವಳಿಕೆಯಿಂದ ಇತಿಹಾಸ ಪೂರ್ವದ ಆ ವಾತಾವರಣವನ್ನು ಪುನಃ ಸೃಷ್ಟಿಸುವುದಿಲ್ಲ. ಇನ್ನು ಜರತ್ಕಾರು ವಂಶದ ಆರ್ತ ಭಾಗ, ವಿದಗ್ದಶಾಕಲ್ಯ, ಆರುಣೇಯ ಉದ್ದಾಲಕ, ಚಾಕ್ರಾಯಣ ಉಷಸ್ತ ಮೊದಲಾದ ಹೆಸರುಗಳು ನಮ್ಮ ಪುರಾಣ ಸ್ಮೃತಿಯ ಶಿಲೆಯಲ್ಲಿ ಕೊರೆದಿಟ್ಟಿದ್ದರೂ ಅದರ ಮೇಲೆ ಸಾಕಷ್ಟು ಧೂಳು ಮುಸುಕಿದೆ. ಇವರನ್ನೆಲ್ಲ ಮತ್ತೆ ಜೀವ ತುಂಬಿ ಪಾತ್ರಗಳನ್ನಾಗಿ ಮಾಡಿದ ಶ್ರೇಯಸ್ಸು ದೇವುಡು ಅವರದೇ. ಕುರು, ಪಾಂಚಾಲ, ಕಾಶಿ ವಿದೇಹಗಳ ಆರ್ಯಾವರ್ತ ಸಜೀವವಾಗಿ ಕಣ್ಣೆದುರು ಬರುತ್ತದೆ. ಇಷ್ಟೆಲ್ಲ ಆದರೂ ಈ ವಿವರಗಳು ಓದುಗನಿಗೆ ಪೌರಾಣಿಕ ಅನುಭೂತಿಯನ್ನು ತಂದುಕೊಡಲು ಅಸಮರ್ಥವಾಗಿವೆ.

ದೇವುಡು ಅವರ ಕಾದಂಬರಿಗಳ ಇನ್ನೊಂದು ವೈಶಿಷ್ಟ್ಯವನ್ನು ಕುರಿತು ಕೆಲ ಮಾತುಗಳನ್ನು ಹೇಳಬಹುದಾಗಿದೆ. ಆ ವೈಶಿಷ್ಟ್ಯವೆಂದರೆ ಅವರ ಕಾದಂಬರಿಗಳಲ್ಲಿಯ ವರ್ಣನೆಗಳು. ಕಥನವೇ ಕಾದಂಬರಿಯ ತಂತ್ರವಾಗಿರುವುದರಿಂದ ಅದರಲ್ಲಿ ವರ್ಣನೆಗಳು ಬರುವುದು ಅನಿವಾರ್ಯವಾಗಿದೆ. ಅಭಿವ್ಯಕ್ತಿಯ ಕ್ರಮದಲ್ಲಿ ವರ್ಣನೆಗೆ ಇಷ್ಟೊಂದು ಪ್ರಾಶಸ್ತ್ಯವಿದ್ದರೂ ಅದಕ್ಕೆ ಸಾಹಿತ್ಯಜ್ಞರಿಂದ ವಿಶೇಷವಾದ ಗೌರವ ದೊರೆಯದಿರುವುದು ಮಾತ್ರ ವಿಚಿತ್ರವಾಗಿದೆ. ಅದಕ್ಕೆ ಕಾರಣ ಹೀಗೂ ಇರಬಹುದು. ವರ್ಣನಾತ್ಮಕ ಶೈಲಿಯನ್ನು ಉತ್ಕೃಷ್ಟವೆನ್ನಿಸುವಂತೆ ಸಾಹಿತ್ಯದಲ್ಲಿ ಉಪಯೋಗಿಸುವ ಕೃತಿಕಾರರು ಬಹಳ ದುರ್ಲಭರಾಗಿದ್ದಾರೆ. ಸರಳತೆ ಹಾಗೂ ಸಂಯಮಕ್ಕೆ ಸಾಹಿತ್ಯ ಮೀಮಾಂಸೆಯಲ್ಲಿ ಪ್ರಾಮುಖ್ಯ ದೊರೆತಂದಿನಿಂದ ವರ್ಣನೆಯ ಬೆಲೆ ತೀರ ಇಳಿದು ಹೋಗಿದೆ. ಆದರೆ ವರ್ಣನೆಗಳ ಮೂಲಕವೇ ಭಾವ ಪ್ರಕಾಶವನ್ನು ಮಾಡುವ ತಂತ್ರ ವಿಧಾನವೊಂದು ಬಹಳ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಪುರಾಣಗಳಲ್ಲಿಯ ವರ್ಣನಾಕ್ರಮ ಈ ಬಗೆಯದು. ಮುಂದೆ ಕಾವ್ಯ ನಾಟಕಗಳಲ್ಲಿ ರಸಸೃಷ್ಟಿ ಹಾಗೂ ಸನ್ನಿವೇಶಗಳ ರಚನೆಗೆ ಪ್ರಾಶಸ್ತ್ಯ ಒಂದು ವರ್ಣನೆ ಚಂಪೂ ಕಾವ್ಯ ಹಾಗೂ ಗದ್ಯಕಾವ್ಯಗಳ ಆಶ್ರಯವನ್ನು ಪಡೆಯಬೇಕಾಯಿತು. ಬಾಣನ ಗದ್ಯ ಕಾದಂಬರಿಗಳಲ್ಲಿಯ ವರ್ಣನೆಗಳು ಎಷ್ಟೋ ನಾಟಕಗಳ ಸನ್ನಿವೇಶಗಳಿಗಿಂತ ಹೆಚ್ಚಿನ ಪ್ರಭಾವವನ್ನು ಬೀರುತ್ತವೆ. ಅವನ ವರ್ಣನೆಗಳ ಶಾಸ್ತ್ರೀಯ ಅಭ್ಯಾಸ ನಡೆದರೆ ವರ್ಣನೆ ಎಷ್ಟು ಶಕ್ತಿಯುತವಾದ ಮಾಧ್ಯಮವೆಂಬುದರ ಅರಿವಾದೀತು. ದೇವುಡು ಅವರ ಬರವಣಿಗೆಯ ಪದ್ಧತಿ ಇದೇ ಪರಂಪರೆಗೆ ಸೇರಿದ್ದಾಗಿದೆ.

ಈ ಮೂರೂ ಕಾದಂಬರಿಗಳಲ್ಲಿ ವರ್ಣನೆಯ ಭಾಗಗಳು ಹೇರಳವಾಗಿವೆ. ಅಥವಾ ಕಾದಂಬರಿಯ ಮಾಧ್ಯಮವೇ ವರ್ಣನೆಯೆಂದರೂ ತಪ್ಪಿಲ್ಲ. ಯಾವ ಸನ್ನಿವೇಶವೇ ಆಗಲಿ ಅದರ ವಿವರಗಳಷ್ಟೇ ಅಲ್ಲದೆ ಅದರ ವಾತಾವರಣವನ್ನೂ ಕೂಡ ಪ್ರತ್ಯಕ್ಷ ಅನುಭವಕ್ಕೆ ತಂದಿಳಿಸುವ ಶಕ್ತಿ ದೇವುಡು ಅವರ ವರ್ಣನೆಗಳಲ್ಲಿದೆ. ಎಲ್ಲ ವಿವರಗಳೂ ಅಷ್ಟೇ ಶಕ್ತಿಯುತವಾಗಿರುತ್ತದೆಂದಲ್ಲ. ಆದರೆ ಅವೆಲ್ಲವುಗಳ ಒಟ್ಟಂದದ ಪ್ರಭಾವ ಮನಸ್ಸಿನ ಮೇಲೆ ತೀವ್ರವಾಗಿ ಮೂಡುತ್ತದೆ. ಇನ್ನು ಕೆಲವು ವಿವರಗಳು ಇಡೀ ವರ್ಣನೆಯನ್ನು ಒಮ್ಮೆಲೆ ಸಜೀವವಾಗಿಸುತ್ತವೆ. ವಿಶ್ವಾಮಿತ್ರನು ರುದ್ರನ ಉಪಾಸನೆ

ಮಾಡಿದ ಮೇಲೆ ಅವನ ಕಣ್ಣಿಗೆ ಪ್ರತ್ಯಕ್ಷವಾದ ರುದ್ರನ ವರ್ಣನೆಯನ್ನು ನೋಡಬೇಕು. ರುದ್ರ.ತನ್ನ ಶೂಲದಿಂದ ವಿಶ್ವಾಮಿತ್ರನನ್ನು ಮುಟ್ಟಿದಾಗ ಅವನಿಗೆ ತನ್ನ ಕೊನೆಯ ಕಾಲವೇ ಬಂದ ಹಾಗೆ ಭಾಸವಾಗಿ ಗುಂಡಿಗೆ ಅದರುತ್ತದೆ. ಈ ವಿವರದ ಸಂವೇದನಶೀಲತೆ ಅನಾದೃಶವಾದುದು. ಓದುಗನ ಅಬೋಧಪೂರ್ವವಾದ ಭಾವನೆಗಳನ್ನೆಲ್ಲ ಬೆಳಗುವ ಇಂಥ ವರ್ಣನೆಗಳು ದೇವುಡು ಅವರ ಕೃತಿಗಳಲ್ಲಿ ಬೇಕಾದಷ್ಟಿವೆ. ಹಿಮಾಲಯದ ಊಷರ ಪ್ರದೇಶದಲ್ಲಿ ಅಡಗಿಕೊಂಡಿದ್ದ ಇಂದ್ರನನ್ನು ಹುಡುಕಿಕೊಂಡು ಅಗ್ನಿ ವಾಯುಗಳು ಹೋದಾಗ ಇಂದ್ರನನ್ನು ಕಾಡುತ್ತಿದ್ದ ಹತ್ಯೆ ಹಾವಿನಂತೆ ಫೂತ್ಕರಿಸುವುದು. ಎಷ್ಟೋ ವರ್ಷಗಳವರೆಗೆ ನೀರಿನಲ್ಲಿ ತಪಸ್ಸು ಮಾಡುತ್ತಿದ್ದ ಚ್ಯವನನ ದೇಹ ಮೀನಿನಂತೆ ಆಕಾರವನ್ನು ಪಡೆದದ್ದು ಇವು ಬೇರೆ ಉದಾಹರಣೆಗಳಾಗಿವೆ.

ಇನ್ನು ದೀರ್ಘವಾದ ವರ್ಣನೆಗಳ ಸೊಗಸು ಇದಕ್ಕಿಂತ ಬೇರೆ ಬಗೆಯದು. ವಿವರಗಳ ಜೋಡಣೆಯ ಬಗ್ಗೆ ಎಚ್ಚರಿಕೆ ವಹಿಸಿ ಭಾಷೆಯನ್ನು ಬಣ್ಣದಂತೆ ಉಪಯೋಗಿಸಿಕೊಂಡು ಇಡೀ ಸನ್ನಿವೇಶವನ್ನು ಕಣ್ಣೆದುರು ತಂದು ನಿಲ್ಲಿಸುವ ಕೌಶಲ ಅಲ್ಲಿ ಕಾಣುತ್ತದೆ. ವಿಶ್ವಾಮಿತ್ರ ಮೇನಕೆಯರ ಮಿಲನದ ವರ್ಣನೆ ನಹುಷನನ್ನು, ಶಚೀದೇವಿ ಕಾಣಬಂದಾಗ ನಕ್ಷತ್ರ ಖಚಿತವಾದ ಆಕಾಶವನ್ನೇ ನೆನಪಿಗೆ ತಂದುಕೊಡುವ ಅವಳ ಸೌಂದರ್ಯದ ವರ್ಣನೆ, ತ್ರಿಶಂಕುವಿನ ದೇಹದ ಮೇಲೆ ಅಶ್ವಿನೀ ದೇವತೆಗಳು ನಡೆಸಿದ ಚಿಕಿತ್ಸೆಯ ವರ್ಣನೆ, ಸಮುದ್ರತೀರದ ಮೇಲೆ ಇಂದ್ರ, ವೃತ್ರರ ಪ್ರಮೋದ ಕಲಹವಾಗಿ ಪರಿಣಮಿಸುವ ವರ್ಣನೆ, ವೃತ್ರಪಂಚಭೂತಗಳನ್ನು ಆಕ್ರಮಿಸಿದಾಗ ಪಂಚಭೂತಗಳ ಹಾಗೂ ಶಚೀದೇವಿಯ ದುರವಸ್ಥೆಯ ವರ್ಣನೆ, ಯಾಜ್ಞವಲ್ಕ್ಯನಿಗಾಗುವ ಪಂಚಭೂತ ದರ್ಶನದ ವರ್ಣನೆ, ಬುಡಿಲರ ಸಾವಿನ ವರ್ಣನೆ, ಇವೆಲ್ಲ ದೇವುಡು ಅವರ ಕಾದಂಬರಿಗಳ ಅವಿಸ್ಮರಣೀಯವಾದ ಅಂಶಗಳಾಗಿವೆ. ಅತೀಂದ್ರಿಯವೆನ್ನಬಹುದಾದ ಸಂಗತಿಗಳನ್ನು ಕೂಡ ಅನುಭವ ವೇದ್ಯವಾಗುವಂತೆ ಮಾಡಬಲ್ಲ ಶಕ್ತಿ ಈ ವರ್ಣನೆಗಳಿಗಿದೆ. ಉದಾಹರಣೆಗೆ ಶಚೀದೇವಿಯ ರೂಪವರ್ಣನೆಯನ್ನೇ ನೋಡಬಹುದು. ಆ ವರ್ಣನೆಯ ಒಟ್ಟು ಸಾರವೆಂದರೆ ಶಚೀದೇವಿ ಧರಿಸಿಕೊಂಡಿದ್ದ ರತ್ನಾಭರಣಗಳು ಒಂದೊಂದು ಒಂದು ನಕ್ಷತ್ರ ಸಮೂಹದಂತೆ ಬೆಳಗುತ್ತಿದ್ದವು ಎಂದು ಹೇಳುವುದೇ. ಆದರೆ ಹೀಗೆ ಸಂಕ್ಷೇಪವಾಗಿ ಹೇಳದೆ ದೇವುಡು ಅವರು ಮಹಾಕಾವ್ಯಗಳಲ್ಲಿಯ ವರ್ಣನೆಯ ಕ್ರಮವನ್ನು ಅನುಸರಿಸಿ ವರ್ಣನೆಯನ್ನು ಅವಲಂಬಿಸಿದ್ದಾರೆ. ಕೃತ್ತಿಕೆ, ಪುನರ್ವಸು, ಚಿತ್ರಾ, ಸ್ವಾತಿ ಹೀಗೆ ಬೇರೆ ಬೇರೆ ನಕ್ಷತ್ರ ಮಂಡಲಗಳನ್ನು ಹೆಸರಿಸಿ ವರ್ಣಿಸುವುದರಿಂದ ಉಪಮೇಯದೊಂದಿಗೆ ಉಪಮಾನವೂ ಸರಿದೊರೆಯಾಗಿ ಅನುಭವವನ್ನು ನೀಡುವಂತೆ ಮಾಡಿದ್ದಾರೆ. ಇದಕ್ಕೂ ಹೆಚ್ಚು ರಮ್ಯವಾದ ಉದಾಹರಣೆಯೆಂದರೆ ವಿಶ್ವಾಮಿತ್ರನ ಧರ್ಮಾರಣ್ಯದಲ್ಲಿ ಘೃತಾಚಿಯೊಡನೆ ಬಂದಿದ್ದ ರಂಭೆಯ ರೂಪವರ್ಣನೆ. ಈ ಶಬ್ದ ಚಿತ್ರದಲ್ಲಿ ಬಿಳಿಕೆಂಪುಗಳೆರಡೇ ಪ್ರಮುಖವಾದ ವರ್ಣಗಳಾಗಿವೆ. ಪ್ರಾರಂಭಕ್ಕೆ ಎಲ್ಲೆಡೆಗೂ ಸುರಿದ ಮಂಜಿನ ಬಿಳಿಯ ಬಣ್ಣ ಗಿಡುಗನ ಬಾಯಲ್ಲಿ ಸಿಕ್ಕಿ ಪಾರಿವಾಳದ ಮೈಯಿಂದ ಬಿದ್ದ ರಕ್ತ ಬಿಂದುವಿನ ಉಷ್ಣಕ್ಕೆ ಕರಗಿ ನಸುಗೆಂಪಾಗಿ ರಂಭೆಯ ಒಡವೆಗಳ ಪ್ರಭಾವದಿಂದ ಈ ಕೆಂಪು ದಟ್ಟವಾಗಿ ಉಜ್ವಲವಾಗಿ ಕೊನೆಗೆ ಬಿಳಿ ಬಣ್ಣವನ್ನು ಮರೆಸಿ ಬಿಡುವಷ್ಟು ವ್ಯಾಪಕವಾಗುತ್ತದೆ. ಈ ವರ್ಣ ವಿನ್ಯಾಸ ರಂಭೆಯ ಹೃದಯದಲ್ಲಿಯ ಕಾಮರಾಗವನ್ನೂ ಅವಳ ಭಾವಾಂ

ತರಗಳನ್ನೂ ಸುಂದರವಾಗಿ ಪ್ರಕಟಿಸುತ್ತದೆ. ಅಲ್ಲದೆ ಉಪಮಾನಗಳು ತಮ್ಮಷ್ಟಕ್ಕೆ ತಾವೇ ಪ್ರಕೃತಿ ಚಿತ್ರಗಳಾಗಿ ಮನಸೆಳೆಯುತ್ತವೆ. ಹೀಗೆ ಆಲಂಬನ ಉದ್ದೀಪನಗಳೆರಡೂ ಉಪಮಾನೋಪಮೇಯ ಸಂಬಂಧದಿಂದ ಪರಸ್ಪರ ಪೂರಕವಾಗಿ, ಕೊನೆಕೊನೆಗೆ ಒಂದರೊಳಗೊಂದು ಲಯವಾಗುತ್ತವೆ.

ಅಮೂರ್ತವಾದ ತತ್ವಗಳಿಗೆ ಚೈತನ್ಯಪೂರ್ಣವಾದ ಶರೀರವನ್ನು ಕೊಟ್ಟು ಬಣ್ಣಿಸುವುದು ದೇವುಡು ಅವರ ವರ್ಣನೆಗಳ ಇನ್ನೊಂದು ರಹಸ್ಯವಾಗಿದೆ. ಅದಕ್ಕೆ ಅವಶ್ಯವಾಗಿರುವ ದಾರ್ಶನಿಕ ಪ್ರತಿಭೆ ದೇವುಡು ಅವರಲ್ಲಿ ಬೇಕಾದಷ್ಟಿದೆ. ಇಂದ್ರ, ರುದ್ರ, ಬೃಹಸ್ಪತಿ, ಆಪೋದೇವಿಯರು, ಅಶ್ವಿನೀಕುಮಾರರು, ಶಚಿ, ಪೂಷ, ಅಗ್ನಿ, ವಾಯು, ವರುಣ ಮೊದಲಾದ ಪುರಾಣ ಪ್ರಸಿದ್ಧರಾದ ದೇವತೆಗಳ ವರ್ಣನೆ ಸಾಂಗವಾಗಿ ಸಕ್ರಮವಾಗಿಯೇ ಬಂದಿದೆ. ಆದರೆ ಇದಲ್ಲದೆ ಬೇರೆ ಕೆಲವು ಅಷ್ಟೊಂದು ಖ್ಯಾತರಲ್ಲದ ದೇವತೆಗಳನ್ನೂ ವರ್ಣಿಸಲಾಗಿದೆ. ಪ್ರಾಣಾಗ್ನಿಯ ಐದು ಸ್ವರೂಪಗಳಾದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳು ವಿಶ್ವಾಮಿತ್ರನಿಗೆ ದರ್ಶನವಿತ್ತಾಗ ಪ್ರತಿಯೊಂದರ ವೈಶಿಷ್ಟ್ಯವನ್ನೂ ಬಣ್ಣ ಬೆಳಕು ಆಕಾರಗಳ ಕ್ರಮದಲ್ಲಿ ವರ್ಣಿಸಲಾಗಿದೆ. ದೇವತೆಗಳೆಲ್ಲ ದಧೀಚಿಯನ್ನು ಅವನ ಬೆನ್ನೆಲುವಿಗಾಗಿ ಪ್ರಾರ್ಥಿಸಿಕೊಂಡಾಗ ಅವನು ಕ್ಷರಪುರುಷನನ್ನು ಬರಮಾಡಿಕೊಂಡು ಅವನ ಒಪ್ಪಿಗೆಯನ್ನು ಬೇಡುತ್ತಾನೆ. ನಹುಷ ಶಿಬಿಕಾರೋಹಣದ ಸಂಭ್ರಮದಲ್ಲಿದ್ದಾಗ ನಿಯತಿದೇವಿ ಅವನಿಗೆ ಸಮಾಧಿಭಂಗದ ಸೂಚನೆಯನ್ನೀಯುತ್ತಾಳೆ. ಬುಡಿಲರು ಸಾಯುವ ಹೊತ್ತಿನಲ್ಲಿ ಪಿತೃಗಳು ಬಂದು ದರ್ಶನವೀಯುತ್ತಾರೆ. ಇದಲ್ಲದೇ ಎಷ್ಟೋ ರಹಸ್ಯ ವಿದ್ಯೆಗಳು, ಅಸ್ತ್ರಾಭಿಮಾನಿ ದೇವತೆಗಳು ತಮ್ಮ ತಮ್ಮ ಸ್ವರೂಪವನ್ನು ಕಾಣಿಸುತ್ತವೆ. ಈ ವರ್ಣನೆಗಳ ಕಲಾತ್ಮಕ ಪ್ರಯೋಜನ ಅಷ್ಟಿಷ್ಟಲ್ಲ. ಇಡೀ ಸಚರಾಚರ ಸೃಷ್ಟಿಯೇ ದೇವಾಯತನವಾದ ಅನುಭವವನ್ನು ಇವುಗಳ ಮೂಲಕ ಪಡೆಯಬಹುದಾಗಿದೆ.

ಹೀಗೆ ದೇವುಡು ಅವರ ಈ ಮೂರು ಕಾದಂಬರಿಗಳ ಕೆಲ ವೈಶಿಷ್ಟ್ಯಗಳನ್ನು ಕುರಿತು ಚರ್ಚಿಸಿದ್ದಾಯಿತು. ಈ ಕೃತಿಗಳ ಜಾತಿ ಯಾವುದೆಂಬುದನ್ನು ಖಚಿತವಾಗಿ ಹೇಳಲಾಗದಿದ್ದರೂ ಕೆಲ ಮಾತುಗಳನ್ನು ಹೇಳಬಹುದಾಗಿದೆ. ಸ್ಥೂಲವಾಗಿ ಇವುಗಳನ್ನು ಕಾದಂಬರಿಗಳೆಂದು ಕರೆಯಬಹುದು. ಆದರೆ ಕಾದಂಬರಿ ಪ್ರಕಾರದ ಎಲ್ಲಾ ನಿಯಮಗಳನ್ನೂ ಇಲ್ಲಿ ಅನ್ವಯಿಸಲಾಗುವುದಿಲ್ಲ. ಪಾತ್ರರಚನೆ ವಸ್ತುಸಂವಿಧಾನ ಇವೆರಡೂ ಕಾದಂಬರಿಯ ಪ್ರಮುಖ ಅಂಗಗಳಾಗಿವೆ. ಅಲ್ಲದೆ ಇಂದಿನ ಯುಗದ ಆಸಕ್ತಿಗಳಿಗೆ ಅನುಗುಣವಾಗಿ ಕಾದಂಬರಿಯ ರೂಪ ಏರ್ಪಟ್ಟಿದೆ. ಆದ್ದರಿಂದ ನಿಯಮಬದ್ಧವಾದ ಕಾದಂಬರಿಯಿಂದ ನಾವು ಏನನ್ನು ನಿರೀಕ್ಷಿಸಬಹುದೋ ಅದು ದೇವುಡು ಅವರ ಕೃತಿಗಳಲ್ಲಿ ಬಹುಶಃ ದೊರೆಯಲಿಕ್ಕಿಲ್ಲ. ದೇವುಡು ಅವರ ಬರವಣಿಗೆಯಲ್ಲಿ ಭಾವನೆಗಳ ಸೂಕ್ಷ್ಮ ಚಿತ್ರಣವಾಗಲಿ ಸಂಘರ್ಷಗಳ ರೋಮ ಹರ್ಷವಾಗಲಿ ಸಿಗಲಾರವು. ಎಲ್ಲ ಉತ್ತಮ ಕೃತಿಗಳಂತೆಯೇ ಇವುಗಳಿಂದಲೂ ದೊರೆಯುವುದು ರಸಾನುಭವವೇ; ಆದರೆ ಆ ರಸಾನುಭವದಲ್ಲಿ ಚಿತ್ತದ್ರವಕ್ಕಿಂತ ಹೆಚ್ಚಾಗಿ ಜ್ಞಾನದ ಪ್ರಭೆ ಮಿನುಗುತ್ತದೆ.

★

ದೇವುಡು : ವೈದಿಕ ಸಂಸ್ಕೃತಿಯ ಪರಿಭಾಷೆಗೆ ಹೊಸ ಅರ್ಥ ತುಂಬಿದ ಧೀಮಂತ

ಪ್ರೊ|| ಜಿ.ಎಸ್. ಆಮೂರ

ಪಾಶ್ಚಾತ್ಯರ ಗ್ರಹಿಕೆ ಹಾಗೂ ಅಭಿವ್ಯಕ್ತಿಯ ಕ್ರಮಗಳ ಸಮ್ಮೋಹಕ ಪ್ರಭಾವದಿಂದ ಪಾರಾಗಿ ನಿಜವಾದ ಸೃಜನಶೀಲತೆಯನ್ನು ಸಾಧಿಸುವ ಹಂಬಲ ಭಾರತೀಯ ಲೇಖಕರಲ್ಲಿ ಬಲವಾಗಿರುವ ಇಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ದೇವುಡುರವರ ಕೃತಿಗಳಿಗೆ ವಿಶೇಷ ಮಹತ್ವವಿದೆ. ವೈದಿಕ ಸಂಸ್ಕೃತಿಯಲ್ಲಿ ದೇವುಡು ಅವರಿಗೆ ಅಚಲವಾದ ಶ್ರದ್ಧೆಯಿತ್ತು. ಸಾವಿರಾರು ವರ್ಷಗಳ ಕಾಲ ಪರಕೀಯರ ದಾಳಿಗೆ ಬಲಿಯಾದರೂ ಭಾರತ ತನ್ನ `ಆತ್ಮ'ವನ್ನಾಗಲಿ, `ಆತ್ಮಶಕ್ತಿ'ಯನ್ನಾಗಲಿ ಕಳೆದುಕೊಂಡಿಲ್ಲ ಎಂದು ಅವರು ದೃಢವಾಗಿ ನಂಬಿದ್ದರು. ಅವರ ಮಹತ್ವದ ಕೃತಿಗಳಾದ `ಮಹಾಬ್ರಾಹ್ಮಣ' (೧೯೪೭) `ಮಹಾಕ್ಷತ್ರಿಯ' (೧೯೬೧) ಹಾಗೂ `ಮಹಾದರ್ಶನ' (೧೯೬೪) ಗಳು ಈ ಅಂತಶ್ಶಕ್ತಿಯ ನಿರೂಪಣೆಗಳು. ದೇವುಡು ಅವರು ಉದ್ದೇಶ ಪೂರ್ಣವಾಗಿಯೇ ತಮ್ಮನ್ನು ತಮ್ಮ ಕಾಲದ ಪ್ರಮುಖ ಪ್ರವಾಹವಾದ ವಾಸ್ತವ ಮಾರ್ಗದಿಂದ ಬೇರ್ಪಡಿಸಿಕೊಂಡರು. ಮಹಾಬ್ರಾಹ್ಮಣಕ್ಕೆ ಅವರು ಬರೆದ `ಮುನ್ನುಡಿ'ಯಲ್ಲಿ ಇದರ ಸ್ಪಷ್ಟ ಸೂಚನೆಯಿದೆ: `ಈಗ ಸಾಹಿತ್ಯವು ಮನುಷ್ಯ ಸಾಮನ್ಯನನ್ನು ಚಿತ್ರಿಸುವ ಕಾರ್ಯದಲ್ಲಿದೆ. ತುಂಬೆಯ ಗಿಡದಲ್ಲಿ ತೆಂಗಿನಕಾಯಿ ಸಿಕ್ಕುವುದಿಲ್ಲವೆಂದು ತೆಂಗಿನ ತೋಟ ನೆಡುವ ಕಾರ್ಯ ಇಲ್ಲಿ ನಡೆದಿರುವುದು... ಮಹಾ ವಿಷಯಗಳನ್ನು ವಿಮರ್ಶಿಸಬೇಕೆಂದು ಆಸೆ ಇದ್ದವರು ಮಹಾಪುರುಷರನ್ನು ಚಿತ್ರಿಸಲು ಹೊರಡದೆ ಬೇರೆ ದಾರಿಯಿದೆಯೇನು?' ಅವರ ಸಮಕಾಲೀನರಲ್ಲಿ ಕಂಡು ಬರುವ ಸಂಪ್ರದಾಯ ಅಧುನಿಕತೆಗಳ ನಡುವಿನ ಹೊಯ್ದಾಟ ದೇವುಡು ಅವರಲ್ಲಿರಲಿಲ್ಲ. ಅಧುನಿಕತೆಯ ಸವಾಲುಗಳ ಕಲ್ಪನೆ ಅವರಲ್ಲಿ ಇದ್ದಿಲ್ಲವೆಂದಲ್ಲ. ಆದರೆ ಈ ಸವಾಲನ್ನು ಅವರು ಸಂಪ್ರದಾಯದಲ್ಲಿ ಗಟ್ಟಿಯಾಗಿ ಕಾಲೂರಿಯೇ ಎದುರಿಸಿದರು. ಈ ಮಾತು `ಅಂತರಂಗ'ದಂಥ ಅವರ ಸಾಮಾಜಿಕ ಕಾದಂಬರಿಗಳಿಗೂ ಅನ್ವಯಿಸುತ್ತದೆ. ತಮ್ಮ ಮಹಾಬ್ರಾಹ್ಮಣಕ್ಕೆ ಬರಬಹುದಾದ ಟೀಕೆಗಳನ್ನು ಊಹಿಸಿ `ಬ್ರಾಹ್ಮಣದ್ವೇಷ, ವೈದಿಕ ಸಂಸ್ಕೃತಿ ತಿರಸ್ಕಾರ, ತುಂಬಿರುವ ಈ ಕಾಲದಲ್ಲೇ ಈ ಜಾತಿಯ ಕಥೆ ಎಂದು ಕೆಲವು ಮಿತ್ರರು ಶಂಕಿಸಿದ್ದಾರೆ. ಹೌದು ಕತ್ತಲು ಇರುವಾಗಲೇ ಬೆಳಕು ಬೇಕಾಗಿರುವುದು.' ಅಧುನಿಕ ಸಾಹಿತ್ಯದ ಲಕ್ಷ್ಯ ಮಾನವನ ದೌರ್ಬಲ್ಯಗಳಲ್ಲಿ ಕೇಂದ್ರೀಕರಿಸಿದರೆ ದೇವುಡು ಅವರ ಕೃತಿಗಳು ಮಾನವನ ಶಕ್ತಿ ಸಾಮರ್ಥ್ಯಗಳನ್ನು, ಅವನ ಆಶ್ಚರ್ಯಕರ ಸಾಧ್ಯತೆಗಳನ್ನು ಪ್ರದರ್ಶಿಸುತ್ತವೆ. ಈ ದೃಷ್ಟಿಯಿಂದಲೂ ಅವರ ಸಾಹಿತ್ಯ ವಿಶಿಷ್ಟವಾದುದು.

ಮಹಾಕ್ಷತ್ರಿಯ, ಮಹಾಬ್ರಾಹ್ಮಣ ಹಾಗೂ ಮಹಾದರ್ಶನ ಈ ಮೂರು ಕೃತಿಗಳಿಗೂ ವಸ್ತುವನ್ನು ದೇವುಡು ಅವರು ಪೌರಾಣಿಕ ಮೂಲಗಳಿಂದಲೇ ಆಯ್ದುಕೊಂಡರು. ಮಹಾಕ್ಷತ್ರಿಯದ `ಉಪಸಂಹಾರ'ದಲ್ಲಿ ಅವರು ಹೇಳುವ ಮಾತು ಅವರ ಸ್ವಂತದ ವಿಧಾನಗಳ ಮೇಲೂ ಬೆಳಕು ಚೆಲ್ಲುತ್ತದೆ. `ಇದರಂತೆಯೇ ಸಂಹಿತೆ, ಇತಿಹಾಸ, ಪುರಾಣಗಳಲ್ಲಿ ಬಂದಿರುವ ಕತೆಗಳು ಇನ್ನೂ

ಎಷ್ಟೋ ಇವೆ. ಅವುಗಳನ್ನು ಅಧ್ಯಯನ ಮಾಡಿ, ವಿಸ್ತಾರವಾಗಿ, ಸಮಂಜಸವಾಗಿ, ಹೇಳುವ ಪುಣ್ಯವಂತರ ಪಡೆಯು ಹೆಚ್ಚಾಗಲಿ'. ಸಂಪ್ರದಾಯದಲ್ಲಿ ದೇವುಡು ಅವರಷ್ಟೇ ಶ್ರದ್ಧೆಯಿಂದ ಬಂಕಿಮಚಂದ್ರರು ತಮ್ಮ ಐತಿಹಾಸಿಕ ಕಾದಂಬರಿಗಳಿಗಾಗಿ ಅಷ್ಟೊಂದು ಪ್ರಸಿದ್ಧವಾಗಿರದ ಘಟನೆಗಳನ್ನಾಯ್ದುಕೊಂಡರು. ಇದರಿಂದಾಗಿ ಕಲ್ಪನೆಗೆ ವಿಶೇಷ ಅವಕಾಶ ದೊರೆತು ಪಾಶ್ಚಾತ್ಯರು ಸೃಷ್ಟಿಸಿದ ಭಾರತೀಯ ಇತಿಹಾಸದ ಮಾದರಿಗಳಿಗಿಂತ ಭಿನ್ನವಾದ ಮಾದರಿಗಳನ್ನು ಸೃಷ್ಟಿಸಲು ಅನುಕೂಲತೆಗಳು ದೊರಕಿದವು. ಆದರೆ ದೇವುಡು ಅವರು ತಮ್ಮ ಕಾದಂಬರಿಗಳಿಗೆ ಪ್ರಸಿದ್ಧ ವ್ಯಕ್ತಿ, ಪ್ರಸಂಗಗಳನ್ನೇ ಆಯ್ದುಕೊಂಡರು. ಮೂಲದ ವಿಸ್ತಾರದಲ್ಲಿ ಅವರು ತಮ್ಮ ಕಲ್ಪನಾ ಶಕ್ತಿಯನ್ನು ಧಾರಾಳವಾಗಿ ಬಳಸಿಕೊಂಡರು. ಆದರೆ ಅವರ ಉದ್ದೇಶ ಆದಷ್ಟು ಸಮಗ್ರವಾಗಿ ಯಥಾರ್ಥವಾಗಿ ಪುರಾಣ ಕಥೆಗಳನ್ನು ಪುನಃ ಸೃಷ್ಟಿಸುವುದೇ ಆಗಿತ್ತು. ಅವುಗಳ ಪ್ರಸ್ತುತತೆಯ ಬಗ್ಗೆ ಅವರಲ್ಲಿ ಸಂದೇಹಗಳೇ ಇರಲಿಲ್ಲ.

ಈ ಗ್ರಂಥ, ಕಥೆಯೆಂದವರಿಗೆ ಕಥೆ; ಶಾಸ್ತ್ರವೆಂದವರಿಗೆ ಶಾಸ್ತ್ರ; ವಿದ್ಯೆಯೆಂದವರಿಗೆ ವಿದ್ಯೆ', ಕುಮಾರವ್ಯಾಸ ತನ್ನ ಭಾರತದ ಬಗ್ಗೆ ಹೇಳಿದ ಮಾತನ್ನು ಹೋಲುವ ಈ ಮಾತು ದೇವುಡುರವರ ಎಲ್ಲ ಪೌರಾಣಿಕ ಕಾದಂಬರಿಗಳಿಗೂ ಅನ್ವಯಿಸುತ್ತದೆ. ಆದರೆ ಇದಕ್ಕೂ ಹೆಚ್ಚು ಮಹತ್ವದ ಅಂಶವೆಂದರೆ ದೇವುಡು ಅವರು ತಮ್ಮ ಕೃತಿಗಳ ಮೂಲಕ ಅಭಿವ್ಯಕ್ತಿಸುವ ದರ್ಶನ ದೇವುಡು ಅವರ ಪೌರಾಣಿಕ ಕಾದಂಬರಿಗಳಲ್ಲಿ ದೇವ, ದಾನವರಿಗೂ ಪಾತ್ರವಿದೆ. ಆದರೆ ಅವೆಲ್ಲ ಮಾನವ ಕೇಂದ್ರಿತವಾದವುಗಳು. ಮಾನವನ ಸಾಧ್ಯತೆಗಳೇ ಅವರ ಪ್ರಮುಖ ಅಸ್ಥೆಯ ವಿಷಯ. ಮೂಲಕತೆಗಳಲ್ಲಿ ಅವರು ಮಾಡಿಕೊಳ್ಳುವ ಬದಲಾವಣೆಗಳೆಲ್ಲ ಈ ಉದ್ದೇಶದಿಂದಲೇ ಪ್ರೇರಿತವಾದವುಗಳು. ನಹುಷ, ವಿಶ್ವಾಮಿತ್ರ, ಯಾಜ್ಞವಲ್ಕ್ಯ—ಇವರೆಲ್ಲರೂ ಮಾನವೀಯ ಸಿದ್ಧಿಯ ಪರಾಕಾಷ್ಠೆಯ ಪ್ರತೀಕಗಳೆಂದೇ ಅವರ ಕಾದಂಬರಿಗಳಲ್ಲಿ ರೂಪುಗೊಂಡಿದ್ದಾರೆ.

ಮಹಾಕ್ಷತ್ರಿಯದ ನಹುಷನಿಗೆ ಹೋಲಿಸಿದರೆ ಇಂದ್ರ ಎಲ್ಲ ರೀತಿಯಿಂದಲೂ ಕೀಳು. ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಅವನು ವಿಶ್ವರೂಪಾಚಾರ್ಯನಂಥ ಮಹಾನುಭಾವನನ್ನೂ ವೃತ್ರನಂಥ ಪರಾಕ್ರಮಿಯನ್ನೂ ಮೋಸದಿಂದ ಕೊಲ್ಲುತ್ತಾನೆ. ಹತ್ಯೆಯ ಪಾಪವನ್ನು ನಿರಪರಾಧಿಗಳಲ್ಲಿ ಹಂಚಿ ಪಾರಾಗುವ ಯುಕ್ತಿ ಹುಡುಕುತ್ತಾನೆ. ಅಧಿಕಾರ ಕಳೆದುಕೊಂಡು ವೃತ್ರನ ಪ್ರೇತಕ್ಕೆ ಅಂಜಿ ಕಮಲನಾಳದಲ್ಲಿ ಅಡಗಿ ಕೂತುಕೊಳ್ಳುತ್ತಾನೆ. ಬ್ರಹ್ಮ, ವಿಷ್ಣು, ಮಹೇಶ್ವರರ ಬೆಂಬಲವಿರುವುದರಿಂದಲೇ ಅನ್ವಂತರ ಮುಗಿಯುವವರೆಗೆ ಆತ ತನ್ನ ಇಂದ್ರ ಪದವಿಯನ್ನು ಉಳಿಸಿಕೊಳ್ಳುತ್ತಾನೆ. ನಹುಷನಲ್ಲಿ ಇಂಥ ಯಾವ ಚಾರಿತ್ರ್ಯ ದೋಷಗಳನ್ನೂ ನಾವು ಕಾಣಲಾರೆವು. ಇಂದ್ರ ಪದವಿ ಅವನನ್ನು ಹುಡುಕಿಕೊಂಡು ಬಂದಾಗ ಕೂಡ ಅವನು ಅಮರತ್ವವನ್ನು ಬಯಸುವುದಿಲ್ಲ. ಅವನು ದೇವತೆಗಳ ದುರಿಗಿಡುವ ನಿಬಂಧನೆಗಳು ಮಾನವನಾಗಿ ಅವನಿಗಿರುವ ಅಭಿಮಾನವನ್ನೇ ಎತ್ತಿ ತೋರಿಸುತ್ತವೆ. ತಾನು ದೇವಲೋಕದ ಅಧಿಪತಿಯಾದಾಗಲೂ ವಿರಜಾದೇವಿಯೇ ತನ್ನ ಪತ್ನಿಯಾಗಿರಬೇಕು. ತನ್ನ ಧರ್ಮಕಾರ್ಯಗಳನ್ನು ಅವಿರತವಾಗಿ ನಡೆಸಿಕೊಂಡು ಹೋಗಲು ತನಗೆ ಸ್ವಾತಂತ್ರ್ಯವಿರಬೇಕು ಎಂದು ಅವನು ಕೇಳಿಕೊಳ್ಳುತ್ತಾನೆ. ಅವನ ಇನ್ನೊಂದು ನಿಬಂಧನೆ ತನ್ನಿಂದ ಯಾವ ರಹಸ್ಯವನ್ನೂ ಬಚ್ಚಿಡಬಾರದು ಎನ್ನುವುದು— ಅವನ ಜ್ಞಾನದಾಹದ ನಿದರ್ಶನವಾಗಿದೆ. ದೇವುಡು ಮಹಾಭಾರತದ ನಹುಷ

ಕಲ್ಪನೆಯನ್ನೇ ಉಳಿಸಿಕೊಂಡು ಬಂದಿದ್ದಾರಾದರೂ ಕೆಲವೊಂದು ಮಹತ್ವದ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಅವುಗಳಲ್ಲಿ ಬಹುಮುಖ್ಯವಾದುದು ಅವನ ಸಪ್ತರ್ಷಿ ಶಿಬಿಕಾಯಾನಕ್ಕೆ ಸಂಬಂಧಿಸಿದುದು. ಮಹಾಭಾರತದ `ಅನುಶಾಸನಪರ್ವ'ದಲ್ಲಿ ಬರುವ ಹಾಗೆ ನಹುಷ ಶಿಬಿಕಾಯಾನವನ್ನು ಬಯಸುವುದು ತನ್ನ ಅಹಂಕಾರದ ಮೂಲಕ. ಅವನು ಕ್ರಮವಾಗಿ ಎಲ್ಲ ಋಷಿಗಳನ್ನೂ ಶಿಬಿವಾಹಕರನ್ನಾಗಿ ಉಪಯೋಗಿಸಿಕೊಳ್ಳುವಾಗ ಅಗಸ್ತ್ಯನ ಪಾಳಿ ಬಂದಾಗ ಅವನನ್ನು ಎಡಗಾಲಿನಿಂದ ಒದೆದು ಅವನ ಶಾಪಕ್ಕೆ ಗುರಿಯಾಗುತ್ತಾನೆ. ಋಷಿಯಾನದ ಸೂಚನೆ ಮಹಾಭಾರತದಲ್ಲಿ ಇಂದ್ರನಿಂದ ಬರುತ್ತದೆ. ಭೃಗು-ಅಗಸ್ತ್ಯರು ಅವನ ಪತನದ ಯುಕ್ತಿ ಹುಡುಕುತ್ತಾರೆ. ಆದರೆ ಮಹಾಕ್ಷತ್ರಿಯದಲ್ಲಿ ಅದು ನಹುಷ ಇಂದ್ರನನ್ನೂ ಮೀರಿದ ಅತೀಂದ್ರ ಪದಕ್ಕೆ ಏರುವ ಸೋಪಾನವಾಗಿ ಬರುತ್ತದೆ. ಅವನಿಗೆ ಅಧಿಕಾರದಲ್ಲಿ ಆಸ್ಥೆಯಿಲ್ಲ. ಇಂದ್ರ ಪದವಿಯನ್ನೂ ಬಿಟ್ಟುಕೊಟ್ಟು ವಾನಪ್ರಸ್ಥವನ್ನು ಸ್ವೀಕರಿಸುವ ನಿರ್ಣಯವನ್ನು ಈಗಾಗಲೇ ಅವನು ಕೈಕೊಂಡಿರುತ್ತಾನೆ. ಶಿಬಿಕಾಯಾನ ವಿಫಲವಾಗುವುದು ನಿಯತಿಯ ಆಣತಿಯಿಂದ. ಅದನ್ನು ನಹುಷ ಸಮಚಿತ್ತವಾಗಿಯೇ ಒಪ್ಪಿಕೊಳ್ಳುತ್ತಾನೆ. ತನಗೆ ತಾನೇ ಅತ್ಯಂತ ಘೋರವಾದ ಶಿಕ್ಷೆಯನ್ನು ವಿಧಿಸಿಕೊಳ್ಳುತ್ತಾನೆ. ಅವನ ಸ್ಥೈರ್ಯ, ಮನೋಬಲ, ನ್ಯಾಯಬುದ್ಧಿ ಶಚಿಯಂಥ ದೇವತೆಗಳನ್ನೂ ಚಕಿತಗೊಳಿಸುತ್ತವೆ. `ಭೋಗವೆಂದರೆ ಅಂಟಿಗಿಂತಲೂ ಹೆಚ್ಚಾಗಿ ಅಂಟಿಕೊಳ್ಳುವ ದೇವತ್ವಕ್ಕಿಂತಲೂ ತ್ಯಾಗವನ್ನೂ ಆರಾಧಿಸುವ ಮನುಷ್ಯತ್ವವು ಹೆಚ್ಚು ಎನ್ನಬೇಕು'. ಮಹಾಭಾರತದಲ್ಲಿ ನಹುಷನ ಕಥೆ `ಅಜಗರಪರ್ವ'ದಲ್ಲಿಯೂ ಮುಂದುವರೆಯುತ್ತದೆ. ಆದರೆ ತಮ್ಮ ಕಾದಂಬರಿಯನ್ನು ಈ ಬಿಂದುವಿನಲ್ಲಿ ಮುಕ್ತಾಯಗೊಳಿಸುವ ಮೂಲಕ ಮಾನವನ ಶ್ರೇಷ್ಠತೆಯನ್ನು ಪ್ರಸ್ತಾಪಿಸುವ ತಮ್ಮ ಉದ್ದೇಶವನ್ನು ದೇವುಡು ಸ್ಪಷ್ಟವಾಗಿಯೇ ಸೂಚಿಸಿದ್ದಾರೆ.

ಮಹಾಕ್ಷತ್ರಿಯದ ನಹುಷನಲ್ಲಿ ಬೆಳವಣಿಗೆಯಿಲ್ಲ. ಚ್ಯವನರ ಅನುಗ್ರಹದಿಂದಾಗಿ ಧರ್ಮಬುದ್ಧಿ ಅವನಲ್ಲಿ ಯಾವಾಗಲೂ ಸ್ಥಿರವಾಗಿಯೇ ಇರುತ್ತದೆ. ಕಾದಂಬರಿಯ ಪ್ರಸಂಗಗಳು ಅವನ ಈ ಶ್ರೇಷ್ಠತೆಯ ನಿದರ್ಶನಗಳಾಗಿ ಮಾತ್ರ ನಮ್ಮ ಅನುಭವಕ್ಕೆ ಬರುತ್ತವೆ. ಮಹಾಬ್ರಾಹ್ಮಣದ ರಚನೆ ಇದಕ್ಕಿಂತ ಭಿನ್ನವಾದದ್ದು. ಕೌಶಿಕ ವಿಶ್ವಾಮಿತ್ರನಾಗಿ ಪರಿವರ್ತನೆ ಹೊಂದುವ ಕ್ರಿಯೆ ಈ ರಚನೆಯ ಕ್ರಮವನ್ನು ನಿರ್ಧರಿಸುತ್ತದೆ. ವಾಮದೇವನೇ ಮೊದಲಾಗಿ ಹಲವಾರು ಋಷಿಗಳು ವಿಶ್ವಾಮಿತ್ರನ ಅಭ್ಯುದಯಕ್ಕೆ ಕಾರಣರಾದರೂ ಅದು ಮುಖ್ಯವಾಗಿ ಅವರ ಸ್ವಂತದ ಸಾಧನೆ, ತಪಸ್ಸಿನ ಸಿದ್ಧಿ. ವಸಿಷ್ಠರಿಂದ ನಂದಿನಿಯನ್ನು ಬಲಪ್ರಯೋಗದಿಂದ ಕೈವಶ ಮಾಡಿಕೊಳ್ಳುವಲ್ಲಿ ಅವನು ಅನುಭವಿಸುವ ಸೋಲಿನಿಂದ ಪ್ರಾರಂಭವಾಗುವ ಕತೆ. ಋಷಿ ಪರಿಷತ್ತಿನಿಂದ ಬ್ರಹ್ಮರ್ಷಿಯೆಂಬ ಪದವನ್ನು ಪಡೆದು ವಸಿಷ್ಠರಿಂದಲೇ ಅದು ಸ್ಥಿರಗೊಳ್ಳುವುದರೊಂದಿಗೆ ಮುಕ್ತಾಯವಾಗುತ್ತದೆ. ವಿಶ್ವಾಮಿತ್ರನ ಪ್ರಗತಿ ಹಂತಹಂತವಾಗಿ ಕಾದಂಬರಿಯಲ್ಲಿ ನಿರೂಪಿತವಾಗಿದೆ. ಈ ಪ್ರಗತಿ ವಿಶ್ವಾಮಿತ್ರನಿಗೆ ಸಾಧ್ಯವಾಗುವುದು ಅವನ ತಪಸ್ಸಿನ ಮೂಲಕ. ದೇವುಡು ಅವರ ಕೃತಿಗಳ ಒಂದು ಎದ್ದು ಕಾಣುವ ವೈಶಿಷ್ಟ್ಯವೆಂದರೆ ವೈದಿಕ ಸಂಸ್ಕೃತಿಯ ಪರಿಭಾಷೆಯನ್ನೇ ಅವರು ಉಪಯೋಗಿಸಿದರೂ ಅದಕ್ಕೆ ಅವರು ಹೊಸ ಅರ್ಥ ತುಂಬುತ್ತಲೇ ಹೋಗುತ್ತಾರೆ. `ತಪಸ್ಸು' ಹಾಗೂ `ಬ್ರಾಹ್ಮಣ' ಈ ಪದಗಳಿಗೆ ಅವರು ಕೊಡುವ ಅರ್ಥಗಳನ್ನು ಗಮನಿಸುವ ಮೂಲಕ ಇದನ್ನು ಉದಾಹರಿಸಬಹುದು. `ತಪಸ್ಸೆಂದರೆ ಬಾಹ್ಯಾಭ್ಯಂತರ ಪ್ರಯತ್ನ ದಾರಿ... ತಪಸ್ಸೆಂದರೆ ಬೀಜವು ವೃಕ್ಷವಾಗುವ ಕೆಲಸ. ಕಾಲ ದೇಶಗಳು

ಸರಿಯಾಗಿದ್ದರಂತೂ ಸರಿ. ಇಲ್ಲದಿದ್ದರೆ ಅದನ್ನೂ ತನಗೆ ಸರಿಮಾಡಿಕೊಳ್ಳಬೇಕು. ತನ್ನ ಸ್ಥಿತಿಯನು ಕಾಪಾಡಿಕೊಂಡು ಮುಂದಿನ ಗತಿಯನ್ನು ತನಗೆ ಬೇಕಾದ ಹಾಗೆ ರೂಪಿಸಿಕೊಳ್ಳಲು ಹೆಣಗಬೇಕು. ಅದು ತಪಸ್ಸು'. ಹಾಗೆಯೇ `ಬ್ರಾಹ್ಮಣ' ಎಂಬ ಪದ ಕೂಡ ಜಾತಿ ಅಥವಾ ವರ್ಣವಾಚಕವಾಗಿರದೆ ಗುಣವಾಚಕವಾದುದು ಎಂಬುದು ಅವರ ಅಭಿಪ್ರಾಯ: `ಸಮಷ್ಟಿಯ ಪ್ರತಿಬಿಂಬವಾದ ವ್ಯಷ್ಟಿದೇಹವು ಯಾವುದೋ ಅದು ಬ್ರಾಹ್ಮಣವು'. ಆದರೆ, ಇಂಥ ಕ್ರಾಂತಿಕಾರಕ ಕಲ್ಪನೆಗಳಿಗೂ ಕೂಡ ಆಧಾರ ಅವರಿಗೆ ಮಹಾಭಾರತದಂಥ ಗ್ರಂಥಗಳಲ್ಲಿಯೇ ದೊರಕಿತು ಎನ್ನುವುದು ಮಹತ್ವದ್ದಾಗಿದೆ. ಮಹಾಬ್ರಾಹ್ಮಣದಲ್ಲಿ `ಅಜಗರಪರ್ವ'ದ ಉಲ್ಲೇಖವಿದೆ. `ಅಜಗರಪರ್ವ'ದಲ್ಲಿ ನಹುಷ ಧರ್ಮರಾಯನಲ್ಲಿ ಜಾತಿಯ ಪ್ರಶ್ನೆಯನ್ನೆತ್ತಿದಾಗ ಅವರೀರ್ವರಲ್ಲಿ ನಡೆಯುವ ಸಂಭಾಷಣೆಯನ್ನಿಲ್ಲಿ ಗಮನಿಸಬಹುದು. `ಬ್ರಾಹ್ಮಣ ಯಾರು?' ಎಂಬ ಪ್ರಶ್ನೆಗೆ ಉತ್ತರವಾಗಿ ಧರ್ಮರಾಯ ಸತ್ಯ, ದಾನ, ಕ್ಷಮೆ, ಶೀಲ, ಅನೃಶಂಸ್ಥ, ತಪ ಹಾಗೂ ದಯೆ ಯಾವನಲ್ಲಿರುವವೋ ಅವರು ಬ್ರಾಹ್ಮಣ ಎಂದು ಹೇಳುತ್ತಾನೆ. `ನೀನು ಹೇಳುವ ಗುಣಗಳು ಎಲ್ಲ ವರ್ಣಗಳಲ್ಲಿಯೂ ಇರುತ್ತವಲ್ಲ?' ಎಂದು ನಹುಷ ಹೇಳಿದಾಗ `ಶೂದ್ರನಲ್ಲಿ ಈ ಲಕ್ಷಣಗಳಿದ್ದರೆ ಅವನು ಶೂದ್ರನೇ ಅಲ್ಲ. ಬ್ರಾಹ್ಮಣನಲ್ಲಿ ಈ ಲಕ್ಷಣಗಳಿಲ್ಲದಿದ್ದರೆ ಅವನು ಬ್ರಾಹ್ಮಣನಲ್ಲ' ಎಂದು ಧರ್ಮರಾಯ ವಿವರಿಸುತ್ತಾನೆ. `ಆಚಾರದಿಂದಲೇ ಬ್ರಾಹ್ಮಣನ ಪರೀಕ್ಷೆಯಾಗುವುದಾದಲ್ಲಿ ಜಾತಿಗೆ ಅರ್ಥವೇ ಉಳಿಯುವುದಿಲ್ಲವಲ್ಲ?' ಎಂದು ನಹುಷ ತನ್ನ ಸಂದೇಹವನ್ನು ಮುಂದಿಟ್ಟಾಗ ಧರ್ಮರಾಯ ಕೊಡುವ ಉತ್ತರ ಮಾರ್ಮಿಕವಾಗಿದೆ. `ವರ್ಣಗಳ ಸಂಕರದಿಂದಾಗಿ ಜಾತಿಯನ್ನು ಪರೀಕ್ಷಿಸುವುದು ಕಷ್ಟದ ಕೆಲಸ. ವಾಕ್, ಮೈಥುನ, ಜನ್ಮ, ಮರಣ ಎಲ್ಲ ಮನುಷ್ಯರಿಗೂ ಸಮಾನವಾದವುಗಳು. ಇದಕ್ಕೆ ಆರ್ಷ ಪ್ರಮಾಣವೂ ಇದೆ. ಆದ್ದರಿಂದ ಶೀಲವೇ ಪ್ರಧಾನ'. ಕರುಣೆ. ವಿಶ್ವಮೈತ್ರಿ, ಲೋಕಕಲ್ಯಾಣ ಇಂಥ ಗುಣಗಳ ಮೂಲಕ ಕ್ಷತ್ರಿಯನಾದ ಕೌಶಿಕ ಬ್ರಹ್ಮರ್ಷಿಯಾಗುತ್ತಾನೆ ಎನ್ನುವುದು ಕಾದಂಬರಿಯ ಆಶಯವಾಗಿದೆ. ವಿಶ್ವಾಮಿತ್ರನ ಶ್ರೇಷ್ಠ ಸಾಧನೆಯಾದ ಗಾಯತ್ರೀ ಮಂತ್ರದ ಪ್ರಾಪ್ತಿಯೂ ಕೂಡಾ ಲೋಕಕಲ್ಯಾಣದ ಉದ್ದೇಶವನ್ನೇ ಹೊಂದಿದೆ. `ಗಾಯತ್ರಿಯನ್ನು ಕಂಡು ಲೋಕಕ್ಕೆ ಸಾರಿ ಪರಮೋಪಕಾರ ಮಾಡಿದ ಮಹಾನುಭಾವನ ಕಥೆ'ಯೆಂದು ದೇವುಡು ಅವರೇ ಮಹಾಬ್ರಾಹ್ಮಣವನ್ನು ವರ್ಣಿಸಿದ್ದಾರೆ. `ಜಾತಿಯಿಂದ ಬರುವ ಗಣವನ್ನು ದೀಕ್ಷೆಯಿಂದಲೂ ಪಡೆಯಬಹುದು' ಎಂದು ತೋರಿಸಿರುವುದು ವಿಶ್ವಾಮಿತ್ರನ ಮಹತ್ಸಾಧನೆ.

ಗಾಯತ್ರೀ ಮಂತ್ರದ ಸಾಕ್ಷಾತ್ಕಾರದೊಂದಿಗೆ ಮಹಾಬ್ರಾಹ್ಮಣ ಮುಕ್ತಾಯಗೊಳ್ಳುತ್ತದೆ. ಮಹಾಕ್ಷತ್ರಿಯದಲ್ಲಿದ್ದಂತೆ ಇಲ್ಲಿಯೂ ಕೂಡ ಮಾನವನ ಶ್ರೇಷ್ಠತೆಯನ್ನು ಬಿಂಬಿಸುವುದೇ ಕಾದಂಬರಿಕಾರರ ಉದ್ದೇಶವಾಗಿದೆ. ಈ ಸಂದರ್ಭದಲ್ಲಿ ವಿ.ಕೃ. ಗೋಕಾಕರ ಭಾರತಸಿಂಧುರಶ್ಮಿಗೂ ಮಹಾಬ್ರಾಹ್ಮಣಕ್ಕೂ ಇರುವ ಅಂತರವನ್ನೂ ಗಮನಿಸಬೇಕು. ಗೋಕಾಕರ ಕಾವ್ಯದಲ್ಲಿ ವಿಶ್ವಾಮಿತ್ರ ದೇವತ್ವದತ್ತ ಏರುವಲ್ಲಿ ಮಾನವನ ಸಂಕೇತವಾಗಿ ಮೂಡಿಬಂದಿದ್ದಾನೆ. ದೇವುಡು ಅವರ ಕಾದಂಬರಿಯಲ್ಲಿ ಅವನು ಮನುಷ್ಯನಾಗಿಯೇ ಉಳಿದು ಮಾನವೀಯ ಸಾಧ್ಯತೆಗಳನ್ನು ಸಂಕೇತಿಸಿದ್ದಾನೆ. ಜಾತಿಯ ಪ್ರಶ್ನೆಯನ್ನು ಎದುರಿಸಿ ಅದಕ್ಕೆ ಪರಿಹಾರ ಸೂಚಿಸುವ ಮೂಲಕ ಮಹಾಬ್ರಾಹ್ಮಣ ಇಂದಿಗೂ ಪ್ರಸ್ತುತವಾಗುತ್ತದೆ.

ಮಹಾಬ್ರಾಹ್ಮಣ ಹಾಗೂ ಮಹಾಕ್ಷತ್ರಿಯಗಳಲ್ಲಿ ದೇವ-ಮಾನವ ಸಂಭಂಧಗಳಲ್ಲಿ ತೊಡಕುಗಳು ಕಂಡುಬರುತ್ತವೆ. ಆದರೆ ದೇವುಡು ಅವರ ಕೊನೆಯ ಕಾದಂಬರಿ ಮಹಾದರ್ಶನದಲ್ಲಿ ಈ ತೊಡಕುಗಳು ಮಾಯವಾಗಿ `ಪರಸ್ಪರಂ ಭಾವಯಂತಃ' ಎಂಬ ಉಕ್ತಿಯಲ್ಲಿರುವ ಸಾಮರಸ್ಯ ತಲೆದೋರುತ್ತದೆ. ಯಾಜ್ಞವಲ್ಕ್ಯನ ಅಸಾಮಾನ್ಯ ಸಾಧನೆಯ ಹಿಂದೆ ದೇವತೆಗಳ ಕೈವಾಡವೂ ಇದೆ. ಯಾಜ್ಞವಲ್ಕ್ಯ ದೇವರಾತ–ಆಲಂಬಿದೇವಿಯವರ ಮಗನಾಗಿ ಹುಟ್ಟಿದರೂ ವಿಶ್ವೋದ್ಧಾರಕ್ಕಾಗಿ ಒಂದು ಸಂಹಿತೆ, ಒಂದು ಬ್ರಾಹ್ಮಣ, ಒಂದು ಉಪನಿಷತ್ತಿನ ಅವತಾರವಾಗಬೇಕು' ಎಂದು ನಿರ್ಧರಿಸುವವರು ದೇವತೆಗಳು, ಋಷಿಗಳು ಹಾಗೂ ಪಿತೃಗಳು. ಆದಿತ್ಯ. ಇಂದ್ರ ಮೊದಲಾದ ದೇವತೆಗಳು ರಹಸ್ಯ ವಿದ್ಯೆಗಳನ್ನು ಯಾಜ್ಞವಲ್ಕ್ಯನಿಗೆ ಅನುಗ್ರಹಿಸಿ ಅವನು `ವೇದಪುರುಷ'ನಾಗುವಂತೆ,` ಸರ್ವಜ್ಞ'ನಾಗುವಂತೆ ನೋಡಿಕೊಳ್ಳುತ್ತಾರೆ. ಯಾಜ್ಞವಲ್ಕ್ಯನ ಸಾಧನೆಯಲ್ಲಿ ಅವನ ತಂದೆ ದೇವರಾತನ. ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸುವ ವೈಶಂಪಾಯನನ. ತನ್ನ ಆಶ್ರಮದಲ್ಲಿ ಅವನಿಗೆ ಆಶ್ರಯ ಕೊಡುವ ಉದ್ದಾಲಕನ ಪಾತ್ರ ಸೀಮಿತವಾದದ್ದು ಬ್ರಹ್ಮವಿದ್ಯೆ–ಶ್ರೌತವಿದ್ಯೆ, ಶ್ರೇಯಸ್ಸು–ಪ್ರೇಯಸ್ಸು ಮೊದಲಾದ ದ್ವಂದ್ವಗಳಲ್ಲಿಯ ವಿರೋಧವನ್ನು ಪರಿಹರಿಸಿ ಅವುಗಳಲ್ಲಿ ಐಕ್ಯತೆಯನ್ನು ಸಾಧಿಸುವುದು. ಯಾಜ್ಞವಲ್ಕ್ಯನ ಮುಖ್ಯ ಸಾಧನೆ. ಮಹಾದರ್ಶನದ ಉದ್ದಕ್ಕೂ ಯಾಜ್ಞವಲ್ಕ್ಯನ ಕಾರ್ಯದ ಹಿಂದಿರುವ ಲೋಕೋದ್ಧಾರದ ಉದ್ದೇಶಕ್ಕೆ ಉತ್ತರ ದೊರೆತಿದೆ. ವೈದಿಕ ಸಂಸ್ಕೃತಿಯೆಂದರೆ ಕೇವಲ ಆತ್ಮೋದ್ಧಾರಕ್ಕೆ ಸಂಬಂಧಿಸಿದ್ದು ಎಂದು ಭಾವಿಸುವವರು ಈ ಅಂಶವನ್ನು ಅವಶ್ಯವಾಗಿ ಗಮನಿಸಬೇಕು.

ಆದ್ಯ ರಂಗಾಚಾರ್ಯ ಮಾಸ್ತಿ ಮೊದಲಾದ ಕನ್ನಡದ ಧೀಮಂತ ಲೇಖಕರೂ ಪಾಶ್ಚಾತ್ಯ ಮೂಲದ Rationalismನ ಪಾತ್ರ ಪ್ರಭಾವಕ್ಕೊಳಗಾದವರು. ಆದ್ಯರ ಕೃಷ್ಣನಲ್ಲಿ, ಮಾಸ್ತಿಯವರ ರಾಮನಲ್ಲಿ ಈ ಪ್ರಭಾವದ ಚಿಹ್ನೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಆದರೆ Rationalism ದೇವುಡುರವರನ್ನು ಪ್ರಭಾವಿಸಲಿಲ್ಲ. ಪುರಾಣದ ಕತೆಗಳನ್ನಾಗಲಿ, ಪೌರಾಣಿಕ ವ್ಯಕ್ತಿಗಳನ್ನಾಗಲಿ ಯಜ್ಞ, ತಪಸ್ಸು ಮೊದಲಾದ ಕಲ್ಪನೆಗಳನ್ನಾಗಲಿ ಅವರು ಸಾಂಕೇತಿಕ ಚೌಕಟ್ಟಿನಲ್ಲಿ ಮಾತ್ರ ನೋಡುವುದಿಲ್ಲ. ಇವೆಲ್ಲ ಅವರಿಗೆ ವಾಸ್ತವದಷ್ಟೇ ನಿಜವಾದ ಸಂಗತಿಗಳು. ತೀರ ಸಹಜವೆನ್ನುವಂತೆ ಅವರು ಇವನ್ನು ಸ್ವೀಕರಿಸುತ್ತಾರೆ. ತಮ್ಮ ಅದ್ಭುತ ಕಲ್ಪನಾ ಶಕ್ತಿಯಿಂದ ಚಿತ್ರಿಸುತ್ತಾರೆ. ಇದು ಅವರನ್ನು ಉಳಿದ ಲೇಖಕರಿಂದ ಬೇರ್ಪಡಿಸುವ ಅಂಶ. ಮಹಾಬ್ರಾಹ್ಮಣದ ಮುನ್ನುಡಿಯಲ್ಲಿ ರಹಸ್ಯವಿದ್ಯೆಗಳ ಬಗ್ಗೆ ಅವರು ಹೇಳುವ ಮಾತನ್ನು ಈ ಹಿನ್ನೆಲೆಯಲ್ಲಿಯೇ ನೋಡಬೇಕು. `ಈ ವಿದ್ಯಾ ಪ್ರತೀಕಗಳಲ್ಲಿ ಕೆಲವು ಸ್ವಾನುಭವ. ಕೆಲವು ಪರಾನುಭವ. ಕೆಲವು ಬರೆಯುತ್ತಿದ್ದಾಗ ತಾವಾಗಿ ಬಂದವು' ಶ್ರುತಿ, ಸ್ಮೃತಿ, ಅನುಭವ-ಇವುಗಳನ್ನು ಜ್ಞಾನಸಾಧನಗಳೆಂದು ದೇವುಡು ಗುರುತಿಸುತ್ತಾರೆ. ಅವರ ಕಾದಂಬರಿಗಳು ಇಂಥ ಜ್ಞಾನದ ಫಲಗಳಾಗಿವೆಯೇ ಹೊರತು ಕೇವಲ ಕಲ್ಪನಾ ಸೃಷ್ಟಿಗಳಲ್ಲ.

★

ದೇವುಡು ನರಸಿಂಹ ಶಾಸ್ತ್ರಿ : `ಮಹಾಬ್ರಾಹ್ಮಣ'

ಪ್ರೊ|| ಜಿ. ವೆಂಕಟಸುಬ್ಬಯ್ಯ

`ಮಹಾಬ್ರಾಹ್ಮಣ', ಕಾದಂಬರಿಯ ರೂಪದಲ್ಲಿರುವ ಆತ್ಮದ ಅಭಿವ್ಯಕ್ತಿಯ ನಿರೂಪಣೆ; ಭಾರತದ ಪುರಾಣಪ್ರಪಂಚದ ಬಹು ಪ್ರಸಿದ್ಧವಾದ ವಿಚಿತ್ರ, ವಿಶಿಷ್ಟ ಕಥೆ; ಒಂದು ಜೀವದ ಆಸೆ ಆಕಾಂಕ್ಷೆಗಳ, ಚಿಂತನೆ ಪರಿವರ್ತನೆಗಳ, ಸಾಧನೆಸಿದ್ಧಿಗಳ ಕಥೆ; ಭೂಮಿಯಲ್ಲಿ ಮೊಳೆತ ಆಸೆ ಬಾನಿನಲ್ಲಿ ಫಲ ಬಿಡುವ ಕಥೆ; ಮಹಾತ್ವಾಕಾಂಕ್ಷೆಯ ಎತ್ತರ ಬಿತ್ತರಗಳ ಕಥೆ. ಈ ಕಾದಂಬರಿಯನ್ನು ಸಾಮಾನ್ಯವಾದ ಸಾಮಾಜಿಕ ಆಗುಹೋಗುಗಳ ಮಾನದಂಡದಿಂದ ಅಳೆಯುವುದಕ್ಕಾಗುವುದಿಲ್ಲ. ಒಟ್ಟು ಕಾದಂಬರಿಯನ್ನೇ ಒಂದು ಪ್ರತಿಮೆಯನ್ನಾಗಿ ಅರ್ಥೈಸಿಕೊಳ್ಳಲು ಪ್ರಯತ್ನಪಟ್ಟರೆ ಮಾತ್ರ ಲೇಖಕರ ಉದ್ದೇಶದ ಆಳ ಅಗಲಗಳು ನಮ್ಮ ಮನಸ್ಸಿಗೆ ತಟ್ಟುತ್ತವೆ.

ಸಂಸ್ಕೃತ ಸಾಹಿತ್ಯದಲ್ಲಿ ಅಲ್ಲಲ್ಲಿ ಕಾಣಬರುವ ವಿಶ್ವಾಮಿತ್ರನೆಂಬ ಋಷಿಯ ಜೀವನ, ವೇದ ಉಪನಿಷತ್ತು ಪುರಾಣ ಮುಂತಾದ ಕಥೆಗಳಲ್ಲಿ ಬಹಳ ವ್ಯಾಪಕವಾಗಿ ವೈವಿಧ್ಯಮಯವಾಗಿ ಚಿತ್ರಗೊಂಡಿದೆ. ದೇವುಡು ಅವರೇ ಈ ಬಗ್ಗೆ ಹೀಗೆ ಹೇಳಿದ್ದಾರೆ: "ಋಗ್ವೇದ, ಯಜುರ್ವೇದ, ಐತರೇಯ ಕೌಷೀತಕೀ ಗೋಪಥ, ಶಾಕ್ಯಾಯನ ಷಡ್ವಿಂಶ ಬ್ರಾಹ್ಮಣಗಳು, ರಾಮಾಯಣ, ಮಹಾಭಾರತ, ಹರಿವಂಶ, ವಿಷ್ಣುಪುರಾಣ, ವಾಯುಪುರಾಣ, ಯೋಗವಾಸಿಷ್ಠ ಇವುಗಳಲ್ಲಿ ಬಂದಿದೆ. ಆದರೂ ರಾಮಾಯಣದ ಕಥೆಯನ್ನು ಮುಖ್ಯವಾಗಿಟ್ಟುಕೊಂಡು, ಮಿಕ್ಕ ಕಡೆಗಳಲ್ಲಿ ಸಿಕ್ಕುವ ಅಂಶಗಳನ್ನು ಕಥೆಯನ್ನು ಮುಖ್ಯವಾಗಿಟ್ಟುಕೊಂಡು, ಮಿಕ್ಕ ಕಡೆಗಳಲ್ಲಿ ಸಿಕ್ಕುವ ಅಂಶಗಳನ್ನು ಅದರಲ್ಲಿ ಸಂದರ್ಭೋಚಿತವಾಗಿ ಸೇರಿಸಿಕೊಂಡು ಹೆಣೆದಿರುವ ಕಥೆ ಈ `ಮಹಾಬ್ರಾಹ್ಮಣ.'

ದೇವುಡು ಅವರು ಕೇವಲ ಕಥೆಗಾಗಿ ಈ ಭಾಗಗಳನ್ನು ಉಪಯೋಗಿಸಿಕೊಂಡಿದ್ದರೂ ಅವರ ಅಭ್ಯಾಸದಲ್ಲಿ ವೇದೋಪನಿಷತ್ತುಗಳೂ ನಮ್ಮ ಅನೇಕ ಸ್ಮೃತಿಗಳೂ ಹಾಸು ಹೊಕ್ಕಾಗಿ ಹೆಣೆದುಕೊಂಡಿದ್ದುದರಿಂದಲೂ ಯೋಗಾಭ್ಯಾಸದ ಪರಿಚಯವನ್ನು ಅವರು ರೂಢಿಸಿಕೊಂಡಿದ್ದುದರಿಂದಲೂ ಈ ಕಾದಂಬರಿಯಲ್ಲಿ ಸಾಮಾನ್ಯರಿಗೆ ವೇದ್ಯವಾಗದ ಅನೇಕ ವಿಷಯಗಳು ಕೂಡಿಕೊಂಡಿವೆ. ಅಲ್ಲದೆ ಜಾತಿಬ್ರಾಹ್ಮಣನು ನಿತ್ಯಕರ್ಮಗಳಲ್ಲಿ ಉಪಯೋಗಿಸುವ ಎಷ್ಟೋ ಶಬ್ದಗಳ ಪ್ರಯೋಗವು ಆ ಶಬ್ದಗಳ ಪರಿಚಯವಿಲ್ಲದವರನ್ನು ದಿಗ್ಭ್ರಾಂತಿಗೊಳಿಸುತ್ತದೆ. ಕೇವಲ ನಿಘಂಟುವಿನಿಂದ ಆ ಶಬ್ದಗಳ ವ್ಯಾಪಕಾರ್ಥವು ಹೊಳೆಯುವುದಿಲ್ಲ.

ಚಾರಿತ್ರಿಕ ದೃಷ್ಟಿಯಿಂದ ಈ ಕಥೆಯನ್ನು ಓದುವವರಿಗೆ ಇದೊಂದು ಒಗಟಾಗುತ್ತದೆ. ಎರಡು ಮೂರು ಸಾವಿರ ವರ್ಷಗಳ ಅಂತರದಲ್ಲಿ ಬಾಳಿರಬಹುದಾದ ಮಹಾತೇಜಸ್ವಿಗಳಾದ ಋಷಿಗಳನ್ನೆಲ್ಲ ಕಥೆಯಲ್ಲಿ ಒಂದೇ ಕಾಲದಲ್ಲಿ ಕಲೆಹಾಕಿದಂತೆ ಕಂಡುಬರುತ್ತದೆ. ಆದರೆ ಗ್ರಂಥದಲ್ಲಿ ಇಂಥ ಅಸಂಬದ್ಧತೆಗಳಿಗೆಲ್ಲ ಉತ್ತರಕೊಡುವ ಪ್ರಯತ್ನ ನಡೆದಿದೆ. ಆ ಪ್ರಯತ್ನ ಎಷ್ಟು ಸಫಲವಾಗಿದೆಯೆಂಬುದನ್ನು ಆಯಾ ಓದುಗನ ವಿಮರ್ಶದೃಷ್ಟಿ ಬೇರೆಬೇರೆಯಾಗಿ ಪರ್ಯಾಲೋಚಿಸಬೇಕಾಗುತ್ತದೆ. ಒಟ್ಟಿನಲ್ಲಿ ಏನಾದರೂ ಫಲ ದಕ್ಕುತ್ತದೆಯೇ ಎಂಬುದು ಮುಖ್ಯವಾದ ಪ್ರಶ್ನೆ.

ಈ ಲೇಖನದಲ್ಲಿ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ನಡೆದಿದೆ.

ಈ ಕಥೆಗೆ ಪ್ರಾರಂಭದ ಹಿನ್ನೆಲೆಯೇ ಥವಸಿಷ್ಠಾಶ್ರಮದ ಪುಣ್ಯಾವರಣ. ಇಂದ್ರದತ್ತವಾದ `ನಂದಿನಿ'ಯ ಸ್ವಸಂತೋಷದ ಪರಿಣಾಮವಾಗಿ ವಿಶ್ವಾಮಿತ್ರನ ರಾಜಪರಿವಾರಕ್ಕೆಲ್ಲ ಅತಿಥಿಪೂಜೆ ನಡೆದಿದೆ. ನಂದಿನಿ ಸುರಭಿಯ ಮಗಳು; ವಸಿಷ್ಠನ ಹೋಮಧೇನು. ನಂದಿನಿಯೂ ತಾಯಿಯಂತೆ ಮಹಾಮಹಿಮಾವೃತಳು. ದೊರೆತ ಆದರೋಪಚಾರಗಳಿಂದ ವಿಶ್ವಾಮಿತ್ರನ ಮನಸ್ಸು ಸಂತುಷ್ಟವಾದರೂ, ಋಷಿಯ ಬಳಿಯಿರುವ ಮಹಿಮಾಸಂಪನ್ನವಾದ ಆ ಧೇನುವನ್ನು, ಅದು ಬ್ರಹ್ಮಸ್ವವಾದರೂ ತನ್ನದನ್ನಾಗಿ ಮಾಡಿಕೊಳ್ಳಬೇಕೆಂಬ ರಾಜಸದಿಂದ ಅದು ಸಂದಷ್ಟವಾಗಿದೆ. ರಾಜನ ಮನಸ್ಸು ಚಿಂತೆಗೊಳಗಾದರೂ ಬಹು ಬೇಗ ನಿರ್ಧಾರವನ್ನು ಕೈಗೊಂಡಿತು: ರಾಜನ ಬಳಿ ಇರಬೇಕಾದ ಎಲ್ಲ ಸಮೃದ್ಧಿಯನ್ನೂ ತಾನು ಪಡೆಯುವುದು ಅಪಹಾರವಾಗಲಾರದು. ನಿರ್ಧಾರವಾದುದೇ ತಡ ಬ್ರಹ್ಮರ್ಷಿಯು ತಾಮಸದ ವೇಳೆಯಲ್ಲಿ ಬರುವುದು ಉಚಿತವಲ್ಲವೆಂದರೂ ಕೇಳದೆ ಋಷಿದರ್ಶನಕ್ಕಾಗಿ ಕೌಶಿಕನು ಮುನ್ನುಗ್ಗಿಬಿಟ್ಟನು. ಹೀಗೆ ಮಾಡಿದುದು ಭವಿಷ್ಯದಲ್ಲಿ ನಡೆಯುವ ಅಪಘಾತದ ಪೀಠಿಕೆಯೆಂಬುದನ್ನು ದೇವುಡು ಹೀಗೆ ಚಿತ್ರಿಸುತ್ತಾರೆ:

"ರಾಜನು ಅಷ್ಟು ದೂರ ಹೋಗುತ್ತಿದ್ದ ಹಾಗೆಯೇ ಸಮಾರಾಧನೆಯ ವಿಶೇಷ ಭೋಜನಕ್ಕಾಗಿ ಬಂದಿದ್ದ ಭಾರಿಯ ಗೃಧ್ರವೊಂದು ಮೇಲಕ್ಕೆದ್ದು ಹೋಗಿ ಫಲಭಾರ ನಮ್ರವಾಗಿದ್ದ ಶಾಖೆಯ ಮೇಲೆ ಕುಳಿತುಕೊಂಡಿತು. ಅದರ ಭಾರವನ್ನು ತಡೆಯಲಾರದೆಯೇ ಅಥವಾ ಇನ್ನೇನೋ, ಆ ಶಾಖೆಯು ಮುರಿದುಬಿತ್ತು."

ಮೂವತ್ತು ವರುಷದ ಹಿಂದಿನ ಬರವಣಿಗೆ ನಿಜ. ಆದರೆ ಈ ಅಪಶಕುನದ ಅರ್ಥ ವ್ಯಾಪ್ತಿಯನ್ನು ವಿಚಾರಿಸಿದಂತೆಲ್ಲ ಈ ಕಾದಂಬರಿಯ ಉದ್ವಗಲಕ್ಕೆ ಈ ಗೃಧ್ರ, ಈ ಫಲಭಾರವಿನಮ್ರತರು, ಅದು ಮುರಿದು ಬೀಳುವುದು ಈ ಚಿತ್ರದ ಸ್ಪಷ್ಟ ಅನ್ವಯ ಬೆಳೆಯುತ್ತಾ ಹೋಗುತ್ತದೆ.

ವಿಶ್ವಾಮಿತ್ರನ ಈ ಐಶ್ವರ್ಯಸಂಗ್ರಹ ದುರಾಲೋಚನೆಯಲ್ಲಿದೆ ಕಥೆಯ ಬೀಜ. ಸಾಮಾನ್ಯ ಮಾನವನೇ ವಸ್ತುಸಂಗ್ರಹಕ್ಕೆ ಆಸೆ ಪಡುವಾಗ, ಮಹಾರಾಜನಾದ ಕೌಶಿಕನ ಆಸೆಯಲ್ಲಿ ಅಕ್ರಮವಾದುದೇನೂ ಇಲ್ಲವೆನ್ನಿಸುತ್ತದೆ. ಆದರೆ ಅಥವನು ವಸಿಷ್ಠನನ್ನು ಸಂದರ್ಶಿಸಿದ ಸನ್ನಿವೇಶದ ವರ್ಣನೆಯಲ್ಲಿ ದೇವುಡು ಚಿತ್ರವನ್ನು ಮುಂದುವರಿಸಿಕೊಂಡು ಹೋಗುತ್ತಾರೆ.

"ವೀರಪುಂಗವನು ಜ್ಞಾನಿಪುಂಗವನ ಬಳಿಗೆ ಬಂದಿದ್ದಾನೆ. ಒಂದು ತನ್ನ ಮುಂದಿರುವುದನ್ನು ತನಗೇನೇನು ಅಡ್ಡಿ ಬಂದರೆ ಅದೆಲ್ಲವನ್ನೂ ಕಿತ್ತೆಸೆದು ನುಗ್ಗುವುದಕ್ಕೆ ಸಿದ್ಧವಾಗಿರುವ ಝುಂಝಾವಾತ; ಇನ್ನೊಂದು ಏನು ಬಂದರೂ ಬರಲಿ ಎಂದು ಜಗ್ಗದೆ ತನ್ನ ತೂಕದಲ್ಲಿ ನಂಬುಗೆಯನ್ನಿಟ್ಟುಕೊಂಡು ಅಲ್ಲಾಡದೆ ನಿಂತಿರುವ ಪರ್ವತೇಂದ್ರ."

ಈ ಇಬ್ಬರ ನಡುವೆ ಮಾತುಕಥೆ ನಡೆದು "ಬೇಸಂಗೆಯ ನದಿಯಂತೆ ಕೃಶವಾಗಿದ್ದರೂ ನಿರ್ಮಲವಾದ" ಧ್ವನಿಯಲ್ಲಿ ವಸಿಷ್ಠರು ಎಷ್ಟು ಬುದ್ಧಿವಾದ ಹೇಳಿದರೂ, "ಆಗಲಿ, ಪರೀಕ್ಷೆಯು ನಡೆದು ಹೋಗಲಿ" ಎಂದು ಕೌಶಿಕನು ಆಶ್ರಮದಿಂದ ಹೊರಟುಹೋಗುತ್ತಾನೆ, ತ್ರಿಕಾಲಜ್ಞಾನಿಗಳಾದ ವಸಿಷ್ಠರಿಗೆ ಇದೆಲ್ಲ ಗೊತ್ತಾಗಿದೆ; ಪತ್ನಿಯಾದ ಅರುಂಧತಿಗೆ ಆಶ್ರಮದಲ್ಲಾಗುವ ರಕ್ತಪಾತದ ಪೂರ್ವಸೂಚನೆಯನ್ನು ಕೊಟ್ಟಿದ್ದಾರೆ, ಆಗಲೇ.

ಈ ಕಥೆಯಲ್ಲಿ `ನಂದಿನಿ'ಯ ಮಾತನಾಡುತ್ತಾಳೆ; ಎಷ್ಟೇ ಆಗಲಿ ದೇವಲೋಕದ ಧೇನು ವಲ್ಲವೆ? ಸಂಸ್ಕೃತ ಕವಿಗಳು ಹೀಗೆ ಸುರಭಿಯ ಮೂಲಕ ಮಾತನಾಡಿಸಿಲ್ಲವೆ? ರಾಜನ ಅರಮನೆಗೆ ಬರಬೇಕೆಂಬ ರಾಜಪುರೋಹಿತನ ಮಾತಿಗೆ ನಂದಿನಿ ಹೀಗೆ ಉತ್ತರ ಕೊಡುತ್ತಾಳೆ: "ಬ್ರಹ್ಮದತ್ತವಾದುದನ್ನು ಹಿಂತಿರುಗಿ ತೆಗೆದುಕೊಳ್ಳಲು ಅಥವಾ ಅನ್ಯಥಾ ವಿನಿಯೋಗಿಸಲು ದೇವೇಂದ್ರನಿಗೂ ಅಧಿಕಾರವಿಲ್ಲ... ನನ್ನನ್ನು ಅಪೇಕ್ಷಿಸುವುದಕ್ಕಿಂತ ಮುಂಚೆ, ಈ ದಾನಕ್ಕೆ ಬಂಧವಿಮೋಚನೆಯಾಗಿದೆಯೇ ಎನ್ನುವುದನ್ನು ಗಮನಿಸಬೇಕಾಗಿತ್ತು." ಪುರೋಹಿತನು ನಿರುತ್ತರನಾದಾಗ ರಾಜನ ದಳವಾಯಿಯೇ ಆಗಮಿಸಿದನು. ಅವನು ಹೇಳಿದನು: `ತಾಯೆ, ರಾಜಾಜ್ಞೆಯನ್ನು ಗೌರವಿಸಲೇಬೇಕೆಂದು, ತಮ್ಮನ್ನು ಸರ್ವವಿಧದಲ್ಲಿಯೂ ಕೇಳಿಕೊಳ್ಳಬೇಕೆಂದು ನನಗೆ ಆಜ್ಞೆಯಾಗಿದೆ." ನಂದಿನಿಯ ಉತ್ತರವಿದು: "ಮಾಡಬಾರದ ಅಪ್ಪಣೆಯನ್ನು ಮಾಡಿರುವ ಅರಸನ ಅಪ್ಪಣೆಯು ಜೀವನ್ಮೃತವಾದಂತೆ. ಅದನ್ನು ಗೌರವಿಸುವುದೆಂತು?" ಹೀಗೆ ಈ ಕಾದಂಬರಿಯಲ್ಲಿ ನಡೆಯುವ ಮಾತು ವಾದವಿವಾದಗಳಲ್ಲಿ ಧರ್ಮವನ್ನು ಕುರಿತ ಸೂಕ್ಷ್ಮ ವಿಷಯಗಳು ಪ್ರವೇಶಿಸಿ ಓದುಗನನ್ನು ಚಿಂತನೆಗೆ ಹಾಯಿಸುತ್ತವೆ.

ಮಿಕ್ಕುದೇನು! ಯುದ್ಧವೇ ಮೊದಲಾಯಿತು. ನಂದಿನಿಯ ರೋಮಗಳು ಉದುರಿದಾಗ, ಅವುಗಳಿಂದ ಅನೇಕಾನೇಕ ಕಾಡುಜನರು ಉದ್ಭವಿಸಿ, ಅವರು ಕೌಶಿಕನ ಸೇನಾ ಸಮೂಹವನ್ನು ನಿರ್ನಾಮ ಮಾಡಿಬಿಟ್ಟರು. "ಯಾವ ಯುದ್ಧದಲ್ಲೂ ಹಿಂತೆಗೆಯದ ಕ್ಷತ್ರಿಯವೀರನು ಹೆದರಿ ಜೀವಗಳ್ಳನಾಗಿ ಓಡಿಹೋದನು."

ಇದು ಕಾದಂಬರಿಯ ಮೊದಲ ಘಟ್ಟ. ಕತೆಗಾರರು ಇಲ್ಲಿ ಕಾಲಮಾನದ ಮಾತನಾಡುತ್ತಾರೆ. ಕ್ಷಾತ್ರವು ಬ್ರಹ್ಮನನ್ನು ನಿರಾಕರಿಸುವ ಕಾಲ ಬಂದಿದೆ ಎನ್ನುತ್ತಾರೆ. ಈ ಮಾತಿನಲ್ಲಿ ವ್ಯಕ್ತಿಯ ಬೆಳವಣಿಗೆಯಲ್ಲಿನ ಒಂದು ಸ್ತರವನ್ನು ಸೂಚಿಸುವಂತೆ ಕಂಡುಬರುತ್ತದೆ. ಪುಣ್ಯಾಶ್ರಮವೇ ರಕ್ತಪಾತವನ್ನು ಅಪೇಕ್ಷಿಸಿತೆಂಬ ಭಾವನೆ, ಯುದ್ಧದಲ್ಲಿ ಆಯಾಸಗೊಂಡು ಬಂದ ನಂದಿನಿಗೆ ಅರುಂಧತಿಯು ಒಂದು ಹಿಡಿ ಕಡ್ಡಿಯನ್ನು ಇಳಿತೆಗೆಯುವ ದೃಶ್ಯ, ವಸಿಷ್ಠರು ಈ ಎಲ್ಲ ಅನಾಹುತವನ್ನೂ ಕುರಿತು "ನಿನಗೆ ಬೇಕಾದುದನ್ನು ತಪಸ್ಸಿನಿಂದ ಸಾಧಿಸು ಎಂದು ನಾನು ಹೇಳಿದಾಗ ಆ ರಾಜನ ಮನಸ್ಸು ಒಪ್ಪಲಿಲ್ಲ; ಅದನ್ನು ಸುಟ್ಟು ಹದಮಾಡುವುದಕ್ಕೆ ಈ ನಾಶ, ಈ ಆಕ್ರೋಶ, ಈ ಕ್ರೋಧ ಇಷ್ಟೂ ಬೇಕಾಯಿತು; ನೊಂದು ಬೆಂದ ಬಗೆ ಈಗ ತಪಸ್ಸಿಗೆ ಸಿದ್ಧವಾಗಿದೆ" ಎಂದು ಅರುಂಧತಿಗೆ ಹೇಳುವ ಮಾತಿನಲ್ಲಿ ಕಾಣುವ ತ್ರಿಕಾಲಜ್ಞಾನಿಯ ಲೋಕಕಲ್ಯಾಣಸಾಧನೆಯ ದೃಷ್ಟಿ—ಇವೆಲ್ಲ ಮನಸ್ಸಿಗೆ ಹಿಡಿಯುವಂತೆ ಚಿತ್ರಿತವಾಗಿವೆ. ಇಲ್ಲಿಗೆ ಮೊದಲ ಘಟ್ಟ ಮುಕ್ತಾಯವಾಗುತ್ತದೆ. ಇಲ್ಲಿನಿಂದ ಮುಂದೆ ಈ ಮಹಾನಾಟಕದ ಇತರ ದೃಶ್ಯಗಳು ತೆರೆಯುತ್ತಾ ಹೋಗುತ್ತವೆ.

ಕೌಶಿಕನನ್ನು ಮಹಾಬ್ರಾಹ್ಮಣನನ್ನಾಗಿ ಮಾಡಬೇಕಾದ ದೂರಾಲೋಚನೆಯನ್ನು ಸ್ಥಿರಮಾಡಿಕೊಂಡೇ ವಸಿಷ್ಠರು ಆ ಮಹಾಕಾರ್ಯದ ಎಲ್ಲ ಅಂಗಗಳನ್ನೂ ಅನುಕೂಲವಾಗುವಂತೆ ಸಂಧಾನ ಮಾಡುವುದರಲ್ಲಿ ಈಗ ನಿರತರಾಗುತ್ತಾರೆ. ಆದರೆ ಯಾರಿಗೂ ಈ ನಾಟಕ ಸಂವಿಧಾನದ ಪೂರ್ಣ ದೃಷ್ಟಿಯಿಲ್ಲ, ಅವರೊಬ್ಬರನ್ನು ಬಿಟ್ಟು. ಕಾಲಕ್ರಮದಲ್ಲಿ ಒಂದೊಂದು ಪರದೆ ತೆರೆಯುವಾಗಲೆಲ್ಲ ಒಂದೊಂದು ಅಂಶ ನೋಟಕರಿಗೆ ಪ್ರಕಟವಾಗುವಂತೆ ಅವರು ಈ ನಾಟಕವನ್ನು ಯೋಚಿಸಿ ಅದರ ಸೂತ್ರಧಾರರಾಗಿ ವ್ಯವಹಾರ ಮಾಡುತ್ತಾರೆ.

ಇನ್ನು ಎರಡನೆಯ ದೃಶ್ಯದಲ್ಲಿ ಕೌಶಿಕನು ರುದ್ರಶಕ್ತಿಯನ್ನು ಸಂಪಾದಿಸಬೇಕು. ಅದಕ್ಕೆ ಮಾರ್ಗದರ್ಶಕನಾದ ಒಬ್ಬ ಗುರು ಬೇಕು. ವಸಿಷ್ಠರು ತಮ್ಮ ಶಿಷ್ಯನಾದ ವಾಮದೇವನನ್ನು ಈ ಕಾರ್ಯಕ್ಕೆ ನಿಯೋಜಿಸುತ್ತಾರೆ. ಅವರು ವಾಮದೇವನಿಗೆ ಹೇಳುವ ಈ ಮಾತುಗಳಲ್ಲಿ ಇದು ಸ್ಪಷ್ಟವಾಗುತ್ತದೆ: "ವಾಮದೇವ, ಪ್ರಕೃತಿಯ ಹಾದಿಯಲ್ಲಿರುವ ಅಡ್ಡಿಗಳನ್ನು ತೆಗೆದು ಆಕೆಯ ಕಾರ್ಯವು ಮುಂದುವರಿಯಲು ಸಹಾಯ ಮಾಡಬೇಕಾದುದು ಬ್ರಾಹ್ಮಣನ ಧರ್ಮ. ಅದರಿಂದ ಪ್ರಕೃತಿಯು ರುದ್ರಿಯಾಗಿ ಬಂದರೂ ಸ್ವಾಗತಿಸೋಣ. ಜಗತಿಯ ಹಿತಕ್ಕಾಗಿ ತಪಸ್ಸು ಮಾಡುವ ಬ್ರಾಹ್ಮಣನು ತನ್ನ ಪ್ರಿಯಾಪ್ರಿಯಗಳನ್ನು ಗಮನಿಸಬಾರದು." ಇಷ್ಟನ್ನು ಸೂಚಿಸಿ ಕೌಶಿಕನು ತಪಸ್ಸಿಗಾಗಿ ಹಿಮಾಲಯಕ್ಕೆ ಬರುವ ವೇಳೆಗೆ ವಾಮದೇವನು ಅಲ್ಲಿ ಸಿದ್ಧನಾಗಿದ್ದು, ಆತನು ಬಂದಾಗ ಅವನಿಗೆ ಎಲ್ಲ ಅಸ್ತ್ರಗಳೂ ಇರುವುದು ರುದ್ರನಲ್ಲಿ ಎಂದು ತಿಳಿಸಿ, ಆ ರುದ್ರನ ಆರಾಧನ ಕ್ರಮವನ್ನೂ ಅವನಿಗೆ ಹೇಳಿಕೊಡುವಂತೆ ಮಾರ್ಗದರ್ಶನ ಮಾಡುತ್ತಾರೆ. ವಾಮದೇವನಿಗೆ ರುದ್ರಾಸ್ತ್ರಗಳ ಸಂಪಾದನೆಯಿಂದ ವಸಿಷ್ಠನ ಆಶ್ರಮದ ಮೇಲೆ ಆಗುವ ಪರಿಣಾಮದ ಕಡೆಗೆ ದೃಷ್ಟಿ ಹರಿಯಿತು. ವೇದನೆಯಿಂದ ಕಣ್ಣೀರು ಸುರಿಸುತ್ತಿದ್ದ ವಾಮದೇವನಿಗೆ, ವಸಿಷ್ಠರು ನಾಟಕದ ಮುಂದಿನ ದೃಶ್ಯಗಳ ಕಿಂಚಿತ್ಪರಿಚಯವನ್ನು ದರ್ಶನ ಮಾಡಿಸಿದರು. ಅದರಿಂದ ಅವನಿಗೂ ಅರುಂಧತಿಗೂ ಸ್ವಲ್ಪ ಸಮಾಧಾನವಾಯಿತು.

ಹಿಮಾಲಯದಲ್ಲಿ ಕೌಶಿಕನನ್ನು ಕಂಡ ವಾಮದೇವನು, ಆತನಿಗೆ ರುದ್ರಾರಾಧನೆಯನ್ನು ಹೇಳಿಕೊಟ್ಟನು. "ಶಿಲ್ಪಿಯ ಕರ್ಮದಿಂದ ಶಿಲೆಯಲ್ಲಿ ಅಭಿವ್ಯಕ್ತವಾಗುವ ಮೂರ್ತಿಯಂತೆ" ವ್ಯಕ್ತವಾಗಿ, ಪ್ರತ್ಯೇಕವಾಗಿ ಕೌಶಿಕನಿಗೆ ರುದ್ರಮೂರ್ತಿಯು ಕಾಣುತ್ತಿದೆ. ವೇದಗಳಲ್ಲಿರುವ ವರ್ಣನೆಗೆ ಸಮವಾಗಿ ಕೆಂಪುಬಣ್ಣದ, ಭಯಂಕರಾಕಾರದ, ಸರ್ವಶಸ್ತ್ರಾಸ್ತ್ರಗಳನ್ನೂ ಕೈಯಲ್ಲಿ ಹಿಡಿದಿರುವ ಜಟಾಧಾರಿಯಾದ ಸುಂದರ ವಿಗ್ರಹ. ಭಸ್ಮೋದ್ಧೂಳಿತಗಾತ್ರ, ಭಸ್ಮತ್ರಿಪುಂಡ್ರರಂಜಿತ ಫಾಲಪ್ರದೇಶ, ಜ್ವಾಲಾಮಾಲಾರಹಿತ ದೇದೀಪ್ಯಮಾನ–(ಎಲ್ಲವೂ ವೇದದಲ್ಲಿರುವ ಶಬ್ದಗಳೇ)–ರುದ್ರನನ್ನು ಕಂಡು ಕೌಶಿಕನು ತಾನು ಮಾಡಿದ ತಪಸ್ಸನ್ನು ಮರೆತನು. ರುದ್ರನಲ್ಲಿ ಐಕ್ಯವಾಗಲು ಅಪೇಕ್ಷಿಸಿದನು. ರುದ್ರನೇ ಕೌಶಿಕನ ತಪಸ್ಸಿನ ಉದ್ದೇಶವನ್ನು ನೆನಪಿಗೆ ತಂದುಕೊಟ್ಟು, ಅವನಿಗೆ ಎಲ್ಲ ಅಸ್ತ್ರಗಳನ್ನು ದಾನ ಮಾಡಿದನು. ಎಲ್ಲ ಅಸ್ತ್ರಾಭಿಮಾನಿ ದೇವತೆಗಳೂ ಸಮಷ್ಟಿಯಾಗಿ, ವ್ಯಷ್ಟಿಯಾಗಿ, ಸಾಂಗವಾಗಿ, ರಹಸ್ಯವಾಗಿ ಕೌಶಿಕನಿಗೆ ಕರಗತರಾದರು. ಇಲ್ಲಿಗೆ ಕೌಶಿಕನ ಬೆಳವಣಿಗೆಯ ಒಂದು ಹಂತ ಮುಗಿಯಿತು.

ಇಷ್ಟೊಂದು ಅಸ್ತ್ರಗಳು ಹಸ್ತಗತವಾದ ಮೇಲೆ ಅವುಗಳ ಪ್ರಯೋಜನವೇನು? ವಸಿಷ್ಠನ ಮೇಲಿನ ದ್ವೇಷ ತೀರಬೇಡವೇ? ಮತ್ತೆ ವಸಿಷ್ಠಾಶ್ರಮಕ್ಕೆ ಬಂದನು. ಆಗ ಅದು ಅವನಿಗೆ "ಬ್ರಹ್ಮನಿಷ್ಠರ ಸಾತ್ವಿಕ ತಪೋಭೂಮಿಯಂತೆ ಕಾಣಲಿಲ್ಲ. ತನ್ನ ಸಾಮ್ರಾಜ್ಯ ಲಕ್ಷ್ಮಿಯನ್ನು ಏಕಾಪೋಷನ ತೆಗೆದುಕೊಂಡು ತನ್ನನ್ನು ಭಿಕಾರಿಯನ್ನಾಗಿ ಮಾಡಿದ ಮೃತ್ಯುವಿನ ಲೀಲಾಕ್ಷೇತ್ರದಂತೆ ಕಂಡಿತು." ಮನಸ್ಸಿನಲ್ಲಿ ಹೊಯ್ದಾಟವಿಲ್ಲದಿಲ್ಲ. ಆ ಆಶ್ರಮವನ್ನೂ ವಸಿಷ್ಠನನ್ನೂ ನಾಶ ಮಾಡುವ ಶಕ್ತಿಯಿದೆಯೆಂದು ನಂಬಿಕೆ ಬಂದಿದೆ. "ನಾನೇಕೆ ಈ ದುಷ್ಕರ್ಮವನ್ನು ಮಾಡದೆ ಹಿಂದಿರುಗಬಾರದು?" ಎಂಬ ವಿವೇಕದ ಭರ್ತ್ಸನೆಯೂ ಇದೆ. ಆದರೂ ಗೆಲ್ಲುವುದು ಕ್ಷಾತ್ರವೇ! "ಕ್ರೂರವಾದರೂ ಈ ಕರ್ಮವು ನಡೆದು ಹೋಗಲಿ" ಎಂದು ಆಪೋಮಂತ್ರವನ್ನು ಜಪಿಸಿ ಆಚಮನ ಮಾಡಿ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದನು, ಆಶ್ರಮದ ಮೇಲೆ. ಅದರ ಪರಿಣಾಮವಾಗಿ ಏನಾಯಿತು? ವಸಿಷ್ಠನ ಬ್ರಹ್ಮದಂ

ಡವು ಕೌಶಿಕನ ಎಲ್ಲ ಅಸ್ತ್ರಗಳನ್ನೂ ನುಂಗುತ್ತಿದೆ. ರುದ್ರವು ರುದ್ರನಾಗಿ ಬೆರೆತಂತಾಯಿತು. ವಿಶ್ವಾಮಿತ್ರನು ಸೃಷ್ಟಿಸಿದ ಸಂಕರದೇವತೆಗಳ ರೌದ್ರಾಸ್ತ್ರವು ಹಿಂದಿರುಗಿ ವಿಶ್ವಾಮಿತ್ರನೇ ಮೂರ್ಛೆಬೀಳುವಂತಾಯಿತು. ಈ ವೇಳೆಗೆ ವಾಮದೇವನು ಬಂದು ದಂಡಕ್ಕೆ ಪ್ರಣಾಮ ಮಾಡಿದನು. ದಂಡವು ಕೌಶಿಕನ ದೇಹವನ್ನು ಅಪಸವ್ಯವಾಗಿ ಸುತ್ತಿ, ಆ ದೇಹದಿಂದ ಹೊರಟ ಕರಾಳವಾದ ನೆರಳನ್ನು ಸುಟ್ಟು ಹಿಂದಿರುಗಿತು.

ಕೌಶಿಕನು ತಪೋಮಾರ್ಗದಲ್ಲಿ ಎರಡನೆಯ ಘಟ್ಟವನ್ನು ಮುಟ್ಟಿದನು. ವಾಮದೇವನೊಡನೆ ಚರ್ಚಿಸಿ, ಅವನನ್ನು ಪ್ರಾರ್ಥಿಸಿ, ಅಂಗಲಾಚಿ ತಪಸ್ಸು ಎಂದರೇನು ಎಂದು ತಿಳಿದುಕೊಂಡನು. ತಾನೂ ವಸಿಷ್ಠನಂತಾಗಬೇಕೆಂಬ ಹಂಬಲವನ್ನು ತೋಡಿಕೊಂಡನು. ವಾಮದೇವನು ನುಡಿದನು: "ಕೌಶಿಕ, ವಸಿಷ್ಠರ ಗುಟ್ಟು ಏನೂ ಇಲ್ಲ. ಬಹಳ ಸುಲಭ. ನಿರ್ಮಲವಾದ ನೀರಿಗೆ ಬಣ್ಣ ವಾಸನೆ ಏನೂ ಇಲ್ಲದಂತೆ, ಅವರ ಮನಸ್ಸಿನಲ್ಲಿ ಯಾವ ಸಂಕಲ್ಪವೂ ಇಲ್ಲ. ಕನ್ನಡಿಯು ತನ್ನದಾಗಿ ಯಾವ ಬಿಂಬವನ್ನೂ ಧರಿಸದೆ, ಎದುರಿಗೆ ಬಂದ ಬಿಂಬಗಳನ್ನೆಲ್ಲ ಬಿಂಬಿಸುವಂತೆ. ಅವರ ಮನಸ್ಸು ಲೋಕಕಲ್ಯಾಣಕ್ಕಾಗಿ ಬೇಕಾಗುವುದನ್ನು ಮಾತ್ರ ಸಂಕಲ್ಪಿಸುತ್ತ ತಾನು ಸಂಕಲ್ಪರಹಿತವಾಗಿ ನಿಶ್ಚಲವಾಗಿ ಇರುವುದು. ಈಗ ನಾನೂ ವಸಿಷ್ಠರಂತೆ ಆಗಬೇಕೆಂದೇ ತಪಸ್ಸು ಮಾಡುತ್ತಿರುವೆನು." ಕೌಶಿಕನಿಗೆ ನಿಸ್ಸಂಕಲ್ಪನಾಗುವುದು ಅಷ್ಟೊಂದು ಕಷ್ಟವೇ ಎನ್ನಿಸಿತು. ವಾಮದೇವನು ಮತ್ತೆ ವಿವರಣೆಯನ್ನು ನೀಡುತ್ತಾನೆ: "ಆತ್ಮವಶವಾಗಿ ಹುಟ್ಟುವ ವ್ಯಕ್ತಿಯನ್ನು ಹಿಡಿದು ವ್ಯಾಪಾರ ಮಾಡುವವನು ಮನುಷ್ಯನು. ಅದರಲ್ಲಿ ಸಂಕಲ್ಪವನ್ನು ಲೋಕಕ್ಷೇಮಕ್ಕಾಗಿ ಮಾಡುವ ಆತ್ಮವಂತನು ಮನುಷ್ಯೋತ್ತಮನು. ಸ್ವಸಂಕಲ್ಪತಿರೋಧಾನಮಾಡಿ ಈಶ್ವರಸಂಕಲ್ಪಾನುಗುಣವಾಗಿ ವ್ಯಕ್ತಿಯನ್ನು ವಹಿಸಿ ವ್ಯಾಪಾರ ಮಾಡುವವನು ಬ್ರಾಹ್ಮಣನು. ನೀನು ಇದಾದ ದಿನ ವಸಿಷ್ಠರ ಗುಟ್ಟು ತಿಳಿಯುವುದು. ಅದುವರೆಗೆ ನೀನು ಬಿಗಿಹಿಡಿದು ಕುಳಿತು ತಪಸ್ಸು ಮಾಡುವೆಯಾ?"

ಕೌಶಿಕನಿಗೆ ಈಗ ತಪಸ್ಸಿನ ಕಡೆಗೆ ತೀವ್ರವಾದ ಆಸಕ್ತಿಯುಂಟಾಯಿತು. ವಾಮದೇವನ ಆಶೀರ್ವಾದವು ಬೆಳಕಿನ ರೂಪದಲ್ಲಿ ದೇಹಾಂತರ್ಗತವಾಯಿತು. ಅವನು ವಿಂಧ್ಯವನ್ನು ದಾಟಿ ದಕ್ಷಿಣದಲ್ಲಿ ರೇವಾತೀರದಲ್ಲಿ `ವಿಶ್ವಾಮಿತ್ರ'ನೆಂದು ಹೊಸ ಹೆಸರಿಟ್ಟುಕೊಂಡು ತಪಸ್ಸಿಗೆ ನಿಂತನು. ಚಿಂತನೆ, ಅಧ್ಯಯನ ಮಂತ್ರ, ಅದರ ಅಧಿದೇವತೆ, ಸೃಷ್ಟಿ, ಸ್ಥಿತಿ, ಲಯ ಇತ್ಯಾದಿಗಳನ್ನು ಕುರಿತು ತಪಸ್ಸು ಮಾಡುತ್ತಿದ್ದಾಗ ಬ್ರಹ್ಮಾಂಡವು ಒಡೆದುದನ್ನು ಕಂಡು ಬೇಕಾದರೆ ಮತ್ತೊಂದು ಬ್ರಹ್ಮಾಂಡವನ್ನು ಮಾಡಬಲ್ಲೆ ಎಂಬ ತಿಳಿವಳಿಕೆ ಬಂತು. `ಹಾಗಾದರೆ ಅದನ್ನೇಕೆ ಪ್ರಯೋಗಮಾಡಬಾರದು?' ಎಂಬ ಪ್ರಶ್ನೆಯೆದ್ದು ಅದೇ ತಲೆಯಲ್ಲೆಲ್ಲ ತುಂಬಿ ಹೋಯಿತು. ಆದರೆ ಯಾರೋ ಕೇಕೆಹಾಕಿ ತನ್ನನ್ನು ಹಾಸ್ಯ ಮಾಡುತ್ತಿರುವಂತೆ ಭಾಸವಾಯಿತು. ವಾಮದೇವನು ಪ್ರತ್ಯಕ್ಷನಾಗಿ ಹೇಳಿದನು: "ನೀನು ಸಮಾಧಿಯಲ್ಲಿ ಕಂಡುದು ಆಪೋಜ್ಯೋತಿ. ಸೃಷ್ಟಿಯ ಪೂರ್ವರೂಪವಾದರೆ ಅದು ಅಪೋಜ್ಯೋತಿ, ಸೃಷ್ಟಿಯ ಉತ್ತರ ರೂಪವಾದರೆ ಅದು ಅಪಾಂನಪಾತ್. ಬ್ರಾಹ್ಮಣನಾಗಬೇಕೆಂದವನು ಸರ್ವಪ್ರಯತ್ನದಿಂದಲೂ ಈ ಆಪೋಜ್ಯೋತಿಯನ್ನು ಕಾಣಬೇಕು. ಇದನ್ನೇ ನಚಿಕೇತನಿಗೆ ಯಮನು ಹೇಳಿದುದು. ಇದರ ಪೂರ್ವಸ್ವರೂಪವು ಪ್ರಣವವು. ಇದರ ಅನುಗ್ರಹವನ್ನು ಪಡೆಯಬೇಕೆಂದೇ ಎಲ್ಲರೂ ತಪಸ್ಸು ಬ್ರಹ್ಮಚರ್ಯೆಗಳನ್ನು ಮಾಡುವುದು. ಅದೃಷ್ಟವಶದಿಂದ ನಿನಗೆ ಇದು ಸಿಕ್ಕಿತು." ಹೀಗೆ ಹೇಳಿದುದೇ

ಅಲ್ಲದೆ, "ಕಲ್ಲಿನಲ್ಲಿ ಆಕಾರ ಮೂಡಿತು. ಇನ್ನು ಬೊಂಬೆಯಾಗಬೇಕು. ಅದಕ್ಕೆ ಜೀವ ಬರಬೇಕು, ಇನ್ನೂ ಎಷ್ಟು ದೂರ" ಎಂದುಕೊಂಡು, ಗುರುದೇವನಾದ ವಸಿಷ್ಠನ ಯೋಜನೆ ರೂಪಗೊಳ್ಳುತ್ತಿರುವುದಕ್ಕೆ ಸಂತೋಷಪಟ್ಟು ಅಂತರ್ಧಾನನಾಗುತ್ತಾನೆ, ವಾಮದೇವ.

ವಿಶ್ವಾಮಿತ್ರನ ತಪಸ್ಸಿನಿಂದ, ಅವನಿಗೆ ಬಲಾ, ಅತಿಬಲಾ ಎಂಬ ಎರಡು ವಿದ್ಯಾಭಿಮಾನಿ ದೇವತೆಗಳ ಸ್ವಾಧೀನತೆಯುಂಟಾಯಿತು. ಅವರ ಅನುಗ್ರಹವಿರುವವರಿಗೆ ದೇವಕಾರ್ಯದಲ್ಲಿರುವವರೆಗೂ ಮಾನವನಿಗೆ ಕ್ಷುತ್ತೃಷೆಗಳಾಗಲೀ ದೇಹಶ್ರಮ ರೋಗರುಜಿನಗಳ ತೊಂದರೆಗಳಾಗಲೀ ಒದಗುವುದಿಲ್ಲವೆಂಬುದೂ ತಿಳಿಯಬಂದಿತು. ಪ್ರಾಣಾಪಾನವಾಯುಗಳನ್ನು ತಡೆದರೆ ಪ್ರಾಣಜ್ಯೋತಿಯುಂಟಾಗುತ್ತದೆ. ಇದು ದೇಹದಲ್ಲಿ ವಿಶೇಷವಾದ ಶಾಖವನ್ನು ಉತ್ಪತ್ತಿ ಮಾಡುವುದು. ಸಸಂಕಲ್ಪವಾಗಿ ಈ ಚೇತನವನ್ನು ಇತರರಿಗೆ ದಾನ ಮಾಡಬಹುದು. ಇದರಿಂದ ಸತ್ತವರನ್ನು ಬದುಕಿಸಬಹುದು. ಈ ವಿಚಾರಗಳೆಲ್ಲವೂ ವಿಶ್ವಾಮಿತ್ರನಿಗೆ ತಿಳಿದುಬಂದು, ಈ ಲೋಕದಲ್ಲಿರುವ ಎಲ್ಲಾ ಪ್ರಾಣಗಳನ್ನೂ ಒಳಗೊಂಡ ಪ್ರಾಣವೊಂದಿರಬೇಕು ಎಂಬ ಶಾಶ್ವತ ಸತ್ಯದ ಕಡೆಗೆ ಗಮನ ಹೋಯಿತು.

ತಪಸ್ಸು ಒಂದೇ ಸಮನೆ ಮುಂದುವರಿಯುವುದಿಲ್ಲ, ಹಾಗೆ ಮುಂದುವರಿದರೆ ಸಿದ್ಧಿ ಸುಲಭ ಸಾಧ್ಯವೆಂದು ಅಭಿಪ್ರಾಯ ಬರಬಹುದು. ವಿಶ್ವಾಮಿತ್ರನ ಈ ಸಿದ್ಧಿಗಳಿಗೆ ಪರೀಕ್ಷೆಯುಂಟಾಗಬೇಕು. ಅದನ್ನು ದೇವುಡು ಅವರು ಕಥೆಯಲ್ಲಿ ಅಳವಡಿಸಿದ್ದಾರೆ. ಮೊದಲ ಪರೀಕ್ಷೆಯೇ ತ್ರಿಶಂಕುವಿಗೆ ಸಂಬಂಧಪಟ್ಟುದು.

ಇಕ್ಷ್ವಾಕುವಂಶದ ಮಹಾರಾಜನಾದ ತ್ರಿಶಂಕುವಿಗೆ ಸಶರೀರನಾಗಿ ಸ್ವರ್ಗಕ್ಕೆ ಹೋಗಬೇಕೆಂಬ ಆಸೆಯುಂಟಾಯಿತು. ವಂಶಗುರುವಾದ ವಸಷ್ಠನ ನೇತೃತ್ವದಲ್ಲಿ ಅನೇಕ ಯಜ್ಞಗಳನ್ನು ಮಾಡಿ ಪ್ರಭಾವಶಾಲಿಯಾಗಿದ್ದ ತ್ರಿಶಂಕುವಿಗೆ ಈ ಆಸೆ ಅಸಾಧ್ಯವೆಂದು ತೋರಲಿಲ್ಲ. ಬೇಕಾದರೆ ಒಂದು ಸಲ ಸ್ವರ್ಗಕ್ಕೆ ಹೋಗಿ ಹಿಂದಿರುಗುವಂತೆ ಮಾಡಲೂ ಸ್ವರ್ಗಸುಖವನ್ನು ಭೂಮಿಗೇ ಕರೆತರಲೂ ವಸಿಷ್ಠರು ಸಿದ್ಧರಾಗಿದ್ದರು. ಕಾಲಾಂತರದಲ್ಲಿ ಬರುವ ಸ್ವರ್ಗಸುಖವನ್ನು ಬೇಕೆಂದಾಗ ಪಡೆಯಲು ಅಪೇಕ್ಷಿಸುವುದು ಸರಿಯಲ್ಲವೆಂದು ಬುದ್ಧಿವಾದ ಹೇಳಿದರು. ಈ ವ್ಯತ್ಕ್ರಮವು ನಡೆಯಲೇಬೇಕಾದರೆ ಇತರ ಋತ್ವಿಕ್ಪುರೋಹಿತರುಗಳನ್ನು ನೋಡಿಕೊಳ್ಳಬಹುದೆಂದು ಸೂಚಿಸಿದರು. ಅಲ್ಲದೆ ವಿಶ್ವಾಮಿತ್ರನ ಬಳಿಗೆ ಹೋದರೆ ಆತನಿಂದ ಇದು ಸಾಧ್ಯವಾಗಬಹುದೆಂಬ ಪ್ರಲೋಭವನ್ನೂ ಒಡ್ಡಿದರು. ಬಹುಶಃ ಇದು ವಿಶ್ವಾಮಿತ್ರನ ಉದ್ಧಾರಕ್ಕಾಗಿರಬೇಕು.

ವಿಶ್ವಾಮಿತ್ರನ ಬಳಿಗೆ ಬಂದ ತ್ರಿಶಂಕುವು ವಸಿಷ್ಠರು ಹೇಳಿದ ಮಾತನ್ನು ತಿಳಿಸಿದನು. ಈಗ ವಿಶ್ವಾಮಿತ್ರನಿಗೆ ಗೊತ್ತಾಯಿತು; ಇದೇ ದೇಹದಲ್ಲಿ ಬ್ರಾಹ್ಮಣನಾಗಬೇಕೆನ್ನುವ ವಿಶ್ವಾಮಿತ್ರನಿಗೂ ಇದೇ ದೇಹದಲ್ಲಿ ಸ್ವರ್ಗಕ್ಕೆ ಹೋಗಬೇಕೆಂಬ ತ್ರಿಶಂಕುವಿಗೂ ಅರ್ಥಪೂರ್ಣವಾದ ಸಂಬಂಧವುಂಟಾಯಿತು.

ಜಮದಗ್ನಿಯೂ ವಿಶ್ವಾಮಿತ್ರನೂ ಕುಳಿತು ಆಲೋಚಿಸಿ ಹೊಸದೊಂದು ಯಾಗ ಕಲ್ಪನೆ ಮಾಡಿದರು. ಇವರಿಬ್ಬರ ಒಡಗೂಡುವಿಕೆ ಅನಲಾನಿಲ ಸಂಯೋಗವಾಯಿತು. ಇದರಿಂದ ಯಾವುದು ಸಂಪೂರ್ಣವಾಗಿ ದಗ್ಧವಾಗಬೇಕಾಗಿತ್ತೋ ಅದು ವಸಿಷ್ಠರಿಗೆ ಮಾತ್ರ ಗೊತ್ತು.

ಇವರಿಬ್ಬರೂ ಅಥರ್ವ ಮಹರ್ಷಿಯನ್ನು ಕರೆದು ಪರ್ಯಾಲೋಚನೆ ಮಾಡಿದರು. ಅಥರ್ವನು ಗೋತ್ರಪ್ರವರ್ತ, ಮಂತ್ರದ್ರಷ್ಟ್ರು. ಅವನು ಹೇಳಿದನು: "ಮನುಷ್ಯ ದೇಹವನ್ನು ದಿವ್ಯದೇಹವನ್ನಾಗಿ ಮಾಡುವುದಕ್ಕೆ ಪ್ರಯತ್ನಿಸಿ. ನೀವು ಗೆದ್ದರೆ ನಿಮ್ಮ ಇಷ್ಟಾರ್ಥವು ಫಲಿಸುವುದು." ಆದರೂ ಋಷಿಗಳು ಪ್ರಕೃತಿಧರ್ಮವನ್ನು ಮೀರುವುದು ತಪ್ಪೆಂಬುದನ್ನೂ ಸೂಚಿಸದೆ ಬಿಡಲಿಲ್ಲ. ಅಶ್ವಿನೀದೇವತೆಗಳ ಸಹಾಯದಿಂದ ತ್ರಿಶಂಕುವಿಗೆ ದಿವ್ಯ ದೇಹವನ್ನು ತಂದುದಾಯಿತು. ಇನ್ನು ಯಾಗ ಪ್ರಾರಂಭ.

ಈ ಯಾಗದ ವರ್ಣನೆಯಲ್ಲಿ ದೇವುಡು ಅವರು ನಿರ್ಮಾಣ ಮಾಡಿರುವ ಆವರಣ ತುಂಬ ಚೇತೋಹಾರಿಯಾಗಿದೆ. ತ್ರಿಶಂಕುವಿಗೆ ಆಕಾಶಗಮನ ಸಾಮರ್ಥ್ಯ ಬಂದು ಸ್ವರ್ಗದೆಡೆಗೆ ಹೋದರೂ ದೇವತೆಗಳು ಅಲ್ಲಿಂದ ಅವನನ್ನು ತಳ್ಳಿಬಿಟ್ಟರು. ವಿಶ್ವಾಮಿತ್ರನು "ಅನ್ಯಮಿಂದ್ರಂ ಕರಿಷ್ಯಾಮಿ" ಎಂದು ಬೇರೆಯ ಸ್ವರ್ಗವನ್ನೇ ನಿರ್ಮಿಸಲು ಪಣತೊಟ್ಟನು. ತ್ರಿಶಂಕುವಿಗೆ ಬೇರೆ ಲೋಕ ಬಂತು; ಆದರೆ ಅದಕ್ಕೆ ಮಿತಿಯುಂಟಾಯಿತು.

ಕ್ರಮವಾಗಿ ವಿಶ್ವಾಮಿತ್ರನಿಗೆ ವಸಿಷ್ಠರ ಹಿರಿಮೆ ತಿಳಿಯುತ್ತ ಬಂತು. ಇಂದ್ರನು ವಸಿಷ್ಠರಿಲ್ಲದ ಯಾಗದಲ್ಲಿ ಭಾಗವಹಿಸುವುದಿಲ್ಲವೆಂಬುದೂ ಗೊತ್ತಾಯಿತು. ಆ ವಿವರವೆಲ್ಲ ತಿಳಿದಮೇಲೆ, ಜಮದಗ್ನಿಯ ಆಶ್ರಮದಲ್ಲಿ ಕೆಲವು ದಿನವಿದ್ದಾಗ ಜಮದಗ್ನಿಯು ಇಂದ್ರನನ್ನು ಹೋಮದ ಮೂಲಕ ಆಹ್ವಾನಿಸಿ, ಅತಿಥಿಗಳ ಸಂತರ್ಪಣೆಗೆ ಸಹಾಯಕ `ಶಬಲೆಯ'ನ್ನೂ ಪಡೆದುದನ್ನೂ ನೋಡಿದನು. ಇಂದ್ರನು ವಸಿಷ್ಠನಿಗೆ ಒದಗಿದ ಪುತ್ರ ಶೋಕವನ್ನು ತಿಳಿಸಿದನು. ಅದನ್ನು ಮತ್ತೊಬ್ಬರು ವಹಿಸಿಕೊಂಡರೆ ವಸಿಷ್ಠನು ತನ್ನ ಶೋಕದಿಂದ ಮುಕ್ತನಾಗಬಹುದು ಎಂದು ತಿಳಿಸಿದಾಗ, ವಿಶ್ವಾಮಿತ್ರನೇ ಮುಂದೆ ಬಂದು ತಾನು ಆ ಶೋಕವನ್ನು ವಹಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದನು. `ಆಗ ವಿಶ್ವಾಮಿತ್ರನಿಗೆ ಅವಸರಪಡಬಾರದೆಂದು ಹೇಳಿ ಅವನನ್ನು ಸ್ವರ್ಗದಲ್ಲಿ ನಾಲ್ಕು ದಿನವಿದ್ದು ಹಿಂದಿರುಗವಂತೆ ಆಹ್ವಾನಿಸಿದನು. ವಿಶ್ವಾಮಿತ್ರನಿಗೆ ಭೋಗಭೂಮಿಯಿಂದಾಗಬೇಕಾದುದು ಏನೂ ಇಲ್ಲ. ಇಂದ್ರನು ಕೇಳಿದನು: "ಮುನೀಂದ್ರ, ಸ್ವರ್ಗಕ್ಕೆ ಬಾ ಎಂದರೆ ಬರುವುದಿಲ್ಲವೆಂದೆ? ಇರಲಿ, ಸ್ವರ್ಗವೇ ನಿನ್ನ ಬಳಿಗೆ ಬಂದರೆ ಏನು ಮಾಡುವೆಯೋ ನೋಡೋಣ."

ದೇವೇಂದ್ರನ ಈ ಮಾತಿನಿಂದ ವಿಶ್ವಾಮಿತ್ರನ ಯೋಚನೆ ಹೆಚ್ಚಾಯಿತು. ಜಮದಗ್ನಿಯ ಆಶ್ರಮವನ್ನು ಬಿಟ್ಟು ಉತ್ತರಕ್ಕೆ ಪ್ರಯಾಣ ಮಾಡಿ ಸರಸ್ವತೀ ತೀರದಲ್ಲಿ ಆಶ್ರಮವನ್ನು ಕಟ್ಟಿಕೊಂಡು ತಪಸ್ಸಿಗೆ ನಿಂತನು. ವಾಮದೇವನ ಉಪದೇಶದಂತೆ ಸರಸ್ವತಿಯನ್ನು ಪ್ರಾರ್ಥಿಸಿ, ಮೂರ್ಛಿತನಾಗಿದ್ದ ವಸಿಷ್ಠನ ದೇಹವು ಕೊಚ್ಚಿ ಹೋಗುವಂತೆ ಮಾಡಿದನು.

ಈ ಕಾದಂಬರಿಯ ಮುಂದಿನಭಾಗ, ವಿಶ್ವಾಮಿತ್ರ ಮೇನಕೆಯರ ಸಂಸಾರದ ಸುಂದರವಾದ ವರ್ಣನೆ; ಸ್ವರ್ಗದ ಅಪ್ಸರೆಯೊಡನೆ ಭೂಮಿಯ ರಾಜರ್ಷಿಯು ಸಂಸಾರ ಹೂಡಿ ಪಟ್ಟ ಸುಖಭೋಗಗಳ ವರ್ಣನೆ; ರಂಭೆ ಘೃತಾಚಿಯರು ತಾವಾಗಿ ಬಂದು ಕಣ್ಣಾರ ಕಂಡು ಅಸೂಯೆಪಟ್ಟ ಪ್ರೇಮದ ವರ್ಣನೆ; ಮೇನಕೆಗೆ ಸ್ವರ್ಗಕ್ಕೆ ಹಿಂದಿರುಗುವುದೇ ಬೇಡವೆನ್ನುವಂತೆ ಮಾಡಿದ ವಿಶ್ವಾಮಿತ್ರನ ಸಾನ್ನಿಧ್ಯದ ಮಹಿಮೆಯ ವರ್ಣನೆ. ಈ ಭಾಗವನ್ನು ದೇವುಡು ತುಂಬ ಸುಂದರವಾಗಿ ಋಷ್ಯಾಶ್ರಮಕ್ಕೆ ಹೊಂದಿಸಿದ್ದಾರೆ. ಇಲ್ಲಿ ಕಾಣುವ ಸಂಸಾರ ಚಿತ್ರ ತುಂಬ ಮೋಹಕವಾಗಿದೆ.

ವಿಶ್ವಾಮಿತ್ರ ಹೇಳುತ್ತಾನೆ: "ಭೋಗವು ಹಿತವೂ ಪ್ರಿಯವೂ ಆಗಬೇಕಾದರೆ ಗಂಡು ತನ್ನನ್ನು. ಹೆಣ್ಣಿಗೆ ಒಪ್ಪಿಸಿಕೊಳ್ಳಬೇಕು?" ಮೇನಕೆಯ ಉತ್ತರ: "ದೇವಾ ನಿಜ, ಭೋಗದೇವಿಯೇ ಹೆಣ್ಣು. ಆದರೂ ಭೋಗಪಡುವವರು ಗಂಡು. ಗಂಡಿನ ಸುಖಕ್ಕಾಗಿ ತನ್ನ ಸರ್ವಸ್ವವನ್ನು ಅರ್ಪಿಸಿ, ಅವನ ಸುಖದಲ್ಲಿ ತನ್ನ ಸುಖವನ್ನು ಕಾಣುವುದಲ್ಲವೇ ಹೆಣ್ಣುತನ? ತನ್ನ ಮುಖವನ್ನು ಕನ್ನಡಿಯಲ್ಲಿ ಕಂಡಾಗ ಸಂತೋಷವಾಗುವ ಹಾಗೆ, ಗಂಡಿನ ಸುಖ ತನ್ನಲ್ಲಿ ಪ್ರತಿಫಲಿಸಿದಾಗ ಸಂತೋಷಪಡುವುದು ಹೆಣ್ಣು ಜಾತಿ."

ಹೀಗೆ ಮೇನಕೆಯಿಂದ ವಿರಚಿತವಾದ ಸ್ವರ್ಗಖಂಡದ ಚಿತ್ರದಲ್ಲಿ ದೇವುಡು ಅವರು ತಮ್ಮ ಕಾದಂಬರಿಯ ಮುಖ್ಯ ಉದ್ದೇಶವನ್ನು ಮರೆತಿದ್ದಾರೋ ಎನ್ನುವಷ್ಟು ತಾದಾತ್ಮ್ಯದಿಂದ ಲೇಖನಿಯನ್ನು ಹರಿಬಿಟ್ಟಿದ್ದಾರೆ. ಮೇನಕೆ ಪ್ರೇಮಫಲವನ್ನು ಬೇಡುತ್ತಾಳೆ. "ಪ್ರೇಮಫಲವೆಂದರೇನು?" ಎಂಬುದು ವಿಶ್ವಾಮಿತ್ರನ ಪ್ರಶ್ನೆ. "ಒಂದು ಮಗು" ಮೇನಕೆಯ ಉತ್ತರ.

"ಎಂತಹ ಮಗು?"

"ಹೆಣ್ಣು."

"ಆದೇನು ಹೆಣ್ಣು?"

"ಹೆಣ್ಣಿನ ಮೋಹ ಹೆಚ್ಚಾದರೆ ಹೆಣ್ಣು. ಗಂಡಿನ ಮೋಹ ಹೆಚ್ಚಾದರೆ ಗಂಡು." ಮಾನವಪ್ರಕೃತಿಗೆ ಒಳಪಟ್ಟು ಒಂದು ಹೆಣ್ಣನ್ನು ಹೆತ್ತು, ಮೇನಕೆ ಸ್ವರ್ಗಾಭಿಮುಖವಾಗಿದ್ದಾಳೆ. "ಪ್ರಭು, ಈಗ ಆಗಿರುವುದು ಹೆಣ್ಣು. ಅದು ಬೆಳೆದು ಯವ್ವನವತಿಯಾಗುವವರೆಗೂ ತಡೆ. ಅವಳು ಯಾರನ್ನು ಒಲಿಯವಳು ಎಂಬುದು ನಿನ್ನ ಪ್ರಶ್ನೆಗೆ ಉತ್ತರ. ಅವಳು ಕ್ಷತ್ರಿಯನನ್ನು ವರಿಸುವಳೋ ಬ್ರಾಹ್ಮಣನನ್ನು ವರಿಸುವಳೋ ನೋಡಿಕೋ. ನಿನ್ನ ಅಳಿಯನು ಕ್ಷತ್ರಿಯನಾದರೆ ನೀನೂ ಕ್ಷತ್ರಿಯ. ಬ್ರಾಹ್ಮಣನಾದರೆ ನೀನೂ ಬ್ರಾಹ್ಮಣ." ಸಂಯಮವನ್ನು ಸಾಧಿಸಿದ್ದ ವಿಶ್ವಾಮಿತ್ರನು ಮೇನಕೆಯನ್ನು ಬೀಳ್ಕೊಟ್ಟನು. ಹೆಣ್ಣುಮಗುವನ್ನು ಕಣ್ವಾಶ್ರಮದಲ್ಲಿ ಬಿಟ್ಟು ಮತ್ತೆ ತಪಸ್ಸಿಗಾಗಿ ಹಿಮಾಲಯಕ್ಕೆ ಪ್ರಯಾಣ ಮಾಡಿದನು. ಸಾಧನೆ ಮುಂದುವರಿಯಿತು.

ಹಿಮಾಲಯದಲ್ಲಿ ವಿಶ್ವಾಮಿತ್ರನು ಹಿಂದಿನ ಮಂತ್ರಯೋಗವನ್ನು ಬಿಟ್ಟು ಧ್ಯಾನ ಯೋಗದಲ್ಲಿ ನಿರತನಾದನು. ಭವಿಷ್ಯತ್ತನ್ನು ಕುರಿತು ಧ್ಯಾನಮಾಡುತ್ತಿದ್ದ ಹಾಗೆ ಅವನಿಗೆ `ಕಾಲ'ವನ್ನು ಕುರಿತ ಅರಿವುಂಟಾಯಿತು. `ವರ್ತಮಾನ'ವೆನ್ನುವುದು ಜೀವನದಲ್ಲಿ ಇಲ್ಲವೇ ಇಲ್ಲವೆಂಬ ತಿಳಿವು ಬಂತು. "ಭೂತಕಾಲದ ಈಚಿನ ಕೊನೆ, ಭವಿಷ್ಯತ್ತಿನ ಆರಂಭ, ಇವೆರಡೂ ಸೇರಿ ಆಗುವ ನಿವೇಷಕಾಲವೊಂದು ವರ್ತಮಾನ." ಕಾಲನೇ ಪ್ರತ್ಯಕ್ಷನಾಗಿ ಹೇಳುತ್ತಾನೆ: "ಮುಂದಿನ ಅನ್ನವನ್ನು ಬೆಳೆಸುತ್ತ ಬೆಳೆದಿರುವುದನ್ನು ಭಕ್ಷಿಸುತ್ತ ಇರುವುದೇ ನನ್ನ ಕೆಲಸ." ಹಿಂದೆ ಪ್ರಾಣನು ಪ್ರತ್ಯಕ್ಷನಾದಾಗ, "ಅನ್ನವೂ ನಾನೇ ಅನ್ನಾದನೂ ನಾನೆ" ಎಂದು ಹೇಳಿದ್ದನು. ಈಗ ಕಾಲ ಹೀಗೆ ಹೇಳುತ್ತಾನೆ; ಇದೆನೋ ವಿಚಿತ್ರವೆಂದು ವಿಶ್ವಾಮಿತ್ರನಿಗೆ ಎನ್ನಿಸಿತು. ಆಗ ಕಾಲನೇ ಹೇಳಿದ: "ಆತ್ಮಾ ವೈ ಪುತ್ರನಾ ಮಾಸಿ", "ಪ್ರಾಣನು ನನ್ನ ಮಗ. ಅವನು ಮೊದಲು ಹುಟ್ಟಿದ ಅನ್ನ. ಅವನನ್ನೇ ನಾನು ಕೊನೆಗೆ ತಿನ್ನುವುದು."

ಹೀಗೆ ವಿಶ್ವಾಮಿತ್ರನಿಗೆ ಪ್ರಾಣ, ವ್ಯಾನ, ಅಪಾನ, ಉದಾನ, ಸಮಾನ ಎಂಬ ಐವರು ಸೋದರ ಪ್ರಾಣರ ಪರಿಚಯವಾಯಿತು. ವಾನಪ್ರಸ್ಥದಲ್ಲಿದ್ದ ಪುರೂರವನಿಂದ ಸ್ಥಾಲೀಪಾಕವಿದ್ಯೆ ತಿಳಿಯಬಂತು. ಇಲ್ಲಿಯವರೆಗೆ ತಿಳಿಯದಿದ್ದ ಮತ್ತೊಂದು ವಿಚಾರ ವಿಶ್ವಾಮಿತ್ರನ ಗಮನಕ್ಕೆ ಬಂತು, ವಾಮದೇವನು ವಸಿಷ್ಠನ ಶಿಷ್ಯನೆಂಬುದು. ತನ್ನ ಸಾಧನೆಯ ಮಾರ್ಗದಲ್ಲಿ ವಾಮದೇವನು ಮಾಡಿದ ಸಹಾಯವೆಲ್ಲವೂ ವಸಿಷ್ಠನ ಮೂಲಕವಾಗಿಯೇ ಎಂಬುದು, ಚಿಂತಿಸಿದಂತೆಲ್ಲ ದೊಡ್ಡದಾಗಿ ಕಂಡು, ವಿಶ್ವಾಮಿತ್ರನಿಗೆ "ವಸಿಷ್ಠನೆಂಬ ಪರ್ವತದ ಮುಂದೆ ತಾನೊಂದು ಸಾಸಿವೆಯ ಕಾಳೂ ಅಲ್ಲ ಎನಿಸಿತು." ವಾಮದೇವನಿಂದಲೇ ವೈಶ್ವಾನರವಿದ್ಯೆಯೂ ಈಗ ಅವನಿಗೆ ದೊರಕಿತು.

ಮುಂದಿನ ದೃಶ್ಯ ನಚಿಕೇತಾಶ್ರಮದಲ್ಲಿ. ಅವನು ಸಾಕ್ಷಾತ್ ವೈಶ್ರವಕಣನಿಂದಲೇ ಅಗ್ನಿ ವಿದ್ಯೆಯನ್ನೂ ಬ್ರಹ್ಮವಿದ್ಯೆಯನ್ನೂ ಸಂಪಾದಿಸಿದ ಮಹಾವ್ಯಕ್ತಿ. ಅಲ್ಲಿಗೆ ಹೋದಾಗ ವಿಶ್ವಾಮಿತ್ರನಿಗೆ ಇನ್ನೂ ದೊಡ್ಡ ಆಶ್ಚರ್ಯವು ಕಾದಿದ್ದಿತು. ನಚಿಕೇತನು ವಿಶ್ವಾಮಿತ್ರನಿಗೆ "ಉಪದೇಶವಾಗಿ ಅಲ್ಲ, ದಾನವಾಗಿ" ಅಗ್ನಿ ವಿದ್ಯೆ ಬ್ರಹ್ಮವಿದ್ಯೆಗಳೆರಡನ್ನೂ ಕೊಟ್ಟನು. ಅಗ್ನಿಯು ಚತುರ್ದಶಲೋಕಗಳ ಪರಿಚಯವನ್ನು ಮಾಡಿಕೊಟ್ಟಮೇಲೆ ನಚಿಕೇತನು ಪ್ರತ್ಯಗಾತ್ಮನ ದರ್ಶನಮಾಡಿಸಿ, "ಇದನ್ನು ಬೆಳೆಸಿಕೊಂಡು ವ್ಯಷ್ಟಿಸಮಷ್ಟಿಗಳಲ್ಲಿ ಆತ್ಮದರ್ಶನ ಮಾಡಿ ಕೃತಾರ್ಥನಾಗು" ಎಂದು ಆಶೀರ್ವದಿಸಿದನು.

ನಚಿಕೇತಾಶ್ರಮದಲ್ಲಿ ಋಷಿಪರಿಷತ್ತು ಸೇರಿತು. ಅದರಲ್ಲಿ ವಸಿಷ್ಠರು ಮಾತ್ರ ಇರಲಿಲ್ಲ. ಅವರೆಲ್ಲ ತೀರ್ಮಾನಿಸಿದಂತೆ "ವಿಶ್ವಾಮಿತ್ರರ ಬ್ರಹ್ಮರ್ಷಿತ್ವವನ್ನು ವಸಿಷ್ಠಮುಖವಾಗಿ ಅಂಗೀಕರಿಸುತ್ತದೆ. ಎರಡನೆಯದಾಗಿ ಇನ್ನು ಮುಂದೆ ವಿಶ್ವಾಮಿತ್ರರನ್ನು ಭಗವಾನ್ ಎಂದು ಸಂಬೋಧಿಸತಕ್ಕದ್ದು." ಇದಾದ ಬಳಿಕ ಅನೇಕ ಹಿರಿಯರ ಎದುರಿನಲ್ಲಿ ವಿಶ್ವಾಮಿತ್ರರಿಗೆ ಒಂದು ಪ್ರಾರ್ಥನೆ ಬಂತು: "ಕಾಲವಶದಿಂದ ಹ್ರಸ್ವವಾಗುವ ಶಕ್ತಿಶ್ರದ್ಧಾಸಾಮರ್ಥ್ಯಗಳನ್ನು ಕಂಡು, ಮುಂದಿನವರು ಬ್ರಾಹ್ಮಣ್ಯವನ್ನು ಪಡೆಯಲು ಸುಲಭವಾದ ಕಲ್ಪವೊಂದನ್ನು ಕಂಡುಹಿಡಿಯಬೇಕು." ವಿಶ್ವಾಮಿತ್ರನು ಹೇಳುತ್ತಾನೆ: "ಈ ಕಾರ್ಯವಾಗುವುದು ತಮ್ಮ ಆಶೀರ್ವಾದಬಲದಿಂದ. ಆ ಕೀರ್ತಿಯು ನನಗಾಗಲೀ ಎಂದು ಪರಮ ವಿಶ್ವಾಸದಿಂದ ನನ್ನನ್ನು ಈ ಕಾರ್ಯದಲ್ಲಿ ನಿಯೋಜಿಸುತ್ತಿರುವಿರಿ... ಶಿರಸಾವಹಿಸಿ ತಮ್ಮ ಅಪ್ಪಣೆಯನ್ನು ನೆರವೇರಿಸುವೆನು."

ನಿರ್ಧಾರವನ್ನು ತೆಗೆದುಕೊಂಡುದಾಯಿತು: ಆದರೆ ಕಾರ್ಯಸಾಧನೆ ಅಷ್ಟು ಸುಲಭವಾಗಿ ಕಾಣಲಿಲ್ಲ. ಸಾಲದ ಹೊರೆ ಬೇರೆ ಬಿದ್ದಿದೆ. ಭಗವಾನ್ ವಸಿಷ್ಠರ ಸಾಲ. ಅವರ ಐವತ್ತು ಮಂದಿ ಮಕ್ಕಳು ತೀರಿಕೊಂಡಿದ್ದರಲ್ಲ; ಅದಕ್ಕೆ ಪ್ರತಿಯಾಗಿ, ಆ ಪುತ್ರಶೋಕವನ್ನು ತಾನು ಅನುಭವಿಸಬೇಕು. ಇಂದ್ರನಿಂದ ಈ ಕಾರ್ಯದಲ್ಲಿ ಸಹಾಯ ಒದಗಿತು. ಘೃತಾಚಿಯು ಬಂದು ವಿಶ್ವಾಮಿತ್ರನೊಡನೆ ಸಂಸಾರ ಮಾಡಿಕೊಂಡಿದ್ದು ಒಟ್ಟಿಗೆ ನೂರು ಮಕ್ಕಳನ್ನು ಹೆತ್ತಳು.

ಈಗ ತ್ರಿಶಂಕುವಿನ ಮಗ ಹರಿಶ್ಚಂದ್ರನ ಕಥೆ ಮೊದಲಾಗುತ್ತದೆ. ಅವನ ಜಲೋದರ ರೋಗ ನಿವಾರಣೆಗಾಗಿ ವರುಣನಿಗೆ ಬಲಿಕೊಡಲು ಶುನಶ್ಶೇಪನನ್ನು ಕೊಂಡಿದ್ದಾನೆ. ಈಗ ಯಾಗ ನಡೆಯಬೇಕಾಗಿದೆ. ವಿಶ್ವಾಮಿತ್ರನೇ ಹೌತ್ರವನ್ನು ಅಂಗೀಕರಿಸಬೇಕೆಂದು ವಸಿಷ್ಠರೇ ಹೇಳಿಕಳುಹಿಸಿದ್ದಾರೆ. ಯಾಗದಲ್ಲಿ ಶುನಶ್ಶೇಪನು ದೇವರಾತನಾಗಿ ಪರಿವರ್ತನೆ ಹೊಂದಿ ಪುಣ್ಯವಂತನಾದ ಋಷಿಯಾ

ದನು. ವಿಶ್ವಾಮಿತ್ರನು ಅವನನ್ನೇ ತನ್ನ ಹಿರಿಯ ಮಗನನ್ನಾಗಿ ಸ್ವೀಕರಿಸಿದನು. ಈ ಬಗ್ಗೆ ವಿಶ್ವಾಮಿತ್ರನ ನೂರು ಮಕ್ಕಳಲ್ಲಿ ಎರಡು ಭಾಗವಾಗಿ ಮೊದಲ ಆಂಧ್ರಾದಿ ಐವತ್ತು ಮಂದಿ ಇದನ್ನು ವಿರೋಧಿಸಿದರು; ಮಧುಚ್ಛಂದಾದಿ ಎರಡನೆಯ ಐವತ್ತು ಮಂದಿ ವಿಶ್ವಾಮಿತ್ರನ ಕಡೆಗೆ ನಿಂತರು. ಇವರ ವಾದ ವಿವಾದದಲ್ಲಿ ವಿಶ್ವಾಮಿತ್ರನು ಹೇಳಿದನು: "ದೇವರಾತನು ದ್ವಾಮುಷ್ಯಾಯಣನಾಗಿ ಅಂಗೀರಸ ವಿಶ್ವಾಮಿತ್ರಗೋತ್ರಗಳೆರಡಕ್ಕೂ ಭೂಷಣನಾಗಿರತಕ್ಕದ್ದು." ಈ ತೀರ್ಮಾನವನ್ನು ಎದುರಿಸಿದ ಆಂಧ್ರಾದಿಗಳು ಧರ್ಮಾಸನದ ಬಳಿಯಿಂದ ಹೊರಟ ಜ್ವಾಲೆಯಿಂದ ಭಸ್ಮೀಭೂತರಾದರು. ಘೃತಾಚಿಯು ತನ್ನ ಕೆಲಸವಾಯಿತೆಂದು ಸ್ವರ್ಗಕ್ಕೆ ಹೊರಟು ಹೋದಳು.

ಮುಂದಿನ ಕಥೆ ಅಗಸ್ತ್ಯಾಶ್ರಮದಲ್ಲಿ. ಅಲ್ಲಿ ನಡೆದ ಜಿಜ್ಞಾಸೆಯ ಫಲವಾಗಿ ವಿಶ್ವಾಮಿತ್ರ ಕಾವೇರಿ ತೀರದಲ್ಲಿ ಆಗಾಗ ದೇವತೆಗಳು ಬಂದು ಹೋಗುವ ತಾಣವೊಂದರಲ್ಲಿ ಆಶ್ರಮವನ್ನು ಕಟ್ಟಿಕೊಂಡು ಬ್ರಾಹ್ಮಣ್ಯವು ಸುಲಭವಾಗಿ ದೊರಕುವಂತೆ ಮಾಡುವ ಒಂದು ಮಂತ್ರವನ್ನು ರೂಪಿಸಲು ಪ್ರಯತ್ನಪಡುತ್ತಿದ್ದಾನೆ. ಎಲ್ಲರ ಸಹಕಾರದಿಂದ ಬೃಹಸ್ಪತಿಯ ಮಾರ್ಗದರ್ಶನದಿಂದ ಭಗವತೀ ಗಾಯತ್ರಿದೇವಿಯು ಪ್ರಣವವೊಂದೇ ಬ್ರಹ್ಮಾಂಡವೆಲ್ಲವನ್ನೂ ವ್ಯಾಪಿಸಿರುವ ರಹಸ್ಯವನ್ನು ತೋರಿಸಿ, ತನ್ನ ಸ್ವರೂಪವನ್ನು ವ್ಯಕ್ತಪಡಿಸಿ "ವತ್ಸ, ಇದನ್ನು ಅನುಸಂಧಾನ ಮಾಡಿ ನಿನ್ನದು ಮಾಡಿಕೋ. ನೀನು ಕೃತಾರ್ಥನಾದುದರ ಗುರುತಾಗಿ ನಿನ್ನ ಬಾಯಲ್ಲಿ ಇಪ್ಪತ್ತನಾಲ್ಕು ಅಕ್ಷರಗಳ, ಮೂರು ಪಾದಗಳ ಮಂತ್ರವು ಪ್ರಕಟವಾಗುವುದು. ಅದನ್ನು ಅನುಸಂಧಾನ ಮಾಡಿ, ಅದನ್ನು ನಿನ್ನದು ಮಾಡಿಕೋ. ಈ ಮಂತ್ರಕ್ಕೆ ದೇವತೆಯು ಸವಿತೃವೇ ಆದರೂ ಪೂಷಾದೇವನ ಅನುಗ್ರಹದಿಂದ ನಿನಗೆ ಮೊದಲು ನನ್ನ ದರ್ಶನವಾಯಿತಾದ್ದರಿಂದ ನಿನ್ನ ಬಾಯಲ್ಲಿ ಹೊರಡುವ ಮಂತ್ರವು ಗಾಯತ್ರಿ ಎಂದೇ ಪ್ರಸಿದ್ಧವಾಗಲಿ. ಅಷ್ಟೇ ಅಲ್ಲ ಗಾಯತ್ರೀ ವಿಶ್ವಾಮಿತ್ರ ಗಾಯತ್ರೀ ಎಂದೇ ಆಗಲಿ. ನೀನು ಯಾರಿಗಾದರೂ ನನ್ನನ್ನು ದಾನ ಮಾಡು. ನಾನು ಅವನನ್ನ ಕಾಪಾಡುವೆನು. ಅವನನ್ನು ಆರ್ಯನನ್ನು ಮಾಡುವೆನು. ಮೂರು ವೇದಗಳಿಗೆ ಅಧಿಕಾರಿಯನ್ನಾಗಿ ಮಾಡುವೆನು. ಆದರೆ ಇಗೋ, ಇದೇ ಮಾತು, ನನ್ನನ್ನು ದುರುಪಯೋಗ ಪಡಿಸಿದವನ ವಂಶವು ಒಣಗುವ ಮರದಂತೆ ಒಣಗಿ ಹೋಗುವುದು" ಎಂದು ಹೇಳಿ ಅಂತರ್ಧಾನಳಾದಳು. ಹೀಗೆ ಗಾಯತ್ರೀ ಮಂತ್ರೋದಯವಾಯಿತು.

ವಸಿಷ್ಠರು ದಯಮಾಡಿಸಿ `ಪಾಯಸದ ಪರೀಕ್ಷೆ' ಮಾಡಿ ವಿಶ್ವಾಮಿತ್ರನನ್ನು ಬ್ರಹ್ಮರ್ಷಿಯೆಂದು ಕರೆದರು. ಬೃಹದ್ರಥದಲ್ಲಿ ವಸಿಷ್ಠ ವಿಶ್ವಾಮಿತ್ರರನ್ನು ಕೂರಿಸಿ ಮೆರವಣಿಗೆ ಮಾಡುವುದರಿಂದ ಕಾದಂಬರಿ ಮುಕ್ತಾಯವಾಗುತ್ತದೆ.

ಈ ಕಾದಂಬರಿಯನ್ನು ಓದಿದ ಮೇಲೆ ಇದೇನು ಪುರಾಣವೋ, ಪುಣ್ಯಕಥೆಯೋ, ಪವಾಡ ಪರಂಪರೆಯೋ ಕೇವಲ ಭ್ರಮಾಜನಿತವಾದ ಚಿತ್ರವೋ, ಸತ್ಯವೋ, ಅಸತ್ಯವೋ ಎಂಬಂತೆ ಅನೇಕ ಸಂದೇಹಗಳು ಜನಿಸುವುದು ಸ್ವಾಭಾವಿಕ. ಇದನ್ನು ಕೇವಲ ಭ್ರಮಾಜನಿತ ವಿಚಿತ್ರ ಕಲ್ಪನೆಯೆಂದು ತಳ್ಳಿಬಿಡುವಂತಿಲ್ಲ. ಅಂಗಾಂಗಗಳಿಗೆಲ್ಲ ಸಪ್ರಮಾಣವಾಗಿ ಪ್ರಾಮಾಣಿಕವಾಗಿ ಸುಸಂಬದ್ಧವಾಗಿ ಹೊಂದಾಣಿಕೆಯನ್ನುಂಟು ಮಾಡಿರುವುದು ಗೊತ್ತಾಗುತ್ತದೆ. ಇದು ತುಂಬ ವಿದ್ಯಾವಂತನಾದ, ವೇದಾಧ್ಯಯನನಿರತನಾದ, ಉಪನಿಷತ್ತುಗಳ ರಹಸ್ಯವನ್ನು ಭೇದಿಸಲು ಪ್ರಯತ್ನಪಟ್ಟ, ಪ್ರಾಮಾಣಿಕ ವ್ಯಕ್ತಿಯು

ಆಲೋಚನೆಗಳನ್ನು ರೂಢಿಸಿಕೊಂಡಿರುವ ಕೃತಿ; ಗಾಯತ್ರೀಮಂತ್ರದ ಉದಯದ ಹಿಂದೆ ಆಗಿರಬಹುದಾದ ಮಹಾಸಾಧನೆಯನ್ನು ಹಂತಹಂತವಾಗಿ ಕಲ್ಪಿಸಿಕೊಂಡಿರುವ ಕೃತಿ.

ಇದು ಸಾಮಾಜಿಕವಾಗಿ ಬ್ರಾಹ್ಮಣ ಅಬ್ರಾಹ್ಮಣ ಎಂಬ ಭೇದ ತಲೆದೋರಿ ಲೋಕದಲ್ಲಿ ವೈಮನಸ್ಯವು ಹೆಚ್ಚಾಗುತ್ತಿದ್ದಾಗ ಬ್ರಾಹ್ಮಣರಿಗೂ ಅಬ್ರಾಹ್ಮಣರಿಗೂ ನಿಜವಾದ ಬ್ರಾಹ್ಮಣ್ಯವೇನೆಂಬುದನ್ನು ತಿಳಿಸಿಕೊಟ್ಟು, ಜಾತಿಯಲ್ಲಿ ಅಬ್ರಾಹ್ಮಣರಾದವರೂ ಹೇಗೆ ಬ್ರಾಹ್ಮಣ್ಯವನ್ನು ಸಂಪಾದಿಸಬಹುದೆಂಬುದನ್ನು ಹೇಳುವ ಕೃತಿ; ಬ್ರಾಹ್ಮಣ್ಯವನ್ನು ಕಳೆದುಕೊಂಡ ಜಾತಿಬ್ರಾಹ್ಮಣನನ್ನು ಎಚ್ಚರಿಸುವ ಕೃತಿ. ವ್ಯವಹಾರದಲ್ಲಿ ಇಂದು ಎಲ್ಲರೂ ಶೂದ್ರರೇ ಆಗಿರುವಾಗ, ಬ್ರಾಹ್ಮಣ್ಯದ ಚಿಂತನೆಗೆ ಅವಕಾಶ ಮಾಡಿಕೊಡುವ ಕೃತಿಯಲ್ಲಿ ಲೇಖಕರ ಗಮನವೆಲ್ಲ ಲೋಕಕಲ್ಯಾಣದ ಕಡೆಗೇ ಇದೆ. ಭೂಮಿಗೆ ದೇವತೆಗಳನ್ನು ಇಳಿಸುವುದು, ಸ್ವರ್ಗಕ್ಕೆ ಮಾನವರನ್ನು ನೂಕುವುದು, ಎಲ್ಲ ಋಷಿಗಳೂ ಸಭೆ ಸೇರುವುದು, ನಂದಿನಿಯೂ ಶಬಲೆಯೂ ಸೈನ್ಯಗಳನ್ನು ಪುಡಿಪುಡಿಮಾಡಿ ಓಡಿಸುವುದು ಇವೆಲ್ಲವೂ ಮನಸ್ಸಿನ ಒಳಗೆ ನಡೆಯುವ ಆಂದೋಳನಗಳ ಪ್ರತೀಕಗಳು. ಇಲ್ಲಿರುವ ಪ್ರತಿಯೊಂದು ಅಂಶವೂ ಒಂದು ಪ್ರತೀಕವಾಗಿ, ಪ್ರತಿಮೆಯಾಗಿ, ಮಾನವಕುಲದ ಉದ್ಧಾರಕ್ಕಾಗಿ ಮಾರ್ಗದರ್ಶಕವಾಗಿದೆ. ಇಲ್ಲಿಯ ಭಾಷೆಯಲ್ಲಿ ಮಾತ್ರ ಸ್ಪಷ್ಟವಾದ ಒಂದು ಮಿತಿಯಿದೆ. ಸ್ವೇಚ್ಛಾಪ್ರಾರಬ್ಧ, ಪರೇಚ್ಛಾಪ್ರಾರಬ್ಧ, ಕಲಿಧರ್ಮ, ಬ್ರಹ್ಮಾಂಡ, ಜಗತ್ಸೃಷ್ಟಿ, ಅಪಾಂನಪಾತ್, ದರ್ಭಪಿಂಜೂಲ, ಅಗ್ನಿಸಾತ್, ಸದ್ಯೋಘೃತ, ಜ್ಯೋತಿರ್ಲತೆ, ಆಸಂದಿ, ದರ್ಭಾಸನ, ಮಂತ್ರಜಲ, ಪ್ರೋಕ್ಷಣೆ, ಅಪೋಶನ, ಸಮಿತ್ತು, ನಾರುಮಡಿ–ಇವೇ ಮುಂತಾದ ಶಬ್ದಗಳ ಪ್ರಯೋಗವಿಲ್ಲದೆ ಲೇಖಕರ ಅಭಿಪ್ರಾಯವನ್ನು ತಿಳಿಸುವುದೇ ಕಷ್ಟವಾಗುತ್ತದೆ. ಅಂದರೆ ಈ ಕಾದಂಬರಿಯ ಪ್ರವೇಶಕ್ಕೂ ಒಂದು ಮಟ್ಟದ ಯೋಗ್ಯತೆ ಬೇಕೆಂಬುದು ಸ್ವತಃಸಿದ್ಧ. `ಸರ್ವೇಷಾಂ ಹಿತಾಯ' ಬರೆದ ಈ ಕಥೆಯಲ್ಲಿ ಎರಡು ಜಾಡುಗಳನ್ನು ಲೇಖಕರು ವಿಸ್ತರಿಸಿದ್ದಾರೆ. ಒಂದು ವಿಶ್ವಾಮಿತ್ರನದು; ಕ್ಷತ್ರಿಯ ರಕ್ತ, ಬ್ರಹ್ಮ ತೇಜಸ್ಸು-ಇವುಗಳ ಸಮೀಕರಣ. ಎರಡು ಪರಶುರಾಮನದು; ಬ್ರಾಹ್ಮಣ ರಕ್ತ, ಕ್ಷಾತ್ರ ತೇಜಸ್ಸು ಇವುಗಳ ಸಮೀಕರಣ. ಆಧುನಿಕ ಅನುವಂಶೀಯ ಗುಣಗಳ ಅಭ್ಯಾಸವಾಗಿ ಈ ಚಿತ್ರ ಮೂಡಿದೆಯೊ ಏನೋ. ಕರ್ಮಫಲ, ತಪಃಫಲಗಳ ಮಿಶ್ರಣವೂ ಕೂಡಿಕೊಂಡಿದೆ.

ಒಮ್ಮೆ ಓದಿದರೆ ಸ್ಪಷ್ಟವಾಗದೆ ಇದ್ದರೂ ಮತ್ತೊಮ್ಮೆ, ಮಗದೊಮ್ಮೆ, ಓದಿದರೆ ಆತ್ಮದ ಬೆಳವಣಿಗೆಗೆ ಸಹಾಯಕವಾಗುವ ಈ ಕೃತಿಯಿಂದ ದೇವುಡು ಅಮರರಾಗಿದ್ದಾರೆ. ಊರ್ಧ್ವಮುಖಿಯಾದ ಒಂದು ಚೇತನದ ಈ ನಿರ್ಮಾಣದಿಂದ ನಾವು ಎಷ್ಟೋ ವಿಷಯಗಳ ಬಗ್ಗೆ ಜಿಜ್ಞಾಸೆ ಮಾಡುವುದಕ್ಕೆ ತೊಡಗುತ್ತೇವೆ. ಈ ಕಾರ್ಯ ಮಾಡುವ ಸಾಹಿತ್ಯ ಕೃತಿ ನಿಜವಾಗಿಯೂ ಸಾರ್ಥಕವಾಯಿತೆಂಬ ಬಗ್ಗೆ ಯಾರಿಗೂ ಸಂದೇಹವಾಗುವುದಿಲ್ಲ.

★

`ಮಹಾಬ್ರಾಹ್ಮಣ' : ಅನ್ವೇಷಣೆಯ ತೀವ್ರತೆ

ಶ್ರೀ ಬಿ.ಎಸ್. ಚಂದ್ರಶೇಖರ್

ದೇವುಡು ನರಸಿಂಹಶಾಸ್ತ್ರಿ ಕನ್ನಡ ಕಾದಂಬರೀ ಕ್ಷೇತ್ರದಲ್ಲಿ ಮರೆಯಲಾಗದ ಹೆಸರು. ನಿರ್ಮಾಣ ಶೀಲಯುಗದ ಕಾದಂಬರಿಕಾರರಲ್ಲಿ ದೇವುಡು ಪ್ರಮುಖರಾಗಿ ಕಾಣುತ್ತಾರೆ. ಕನ್ನಡಕ್ಕೆ ಮೂರು ಅಪೂರ್ವ ಕಾದಂಬರಿಗಳನ್ನು ನೀಡಿದ ಕೀರ್ತಿ ಅವರದು-ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ. `ಮಹಾ ಕ್ಷತ್ರಿಯ'ದಲ್ಲಿ ನಹುಷ ಚಕ್ರವರ್ತಿಯ ಕಥೆಯೂ `ಮಹಾದರ್ಶನ'ದಲ್ಲಿ ಯಾಜ್ಞವಲ್ಕ್ಯರ ಕಥೆಯೂ ವಿಸ್ತೃತವಾಗಿ ಚಿತ್ರಿತಗೊಂಡಿವೆ.

ವೇದಕಾಲದ ಜನಜೀವನ, ಸಂಸ್ಕೃತಿ ಮತ್ತು ರೀತಿನೀತಿಗಳನ್ನು ಈ ಮೂರೂ ಕಾದಂಬರಿಗಳು ಚಿತ್ರಿಸುತ್ತವೆ. ವೇದಾಂತ, ಪೂರ್ವ ಮೀಮಾಂಸಾ ಶಾಸ್ತ್ರಗಳ ಸಾಂಪ್ರದಾಯಿಕ ಅಧ್ಯಯನ, ಪ್ರಚಂಡ ಧೀಶಕ್ತಿ, ದೇವ ಉಪನಿಷತ್ತುಗಳಲ್ಲಿ ಪಾಂಡಿತ್ಯ ಮತ್ತು ಇವೆಲ್ಲದರ ಜತೆಗೆ ಆಧುನಿಕ ದೃಷ್ಟಿಕೋನ ದೇವುಡು ಅವರ `ಮಹಾ ಬ್ರಾಹ್ಮಣ'ವನ್ನು ಅತ್ಯುತ್ತಮ ಕೃತಿಯಾಗಿಸಿದೆ. ಆದ್ದರಿಂದ ಕನ್ನಡ ಸಾಹಿತ್ಯ ಲೋಕದಲ್ಲಿ ಇದೊಂದು ಅಧ್ಯಯನಯೋಗ್ಯ ಕೃತಿಯಾಗಿ ಇನ್ನಷ್ಟು ಕಾಲ ಮುಂದುವರೆಯುವುದರಲ್ಲಿ ಸಂದೇಹವಿಲ್ಲ.

ಮಹಾ ಬ್ರಾಹ್ಮಣದ ಕಥೆ ಅಲೆ ಅಲೆಯಾಗಿ ತೆರೆದುಕೊಳ್ಳುತ್ತ ಎಪ್ಪತ್ತು ತರಂಗಗಳಲ್ಲಿ ಪುರುಷ ಪ್ರಯತ್ನದ ಪ್ರತಿಮೆಯಂತಿರುವ ವಿಶ್ವಾಮಿತ್ರನ ಕೃತಿಯನ್ನು ಅಧ್ಯಯನದ ದೃಷ್ಟಿಯಿಂದ ನೋಡಿದಾಗ ಹಲವು ಸಂಗತಿಗಳು ಗಮನಕ್ಕೆ ಬರುತ್ತವೆ. ಮನುಷ್ಯ–ದೇವತೆಗಳ ಸಂಬಂಧ, ವೇದ ಕಾಲದ ಋಷಿಗಳು, ರಾಜಮಹಾರಾಜರು, ರಂಬೆ–ಮೇನಕೆ ಘೃತಾಚಿಯರಂಥ ಅಪ್ಸರೆಯರ ನಡವಳಿಕೆ, ಋಷಿಪತ್ನಿಯರು, ಋಷಿ ಪರಿಷತ್ತಿನಲ್ಲಿ ಮಹಿಳೆಯರ ಸ್ಥಾನ ಮತ್ತು ಮುಖ್ಯವಾಗಿ ಸತ್ವ, ರಜಸ್ಸು, ತಮಸ್ಸು-ಈ ತ್ರಿಗುಣಗಳ ಪರಸ್ಪರ ಮೇಲಾಟ-ಇಂಥ ನಾನಾ ವಿಷಯಗಳು ಕೃತಿಯ ಒಡಲನ್ನು ಸಮೃದ್ಧವಾಗಿಸಿವೆ.

ಕ್ಷಾತ್ರಬಲದ ಮಿತಿ

ಇಲ್ಲಿಯ ಕಥೆಯನ್ನು ಸ್ಥೂಲವಾಗಿ ಹೀಗೆ ನಿರೂಪಿಸಬಹುದು.

ವಸಿಷ್ಠರ ಆಶ್ರಮಕ್ಕೆ ಬಂದ ರಾಜ ಕೌಶಿಕನು ಆಶ್ರಮದಲ್ಲಿದ್ದ ದೇವಧೇನು `ನಂದಿನಿ'ಯನ್ನು ಬಯಸುತ್ತಾನೆ. ಅದು ದೊರೆಯದಿದ್ದಾಗ ಕ್ಷಾತ್ರಬಲದಿಂದ ವಶಪಡಿಸಿಕೊಳ್ಳಲು ಯತ್ನಿಸಿ ಸೋತು ಮುಖಭಂಗ ಹೊಂದಿ ಹಿಂದಿರುಗುತ್ತಾನೆ. ಮುಂದೆ ರುದ್ರನನ್ನು ತಪಸ್ಸಿನಿಂದ ಒಲಿಸಿಕೊಂಡು ದಿವ್ಯಾಸ್ತ್ರ ಸಂಪಾದಿಸಿ ವಸಿಷ್ಠರ ಆಶ್ರಮವನ್ನು ನಿರ್ನಾಮ ಮಾಡಿ ನಂದಿನಿಯನ್ನು ಪಡೆಯಲು ಆ ಅಸ್ತ್ರಗಳನ್ನು ಪ್ರಯೋಗಿಸುತ್ತಾನೆ. ವಸಿಷ್ಠರ ಅನುಪಸ್ಥಿತಿಯಲ್ಲಿಯೂ ಅವರ ಬ್ರಹ್ಮದಂಡ ಮಹಾಸ್ತ್ರಗಳೆಲ್ಲವನ್ನೂ ನುಂಗಿ ಹಾಕುವುದಲ್ಲದೆ ಕೌಶಿಕನನ್ನು ಮೂರ್ಛೆಗೊಳಿಸುತ್ತದೆ. ಕ್ಷಾತ್ರಬಲದ ಮಿತಿಯನ್ನರಿತ ಕೌಶಿಕನು ಬ್ರಹ್ಮಬಲವೇ ಬಲವೆಂದು ಮನಗಂಡು ಮತ್ತೆ ತಪಸ್ಸಿಗೆ ತೆರಳಿ ಆಪೋದೇವಿಯರನ್ನು ಒಲಿಸಿಕೊಳ್ಳುತ್ತಾನೆ.

ಕಥೆ ಮುಂದುವರೆದಂತೆ ತ್ರಿಶಂಕುವಿನ ಸಶರೀರ ಸ್ವರ್ಗ ಪ್ರವೇಶ, ವಿಶ್ವಾಮಿತ್ರ ಮೇನಕೆಯರ ಸುಮಧುರ ಪ್ರಣಯದ ಸನ್ನಿವೇಶ, ವಿಶ್ವಾಮಿತ್ರನ ಮನಃಪರಿವರ್ತನೆ, ಘೃತಾಚಿಯೊಡನೆ ದಾಂಪತ್ಯ, ಯಜ್ಞಕ್ಕೆ ನರಪಶುವಾದ ಶುನಶ್ಶೇಫನ ಕಥೆ, ಋಷಿ ಪರಿಷತ್ತಿನಲ್ಲಿ ವಿಶ್ವಾಮಿತ್ರನು ಬ್ರಹ್ಮರ್ಷಿಯೇ, ಅಲ್ಲವೇ ಎಂಬ ಜಿಜ್ಞಾಸೆ, ಧರ್ಮದೇವತೆಗೆ ವಿಶ್ವಾಮಿತ್ರನ ಐವತ್ತು ಮಕ್ಕಳ ಬಲಿ, ವಿಶ್ವಾಮಿತ್ರನ ಗಾಯತ್ರೀ ಮಂತ್ರ ಸಾಧನೆ–ಹೀಗೆ ಕಾದಂಬರಿಯ ಹಂದರದಲ್ಲಿ ಕಥೆಯ ಬಳ್ಳಿ ಹರಡಿಕೊಂಡಿದೆ.

ಇದು ದ್ವಾಪರ ಯುಗಕ್ಕೂ ಮೊದಲು ಬರುವ ತ್ರೇತಾಯುಗದ ಕಥೆಯೆಂಬುದನ್ನು ಗಮನಿಸಬೇಕು. ಶ್ರೀರಾಮನ ಜನನವೇ ಆಗಿರದಿದ್ದ ಕಾಲವದು. ಅಂದಿನ ನಡೆನುಡಿಗಳು, ಜೀವನಕ್ರಮ, ಚಿಂತನ ವಿಧಾನಗಳನ್ನು ಪರಿಚಯಿಸುವ ಕಾರ್ಯ ಸುಲಭವಲ್ಲ ಎಂದು ಹೇಳಬೇಕಾಗಿಲ್ಲ. ದೊರೆಯುವ ಅಲ್ಪ ಮಾಹಿತಿಯ ಪೂರ್ಣ ಪ್ರಯೋಜನ ಪಡೆಯಬೇಕು. ಜತೆಗೆ ಕಲ್ಪನೆಯನ್ನೂ ಧಾರಾಳವಾಗಿ ಬಳಸಬೇಕು. ಕಲ್ಪನೆ ಎಲ್ಲೂ `ವಾಸ್ತವ'ಕ್ಕೆ ವಿರೋಧವಾಗದಂತೆ ಎಚ್ಚರ ವಹಿಸಬೇಕು.

ಮನುಷ್ಯನ ಚಟುವಟಿಕೆಗಳನ್ನು ದೇವತೆಗಳು ನಿಯಂತ್ರಿಸುವ ಕಲ್ಪನೆಯ ಬಗ್ಗೆ ಇಲ್ಲಿ ಜಿಜ್ಞಾಸೆಯಿದೆ. ವಿಶ್ವಾಮಿತ್ರನಿಗೆ ಇಂದ್ರನು ಮೇನಕೆಯನ್ನು ಕೊಡುಗೆ ನೀಡುವ, ಸಂದರ್ಭದಲ್ಲಿ ಈ ಕುರಿತ ಅತ್ಯಂತ ಸ್ಪಷ್ಟ ವಿಚಾರಗಳಿವೆ:

ದೇವತೆಗಳೆಂದರೆ ಯಾರು? ಈ ಪ್ರಪಂಚ ಸೃಷ್ಟಿಯಾದಾಗ, ಇನ್ನು ಮುಂದೆ ಇರಬೇಕಾದ ಸ್ಥಿತಿಯ ರಕ್ಷಣೆಗಾಗಿ ಅಧಿಕಾರ ಪಡೆದವರು. ಅವರು ಹೇಳಿದಂತೆ ಈ ವಿಶ್ವವೆಲ್ಲವೂ ನಡೆದೇ ತೀರಬೇಕು ಎಂಬುದು ಸೃಷ್ಟಿಯ ರಹಸ್ಯ. ನಮ್ಮ ಸಂಕಲ್ಪದಿಂದ ನಾವು ಕಾರ್ಯ ಮಾಡಿದೆವು ಎಂದುಕೊಂಡರೂ ಅದು ಕೂಡ ದೇವತೆಗಳ ಪ್ರಭಾವವೇ. ಎಲೆಯ ಚಿಗುರು ಹೂಗಾಳಿ ಸುಳಿದಾಗ ಅಲುಗಾಡುವಂತೆ, ಕೈಯಲ್ಲಿ ಹಿಡಿದ ಕನ್ನೆದಿಲೆ ಹೂವು ತಿರುಗಿಸಿದಂತೆ ತಿರುಗಲೇಬೇಕಾಗಿರುವಂತೆ ಈ ಸೃಷ್ಟಿಯಲ್ಲಿರುವ ಸಮಸ್ತವೂ ದೇವತೆಗಳ ಇಷ್ಟದಂತೆ ತೀರಬೇಕೆಂಬ ನಿಯಮಕ್ಕೆ ಒಳಗಾಗಿವೆ. ಆದರೆ ದೇವತೆಗಳು ಪ್ರತ್ಯಕ್ಷ ಪ್ರಿಯರಲ್ಲ; ಪರೋಕ್ಷ ಪ್ರಿಯರು. ಎದುರಿದ್ದು ಹೇಳಿ ಕೆಲಸ ಮಾಡಿಸದೆ ಅಂತರಂಗದಲ್ಲಿ ನಮ್ಮ ಬುದ್ಧಿ ಅಹಂಕಾರಗಳ ಹಿಂದಿದ್ದು ಕೆಲಸ ಮಾಡಿಸುವುದು ಅವರ ಪದ್ಧತಿ.

ನಮ್ಮ ವಾಕ್, ಮನಸ್ಸು, ಬುದ್ಧಿ, ಅಹಂಕಾರಗಳನ್ನು ಪ್ರೇರಿಸುವ ಸೂಕ್ಷ್ಮತತ್ವಗಳೇ ದೇವತೆಗಳು ಎಂದಂತಾಯಿತು. ಇನ್ನು ಅವರು `ತಪೋಭಂಗ' ಮಾಡುವರು ಎನ್ನುವ ಕಲ್ಪನೆಯೂ ಸರಿಯಲ್ಲ. ಯಜ್ಞ ಮಾಡುವವರು ತಪಸ್ವಿಗಳು, ಪುಣ್ಯ ಕಾರ್ಯಗಳನ್ನು ಮಾಡುವವರು ಬಯಸುವುದಾದರೂ ಏನನ್ನು? ಸವಭಂದ ಆನಂದ ನೀಡುವ ಸಿದ್ಧಿಗಳನ್ನು ತಾನೇ? ಆ ಸಿದ್ಧಿಗಳೇ ಮೈವೆತ್ತಿ ಬಂದಂತೆ ವಿಶ್ವಾಮಿತ್ರನೆದುರು ಮೇನಕೆ ಬಂದು ನಿಲ್ಲುತ್ತಾಳೆ, ಅಷ್ಟೆ ಆ ಸಿದ್ಧಿಯನ್ನು ನಿರಾಕರಿಸಬೇಕಾದ್ದಿಲ್ಲ, ಇಷ್ಟಕ್ಕೂ ಸೃಷ್ಟಿರೂಪವೇ ತಾನಾಗಿರುವ ಹೆಣ್ಣನ್ನು ಬಿಟ್ಟು ಸಾಧಿಸುವುದಾದರೂ ಏನು? ಧರ್ಮಕ್ಕೆ ವಿರುದ್ಧವಾಗದ ಭೋಗವು ಮೇಲ್ನೋಟಕ್ಕೆ ತಪಸ್ಸನ್ನು ಹಾಳು ಮಾಡಿದಂತೆ ಕಂಡರೂ ವಾಸ್ತವವಾಗಿ ತಪೋವೃದ್ಧಿಗೆ ನೆರವಾಗುತ್ತದೆ.

ಪ್ರಕೃತಿ ಒಬ್ಬನನ್ನು ಮೇಲೆತ್ತುವುದು ಏಕೆ? ಪ್ರಕೃತಿಯು ತನ್ನ ಕಾರ್ಯಕ್ಕಾಗಿ ಯಾವನು ಬೇಕೋ ಅವನ ಅಹಂಕಾರನವನ್ನು ಬೆಳೆಸುವುದು; ಒಮ್ಮೊಮ್ಮೆ ಅದಕ್ಕೆ ಬೇಡದವನ ಅಹಂಕಾರ ವನ್ನೂ ಬೆಳೆಸುವುದುಂಟು. ಆದರೆ ಎರಡನೆಯ ಸಂದರ್ಭದಲ್ಲಿ ಅವನ ವಿನಾಶಕ್ಕಾಗಿ. ಹೀಗೆ ವ್ಯಕ್ತಿ ಯೊಬ್ಬನ ಏಳು ಬೀಳುಗಳೆಲ್ಲ ಸೃಷ್ಟಿಯ ಒಟ್ಟಾರೆ ಲೀಲೆಯ ಅಂಗವಾಗಿ. ಪ್ರಕೃತಿಯ ಈ ಕಾರ್ಯ ವನ್ನು ಅದರ ಸೂಕ್ಷ್ಮಶಕ್ತಿಗಳಾದ ದೇವತೆಗಳ ಮೂಲಕ ಅದು ನಡೆಸುತ್ತದೆ.

ಇಂದ್ರ, ಕಾಮ, ರುದ್ರ, ವಸಂತ, ಅಗ್ನಿ, ಆಪೋದೇವತೆಗಳು ಮುಂತಾದ ದೇವತೆಗಳು ಕಾದಂಬರಿಯಲ್ಲಿ ಆಗಾಗ್ಗೆ ಸುಳಿಯುತ್ತಾರೆ. ದೇವಲೋಕಕ್ಕೆ ಅಂಟಿಕೊಂಡ ಅಪ್ಸರೆಯರೂ ಒಂದು ರೀತಿಯ ದೇವತೆಗಳೇ. ಅಪ್ಸರೆಯರ ಪೈಕಿ ಮೇನಕೆ, ಘೃತಾಚಿ, ರಂಭೆ-ಈ ಮೂವರ ಪ್ರಸ್ತಾಪ ಕೃತಿ ಯಲ್ಲಿ ಬರುತ್ತದೆ. ಮೇನಕೆಯದಂತೂ ಪ್ರಧಾನ ಪಾತ್ರವೇ.

ಇಂದ್ರನ ಆಣತಿಯಂತೆ ವಸಂತ ಮತ್ತು ಕಾಮದೇವರು ಬಂದು ಮೇನಕೆಯನ್ನು ವಿಶ್ವಾ ಮಿತ್ರನಿಗೆ ಒಪ್ಪಿಸಿ `ಇವಳನ್ನು ಮಡದಿಯೆಂದು ಅಂಗೀಕರಿಸು' ಎಂದು ಆದೇಶಿಸಿ ಹೋಗುತ್ತಾರೆ. ದೇವಲೋಕದ ಹೆಣ್ಣು ಮಾನವಲೋಕದ ಗಂಡನೊಂದಿಗೆ ಸೇರಿ ಸಂಸಾರಚಕ್ರ ಆರಂಭವಾಗುತ್ತದೆ. ಮೇನಕೆಯಿಂದಾಗಿ ವಿಶ್ವಾಮಿತ್ರನಿಗೆ ಅನೇಕ ದೇವರಹಸ್ಯಗಳು ತಿಳಿಯತೊಡಗುತ್ತವೆ. ವಿಶ್ವಕ್ಕೇ ಮಿತ್ರ ನಾದವನು ಒಲಿದು ಬಂದ ಹೆಣ್ಣಿಗೆ ಮಿತ್ರನಾಗದಿರುವುದೆಂತು? `ಭೋಗವು ಹಿತವೂ ಪ್ರಿಯವೂ ಆಗಬೇಕಾದರೆ ಗಂಡು ತನ್ನನ್ನು ಹೆಣ್ಣಿಗೆ ಒಪ್ಪಿಸಿಕೊಳ್ಳಬೇಕು'-ಎಂದು ಋಷಿಯು ಅಪ್ಸರೆಗೆ ವಶವಾ ಗುತ್ತಾನೆ.

ರಂಭೆ ಊರ್ವಶಿಯರು ಮೇನಕೆಯ ಮೇಲೆ ಕನಿಕರ ತೋರಿ ಭೂಲೋಕಕ್ಕೆ ಬಂದಾಗ ಅವಳ ಪತಿಭಕ್ತಿಯನ್ನೂ, ಆ ಆದರ್ಶ ದಾಂಪತ್ಯವನ್ನೂ ನೋಡಿ ದಂಗಾಗುತ್ತಾರೆ. ಅಸೂಯೆಗೂ ಒಳಗಾ ಗುತ್ತಾರೆ. ಮುಂದೊಂದು ಸಂದರ್ಭದಲ್ಲಿ ವಿಶ್ವಾಮಿತ್ರನನ್ನು ಒಲಿಸಿಕೊಳ್ಳಲು ಈ ಇಬ್ಬರು ಅಪ್ಸರೆ ಯರೂ ಬರುತ್ತಾರೆ. ಅಹಂಕಾರದಿಂದ ಮತ್ತಳಾದ ರಂಭೆ ಶಿಲೆಯಾಗುತ್ತಾಳೆ. ವಿನೀತಳಾದ ಘೃತಾಚಿ ಋಷಿಪತ್ನಿಯಾಗಿ ನೂರು ಮಕ್ಕಳಿಗೆ ಜನ್ಮವೀಯುತ್ತಾಳೆ.

ಶಕುಂತಲೆಯ ಜನನವಾದಾಗ ಆ ಸ್ತ್ರೀ ಶಿಶುವನ್ನು ಪತಿಗೆ ಒಪ್ಪಿಸಿ ಆತನ ಅನುಮತಿ ಪಡೆದು ಮೇನಕೆ ಸ್ವರ್ಗಕ್ಕೆ ಹೊರಡುತ್ತಾಳೆ.

ಈ ಕೃತಿಯಲ್ಲಿ ಅನೇಕ ಮಹಾನ್ ಋಷಿಗಳ ಪರಿಚಯವಾಗುತ್ತದೆ. ಮುಖ್ಯವಾಗಿ ಬ್ರಹ್ಮರ್ಷಿಯಾದ ವಸಿಷ್ಠ ಮತ್ತು ಆತನ ಶಿಷ್ಯ ವಾಮದೇವ. ಬ್ರಹ್ಮಜ್ಞಾನಿಯಾದ ವಸಿಷ್ಠನು ತನ್ನ ಪಾಡಿಗೆ ತಾನು ನಿರ್ಲಿಪ್ತನಾಗಿದ್ದರೂ ವಿಶ್ವಾಮಿತ್ರನಿಗೆ ಒಬ್ಬ ಪ್ರತಿಸ್ಪರ್ಧಿಯಾಗಿ, ಸವಾಲಾಗಿ, ಆದರ್ಶನಾಗಿ ಕಂಡುಬರುತ್ತಾ ಅವನ ಆಧ್ಯಾತ್ಮಕ ಸಾಧನೆಯನ್ನು ವೃದ್ಧಿಸುವಂತಾಗುತ್ತದೆ. ವಸಿಷ್ಠನ ಅಣತಿಯಂತೆ ವಾಮದೇವನು ವಿಶ್ವಾಮಿತ್ರನಿಗೆ ಮಾರ್ಗದರ್ಶಿಯಾಗುತ್ತಾನೆ. ಇಲ್ಲಿ ಬರುವ ಇನ್ನೊಬ್ಬ ಋಷಿ ಜಮದಗ್ನಿ. ವಿಶ್ವಾಮಿತ್ರನ ಸೋದರ ಸಂಬಂಧಿಯಾದ ಈತ ಅವತಾರ ಪುರುಷ ನಾದ ಪರಶುರಾಮನ ತಂದೆ.

ನಚಿಕೇತ, ಯಾಜ್ಞವಲ್ಕ್ಯ, ಪಿಪ್ಪಲಾದ, ಗಾರ್ಗಿ, ಗೌತಮಿ, ವಿಶ್ವಾವರಾ ಮುಂತಾದವರಿಂದ ಕೂಡಿದ ಋಷಿ ಪರಿಷತ್ತು ವಿಶ್ವಾಮಿತ್ರನ ಬ್ರಹ್ಮರ್ಷಿತ್ವವನ್ನು ಕುರಿತು ಜಿಜ್ಞಾಸೆ ನಡೆಸುವ ಪ್ರಸಂಗವು ವೇದಕಾಲದ ವೈಚಾರಿಕ ಹಿರಿಮೆಯನ್ನು ಸ್ಪಷ್ಟವಾಗಿ ಮನದಟ್ಟು ಮಾಡಿಕೊಡುತ್ತದೆ. ನಿಷ್ಪಕ್ಷಪಾತತೆ, ವಸ್ತುನಿಷ್ಠೆಯ ಉತ್ತುಂಗವನ್ನು ಇಲ್ಲಿ ಕಾಣಬಹುದು. ಆಗ ಮಹಿಳೆಯರಿಗೆ ಎಂಥ ಸ್ಥಾನವಿತ್ತು ಎಂಬುದು ಋಷಿ ಪರಿಷತ್ತಿನ ಚರ್ಚೆಗಳಿಂದ ವೇದ್ಯವಾಗುತ್ತದೆ. ಭಗವಾನ್ ನಚಿಕೇತ ಮತ್ತು ಯಾಜ್ಞ ವಲ್ಕ್ಯರು ವಿಶ್ವಾಮಿತ್ರನು ಬ್ರಹ್ಮರ್ಷಿ ಎಂದು ಸೂಚಿಸಿ ಅನುಮೋದಿಸಿದರೂ ಭಗವತೀ ಗಾರ್ಗಿಯು `ಪರೀಕ್ಷೆಯಾಗಲಿ' ಎಂದು ಹಟ ಹಿಡಿದು ಗೆಲ್ಲುತ್ತಾಳೆ. ಮರುದಿನದ ಋಷಿ ಪರಿಷತ್ತಿನ ಸಭೆಯಲ್ಲಿ ಆಕೆಯೇ ಸರ್ವಾನುಮತದಿಂದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗುವುದು ವೇದಕಾಲದ ಸ್ತ್ರೀ ಸ್ವಾತಂತ್ರ್ಯಕ್ಕೆ ಸ್ಪಷ್ಟ ನಿದರ್ಶನ. ಬ್ರಹ್ಮರ್ಷಿತ್ವ ಸ್ಥಾಪಿತವಾದ ಮೇಲೆ ಗಾಯತ್ರೀ ಮಂತ್ರಸಾಧನೆಗೆ ವಿಶ್ವಾಮಿತ್ರ ನನ್ನು ಪ್ರೇರಿಸುವುದೂ ಗಾರ್ಗಿಯೇ.

ಅಗಸ್ತ್ಯ-ಲೋಪಾಮುದ್ರೆ, ವಸಿಷ್ಠ-ಅರುಂಧತಿ, ಅತ್ರಿ-ಅನಸೂಯ ಹೀಗೆ ಕೆಲವು ಋಷಿ ದಂಪತಿಗಳ ಚಿತ್ರ ಇಲ್ಲಿದೆ. ವಿಶ್ವಾಮಿತ್ರ-ಮೇನಕೆಯರದೂ ಆದರ್ಶ ದಾಂಪತ್ಯವೇ. ಅಪ್ಸರೆಯಾದ ಘೃತಾಚಿಯು ದೇವ ಸಂಕಲ್ಪದಂತೆ ವಿಶ್ವಾಮಿತ್ರನಿಗೆ ನೂರು ಮಕ್ಕಳನ್ನು ಹೆತ್ತು ಕೊಡಲು ಪತ್ನಿ ಯಾಗಿ ಬಂದು ಭಗವತಿ ಕೌಶಿಕಿಯಾಗಿ ಪರಿವರ್ತಿತಳಾಗುತ್ತಾಳೆ. ಒಂದೊಂದು ಜೋಡಿಯೂ ಗೃಹಸ್ಥಾಶ್ರಮದ ಸಾರ್ಥಕತೆಯನ್ನು, ಲೌಕಿಕ ಪಾರಮಾರ್ಥಿಕಗಳ ಐಕ್ಯವನ್ನೂ ಎತ್ತಿ ಹಿಡಿಯುತ್ತವೆ.

ಪ್ರತಿ ಸೃಷ್ಟಿಗೆ, ಸಾಧನೆಗೆ ಹೆಸರಾದವನು ವಿಶ್ವಾಮಿತ್ರ. ಪುರುಷ ಪ್ರಯತ್ನದ ಪರಾಕಾಷ್ಠೆ ಎಂಬಂತೆ ಪ್ರತಿ ಸ್ವರ್ಗವನ್ನೇ ಸೃಷ್ಟಿಸಲು ನಿಮಿತ್ತವಾದ ತ್ರಿಶಂಕುವಿನ ಪ್ರಸಂಗ ಸಾಕಷ್ಟು ಪರಿಚಿತವಾ ಗಿದೆ. ಯಜ್ಞಕ್ಕೆ ನರಪಶುವಾಗುವ ಶುನಶ್ಶೇಫನ ಪ್ರಸಂಗ ಸ್ವಾರಸ್ಯವಾಗಿದೆ. ಅಜೀಗರ್ತನೆಂಬುವನು ಬಡತನ ನೀಗಿಕೊಳ್ಳಲು ತನ್ನ ಮಗನಾದ ಶುನಶ್ಶೇಫನನ್ನೇ ಮಾರಿಬಿಡುತ್ತಾನೆ, ಮುಂದೆ ಹರಿಶ್ಚಂದ್ರ ಮಹಾರಾಜನ ಯಜ್ಞಕ್ಕೆ ಶುನಶ್ಶೇಫನನ್ನು ನರಪಶುವಾಗಿ ಮಾಡಲು ಉದ್ದೇಶಿಸಿದಾಗ ಮಗನ ಪ್ರಾಣ ಉಳಿಸಿಕೊಡುವಂತೆ ಅಜೀಗರ್ತನು ವಿಶ್ವಾಮಿತ್ರನನ್ನು ಪ್ರಾರ್ಥಿಸುತ್ತಾನೆ. ಶುನಶ್ಶೇಫನನ್ನು ಸಂದರ್ಶಿ ಸಿದ ವಿಶ್ವಾಮಿತ್ರ ಅವನೊಬ್ಬ ಆತ್ಮಜ್ಞಾನಿಯೆಂದು ತಿಳಿದುಕೊಳ್ಳುತ್ತಾನೆ. ಶುನಶ್ಶೇಫನು ಯಜ್ಞಕ್ಕೆ ನರಪಶುವಾಗಿ ವಿಶ್ವಾಮಿತ್ರನ ಮಂತ್ರಸಾಧನೆಯಿಂದ ದೇವತೆಗಳ ಅನುಗ್ರಹಕ್ಕೆ ಪಾತ್ರನಾಗಿ ಉಳಿದು ಕೊಳ್ಳುತ್ತಾನೆ. ಹರಿಶ್ಚಂದ್ರನಿಗೆ ಯಜ್ಞ ಫಲವೂ ಲಭಿಸುತ್ತದೆ.

ಬಡ ಹುಡುಗನ ಮೇಲೆ ತಮ್ಮ ತಂದೆ ಅಭಿಮಾನ ತೋರಿದ್ದು ವಿಶ್ವಾಮಿತ್ರನ ಮಕ್ಕಳ ಪೈಕಿ ಆಂಧ್ರ ಮುಂತಾದ ಐವತ್ತು ಜನರಿಗೆ ಸರಿಕಾಣದೆ ತಂದೆಯನ್ನು ಪ್ರಬಲವಾಗಿ ವಿರೋಧಿಸಿ ಧರ್ಮಸ ಭೆಗೆ ಆಗ್ರಹಿಸುತ್ತಾರೆ. ಸಭೆಯಲ್ಲಿ ಅಹಂಕಾರದ ಮಾತುಗಳನ್ನಾಡಿದ ಆಂಧ್ರಾದಿಗಳು ಧರ್ಮಾಸನದ ಆಕ್ರೋಶಕ್ಕೆ ಗುರಿಯಾಗಿ ಸುಟ್ಟು ಕರಕಾಗುತ್ತಾರೆ. ಪುತ್ರಶೋಕದಿಂದ ವಿಶ್ವಾಮಿತ್ರ ಮೂರ್ಛಿತನಾ ಗುತ್ತಾನೆ. ವಸಿಷ್ಠರ ಪುತ್ರಶೋಕದ ಭಾರ ಇಳಿಸಬೇಕೆಂಬ ಆತನ ಪ್ರೂಣ್ಕೆ ಈಡೇರಿದಂತಾಗುತ್ತದೆ.

ತ್ರಿಗುಣಗಳ ಮೇಲಾಟ

ರಾಜನಾದ ಕೌಶಿಕ ಬ್ರಹ್ಮರ್ಷಿಯಾಗುವ ಸಾಧನೆಯನ್ನು ವರ್ಣಿಸುವ ಈ ಕೃತಿಯ ಮೂಲಸ್ರೋತ್ರ ಸತ್ವ, ರಜಸ್ಸು, ತಮಸ್ಸುಗಳ ಮೇಲಾಟ.

"ತ್ರಿಗುಣಗಳಿಂದ ಆಗಿರುವ ಈ ಪಂಚಭೂತಗಳಲ್ಲಿ, ಪಂಚಭೂತಗಳಿಂದ ಆಗಿರುವ ಈ ಜಗತ್ತಿನಲ್ಲಿ ಕಾರಣಾಂತರದಿಂದ ಒಂದು ಗುಣ ಮಾತ್ರ ಕಾಣುತ್ತಿದ್ದರೂ ಇತರ ಗುಣಗಳು ಅಲ್ಲಿ ಅಡಗಿ ಕುಳಿತಿರುತ್ತವೆ" ಎಂದು ಆರಂಭದಲ್ಲೇ ಪ್ರಸ್ತಾಪಿಸಲಾಗಿದೆ. ಸುರಧೇನು ನಂದಿನಿ ರಜೋಗುಣದಿಂದ ವಿಜೃಂಭಿಸುವುದು, ವಸಿಷ್ಠರಲ್ಲಿ ಸುಪ್ತವಾಗಿದ್ದ ತಮೋಗುಣ ಪುತ್ರಶೋಕದ ರೂಪದಲ್ಲಿ ವ್ಯಕ್ತವಾಗುವುದು, ರಜೋಮೂರ್ತಿಯಾಗಿದ್ದ ಕೌಶಿಕನ ದೇಹದ ಪಂಚಭೂತ ತನ್ಮಾತ್ರೆಗಳೆಲ್ಲವೂ ಸತ್ವಗುಣ ಪೂರಿತವಾಗುವುದು; ಭೋಗ ಭೂಮಿಜೆ, ದೇವ ವೇಶ್ಯೆ ಮೇನಕೆ ಸಾತ್ವಿಕ ಗೃಹಿಣಿಯಾಗುವುದು, ಸಾತ್ವಿಕ ಋಷಿ ಜಮದಗ್ನಿಯ ಪುತ್ರ ಉಗ್ರರೂಪಿ ಕ್ಷತ್ರಿಯ ಸಂಹಾರಕನಾಗುವುದು, ರಜೋಗುಣಪೂರಿತಳಾದ ರಂಭೆ ತಮೋರೂಪದ ಶಿಲೆಯಾಗುವುದು ಹೀಗೆ ಇಲ್ಲಿನ ಕಥೆಯಿಂದ ಅನೇಕ ಉದಾಹರಣೆಗಳನ್ನು ಎತ್ತಿ ಕೊಡಬಹುದು.

"ಹೊಸನೀರು ಬಂದು ಎಲ್ಲವನ್ನು ಕೊಚ್ಚಿಕೊಂಡು ಹೋಗುವಂತೆ ತಮೋಗುಣವು ಬಂದು ಎಲ್ಲವನ್ನೂ ಗುಡಿಸಿಕೊಂಡು ಹೋಗುವುದು. ರಜೋಗುಣ ಬಂದು ಹೊಸ ಆಟ ಹೂಡುವುದು. ತಮಸ್ಸು, ರಜಸ್ಸುಗಳು ಇಷ್ಟು ಸಂಭ್ರಮದಿಂದ ವಿಜೃಂಭಿಸದಿದ್ದರೆ ಸತ್ವಗುಣವು ಎಲ್ಲಿಂದ ಬರಬೇಕು? ರಸಮಯವಾದ ಫಲವನ್ನು ಬಯಸುವವರು ಹೀಚು, ಕಾಯಿಗಳ ಅನಿವಾರ್ಯತೆಯನ್ನು ಒಪ್ಪಬೇಡವೇ?" ಎಂದು ಅತ್ಯಂತ ಸ್ಪಷ್ಟ ನಿಲುವು ತಳೆಯುವ ಕೃತಿ ಮಾನವ ತ್ರಿಗುಣಗಳಿಗೆ ಅತೀತನಾಗಬೇಕಾದ ಅಗತ್ಯವನ್ನು ಸ್ಪಷ್ಟವಾಗಿ ಮನಗಾಣಿಸುತ್ತದೆ.

ಒಟ್ಟಿನಲ್ಲಿ `ಮಹಾಬ್ರಾಹ್ಮಣ'ದ ಅಧ್ಯಯನ ಒಂದು ಸುಂದರ ಸಾಹಿತ್ಯ ವಿಹಾರ. ಚಿಂತನಾ ಪ್ರಧಾನವಾದರೂ ಓದುಗರ ಕಲ್ಪನೆಯನ್ನು ಗರಿಗಟ್ಟಿಸುವ, ಭಾವನೆಗಳನ್ನು ಹರಳುಗೊಳಿಸುವ ದೇವುಡುರವರ ನಿರೂಪಣಾ ಶೈಲಿ ಕಾದಂಬರಿಯನ್ನು ರಸವತ್ತಾದ ಕಾವ್ಯವಾಗಿಸಿದೆ.

ಯುಗ ಯುಗಗಳ ಹಿಂದಿನ ಈ ಕಥೆಯನ್ನು ನಿರೂಪಿಸಿ ಎರಡು ತಲೆಮಾರುಗಳೇ ಕಳೆದು ಹೋಗಿದ್ದರೂ ಹೊಸತನದ ಆಕರ್ಷಣೆ ಪ್ರಬಲವಾಗಿಯೇ ಇದೆ. ಇಂದಿನ ಅನೇಕ ಓದುಗರಿಗೆ ಇದು ಕೇವಲ ಪುರಾಣದ ಕಥೆಯೆಂದೋ, ಇಲ್ಲಿನ ಭಾಷೆ ಆಲಂಕಾರಿಕವೆಂದೋ ಭಾಸವಾಗಬಹುದು. ಆದರೆ ಕೃತಿಯನ್ನು ತಲ್ಲೀನತೆಯಿಂದ ಓದಿದರೆ ಅನ್ವೇಷಣೆಯ ಗಾಢತೆ, ಸಂಗತಿಗಳ ರೋಚಕತೆ ಹಾಗೂ ವೈಚಾರಿಕತೆಯ ಹೊಳಪಿನಿಂದ ಲಭ್ಯವಾಗುವ ಆನಂದವನ್ನು ದಕ್ಕಿಸಿಕೊಳ್ಳಲು ಸಾಧ್ಯ.

★

ಗಾಯತ್ರೀ ಮಂತ್ರೋದಯ ಗದ್ಯ ಕಾವ್ಯ

ಶ್ರೀ ಕೆ. ನರಸಿಂಹಮೂರ್ತಿ

ನಮ್ಮ ಅಗ್ರಮಾನ್ಯ ಕಾದಂಬರಿಕಾರರಲ್ಲೊಬ್ಬರಾದ ದೇವುಡು ನರಸಿಂಹ ಶಾಸ್ತ್ರಿಗಳ (ಜನನ ೨೯-೧೨-೧೮೯೬) ಜನ್ಮಶತಾಬ್ದಿ ಸಮಾರಂಭಕ್ಕೆ ಅಭಿಮಾನಿಗಳು ಅಣಿಯಾಗುತ್ತಿದ್ದಾರೆ. ಆ ಹೊತ್ತಿಗೆ ದೇವುಡು ಅವರ ಮುಖ್ಯ ಕೃತಿಗಳಾದರೂ ಸರ್ವರಿಗೂ ಸುಲಭವಾಗಿ ಲಭ್ಯವಾಗುವಂತೆ ಪುನರ್ಮುದ್ರಿತವಾಗಬೇಕಾದ ಅಗತ್ಯವನ್ನು ಒತ್ತಿಹೇಳಬೇಕಾಗಿಲ್ಲ. ಈ ದೃಷ್ಟಿಯಿಂದ ಇಷ್ಟರಲ್ಲೇ ಅವರ `ಮಹಾಬ್ರಾಹ್ಮಣ' ಹಾಗೂ `ವಿಚಾರಣೆ' ಪುನರ್ಮುದ್ರಿತವಾಗಿ ಬಿಡುಗಡೆಯಾಗುತ್ತಿರುವುದು ಸಂತೋಷದ ಸುದ್ದಿ.

ಸಾಹಿತ್ಯ ಸಂಸ್ಕೃತಿಯ ಕಾಂತಾಸಮ್ಮಿತ ರೀತಿಯ ವಾಹಕವೆನ್ನುವ ಶ್ರದ್ಧೆ ದೇವುಡು ಅವರ ಸಮಸ್ತ ಕೃತಿಗಳ ಹಿಂದಿದೆ. ಸಂಸ್ಕೃತ ಭಾಷಾ ಸಾಹಿತ್ಯ ಮತ್ತು ಭಾರತೀಯ ತತ್ವಶಾಸ್ತ್ರಗಳನ್ನು ಅಧ್ಯಯನ ಮಾಡಿದ ಹಾಗೂ ಯೋಗಾಭ್ಯಾಸದ ಅನುಭವಿಗಳೂ ಆದ ದೇವುಡು ಸಾಹಿತ್ಯೇತರ ಗ್ರಂಥಗಳಲ್ಲಿಯೂ ಸಂಸ್ಕೃತಿಯ ಸಾರವನ್ನೂ ಸ್ವರೂಪವನ್ನೂ ವಿಸ್ತಾರವಾಗಿ ವ್ಯಾಖ್ಯಾನಿಸಿದ್ದಾರೆ. ಸಂಸ್ಕೃತ ಭಾಷೆಯ ಕಲಿಕೆ ಜನಸಾಮಾನ್ಯರಿಗೂ ಸುಲಭ ಸಾಧ್ಯವಾಗುವಂತೆ `ಮೂಲ ಸಂಸ್ಕೃತ' ಕೃತಿಯನ್ನು ಅವರು ಬಹು ಹಿಂದೆಯೇ ರಚಿಸಿದರು. ಅರಮನೆಯ ವಿದ್ವಾಂಸರ ಮಕ್ಕಳಾದ ಈ ಪ್ರಕಾಂಡ ಪಂಡಿತರು `ಮೀಮಾಂಸಾ ದರ್ಪಣ'ದಂತಹ ಗ್ರಂಥದ ಕರ್ತೃವೂ `ಯೋಗವಾಸಿಷ್ಠ'ದ ಅನುವಾದಕರೂ ಆದರು. ಪ್ರಾಚೀನ ಭಾರತೀಯ ಸಂಸ್ಕೃತಿ ಪ್ರಾದೇಶಿಕ ಸ್ತರದಲ್ಲಿಯೂ ಗ್ರಾಮಾಂತರ ಜನಸಾಮಾನ್ಯರಲ್ಲಿಯೂ ಬಲವಾಗಿ ಬೇರೂರಿ ಇಂದಿಗೂ ಆಚರಣೆಯಲ್ಲಿರುವುದನ್ನು ಪ್ರಚಲಿತ ಪದ್ಧತಿಗಳಲ್ಲಿಯೂ ಲಾವಣಿಗಳಲ್ಲಿಯೂ ಹೆಣ್ಣುಮಕ್ಕಳ ಹಾಡುಗಳಲ್ಲಿಯೂ ಅವರು ತಮ್ಮ `ಕರ್ನಾಟಕ ಸಂಸ್ಕೃತಿ' ಕೃತಿಯಲ್ಲಿ ಗುರುತಿಸಿಕೊಂಡಿದ್ದಾರೆ.

ಸನಾತನ ಸಂಸ್ಕೃತಿಯ ಪ್ರಸಾರದ ಅವಶ್ಯಕತೆಯನ್ನರಿತು ಮೊದಲು ಅದರ ಬೀಜಾಕ್ಷರಗಳನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತುವ ಉದ್ದೇಶದಿಂದ ಅವರು `ಮಕ್ಕಳ ಪುಸ್ತಕ' ಪತ್ರಿಕೆಯನ್ನು ಬಹುಕಾಲ ನಡೆಸಿಕೊಂಡು ಬಂದರು. ಹುಡುಗರಿಗಾಗಿ ಅವರು `ಆರ್ಯ ವಿದ್ಯಾ ಶಾಲೆ' ಎಂಬ ಸಂಸ್ಥೆಯನ್ನೇ ಸ್ಥಾಪಿಸಿ ಅದರ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು.

ಗಾಯತ್ರಿ ಮಂತ್ರ ದ್ರಷ್ಟಾರ

ಅವರ ದೃಷ್ಟಿಯಲ್ಲಿ ಬ್ರಾಹ್ಮಣ್ಯವೆನ್ನುವುದು ಜಾತ್ಯತೀತವಾದ ನಮ್ಮ ಸಂಸ್ಕೃತಿಯ ಮೂಲ ಮೌಲ್ಯ. ಜಾತ್ಯಾ ಬ್ರಾಹ್ಮಣೇತರರಿಗೂ ಅನಾರ್ಯರಿಗೂ ಸಹ ಬ್ರಾಹ್ಮಣ್ಯ ಅಲಭ್ಯವಲ್ಲ. ಬ್ರಾಹ್ಮಣ ಶಬ್ದವನ್ನು ಬ್ರಹ್ಮಜ್ಞ ಎನ್ನುವ ಅರ್ಥದಲ್ಲಿ ಹೆಚ್ಚಾಗಿ ದೇವುಡು ಬಳಸುತ್ತಾರೆ. ಅವರ ಕೃತಿಗಳಲ್ಲಿ ಜಾತ್ಯಂತ ಸ್ಪಂಚಲನ ಪರಿವರ್ತನೆಗಳು ಸ್ವಾಭಾವಿಕವೆನಿಸುವಷ್ಟು ಕಂಡುಬರುತ್ತವೆ. ಅವರ ಜನಪ್ರಿಯ

ಐತಿಹಾಸಿಕ ಕಾದಂಬರಿ `ಮಯೂರ'ದ ನಾಯಕ ಬ್ರಾಹ್ಮಣನಾಗಿ ಬೆಳೆದರೂ ಕ್ಷತ್ರಿಯ, ಕದಂಬ ರಾಜವಂಶದ ಕುಡಿ ಮುಂದೆ ಅವನು ತನ್ನದೇ ಸ್ವತಂತ್ರ ರಾಜ್ಯದ ಸ್ಥಾಪಕನಾಗುತ್ತಾನೆ. `ಮಹಾಬ್ರಾಹ್ಮಣ'ದ ಜಮದಗ್ನಿ ವಿಶ್ವಾಮಿತ್ರರು ಕ್ಷಾತ್ರ ಬ್ರಾಹ್ಮಣ ಅಂಶಗಳು ಅದಲುಬದಲಾದಂತೆ ಹುಟ್ಟುತ್ತಾರೆ. ಅವರ ಹುಟ್ಟಿಗೆ ಕಾರಣವಾದ ಚರುಗಳ ಅನಿರೀಕ್ಷಿತ ವಿನಿಮಯದಿಂದಾಗಿ ಕ್ಷತ್ರಿಯ ವಿಶ್ವಾಮಿತ್ರ ಮುಂದೆ ಮಹಾಬ್ರಾಹ್ಮಣನಾಗುತ್ತಾನೆ, ಗಾಯತ್ರೀ ಮಂತ್ರದ್ರಷ್ಟಾರನಾಗುತ್ತಾನೆ. ಈ ಮಂತ್ರದ ಅನುಷ್ಠಾನ ಯಾರನ್ನೂ ಆರ್ಯರನ್ನಾಗಿಸಬಲ್ಲ ಸಾಮರ್ಥ್ಯವುಳ್ಳದ್ದು.

ಸಂಪ್ರದಾಯದ ಪ್ರಭಾವೀ ವಕ್ತಾರರಾದರೂ ದೇವುಡು ಸಂಪ್ರದಾಯ ಶರಣರಲ್ಲ. ಅವರು ಕವಿಗಳು, ಆ ಶಬ್ದದ ಮೂಲಾರ್ಥದಲ್ಲಿಯೂ, ಕ್ರಾಂತದರ್ಶಿಗಳು. ಅವರ ಬ್ರಾಹ್ಮಣ್ಯದ ಕಲ್ಪನೆ ಸಂಪ್ರದಾಯಕ್ಕೆ ಅವರು ಬರೆದಿರುವ ಆಧುನಿಕ ಪ್ರಜ್ಞೆಯ ಭಾಷ್ಯವೆಂದರೂ ಒಪ್ಪುತ್ತದೆ. ಅವರ ದೃಷ್ಟಿಯಲ್ಲಿ ಬ್ರಾಹ್ಮಣ್ಯ ಸನಾತನ ಸಂಸ್ಕೃತಿಯ ಜೀವಜೀವಾಳ, ಅದರ ಪರಮೋಚ್ಚ ಸ್ಥಿತಿ: ದೇವತೆಗಳ ಸ್ಥಾನಕ್ಕಿಂತಲೂ ಅದು ಹಿರಿದು. ರಾಜ ಕೌಶಿಕ ವಿಶ್ವಾಮಿತ್ರನಾಗಿ ರಾಜರ್ಷಿಯಾಗಿ ಮಹರ್ಷಿಯಾಗಿ, ಬ್ರಹರ್ಷಿಯಾಗಿ ಭಗವಾನ್ ಆಗುವ ಆತ್ಮವಿಕಾಸದ ಪ್ರಕ್ರಿಯೆ ಈ ಕಾದಂಬರಿಯಲ್ಲಿ ಹಂತಹಂತವಾಗಿ ಚಿತ್ರಿತವಾಗಿದೆ.

ಪ್ರಾಚೀನ ಆರ್ಷೇಯ ಲೋಕವೇ ಪುನಸ್ಸೃಷ್ಟಿಯಾದಂತೆ ಕಾದಂಬರಿಯ ಪಾತ್ರಗಳೂ ಘಟನೆಗಳೂ ಕಣ್ಣಿಗೆ ಕಟ್ಟುತ್ತವೆ. ರಾಜಸ ತಾಮಸ ಗುಣಗಳ ಉಲ್ಬಣದಲ್ಲಿ ಆರಂಭವಾಗುವ ಕೃತಿ ಸಾತ್ವಿಕತೆಯ ನಿತಾಂತ ಪ್ರಶಾಂತತೆಯಲ್ಲಿ ವಿರಮಿಸುತ್ತದೆ. ನಡುವಣ ಎರಡು ದೇವತಾಸ್ತ್ರೀ ಸಂಗ ಪ್ರಸಂಗಗಳಲ್ಲಿ ಶೃಂಗಾರರಸ ಚೆಲ್ಲವರಿಯುತ್ತದೆ. ಕಲ್ಪನೆಯಲ್ಲಿ ಸ್ವೋಪಜ್ಞತೆ, ಶೈಲಿಯಲ್ಲಿ ಸುಭಾಗತೆ, ಇವುಗಳಿಂದಾಗಿ `ಮಹಾಬ್ರಾಹ್ಮಣ' ಒಮ್ಮೆಗೇ ರಮ್ಯವೂ ಭವ್ಯವೂ ಆದ ಒಂದು ಗದ್ಯಕಾವ್ಯವಾಗಿ ಪರಿಣಮಿಸಿದೆ.

ವಸಿಷ್ಠರ ಆಶ್ರಮದ ಮೇಲೆ ರಾಜ ಕೌಶಿಕ ನಡೆಸುವ ಆಕ್ರಮಣ ಹಾಗೂ ಅವನು ಅನುಭವಿಸುವ ಸೋಲು ಕಾದಂಬರಿಯ ಮೊದಲ ಪ್ರಸಂಗ. ಇಲ್ಲಿ ದೇವುಡು ಅವರ ಆಧುನಿಕ ಸಂವೇದನೆ ಹೊಚ್ಚ ಹೊಳಹನ್ನು ತೋರುವುದು. ರಾಜ ಬ್ರಹ್ಮರ್ಷಿಗಳ ನಿಲುವುಗಳ ವಿಶ್ಲೇಷಣೆಯಲ್ಲಿ ಲೋಕದಲ್ಲಿರುವ ಸರ್ವಸ್ವವೂ ರಾಜಸ್ವವೇ ಎನ್ನುವುದು ರಾಜನವಾದ. ಕ್ಷತ್ರಿಯನಾದ ತನಗೆ ಮಹತ್ವಾಕಾಂಕ್ಷೆ ಸಹಜ, ಅದರ ಸಾಧನೆಗಾಗಿ ಆಕ್ರಮಣ ಮಾಡುವುದೂ ಯುಕ್ತ ಎನ್ನುವುದು ಅವನ ದೃಷ್ಟಿ. ಬ್ರಹ್ಮದತ್ತವಾದ ನಂದಿನೀಧೇನು ದೇವತೆಗಳ ಸ್ವತ್ತು ಅದನ್ನು ಇತರರಿಗೆ ಕೊಡುವ ಅಧಿಕಾರ ತನಗಿಲ್ಲವೆನ್ನುವುದು ಬ್ರಹ್ಮರ್ಷಿಗಳ ನಿಲುವು. ದೃಷ್ಟಿಕೋನಗಳ ವೈರುಧ್ಯ ಸಂಘರ್ಷಕ್ಕೆ ಎಡೆಮಾಡಿಕೊಡುವುದು ಅನಿವಾರ್ಯ.

ಕಾದಂಬರಿಯ ವಸ್ತು ವಿಶ್ವಾಮಿತ್ರನ ಬ್ರಹ್ಮರ್ಷಿ ಪದವಿಯ ಸಾಧನೆ. ಆತ್ಮೋನ್ನತಿಯ ನಿಶ್ರೇಣಿಯನ್ನು ಮೆಟ್ಟಲು ಮೆಟ್ಟಲಾಗಿ ವಿಶ್ವಾಮಿತ್ರ ಏರುವುದನ್ನು ತೆರೆಮರೆಯಲ್ಲಿ ನಿರ್ದೇಶಿಸುವ ಸೂತ್ರಧಾರರು ವಸಿಷ್ಠರು. ಇದು ಕಡೆಕಡೆಗೆ ಗೊತ್ತಾಗಿ ವಿಶ್ವಾಮಿತ್ರನಿಗೆ ವಸಿಷ್ಠರ ಹಿರಿತನ ವೇದ್ಯ

ವಾಗುತ್ತದೆ. ವಸಿಷ್ಠರು ವಿಶ್ವಾಮಿತ್ರನಿಗೆ ಮಾರ್ಗದರ್ಶಕನನ್ನಾಗಿ ವಾಮದೇವರನ್ನು ನಿಯಮಿಸುತ್ತಾರೆ. ವಾಮದೇವರ ಮಾತನ್ನನುಸರಿಸಿ ರಾಜಕೌಶಿಕ ರುದ್ರನನ್ನು ಸಾಕ್ಷಾತ್ಕರಿಸಿಕೊಂಡು ದಿವ್ಯಾಸ್ತ್ರಗಳನ್ನು ಪಡೆದುಕೊಳ್ಳುತ್ತಾನೆ. ವಸಿಷ್ಠರ ಬ್ರಹ್ಮದಂಡದ ಮುಂದೆ ಈ ಅಸ್ತ್ರಗಳೂ ದಂಡವಾಗಿ ಹೋಗುತ್ತವೆ. ಕೌಶಿಕ ಸೋತುಬಿದ್ದಿರುವಾಗ ಅರುಂಧತಿಯವರ ಕೋರಿಕೆಯಂತೆ ವಸಿಷ್ಠವೈರ ಅವನನ್ನು ಬಿಟ್ಟು ಹೋಗುತ್ತದೆ. ಅಲ್ಲಿಂದ ಮುದೆ ವಿಶ್ವಾಮಿತ್ರನೆಂದು ತನ್ನ ಹೆಸರನ್ನು ಕೌಶಿಕ ಬದಲಾಯಿಸಿಕೊಂಡು ತಾನೂ ಇನ್ನೊಬ್ಬ ವಸಿಷ್ಠನಾಗಲು ಸಾಧನಪಥವನ್ನು ಅವಲಂಬಿಸುತ್ತಾನೆ.

ಸಶರೀರನಾಗಿಯೇ ಸ್ವರ್ಗಕ್ಕೇರುವ ಮಹತ್ವಾಕಾಂಕ್ಷೆ ಇನ್ನೊಬ್ಬ ರಾಜ ತ್ರಿಶಂಕುವಿನದು. ಅದಕ್ಕಾಗಿ ಅವನು ಮಾಡಬೇಕಾದ ಯಜ್ಞವನ್ನು ಅವನಿಂದ ಮಾಡಿಸಲು ನಿರಾಕರಿಸಿ ವಸಿಷ್ಠರು ಅವನನ್ನು ವಿಶ್ವಾಮಿತ್ರನೆಡೆಗೆ ಕಳುಹಿಸುತ್ತಾರೆ. ಈ ಹೊತ್ತಿಗಾಗಲೇ ಆಪೋದೇವಿಯರನ್ನು ಸಾಕ್ಷಾತ್ಕರಿಸಿಕೊಂಡಿರುವ ವಿಶ್ವಾಮಿತ್ರ ಒಪ್ಪಿ ಅಥರ್ವರ ಸಲಹೆಯಂತೆ ಅಶ್ವಿನೀ ದೇವತೆಗಳ ನೆರವನ್ನು ಪಡೆದುಕೊಳ್ಳುತ್ತಾನೆ. ಈ ದೇವವೈದ್ಯರು ಸ್ವರ್ಗಾರೋಹಣಕ್ಕೆ ಅವಶ್ಯವಾದ ದಿವ್ಯದೇಹವನ್ನಾಗಿ ತ್ರಿಶಂಕುವಿನ ನರದೇಹವನ್ನು ಪರಿವರ್ತಿಸಿಕೊಡುತ್ತಾರೆ. ಸ್ವರ್ಗದ್ವಾರದಿಂದ ದೂಡಲ್ಪಟ್ಟ ತ್ರಿಶಂಕುವನ್ನು ಅರ್ಧಮಾರ್ಗದಲ್ಲಿ ನಿಲ್ಲಿಸಿ ಅವನ ಸುತ್ತ ಕೆಲವು ಅನಿವಾರ್ಯ ಮಿತಿಗಳ ಒಂದು ಸಣ್ಣ ಸ್ವರ್ಗವನ್ನೇ ವಿಶ್ವಾಮಿತ್ರ ಸೃಷ್ಟಿಸಿಬಿಡುತ್ತಾನೆ. ಇನ್ನೊಬ್ಬ ಇಂದ್ರನನ್ನೇ ಸೃಷ್ಟಿಸುವ ಸಾಹಸಕ್ಕೆ ಇಳಿಯುತ್ತಿದ್ದ ವಿಶ್ವಾಮಿತ್ರನನ್ನು ಬೃಹಸ್ಪತಿಗಳು ದರ್ಶನ ಕೊಟ್ಟು ತಡೆಯುತ್ತಾರೆ.

ತ್ರಿಶಂಕು ಯಜ್ಞದಲ್ಲಿ ವಸಿಷ್ಠರಾಗಲೀ ಅವರ ಮಕ್ಕಳಾಗಲೀ ಬರದೆ ಇಂದ್ರ ಬರುವುದಿಲ್ಲವೆಂದರಿತಾಗ ವಿಶ್ವಾಮಿತ್ರ ವಾಸಿಷ್ಠರನ್ನು ಮಂತ್ರಮುಖೇನ ಬಲಾತ್ಕರಿಸಿ ಕರೆತರಲು ಯತ್ನಿಸುತ್ತಾನೆ. ಈ ಸಂಘರ್ಷದಲ್ಲಿ ವಾಸಿಷ್ಠರು ಸಾಯುತ್ತಾರೆ. ಕಲಿಯ ಕೋರಿಕೆಯನ್ನು ಮನ್ನಿಸಿ ವಸಿಷ್ಠರು ಅಪಾರ ಪುತ್ರಶೋಕವನ್ನನುಭವಿಸುತ್ತಾರೆ. ಅವರಲ್ಲಿ ಗೌರವ ಸಹಾನುಭೂತಿಗಳಿರುವ ವಿಶ್ವಾಮಿತ್ರ ಅವರ ಶೋಕಶೇಷವನ್ನು ತಾನು ವಹಿಸಿಕೊಳ್ಳಲು ಒಪ್ಪಿ ಸರಸ್ವತೀ ನದಿಯನ್ನು ಪ್ರಾರ್ಥಿಸಿ ಅದರ ಪ್ರವಾಹದಲ್ಲಿ ಅವರನ್ನು ಕೊಚ್ಚಿಸಿ ಅವರ ಶೋಕದ ಪೂರ್ಣ ಪರಿಹಾರಕ್ಕೆ ಕಾರಣನಾಗುತ್ತಾನೆ.

ತ್ರಿಶಂಕುವಿನ ಮಗ ಹರಿಶ್ಚಂದ್ರ. ವರುಣನ ಪ್ರೀತ್ಯರ್ಥವಾಗಿ ಒಂದು ನರಮೇಧವನ್ನು ಈ ರಾಜ ನಡೆಸಬೇಕಾಗಿ ಬಂದು ಅವನು ಅದಕ್ಕೆ ಹೋತೃವಾಗುವಂತೆ ವಿಶ್ವಾಮಿತ್ರನನ್ನು ಕಂಡು ಅವನನ್ನು ಒಪ್ಪಿಸುತ್ತಾನೆ. ನಿಜವಾಗಿ ಬಲಿಪಶುವಾಗಬೇಕಾಗಿದ್ದುದು ರಾಜನ ಮಗ. ಆದರೆ ಮಗನನ್ನು ಕಳೆದುಕೊಳ್ಳಲು ಮನಸ್ಸು ಒಪ್ಪದೆ ಅವನ ಬದಲಿಗೆ ಬಲಿಪಶುವಾಗಿ ಬಡಬ್ರಾಹ್ಮಣ ಅಜೀಗರ್ತನ ನಡುವಣ ಮಗ ಶುನಶ್ಶೇಫನನ್ನು ರಾಜ ಕೊಂಡು ಕರೆತರುತ್ತಾನೆ. ಶುನಶ್ಶೇಫನ ಆಧ್ಯಾತ್ಮಿಕ ಜಾಗೃತಿಯನ್ನು ಮೆಚ್ಚಿದ ವಿಶ್ವಾಮಿತ್ರ ವರುಣನ ಅನುಗ್ರಹ ಆ ತರುಣನಿಗೆ ಲಭಿಸುವಂತೆ ಏರ್ಪಡಿಸಿ ಅವನಿಗೆ ದೇವರಾತನೆಂದು ಹೊಸ ಹೆಸರಿಟ್ಟು ತನ್ನ ಜ್ಯೇಷ್ಠ ಪುತ್ರ ಪದವಿಯನ್ನು ಅವನಿಗೆ ನೀಡುತ್ತಾನೆ. ಇದನ್ನು ಘೃತಾಚಿ ಎಂಬ ದೇವತಾ ಸ್ತ್ರೀಯಲ್ಲಿ ವಿಶ್ವಾಮಿತ್ರನಿಗೆ ಈ ಹಿಂದೆ ಜನಿಸಿದ್ದ ನೂರು ಮಕ್ಕಳಲ್ಲಿ ಹಿರಿಯ ಐವತ್ತು ಮಂದಿ ವಿರೋಧಿಸಿ ಧರ್ಮಾಸನದ ಮುಂದೆ ತಮ್ಮ ವಾದವನ್ನು ಮಂಡಿಸಿ ಸೋತು ಭಸ್ಮೀಭೂತರಾಗುತ್ತಾರೆ. ವಸಿಷ್ಠರ ಶೋಕಶೇಷವನ್ನು ಈ ಪರಿಸ್ಥಿತಿಯಲ್ಲಿ ವಿಶ್ವಾಮಿತ್ರ ಅನುಭವಿಸುತ್ತಾನೆ.

ಇಲ್ಲಿಂದ ಮುಂದೆ ಕಾದಂಬರಿಯ ಕಥಾವಾಹಿನಿ ನಮ್ಮ ಕಾವೇರಿ ತೀರಕ್ಕೆ ಹರಿದು ಬರುತ್ತದೆ. ಬೃಹಸ್ಪತಿಗಳೇ ಮತ್ತೆ ಮತ್ತೆ ಬಂದು ನಿಲ್ಲುವ ಈ ಪುಣ್ಯ ನದಿಯ ತೀರದ ಒಂದು ತಾಣದಲ್ಲಿ ಎಲ್ಲ ಬ್ರಹ್ಮರ್ಷಿಗಳೂ ಕೋರಿದಂತೆ ಸರ್ವರಿಗೂ ಬ್ರಾಹ್ಮಣ್ಯ ಪ್ರಾಪ್ತಿಯಾಗುವಂತೆ ಮಾಡಬಲ್ಲ ಮಂತ್ರ ದರ್ಶನಕ್ಕಾಗಿ ವಿಶ್ವಾಮಿತ್ರ ತಪಸ್ಸಿಗೆ ನಿಲ್ಲುತ್ತಾನೆ. ಬೃಹಸ್ಪತಿಗಳ ಮತ್ತು ಪೂಷನ ಉಪದೇಶವನ್ನನು ಸರಿಸಿ ಸವಿತೃವನ್ನು ಧ್ಯಾನಿಸಿ ಗಾಯತ್ರೀದೇವಿಯನ್ನು ಅವನು ಸಾಕ್ಷಾತ್ಕಾರಿಸಿಕೊಳ್ಳುತ್ತಾನೆ. ವೇದಪುರುಷನ ಸ್ತ್ರೀರೂಪವಾದ ಈ ದೇವಿಯ ಅನುಗ್ರಹದಿಂದ ವಿಶ್ವಾಮಿತ್ರನ ನಾಲಿಗೆಯಲ್ಲಿ ಇಪ್ಪತ್ನಾಲ್ಕು ಅಕ್ಷರ ಗಳ ಮೂರು ಪಾದಗಳ ಈ ಮಂತ್ರವಿಶೇಷ ಆವಿರ್ಭವಿಸುತ್ತದೆ. ಇದೇ ಪ್ರಸಿದ್ಧ ವಿಶ್ವಾಮಿತ್ರ ಗಾಯತ್ರಿ. `ನೀನು ಯಾರಿಗಾದರೂ ನನ್ನನ್ನು ದಾನ ಮಾಡು. ನಾನು ಅವರನ್ನು ಕಾಪಾಡುತ್ತೇನೆ ಅವನನ್ನು ಆರ್ಯನನ್ನು ಮಾಡುವೆನು.' ಹಾಗೆ ಆಶ್ವಾಸನೆಯನ್ನಿತ್ತು ದೇವಿಯು ಅಂತರ್ಧಾನಳಾಗುತ್ತಾಳೆ. ವಸಿಷ್ಠರು ನಡೆಸುವ ಕಟ್ಟಕಡೆಯ ಒಂದು ಪರೀಕ್ಷೆಯ ನಂತರ ವಿಶ್ವಾಮಿತ್ರನು ಬ್ರಹ್ಮರ್ಷಿಯೆಂದು ವಸಿಷ್ಠರಿಂದಲೂ ನಚಿಕೇತಾದಿ ಋಷಿ ಪರಿಷತ್ತಿನಿಂದಲೂ ಅಂಗೀಕೃತನಾಗುತ್ತಾನೆ.

ತ್ರಿಶಂಕು ಯಜ್ಞಾನಂತರ ವಿಶ್ವಾಮಿತ್ರನನ್ನು ಸ್ವರ್ಗಕ್ಕೆ ಭೇಟಿ ಕೊಡುವಂತೆ ಇಂದ್ರನು ಆಹ್ವಾ ನಿಸಿದಾಗ ವಿಶ್ವಾಮಿತ್ರ ಒಪ್ಪಲಿಲ್ಲ. ಸ್ವರ್ಗವೇ ನಿನ್ನೆಡೆಗೆ ಬಂದರೆ ಹೇಗೆ ಎಂದು ಆಗ ಇಂದ್ರ ಸವಾಲು ಹಾಕುತ್ತಾನೆ. ಇದು ನಿಜವಾಗುವುದು ಇಂದ್ರ ಮೇನಕೆಯನ್ನು ವಿಶ್ವಾಮಿತ್ರಾಶ್ರಮಕ್ಕೆ ಕಳುಹಿಸಿ ಕೊಟ್ಟಾಗ. ವಿಶ್ವಾಮಿತ್ರ ಮೇನಕೆಯರ ಪ್ರೇಮಪ್ರಸಂಗ ದೇವುಡು ಅವರ ಕೈಯಲ್ಲಿ ಮಧುರ ಶೃಂಗಾರ ಕಾವ್ಯ ವಾಗಿ ಕಾದಂಬರಿಗೆ ರಂಗೇರಿಸಿದೆ. ಅವರ ಸ್ವೋಪಜ್ಞತೆ ಸಾಂಪ್ರದಾಯಿಕ ತಪೋಭಂಗದ ಕಥೆಯನ್ನು ಪೂರ್ಣವಾಗಿ ಮಾರ್ಪಡಿಸಿದೆ. ವಿಶ್ವಾಮಿತ್ರನು ತನ್ನನ್ನು ಒಪ್ಪಿಕೊಳ್ಳುವಂತೆ ಮಾಡಲು ಮೇನಕೆ ಹೇಳುವ ಮಾತುಗಳು ಹೀಗಿವೆ: `ನನ್ನ ಕೈಯಲ್ಲಿ ಹಿಡಿದಿರುವ ಈ ಕನ್ನೆದಿಲೆ ನಾನು ತಿರುಗಿಸಿದರೆ ತಿರುಗಲೇಬೇ ಕಾಗಿರುವಂತೆ ಈ ಸೃಷ್ಟಿಯಲ್ಲಿರುವ ಸಮಸ್ತವೂ ದೇವತೆಗಳ ಇಷ್ಟದಂತೆ ನಡೆದೇ ತೀರಬೇಕೆಂಬ ನಿಯಮಕ್ಕೆ ಒಳಗಾಗಿರುವುದನ್ನು ಬಲ್ಲೆಯಾ?... ನಿನ್ನ ಮನಸ್ಸು, ನಿನ್ನ ಬುದ್ಧಿ, ನಿನ್ನ ಅಹಂಕಾರಗಳ ಹಿಂದಿದ್ದು, ನಾವು ಕೆಲಸ ಮಾಡಬಲ್ಲೆವು: ಆದರೂ ಎದುರು ಬಂದುದೇಕೆ ಎನ್ನುವಿಯಾ? ನಿನ್ನಿಂದ ಸೃಷ್ಟಿಯ ಒಂದು ಕೆಲಸ ಆಗಬೇಕಾಗಿದೆ. ಅದಕ್ಕಾಗಿ ನಿನ್ನ ಅಹಂಕಾರ ಬೆಳೆಯಬೇಕು. ಅಹಂಕಾರವು ಬೆಳೆಯಲು ಭೋಗಬೇಕು. ಬೆಳೆದ ಅಹಂಕಾರವೇ ಮಹತ್ಕಾರ್ಯಗಳನ್ನು ಮಾಡಬಲ್ಲುದು. ಅದನ್ನು ಅರಿಯದ ಲೋಕವು ದೇವತೆಗಳು ತಪೋಭಂಗ ಮಾಡಿದರು ಎನ್ನುವುದು.' ಮನುಷ್ಯ ಲೋಕ ಮೇನಕೆಗೆ ತುಂಬಾ ಹಿಡಿಸುತ್ತದೆ. ರಂಭೆಗೆ ಅವಳು ಹೇಳುತ್ತಾಳೆ. `ನಿಜವಾಗಿಯೂ ಮನುಷ್ಯರು ಸುಖಿಗಳು, ತಿನ್ನುವುದಿಲ್ಲ, ಕುಡಿಯುವುದಿಲ್ಲ, ಮಾಡುವುದಕ್ಕೆ ಕೆಲಸವಿಲ್ಲದೆ ಅಲೆದುಕೊಂಡಿರುವ ದೇವಲೋಕಕ್ಕಿಂತಲೂ ಮನುಷ್ಯ ಲೋಕವೇ ನನಗೆ ಚೆನ್ನಾಗಿದೆ.'

ಅದ್ಭುತ ಸ್ವೋಪಜ್ಞತೆ

ಹೀಗೆ ಕಾದಂಬರಿಯುದ್ದಕ್ಕೂ ಪ್ರಾಚೀನ ಕಥಾವಸ್ತುವನ್ನು ಆಧುನಿಕ ಪ್ರಜ್ಞೆಯ ಮೂಸೆಯಲ್ಲಿ ಶೋಧಿಸಿ ವಿಸ್ಮಯಕಾರಿ ಒಳನೋಟಗಳು ಹೊಮ್ಮುವಂತೆ ಅದನ್ನು ಮಾರ್ಪಡಿಸಿಕೊಳ್ಳುವುದರಲ್ಲಿ

ದೇವುಡು ಅದ್ಭುತ ಸ್ವೋಪಜ್ಞತೆಯನ್ನು ಪ್ರದರ್ಶಿಸುತ್ತಾರೆ. ಇದರಿಂದ ಕಾದಂಬರಿಗೆ ಅಚ್ಚರಿಗೊಳಿಸುವಂತಹ ಹೊಚ್ಚ ಹೊಸತನ ಹಾಗು ಪ್ರಸ್ತುತತೆ ಪ್ರಾಪ್ತವಾಗಿವೆ.

ನಮ್ಮ ಸಂಸ್ಕೃತಿಯ ಅಂತಶ್ಶಕ್ತಿಯನ್ನು `ಮಹಾಬ್ರಾಹ್ಮಣ'ದಲ್ಲಿ ಪ್ರಕಟಪಡಿಸಿರುವಂತೆಯೇ ಅದನ್ನು ಅವರು ಪ್ರಕಟಪಡಿಸಿರುವ ಅವರ ಇತರ ದಾರ್ಶನಿಕ ಕಾದಂಬರಿಗಳು ದೇವತೆಗಳನ್ನೂ ಆಳಿ ಆದರ್ಶ ರಾಜನೆನಿಸಿಕೊಂಡ ನಹುಷ ಚಕ್ರವರ್ತಿಯ ಸಾಹಸವನ್ನು ನವೋನವನಾಗಿ ನಿರೂಪಿಸುವ `ಮಹಾಕ್ಷತ್ರಿಯ' ಮತ್ತು ಭಗವಾನ್ ಯಾಜ್ಞವಲ್ಕ್ಯರ ಸಾಧನೆ ಸಿದ್ಧಿಗಳನ್ನು ಬಿತ್ತರಿಸುವ `ಮಹಾದರ್ಶನ', ಪೌರಾಣಿಕ ಕಾಲದಿಂದ ಐತಿಹಾಸಿಕ ಕಾಲಕ್ಕೂ ನಮ್ಮ ಋಷಿ ಪರಂಪರೆ ಮುಂದುವರಿದುಕೊಂಡು ಬರುತ್ತಿರುವುದಕ್ಕೆ ಸಾಕ್ಷಿ ಎನ್ನುವಂತೆ ಅವರು ರಚಿಸತೊಡಗಿದ್ದ ಶಂಕರಭಗವತ್ಪಾದರನ್ನು ಕುರಿತು `ಮಹಾಸನ್ಯಾಸಿ ಕಾದಂಬರಿಯೂ ಲಭ್ಯವಾಗಿದ್ದರೆ ನಮ್ಮ ಸಾಹಿತ್ಯ ಇನ್ನಷ್ಟು ಶ್ರೀಮಂತವಾಗುತ್ತಿತ್ತು. ಕನ್ನಡದ ಪ್ರಥಮ ಮನೋವೈಜ್ಞಾನಿಕ ಕಾದಂಬರಿಯೆಂದು ಗುರುತಿಸಲ್ಪಟ್ಟಿರುವ ಅವರ `ಅಂತರಂಗ'ದಲ್ಲಿ ಚಿತ್ರಿತವಾಗಿರುವ ಮುಖ್ಯ ಪಾತ್ರಗಳೂ ನಾವು ನಿರೀಕ್ಷಿಸುವಂತೆ ಆದರ್ಶ ವ್ಯಕ್ತಿಗಳು.

ಹೀಗೆಯೇ ಬೇರೆ ಭಾಷೆಗಳ ಮಹಾಪುರುಷರನ್ನು ಕುರಿತ ಕೃತಿಗಳ ಕಡೆಗೂ ಅವರು ಆಕರ್ಷಿತರಾಗದೆ ಇರಲಿಲ್ಲವೆನ್ನುವುದಕ್ಕೆ ಸಾಕ್ಷಿ ಜಾನ್ ಮೇಸ್‌ಫೀಲ್ಡ್ ಕವಿಯ `ದಿ ಟ್ರಯಲ್ ಆಫ್ ಜೀಸಸ್' ನಾಟಕದ `ವಿಚಾರಣೆ' ಎಂಬ ಅವರ ಅನುವಾದ, ಏಸುವಿನ ನಿರ್ದೋಷಿತ್ವವನ್ನು ಮನಗಂಡರೂ ಯಹೂದೀ ಮುಖ್ಯಾಚಾರ್ಯನ ತೀವ್ರ ಧರ್ಮಾಂಧತೆಯ ಒತ್ತಡಕ್ಕೆ ಮಣಿದು ರೋಮನ್ ದಂಡಾಧಿಕಾರಿ ನಡೆಸುವ ಏಸುವಿನ ವಿಚಾರಣೆ ವಿಚಾರಣೆಯ ಅಭಾಸ, ದುರಂತ ಅಭಾಸ. ಸಂಪ್ರದಾಯಸ್ಥರ ಕ್ರೌರ್ಯ, ರೋಮನ್ ಪ್ರಾಕ್ಯುರೇಟರ್‌ನ ಅಸಹಾಯಕತೆಗಳ ನಡುವೆ ನಿಲ್ಲುವ ದೇವಪುತ್ರನ ವರ್ಚಸ್ಸು ನೀಲಮೇಘಗಳ ಮಧ್ಯೆ ಸ್ಫುರಿಸುವ ಅಪ್ರಾಕೃತ ವಿದ್ಯುಲ್ಲೇಖೆಯಂತೆ ಪ್ರಕಾಶಿಸುತ್ತದೆ. ಹೆಚ್ಚಿನ ಸಂವಹನ ಸೌಲಭ್ಯಕ್ಕೆ ಅವಶ್ಯವೆನಿಸಿದರೆ ಮೂಲ ನಾಟಕದ ದೃಶ್ಯಗಳೊಂದಿಗೆ ಸಂಯೋಜಿಸಿಕೊಂಡು ಪ್ರದರ್ಶಿಸಲು ನೆರವಾಗುವಂತೆ ತಾವೇ ಶ್ರೇಷ್ಠ ನಟರಾಗಿದ್ದ ದೇವುಡು ಕೆಲವು ಸ್ವಂತರಚನೆಯ ವಿವರಣಾತ್ಮಕ ದೃಶ್ಯಗಳನ್ನೂ ಸಿದ್ಧಪಡಿಸಿಟ್ಟಿದ್ದಾರೆ.

`ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ ನಿಬೋಧತ, ಇದು ನಮ್ಮ ಪ್ರಾಚೀನರ ಉಪದೇಶ, ಆದೇಶ. ನಮ್ಮ ಸಂಸ್ಕೃತಿ ಸಂಪತ್ತಿನ ಭಂಡಾರದ ಬೀಗ ಕೈಗಳಂತಿರುವ ದೇವುಡು ಅವರ ಕೃತಿಗಳು ಅವರ ಜನ್ಮಶತಾಬ್ದಿಯ ಹೊತ್ತಿಗೆಗಾದರೂ ಪುನರ್ಮುದ್ರಣಗೊಂಡು ಸರ್ವರಿಗೂ ಸಿಗುವಂತಾಗಿ ಇಳಿಯುತ್ತಿರುವ ನಮ್ಮ ಸಾಂಸ್ಕೃತಿಕ ಮಟ್ಟ ಮತ್ತೆ ಏರಲು ನೆರವಾಗಲಿ.

★

`ಮಹಾಬ್ರಾಹ್ಮಣ' ಕಾದಂಬರಿ

ಪ್ರೊ॥ ಎಂ.ಎಸ್. ಲಠ್ಠೇ

ಇಂದಿನ ಕನ್ನಡ ಸಾಹಿತ್ಯ ಹುಲುಸಾಗಿ ಬೆಳೆಯಲು ಗದ್ಯಸಾಹಿತ್ಯ ಹೆಚ್ಚಿನ ನೆರವನ್ನು ನೀಡಿದೆ. ಆ ಗದ್ಯ ಸಾಹಿತ್ಯದ ವೈಭವಕ್ಕೆ `ಕಾದಂಬರಿ ಸಾಹಿತ್ಯ' ಪ್ರೇರಕ ಶಕ್ತಿಯಾಗಿದೆ. ಇಂಗ್ಲೀಷ್ ಭಾಷೆಯ ಸಂಪರ್ಕದಿಂದಾಗಿ ನಾವಿನ್ಯತೆ ಪಡೆದಿದೆ. ಇಂದಿನ ಯುಗಕ್ಕೆ ಕಾದಂಬರಿ ಯುಗ ಎಂದು ಕರೆಯುವಷ್ಟು ಅದು ಹರವಾಗಿದೆ.

ಬಂಗಾಲಿಯ ಬಂಕಿಮಚಂದ್ರರ ಕಾದಂಬರಿಗಳನ್ನು ಬಿ. ವೆಂಕಟಾಚಾರ್ಯರು ಹಾಗೂ ಮರಾಠಿಯ ಅಪ್ಟೆಯವರ ಕಾದಂಬರಿಗಳನ್ನು ಗಳಗನಾಥರು ಅನುವಾದಿಸಿದ್ದಾರೆ. ಬರಬರುತ್ತ ಸ್ವತಂತ್ರವಾಗಿ ಬರೆಯಲು ಪ್ರಾರಂಭಿಸಿದವರಲ್ಲಿ ವಾಸುದೇವಾಚಾರ್ಯ ಹಾಗೂ ಎಂ.ಎಸ್. ಪುಟ್ಟಣ್ಣ ಅವರು. ವಾಸುದೇವಾರ್ಯರ `ಇಂದಿರಾ', ಎಂ.ಎಸ್. ಪುಟ್ಟಣ್ಣ ಅವರ `ಮಾಡಿದ್ದುಣ್ಣೊ ಮಾರಾಯ' ಮೊದಲಾದ ಕಾದಂಬರಿಗಳು ಮೊದಮೊದಲು ಬಂದ ಕಾದಂಬರಿ ಕೃತಿಗಳಾಗಿವೆ. ಬರಬರುತ್ತ ಕಾದಂಬರಿಯ ಕ್ಷೇತ್ರ ವಿಶಾಲವಾಗುತ್ತ ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ರಾಜಕೀಯ ಮೊದಲಾದ ವಿಭಾಗಗಳನ್ನು ರೂಪಿಸಿಕೊಂಡಿತು. ಶಿವರಾಮ ಕಾರಂತ, ಅ.ನ.ಕೃ., ತರಾಸು, ನಿರಂಜನ, ಬಸವರಾಜ ಕಟ್ಟಿಮನಿ, ಕೃಷ್ಣಮೂರ್ತಿ ಪುರಾಣಿಕ ಮೊದಲಾದ ಕಾದಂಬರಿಕಾರರು ಹಲವಾರು ಕಾದಂಬರಿಗಳನ್ನು ಬರೆದು ಕನ್ನಡ ಸಾಹಿತ್ಯಕ್ಕೆ ಅಪೂರ್ವ ಸೇವೆ ಸಲ್ಲಿಸಿದ್ದಾರೆ. ದಿ. ದೇವುಡು ನರಸಿಂಹಶಾಸ್ತ್ರಿಗಳೂ ಕಾದಂಬರಿಕಾರರು.

ವೇದ, ಆಗಮ, ಪುರಾಣ ಶಾಸ್ತ್ರಗಳಲ್ಲಿ ಪ್ರಗಲ್ಭ ಪಾಂಡಿತ್ಯ ಪಡೆದುದರಿಂದ ಪುರಾಣ ಕಥೆಗಳನ್ನು ಆಯ್ದುಕೊಂಡು ದೇವುಡು ಅವರು ಪೌರಾಣಿಕ ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ `ಮಹಾಬ್ರಾಹ್ಮಣ' ಕಾದಂಬರಿ ಒಂದು. ಪೌರಾಣಿಕ ಕಾದಂಬರಿಗಳಲ್ಲೆಲ್ಲ ಇದಕ್ಕೆ ಅಗ್ರಸ್ಥಾನವೆಂದರೂ ತಪ್ಪಾಗಲಿಕ್ಕಿಲ್ಲ. ವಾಲ್ಮೀಕಿ ರಾಮಾಯಣದ ಪೌರಾಣಿಕ ಕಥೆಯೆ ಇದರ ಮೂಲ ಕಥಾವಸ್ತು. ವೇದ-ವೇದಾಂಗಗಳಲ್ಲಿ ಬರುವ ಕಥೆ, ಉಪಕಥೆಗಳನ್ನು ಇಲ್ಲಿ ಸಂದರ್ಭಕ್ಕನುಸಾರವಾಗಿ ಬಳಸಿಕೊಂಡಿದ್ದಾರೆ. ಬಾಲ್ಯದಿಂದಲೂ ವೈದಿಕ ಧರ್ಮದ ಅಭ್ಯಾಸಿಗಳಾದ `ದೇವುಡು' ಅವರ ಅನುಭವದ ಆಳದಿಂದ ಹೊರಹೊಮ್ಮಿದ ಪ್ರತಿಭೆ ಈ ಕಾದಂಬರಿಯ ರೂಪಕ್ಕಿಳಿದುದರಿಂದ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ.

ಇಲ್ಲಿ ನಡೆದುದು ವಶಿಷ್ಠ ವಿಶ್ವಾಮಿತ್ರರ ದ್ವಂದ್ವಯುದ್ಧ, ಯುದ್ಧದಲ್ಲಿ ಭಾಗವಹಿಸಿದವರು ಪ್ರತ್ಯಕ್ಷವಾಗಿ ವಶಿಷ್ಠ ವಿಶ್ವಾಮಿತ್ರರಾದರೂ ಅವು ಕೇವಲ ತೋರಿಕೆಗೆ ಮಾತ್ರ. ಅವರ ಹಿಂದೆ ಎರಡು ತತ್ವಗಳ ಕೋಲಾಹಲ ನಡೆದಿದೆ. ರಾಜರ್ಷಿಯಾದ ಕೌಶಿಕ ಸೋತು, ಸಂಯಮಿಯಾಗಿ-ಶಿಷ್ಯನಾಗಿ ತಪಶ್ಚರ್ಯ ನಡೆಸುತ್ತಾನೆ. ವಾಮದೇವನ ಮಾರ್ಗದರ್ಶನದಲ್ಲಿ ರುದ್ರನನ್ನು ಪೂಜಿಸಿ ಅವನಿಂದ ದಿವ್ಯಾಸ್ತ್ರಗಳನ್ನು ಸಂಪಾದಿಸುತ್ತಾನೆ. ಇನ್ನೇನು?...? ಇನ್ನಾರು?... ಎಂದು ಸೊಕ್ಕಿಗೆ ಬಂದ

ವಿಶ್ವಾಮಿತ್ರ ವಶಿಷ್ಠನ ಬ್ರಹ್ಮದಂಡದ ಅದ್ಭುತ ಶಕ್ತಿಗೆ ಅಚ್ಚರಿ ಪಡುತ್ತಾನೆ. ವಶಿಷ್ಠರ ಪ್ರಭಾವ ಸಿದ್ಧಿಗಳೆರಡನ್ನು ಅರಿತು ಅವರಂತೆಯೇ ತಾನು ಬ್ರಹ್ಮರ್ಷಿಯಾಗಲು ಕಳವಳಪಡುತ್ತಾನೆ. ಮಗುವಿನಂತೆ ಹಟತೊಟ್ಟು, ಕ್ಷತ್ರಿಯನಂತೆ ದೃಢ ಮನಸ್ಕನಾಗಿ `ಬ್ರಹ್ಮರ್ಷಿ'ಯಾಗಲು ಪಡಬಾರದ ಕಷ್ಟಗಳನ್ನೆಲ್ಲ ಅನುಭೋಗಿಸುತ್ತಾನೆ. ದೇವತೆಗಳನ್ನು ಒಲಿಸಿಕೊಳ್ಳುತ್ತಾನೆ. ಸಂಸಾರ ಸುಖಕ್ಕೆ ಕಾಮಿಸಿ, ಪ್ರೇಮಿಸಿ ತಂದ ಮೇನಕೆಯ ಹೊಟ್ಟೆಯಿಂದ ಶಕುಂತಲೆ ಹುಟ್ಟುತ್ತಾಳೆ. ಅದೇ ರೀತಿ ಘೃತಾಚಿಯಿಂದ ನೂರು ಜನ ಮಕ್ಕಳೂ ಹುಟ್ಟುತ್ತಾರೆ. ಇಂದ್ರ ವಶಿಷ್ಠರ ಪ್ರೀತಿಗೆ ಪಾತ್ರನಾಗಿ ಸಪ್ತರ್ಷಿಗಳ ಆಶೀರ್ವಾದ ಪಡೆಯುತ್ತಾನೆ. ಸಿದ್ಧಪುರುಷನಾಗಿ ಹದಿನೈದು ಜನ ಬ್ರಾಹ್ಮಣೇತರರನ್ನು ಬ್ರಾಹ್ಮಣರನ್ನಾಗಿ ಮಾಡುತ್ತಾನೆ. ತ್ರಿಶಂಕು ಮಹಾಜನರನ್ನು ಸ್ವರ್ಗಕ್ಕೆ ಕಳುಹಿಸಿ ಮಹಾನುಭಾವನಾಗುತ್ತಾನೆ. ದೇಹದಲ್ಲಿರುವ ಪಂಚಭೂತ ತನ್ಮಾತ್ರಗಳನ್ನು ಪರಿಶುದ್ಧಿಸಿಕೊಂಡು ಸಾತ್ವಿಕನಾಗುತ್ತಾನೆ. ವಶಿಷ್ಠನ ಪರೀಕ್ಷೆಯಲ್ಲಿ ಕೊನೆಗೊಮ್ಮೆ ತೇರ್ಗಡೆ ಹೊಂದಿ ಗಾಯತ್ರಿ' ಮಂತ್ರ ಪಡೆದು ಬ್ರಾಹ್ಮಣನ ಬ್ರಾಹ್ಮಣನಾಗುತ್ತಾನೆ. ತೊಟ್ಟ ಪಣ ಪೂರ್ತಿಗೊಳ್ಳುತ್ತದೆ.

ಕಾದಂಬರಿಕಾರರು ವಶಿಷ್ಠ-ವಿಶ್ವಾಮಿತ್ರರ ಈ ಪೌರಾಣಿಕ ಕಥೆಗೆ ಹೊಸ ರೂಪ ತೊಡಿಸಿದ್ದಾರೆ. ಇಂದು ನ್ಯಾಯ ನಿರ್ಣಯವಾಗುವಂತೆ ವಿಶ್ವಾಮಿತ್ರನ ನ್ಯಾಯ ತೀರಿಸಿದ್ದಾರೆ. ತಮ್ಮ ಪ್ರತಿಭಾಬಲದಿಂದ ಕಲಾತ್ಮಕವಾದ ಕಾದಂಬರಿ ರೂಪಿಸಿದ್ದಾರೆ. ವೈದಿಕ ಧರ್ಮದ ಪುನರುದ್ಧಾರ ಮಾಡಿದ್ದಾರೆ. ಧರ್ಮದ ಅವಹೇಳನ ನಡೆದ ಈ ಕಾಲದಲ್ಲಿ ಸನಾತನ ಧರ್ಮದ ಮೂಲತತ್ವತನನ್ನು ಸುಂದರವಾಗಿ ಈ ಕಾದಂಬರಿಯಲ್ಲಿ ಎರಕ ಹೊಯ್ದಿದ್ದಾರೆ. ಸ್ವಾನುಭಾವದಿಂದ ಸಿದ್ಧಿ ಪಡೆದು ಪ್ರತಿಭಾಬಲದಿಂದ ಓದುಗರ ಮೆಚ್ಚುಗೆ ಗಳಿಸಿಕೊಂಡಿದ್ದಾರೆ. `ಶೂದ್ರನೂ ಬ್ರಾಹ್ಮಣನಾಗಬಲ್ಲ' ಎಂಬ ಗಾಯತ್ರಿ ಮಂತ್ರವನ್ನು ಸರಳವಾದ ಸುಲಭವಾದ ಭಾಷೆಯಲ್ಲಿ ತಿಳಿಹೇಳಿದ್ದಾರೆ. ಕ್ಷಾತ್ರ ತೇಜವು ಬ್ರಹ್ಮ ತೇಜದ ಮುಂದೆ ಸೋತು ದ್ವೇಷಭಾವ ಕಳೆದುಕೊಂಡು ಶರಣಾಗತವಾಗಿದೆ. ಜಗತ್ತಿನ ಕಲ್ಯಾಣಕ್ಕಾಗಿ, ಗುರು ಶಿಷ್ಯನ ತಪ್ಪುಗಳನ್ನು ಕಾಣಿಸಿದೆ. ಅವನ ದೋಷಗಳನ್ನು ಅಪರೋಕ್ಷವಾಗಿ ತಿದ್ದಿ ಆತನನ್ನು `ಭಗವಾನ್' ಆಗುವಂತೆ ಮಾಡಿದ್ದಾನೆ.

ದಿವ್ಯ ಸ್ತ್ರೀಯರು ವಿಶ್ವಾಮಿತ್ರನ ಕೂಡ ಸಂಸಾರ ಸುಖ ಅನುಭೋಗಿಸಿದ್ದಾರೆ. `ತವಷ ಐಲೂಷ' ಎಂಬ ಶೂದ್ರರ್ಷಿಯು ವಿಶ್ವಾಮಿತ್ರನ ಅನುಗ್ರಹದಿಂದ ಋಷಿಯಾಗಿದ್ದಾನೆ. ವಾಮದೇವನು ವಶಿಷ್ಠನ ಶಿಷ್ಯನಾಗಿ, ವಿಶ್ವಾಮಿತ್ರನ ಗುರುವಾಗಿ ಆತನ ಆಧ್ಯಾತ್ಮಿಕ ಪುರೋಭಿವೃದ್ಧಿಗೆ ಕಾರಣೀಭೂತನಾಗಿದ್ದಾನೆ. ದೇವತೆಗಳನ್ನು ಭೋಲೋಕಕ್ಕೆ ಕರೆತಂದು ಮಾತನಾಡಿಸಿದ್ದಾನೆ. ಮದನನು ಹೇಳುವ ಅಹಂಕಾರ ವಿವರ್ಧನ, ಜಗನ್ನಾಥನ ತೇರು, ಗಾಯತ್ರಿ ಸಾಕ್ಷಾತ್ಕಾರಕ್ಕಿಂತ ಮುಂಚೆ ಬ್ರಹ್ಮಣಸ್ಪತಿ ಪೂಷಾ ದೇವರ ಅನುಗ್ರಹ ಮೊದಲಾದ ಘಟನೆಗಳು ಕವಿಯ ಮನೋಭೂಮಿಕೆಯ ಮೇಲೆ ತಾವೇತಾವಾಗಿ ಬಂದಂಥವುಗಳಾಗಿವೆ.

ಕಾದಂಬರಿಯನ್ನು ಓದ ಓದುತ್ತಿರುವಂತೆ ಮುಂದೇನು?... ಎಂಬ ಪ್ರಶ್ನೆ ಬಂದು ಕೊನೆಗೊಮ್ಮೆ ವಿಶ್ವಾಮಿತ್ರ ಬ್ರಹ್ಮರ್ಷಿಯಾಗಿ ವಶಿಷ್ಠನನ್ನು ಹಾಡಿ ಹೊಗಳಿದಾಗ ಸಮಾಧಾನವಾಗುತ್ತದೆ. `ಭಲೆ ವಿಶ್ವಾಮಿತ್ರ' ಎನ್ನುವಷ್ಟು ಉತ್ಸಾಹ ಬರುತ್ತದೆ. ಮನಸ್ಸಿಗೆ ನೆಮ್ಮದಿಯುಂಟಾಗುವುದರಿಂದ

ಕಾದಂಬರಿಯನ್ನು ಇನ್ನೂ ಓದಿ ಮನಸ್ಸಿನ ಕಲ್ಮಶ ಕಳೆದುಕೊಳ್ಳಬೇಕೆಂದು ಎನಿಸುತ್ತದೆ. ವೈದಿಕ ಧರ್ಮದ ತಿರುಳನ್ನರಿಯದೆ ವಿಶ್ವಾಮಿತ್ರ ಪಟ್ಟ ಪಾಡಿಗೆ ಜೀವ ಮಮ್ಮಲನೆ ಮರುಗುತ್ತದೆ. `ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದಂತೆ ಆತ್ಮಶುದ್ಧಿಗಾಗಿ ಗುರುಗಳನ್ನು ಮೊರೆ ಹೋಗಬೇಕೆನಿಸುತ್ತದೆ. `ಶ್ರೀಗುರು ವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕುತಿ.'

ಬ್ರಾಹ್ಮಣ ದ್ವೇಷ, ವೈದಿಕ ಸಂಸ್ಕೃತಿಯ ತಿರಸ್ಕಾರ ನಡೆಸುವ ಜನತೆಗೆ ಮಹಾಬ್ರಾಹ್ಮಣ ಕಾದಂಬರಿ ಹೊಸ ಬೆಳಕು ಚೆಲ್ಲಿದೆ. ಕಾದಂಬರಿ ಗಾತ್ರದಲ್ಲಿ ಹೇಗೊ ಹಾಗೆ ಗುಣದಲ್ಲಿಯೂ ಹಿರಿಯದಾಗಿದೆ. ಕಾದಂಬರಿಗಿರಬೇಕಾದ ವಿಷಯ ವೈವಿಧ್ಯ, ಪಾತ್ರಸೃಷ್ಟಿ, ಹದವರಿತ ನಿರೂಪಣೆ ಕಾದಂಬರಿಯ ಉದ್ದಕ್ಕೂ ಸಲಿಲವಾಗಿ ಹರಿದುಬಂದಿದೆ.

ವೈದಿಕ ಧರ್ಮದ ಹಿನ್ನೆಲೆ ಇಲ್ಲದವರಿಗೆ ಮಾತ್ರ ಇದೊಂದು ಶುಷ್ಕ ಇಲ್ಲವೆ ಶಾಸ್ತ್ರಪ್ರಧಾನ ಕಾದಂಬರಿಯೆಂದು ಎನಿಸಬಹುದು.

★

ದೇವುಡು ಅವರ ನಹುಷೋದ್ಧಾರ

ಶ್ರೀ ಕೆ. ನರಸಿಂಹಮೂರ್ತಿ

ವೇದೋಪನಿಷತ್ತುಗಳಲ್ಲಿಯೂ ಶಾಸ್ತ್ರ ಪುರಾಣಗಳಲ್ಲಿಯೂ ದೇವುಡು ನರಸಿಂಹ ಶಾಸ್ತ್ರಿಗಳಿಗಿದ್ದ ವಿದ್ವತ್ ಪ್ರೌಢಿಮೆಗೂ ಪ್ರಾಚೀನ ಕಾಲದ ಮಹಾಪುರುಷರನ್ನು ಪ್ರತ್ಯಕ್ಷೀಕರಿಸಿಕೊಳ್ಳಬಲ್ಲ ಅವರ ಅದ್ಭುತ ಕಲ್ಪನಾಶಕ್ತಿಗೂ ಸಾಕ್ಷಿಗಳಂತಿರುವ ಅವರ ಪೌರಾಣಿಕ ಕಾದಂಬರಿತ್ರಯದ ಎರಡನೆ ಕಾದಂಬರಿ `ಮಹಾಕ್ಷತ್ರಿಯ'. ಸ್ವರ್ಗ ಸಿಂಹಾಸನದಲ್ಲಿ ಮೆರೆದ ಏಕಮಾತ್ರ ಮರ್ತ್ಯರಾಜನ ಆದರ್ಶ ವ್ಯಕ್ತಿತ್ವವನ್ನು ಅಸಾಧಾರಣ ಸಾಧನೆಯನ್ನೂ ಚಿತ್ರಿಸುತ್ತದೆ. ಅನನ್ಯ ವೈಶಿಷ್ಟ್ಯದ ಈ ತ್ರೈಲೋಕ್ಯಾಧಿಪತಿಯಾದ ರಾಜನು ಚಂದ್ರವಂಶದ ಪುರೂರವನ ಮೊಮ್ಮಗನೂ ಯಯಾತಿಯ ತಂದೆಯೂ ಆದ ನಹುಷ. ಇವನು ಭಾರ್ಗವ ಚ್ಯವನ ಮಹರ್ಷಿಯ ಶಿಷ್ಯ, ಧರ್ಮಪರಾಯಣ, ಪ್ರತಿಷ್ಠಾನ ಇವನ ರಾಜಧಾನಿ. ಇವನ ಧಾರ್ಮಿಕತೆಯೂ ರಾಜ್ಯಭಾರದ ವಿಚಕ್ಷಣತೆಯೂ ಎಷ್ಟೆಂದರೆ ದೇವತೆಗಳೇ ಇವನಲ್ಲಿಗೆ ಬಂದು ಇಂದ್ರ ಪದವಿಯನ್ನಲಂಕರಿಸಬೇಕೆಂದು ಆಹ್ವಾನಿಸುತ್ತಾರೆ. ಇಂದ್ರನಾಗಿ ಇವನು ನಡೆದುಕೊಂಡ ರೀತಿಯನ್ನು ಕಂಡ ದೇವತೆಗಳು ಇವನು ಅತೀಂದ್ರನೆಂದೂ ಶ್ಲಾಘಿಸುತ್ತಾರೆ. ದೇವತ್ವಕ್ಕಿಂತಲೂ ಮನುಷ್ಯತ್ವವೇ ಶ್ರೇಷ್ಠವೆಂದು ತೋರಿಸಿಕೊಟ್ಟ ಈ ಮಹಾಕ್ಷತ್ರಿಯನಲ್ಲಿ ದೇವುಡು ಒಬ್ಬ ಆದರ್ಶಮಾನವನನ್ನು ರೂಪಿಸಿದ್ದಾರೆ. ಕ್ಷತ್ರಿಯನೂ ರಾಜನೂ ಆಗಿದ್ದ ವಿಶ್ವಾಮಿತ್ರ ಬ್ರಹ್ಮಜ್ಞನಾಗಿ ಮಹರ್ಷಿಯಾಗಿ ಮಹಾಬ್ರಾಹ್ಮಣನೆನಿಸಿಕೊಂಡರೆ ನಹುಷ ಬ್ರಹ್ಮಜ್ಞನಾಗಿಯೂ ಕ್ಷತ್ರಿಯನಾಗಿಯೇ ಉಳಿದು ಧರ್ಮ ಸಾಮ್ರಾಜ್ಯವನ್ನು ನಡೆಸಿ ಮಹಾಕ್ಷತ್ರಿಯನೆನ್ನಿಸಿಕೊಳ್ಳುತ್ತಾನೆ.

ಶಾಪಗ್ರಸ್ತ

ಪುರಾಣದ ನಹುಷ ತನ್ನ ದೌರ್ಬಲ್ಯಗಳು ಕೆಲವಿಂದ ಶಾಪಗ್ರಸ್ತನಾಗುತ್ತಾನೆ. ದೇವುಡು ಅವರ ನಹುಷ ಇಂಥ ಎಲ್ಲ ದೌರ್ಬಲ್ಯಗಳನ್ನೂ ಕಳಚಿಕೊಂಡ ಮಹೋನ್ನತ ವ್ಯಕ್ತಿ. ತನ್ನ `ಶಾಕುಂತಲ' ನಾಟಕದಲ್ಲಿ ಕಾಳಿದಾಸ ಮಹಾಭಾರತದ ದುಷ್ಯಂತನನ್ನು ಮೇಲೆತ್ತಿ ಆದರ್ಶ ರಾಜನನ್ನಾಗಿ ಮಾಡಿರುವಂತೆ, `ಮಹಾಕ್ಷತ್ರಿಯ' ಕಾದಂಬರಿಯಲ್ಲಿ ದೇವುಡು ನಹುಷನನ್ನು ನಿಷ್ಕಳಂಕನನ್ನಾಗಿಸಿ ಒಂದು ರೀತಿಯಲ್ಲಿ ಉದ್ಧರಿಸಿದ್ದಾರೆ.

ಕಥಾಧಾರೆ ಮೂರು ಹಂತಗಳಲ್ಲಿ ಹರಿಯುತ್ತದೆ. ಮೊದಲನೆಯದು ಇಂದ್ರನಿಂದಾಗುವ ದೇವಾಚಾರ್ಯ ವಿಶ್ವರೂಪನ ಹತ್ಯೆ. ಎರಡನೆಯದು ಇಂದ್ರ ಸಾಧಿಸುವ ವೃತ್ರಾಸುರ ವಧೆ. ಮೂರನೆಯ ಮತ್ತು ಕಡೆಯ ಭಾಗ ನಹುಷನ ದೇವರಾಜತ್ವದ ವೈಭವ, ವೈಖರಿ, ಒಂದು ಪ್ರಸಂಗ ಇನ್ನೊಂದಕ್ಕೆ ಎಡೆಮಾಡಿಕೊಡುವಂಥ ಬಂದ. ವಿಶ್ವರೂಪಾಚಾರ್ಯನ ಹತ್ಯೆಯ ಪರಿಣಾಮವಾಗಿ ವೃತ್ರಾಸುರನ ಸೃಷ್ಟಿ-ವೃತ್ರಾಸುರನ ಹತ್ಯೆಯಾದ ಕಾರಣ ಸ್ವರ್ಗದಿಂದ ಭಯಗ್ರಸ್ತ ಇಂದ್ರನ ಪಲಾಯನ. ಇಂದ್ರನಿಲ್ಲದ ಸ್ವರ್ಗಕ್ಕೆ ಇಂದ್ರನಾಗಿ ಬರಲು ನಹುಷನಿಗೆ ಆಹ್ವಾನ, ಕಾದಂಬರಿಯ ಸ್ವಾರಸ್ಯ ಹೆಪ್ಪುಗಟ್ಟುವುದು ನಹುಷನ ಇಂದ್ರ ಪದವಿಯ ನಿರ್ವಹಣೆಯ ಅಮೋಘ ಚಿತ್ರಣದ ಕಡೆಯ ಪುಟಗಳಲ್ಲಿ.

ಮೊದಲೆರಡು ಭಾಗಗಳ ಕತೆಯನ್ನು ಸಂಗ್ರಹಿಸಿದರೆ ಸಾಕೆನಿಸುತ್ತದೆ. ಹೊತ್ತು ಮೀರಿ ದೇವ ಸಭೆಗೆ ಬಂದ ದೇವಗುರು ಬೃಹಸ್ಪತಿಗಳನ್ನು ಮುನಿದ ಇಂದ್ರ ಗೌರವದಿಂದ ಎಂದಿನಂತೆ ಸ್ವಾಗತಿಸ ದಿರಲು ಬೃಹಸ್ಪತಿಗಳು ಸ್ವರ್ಗವನ್ನು ಬಿಟ್ಟು ಹೊರಟುಹೋಗುತ್ತಾರೆ. ಅವರ ಸ್ಥಾನಕ್ಕೆ ಬ್ರಹ್ಮ ತವಷ್ಟೃ ಪುತ್ರ ವಿಶ್ವರೂಪನನ್ನು ಸೂಚಿಸುತ್ತಾನೆ. ಇಂದ್ರ ವಿಶ್ವರೂಪನನ್ನು ಆಚಾರ್ಯನನ್ನಾಗಿ ಮಾಡಿಕೊಂ ಡರೂ ಅವನ ಬಗ್ಗೆ ಅತೃಪ್ತನಾಗುತ್ತಾನೆ. ಕಾರಣ, ತಂದೆಯ ಕಡೆಯಿಂದ ದೇವಗಣ ಸಂಬಂಧಿಯಾ ದರೂ ತಾಯಿಯ ಕಡೆಯಿಂದ ವಿಶ್ವರೂಪ ಅಸುರ ಗಣಸಂಬಂಧಿ. ಮೂರು ತಲೆಗಳುಳ್ಳ ವಿಶ್ವರೂಪ ಒಂದು ಮುಖದಿಂದ ಸುರಾಪಾನ ಮಾಡುವುದಲ್ಲದೆ ಸಮರಾತ್ರಿಯಲ್ಲಿ ಹೋಮ ಮಾಡಿ ಅಸುರಗ ಣಕ್ಕೆ ಹವಿರ್ಭಾಗ ನೀಡುತ್ತಾನೆ. ದೇವಚಾರ್ಯನಾಗಿ ವಿಶ್ವರೂಪ ದಧೀಚಿಯಿಂದ ತ್ವಷ್ಟೃವಿಗೂ ತ್ವಷ್ಟೃವಿನಿಂದ ತನಗೂ ಅನುಗ್ರಹವಾಗಿದ್ದ ನಾರಾಯಣ ಕವಚವೆಂಬ ಮಹಾಮಂತ್ರವನ್ನು ಇಂದ್ರ ನಿಗೂ ಅನುಗ್ರಹಿಸಿ ಅವನನ್ನು ಅಜೇಯನಾಗಿಸುತ್ತಾನೆ. ನಿಜ, ಆದರೆ ಇಂದ್ರನ ಕೋರಿಕೆಯಂತೆ ಸುರಾಪಾನವನ್ನಾಗಲೀ ಸಮರಾತ್ರಿ ಹೋಮವನ್ನಾಗಲೀ ಬಿಟ್ಟು ಬಿಡಲು ಅವನು ಒಪ್ಪುವುದಿಲ್ಲ. ಇದರಿಂದ ಕ್ರುದ್ಧನಾದ ಇಂದ್ರನು ಅವನನ್ನು ಸಂಹರಿಸುತ್ತಾನೆ. ಇದರ ಪಾಪವು ತನಗೆ ತಟ್ಟದಂತೆ ಅದನ್ನು ನೆಲ ಜಲ ವೃಕ್ಷ ಸ್ತ್ರೀಯರಲ್ಲಿ ಹಂಚಿಬಿಡುತ್ತಾನೆ. ತ್ವಷ್ಟೃವಿನ ಕೋಪವನ್ನು ಉಪಶಮನ ಗೊಳಿಸಲು ಕಶ್ಯಪರನ್ನು ಇಂದ್ರ ಅವನಲ್ಲಿಗೆ ಕಳುಹಿಸುತ್ತಾನೆ. ಆದರೆ ಪುತ್ರಹತ್ಯೆಯಿಂದ ರೋಷಗೊಂಡ ತ್ವಷ್ಟೃ ಇಂದ್ರನನ್ನು ಸ್ಥಾನಭ್ರಷ್ಟಗೊಳಿಸುವಂತಹ ವೃತ್ರಾಸುರನ ಹುಟ್ಟಿಗಾಗಿ ಯಶಸ್ವಿಯಾಗಿ ಯಜ್ಞ ಮಾಡುತ್ತಾನೆ. ಪರ್ವತೋಪಮವಾಗಿ ಬೆಳೆದ ವೃತ್ತ ಅಸುರ ಸೇನೆಯೊಡನೆ ಸ್ವರ್ಗಕ್ಕೆ ಲಗ್ಗೆ ಹಾಕುತ್ತಾನೆ. ಎದುರಾದ ಇಂದ್ರನನ್ನು ಅವನು ಹಿಡಿದೆತ್ತಿಕೊಂಡು ನುಂಗಿಬಿಡುತ್ತಾನೆ. ಇಂದ್ರನೇನೋ ಅವನ ಜಠರದಿಂದ ಅವನ ಆಕಳಿಕೆಯಲ್ಲಿ ಹೊರಗೆ ತಪ್ಪಿಸಿಕೊಂಡು ಬಂದರೂ ಕೆಲವು ಕಾಲ ಸೋಲೊಪ್ಪಿಕೊಂಡು ಇಂದ್ರ ಪದವಿಯನ್ನು ಬಿಟ್ಟುಕೊಟ್ಟು ಮಿತ್ರವೃತ್ತಿಯಲ್ಲಿ ಉಳಿಯಬೇಕಾಗುತ್ತದೆ. ವೃತ್ರ ವಿಜಯದ ವಾರ್ಷಿಕೋತ್ಸವದ ದಿನದ ಸಂಜೆ ವೃತ್ರನೇ ವಿಧಿವಶನಾಗಿ ಇಂದ್ರನಿಗೆ ಕಡಲನೊ ರೆಯಿಂದ ತನ್ನನ್ನು ಹೊಡೆಯುವಂತೆ ಕೇಳಿಕೊಳ್ಳುತ್ತಾನೆ. `ಇಂದ್ರ ಆ ನೊರೆಯಲ್ಲಿ ವಜ್ರಾಯುಧ ವನ್ನು ಅಭಿಮಂತ್ರಿಸಿ ಹೊಡೆದಾಗ ವೃತ್ರಾಸುರ ಸಾಯುತ್ತಾನೆ. ಕೂಡಲೇ ಆ ಶರೀರವು ವಿಘಟಿಸಿ ಪಂಚಭೂತಗಳಲ್ಲಿ ಐಕ್ಯವಾಗುವಂತೆ ಇಂದ್ರ ಆಜ್ಞಾಪಿಸಿದರೂ ವೃತ್ರನ ಅಂತಸ್ಸತ್ವ ಇಂದ್ರನನ್ನು ಕಾಡುತ್ತದೆ. ಅದರಿಂದ ತಪ್ಪಿಸಿಕೊಳ್ಳಲು ಭಯಗ್ರಸ್ತನಾದ ಇಂದ್ರ ಸ್ವರ್ಗವನ್ನು ಬಿಟ್ಟು ಮಾನಸ ಸರೋವರದ ಒಂದು ಕಮಲನಾಳದಲ್ಲಿ ಅವಿತುಕೊಳ್ಳುತ್ತಾನೆ. ಇಂದ್ರ ಪದವಿಗೆ ನಹುಷನಿಗೆ ಆಹ್ವಾನ ಹೋಗುತ್ತದೆ.

ಇಂದ್ರ ಪದವಿಯನ್ನು ನಹುಷ ಒಪ್ಪಿಕೊಳ್ಳುವುದು ಎರಡು ನಿಬಂಧನೆಗಳ ಮೇಲೆ ಒಂದು ತನ್ನ ರಾಣಿಯಾದ ಪಿತೃದೇವತೆಗಳ ಕನ್ಯೆ ವಿರಾಜಾದೇವಿಯೊಡನೆ ಅವನು ಸ್ವರ್ಗಕ್ಕೆ ಬಂದು ಅಲ್ಲಿ ಇಂದ್ರನಾದರೂ ಭೂಮಿಯ ಮೇಲೆ ಮಾಡುತ್ತಿದ್ದ ತನ್ನೆಲ್ಲ ಧರ್ಮಕಾರ್ಯಗಳನ್ನೂ ಮುಂದೆಯೂ ಮಾಡಲು ಅವಕಾಶವಿರಬೇಕೆಂದು, ಎರಡನೆಯದು ತಾನು ಸ್ವರ್ಗದಲ್ಲಿ ಕೇಳುವ ಪ್ರಶ್ನೆಗಳಿಗೆ ರಹಸ್ಯ ವೆನ್ನದೆ ದೇವತೆಗಳು ಉತ್ತರಿಸಬೇಕು ಎನ್ನುವುದು. ದೇವತೆಗಳು ಈ ನಿಬಂಧನೆಗಳಿಗೆ ಒಪ್ಪುತ್ತಾರೆ.

ಆದರೆ ಮೊದಲ ನಿಬಂಧನೆಯ ಕಾರಣ ಪಿತೃದೇವತೆಗಳು ಅವನಿಗೆ ನೀಡಬಹುದಾಗಿದ್ದ ದೇವತ್ವವು ಅವನಿಗೆ ಲಭ್ಯವಾಗದೆ ಅವನು ಮನುಷ್ಯತ್ವದಲ್ಲಿಯೇ ಮುಂದುವರಿಯುವಂತಾಗುತ್ತದೆ. ಹೀಗೆ ಸ್ವೇಚ್ಛೆಯಿಂದಲೇ ನಹುಷ ಮನುಷ್ಯತ್ವಕ್ಕೇ ಜೋತುಬೀಳುತ್ತಾನೆ. ಅದೇ ಅವನ ವೈಶಿಷ್ಟ್ಯ.

ದೇವರಾಜನಾದ ಮೇಲೆ ಅವನಿಗೆದುರಾಗುವ ಪ್ರಶ್ನೆ ತನ್ನ ದೇವರಾಜತ್ವ ಪರಿಪೂರ್ಣತೆ ಅಲ್ಲವೆ ಎನ್ನುವುದು. ಇಂದ್ರಾಣಿಯೂ ಅವನ ವಶವಾಗದೆ ಅಥವಾ ಶಚೀತ್ವ-ವಿರಜಾದೇವಿಗೆ ಪ್ರಾಪ್ತವಾಗದೆ ನಹುಷನ ಇಂದ್ರತ್ವ ಅಪೂರ್ಣ. ಇಂದ್ರತ್ವ ಪೂರ್ಣವಾದರೆ ಮಾತ್ರ ಇಂದ್ರತ್ವ ಅವನಿಗೆ ಕಲ್ಪಾಂತಸ್ಥಾಯಿ. ಶಚೀತ್ವ-ಇಂದ್ರತ್ವದ ಅಂಶವೋ ಇಲ್ಲವೆ ಇಂದ್ರನ ವೈಯಕ್ತಿಕ ವಿಷಯವೋ ಎನ್ನುವ ಜಟಿಲ ಸಮಸ್ಯೆ ದೇವಸಭೆಯಲ್ಲಿ ಚರ್ಚೆಗೊಳಗಾಗಿ ಅದು ಇಂದ್ರತ್ವದ ಅಂಶವೆಂದೇ ಅಂಗೀಕೃತವಾಗುತ್ತದೆ.. ಈ ನಿರ್ಧಾರದಿಂದ ಕಂಗೆಟ್ಟ ಶಚಿ ಬೃಹಸ್ಪತಿಗಳ ಸೂಚನೆಯಂತೆ. ದೇಶಾಂತರಗತನಾದ ತನ್ನ ಪತಿಯನ್ನು ಶಾಸ್ತ್ರಗಳ ಪ್ರಕಾರ ಎಷ್ಟು ಕಾಲ ಅವಳು ನಿರೀಕ್ಷಿಸಬೇಕೋ ಅಷ್ಟು ಕಾಲಾವಕಾಶ ತನಗೆ ಕೊಡಬೇಕೆಂದು ನಹುಷನಲ್ಲಿ ಬೇಡಿಕೊಳ್ಳುತ್ತಾಳೆ. ಅವಳು ಭಯಪಟ್ಟಂತೆ ನಹುಷ ಕಾಮಚಪಲನಲ್ಲವೆಂದು ಅವಳಿಗೆ ಅರ್ಥವಾಗುವುದು ಅವನು ಅವಳ ಕೋರಿಕೆಯನ್ನು ಮನ್ನಿಸಿದಾಗ, ಹಾಗೂ ಇಂದ್ರನನ್ನು ಹುಡುಕಿಸಿ ಸ್ವರ್ಗಕ್ಕೆ ಕರೆತರಲು ನೆರವು ನೀಡಿದಾಗ, ಪುರಾಣದ ನಹುಷನಂತೆ ದೇವುಡು ಅವರ ನಹುಷ ಶಚೀದೇವಿಯ ರೂಪರಾಶಿಗೆ ಮಾರುಹೋಗಿ ಅವಳನ್ನು ಆಶಿಸುವುದಿಲ್ಲ. ಭೋಗಕ್ಕಿಂತಲೂ ತ್ಯಾಗಕ್ಕೇ, ಪ್ರೇಯಕ್ಕಿಂತಲೂ ಶ್ರೇಯಕ್ಕೆ ಅವನು ಒಲಿದವನು. ಶಚೀಯೇ ಉದ್ಗರಿಸುತ್ತಾಳೆ, `ಭೋಗವೆಂದರೆ ಅಂಟಿಗಿಂತಲೂ ಹೆಚ್ಚಾಗಿ ಅಂಟಿಕೊಳ್ಳುವ ದೇವತ್ವಕ್ಕಿಂತಲೂ ತ್ಯಾಗವನ್ನು ಆರಾಧಿಸುವ ಮನುಷ್ಯತ್ವವು ಹೆಚ್ಚು ಎನ್ನಬೇಕು.'

ಎಲ್ಲರ ಮೆಚ್ಚುಗೆ

ಇಂದ್ರ ಪದವಿಯನ್ನು ಪಡೆದುಕೊಳ್ಳುವುದು ದೊಡ್ಡದಾದರೂ ಅದಕ್ಕಿಂತಲೂ ಹೆಚ್ಚು ದೊಡ್ಡದು ಆ ಪದವಿಯ ಪೂರ್ಣಾಧಿಕಾರವನ್ನು ಮಹತ್ಕಾರ್ಯ ಸಾಧನೆಗೆ ಚಲಾಯಿಸುವ ದಕ್ಷತೆ. ನಹುಷನ ಈ ಶಕ್ತಿ ಪ್ರಕಾಶವಾಗುವುದು ಅವನು ಅಗ್ನಿ ವಾಯುಗಳಿಗೆ ತಮ್ಮ ವಿಶ್ವರೂಪವನ್ನು ಧಾರಣಮಾಡಿಕೊಂಡು ಇಂದ್ರನನ್ನು ಕಾಡುತ್ತಿರುವ ವೃತ್ರನ `ಹತ್ಯೆ'ಯನ್ನು ಖಂಡಿಸಿ ತುಂಡರಿಸುವಂತೆ ಆಜ್ಞೆ ಮಾಡುವಾಗ, ಹಾಗೆ ಮಾಡಬಹುದಾದ ಸಾಧ್ಯತೆಯನ್ನು ಮರೆತಿದ್ದ ಅವರು ನಹುಷನ ಆಜ್ಞೆಯನ್ನು ಪಾಲಿಸಿದುದರ ಫಲವಾಗಿ ಇಂದ್ರ ನಿರ್ಭೀತನಾಗಿ ಸ್ವರ್ಗಕ್ಕೆ ಮರಳಿ ಬರುವಂತಾಗುತ್ತದೆ. ಮಹಾವಿಷ್ಣುವಿಗೆ ಮಾತ್ರ ಸಾಧ್ಯವಾದುದನ್ನು ನಹುಷ ಮಾಡಿದುದು ಎಲ್ಲರ ಮೆಚ್ಚುಗೆ ಗಳಿಸುತ್ತದೆ.

ಇಂದ್ರನು ಹಿಂಜರಿದು ನಿರ್ವಹಿಸದೆ ಬಿಟ್ಟಿದ್ದ ಒಂದು ಹೆಚ್ಚಿನ ಕರ್ತವ್ಯವೆಂದರೆ ಸಪ್ತರ್ಷಿ ಶಿಬಿಕೋತ್ಸವ,ಇದನ್ನು ಇಂದ್ರತ್ವದ ಪರಮಾವಧಿ ಎನ್ನುತ್ತಾರೆ. ಇದನ್ನು ನಡೆಸಿ ಇಂದ್ರ ಪದವಿಗೆ ವಿದಾಯ ಹೇಳಲು ನಹುಷ ನಿಶ್ಚಯಿಸುತ್ತಾನೆ. ಶಿಬಿಕೋತ್ಸವವನ್ನು ನೆರವೇರಿಸಬಲ್ಲ ಧೀರ ಬ್ರಹ್ಮವಿದ್ಯಾವಂತನಾಗಿರಬೇಕು. ಅಲ್ಲದೆ ವಿಶ್ವಜಿದ್ಯಜ್ಞವನ್ನು ಮಾಡುವವನಾಗಿರಬೇಕು. ಇಂದ್ರ ಯಮ ವರುಣರ ನೆರವಿನಿಂದ ಬ್ರಹ್ಮ ವಿದ್ಯೆಯನ್ನು ನಹುಷ ಸಾಧಿಸುತ್ತಾನೆ. ವಿಶ್ವಜಿದ್ಯಜ್ಞ ಕಠಿನವಾದುದು.

ಇದನ್ನು ಮಾಡುವವನು ತನ್ನಲ್ಲಿರುವ ಕರ್ತೃ ಭೋಕ್ತೃ ಶಕ್ತಿಗಳನ್ನೆಲ್ಲಾ ಮಹಾವಿಷ್ಣುವಿಗೆ ಸಮರ್ಪಿಸಿ ಬಿಡಬೇಕು, ಅಹಂಕಾರವನ್ನೂ ಅದಕ್ಕೆ ಕಾರಣವಾದ ಅಭಿಮಾನವನ್ನೂ ತೊರೆಯಬೇಕು, ಶತ್ರು ಮಿತ್ರ ಭೇದ ಭಾವನೆಯನ್ನು ಬಿಟ್ಟು ಬಿಡಬೇಕು, ರಾಗ ದ್ವೇಷಗಳನ್ನೂ ಅವುಗಳಿಂದುಂಟಾಗುವ ಸುಖ ದುಃಖಗಳನ್ನೂ ತ್ಯಜಿಸಬೇಕು. ಜ್ಞಾತೃ ಜ್ಞಾನ ಜ್ಞೇಯಗಳೆಂಬ ತ್ರಿಪುಟಿಗಳಿಂದ ವಿಮುಕ್ತನಾಗಿಯೇ ಶಿಬಿರೋಹಣ ಮಾಡಬೇಕು. ಶಿಬಿಕೆಯಲ್ಲಿ ಕುಳಿತಿರುವಾಗ ನಿರ್ವಿಕಲ್ಪ ಸಮಾಧಿಸ್ಥನಾಗಿರಬೇಕು. ರಾಗದ್ವೇಷಗಳನ್ನು ಬಿಡಲಾಗದ ಇಂದ್ರನು ಶಿಬಿರಾರೋಹಣವನ್ನು ನೆಪ ಮಾತ್ರ ವರ್ಷ ವರ್ಷ ಮಾಡಿದಂತೆ ನಟಿಸುತ್ತಿದ್ದಾನೆ. ಆದರೆ ನಹುಷ ತ್ರಿಪುಟೀರಹಿತನಾಗಿ ರಾಗದ್ವೇಷ ವಿವರ್ಜಿತನಾಗಿ ನಿರ್ವಿಕಲ್ಪ ಸಮಾಧಿಸ್ಥನಾಗಿ ಶಿಬಿಕಾರೋಹಣಕ್ಕೆ ಧೈರ್ಯ ಮಾಡುತ್ತಾನೆ. ಅವನು ಒಂದು ದಿನದ ಶಿಬಿಕೋತ್ಸವವನ್ನು ನಡೆಸಲು ಸಿದ್ಧನಾದಾಗ ಸಪ್ತರ್ಷಿಗಳು ಏಳು ದಿನ ಅದನ್ನು ನಡೆಸಿಕೊಡಲು ತಾವೇ ಮುಂದಾಗುತ್ತಾರೆ. ನಹುಷನೂ ಒಪ್ಪುತ್ತಾನೆ. ಅವನು ಹೀಗೆ ಒಪ್ಪಿದ ಬಳಿಕ ವಿಧಿಯ, ಪ್ರಾಕೃತಿ ನಿಯಮದ, ಮೂರ್ತಿಯಾದ ನಿಯತಿಯು ಅವನನ್ನು ಎಚ್ಚರಿಸುತ್ತಾಳೆ. ಏಳು ದಿನಗಳ ಶಿಬಿಕೋತ್ಸವ ಆಗಬಾರದು, ಏಕೆಂದರೆ ಏಳು ದಿನ ಸಪ್ತರ್ಷಿ ಶಿಬಿಕೋತ್ಸವ ನಡೆಯುವುದಾದರೆ ಧರ್ಮವೃಷ್ಟಿ ಯಾಗಿ ತಪೋಗುಣವನ್ನು ತುಳಿದು ಹಾಕಿ ರಜೋಗುಣವನ್ನು ಮೀರಿ ಸತ್ವಗುಣವೇ ಎಲ್ಲೆಲ್ಲಿಯೂ ವಿಜೃಂಭಿಸಿ ಭೂಲೋಕದಲ್ಲಿ ಕೆಟ್ಟುದುದೆಲ್ಲ ಅಳಿದು ಒಳ್ಳೆಯದು ಎಲ್ಲೆಲ್ಲಿಯೂ ಪ್ರಬಲಿಸಿ ಲೋಕ ಲೋಕಗಳೆಲ್ಲಾ ಮಂಗಳಮಯವಾಗಿ ಬಿಡುತ್ತದೆ. ಇದು ನಿಯತಿಯನ್ನು ಉಲ್ಲಂಘಿಸಿದಂತಾಗುತ್ತದೆ, ಆದ್ದರಿಂದ ಮೂರು ದಿನ ಈ ಉತ್ಸವ ನಡೆಯಲಿ. ಇಲ್ಲದಿದ್ದರೆ ತಮ್ಮ ನಿರ್ವಿಕಲ್ಪ ಸಮಾಧಿಯನ್ನು ಕೊನೆಯ ದಿನವಾದರೂ ಶಿಥಿಲಗೊಳಿಸಬೇಕಾಗುತ್ತದೆ. ಆದರೆ ತನ್ನ ಒಪ್ಪಿಗೆಯನ್ನು ನಹುಷ ಹಿಂದಕ್ಕೆ ತೆಗೆದುಕೊಳ್ಳಲು ಇಷ್ಟ ಪಡದೆ ಕೊನೆಯ ದಿನ ತನ್ನ ನಿರ್ವಿಕಲ್ಪ ಸಮಾಧಿಗೆ ಶೈಥಿಲ್ಯ ಪ್ರಾಪ್ತವಾಗುವು ದಕ್ಕೇ ಒಪ್ಪುತ್ತಾನೆ.

ಅಭೂತಪೂರ್ವವಾದ ಈ ಸಪ್ತರ್ಷಿ ಶಿಬಿಕೋತ್ಸವ ಮೂರು ಲೋಕಗಳ ಜನರ ಸಮ್ಮುಖ ದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಆರು ದಿನಗಳೂ ಶಿಬಿಕೆಯಲ್ಲಿ ನಿರ್ವಿಕಲ್ಪ ಸಮಾ ಧಿಯಲ್ಲಿ ನಹುಷ ಧ್ಯಾನಸ್ಥನಾಗಿ ಕುಳಿತಿರುತ್ತಾನೆ. ಏಳನೆಯ ದಿನ ಇಲ್ಲಿಯವರೆಗೂ ನೆಪಮಾತ್ರಕ್ಕೆ ಹೆಗಲು ಕೊಡುತ್ತಿದ್ದ ಸಪ್ತರ್ಷಿಗಳು ತಾವೇ ಶಿಬಿಕೆಯನ್ನು ಹೊತ್ತು ನಡೆಯುತ್ತಾರೆ. ಅರ್ಧ ದಾರಿ ಶ್ರಮಿಸಿದಾಗ ಹಠಾತ್ತನೆ ನಹುಷನ ನಿರ್ವಿಕಲ್ಪ ಸಮಾಧಿ ಶಿಥಿಲವಾಗುತ್ತದೆ. ತತ್‌ಕ್ಷಣವೇ ಸಪ್ತರ್ಷಿ ಗಳು ಶಿಬಿಕೆಯನ್ನು ಅತ್ತ ಎಸೆಯುತ್ತಾರೆ. ಭೂಗತನಾದ ನಹುಷ ಸಪ್ತರ್ಷಿಗಳ ಪಾದಗಳಿಗೆ ವಂದಿ ಸುತ್ತಾನೆ. ಮತ್ತು ತನಗೆ ಏನು ಶಿಕ್ಷೆ ಎಂದು ತಾನೇ ಕೇಳಿಕೊಳ್ಳುತ್ತಾನೆ. ಅವರು ಸೂಚಿಸಿದಂತೆ ಅವನು ತನಗೆ ತಾನೇ ಅಜಗರತ್ವದ ಪ್ರಾಪ್ತಿಯ ಶಿಕ್ಷೆಯನ್ನು ವಿಧಿಸಿಕೊಳ್ಳುತ್ತಾನೆ. ಏಕೆಂದರೆ, ಚೇತ ನವನ್ನೂ ಜಡವು ಅಲ್ಲಾಡಿಸಿ ಹೊರಕ್ಕೆ ಎಳೆದುದರಿಂದ ಜಡದಲ್ಲಿ ಜಡವಾದ ಅವಸ್ಥೆಯೇ ಪ್ರಾಪ್ತ ವಾಗಬೇಕಲ್ಲವೆ? ಅದನ್ನು ಒಪ್ಪಿದ ಋಷಿಗಳು, `ನಹುಷ ಬ್ರಹ್ಮಜ್ಞ, ಇಂದ್ರ. ಆಬುದರಿಂದ ಅವ ನಿಗೆ ಇಂದ್ರಾನಂದವೂ ಜಾತಿ ಸ್ಮರತ್ವವು, ಮುಂದುವರಿಯುವುದು, ನಿರ್ವಿಕಲ್ಪ ಸಮಾಧಿಗೆ ಹೋಗ ಬಲ್ಲ ಈತನು ಎಲ್ಲಿದ್ದರೂ ಅದು ಬ್ರಹ್ಮ ಲೋಕಕ್ಕೇ ಮಿಗಿಲಾಗುವುದು' ಎಂದು ಆಶೀರ್ವದಿಸುತ್ತಾರೆ.

ಇಂದ್ರ ಈ ಶಿಕ್ಷೆಯನ್ನು ವಿಲೋಪಗೊಳಿಸುವ ಶಕ್ತಿಯಿರುವವನು. ಆದರೆ ಹಾಗೆ ಶಿಕ್ಷೆ ವಿಲೋಪ ಗೊಳ್ಳಲು ನಹುಷನೇ ಒಪ್ಪುವುದಿಲ್ಲ. ದೇಹವೇ ತಾನಲ್ಲ ಎಂದು ಬಲ್ಲವನಿಗೆ ಉಪಾಧಿಯ ಕಷ್ಟಗ ಳಿರುವುದಿಲ್ಲ ಎಂದು ಅವನು ವಿವರಿಸುತ್ತ ತಾನು ನಿಜರೂಪದಲ್ಲಿ ವಿರಜಾ ದೇವಿಯೊಡನೆ ತಪೋಲೋಕದಲ್ಲಿ ವಾನಪ್ರಸ್ಥನಾಗುವವನೆಂದೂ ಇನ್ನೊಂದು ರೂಪದಲ್ಲಿ ಆಕೆಯೊಂದಿಗೆ ಇಂದ್ರಸಖನಾಗಿ ಇಂದ್ರನ ಕೋರಿಕೆಯಂತೆ ಸ್ವರ್ಗದಲ್ಲಿರುವವನೆಂದೂ ಮತ್ತೊಂದು ರೂಪದಲ್ಲಿ ಹಾಗೆ ಇರಬೇಕಾದಷ್ಟು ಕಾಲ ಹಿಮಾಲಯ ಪ್ರಾಂತ್ಯದಲ್ಲಿ ಅಜಗರನಾಗಿರುವುದಾಗಿಯೂ ತಿಳಿಸುತ್ತಾನೆ. ನಹುಷ ಬಿಟ್ಟುಕೊಟ್ಟ ಇಂದ್ರ ಪದವಿಯನ್ನು ಇಂದ್ರ ಮತ್ತೆ ಅಲಂಕರಿಸುವ ಸಿದ್ಧತೆಗಳೊಂದಿಗೆ ಕಾದಂ ಬರಿ ಮುಕ್ತಾಯವಾಗುತ್ತದೆ.

ಸಪ್ತರ್ಷಿ ಶಿಬಿಕೋತ್ಸವದ ಈ ನವವ್ಯಾಖ್ಯೆ, ಈ ನೂತನ ಕಲ್ಪನೆ ದೇವುಡು ಅವರ ಸ್ವೋಪಜ್ಞ ತೆಯ ಸೃಷ್ಟಿ. ಪುರಾಣಗಳಲ್ಲಿ ತನ್ನನ್ನು ವರಿಸುವಂತೆ ನಹುಷ ಶಚಿಯ ಮೇಲೆ ಒತ್ತಾಯ ತಂದಾಗ ಅವಳು ಬೃಹಸ್ಪತಿಗಳ ಸಲಹೆಯಂತೆ ಅವನಿಗೆ ಹಾಕುವ ನಿಬಂಧನೆ ಅವನು ಸಪ್ತರ್ಷಿಗಳು ಹೊರುವ ಪಲ್ಲಕ್ಕಿಯಲ್ಲಿ ತನ್ನೆಡೆಗೆ ಬರಲೆಂಬುದು. ಈ ಅಪೂರ್ವ ವಾಹನದಲ್ಲಿ ನಹುಷ ಅವಳ ಅಂತಃಪುರದೆಡೆಗೆ ಸಾಗುತ್ತ ತನ್ನ ಅತ್ಯಾತುರದಲ್ಲಿ `ಸರ್ಪ, ಸರ್ಪ' ಎಂದರೆ `ಬೇಗ ನಡೆಯಿರಿ, ಬೇಗ ನಡೆಯಿರಿ' ಎಂದು ಪಲ್ಲಕ್ಕಿಯನ್ನು ಹೊರುತ್ತಿದ್ದ ಸಪ್ತರ್ಷಿಗಳನ್ನು ತ್ವರೆಗೊಳಿಸುತ್ತಾನೆ. ಆಗ ಅವನ ಕಾಲು ಅಗಸ್ತ್ಯರ ಶಿರಕ್ಕೆ ತಗುಲುತ್ತದೆ, ಅಗಸ್ತ್ಯರು ಕೋಪಾವಿಷ್ಟರಾಗಿ `ಸರ್ಪವಾಗು' ಎಂದು ನಹುಷನಿಗೆ ಶಾಪ ಕೊಡುತ್ತಾರೆ. ಪುರಾಣಗಳ ಇಂಥ ಶಚೀ ಮೋಹಾತುರ ನಹುಷನೆಲ್ಲಿ, ದೇವುಡು ಅವರ ಕಲ್ಪನೆಯ ಸಂಯಮಿ, ಬ್ರಹ್ಮಜ್ಞ, ನಿರ್ವಿಕಲ್ಪ ಸಮಾಧಿ ಸಿದ್ಧ, ಲೋಕ ಕಲ್ಯಾಣಕಾರಿ, ಮಹಾಕ್ಷತ್ರಿಯ ನಹುಷ ನೆಲ್ಲಿ?

ಶಿಬಿಕೋತ್ಸವದ ಏಳನೆಯ ದಿನದಂದು ತನ್ನ ನಿರ್ವಿಕಲ್ಪ ಸಮಾಧಿಗೆ ಶೈಥಿಲ್ಯ ಒದಗುವ ಅಪಾಯವನ್ನು ನಿಯತಿಯಿಂದ ಮೊದಲೇ ಚೆನ್ನಾಗಿಯೇ ತಿಳಿದಿದ್ದ ನಹುಷ ಅಂದು ಶಿಬಿಕಾರೋ ಹಣ ಮಾಡುವ ಮುಂಚೆ ಮಗ ಯಯಾತಿಯನ್ನು ಕರೆದು ಅವನಿಗ ಹೇಳುವ ಹಿತವಚನ ನಮ್ಮ ಕಿವಿಯಲ್ಲಿ ಸದಾ ಅವಿಸ್ಮರಣೀಯವಾಗಿ ಮೊರೆಯುತ್ತದೆ. `ಮನುಷ್ಯನಿಗೆ ದಾನಕ್ಕಿಂತ ಧರ್ಮವಿಲ್ಲ. ಕೊಡು, ಕೊಡು, ಕೊಟ್ಟು ಬದುಕು. ಇದೇ ನನ್ನ ಸಂದೇಶ'. ಉಪನಿಷತ್ತುಗಳೂ ಇದನ್ನೇ ಹೇಳು ವುದು. `ದತ್ತ, ದಾತ್ಯುತ, ದಯಧ್ವಂ'. ದೇವುಡು ಅವರ ಕಾದಂಬರಿಗಳು ಪ್ರತಿಪಾದಿಸುವುದು ಇಂಥ ಚಿರಂತನ ಮೌಲ್ಯಗಳನ್ನೇ.

★

ಮಹಾ ಕ್ಷತ್ರಿಯ

ಪ್ರೊ॥ ಗಿರಡ್ಡಿ ಗೋವಿಂದರಾಜ

ದಿವಂಗತ ದೇವುಡು ನರಸಿಂಹ ಶಾಸ್ತ್ರಿಗಳು ಕನ್ನಡದ ಧೀಮಂತ ಲೇಖಕರಲ್ಲಿ ಒಬ್ಬರಾಗಿದ್ದಾರೆ. ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿಯೂ ದೇವುಡು ಅವರು ಕೃತಿರಚನೆ ಮಾಡಿದ್ದಾರಾದರೂ ಕಾದಂಬರಿಕಾರರೆಂದೇ ಹೆಚ್ಚು ಪ್ರಸಿದ್ಧರಾಗಿದ್ದಾರೆ. ಆದರೂ ಅವರು ಬರೆದ ಕಾದಂಬರಿಗಳ ಸಂಖ್ಯೆಯೇನೂ ದೊಡ್ಡದಿಲ್ಲ. ಬರೆದಿರುವ ಎಂಟು-ಹತ್ತು ಕಾದಂಬರಿಗಳಲ್ಲಿ ಸಾಮಾಜಿಕ, ಐತಿಹಾಸಿಕ ಹಾಗೂ ಪೌರಾಣಿಕ-ಹೀಗೆ ಮೂರು ಪ್ರಕಾರಗಳಿಗೆ ಸೇರಿರುವ ಕೃತಿಗಳಿವೆ. ಇವುಗಳಲ್ಲಿ `ಅಂತರಂಗ' ಎಂಬ ಸಾಮಾಜಿಕ ಕಾದಂಬರಿ ಪ್ರಕಟವಾದದ್ದು ೧೯೩೦ರಲ್ಲಿ. ಇದು ಕನ್ನಡದ ಮೊದಲ ಮನೋವೈಜ್ಞಾನಿಕ ಕಾದಂಬರಿ ಎಂಬ ಕೀರ್ತಿಗೆ ಪಾತ್ರವಾಗಿದೆ. `ಮಲ್ಲಿ', `ಎರಡನೆಯ ಜನ್ಮ', `ಡಾ॥ ವೀಣಾ', `ಕಳ್ಳರ ಕೂಟ' ಮುಂತಾದವು ಅವರ ಇತರ ಸಾಮಾಜಿಕ ಕಾದಂಬರಿಗಳು. `ಮಯೂರ', `ಅವಳ ಕತೆ' (ಚಿನ್ನಾ)ಗಳು ಐತಿಹಾಸಿಕ ಕಾದಂಬರಿಗಳು. `ಮಹಾಬ್ರಾಹ್ಮಣ' `ಮಹಾಕ್ಷತ್ರಿಯ' ಮತ್ತು `ಮಹಾದರ್ಶನ' ಈ ಮೂರು ಪೌರಾಣಿಕ ಕಾದಂಬರಿಗಳು.

ಈ ಮೂರು ಬಗೆಯ ಕಾದಂಬರಿಗಳಲ್ಲಿ ದೇವುಡು ಅವರ ಪ್ರತಿಭೆಗೆ ಸಹಜವಾಗಿ ಒಗ್ಗಿದ್ದು ಪೌರಾಣಿಕ ಕಾದಂಬರಿ. ಈ ಬಗೆಯ ಕಾದಂಬರಿಗಳಿಗೆ ಬೇಕಾದ ವೇದ ಉಪನಿಷತ್ತು, ಪುರಾಣಗಳ ತಲಸ್ಪರ್ಶಿಯಾದ ಜ್ಞಾನ ಮತ್ತು ಅದಕ್ಕೆ ಸರಿದೊರೆಯಾದ ಕಲ್ಪಕತೆಗಳು ದೇವುಡು ಅವರಲ್ಲಿ ಯಥೇಷ್ಟವಾಗಿವೆ. ಆ ಮೂಲಕ ಸಂಹಿತೆ, ಪುರಾಣ, ಇತಿಹಾಸಗಳಲ್ಲಿ ಬಂದಿರುವ ಕೆಲವು ಕಥೆಗಳನ್ನು ಉಪಬೃಂಹಣ ಮಾಡಿ ವಿಸ್ತರಿಸಿ ಹೇಳುವ ಕೆಲಸವನ್ನು ಅವರು ಈ ಕಾದಂಬರಿಗಳಲ್ಲಿ ಮಾಡಿದ್ದಾರೆ. ಈ ದೃಷ್ಟಿಯಿಂದ ಈ ಮೂರೂ ಕಾದಂಬರಿಗಳು ಕನ್ನಡ ಕಾದಂಬರಿಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆಯುತ್ತವೆ.

ಇವುಗಳಲ್ಲಿ ೧೯೪೭ರಲ್ಲಿ ಪ್ರಕಟವಾದ `ಮಹಾಬ್ರಾಹ್ಮಣ' ಮೊದಲನೆಯದು. ೧೯೬೨ರಲ್ಲಿ ಮೊದಲು ಧಾರಾವಾಹಿಯಾಗಿ, ನಂತರ ೧೯೬೪ರಲ್ಲಿ ಪುಸ್ತಕವಾಗಿ ಪ್ರಕಟವಾದ `ಮಹಾದರ್ಶನ' ಕೊನೆಯದು, ಇವೆರಡೂ ಕಾದಂಬರಿಗಳ ಕಥೆ ವೇದಕಾಲಕ್ಕೆ ಸಂಬಂಧಿಸಿದುವು. `ಮಹಾಬ್ರಾಹ್ಮಣ' ತಾಮಸವೇ ಪ್ರಧಾನವಾಗಿದ್ದ ಕ್ಷತ್ರಿಯ ಕೌಶಿಕ ಹಟದಿಂದ ಮೇಲಕ್ಕೇರುತ್ತ ಕೊನೆಗೆ ಗಾಯತ್ರೀ ಮಂತ್ರದ ದ್ರಷ್ಟಾರನಾಗಿ ಬ್ರಹ್ಮರ್ಷಿಯಾಗಿ ಮಾಗುವ ಕಥೆ. `ಮಹಾದರ್ಶನ' ಮಹರ್ಷಿ ಯಾಜ್ಞವಲ್ಕ್ಯ ಬ್ರಹ್ಮವಿದ್ಯೆಯನ್ನು ಸಾಧಿಸಿದ ಕಥೆ. ಇವೆರಡೂ ಕಾದಂಬರಿಗಳಲ್ಲಿ ದೇವುಡು ಅವರು ವೇದಕಾಲೀನ ಜೀವನದ ವಿವರಗಳನ್ನು ಅನನ್ಯವಾದ ರೀತಿಯಲ್ಲಿ ಸೆರೆಹಿಡಿದಿದ್ದಾರೆ. ಕುರ್ತುಕೋಟಿಯವರು ಹೇಳುವ ಹಾಗೆ "ಹಲವಾರು ಅನುಷ್ಠಾನಗಳ ಕ್ರಮ, ಯಜ್ಞವಿಧಿಗಳು, ದೇವತೆಗಳು ಕಾಣಿಸಿಕೊಳ್ಳುವ ರೀತಿ, ಮಂತ್ರದರ್ಶನ, ಜಟಿಲವಾದ ಧರ್ಮಸೂಕ್ಷ್ಮಗಳು, ವೇದ ಕಾಲೀನ ಸಮಾಜ-ನಿಯಮಗಳು ಇವೆಲ್ಲವುಗಳ ಸಮಗ್ರವಾದ ಚಿತ್ರಣವೂ ಇಲ್ಲಿದೆ" (`ಯುಗಧರ್ಮ ಹಾಗೂ ಸಾಹಿತ್ಯದರ್ಶನ,' ಪುಟ ೨೩೬').

ಈ ವಿವರಗಳು ಅಗತ್ಯವಾದ ವಾತಾವರಣವನ್ನು ನಿರ್ಮಿಸಿ ಕಾದಂಬರಿಗಳ ಅನುಭವವನ್ನು ನೈಜಗೊಳಿಸುತ್ತವೆ.

ಜೊತೆಗೆ ಈ ಕಾದಂಬರಿಗಳಲ್ಲಿ ಬರುವ ಜೀವನವೂ ವಿಶಿಷ್ಟ ರೀತಿಯದಾಗಿದೆ. ಇಲ್ಲಿಯ ಪಾತ್ರಗಳು ಸಾವಿರಾರು ವರ್ಷ ಬಾಳಬಲ್ಲವರು. ಯುಗಗಳವರೆಗೂ ಕಾಲದ ಹರಹು ಇದೆ. ಮನುಷ್ಯರು ಸ್ವರ್ಗಲೋಕದೊಡನೆ ಸಂಬಂಧವಿಟ್ಟುಕೊಂಡವರು. ದೇವತೆಗಳೂ ಭೂಲೋಕದ ಮನುಷ್ಯರೊಡನೆ ಕೂಡಿ ಬಾಳುವೆ ಮಾಡುತ್ತಾರೆ. ಹೀಗೆ ಅಲೌಕಿಕ ಅಂಶಗಳು ದಟ್ಟವಾಗಿದ್ದರೂ ಈ ಎರಡೂ ಕಾದಂಬರಿಗಳ ಆಸಕ್ತಿಯ ಕೇಂದ್ರ ಮನುಷ್ಯನೇ ಆಗಿದ್ದಾನೆ, ಮತ್ತು ಇವುಗಳ ಮುಖ್ಯ ಕಾರ್ಯಕ್ಷೇತ್ರ ಮನುಷ್ಯಲೋಕವೇ ಆಗಿದೆ. ಈ ಕಾದಂಬರಿಗಳಲ್ಲಿ ದೇವುಡು ಅವರು ಮುಖ್ಯವಾಗಿ ಮನುಷ್ಯಚೇತನದ ವಿಕಾಸದ ಎತ್ತರಗಳನ್ನು ಗುರುತಿಸುವ ಕೆಲಸ ಮಾಡಿದ್ದಾರೆ. ಈ ದೃಷ್ಟಿಯಿಂದ ಇವುಗಳಲ್ಲಿ ಮಾನವೀಯ ಆಸಕ್ತಿ ಸಾಕಷ್ಟು ತೀವ್ರವಾಗಿಯೇ ಇದೆ.

೧೯೬೧ರಲ್ಲಿ ಪ್ರಕಟವಾದ `ಮಹಾಕ್ಷತ್ರಿಯ' ಇವೆರಡೂ ಕಾದಂಬರಿಗಳಿಗಿಂತ ಭಿನ್ನವಾದುದೇನೂ ಅಲ್ಲ. ಕಾದಂಬರಿಯ ಕೊನೆಯ ಭಾಗದಲ್ಲಿ ನಹುಷ-ವಿರಜಾದೇವಿಯರಂಥ ಒಬ್ಬಿಬ್ಬರನ್ನು ಬಿಟ್ಟರೆ ಇಲ್ಲಿಯ ಪಾತ್ರಗಳೆಲ್ಲ ಮಾನುಷ ವ್ಯಕ್ತಿತ್ವಕ್ಕೆ ಹೋಲಿಕೆಯೇ ಇಲ್ಲದ ದೇವತೆಗಳು ಮತ್ತು ದಾನವರು. ಇವೆಲ್ಲ ಆಗಲೇ ಬೆಳೆದು ಪರಿಪೂರ್ಣವಾದ ಪಾತ್ರಗಳು. ಅವುಗಳ ವ್ಯಕ್ತಿತ್ವದ ಹಾಗೆ ಅವುಗಳ ಶಕ್ತಿಯೂ ಊಹಾತೀತವಾದದ್ದು. ಅದಕ್ಕೆ ತಕ್ಕ ಹಾಗೆ ಕಾಲ-ದೇಶಗಳ ಪ್ರಮಾಣವೂ ಬೃಹತ್ತಾದುದು. ಕಲ್ಪಗಳವರೆಗೆ ವ್ಯಾಪ್ತಿ ಇದ್ದರೆ, ಸ್ವರ್ಗ ಮರ್ತ್ಯ ಪಾತಾಳಗಳನ್ನೊಳಗೊಂಡ ಇಡಿಯ ಬ್ರಹ್ಮಾಂಡವೇ ಕ್ಷೇತ್ರ. ಇಲ್ಲಿಯ ದೇವ-ದಾನವರ ಸಂಘರ್ಷ, ಅದರಿಂದ ಉದ್ಭವಿಸುವ ತೊಡಕುಗಳು, ಘರ್ಷಣೆಯಲ್ಲಿ ಹುಟ್ಟುವ ಅನೂಹ್ಯ ಶಕ್ತಿಗಳು, ಯೋಜಿತವಾಗುವ ಯುಕ್ತಿಗಳು, ದೇವತೆಗಳನ್ನೂ ನಿಯಂತ್ರಿಸುವ ಕಟ್ಟಳೆಗಳು, ಎಲ್ಲವನ್ನೂ ಸಂಬಾಳಿಸುವ ನಿಯತಿ ಇತ್ಯಾದಿಗಳೆಲ್ಲ ನಮಗೆ ಅಪರಿಚಿತವಾದ ಅದ್ಭುತ ಲೋಕವನ್ನೇ ಸೃಷ್ಟಿಸಿಬಿಡುತ್ತವೆ. ಆದರೂ ಮಾನವೀಯ ಆಸಕ್ತಿಯ ಎಳೆ ಕಾದಂಬರಿಯ ಕೇಂದ್ರದಲ್ಲಿ ಇದ್ದೇ ಇದೆ. ಇದನ್ನು ಅರಿತುಕೊಳ್ಳುವುದಕ್ಕೆ ಕಾದಂಬರಿಯ ವಿವರಗಳನ್ನೇ ನೋಡಬೇಕು. ಆದರೂ ಅದರ ಕಥಾಭಿತ್ತಿಯನ್ನು ಸಂಗ್ರಹಿಸುವ ಮೂಲಕ ಅದರ ಸ್ವರೂಪವನ್ನು ಸ್ವಲ್ಪವಾದರೂ ಊಹಿಸಬಹುದಾಗಿದೆ.

"ಮಹಾಕ್ಷತ್ರಿಯ"ದ ಕಥೆ ಆರಂಭವಾಗುವುದ ಇಂದ್ರಸಭೆಯಲ್ಲಿ ಇಂದ್ರನ ಅಚಾತುರ್ಯದಿಂದಾಗಿ ಅವಮಾನಿತನಾದ ದೇವಗುರು ಬೃಹಸ್ಪತಿ ಸಿಟ್ಟಿನಿಂದ ಕಣ್ಮರೆಯಾಗುವುದರೊಂದಿಗೆ. ಈ ಅನಿರೀಕ್ಷಿತವಾದ ಘಟನೆಯೇ ಸುದೀರ್ಘವಾದ ಅನಂತ ಪರಂಪರೆಗೆ ಬೀಜವಾಗುತ್ತದೆ. ದೇವಗುರು ಇಲ್ಲದೆ ದೇವಲೋಕದ ಕೆಲಸ ನಡೆಯುವಂತಿಲ್ಲ. ಕಾಲಧರ್ಮವನ್ನು ಅರಿತು ಕಾಲೋಚಿತವಾದ ಕರ್ಮಗಳನ್ನು ಮಾಡಿಸುತ್ತ ದೇವತೆಗಳ ತೇಜಸ್ಸು ವರ್ಧಿಸುವಂತೆ ಮಾಡುವವನು ದೇವಗುರು. ಎಷ್ಟು ಹುಡುಕಿದರೂ ದೇವಗುರು ಸಿಗದಾದಾಗ ದೇವತೆಗಳು ಇನ್ನೊಬ್ಬ ಗುರುವನ್ನು ಹುಡುಕಿ ತರಬೇಕಾಗುತ್ತದೆ. ಬ್ರಹ್ಮನ ಸಲಹೆಯಂತೆ ವಿಶ್ವರೂಪಾಚಾರ್ಯನನ್ನು ಗುರುವಾಗಿ ಸ್ವೀಕರಿಸಬೇಕಾಗುತ್ತದೆ. ಈತನಿಗೆ ಮೂರು ಮುಖಗಳು. ಒಂದರಿಂದ ವೇದಾಧ್ಯಯನ, ಒಂದರಿಂದ ಸದಾ ಸುರಾಪಾನ,

ಇನ್ನೊಂದರಿಂದ ಪೌರೋಹಿತ್ಯ. ಮಾತೃವಂಶದಿಂದ ಆತ ಅಸುರ ಕುಲಕ್ಕೆ ಸೇರಿದವನು. ಇವನು ದೇವಗುರುವಾದನೆಂದು ಅಸುರರಿಗೂ ಸಂತೋಷವಾಗುತ್ತದೆ. ಯಾರ ಅಂಕೆಗೂ ಬಗ್ಗದ ಇವನು ಯಾವ ಕಾಲಕ್ಕೆ ಏನು ಮಾಡಿಯಾನೋ ಎಂದು ದೇವತೆಗಳಿಗೆಲ್ಲ ದಿಗಿಲಾಗುತ್ತದೆ. ದಿನದಿನಕ್ಕೂ ಇವನನ್ನು ಹಿಡಿಯುವುದು ಕಷ್ಟವಾಗಿ ಕೊನೆಗೆ ಉಪಾಯದಿಂದ ಇಂದ್ರ ಅವನನ್ನು ಕೊಂದು, ಆ ಹತ್ಯೆಯ ಪಾಪವನ್ನು ಇತರರಿಗೆ ಹಂಚಿ, ಆ ಪಾಪದಿಂದ ಮುಕ್ತನಾಗುವುದರಲ್ಲಿ ಯಶಸ್ವಿಯಾಗುತ್ತಾನೆ.

ಆದರೆ ಇದರಿಂದ ಕುಪಿತನಾದ ವಿಶ್ವರೂಪಾಚಾರ್ಯನ ತಂದೆ ತ್ವಷ್ಟೃಬ್ರಹ್ಮ ಯಾಗವೊಂದನ್ನು ಮಾಡಿ ಇಂದ್ರನನ್ನು ನಿರ್ಮೂಲ ಮಾಡಬಲ್ಲ ಅತೀಂದ್ರನೊಬ್ಬನನ್ನು ಸೃಷ್ಟಿಸುತ್ತಾನೆ. ಅವನೇ ದೈತ್ಯಾಕಾರದ ವೃತ್ರಾಸುರ. ಅವನಿಗೆ ಹುಟ್ಟಿದಾಗಲೇ ಮೂವತ್ತು ವರ್ಷ. ಅಸುರರೆಲ್ಲ ತಮ್ಮ ಆಶೆಗಳನ್ನು ಈಡೇರಿಸಬಲ್ಲ ಏಕೈಕ ಸಾಧನವೆಂದು ತಮ್ಮ ಶಕ್ತಿಯನ್ನೆಲ್ಲ ಅವನಿಗೆ ಧಾರೆಯೆರೆದು ಬೆಳೆಸುತ್ತಾರೆ. ಇವನ ಗಾತ್ರ, ಪ್ರತಾಪಗಳನ್ನು ಕೇಳಿಯೇ ದೇವತೆಗಳ ಎದೆ ನಡುಗುತ್ತದೆ. ಅಸುರ ಲೋಕದಲ್ಲಿ ವೃತ್ರನ ನಾಯಕತ್ವದಲ್ಲಿ ದೇವಲೋಕದ ಮೇಲೆ ದಾಳಿ ನಡೆಯುವ ಸಿದ್ಧತೆಗಳು ನಡೆದದ್ದನ್ನು ಕೇಳಿ ದೇವತೆಗಳೂ ಅದನ್ನು ಎದುರಿಸಲು ಸಿದ್ಧವಾಗುತ್ತಾರೆ. ವೃತ್ರನನ್ನು ಕೊಲ್ಲಬಲ್ಲ ಆಯುಧಕ್ಕಾಗಿ ದಧೀಚಿಯ ಬೆನ್ನೆಲುಬನ್ನು ಪಡೆದು ವಜ್ರಾಯುಧವನ್ನು ತಯಾರಿಸುತ್ತಾರೆ. ಆದರೆ ಯುದ್ಧದಲ್ಲಿ ಅಸುರರದೇ ಕೈ ಮೇಲಾಗುತ್ತದೆ. ವೃತ್ರನ ಆಕಾರವನ್ನು ನೋಡಿಯೇ ಐರಾವತ ಹೆದರಿ ಓಡಿಹೋಗುತ್ತದೆ. ವಜ್ರಾಯುಧವೂ ಕೆಲಸಕ್ಕೆ ಬರುವುದಿಲ್ಲ. ನಿಯತಿಯಂತೆ ಇಂದ್ರ ತನ್ನ ಪದವಿಯನ್ನು ಬಿಟ್ಟುಕೊಟ್ಟು ಮತ್ತೆ ಸರಿಯಾದ ಅವಕಾಶಕ್ಕಾಗಿ ಕಾಯುತ್ತಾನೆ.

ಇಂದ್ರಪದವಿಯಾಗಲಿ, ದೇವಲೋಕದ ಭೋಗವಾಗಲಿ ಅತ್ಯಂತ ಕ್ಲಿಷ್ಟವಾದ ಸಂಗತಿಗಳು. ಅಸುರರಿಗೆ ಭೋಗದ ಆಶೆಯೊಂದೇ ದೇವಲೋಕದ ಮೇಲಿನ ಮೋಹಕ್ಕೆ ಕಾರಣ. ದೇವತೆಗಳಲ್ಲದವರು ದೇವಲೋಕದಲ್ಲಿ ಅನುಭವಿಸಿದ ಭೋಗಕ್ಕೆ ಬೆಲೆಕೊಡಬೇಕಾಗುತ್ತದೆಂಬುದು ಅವರಿಗೆ ತಿಳಿಯುವುದಿಲ್ಲ. ಹೀಗೆ ಅವರ ತೇಜಸ್ಸು ಇಳಿಮುಖವಾಗುತ್ತ ಹೋಗುತ್ತದೆ. ವೃತ್ರ ಇಂಥ ಸ್ಥಿತಿಯಲ್ಲಿ ಇಂದ್ರನನ್ನು ಮಿತ್ರನನ್ನಾಗಿ ಸ್ವೀಕರಿಸಿ ಒಂದು ದಿನ ಜಲಕೇಳಿಗೆ ಕರೆಯುತ್ತಾನೆ. ಇಂದ್ರ ಸಾಗರದ ತೆರೆಗಳ ನೊರೆಯಲ್ಲಿ ವಜ್ರಾಯುಧವನ್ನು ಅಡಗಿಸಿ ಅವನನ್ನು ಹೊಡೆದು ಕೊಲ್ಲುತ್ತಾನೆ.

ಇದರಿಂದಾಗಿ ಅಸುರರು ದೇವಲೋಕದಿಂದ ಹೊರಟುಹೋಗಿ ಮತ್ತೆ ಅದು ದೇವತೆಗಳ ಕೈಗೆ ಬರುತ್ತದೆ. ಆದರೆ ಇಂದ್ರನಿಗೆ ಇನ್ನೂ ಇಂದ್ರನಾಗುವ ಯೋಗ ಬಂದಿಲ್ಲ. ವೃತ್ರನ ಹತ್ಯೆ ಅವನನ್ನು ಬೆನ್ನಟ್ಟಿ ಕಾಡುತ್ತದೆ. ಆತ ದಿಕ್ಕೆಟ್ಟು ಓಡಿಹೋಗಿ ಅಡಗಿಕೊಳ್ಳುತ್ತಾನೆ. ಅವನು ತಿರುಗಿ ಬರುವವರೆಗೂ ಇಂದ್ರ ಪದವಿ ಖಾಲಿ ಬೀಳುತ್ತದೆ. ತಾತ್ಕಾಲಿಕವಾಗಿ ಅದಕ್ಕೆ ಯಾರಾದರೂ ಒಬ್ಬರನ್ನು ತರಬೇಕು. ಅದಕ್ಕಾಗಿ ಭೂಲೋಕದ ನಹುಷ ಚಕ್ರವರ್ತಿಯನ್ನು ವಿನಂತಿಸುತ್ತಾರೆ. ಧರ್ಮಿಷ್ಠನಾದ ಆತನಿಗೆ ಭೋಗದ ಆಶೆ ಇಲ್ಲ. ತನ್ನದು ತಾತ್ಕಾಲಿಕ ಇಂದ್ರಪದವಿ ಎಂಬ ಅರಿವಿನಿಂದಲೇ ಆತ ಒಪ್ಪಿಕೊಳ್ಳುತ್ತಾನೆ. ಜೊತೆಗೆ ತನ್ನ ಪತ್ನಿಯನ್ನು ಕರೆದೊಯ್ಯಲು, ಮತ್ತು ತಾನು ಅರಮನೆಯಲ್ಲಿ ನಡೆಸುತ್ತಿದ್ದ ಧರ್ಮಕಾರ್ಯಗಳನ್ನು ದೇವಲೋಕದಲ್ಲೂ ನಡೆಸಲು ಅನುಮತಿ ಕೇಳಿ ಪಡೆಯುತ್ತಾನೆ. ಎಂದರೆ ದೇವಲೋಕದಲ್ಲೂ ಅವನು ಮನುಷ್ಯ ಧರ್ಮವನ್ನು ಬಿಡಲು ಒಪ್ಪುವುದಿಲ್ಲ.

ಹಾಗೆಯೇ ನಹುಷನಿಗೆ ಇಂದ್ರನಾದ ಮೇಲೂ ಮನುಷ್ಯ ಸಹಜವಾದ ಜಿಜ್ಞಾಸೆ, ಕುತೂಹಲಗಳು ಬಿಡುವುದಿಲ್ಲ. ತನಗೆ ಮೀರಿದ ದೇವರಹಸ್ಯಗಳನ್ನು ತಿಳಿಯಲು ಬಯಸುತ್ತಾನೆ. ಶಚಿ ಇಂದ್ರಾಣಿಯೋ, ಅಥವಾ ಓಡಿಹೋಗಿರುವ ಇಂದ್ರನ ಹೆಂಡತಿಯೋ ಎಂಬ ಪ್ರಶ್ನೆ ಹೀಗೆ ಏಳುತ್ತದೆ. ಇಂದ್ರತ್ವವು ಪೂರ್ಣವಾಗಬೇಕಾದರೆ ಶಚಿಯು ಇಂದ್ರಾಣಿಯಾಗಬೇಕು ಎಂಬ ರಹಸ್ಯ ಗೊತ್ತಾದಾಗಲೂ ನಹುಷ ಅವಳಿಗಾಗಿ ಆಶೆ ಪಡುವುದಿಲ್ಲ. ಅದರಿಂದಾಗಿ ಇಂದ್ರತ್ವದಿಂದ ಚ್ಯುತಿಯಾಗುವ ಸಾಧ್ಯತೆ ಉಳಿದುಬಿಡುತ್ತದೆ. ಆದರೆ ಇಂದ್ರನಿಗೆ ಸಲ್ಲುವ ಅತ್ಯಂತ ಹೆಚ್ಚಿನ ಗೌರವವಾದ ಸಪ್ತರ್ಷಿ ಶಿಬಿಕೆಯನ್ನೇರುವ ನಿರ್ಧಾರ ಮಾಡುತ್ತಾನೆ. ತೇಜೋಹಾನಿಯಾದೀತೆಂಬ ಭಯದಿಂದ ಇಂದ್ರನೂ ಬಯಸದ ಗೌರವ ಇದು. ನಹುಷ ಹಾಗೆ ತೇಜೋಹಾನಿಯಾಗದಂತೆ ಯಾಗವನ್ನು ನಡೆಸಿ ಶಿಬಿಕೆಯನ್ನೇರುತ್ತಾನೆ. ಆದರೆ ನಿಯಮಕ್ಕೆ ವ್ಯತಿರಿಕ್ತವಾಗಿ ಶಿಬಿಕಾರೋಹಣ ಕಾಲದಲ್ಲಿ ನಿರ್ವಿಕಲ್ಪ ಸಮಾಧಿ ಶಿಥಿಲವಾಗಿ ಸಪ್ತರ್ಷಿಗಳ ಕೋಪಕ್ಕೆ ತುತ್ತಾಗುತ್ತಾನೆ. ನಹುಷನ ಪ್ರಯತ್ನಗಳಿಂದಾಗಿ ಹತ್ಯೆಯ ಭೀತಿಯಿಂದ ಪಾರಾಗಿ ಬಂದ ಇಂದ್ರನಿಗೆ ನಹುಷ ಸ್ವಸಂತೋಷದಿಂದ ಇಂದ್ರಪದವಿಯನ್ನು ತಿರುಗಿ ಒಪ್ಪಿಸಿ, ತನಗೆ ತಾನೇ ಶಾಪವನ್ನು ವಿಧಿಸಿಕೊಂಡು ಅಜಗರವಾಗಿ ಹುಟ್ಟುವುದಾಗಿ ಹೇಳುತ್ತಾನೆ. ಇಂದ್ರ ಈ ಶಾಪವನ್ನು ವಿಲೋಪ ಮಾಡಲು ಸಿದ್ಧವಿದ್ದರೂ ಅದನ್ನೊಪ್ಪದೆ ನಹುಷ ತನ್ನ ನಿಶ್ಚಯದಲ್ಲಿ ತಾನು ನಿಲ್ಲುತ್ತಾನೆ.

ಇಲ್ಲಿ ದೇವುಡು ಅವರು ಮೂಲಕಥೆಯಲ್ಲಿ ಕೆಲವು ಮಹತ್ವದ ಬದಲಾವಣೆಗಳನ್ನು ಮಾಡಿಕೊಂಡಿರುವುದು ಸ್ಪಷ್ಟವಾಗಿದೆ. ಅತ್ಯಂತ ಮುಖ್ಯವಾದ ಬದಲಾವಣೆ ಕಂಡು ಬರುವುದು ನಹುಷನ ಶಾಪಪ್ರಸಂಗದಲ್ಲಿ. ಮಹಾಭಾರತದ ವನಪರ್ವದಲ್ಲಿ ಬರುವ ನಹುಷನ ಉಪಕಥೆಯಲ್ಲಿ ಇಂದ್ರನಾದ ನಹುಷನಿಗೆ ಶಚಿಯ ಮೇಲೆ ಮೋಹವುಂಟಾಗುತ್ತದೆ. ದೂತರ ಮೂಲಕ ಹೇಳಿಕಳಿಸುತ್ತಾನೆ. ಆಕೆ ಯೋಚಿಸಿ, ಅಪೂರ್ವವಾದ ವಾಹನದಲ್ಲಿ ಕುಳಿತು ಬಂದರೆ ವಶವಾಗುವುದಾಗಿ ಉತ್ತರಿಸುತ್ತಾಳೆ. ನಹುಷ ಸಪ್ತರ್ಷಿಗಳು ವಾಹಕರಾಗಿರುವ ಪಲ್ಲಕ್ಕಿಯಲ್ಲಿ ಕುಳಿತು ಶಚಿಯ ಅರಮನೆಗೆ ಹೊರಡುತ್ತಾನೆ. ಶಚಿಯನ್ನು ಕೂಡುವ ಆತುರದಲ್ಲಿದ್ದ ಅವನಿಗೆ ಋಷಿಗಳ ನಡೆ ಬಹಳ ನಿಧಾನವಾಗಿ ಕಾಣುತ್ತದೆ. ಅಸಹನೆಯಿಂದ `ಸರ್ಪ, ಸರ್ಪ' (ಬೇಗ ನಡೆ) ಎಂದು ಅಗ್ರಸ್ತ್ಯನ ತಲೆಗೆ ಕಾಲಿನಿಂದ ತಿವಿಯುತ್ತಾನೆ. ಅದರಿಂದ ಕೋಪಗೊಂಡ ಅಗಸ್ತ್ಯ `ಸರ್ಪೋಭವ' ಎಂದು ಶಾಪ ಕೊಡುತ್ತಾನೆ. ತಕ್ಷಣವೇ ನಹುಷ ಅಜಗರವಾಗುತ್ತಾನೆ. ಕಾಮಿ, ಅಹಂಕಾರಿ, ಅವಿವೇಕಿಯಾದ ಈ ನಹುಷನಿಗೂ ದೇವುಡು ಅವರು ಸೃಷ್ಟಿಸಿರುವ ನಹುಷನಿಗೂ ಬಹಳಷ್ಟು ಅಂತರವಿದೆ.

ಇನ್ನೊಂದು ಮುಖ್ಯ ಬದಲಾವಣೆ ದಧೀಚಿಗೆ ಸಂಬಂಧಿಸಿದ್ದು. ಇದರ ಮೂಲವೂ ಮಹಾಭಾರತದ ವನಪರ್ವವೇ. ಒಮ್ಮೆ ದೇವತೆಗಳೆಲ್ಲ ದಧೀಚಿಯ ಬಳಿ ಬಂದು ತಮ್ಮ ಆಯುಧಗಳನ್ನೆಲ್ಲ ಆತನಲ್ಲಿ ಇರಿಸಿ ಹೋಗುತ್ತಾರೆ. ಎಷ್ಟು ದಿನಗಳಾದರೂ ಅವನ್ನು ತಿರುಗಿ ಒಯ್ಯುವುದಿಲ್ಲ. ಆಯುಧಗಳು ಜಂಗು ತಿನ್ನುತ್ತವೆ. ದಧೀಚಿ ಅವುಗಳನ್ನು ನೀರಿನಲ್ಲಿ ಅಭಿಮಂತ್ರಿಸಿ ಕುಡಿದುಬಿಡುತ್ತಾನೆ. ಕೆಲ ಕಾಲದ ನಂತರ ದೇವತೆಗಳು ಬಂದು ಆಯುಧಗಳನ್ನು ಕೇಳಲು ದಧೀಚಿ ಅವರಿಗೆ ನಡೆದುದನ್ನು ವಿವರಿಸುತ್ತಾನೆ. ದೇವತೆಗಳು ಆಯುಧಗಳಿಗಾಗಿ ಒತ್ತಾಯಿಸಿದಾಗ, ಅವನು, ಆಯುಧಗ

ಳೆಲ್ಲ ತನ್ನ ಬೆನ್ನೆಲುವಿನಲ್ಲಿ ಬೆರೆತಿರುವುದಾಗಿಯೂ, ತಾನು ಯೋಗ ಬಲದಿಂದ ದೇಹತ್ಯಾಗ ಮಾಡಿದ ಮೇಲೆ ತನ್ನ ಬೆನ್ನೆಲುವಿನಿಂದ ತಮಗೆ ಬೇಕಾದ ಆಯುಧಗಳನ್ನು ಮಾಡಿಸಿಕೊಳ್ಳಬಹುದೆಂದೂ ತಿಳಿಸಿ ದೇಹತ್ಯಾಗ ಮಾಡುತ್ತಾನೆ. ನಂತರ ದೇವತೆಗಳು ದಧೀಚಿಯ ಎಲುವುಗಳನ್ನು ವಿಶ್ವಕರ್ಮನಿಗೆ ಕೊಟ್ಟು ತಮಗೆ ಬೇಕಾದ ಆಯುಧಗಳನ್ನು ಮಾಡಿಸಿಕೊಳ್ಳುತ್ತಾರೆ. ಕಾದಂಬರಿಯಲ್ಲಿ ದೇವತೆಗಳು ನ್ಯಾಸವಾಗಿ ಇಟ್ಟ ಆಯುಧಗಳ ಪ್ರಸ್ತಾಪವೇ ಇಲ್ಲ. ವೃತ್ರನ ಹತ್ಯೆಗಾಗಿ ಯೋಗ್ಯವಾದ ಆಯುಧವೊಂದನ್ನು ಮಾಡಿಕೊಳ್ಳಬೇಕೆಂದು ದೇವತೆಗಳು ತಪೋಬಲದಿಂದ ತನ್ನ ದೇಹವನ್ನೆಲ್ಲ ವಜ್ರವಾಗಿ ಮಾಡಿಕೊಂಡಿರುವ ದಧೀಚಿಯಲ್ಲಿ ಬಂದು ಬೆನ್ನುಮೂಳೆಯನ್ನು ವರವಾಗಿ ಕೊಡಬೇಕೆಂದೂ ಅದರಿಂದ ದೇವತೆಗಳ ಸಂರಕ್ಷಣೆ ಮತ್ತು ಬ್ರಹ್ಮಾಂಡಕ್ಕೆ ಹಿತ ಆಗುವುದೆಂದೂ ಕೇಳುತ್ತಾರೆ. ದಧೀಚಿ ನಗುನಗುತ್ತಲೇ ಅವರ ಇಷ್ಟಾರ್ಥವನ್ನು ನೆರವೇರಿಸುತ್ತಾನೆ.

ಈ ಬಗೆಯ ಬದಲಾವಣೆಗಳು ಉದ್ದೇಶಪೂರ್ವಕವಾಗಿದ್ದು, ಕಥೆಗೆ ಹೊಸ ಅರ್ಥವೊಂದನ್ನು ಕೊಡುತ್ತವೆ. ಇದು ಪೌರಾಣಿಕ ಕಥೆಯಲ್ಲಿ ದೇವುಡು ಅವರು ಕಂಡಿರುವ ಮಾನವೀಯ ಅರ್ಥ. ಅದನ್ನವರು ಹೇಗೆ ಸಾಧಿಸಿದ್ದಾರೆ ಎಂಬುದನ್ನು ಗಮನಿಸುವುದು ಅವಶ್ಯ.

ಕಾದಂಬರಿಯಲ್ಲಿ ಬರುವ ಪಾತ್ರಗಳು ಮೂರು ಭಿನ್ನ ಜಾತಿಗೆ ಸೇರಿದವುಗಳಾಗಿವೆ. ಇಲ್ಲಿ ದೇವತೆಗಳಿದ್ದಾರೆ, ಮಾನವರಿದ್ದಾರೆ, ದಾನವರೂ ಇದ್ದಾರೆ. ದಾನವರಿಗೂ ಮಾನವರಿಗೂ ದೇವತೆಗಳು ಒಂದು ಆದರ್ಶ. ದಾನವರಿಗೆಲ್ಲ ದೇವಲೋಕದ ವೈಭವದ ಮೇಲೆ ಕಣ್ಣು. ದೇವತೆಗಳ ಮೋಸದಿಂದ ತಮಗದು ತಪ್ಪಿಹೋಯಿತೆಂದೂ, ಅದನ್ನು ದೊರಕಿಸಿಕೊಳ್ಳುವುದು ತಮ್ಮ ನ್ಯಾಯವಾದ ಕರ್ತವ್ಯವೆಂದೂ ಅವರ ಭಾವನೆ. ಆದರೆ ಆ ಭೋಗಕ್ಕೆ ತೆರಬೇಕಾದ ಬೆಲೆ ಅವರಿಗೆ ತಿಳಿಯುವುದಿಲ್ಲ. ದೇವಲೋಕ ಕೈಸೇರಿದಾಗ ಭೋಗದಲ್ಲಿ ಮೈಮರೆತುಬಿಡುತ್ತಾರೆ. ಅದರಿಂದ ಶೀಘ್ರವೇ ಹತತೇಜರಾಗಿ ವೃತಾಸುರನಂಥ ಅಸಾಧ್ಯ ಶಕ್ತಿಶಾಲಿಯೂ ಸಾಯಬೇಕಾಗುತ್ತದೆ. ಇದಕ್ಕೆ ವಿರುದ್ಧವಾಗಿ, ಮಾನವನಾದ ನಹುಷ ತನ್ನ ಪರಿಮಿತಿಗಳನ್ನು ಬಲ್ಲವನು. ಭೋಗದ ಕ್ಷಣಿಕತೆಯನ್ನು ಅರ್ಥ ಮಾಡಿಕೊಂಡಿರುವ ಜ್ಞಾನಿ. ಇಂದ್ರನಾದರೂ ತನ್ನ ಮನುಷ್ಯಧರ್ಮವನ್ನು ಅತಿಕ್ರಮಿಸದೆ, ತನ್ನ ಮನುಷ್ಯತ್ವದ ಪರಿಮಿತಿಗಳ ಒಳಗೇ, ಇಂದ್ರತ್ವದ ಅತಿ ಹೆಚ್ಚಿನ ಗೌರವಗಳನ್ನು ಅನುಭವಿಸಿ ನೋಡಬೇಕೆಂಬ, ದೇವತ್ವದ ಪೂರ್ಣಾನುಭವವನ್ನು ಪಡೆಯಬೇಕೆಂಬ ಆಶೆ ಅವನಿಗೆ. ಆದರೆ ಈ ಆಶೆ ಭೋಗಕ್ಕಾಗಿಯೇ ಭೋಗ ಎಂಬ ದೃಷ್ಟಿಯದಲ್ಲ. ಅದು ಮುಂದಿನ ತ್ಯಾಗದ ಪೂರ್ವಸಿದ್ಧತೆಯಾಗಿರುವುದು ಮಹತ್ವದ ವಿಷಯವಾಗಿದೆ. ಮನುಷ್ಯನಿಗೆ ಹೋಲಿಸಿದರೆ ದೇವತೆಗಳು ಶಕ್ತರಾದರೂ ಅವರು ಕೂಡಾ ಸರ್ವಶಕ್ತರಲ್ಲ; ಸ್ವತಂತ್ರರೂ ಅಲ್ಲ. ಅವರಿಗೂ ಅವರವರವೇ ಪರಿಮಿತಿಗಳಿವೆ. ವೃತ್ರಹತ್ಯೆಯ ಪಾಪದಿಂದ ತಪ್ಪಿಸಿಕೊಳ್ಳಲಾರದೇ ತೊಳಲಾಡುವ ಇಂದ್ರ, ಮತ್ತು ಇಂದ್ರರಾದವರಿಗೆಲ್ಲ ಇಂದ್ರಾಣಿಯಾಗಿ ಬಾಳಬೇಕಾದ ಶಚಿ ಇವರುಗಳ ಅವಸ್ಥೆಯೇ ಅವರ ಮಿತಿಗಳನ್ನು ಸೂಚಿಸುತ್ತದೆ. ಹಾಗೆಯೇ, ಅವರಿಗೆ ಪೂರ್ವನಿಶ್ಚಿತವಾದ ಕರ್ತವ್ಯ ಮತ್ತು ಶಕ್ತಿಗಳಿದ್ದು ಅವುಗಳ ಬಳಕೆಯ ಆಯಾ ದೇವತೆಗಳ ಮೂಲಕವೇ ಆಗಬೇಕಾಗುತ್ತದೆ. ಹಾಗೂ ಅವುಗಳನ್ನು ಮೀರಿ ಹೋಗುವ ಅಧಿಕಾರ ಅವರಿಗಿಲ್ಲ.

ಈ ಎಲ್ಲ ಗೊಂದಲದ ನಡುವೆ ನಹುಷ ತನ್ನ ಮನುಷ್ಯತ್ವದ ಪರಿಮಿತಿಯಲ್ಲೇ ದೇವ-ದಾನವರಿಗೆ ಮೀರಿದ ತಿಳುವಳಿಕೆಯನ್ನೂ, ಘನವಂತಿಕೆಯನ್ನೂ ಪ್ರಕಟಿಸುವುದು ಕಾದಂಬರಿಯ ಮುಖ್ಯ ವಿಷಯವಾಗಿದೆ. ದೇವುಡು ಅವರು ಮೂಲದಲ್ಲಿ ನಾಮ ಮಾತ್ರವಾಗಿದ್ದ ನಹುಷನ ಪತ್ನಿ ವಿರಜಾ ದೇವಿಯ ಪಾತ್ರವನ್ನು ಹೊಸದಾಗಿ ಬೆಳೆಸಿಕೊಂಡಿರುವುದು ಅರ್ಥಪೂರ್ಣವಾಗಿದೆ. ಅವಳಿಂದಾಗಿ ದೇವಲೋಕದ ರಂಭೆ-ಊರ್ವಶಿಯರ ಆಕರ್ಷಣೆ ಅವನಿಗಾಗುವುದಿಲ್ಲ. ಇಂದ್ರನಾಗಿಯೂ ತನ್ನ ಪತ್ನಿಯನ್ನು ಜೊತೆಗೆ ಕರೆದೊಯ್ಯುವ ಕರಾರು ಹಾಕುತ್ತಾನೆ. ಇದರಿಂದಾಗಿ ಅವನ ದೇವತ್ವದ ಪೂರ್ಣತೆಗೆ ಅಡ್ಡಿಯಾದರೂ ಅವನಿಗದು ಮುಖ್ಯವೆನಿಸುವುದಿಲ್ಲ. ಇಂದ್ರತ್ವದ ಪೂರ್ಣತೆಗೆ ಇಂದ್ರಾಣಿಯೂ ಬೇಕೆಂದು ತಿಳಿದೂ ಅವನು ಶಚಿಯೊಡನೆ ನಡೆದುಕೊಳ್ಳುವ ರೀತಿ, ತನಗೆ ತಾನೇ ಶಾಪವನ್ನು ವಿಧಿಸಿಕೊಳ್ಳುವ ನ್ಯಾಯ ನಿಷ್ಠುರತೆ, ಮತ್ತು ಆ ಶಾಪವನ್ನು ಅನುಭವಿಸುವ ಜವಾಬುದಾರಿಯನ್ನು ತಾನೇ ಹೊರುವ ಅವನ ನಿಶ್ಚಯ, ಇಂದ್ರನಿಗೆ ಮತ್ತೆ ಇಂದ್ರಪದವಿಯನ್ನು ಬಿಟ್ಟುಕೊಡಲು ಅವನು ನಡೆಸುವ ಪ್ರಾಮಾಣಿಕ ಪ್ರಯತ್ನ ಮುಂತಾದ ಪ್ರಸಂಗಗಳಲ್ಲಿ ನಹುಷ ಮತ್ತೆ ಮತ್ತೆ ಮನುಷ್ಯತ್ವದ ಘನತೆಯನ್ನೇ ಎತ್ತಿ ಹಿಡಿಯುತ್ತಾನೆ. ದೇವ-ದಾನವರಿಗೂ ಕೂಡ ಒಂದು ಶ್ರೇಷ್ಠ ಆದರ್ಶವಾಗಿ ನಿಲ್ಲುತ್ತಾನೆ.

ಶಿಬಿಕಾರೋಹಣ ಇಂದ್ರನೂ ಕೂಡ ಅನುಭವಿಸದ, ಅನುಭವಿಸಲು ಅಂಜುವ ಗೌರವ. ನಹುಷ ಅದನ್ನು ಅನುಭವಿಸಿ ಇಂದ್ರನಿಗಿಂತಲೂ ಹೆಚ್ಚಿನವನಾಗುತ್ತಾನೆ. ಆ ಮೂಲಕ ಭೋಗದ ಕೊನೆ ಮುಟ್ಟುವುದು ಅವನ ಉದ್ದೇಶ. ಅಂತೆಯೇ ಶಚಿಯನ್ನು ಪರಿಗ್ರಹಿಸಿ ಇಂದ್ರತ್ವವನ್ನು ಪೂರ್ಣಗೊಳಿಸಿಕೊಳ್ಳುವ ಅವಕಾಶಕ್ಕಿಂತ ಇಂದ್ರತ್ವವನ್ನು ಮೀರುವ ಅನುಭವ ಅವನಿಗೆ ಮಹತ್ವದ್ದೆನಿಸುತ್ತದೆ. ಅಲ್ಲಿಗೆ ಪರಿಗ್ರಹ ಪೂರ್ಣವಾದಂತಾಯಿತು. ಅಲ್ಲಿಂದ ತ್ಯಾಗದ ಆರಂಭ. ತನಗೆ ಇಷ್ಟ ಬಂದಷ್ಟು ಕಾಲ ಇಂದ್ರನಾಗಿರುವ ಅವಕಾಶವಿದ್ದರೂ ನಹುಷ ಇಂದ್ರಪದವಿಯನ್ನು ಇಂದ್ರನಿಗೆ ತಾನಾಗಿ ತಿರುಗಿ ಕೊಡಲು ಸಿದ್ಧವಾಗುತ್ತಾನೆ. ಇದರಿಂದ ಸಾಮಾನ್ಯವಾಗಿ ದೇವತೆಗಳಿಂದ ವರ ಪಡೆಯುವ ಮನುಷ್ಯರು ದೇವತೆಗಳಿಗೇ ವರ ಕೊಟ್ಟು, ಅನುಗ್ರಹಿಸುವ ಎತ್ತರಕ್ಕೆ ಏರಿದಂತಾಯಿತು. ಆದರೂ ಇಂದ್ರನಿಗೆ ಉಪಕಾರ ಮಾಡಿದೆನೆಂಬ ಭಾವನೆ ನಹುಷನಿಗಿಲ್ಲ. ಅಂತೆಯೇ ಭೋಗಕ್ಕೆ ಅಂಟಿನಂತೆ ಅಂಟಿಕೊಳ್ಳುವ ದೇವತ್ವಕ್ಕಿಂತ ತ್ಯಾಗವನ್ನು ಆರಾಧಿಸುವ ಮನುಷ್ಯತ್ವವು ಶ್ರೇಷ್ಠವಾಯಿತೆಂದು ಹೇಳುವ ಶಚಿಯ ಮಾತು ಅರ್ಥಪೂರ್ಣವಾಗಿದೆ. ಇದು ಮನುಷ್ಯತ್ವಕ್ಕೆ ಸಂದ ದೊಡ್ಡ ಗೌರವ.

ಹಾಗೆಯೇ, ತನಗೆ ದೊರೆತ ಅಧಿಕಾರವನ್ನು ಬಳಸಿಕೊಳ್ಳುವ ನಹುಷನ ರೀತಿಯೂ ಮಾರ್ಮಿಕವಾಗಿದೆ. ಅಧಿಕಾರದಿಂದ ಅವನು ಸೊಕ್ಕಿಗೇರುವುದಿಲ್ಲ. ವಿನಯವನ್ನು ಮೀರದೆಯೇ ತನಗೆ ಇಂದ್ರಪದವಿಯನ್ನು ಅನುಗ್ರಹಿಸಿದ ದೇವತೆಗಳಿಂದ ತನಗೆ ಬೇಕಾದ ಕೆಲಸವನ್ನು ಆತ ಉಪಾಯದಿಂದ ತೆಗೆದುಕೊಳ್ಳುತ್ತಾನೆ. ಈ ವಿಷಯದಲ್ಲಿ ಅವನು ತೋರಿಸುವ ಜಾಣ್ಮೆ ಮತ್ತು ಪ್ರಬುದ್ಧತೆ ಮನುಷ್ಯತ್ವದ ಗೌರವವನ್ನು ಇನ್ನಷ್ಟು ಎತ್ತಿ ಹಿಡಿಯುತ್ತವೆ. ಅಂತೆಯೇ, ಅಧಿಕಾರ ಮತ್ತು ಅದನ್ನು ವಿನಿಯೋಗಿಸುವಲ್ಲಿ ತೋರುವ ಬುದ್ಧಿಸಾಮರ್ಥ್ಯಗಳಿಂದಾಗಿ ನಹುಷ ಕೇವಲ ಇಂದ್ರನಾಗುವುದಕ್ಕೆ ಮಾತ್ರವಲ್ಲ, ಅತೀಂದ್ರನಾಗಿ ಇಂದ್ರಗಣವನ್ನೂ ಆಳಬಲ್ಲವನೆಂದು ಸುರಗುರು, ಅಸುರ ಗುರುಗಳಿಬ್ಬರ ಹೊಗಳಿಕೆಗೂ ಪಾತ್ರನಾಗುತ್ತಾನೆ.

ಇಲ್ಲಿ ಇನ್ನೂ ಒಂದು ವಿಷಯವನ್ನು ಗಮನಿಸಬೇಕು. ಕಾದಂಬರಿಯಲ್ಲಿ ನಹುಷ ತನ್ನ ತ್ಯಾಗ, ನ್ಯಾಯನಿಷ್ಠೆ, ಧರ್ಮಶ್ರದ್ಧೆ, ವಿನಯ, ತನ್ನ ಬದುಕಿಗೆ ತಾನೇ ಜವಾಬ್ದಾರನಾಗುವ ನಿಶ್ಚಯ ಇತ್ಯಾದಿ ಮಾನವೀಯ ಮೌಲ್ಯಗಳ ಮೂಲಕ ಮನುಷ್ಯತ್ವದ ಘನತೆಯನ್ನು ಸ್ಥಾಪಿಸುತ್ತಾನೆ. ಇವೆಲ್ಲ ವೈಯಕ್ತಿವಾಗಿ ನಹುಷನ ಘನತೆಗೆ ಸಂಬಂಧಿಸುದಾದರೂ ಮನುಷ್ಯರಿಗೆ ಮಾತ್ರ ಸಾಧ್ಯವಾದ ಮೌಲ್ಯ ಗಳಾಗಿವೆ, ಮೂಲಭೂತವಾಗಿ ಮಾನವೀಯ ಮೌಲ್ಯಗಳಾಗಿವೆ. ಈ ಬಗೆಯ ಮೌಲ್ಯಗಳು ದೇವತೆ ಗಳಿಗೆ ಸಾಧ್ಯವಿಲ್ಲ. ಅವರಿಗೆ ಭೋಗ, ಶಕ್ತಿ, ಅಧಿಕಾರ, ಪಾಲಿಸಬೇಕಾದ ನಿಯಮ, ಕರ್ತವ್ಯಗಳಿವೆ. ಆದರೆ ಅವರಿಗೆ ಆಯ್ಕೆಯ ಸ್ವಾತಂತ್ರ್ಯವೇನೂ ಇಲ್ಲ. ಯಾವುದನ್ನೂ ಅವರು ಸ್ವತಂತ್ರವಾಗಿ ಬಿಟ್ಟು ಕೊಡಲಾರರು, ಅಥವಾ ಪರಿಗ್ರಹಿಸಲಾರರು. ಅವರ ವರಪ್ರದಾನಶಕ್ತಿಯೂ ಕರ್ತವ್ಯವೇ ಹೊರತು, ತ್ಯಾಗವಲ್ಲ. ನಹುಷನ ತ್ಯಾಗ ಮತ್ತು ಕೊನೆಯ ನಿಶ್ಚಯಗಳು ಮನುಷ್ಯನಿಗಿರುವ ಆಯ್ಕೆಯ ಸ್ವಾತಂತ್ರ್ಯಕ್ಕೆ ಸಂಕೇತವಾಗಿವೆ. ದಧೀಚಿಯ ಪ್ರಸಂಗದ ಪಾಠವೂ ಇಂಥ ಇನ್ನೊಂದು ಅದ್ಭುತ ಸಂಕೇ ತವಾಗಿದೆ. ಎಂದರೆ ಮಾನವೀಯ ಮೌಲ್ಯಗಳಿಂದಾಗಿಯೇ ಮನುಷ್ಯತ್ವ ದೇವತ್ವಕ್ಕಿಂತ ದೊಡ್ಡದಾ ಗುತ್ತದೆ. ಇದೇ ಕಾದಂಬರಿಯ ಮುಖ್ಯ ಆಶಯ, ಪುರಾಣ ಕಥೆಯಲ್ಲಿ ದೇವುಡು ಅವರು ಕಂಡಿರುವ ಹೊಸ ದರ್ಶನ ಎನ್ನಬಹುದು. ಕಾದಂಬರಿಯಲ್ಲಿ ಮಾಡಿಕೊಂಡಿರುವ ಬದಲಾವಣೆಗಳೆಲ್ಲ ಈ ಆಶ ಯಕ್ಕೆ ಪೂರಕವಾಗಿವೆ. ಮೂಲಕಥೆಯ ನಹುಷನ ಶಾಪ ಪ್ರಸಂಗ ಹಾಗೂ ದಧೀಚಿಯ ಪ್ರಸಂಗಗ ಳಲ್ಲಿ ಇಂಥ ಯಾವ ಆಶಯವೂ ಇಲ್ಲ. ನಹುಷನ ಪ್ರಸಂಗವಂತೂ ಮನುಷ್ಯನ ಸಣ್ಣತನವನ್ನೇ ಎತ್ತಿ ತೋರಿಸುವಂಥದು.

ಆದರೆ ಇದು ಮನುಷ್ಯನನ್ನು ದೇವತ್ವದ ಎತ್ತರಕ್ಕೆ ಊದಿ ಉಬ್ಬಿಸಿ ನಿಲ್ಲಿಸುವ ರೋಮ್ಯಾಂ ಟಿಕ್ ದೃಷ್ಟಿಯಲ್ಲ; ಮನುಷ್ಯನ ಪರಿಮಿತಿಗಳನ್ನು ಗುರುತಿಸಿ, ಅದರ ನಡುವೆಯೂ ಪ್ರಕಟವಾಗುವ ಮಾನವೀಯ ಘನವಂತಿಕೆಯನ್ನು ಗುರುತಿಸುವ ಅಭಿಜಾತ, ದೃಷ್ಟಿ.

ಇದರ ಜೊತೆಗೆ, ಈ ಮೂರೂ ಲೋಕದ ವ್ಯವಹಾರಗಳನ್ನು ನಿಯಂತ್ರಿಸುವ ಶಕ್ತಿಯೊಂ ದಿದೆ ಎಂಬುದು ದೇವುಡು ಅವರ ನಂಬಿಕೆಯಾಗಿದೆ. ಅವರು ಅದನ್ನು 'ನಿಯತಿ' ಎಂದು ಕರೆಯುತ್ತಾರೆ. ಅದಕ್ಕೆ ದೇವಮಾನವ ದಾನವರೆಲ್ಲರೂ ಅಧೀನರು. ತ್ವಷ್ಟ್ರುವಿಗೆ ಯಾಗದಲ್ಲಿ ವಿಸ್ಮೃತಿಯಾಗಿ ಸರಸ್ವತಿ ಸ್ವರಭೇದದಿಂದ ಅವನ ಸಂಕಲ್ಪವನ್ನು ಬದಲಿಸುವುದು, ವೃತ್ರ ಪೂರ್ಣವಾಗಿ ಬೆಳೆಯುವ ಮೊದಲೇ ಅಸುರರು ದೇವಲೋಕದ ಮೇಲೆ ಆತುರದಲ್ಲಿ ದಂಡೆತ್ತಿ ಹೋಗುವುದು, ವೃತ್ರನನ್ನು ಕೊಲ್ಲಲು ಇಂದ್ರ ತಕ್ಕ ಕಾಲಕ್ಕಾಗಿ ಕಾಯಬೇಕಾಗಿ ಬರುವುದು, ವೃತ್ರ ತನ್ನ ಸಾವನ್ನೇ ತಾನು ಆತುರದಿಂದ ಆಹ್ವಾನಿಸುವುದು, ವೃತ್ರನ ಹತ್ಯೆಯಾದ ಮೇಲೂ ಇಂದ್ರನಿಗೆ ಮತ್ತೆ ಇಂದ್ರನಾಗುವ ಯೋಗಬಾರ ದುದು, ದೇವತೆಗಳು ಅಮರತ್ವವನ್ನು ಕೊಡಲು ಇಚ್ಛಿಸಿದರೂ ಅದನ್ನರಿಯದೆ ನಹುಷ ಮನುಷ್ಯ ಧರ್ಮದಲ್ಲೇ ಉಳಿಯಲು ನಿಶ್ಚಯಿಸುವುದು ಮುಂತಾದ ಹಲವಾರು ವಿವರಗಳಲ್ಲಿ ನಿಯತಿಯ ಪ್ರಶ್ನೆ ಮತ್ತೆ ಮತ್ತೆ ಬರುತ್ತದೆ. ಇದು ಇಡಿಯ ಕಥೆಗೆ ಒಂದು ಐಕ್ಯವನ್ನು ಕೊಡುತ್ತದೆ. ಮನುಷ್ಯ ರಷ್ಟೇ ಅಲ್ಲ, ನಿಯತಿಯ ಪೂರ್ವಯೋಜಿತ ಸಂಕಲ್ಪದಲ್ಲಿ ದೇವತೆಗಳೂ ಅಸಹಾಯ ಪಾತ್ರಗಳು ಎಂಬುದನ್ನು ಒತ್ತಿ ಹೇಳುವ ಮೂಲಕ ದೇವುಡು ಅವರು ನಿಯತಿಯನ್ನು ಒಂದು ವಿಶ್ವವ್ಯಾಪಕ

ಮೌಲ್ಯವಾಗಿ ಸ್ಥಾಪಿಸಲು ಯತ್ನಿಸಿದ್ದಾರೆ. ಪೌರಾಣಿಕ ಕಥೆಗೆ ಇಂಥ ಮೌಲ್ಯ ಪರಕೀಯವಾಗಬೇಕಾದ್ದೇನೂ ಇಲ್ಲ. ಆದರೆ ಇದರಿಂದ ಪುರಾಣಕಥೆಗೆ ತೀರ ಹೊಸದಾದ ಮಾನವೀಯ ಅರ್ಥವೇನೂ ಬಂದಂತಾಗಲಿಲ್ಲ. ಯಾಕೆಂದರೆ ನಿಯತಿ ಒಂದು ಧಾರ್ಮಿಕ ನಂಬಿಕೆಯಾದೀತೇ ಹೊರತು ಮಾನವೀಯ ಮೌಲ್ಯವಲ್ಲ. ಇಲ್ಲಿಯೂ ಕೂಡ ಮನುಷ್ಯನಾಗಿ ನಹುಷನೇ ಒಂದು ಅಪವಾದವಾಗಿ ಬರುತ್ತಾನೆ. ದಾನವರಿಗೆ ಈ ನಿಯತಿಯ ಅರಿವೇ ಇಲ್ಲ. ಶುಕ್ರಾಚಾರ್ಯನಿಗೆ ಅರಿವಿದ್ದರೂ ಅವನೂ ಅಸಹಾಯಕನಾಗಿದ್ದಾನೆ. ದೇವತೆಗಳಿಗೆ ಮಾತ್ರ ನಿಯತಿಯ ಸಂಕಲ್ಪ ಮೊದಲೇ ಗೊತ್ತಾಗಿಬಿಡುತ್ತದೆ. ಅದರಿಂದ ಅವರು ಸುಮ್ಮನೆ ಕುಳಿತು ಯೋಗ್ಯ ಕಾಲಕ್ಕಾಗಿ ಕಾಯುತ್ತಾರೆ. ನಹುಷ ಅಜಗರವಾಗಿ ಹುಟ್ಟಬೇಕಾದುದೂ ನಿಯತಿಯ ಸಂಕಲ್ಪದಿಂದಾಗಿಯೇ. ಆದರೆ ಅವನು ಈ ಪ್ರಸಂಗವನ್ನು ಎದುರಿಸುವ ರೀತಿ ಮಾತ್ರ ಅನ್ಯಾದೃಶವಾಗಿದೆ. ಇಲ್ಲಿ ಶಾಪವನ್ನು ವಿಧಿಸಿಕೊಳ್ಳುವವನು ಅವನೇ. ಮತ್ತು ಇಂದ್ರನಾಗಿ ತಾನೋ, ಮರುದಿನ ಇಂದ್ರ ಪದವಿಗೆ ಬರುವ ನಿತ್ಯೇಂದ್ರನೋ ಆ ಶಾಪವನ್ನು ವಿಲೋಪಗೊಳಿಸುವ ಅವಕಾಶವಿದ್ದರೂ, ಅದನ್ನು ನಿರಾಕರಿಸಿ, ಆ ಶಾಪದ ಜವಾಬ್ದಾರಿಯನ್ನು ತಾನೇ ಹೊತ್ತುಕೊಳ್ಳುವ ಮೂಲಕ ನಹುಷ ನಿಯತಿಯ ಸಂಕಲ್ಪಕ್ಕಿಂತ ತನ್ನ ಸಂಕಲ್ಪವೇ ಮುಖ್ಯವೆಂದು ತೋರಿಸಿಕೊಡುತ್ತಾನೆ. ದೇವದಾನವರು ಮಾಡಲು ಒಲ್ಲದುದನ್ನು ಮನುಷ್ಯನಾದವನು ಮಾಡಿತೋರಿಸುತ್ತಾನೆ. ಆದರೂ ಈ ವಿಷಯದಲ್ಲಿ ದೇವುಡು ಅವರದು ಮುಖ್ಯವಾಗಿ ಸಾಂಪ್ರದಾಯಿಕ ದೃಷ್ಟಿ. ಪುರಾಣಕಥೆಯನ್ನೂ, ಅದರಲ್ಲಿ ತಾವು ಕಂಡ ನಿಯತಿಯ ಪಾತ್ರವನ್ನೂ ಅವರು ಒಂದೇ ಬಗೆಯ ಶ್ರದ್ಧೆಯಿಂದ ಸ್ವೀಕರಿಸುತ್ತಾರೆ.

ಇದಕ್ಕೆ ಹೊರತಾದ, ಆನುಷಂಗಿಕವಾದ ಸಮಕಾಲೀನ ಅರ್ಥವೂ ಕಾದಂಬರಿಯಲ್ಲಿದೆ. ಇದನ್ನು ರಾಜಕೀಯ ಅರ್ಥ ಎನ್ನಬಹುದು. ದೇವಲೋಕದ ಅಧಿಕಾರ ದೇವತೆಗಳ ಕೈಯಲ್ಲಿದೆ. ಅದನ್ನು ತಾವು ಕಿತ್ತುಕೊಳ್ಳಬೇಕೆಂದು ದಾನವರು ಹೊಂಚು ಹಾಕಿ, ಅದರಲ್ಲಿ ತಾತ್ಕಾಲಿಕವಾಗಿ ಯಶಸ್ವಿಯಾಗುತ್ತಾರೆ. ಆದರೆ ಅಧಿಕಾರವನ್ನು ಕರ್ತವ್ಯ ಎಂದು ತೆಗೆದುಕೊಳ್ಳದೆ, ಭೋಗ ಎಂದು ಭಾವಿಸಿ, ದೇವತೆಗಳ ಮರುಹೊಂಚಿನಲ್ಲಿ ಅದನ್ನು ಮತ್ತೆ ಕಳೆದುಕೊಳ್ಳುತ್ತಾರೆ. ಅನಂತರ ಕೆಲವು ನಿಯಮಗಳ ತೊಡಕಿನಿಂದಾಗಿ ಆ ಅಧಿಕಾರದ ನೇತೃತ್ವ ತಟಸ್ಥ ವ್ಯಕ್ತಿಯಾದ ಮನುಷ್ಯನಿಗೆ ಹೋಗುತ್ತದೆ. ಹೀಗೆ ಅಧಿಕಾರಕ್ಕಾಗಿ ನಡೆಯುವ ಕಿತ್ತಾಟ ಮತ್ತೆ ಮತ್ತೆ ನಮ್ಮ ರಾಜಕೀಯ ಪಕ್ಷಗಳಲ್ಲಿ ನಡೆದಿರುವ ವ್ಯವಹಾರವನ್ನು ನೆನಪಿಗೆ ತರುತ್ತದೆ. ದೇವುಡು ಅವರು ಸಮಕಾಲೀನ ರಾಜಕೀಯದ ತಿಳುವಳಿಕೆಯನ್ನು ಪುರಾಣಕಥೆಯ ಸಂದರ್ಭಕ್ಕೆ ಬಳಸಿಕೊಂಡಿದ್ದಾರೆ. ಗೂಢಚರ್ಯೆ, ಯುಕ್ತ-ಪ್ರತಿಯುಕ್ತಿಗಳು, ಸಂಚುಗಳು, ವೈರಿಗಳಿಂದ ರಹಸ್ಯಗಳನ್ನು ಕಾಪಾಡಿಕೊಳ್ಳುವುದು, ಅಧಿಕಾರದ ಆಶೆ, ಭೋಗಾಭಿಲಾಷೆ ಇತ್ಯಾದಿ ಸಮಕಾಲೀನ ರಾಜಕೀಯದ ಅಂಶಗಳು ದೇವ-ದಾನವರ ಕಚ್ಚಾಟಗಳಲ್ಲಿ ಹಲವು ಸಲ ಕಾಣಿಸಿಕೊಳ್ಳುತ್ತವೆ.

ಹಾಗೆಯೇ, ದೇವಲೋಕದ ರಾಜಕೀಯವನ್ನು ನಿಯಂತ್ರಿಸುವ ಅಲಿಖಿತ ಸಂವಿಧಾನವೂ ಒಂದಿದೆ. ಆ ಸಂವಿಧಾನದ ಎಷ್ಟೋ ನಿಯಮಗಳು ದಾನವರ ಹುಂಬತನದಿಂದಾಗಿ ಅವರಿಗೆ ಗೊತ್ತೇ ಆಗುವುದಿಲ್ಲ. ನಹುಷ ಅವನ್ನು ಕೇಳಿಕೇಳಿ ತಿಳಿದುಕೊಂಡರೂ ತನಗೆ ಸಿಗುವ ಎಲ್ಲ ಅಧಿಕಾರವನ್ನೂ

ಬಳಸಿಕೊಳ್ಳುವುದಿಲ್ಲ. ಎಷ್ಟೋ ದೇವರಹಸ್ಯಗಳನ್ನು ದೇವತೆಗಳು ಬಿಟ್ಟುಕೊಡದೆ ಉಳಿದವರನ್ನೂ ವಂಚಿಸುತ್ತಾರೆ. ಶಚಿಯ ಇಂದ್ರಾಣಿತ್ವದ ಪ್ರಶ್ನೆ ಅವುಗಳಲ್ಲಿ ಒಂದು. ದಾನವರಿಗೆ ಅದು ಗೊತ್ತಾಗುವುದಿಲ್ಲ. ನಹುಷನಿಗೆ ಗೊತ್ತಾದರೂ ಅದನ್ನು ಉಪಯೋಗಿಸಿಕೊಂಡು ತನ್ನ ಇಂದ್ರತ್ವವನ್ನು ಪೂರ್ಣಗೊಳಿಸಿಕೊಳ್ಳಲು ಮನಸ್ಸು ಮಾಡುವುದಿಲ್ಲ. ಕಾದಂಬರಿಯಲ್ಲಿ ಹಲವಾರು ಸಲ ಸಾಂವಿಧಾನಿಕ ಬಿಕ್ಕಟ್ಟುಗಳು ತಲೆದೋರುತ್ತವೆ. ಆಗ ಪರಿಣತರೊಡನೆ ಸಮಾಲೋಚನೆ ನಡೆದು ಪರಿಹಾರ ಪಡೆಯಲಾಗುತ್ತದೆ. ಬೃಹಸ್ಪತಿಯ ಅನುಪಸ್ಥಿತಿಯಲ್ಲಿ ಬೇರೊಬ್ಬ ದೇವಗುರುವನ್ನು ಹುಡುಕುವುದು, ಇಂದ್ರನು ಓಡಿಹೋದಾಗ ಬೇರೊಬ್ಬ ಇಂದ್ರನನ್ನು ತರುವುದು, ಶಚಿಯ ಸ್ಥಾನಮಾನದ ಪ್ರಶ್ನೆ, ಶಿಬಿಕೋತ್ಸವದ ಅಧಿಕಾರ, ನಹುಷನ ಶಾಪ-ಶಾಪವಿಲೋಪ ಚರ್ಚೆ ಇತ್ಯಾದಿ ಪ್ರಸಂಗಗಳಲ್ಲಿ ಇಂಥ ಸಂವಿಧಾನದ ಪ್ರಸ್ತಾಪ ಬರುತ್ತದೆ. ಅನೇಕ ಸಲ ನಿಯಮಗಳು ತೊಡಕಾದಾಗ ಅವನ್ನು ಅನುಸರಿಸದೆಯೇ ಅನುಸರಿಸಿದಂತೆ ಕಾಣುವ ಉಪಾಯಗಳನ್ನು ಯೋಜಿಸಲಾಗಿದೆ. ವಿಶ್ವರೂಪಾಚಾರ್ಯನ ಕೊಲೆಯ ಪ್ರಸಂಗದಲ್ಲಿಯಂತೆ ಪರಿಣಾಮಗಳನ್ನು ಮೊದಲೇ ಊಹಿಸಿ ಹತ್ಯೆಯ ಪಾಪವನ್ನು ಹಂಚಿಹಾಕುವಂಥ ಜಾಣ ಉಪಾಯಗಳನ್ನು ಕಂಡುಕೊಳ್ಳಲಾಗಿದೆ. ಇಲ್ಲಿಯೂ ಸಮಕಾಲೀನ ರಾಜಕೀಯ ವ್ಯವಸ್ಥೆಯನ್ನು ಪುರಾಣಕಥೆಯಲ್ಲಿ ಅಳವಡಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಈ ಪ್ರಯತ್ನ ಸಾಕಷ್ಟು ಸಹಜವಾಗಿ ಬಂದಿದೆ.

ಕೊನೆಯದಾಗಿ, ಈ ಕಾದಂಬರಿಯ ಸ್ವರೂಪದ ಬಗೆಗೂ ಕೆಲವು ಮಾತುಗಳನ್ನು ಹೇಳಬಹುದಾಗಿದೆ. ಸಾಮಾನ್ಯವಾಗಿ ಯಾವ ಸಾಹಿತ್ಯದಲ್ಲೇ ಆಗಲಿ, ಪೌರಾಣಿಕ ಕಾದಂಬರಿಗಳ ಸಂಖ್ಯೆ ತೀರಾ ಕಡಿಮೆ. ಪಶ್ಚಿಮದ ಸಾಹಿತ್ಯಗಳಲ್ಲೂ ಮಹತ್ವದವೆನ್ನಬಹುದಾದ ಪೌರಾಣಿಕ ಕಾದಂಬರಿಗಳು ಇಲ್ಲ. ಅದೇ, ನಾಟಕಪ್ರಕಾರದಲ್ಲಿ ಪೌರಾಣಿಕಗಳ ಸುದೀರ್ಘ ಪರಂಪರೆಯೇ ಇದೆ. ಇದಕ್ಕೆ ಮುಖ್ಯವಾಗಿ ಕಾದಂಬರಿ ಮತ್ತು ನಾಟಕಗಳು ಹುಟ್ಟಿಬಂದ ಸನ್ನಿವೇಶ, ಅವುಗಳ ಸ್ವರೂಪ ಮತ್ತು ಉದ್ದೇಶಗಳ ಭಿನ್ನತೆಯೇ ಕಾರಣವಾಗಿದೆ–ಎನ್ನಬಹುದು. ನಾಟಕ ಹುಟ್ಟಿದ್ದು ಸಂಸ್ಕೃತಿಯ ಆರಂಭಕಾಲದಲ್ಲಿ, ದೇವತಾರ್ಚನೆಯ ಅಂಗವಾಗಿ. ಹಾಗಾಗಿ ಅದು ಮೊದಲಿನಿಂದಲೂ ದೇವತೆಗಳನ್ನು ಕೀರ್ತಿಸುವ ಪುರಾಣಕಥೆಗಳೊಂದಿಗೇ ಬೆಳೆದುಬಂತು. ಇಂದಿಗೂ ಆ ಪರಂಪರೆ ಮುಂದುವರಿದಿದೆ. ಕಾದಂಬರಿ ಹುಟ್ಟಿದ್ದು ತೀರ ಇತ್ತೀಚೆಗೆ, ಕೇವಲ ಇನ್ನೂರೈವತ್ತು ವರ್ಷಗಳ ಹಿಂದೆ. ಅದರ ಉದ್ದೇಶ ಮುಖ್ಯವಾಗಿ ಸಾಮಾಜಿಕವಾದದ್ದು. ಮಧ್ಯಮ ವರ್ಗದ ಸುಶಿಕ್ಷಿತ ಓದುಗರಿಗಾಗಿಯೇ ಹುಟ್ಟಿಕೊಂಡ ಈ ಸಾಹಿತ್ಯಪ್ರಕಾರ ಅಂಥ ಓದುಗರ ದಿನನಿತ್ಯದ ಬದುಕು, ಸುಖ–ದುಃಖ, ಸಾಮಾಜಿಕ ಸಮಸ್ಯೆಗಳು, ರೀತಿ–ನೀತಿಗಳು, ಆಶೆ–ಆಕಾಂಕ್ಷೆ ಮುಂತಾದುವನ್ನು ಅರ್ಥೈಸಿಕೊಡುವ ಕೆಲಸ ಮಾಡುತ್ತ ಬಂದಿದೆ. ಅದಕ್ಕಾಗಿ ಹೆಚ್ಚು ಹೆಚ್ಚಾಗಿ ವಾಸ್ತವತಾವಾದದ ಮೇಲೆ ಒತ್ತು ಕೊಟ್ಟಿದೆ. ಪುರಾಣದ ಅತಿಮಾನುಷ ಅದ್ಭುತರಮ್ಯ ಜಗತ್ತು ಸಹಜವಾಗಿಯೇ ಅದರ ಸ್ವಭಾವಕ್ಕೆ ಒಗ್ಗುವುದಿಲ್ಲ. ಹೀಗಾಗಿ ಪೌರಾಣಿಕ ಕಥೆಗಳು ಕಾದಂಬರಿಗಳಲ್ಲಿ ಕಾಣಿಸಿಕೊಂಡಿರುವದು ತೀರ ಅಪರೂಪ. ಕಾಣಿಸಿಕೊಡಾಗಲೂ ತಮ್ಮ ಅತಿಮಾನುಷ ಅಂಶಗಳನ್ನು ಕಳೆದುಕೊಂಡು ಕೇವಲ ಮಾನವೀಯ ಸನ್ನಿವೇಶಗಳಿಗೆ ಸಂವಾದಿಯಾಗಿ ಬರುತ್ತವೆ. ಎಸ್.ಎಲ್. ಭೈರಪ್ಪನವರ "ಪರ್ವ" ಇಂಥದೊಂದು ಉದಾರಹಣೆ.

ಈ ದೃಷ್ಟಿಯಿಂದ ದೇವುಡು ಅವರ ಮೂರು ಪೌರಾಣಿಕ ಕಾದಂಬರಿಗಳು ಅತ್ಯಂತ ದಿಟ್ಟ ಪ್ರಯೋಗಗಳೆಂದೇ ಹೇಳಬೇಕು. ಪುರಾಣಕಥೆಗಳ ದೈತ್ಯಕಲ್ಪಕತೆಯ ಫಲಗಳಾದ ಅಲೌಕಿಕ, ಅದ್ಭುತರಮ್ಯ ಅಂಶಗಳನ್ನು ಸಹಜವೆಂಬಂತೆಯೇ ಒಪ್ಪಿಕೊಂಡು ಅವರಿಲ್ಲಿ ಕಥೆ ಹೇಳಿದ್ದಾರೆ. ಅವರ ಕಥೆಗಳು ಕೇವಲ ರೂಪಕಕಥೆಗಳೂ ಅಲ್ಲ. ಅವಾಸ್ತವ ಎಂದು ಅವನ್ನು ತಳ್ಳಿಹಾಕುವಂತೆಯೂ ಇಲ್ಲ. ಹಾಗೆಯೇ ಕೇವಲ ಪುರಾಣಕಥೆಗಳ ಪುನರ್ನಿರೂಪಣೆ ಎಂದೂ ಹೇಳುವಂತಿಲ್ಲ.

ದೇವುಡು ಅವರು ಈ ಪುರಾಣಕಥೆಗಳಿಗೇ ವಿಶಿಷ್ಟವಾದ, `ಪೌರಾಣಿಕ ವಾಸ್ತವತೆ' ಎಂದು ಕರೆಯಬಹುದಾದ ಹೊಸ ವಾಸ್ತವತೆಯನ್ನೇ ರೂಪಿಸಿಕೊಂಡಿದ್ದಾರೆ. ಈ ಅದ್ಭುತರಮ್ಯವಾದ ಪೌರಾಣಿಕ ಲೋಕ ತನ್ನದೇ ವಾಸ್ತವತೆಯ ಮೂಲಕ ನಮಗೆ ನಿಜವಾಗುತ್ತದೆ. ಮೂಲಕಥೆಯ ಸ್ಥೂಲವಾದ ರೂಪರೇಷೆಗಳಿಗೆ ಜೀವ ತುಂಬಿರುವ ವರ್ಣಮಯವಾದ ವಿವರಗಳಲ್ಲಿ ಇಂಥ ವಾಸ್ತವತೆಯನ್ನು ಕಾಣಬಹುದು. ದಧೀಚಿಯ ಪ್ರಸಂಗ ಇದಕ್ಕೊಂದು ಉತ್ತಮ ಉದಾಹರಣೆಯಾಗಿದೆ. ವೃತ್ರನನ್ನು ಕೊಲ್ಲಬಲ್ಲ ಶಕ್ತಿಶಾಲಿಯಾದ ಆಯುಧವನ್ನು ರೂಪಿಸಿಕೊಳ್ಳಲು ಬೇಕಾದ ವಜ್ರಸಾರವಾದ ದಧೀಚಿಯ ಬೆನ್ನುಮೂಳೆಗಾಗಿ ದೇವತೆಗಳೆಲ್ಲಾ ಅವನ ಆಶ್ರಮಕ್ಕೆ ಹೋಗುತ್ತಾರೆ. ಅವರು ಒಪ್ಪಿಸಿದ ಮಹಾಪೂಜೆಯಿಂದ ಸಂತುಷ್ಟನಾದ ಬ್ರಹ್ಮರ್ಷಿ ಏನು ಬೇಕೆಂದು ಕೇಳುತ್ತಾನೆ. ದೇವತೆಗಳು ಸಂದರ್ಭವನ್ನು ವಿವರಿಸಿ ಅಂಜುತ್ತಲೇ ಅವನ ಬೆನ್ನುಮೂಳೆಯನ್ನು ಕೇಳುತ್ತಾರೆ. ದಧೀಚಿಗೆ ತನ್ನ ದೇಹದ ಮೇಲಿನ ಅಭಿಮಾನ ಎಂದೋ ಹೋಗಿದೆ. ನಗುನಗುತ್ತಲೇ, `ದೇಹದಲ್ಲಿ ಇನ್ನೂ ಪ್ರಾಣವಿದ್ದಾಗಲೇ ಬೇಕೋ, ಅನಂತರವೋ?' ಎಂದು ಕೇಳುತ್ತಾನೆ. ಪ್ರಾಣ ಹೋದಮೇಲೆ ಆಸ್ಥಿ ಹತತೇಜವಾಗುವುದರಿಂದ ಪ್ರಾಣವಿದ್ದಾಗಲೇ ಬೇಕೆಂದು ದೇವತೆಗಳ ಇಷ್ಟ. ದಧೀಚಿಗೆ ಅದರ ಪರಿಣಾಮ ಅರ್ಥವಾಗುತ್ತದೆ. ದೇಹಾಭಿಮಾನಿಯಾದ ಕ್ಷರಪುರುಷನನ್ನು ಕರೆದು ತನ್ನ ಬೆನ್ನುಮೂಳೆಯನ್ನು ತೆಗೆದು ಕೊಡಲು ತಿಳಿಸುತ್ತಾನೆ. ಆದರೆ ಅದಕ್ಕಾತ ಒಪ್ಪದೆ, ಸರ್ವದೇವತಾತ್ಮಕವಾದ ಕಾಮಧೇನುವು ಈ ಕೆಲಸವನ್ನು ಮಾಡಲಿ ಎನ್ನುತ್ತಾನೆ. ಕಾಮಧೇನು ತನಗೆ ಕೆಟ್ಟ ಹೆಸರು ಬರದಿರಲಿ ಎಂದು ಏಕಾಂತದಲ್ಲಿ ದಧೀಚಿಯ ಬೆನ್ನನ್ನು ನೆಕ್ಕಿ ಮೂಳೆಯನ್ನು ಬಿಡಿಸುತ್ತಾಳೆ. ಹಾಗೆ ಬಿಡಿಸುವಾಗ ದಧೀಚಿ ನಾಮರೂಪಾತ್ಮಕ ಪ್ರಪಂಚವನ್ನು ಬಿಟ್ಟು, ಆನಂದಮಯ ಕೋಶವನ್ನು ದಾಟಿ, ಆಕಾಶದಲ್ಲಿ ತುಂಬಿರುವ ಪ್ರಣವದಲ್ಲಿ ತನ್ನ ಜ್ಞಾತೃಭಾವವನ್ನು ಬಿಟ್ಟು, ಸ್ವಭಾವರಹಿತವಾದ ಭಾವದಲ್ಲಿ ಲೀನವಾಗುವ ಪ್ರಯತ್ನದಲ್ಲಿದ್ದಾನೆ. ದೇಹತತ್ವ, ಮನಸ್ತತ್ವಗಳನ್ನು ದಾಟಿ ಬುದ್ಧಿಯಲ್ಲಿಯ ಅಹಂಕಾರತತ್ವದಿಂದ ಪರಾಙ್ಮುಖನಾಗುತ್ತಿದ್ದಾನೆ. ಆಗ ತ್ವಷ್ಟೃ ಅಲ್ಲಿಗೆ ಬಂದು ಕೂಗುತ್ತಾನೆ. ಆಗ ದಧೀಚಿ ಶುದ್ಧಾಕಾಶಮಂಡಲದಿಂದ ಕ್ರಮಕ್ರಮವಾಗಿ ಪಂಚಭೂತಗಳನ್ನೆಲ್ಲಾ ಪ್ರವೇಶಿಸಿ ಕ್ಷರಪುರುಷನ ಕ್ಷೇತ್ರಕ್ಕೆ ಮತ್ತೆ ಬರುವುದು, ತ್ವಷ್ಟೃ ಹೋದ ಮೇಲೆ ಮತ್ತೆ ಚತುರ್ಭೂತಗಳನ್ನು ಒಂದೊಂದಾಗಿ ದಾಟುತ್ತ ಆಕಾಶಕ್ಕೆ ಬಂದು, ಅದರ ವಿಲಯನ ಗತಿಯನ್ನು ದಾಟಿ, ಅಲ್ಲಿ ಜ್ಞಾತೃಭಾವವನ್ನು ಬಿಟ್ಟು ಬ್ರಹ್ಮಾಂಡಗತಿಯನ್ನು ಮೀರುವುದು-ಇದೆಲ್ಲ ದೇವುಡು ಅವರಿಗೆ ಮಾತ್ರ ಸಾಧ್ಯವಾಗಬಲ್ಲ ಬರವಣಿಗೆ. ಅವರಿಗೆ ಇಂಥ ವಿಷಯಗಳಲ್ಲಿ ಇರುವ ತಿಳುವಳಿಕೆ ಹೆಜ್ಜೆ ಹೆಜ್ಜೆಗೂ ಅನುಭವಕ್ಕೆ ಬರುತ್ತದೆ. ಈ ಬಗೆಯ ವಿವರಗಳಿಂದ ಕಾದಂಬರಿಯ ಓದು ಸ್ವಲ್ಪ ಭಾರವೆನಿಸುತ್ತದೆಂಬುದು ನಿಜ. ಆದರೆ, ಕುರ್ತಕೋಟಿಯವರು ಹೇಳುವಂತೆ, ದೇವುಡು ಅವರಿಗೆ ಈ ಕಾದಂಬರಿಗಳ ರಚನೆ ಒಂದು ಜ್ಞಾನಕಾಂಡವೂ ಆಗಿದೆ. ಕಾದಂಬರಿಯ ಸ್ವರೂಪಕ್ಕೆ ಬಾಧೆ ಬರದಂತೆ ಪ್ರಾಚೀನ ಜ್ಞಾನವನ್ನು ಅವರಿಲ್ಲಿ ಬಳಸಿಕೊಂ

ಡಿದ್ದಾರೆ. "ಆರ್ಷ ಜಗತ್ತಿನಲ್ಲಿ ದೊರಕಿದ ಸತ್ಯಗಳ ಉಪಬೃಂಹಣದ ಪ್ರಯತ್ನ ಈ ಕೃತಿಗಳಿಗೆ ಪ್ರೇರಣೆಯನ್ನಿತ್ತಿದೆ" (`ಮನ್ವಂತರ'-೧ `ಸಾಹಿತ್ಯ ಹಾಗೂ ಧರ್ಮಶ್ರದ್ಧೆ' ಪುಟ ೧೬) ಎಂಬ ಕುರ್ತಕೋಟಿಯವರ ಮಾತು ಸರಿಯೆನಿಸುತ್ತದೆ. ಕಥೆ ತಕ್ಕಮಟ್ಟಿಗೆ ಪರಿಚಿತವೇ ಆಗಿದ್ದರೂ ಇಂಥ ವಿವರಗಳ ಜೀವಂತಿಕೆಯಿಂದಾಗಿಯೇ ಕಾದಂಬರಿ ನಾವೀನ್ಯದ ಅನುಭವ ಕೊಡುತ್ತದೆ. ಗುರುಹತ್ಯೆಯ ಪಾಪವನ್ನು ಇತರರಿಗೆ ಹಂಚಿಕೊಟ್ಟು ಇಂದ್ರ ತಾನು ಪಾಪಮುಕ್ತನಾಗುವ ಯುಕ್ತಿ, ತ್ವಷ್ಟ್ರು ನಡೆಸುವ ಯಾಗದಲ್ಲಿ ಸರಸ್ವತಿ ನಡೆಸುವ ಕೈವಾಡ, ಇಂದ್ರ ವೃತ್ರನನ್ನು ಕೊಲ್ಲುವ ರೀತಿ, ವೃತ್ರಭೂತ ಪಂಚಭೂತಗಳನ್ನು ಹಿಡಿದುಕೊಳ್ಳುವ ವರ್ಣನೆ, ವೃತ್ರಹತ್ಯೆ ಇಂದ್ರನನ್ನು ಬೆನ್ನಟ್ಟಿ ಕಾಡುವುದು ಮೊದಲಾದ ವಿವರಗಳು ಹೀಗೆ ಕಾದಂಬರಿಯ ಉದ್ದಕ್ಕೂ ಹರಡಿಕೊಂಡಿವೆ. ಈ ವಿವರಗಳ ವಾಸ್ತವತೆಯನ್ನು ನಮ್ಮ ದಿನನಿತ್ಯದ ಬದುಕಿನ ಮಾನ ದಂಡದಿಂದ ಅಲ್ಲ, ಕಾದಂಬರಿಯೇ ಸೃಷ್ಟಿಸಿಕೊಳ್ಳುವ ಬದುಕಿನ ಮಾನದಂಡದಿಂದ ಅಳೆಯಬೇಕಾಗುತ್ತದೆ. ಈ ದೃಷ್ಟಿಯಿಂದ ಕಾದಂಬರಿಯ ವಿವರಗಳು ಮತ್ತು ವೃತ್ರನ ದೈತ್ಯಾಕಾರ ಮೊದಲಾದ ಅತಿಮಾನುಷ ಅಂಶಗಳು ಕಾದಂಬರಿಯಲ್ಲಿಯ ಬದುಕಿನ ಪ್ರಮಾಣಕ್ಕೆ ಸಹಜವಾಗಿಯೇ ಇವೆ.

ಇನ್ನು ನಿರೂಪಣಾ ತಂತ್ರದ ದೃಷ್ಟಿಯಿಂದ ದೇವುಡು ಅವರ ಪೌರಾಣಿಕ ಕಾದಂಬರಿಗಳನ್ನು ಪ್ರಾಚೀನ ಮಹಾಕಾವ್ಯ ಹಾಗೂ ಆಧುನಿಕ ಕಾದಂಬರಿಗಳ ಸಮನ್ವಯ ಎಂದು ವರ್ಣಿಸಬಹುದು. ಇಲ್ಲಿಯ ಕಥಾಭಿತ್ತಿಯ ದ್ರವ್ಯ ಮಹಾಕಾವ್ಯಗಳ ರೀತಿಯದು. ಪಾತ್ರಗಳ ಕಲ್ಪನೆ, ಕಾಲ-ದೇಶಗಳ ಪ್ರಮಾಣ, ವರ್ಣನೆಗಳು, ಅದ್ಭುತರಮ್ಯತೆ, ಅತಿಮಾನುಷ ಅಂಶಗಳು ಮುಂತಾದವುಗಳಲ್ಲಿ ಇವು ಮಹಾಕಾವ್ಯಗಳನ್ನು ಹೋಲುತ್ತವೆ. ಆದರೆ ನಿರೂಪಣೆಯ ರೀತಿಯಲ್ಲಿ ಕಾದಂಬರಿಗಳಾಗಿವೆ. ಇದರಿಂದಾಗಿ ಆಧುನಿಕ ಕಾದಂಬರಿಗಳ ಕೆಲವು ಅಂಶಗಳು ಇಲ್ಲಿ ಕಾಣುವುದಿಲ್ಲ ಎಂದಿರುವ ಕುರ್ತಕೋಟಿಯವರ ಮಾತು ನಿಜ. ಇಲ್ಲಿಯ ಪಾತ್ರಗಳಲ್ಲಿ ಬೆಳವಣಿಗೆ ಇಲ್ಲವೆಂಬುದೂ ನಿಜ. ಬಹುಶಃ "ಮಹಾಕ್ಷತ್ರಿಯ"ದಲ್ಲಿ ನಹುಷನೊಬ್ಬನೇ ಇದಕ್ಕೆ ಅಪವಾದವಾಗಿದ್ದಾನೆ. ಅವನ ಪಾತ್ರದಲ್ಲಿ ಪ್ರಕಟವಾಗುತ್ತ ಹೋಗುವ ವ್ಯಕ್ತಿತ್ವದ ಹೊಸ ಮುಖಗಳು ದೇವತೆಗಳಿಗೂ ಆಶ್ಚರ್ಯವನ್ನುಂಟು ಮಾಡುತ್ತವೆ. ಅವನ ಎಷ್ಟೋ ಕ್ರಿಯೆಗಳು ಅವರನ್ನು ಸಂದಿಗ್ಧ-ಅನುಮಾನಗಳಿಗೆ ಈಡುಮಾಡುತ್ತವೆ. ಇನ್ನುಳಿದ ಪಾತ್ರಗಳಲ್ಲಿ ಇಂಥ ನಿಗೂಢ ವ್ಯಕ್ತಿತ್ವ ಇಲ್ಲ. ಅವೆಲ್ಲ ಕಥೆಯ ಸಂವಿಧಾನದ ಅಗತ್ಯಗಳನ್ನು ಪೂರೈಸುವ ಸಾಧನೆಗಳಾಗಿವೆ. ಹಾಗೆಯೇ, ಈ ಕಾದಂಬರಿಗಳ ಉದ್ದೇಶ ಆಧುನಿಕ ಕಾದಂಬರಿಗಳಲ್ಲಿಯಂತೆ ಭಾವಾತ್ಮಕ ಪ್ರತಿಕ್ರಿಯೆಯನ್ನು ಉಂಟು ಮಾಡುವದಲ್ಲ ಎಂದಿದ್ದಾರೆ ಕುರ್ತುಕೋಟಿ("ಮನ್ವಂತರ-೧ `ಸಾಹಿತ್ಯ ಹಾಗೂ ಧರ್ಮಶ್ರದ್ಧೆ' ಪುಟ ೧೭). ಇದೂ ಬಹುಮಟ್ಟಿಗೆ ನಿಜ. ಯಾಕೆಂದರೆ ಈ ಕಾದಂಬರಿಗಳಲ್ಲಿ ಮಾನವೀಯ ಸಂದರ್ಭಗಳೇ ಕಡಿಮೆ. ಆದರೂ ಇಂದ್ರಾಣಿಯಾಗಬೇಕಾದ ಪೇಚಿನಿಂದ ತೊಳಲಾಡುವ ಶಚಿ ಮತ್ತು ನಹುಷನ ಜನ್ಮಾಂತರಗಳ ಶಾಪದಿಂದ ತತ್ತರಿಸುವ ವಿರಜಾದೇವಿಯವರ ಮಾನಸಿಕ ತುಮುಲಗಳಲ್ಲಿ ಭಾವಾತ್ಮಕ ಪ್ರತಿಕ್ರಿಯೆಗಳು ಇಲ್ಲವೆನ್ನುವಂತಿಲ್ಲ.

ಹೀಗೆ "ಮಹಾ ಕ್ಷತ್ರಿಯ" ಮತ್ತು ಉಳಿದ ಎರಡು ಪೌರಾಣಿಕ ಕಾದಂಬರಿಗಳು ಕಾದಂಬರಿ ಪ್ರಕಾರದಲ್ಲಿ ಹೊಸ ಸಾಧ್ಯತೆಗಳನ್ನು ಗುರುತಿಸಿರುವ ಹೊಸ ಪ್ರಯೋಗಗಳಾಗಿವೆ.

★

ದೇವುಡು ಅವರ ಮಹಾಕ್ಷತ್ರಿಯ

ಶ್ರೀ ಸಿ. ಆರ್. ಶ್ರೀನಿವಾಸ ಅಯ್ಯಂಗಾರ್

ಮಹಾಕ್ಷತ್ರಿಯ ಒಂದು ಪೌರಾಣಿಕ ಕಾದಂಬರಿ. ಖ್ಯಾತನಾಮರಾದ ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳ ಸುವರ್ಣ ಲೇಖನಿಯಿಂದ ರೂಪುತಾಳಿನಿಂತ ಅಚ್ಚುಕಟ್ಟಾದ ಸುಂದರ ಕಾದಂಬರಿ. ಕನ್ನಡಕ್ಕೆ ಹೊಸತಾದ, ಅಷ್ಟೇ ಏಕೆ, ಭಾರತೀಯ ಸಾಹಿತ್ಯ ಭಂಡಾರಕ್ಕೆ ರತ್ನಪ್ರಾಯವಾದ ಕೃತಿ. ನಮ್ಮ ಸಂಸ್ಕೃತಿಯ ಸಾರವನ್ನೆಲ್ಲಾ ಎರಕ ಹೊಯ್ದಿದ್ದಾರೆ ದೇವುಡು. ವಸ್ತು ಪೌರಾಣಿಕವಾದರೂ, ಅದನ್ನು ಸರಳ ಸುಂದರ ಶೈಲಿಯಲ್ಲಿ ಬೆಳಸಿಕೊಂಡು ಹೋಗಿದ್ದಾರೆ.

ದೇವುಡು ಸಂಸ್ಕೃತದಲ್ಲಿಯೂ ಇಂಗ್ಲಿಷಿನಲ್ಲಿಯೂ ಉದ್ದಾಮ ಪಂಡಿತರಾಗಿದ್ದರು. ಮಹಾಮಹೋಪಾಧ್ಯಾಯ ಶ್ರೀ ವೈದ್ಯನಾಥಶಾಸ್ತ್ರಿಗಳ ಬಳಿಯಲ್ಲಿ ಮೀಮಾಂಸಾಶಾಸ್ತ್ರವನ್ನು ಅಭ್ಯಾಸಮಾಡಿದ್ದರು. ಸಾಹಿತ್ಯ, ಪುರಾಣ, ವೇದಾಂತ ಎಲ್ಲವನ್ನೂ ಆಳವಾಗಿ ಅಭ್ಯಾಸಮಾಡಿ ಅರಗಿಸಿಕೊಂಡಿದ್ದರು. ಅವರ ಲೇಖನಿಯಿಂದ ಇಂತಹ ಒಂದು ಅಮೋಘಕೃತಿ ಹೊರಬಂದುದು ಕನ್ನಡಿಗರ ಭಾಗ್ಯವೆಂದೇ ಹೇಳಬೇಕು. ದೇವುಡು ಅವರ ಬಹುಮುಖ ಪಾಂಡಿತ್ಯದ ಬಗೆಗೆ ಒಂದು ಸಂದರ್ಭವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

೧೯೪೦ನೇ ವರ್ಷದ ಅಕ್ಟೋಬರ್ ತಿಂಗಳಿರಬಹುದು. ದೇವುಡು ಚನ್ನರಾಯ ಪಟ್ಟಣದ ಕರ್ನಾಟಕ ಸಂಘದ ಆಶ್ರಯದಲ್ಲಿ ತಮ್ಮ ಅಕ್ಷರ ಪ್ರಚಾರ ಯೋಜನೆಗೆ ಕಾರ್ಯಕರ್ತರನ್ನು ತರಪೇತಿ ಮಾಡಲು ಒಂದು ಶಿಬಿರವನ್ನು ನಡೆಸುತ್ತಿದ್ದರು. ಸುಮಾರು ೬೦-೭೦ ಮಂದಿ ಕಾರ್ಯಕರ್ತರು ಅಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಆಗ ಹಾಸನದ ಜಿಲ್ಲಾಧಿಕಾರಿಗಳಾಗಿದ್ದ ದಿವಂಗತ ಶ್ರೀ ಟಿ. ರಾಮಯ್ಯನವರು ಕರ್ನಾಟಕ ಸಂಘಗಳಿಗೆ ತುಂಬಾ ಪ್ರೋತ್ಸಾಹ ನೀಡುತ್ತಿದ್ದರು. ದೇವುಡು ಅವರ ಪ್ರಚಾರ ಕಾರ್ಯಕ್ಕೆ ಸರ್ಕಾರದಿಂದ ಸ್ವಲ್ಪ ಧನಸಾಹಯವನ್ನೂ ಅವರು ಕೊಡಿಸಿದ್ದರು. ಅದೇ ಕಾಲದಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿದ್ದ ಡಾ|| ಅಮರನಾಥ ಝಾ ಅವರು ಮೈಸೂರು ವಿಶ್ವವಿದ್ಯಾನಿಲಯದ ಆ ವರ್ಷದ ಘಟಿಕೋತ್ಸವಕ್ಕೆ ದಯಮಾಡಿಸಿದ್ದರು. ಶ್ರವಣಬೆಳಗೊಳಕ್ಕೆ ಹೋಗುವ ಮಾರ್ಗದಲ್ಲಿ ಜಿಲ್ಲಾಧಿಕಾರಿಗಳು ಸ್ವಲ್ಪ ಹೊತ್ತು ಡಾ|| ಝಾರವರಿಗೂ, ಕಾರ್ಯಕರ್ತರಿಗೂ ಭೇಟಿ ಏರ್ಪಡಿಸಿದ್ದರು.

ದೇವುಡು, ಝಾರವರ ನಡುವೆ `ಭಾರತೀಯ ದರ್ಶನ'ದ ಬಗೆಗೆ ವಿಚಾರ ವಿನಿಮಯ ನಡೆಯಿತು. ಅದೊಂದು ರಸದೌತಣ, ದೇವುಡುರವರ ಜ್ಞಾನ ಸಂಪತ್ತನ್ನೂ ವಾಗ್ವೈಖರಿಯನ್ನೂ ಕಂಡು ಡಾ|| ಅಮರನಾಥ ಝಾ ಮುಗ್ಧರಾಗಿ ಹೋದರು: "ನಮ್ಮ ತಂದೆ ದೊಡ್ಡ ಸಂಸ್ಕೃತ ವಿದ್ವಾಂಸರಾಗಿದ್ದರು. ಆದರೆ ನನಗೆ ಮೀಮಾಂಸೆ ಏನೂ ಗೊತ್ತಿಲ್ಲ" ಎಂದು ಸಂಕೋಚದಿಂದ ನುಡಿದರು. "ನಿಮ್ಮ ಪಾಂಡಿತ್ಯ ಅಗಾಧವಾದುದು. ಅದನ್ನೆಲ್ಲಾ ಜನರಿಗೆ ಕೊಡುವ ಪ್ರಯತ್ನಮಾಡಿ" ಎಂದು ಸೂಚಿಸಿ ದೇವುಡು ಅವರನ್ನು ಅಭಿನಂದಿಸಿದರು.

ಜನಸಾಮಾನ್ಯರಿಗೆ ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ತಿಳಿಸಲು ದೇವುಡು ಆದಷ್ಟು ಪ್ರಯತ್ನ ಮಾಡಿದರು. ಚನ್ನರಾಯಪಟ್ಟಣದ ತಾಲ್ಲೋಕಿನಲ್ಲಿಯೇ ಅವರು ಪ್ರವಾಸ ಮಾಡಿ ಗೀತೆ, ಉಪನಿಷತ್ತು, ಪುರಾಣಗಳು, ಹಾಗೂ ಮಹಾಕಾವ್ಯಗಳನ್ನು ಕುರಿತು ಉಪನ್ಯಾಸ ಮಾಡಿದರು. ಜನತೆಗೆ ನಮ್ಮ `ದರ್ಶನ'ದ ಪರಿಚಯ ಮಾಡಿಸಲು ಅವರು ತವಕಿಸುತ್ತಿದ್ದರು. ಅವರೊಂದಿಗೆ ಸಂಭಾಷಿಸುವುದೆಂದರೆ ಅದೊಂದು ದೊಡ್ಡಹಬ್ಬ. ವಾದದಲ್ಲಿ, ಸರಸ ಸಂಭಾಷಣೆಯಲ್ಲಿ ಚತುರರು ದೇವುಡು. ಕಾಲ ದೇಶಗಳ ಪರಿವೆಯಿಲ್ಲದೆ ಗಂಟೆಗಟ್ಟಲೆ ಸಂಭಾಷಣೆಯಲ್ಲಿ ತೊಡಗಿರುತ್ತಿದ್ದ ಅವರ ಪ್ರತಿಭೆ ಅನನ್ಯ ಸಾಧಾರಣವಾದುದು.

ಸಾಹಿತ್ಯ, ವೇದಾಂತ ನಾಟಕ, ರಾಜಕಾರಣ, ಕಾಮಶಾಸ್ತ್ರದಿಂದ ಹಿಡಿದು ಗೀತಾಶಾಸ್ತ್ರದ ತನಕ ಅವರಿಗೆ ಅದ್ಭುತ ಪರಿಶ್ರಮವಿತ್ತು. ನಾಟಕ, ಸಿನಿಮಾ ಕ್ಷೇತ್ರಗಳಲ್ಲಿಯೂ ಅವರು ಹೆಸರು ಸಂಪಾದಿಸಿದ್ದರು. `ಮಂಡೋದರಿ'ಯ ನಾಟಕದಲ್ಲಿ ರಾವಣನ ಪಾತ್ರ ಅವರದು. ಬ್ರಹ್ಮವಾದಿ, ನಚಿಕೇತ ಮುಂತಾದ ಸಿ.ಕೆ.ವಿ. ಅವರ ನಾಟಕಗಳಲ್ಲಿಯೂ ಅವರು ಪಾತ್ರವಹಿಸಿದ್ದರು. `ರಂಗಭೂಮಿ' ಮತ್ತು `ನಮ್ಮ ಪುಸ್ತಕ' ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸ ಮಾಡಿದ್ದರು. ದಾರಿಯಲ್ಲಿ ಸಿಕ್ಕಿದರೆ ಸಾಕು ಅವರಿಂದ ಬಿಡಿಸಿಕೊಂಡು ಪಾರಾಗಲು ಸಾಧ್ಯವಾಗುತ್ತಲೇ ಇರಲಿಲ್ಲ. ಸಾಕ್ರಟೀಸನ ಹಾಗೆ ಸಂಭಾಷಣೆಯಲ್ಲಿ ತೊಡಗುತ್ತಿದ್ದರು. ಹಿಂದೆ ಇದ್ದ ಸಾಕ್ರಟೀಸ್ ಕುರೂಪಿ, ಆದರೆ ಈ ನವ ಸಾಕ್ರಟೀಸ್ ತೇಜಸ್ವಿ ; ಆಜಾನುಬಾಹು. ಕಂಚಿನಂತಹ ಕಂಠ, ಅವರು ಸ್ನೇಹಿತರನ್ನು ತಮ್ಮ ತೋಳಿನಲ್ಲಿ ಬಾಚಿ ಅಪ್ಪಿಕೊಂಡರೆ ಅವರ ಗತಿ ತೀರಿದಹಾಗೆ.

ಜೀವನದಲ್ಲಿ ದೇವುಡು ಅಷ್ಟೇನು ಭಾಗ್ಯಶಾಲಿಯಾಗಿರಲಿಲ್ಲ. ಆರ್ಥಿಕ ದೃಷ್ಟಿಯಿಂದ ಅವರ ಸ್ಥಿತಿ ಒಮ್ಮೊಮ್ಮೆ ಕಠಿಣವಾಗುತ್ತಿತ್ತು. ಎಂತಹ ಸಂದರ್ಭದಲ್ಲಿಯೂ ಅವರು ಇನ್ನೊಬ್ಬರಿಗೆ ತಲೆ ಬಾಗಲು ಇಚ್ಛಿಸುತ್ತಿರಲಿಲ್ಲ. ಹಂಗಿನಬಾಳು ಅವರಿಗೆಂದೂ ಹಿಡಿಸಲಿಲ್ಲ. ಸ್ವಾತಂತ್ರ್ಯ ಅವರ ಜನ್ಮಸಿದ್ಧವಾದ ಹಕ್ಕು. ಎಂ.ಎ. ಪದವೀಧರರಾಗಿದ್ದ ಅವರು ಯಾವ ಹುದ್ದೆಗೆ ಸೇರಿದ್ದರೂ, ಕೊನೆಯ ವೇಳೆಗೆ ೪೦೦-೫೦೦ ರೂ ವೇತನ ಪಡೆಯುವುದು ಸಾಧ್ಯವಾಗಿತ್ತು. ಅವರು ಅದಕ್ಕಾಗಿ ಒದ್ದಾಡಲಿಲ್ಲ ; ಯಾಚಿಸಲಿಲ್ಲ. "ನನ್ನ ಸೇವೆ ಬೇಡವಾದರೆ ನಷ್ಟ ದೇಶಕ್ಕೆ ಹೊರತು `ದೇವುಡು'ವಿಗಲ್ಲ" ಎಂದು ಒಮ್ಮೊಮ್ಮೆ ಮಾತಾಡುತ್ತಿದ್ದುದುಂಟು.

ತಮ್ಮ ಸಲುವಾಗಿ ದೇವುಡು ಯಾರನ್ನೂ ಬೇಡಲಿಲ್ಲ. ಸ್ನೇಹಿತರಿಗಾಗಿ ಇದ್ದು ಬದ್ದುದನ್ನೆಲ್ಲಾ ವೆಚ್ಚಮಾಡಿ ಬರಿಕೈ ಮಾಡಿಕೊಳ್ಳುವ ಚಟ ಅವರದು. ಐದು ರೂಪಾಯಿ ತಮ್ಮಲ್ಲಿದ್ದರೆ ಸಾಕು, ಇದ್ದಬದ್ದ ಸ್ನೇಹಿತರಿಗೆಲ್ಲಾ ತಿಂಡಿತೀರ್ಥಗಳ ಸಮಾರಾಧನೆ! ಎದುರಿಗೆ ಬಂದ ಸ್ನೇಹಿತರನ್ನೆಲ್ಲಾ ಕರೆದುಕೊಂಡು ಫಲಾಹಾರ ಮಂದಿರಕ್ಕೆ ಹೋಗುತ್ತಿದ್ದರು. ದೇವುಡು ಸ್ನೇಹಪರರು. ಅವರು ಪಾಂಡಿತ್ಯದಲ್ಲಿ, ಅನುಭವದಲ್ಲಿ ಬಲುದೊಡ್ಡವರಾದರೂ, ಸರಳತೆಯ ಮೂರ್ತಸ್ವರೂಪವೆನಿಸಿದ್ದರು. ಅವರಿಗೆ ಅಂಹಕಾರವೂ ಇರಲಿಲ್ಲ; ಹಾಗೆಯೇ ದಾಕ್ಷಿಣ್ಯಪರತೆಯೂ ಇರಲಿಲ್ಲ.

`ಮಹಾಕ್ಷತ್ರಿಯ' ಕಾದಂಬರಿಕರ್ತೃಗಳಾದ ದೇವುಡು ಅವರ ಮನಃಪರಿಪಾಕ, ವ್ಯಕ್ತಿತ್ವ, ಇಂತಹದು. `ಸರಳ ಜೀವನ, ಉದಾತ್ತ ವಿಚಾರಗಳ ಚಿಂತನ, ವ್ಯಕ್ತಿತ್ವದ ವಿಶಿಷ್ಟಗುಣ. ದೇವುಡು ಸ್ವಭಾ

ವವನ್ನು ಚೆನ್ನಾಗಿ ತಿಳಿದುಕೊಳ್ಳದೆ, ಅವರ ಗ್ರಂಥಗಳ ಶ್ರೇಷ್ಠತೆಯನ್ನು ಒರೆಹಚ್ಚುವುದು ಸುಲಭವಲ್ಲ.

ಈ ಕಾದಂಬರಿಯಲ್ಲಿ ನಾಯಕ ನಹುಷನು ಮಹಾಕ್ಷತ್ರಿಯನೆನ್ನಿಸಿಕೊಂಡಿದ್ದಾನೆ. ಮಾನವೇಂದ್ರನಾದ ಆತನು ಮಾನವಲೋಕದ ಹಿರಿಮೆಯನ್ನು ದೇವಲೋಕದಲ್ಲಿ ಸ್ಥಾಪಿಸಿದ ಮಹಾನುಭವ. ಈ ಮಾನವೇಂದ್ರನ ಮುಂದೆ ದೇವೇಂದ್ರ ಒಬ್ಬ ಸಾಮಾನ್ಯ ವ್ಯಕ್ತಿಯಾಗಿ ಕಾಣುತ್ತಾನೆ. ದೇವಲೋಕದಲ್ಲಿ ತನಗೆ ದೊರೆತ ಅವಕಾಶವನ್ನು ತನ್ನ ಕುಲದ ಶ್ರೇಷ್ಠತೆಯನ್ನು ಹೆಚ್ಚಿಸಿಕೊಳ್ಳಲು ಉಪಯೋಗಿಸಿಕೊಂಡನು. ಚ್ಯವನಾದಿ ಮಹರ್ಷಿಗಳ ಉಪದೇಶದಿಂದ, ಧರ್ಮಾಚರಣೆಯಿಂದ ತಾನು ಮೊದಲೇ ಪಡೆದಿದ್ದ ಅಮೂಲ್ಯವಾದ ಜ್ಞಾನದ ಭಂಡಾರವನ್ನು ಇನ್ನೂ ಶ್ರೀಮಂತವನ್ನಾಗಿ ಮಾಡಿಕೊಂಡನು. ಇಂದ್ರನಿಂದ, ಯಮನಿಂದ, ಬೃಹಸ್ಪತಿಯಿಂದ, ಸಪ್ತರ್ಷಿಗಳಿಂದ ತನಗೆ ಬೇಕಾದುದನ್ನೆಲ್ಲಾ ಸಂಗ್ರಹಿಸಿಕೊಂಡು, ತನ್ನ ಜೀವನವನ್ನು ಸಾರ್ಥಕಪಡಿಸಿಕೊಂಡನು. ದೇವಲೋಕದಲ್ಲಿದ್ದರೂ, ಮಾನವಧರ್ಮವನ್ನು ಮಾತ್ರ ಬಿಡದೇ ಜಾಗರೂಕನಾಗಿದ್ದನು.

ದೇವತೆಗಳಿಗೆ ಆಡಳಿತವೂ ಬಾರದು. ಇಂದ್ರನು ಬರಿಯ ಸುಖಲೋಲುಪನಾಗಿ, ಆಡಳಿತದಲ್ಲಿ ಹೆಚ್ಚಿನ ಆಸಕ್ತಿ ಇಟ್ಟಿರಲಿಲ್ಲವೇನೋ ಎನ್ನಿಸುತ್ತದೆ. ಅಲ್ಲದೆ ದೇವತೆಗಳಿಗೂ ಅಸೂಯೆ ತಪ್ಪಿದ್ದಲ್ಲ. ಸಮಯಬಂದಾಗ ಉಪಯೋಗಿಸಿಕೊಂಡು, ಬೇಡವಾದಾಗ ತಳ್ಳಿಬಿಡುವ ದೇವತೆಗಳ ಕ್ಷುಲ್ಲಕತನವನ್ನು ಬಯಲಿಗೆಳೆದು ಅವರಿಗೆ ಬುದ್ಧಿಗಲಿಸಿದ. ಅವರ ಒಳಸಂಚಿಗೆ ತಾನು ಒಳಗಾಗದೇ ತನ್ನ ಆಡಳಿತ ಸಾಮರ್ಥ್ಯವನ್ನೂ, ವಿವೇಚನಾಶಕ್ತಿಯನ್ನೂ ಚೆನ್ನಾಗಿ ಪ್ರಕಟಿಸಿ `ಭಲೆ ನಹುಷ! ಅಧಿಕಾರವಿದ್ದರೆ ದೊಡ್ಡದಲ್ಲ; ಅದನ್ನು ಸರಿಯಾಗಿ ಉಪಯೋಗಿಸುವುದಕ್ಕೂ ಸಾಮರ್ಥ್ಯ ಬೇಕು' ಎಂದು ಸ್ವತಃ ದೇವತೆಗಳಿಂದಲೇ ಹೊಗಳಿಸಿಕೊಳ್ಳುವ ಪುಣ್ಯ ಅವನಿಗಿತ್ತು.

ದೇವೇಂದ್ರನ ಧರ್ಮಪತ್ನಿ ಶಚೀದೇವಿ ನಹುಷೇಂದ್ರನ ದೊಡ್ಡತನವನ್ನು ಮೆಚ್ಚಿಕೊಂಡಳು. ಬೃಹಸ್ಪತ್ಯಾಚಾರ್ಯರು, ಶುಕ್ರಾಚಾರ್ಯರು ಆತನನ್ನು ಹೊಗಳಿದರು. ನಹುಷನ ನ್ಯಾಯನಿಷ್ಠೆಗೆ, ಮನಸ್ಸಿನ ಸಮತೆಗೆ ಸಪ್ತರ್ಷಿಗಳೂ ಚಕಿತರಾದರು. ಪರಿಗ್ರಹಕ್ಕಿಂತ ತ್ಯಾಗವೇ ದೊಡ್ಡದು. ಭೋಗದಿಂದ ಶಕ್ತಿಕ್ಷಯ, ತೇಜಸ್ಸಿನ ಹ್ರಾಸ, ಭೋಗವನ್ನು ನಿರಾಕರಿಸಿ ತ್ಯಾಗವನ್ನು ಎತ್ತಿಹಿಡಿದ ನಹುಷನು `ಅತೀಂದ್ರ' ಎನ್ನಿಸಿಕೊಂಡನು. ತನ್ನ ಪತಿ ದೇವೇಂದ್ರನಿಗಿಂತಲೂ ನಹುಷನು ಹೆಚ್ಚು ಎಂಬ ಭಾವನೆ ಶಚಿಯಲ್ಲಿ ಅಂಕುರಗೊಳ್ಳುವಂತೆ ಆತನ ನಡತೆ ನಿರ್ದುಷ್ಟಮುಕ್ತ. ಭಯಗ್ರಸ್ತಳಾದ `ಪರವಧು'ವಿಗೆ ಅಭಯದ ವಜ್ರಕವಚವಿಟ್ಟು, ಅಕೆಯಿಂದಲೂ ವರಗಳನ್ನು ಪಡೆದುಕೊಂಡನು.

ದೇವುಡು ಅವರ ಈ ಕಲ್ಪನೆ ಅದ್ಭುತರಮ್ಯವಾಗಿದೆ. ನಹುಷನು ವಿಷಯ ಲಂಪಟನಾಗಿ ಶಚಿಯನ್ನು ಬಯಸಿ ಶಾಪಗ್ರಸ್ತನಾದನೆಂಬ ಸಾಮಾನ್ಯ ಪ್ರಚಲಿತ ಸಂದರ್ಭವನ್ನು ಕೈಬಿಟ್ಟು, ನಹುಷನ ನಿಜವಾದ ವ್ಯಕ್ತಿತ್ವದ ಪ್ರಕಾಶನಕ್ಕೆ ಎಡೆಮಾಡಿಕೊಟ್ಟಿರುವುದು ಉಚಿತವಾಗಿಯೇ ಇದೆ. ನಹುಷ ಧರ್ಮಪ್ರಭು; ಏಕಪತ್ನೀ ವ್ರತಸ್ಥ. ವಿರಜಾದೇವಿಯಂತಹ ಭಾಗ್ಯಶಾಲಿನಿಯಾದ ಸಾಧ್ವೀಮಣಿ ಆತನ ಛಾಯಾನುವರ್ತಿಯಾಗಿರುವಾಗ, ನಹುಷನು ದಾರಿದಪ್ಪಿದನೆಂದು ಹೇಳುವುದು ಆ ರಾಜರ್ಷಿಯ

ಧವಳಕೀರ್ತಿಯನ್ನು ಮಲಿನಗೊಳಿಸಿದಂತಾಗುತ್ತದೆ. ಇದು ಅಸಂಭವ. ಕುತೂಹಲಕ್ಕಾಗಿ ಆತನು `ಶಚಿ' ರಹಸ್ಯವನ್ನರಿಯಲು ಆಶಿಸಿದ. ದೇವತೆಗಳ ಮೋಸದ ಮುಖವಾಡವನ್ನು ಕಳಚಿ, ಅವರ ನಿಜಸ್ವರೂಪವನ್ನು ಪ್ರಕಟಿಸುವುದೇ ಆತನು ಹಾಗೆ ಮಾಡಿದುದರ ಉದ್ದೇಶವೆಂಬ ಕಲ್ಪನೆ ಸಾಧುವಾಗಿದೆ. ಶಚಿಗೆ ಪತಿಯನ್ನು ದೊರಕಿಸಿಕೊಟ್ಟನು. ಮೂಲೆಗುಂಪಾಗಿ ಎಲ್ಲಿಯೋ ಅವಿತಿದ್ದ ಇಂದ್ರನನ್ನು ಮಹಾವಿಪತ್ತಿನಿಂದ ಪಾರುಮಾಡಿ, ಆತನನ್ನು ಅಮರಾವತಿಗೆ ಕರೆಸಿಕೊಂಡನು. ತನ್ನ ಅಧಿಕಾರವನ್ನು ಪ್ರಯೋಗಿಸುವ ಇಚ್ಛೆ ಆತನಿಗೆ ಸಾಮಾನ್ಯವಾಗಿರಲಿಲ್ಲ. ಆದರೆ ಪರಿಸ್ಥಿತಿಯ ಒತ್ತಾಯದಿಂದ ಅದನ್ನು ಪ್ರಯೋಗಿಸಬೇಕಾಗಿ ಬಂದಾಗ, ಸ್ವಲ್ಪವೂ ಧೃತಿಗೆಡದೆ, ದೃಢವಾದ ನಿರ್ಧಾರವನ್ನು ಕೈಗೊಂಡುದು ಆತನ ಆಡಳಿತ ಸಾಮರ್ಥ್ಯವೆಷ್ಟು ಎಂಬುದನ್ನು ತೋರಿಸುತ್ತದೆ. ತನ್ನ ಪರಮಾಧಿಕಾರವನ್ನು ಉಪಯೋಗಿಸಿ ಹತ್ಯೆಯನ್ನು ಧ್ವಂಸಮಾಡಿ, ಇಂದ್ರನನ್ನು ಕರೆಸಲೇಬೇಕೆಂದು ಆತನು ಘೋಷಿಸಿದಾಗ ದೇವಲೋಕವೆಲ್ಲ ಒಮ್ಮೆ ಕಂಪಿಸಿತು. ಆಚಾರ್ಯದ್ವಯರು ಸ್ತಂಭಿತರಾದರು. ಅಗ್ನಿವಾಯುಗಳಿಗೆ ತಮ್ಮ ಅಧಿಕಾರಗಳ ಸ್ವಸ್ವರೂಪ ಜ್ಞಾನ ಉದಯಿಸಿತು. ಹತವೀರ್ಯರಾಗಿದ್ದ ಅವರು ಧೈರ್ಯಸಾಹಸಗಳನ್ನು ತಂದುಕೊಂಡು, "ಮೊದಲೇ ಹೀಗೆ ಆಜ್ಞೆಮಾಡಿದ್ದರೆ ನಾವು ತಪ್ಪದೇ ನೆರವೇರಿಸುತ್ತಿದ್ದೆವು. ಈ ಮೊದಲು ಇಂತಹ ಅನುಜ್ಞೆಕೊಟ್ಟವರೇ ಇಲ್ಲ" ಎಂದುಕೊಂಡು ಕರ್ತವ್ಯತತ್ಪರರಾದರು.

ದೇವತೆಗಳಿಗೂ ತೋಚದೆ ಪೆಚ್ಚುಮೋರೆ ಹಾಕಿಕೊಂಡು ಕುಳಿತಿದ್ದ ಸಂಧಿಕಾಲದಲ್ಲಿ ನಹುಷ ಅಧಿಕಾರವನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ತೋರಿಸಿಕೊಟ್ಟ. ದೇವೇಂದ್ರನು ಬಂದಾಗ ನಹುಷನು ಏನು ಮಾಡುವನೋ ಎಂದು ಚಿಂತಿಸುತ್ತಿದ್ದಾಗ ತಾನೇ ಅವನಿಗಾಗಿ ಸಿಂಹಾಸನವನ್ನು ತ್ಯಾಗಮಾಡಿದನು.

ವಿರಜಾದೇವಿ ನಹುಷನ ಧರ್ಮಪತ್ನಿ. ದೇವಕನ್ಯೆಯಾದರೂ ಮನುಷ್ಯಲೋಕದ ಧರ್ಮವನ್ನು ಬಿಡಲಿಲ್ಲ. ನಹುಷನನ್ನು ಸದಾ ಅನುಸರಿಸುತ್ತ ಆತನ ಧರ್ಮ ಸಂಪಾದನಾ ಕಾರ್ಯದಲ್ಲಿ ನೆರವಾಗಿದ್ದಳು. ಪತಿಗೆ ಇಂದ್ರಪದವಿ ಬಂದುದು ಅವಳಿಗೆ ಸಂತೋಷ. ಅದನ್ನು ಬಿಡಬೇಕಾಗಿ ಬಂದಾಗ ಆಕೆಯು ತನ್ನ ಸಮ್ಮತಿಯನ್ನು ನೀಡಲು ಹಿಂಜರಿಯಲಿಲ್ಲ. ಇಂದ್ರಪದವಿಯನ್ನು ಬಿಟ್ಟಮೇಲೆ, ತಾನು ಮತ್ತೆ ರಾಜ್ಯವಾಳಲು ನಹುಷನು ಸಿದ್ಧನಾಗಿರಲಿಲ್ಲ. ಮಗನಾದ ಯಯಾತಿಗೆ ಅದನ್ನು ಬಿಟ್ಟುಕೊಟ್ಟಿದ್ದನು. ನಹುಷನು ಆರಿಸಿಕೊಂಡದ್ದು ತಪಸ್ಸು, ಅರಣ್ಯವಾಸ. ವಿರಜಾದೇವಿಗೆ ಅದೂ ಸಂತೋಷಕರವಾಗಿಯೇ ಇತ್ತು. ವಿರಜೆಯಂತಹ ಸತೀರತ್ನವನ್ನು ಪಡೆದಿದ್ದ ನಹುಷನು ಇಂದ್ರಪತ್ನಿಯಾದ ಶಚೀದೇವಿಯನ್ನು ಬಯಸಿದನೆಂದು ಭಾವಿಸುವುದು ಮೂರ್ಖತನದ ಪರಮಾವಧಿಯಲ್ಲವೇ?

ಸಪ್ತರ್ಷಿ ಶಿಬಿಕಾರೋಹಣ ಕಾಲದಲ್ಲಿ ಆತನಿಗೆ ಸಮಾಧಿ ಭಂಗವಾಗುವಂತೆ ನಿಯತಿ ಏರ್ಪಡಿಸಿದಳು. ವಿಧಿಯ ಇಚ್ಛೆಗೆ ತಲೆಬಾಗಿ, ಸ್ವಲ್ಪ ಸಮಾಧಿಭಂಗಕ್ಕೆ ಆತನು ಒಪ್ಪಬೇಕಾಯಿತು. ಸ್ವಸಂತೋಷದಿಂದಲೇ ಅದನ್ನು ಅವನು ಅಂಗೀಕರಿಸಿದ. ಏಳನೇ ದಿನ ಸಮಾಧಿ ಭಂಗವಾಯಿತು. ಇಂದ್ರನಾದುದರಿಂದ ತನಗೆ ತಾನೇ ಶಿಕ್ಷೆ ವಿಧಿಸಿಕೊಳ್ಳಬೇಕಾಯಿತು. ಋಷಿಗಳು ಆ ಕೆಲಸವನ್ನು ಮಾಡದೆ ನಹುಷನಿಗೆ ಒಂದು ಪರೀಕ್ಷೆಯನ್ನು ಒಡ್ಡಿದರು. ಅದರಲ್ಲಿಯೂ ಆತನು ಜಯಶಾಲಿಯಾದನು.

`ಸರ್ಪಜನ್ಮವೇ'. ಯೋಗ್ಯವೆಂದು ನಿರ್ಧರಿಸಿ ಆ ರೀತಿ ಶಿಕ್ಷೆ ವಿಧಿಸಿಕೊಂಡನು. ಭೂಲೋಕದಲ್ಲಿ ನ್ಯಾಯವಿತರಣೆ ಮಾಡಿ ಧರ್ಮಪ್ರಭುವೆಂಬ ಖ್ಯಾತಿಪಡೆದಿದ್ದ ಆತನು ಇಂದ್ರ ಪದವಿಯಲ್ಲಿಯೂ ಅದೇ ರೀತಿ ನ್ಯಾಯನಿಷ್ಠೆಯನ್ನು ಪರಿಪಾಲಿಸಿದನು. ಬೇರೆಯವರಲ್ಲಿ ನಡೆಯುವಂತೆಯೇ, ತನ್ನ ವಿಷಯದಲ್ಲಿಯೂ ನಡೆದುಕೊಂಡನು. ಆ ಬಗೆಯ ಸಮಚಿತ್ತತೆ ಸಾಮಾನ್ಯರಿಗೆ ಬರುವುದಿಲ್ಲ. ದೇವತೆಗಳೇ ಆತನನ್ನು ತಮ್ಮ ನಾಯಕನನ್ನಾಗಿ ಆರಿಸಿಕೊಂಡರೆಂದರೆ ಅದೇನು ಸಾಮಾನ್ಯ ವಿಷಯವೆ?

ಆತನಿಗೆ ಇಂದ್ರನಾದುದರಿಂದ ಮೂರು ಬಗೆಯ ಲಾಭಗಳು ದೊರಕಿದುವು: (೧) ತನ್ನ ಜ್ಞಾನಭಂಡಾರವನ್ನು ಮತ್ತಷ್ಟು ತುಂಬಿಕೊಂಡನು. (೨) ಶಾಪ ವಿಮೋಚನೆಯಾದ ಮೇಲೆ ನಹುಷ ದಂಪತಿಗಳು ದೇವಲೋಕದಲ್ಲಿ ಇಂದ್ರಸಖರಾಗಿ ನಿರಂತರವಾಗಿ ವಾಸಿಸುವ ಆಹ್ವಾನವನ್ನು ಒಪ್ಪಿಕೊಂಡನು; (೩) ಇಂದ್ರನಾದುದರಿಂದ ಸರ್ಪಕ್ಕೆ ಜಾತಿಸ್ಮರತ್ವ, ಇಂದ್ರಾನಂದ ಎರಡೂ ಇರತಕ್ಕದ್ದೆಂದು ವರಪಡೆದನು.

ಶಾಪ ವಿಮೋಚನೆ ಮಾಡಲು ಬಂದಾಗ ಇಂದ್ರನನ್ನು ಕುರಿತು ಹೇಳಿದ: "ನಾನಾಗಿ ಕೇಳಿದಾಗ ಶಾಪ ವಿಲೋಪಮಾಡುವಿಯಂತೆ. ಈಗ ನಾನೇನು ಬೇಡಲಿಲ್ಲವಷ್ಟೆ" ಎಂದು ವಿನಯದಿಂದ ಆತನ ಹಂಗನ್ನು ನಿರಾಕರಿಸಿದನು. ಪರರಿಗೆ ಎಲ್ಲವನ್ನು ದಾನಮಾಡಬಲ್ಲವನು, ಬೇರೊಬ್ಬರಿಂದ ದಾನ ಪಡೆಯುವುದೆ? ಇಲ್ಲಿಯೂ ನಹುಷನದೇ ಮೇಲುಗೈ. ಹೇಗೆನೋಡಿದರೂ ನಹುಷನು ಅತೀಂದ್ರ?

ಇನ್ನು ದೇವುಡು ಅವರ ಶೈಲಿಯ ಬಗೆಗೆ ಒಂದು ಮಾತು. ಸಂಸ್ಕೃತಕ್ಕೆ ಒಪ್ಪುವಂತಹ, ಕನ್ನಡಕ್ಕೆ ಆಕರ್ಷಕವಾಗಬಲ್ಲ, ಒಂದು ಹೊಸಪರಿಯನ್ನು ಅವರು ಕಂಡುಕೊಂಡಿದ್ದಾರೆ. ತಿಳಿಯಾದ, ಹದವಾದ ಗಂಭೀರ ಶೈಲಿ. ಮಾತು ತುಂಬಾ ಸರಳವಾದರೂ ಬಂಧದಲ್ಲಿ ಬಿಗುಪಿದೆ. ವಿದಗ್ಧೆಯಾದ ಮಹಿಳಾ ಮಣಿಯಂತೆ ಗಂಭೀರವಾಗಿದೆ ಅವರ ಶೈಲಿ.

ವೇದಾಂತದ ಪ್ರಕ್ರಿಯೆಗಳನ್ನು ಸರಳವಾಗಿ ಹೇಳಲು ಪ್ರಯತ್ನಮಾಡಿದ್ದಾರೆ. ಬಲುಮಟ್ಟಿಗೆ ಯಶಸ್ಸನ್ನು ಗಳಿಸಿದ್ದಾರೆ. ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿದ ಈ ಗ್ರಂಥ ನಮ್ಮ ಸಂಸ್ಕೃತಿಯನ್ನು ಯಥಾವತ್ತಾಗಿ ಪ್ರತಿಬಿಂಬಿಸುವ ಅಮೋಘ ಕೃತಿ. ವೇದೋಪನಿಷತ್ತುಗಳಲ್ಲಿ ಶ್ರುತಿಸ್ಮೃತಿಗಳಲ್ಲಿ ಹೇಳಿರುವುದರ ಸಾರವನ್ನೆಲ್ಲಾ ಸುಲಭವಾದ ಮಾತುಗಳಲ್ಲಿ ತಿಳಿಸಲು ಅವರು ಮಾಡಿರುವ ಪ್ರಯತ್ನಗಳು ಅಭಿನಂದನೀಯವಾಗಿವೆ. ಜ್ಞಾನ, ಅನುಭವದ ಮೂಸೆಯಲ್ಲಿ ಬೆಂದಾಗ ತನ್ನ ಕೊಳೆಯನ್ನೆಲ್ಲಾ ಕಳೆದುಕೊಂಡು ಅಪರಂಜಿಯಾಗುತ್ತದೆ. ಈ ಅಪರಂಜಿಯೇ ಮಹಾಕ್ಷತ್ರಿಯ.

ಮೂವರು ಇಂದ್ರರು

ದೇವಲೋಕವನ್ನು ಮೂವರು ಇಂದ್ರರು ಆಳಿದರು. ಅವರಲ್ಲಿ ನಿತ್ಯನಾದ ಮಹೇಂದ್ರ. ಸ್ವಲ್ಪಕಾಲ ವೃತ್ರನು ಇಂದ್ರಪದವಿಯಲ್ಲಿದ್ದನು. ಮಧ್ಯಮ ಲೋಕದ ಚಕ್ರವರ್ತಿಯಾದ ನಹುಷನು ಮೂರನೇ ಇಂದ್ರ. ಇವರಲ್ಲಿ ಯಾರು ಹೇಗೆ ಹೇಗೆ ಆಳಿದರು? ಅವರು ನಮ್ಮ ದೃಷ್ಟಿಯಲ್ಲಿ ಎಂತಹವರು? ಎಂಬುದನ್ನು ಈ ಕೃತಿ ಸ್ಪಷ್ಟಗೊಳಿಸುತ್ತದೆ.

ಒಮ್ಮೆ ಇಂದ್ರನು ದೇವಗುರು ಬೃಹಸ್ಪತಿಗಳ ವಿಚಾರದಲ್ಲಿ ನಡೆದುಕೊಂಡ ರೀತಿಯೇ ಎಲ್ಲಾ ಅನರ್ಥಗಳಿಗೂ ಕಾರಣವಾಯಿತು. ಮಹರ್ಷಿಗಳಿಗೆ ಯಾವುದೋ ವಿಚಾರದಲ್ಲಿ ಸಂದೇಹವುಂಟಾಯಿತು. ಅದನ್ನು ದೇವೇಂದ್ರನೇ ನಿವಾರಿಸಬೇಕೆಂದು ಸಪ್ತರ್ಷಿಗಳ ಅಪ್ಪಣೆಯಾಯಿತು. "ದೇಹವು ನಾನಲ್ಲ ಎಂದು ತಿಳಿದಿದ್ದರೂ, ದೇಹಗತವಾಗಿರುವ ಮನೋಬುದ್ಧಿಗಳನ್ನು ಪ್ರತ್ಯೇಕಿಸುವುದೆಂತು?" ಎಂಬುದಾಗಿ ಮಹರ್ಷಿಗಳು ಪ್ರಶ್ನಿಸಿದರು.

ದೇವೇಂದ್ರನು ಉತ್ತರ ಹೇಳಲು ಸಿದ್ಧನಾಗಿ, ಅದಕ್ಕೆ ಬೇಕಾದ ಅನುಗ್ರಹ ಮುದ್ರೆಯನ್ನು ಧಾರಣೆ ಮಾಡಿದನು. ಆ ವೇಳೆಗೆ ದೇವಗುರು ಅಲ್ಲಿಗೆ ಬಂದರು. ಇಂದ್ರನನ್ನು ಹರಸಲು ಕೈಯೆತ್ತಿ "ವಿಜಯೀ..." ಎನ್ನುವಷ್ಟರಲ್ಲಿ ಇಂದ್ರನು ತಮ್ಮ ಬಗೆಗೆ ಉದಾಸೀನನಾಗಿದ್ದಾನೆಂದು ಅವರು ಭಾವಿಸಿ ನಿಂತಲ್ಲಿಯೇ ಅಂತರ್ಧಾನ ಹೊಂದಿದರು. ದೇವತೆಗಳ ಸಂದೇಹವನ್ನು ನಿವಾರಿಸಿ ಬೀಳ್ಕೊಟ್ಟುದೇನೋ ಆಯಿತು. ಆದರೆ ಇಂದ್ರನಿಗೆ ತಾನು ಮಾಡಿದ್ದು ಸರಿಯಲ್ಲವೆಂದು ಭಾವನೆ ಉಂಟಾಯಿತು. `ಧರ್ಮಬ್ರಹ್ಮ ಪ್ರಶ್ನೆ'ಯನ್ನು ಧರ್ಮಾಂಗಣದಲ್ಲಿ ಬಿಡಿಸದೆ, ದೇವಸಭೆಯಲ್ಲಿ ವಿಮರ್ಶಿಸ ಹೊರಟಿದ್ದು ತಪ್ಪು ಎಂದು ಆತನಿಗೆ ತೋರಿತು. ಪೂರ್ಣಧ್ಯಾನದಲ್ಲಿದ್ದು `ಪುರಂದರ ಪ್ರಶ್ನೆ'ಯನ್ನು ಬಿಡಿಸುವುದು ಅನಿವಾರ್ಯವಾಗಿತ್ತು. ದೇವಾಚಾರ್ಯರು ಅಷ್ಟುಹೊತ್ತಿಗೆ ಅಲ್ಲಿಗೆ ಬರಬೇಕೆ? ಧ್ಯಾನ ಮುದ್ರೆ ಬದಲಿಸಿದರೆ ಮಹರ್ಷಿಗಣಕ್ಕೆ ಕೋಪಬರಬಹುದು. ಹಾಗೆಯೇ ಇದ್ದುದರಿಂದ ಬೃಹಸ್ಪತಿಗಳಿಗೆ ಅಸಮಾಧಾನ. ತನ್ನ ತಪ್ಪು ತಿದ್ದಿಕೊಳ್ಳಬೇಕೆಂದು ಆತನು ನಿರ್ಧರಿಸಿದನು.

ಧರ್ಮಾಚಾರ್ಯನಿಲ್ಲದೆ ತ್ರಿಲೋಕಾಧಿಪತ್ಯವನ್ನು ಕಾಪಾಡಿಕೊಳ್ಳುವುದು ಕಷ್ಟ. ನಿಯತಕಾಲಿಕವಾದ ಕರ್ಮಗಳನ್ನು ಕಾಲವರಿತು ಮಾಡಿಸುವವನೇ ದೇವಗುರು. ಆತನಿಲ್ಲದೆ ಕರ್ಮಾಚರಣೆಯೆಲ್ಲಿ? ಕರ್ಮಲೋಪದಿಂದ ಧರ್ಮಲೋಪ. ಧರ್ಮ ಲೋಪದಿಂದ ಅಧರ್ಮದ ಪ್ರಾದುರ್ಭಾವ. ಅಸುರರಿಗೆ ಉಚ್ಛ್ರಾಯ ಕಾಲ. ಸೃಷ್ಟಿಕಾಲದಲ್ಲಿ ತಮಗೆ ದತ್ತವಾದ ಜಗತ್ತಿನ ಭೋಗ ಭಾಗ್ಯಗಳಾದ ಸಾಮಗ್ರಿಗಳನ್ನೆಲ್ಲ ಎಲ್ಲರಿಗೂ ಹಂಚುವ ಕೆಲಸವೂ ದೇವತೆಗಳದೇ. ಆದುದರಿಂದ ದೇವತೆಗಳಿಂದ ಜಗತ್ತಿಗೆ ಸುಖ. ಅಸುರರಿಂದ ದುಃಖ. ದೇವತೆಗಳು ಸುಖವನ್ನೂ, ಸುಖವನ್ನು ಅನುಭವಿಸುವ ಶಕ್ತಿಯನ್ನೂ, ಕೊನೆಗೆ ಆನಂದವಾಗುವ ಶಕ್ತಿಯನ್ನೂ ಕೊಡಬಲ್ಲರು. ರಾಕ್ಷಸರು ದುಃಖವನ್ನೂ ಕೊನೆಗೆ ಎಲ್ಲವನ್ನೂ ದುಃಖದಲ್ಲಿಯೇ ಮುಗಿಸುವ ಶಕ್ತಿಯನ್ನೂ ಪೋಷಿಸುವರು. ದೇವತೆಗಳಂತೆಯೇ ರಾಕ್ಷಸರೂ ಹವ್ಯಾದಿಗಳಿಂದ ಆರಾಧಿತರಾದರೂ ಅವರು ಸುಖವನ್ನು ಕೊಡಲಾರರು. ರಕ್ಕಸರನ್ನು ತುಳಿದಿರಿಸಿ, ದೇವತೆಗಳಿಗೆ ಅಜರಾಮರತ್ವವನ್ನು ಕೊಟ್ಟರೆ ನಿಸರ್ಗ. ಈ ಒಂದು ಸ್ಥಿತಿಯ ಪರಿಪಾಲನೆಗೆ ಧರ್ಮಾಚಾರ್ಯನ ಅವಶ್ಯಕತೆಯುಂಟು.

ಬೇರೊಬ್ಬ ಧರ್ಮಾಚಾರ್ಯನನ್ನು ಹುಡುಕುವ ಕೆಲಸ ನಡೆಯಿತು. ಅಸುರರು ದೇವತೆಗಳ ಮೇಲೆ ಯುದ್ಧ ಮಾಡಲು ಅಣಿಮಾಡಿಕೊಳ್ಳುತ್ತಿರುವರೆಂಬ ಕಳವಳಕರವಾದ ಸುದ್ದಿ ಬೇರೆ. ಅಸುರ ಸೇನಾಡಂಬರದ ವಿಚಾರವಾಗಿ ಗೂಢಚಾರರು ಬಗೆಬಗೆಯ ವರದಿಗಳನ್ನು ತಂದರು. ಅಲ್ಲಿ ಹೋರಾಟವೂ ನಡೆಯಿತೆಂದು ಸುದ್ದಿ ಬೇರೆ. "ಯಾರನ್ನಾದರೂ ಕೆಡಿಸಬೇಕೆಂದರೆ ಅವರಿಂದ ಧರ್ಮಲೋಪ ಮಾಡಿಸಬೇಕು" ಎಂಬ ಗಾದೆಯ ಅರ್ಥವನ್ನು ದೇವತೆಗಳು ಚೆನ್ನಾಗಿ ಬಲ್ಲರು. ರಾಕ್ಷಸರು ಯಮ

ಧರ್ಮರಾಯನ ರಾಜಧಾನಿ ಸಂಯಮಿನೀ ಪುರದತ್ತ ಧಾಳಿ ಮಾಡಲಾರಂಭಿಸಿದರೆಂದು ಸುದ್ದಿ ಹೊರಟಿತು. ಕೊನೆಗೆ ಬ್ರಹ್ಮದೇವನ ಬಳಿಗೆ ದೇವೇಂದ್ರನು ಬಂದನು. ಬೇರೊಬ್ಬನನ್ನು ಗೊತ್ತು ಮಾಡಿಕೊಡುವಂತೆ ಕೇಳಿಕೊಂಡನು. ಬೃಹಸ್ಪತಿ ಕುಪಿತನಾದುದು ಬ್ರಹ್ಮದೇವನಿಗೆ ತಿಳಿದಿತ್ತು. ತ್ವಷ್ಟ್ರು ಬ್ರಹ್ಮನ ಮಗನಾದ ವಿಶ್ವರೂಪಾಚಾರ್ಯನೇ ಆ ಕೆಲಸಕ್ಕೆ ಯೋಗ್ಯನೆಂದು ಬ್ರಹ್ಮನು ಸೂಚಿಸಿದನು. ಆತನು ಉಭಯಕುಲಗಳಿಗೂ ಬೇಕಾದವನು. ಬೃಹಸ್ಪತಿಯಷ್ಟೇ ವೇದಾಧ್ಯಯನಸಂಪನ್ನ. ಆದರೆ ಸುರಾಪಾನ ಮಾತ್ರ ಅವನಿಗೆ ಅಂಟಿಕೊಂಡಿದ್ದ ಜಾಡ್ಯ. ಅದನ್ನು ಮಾತಾಮಹರಿಂದ ಪಡೆದಿದ್ದನು. ಅವನ ತಾಯಿ ರಾಕ್ಷಸ ಕುಲದವಳು.

ತ್ವಷ್ಟ್ರು ಬ್ರಹ್ಮನ ಮಗನಾದ ವಿಶ್ವರೂಪಾಚಾರ್ಯನು ದೇವಗುರು ಪೀಠವನ್ನೇರಿದ. ಅಮರಾವತಿಗೆ ರಾಕ್ಷಸರು ಧೈರ್ಯವಾಗಿ ಬರಲು ಆರಂಭವಾಯಿತು. ಆದರೆ ವಿಶ್ವರೂಪನಿಗೆ ಉಭಯತ್ರರಿಗೂ ಒಳಿತನ್ನುಂಟು ಮಾಡಬೇಕೆಂಬ ಆಸೆ ಇತ್ತು. ದೇವಾಸುರರ ದ್ವೇಷ ಸೃಷ್ಟಿಕಾಲದಿಂದ ಬಂದದ್ದು. ಇಂದ್ರನು ವಿಶ್ವರೂಪಚಾರ್ಯನ ಬಗೆಗೆ ಸಂದೇಹಗಳನ್ನು ಬಿಡಲಿಲ್ಲ. ಗೂಢಚಾರರನ್ನು ಇಟ್ಟು, ಅವನ ಚಟುವಟಿಕೆಗಳನ್ನೆಲ್ಲಾ ಸೂಕ್ಷ್ಮವಾಗಿ ಪರಶೀಲಿಸುತ್ತಾ ಬಂದ. ಅಂತೂ ಅವರಿಬ್ಬರಿಗೂ ಒಗ್ಗಿಬರಲಿಲ್ಲ. ಸುರಾಪಾನದ ಬದಲು ಸೋಮಪಾನ ಮಾಡಬೇಕೆಂದು ಇಂದ್ರನು ಸಲಹೆ ಮಾಡಿದನು. ವಿಶ್ವರೂಪನಿಗೆ ಅಸಾಧ್ಯವಾದ ಕೋಪ ಬಂತು. ಈ ವೇಳಗೆ ಬೃಹಸ್ಪತಿಗೂ ಬೇಸರವಾಗಿತ್ತು. ಇಂದ್ರನಿಗೂ ವಿಶ್ವರೂಪನು ಬೇಡವಾಗಿದ್ದನು. ಗುಟ್ಟಾಗಿ ಬೃಹಸ್ಪತಿ ಇರುವ ವಿಚಾರವನ್ನು ತಿಳಿದು, ತನ್ನ ದೂತರನ್ನು ಅಟ್ಟಿದನು. ಉಪಾಯವಾಗಿ ವಿಶ್ವರೂಪಾಚಾರ್ಯನನ್ನು ಪದಚ್ಯುತಿಗೊಳಿಸಿದಲ್ಲಿ, ತಾನು ಬರಲು ಅಡ್ಡಿಯಿಲ್ಲವೆಂದು ದೇವಗುರು ಹೇಳಿದ. ಅಂತೂ ಇಂದ್ರನೂ ವಿಶ್ವರೂಪನನ್ನು ವಧೆ ಮಾಡಿಬಿಟ್ಟ. ಬ್ರಹ್ಮಹತ್ಯೆಯ ಪಾಪ ಅವನನ್ನು ಹಿಂಬಾಲಿಸಿತು. ತ್ವಷ್ಟ್ರು ಬ್ರಹ್ಮನು ವೃತ್ರಾಸುರನನ್ನು ಸೃಷ್ಟಿಸಿ, ಇಂದ್ರನ ಮೇಲೆ ಬಿಟ್ಟನು. ವೃತ್ರನನ್ನು ಎದುರಿಸಲಾಗದೇ ಇಂದ್ರನು ಅವನಿಗೆ ತನ್ನ ಪದವಿಯನ್ನು ಬಿಟ್ಟುಕೊಟ್ಟು, ಅವನ ಸ್ನೇಹಿತನಾಗಿರುವುದಾಗಿ ಹೇಳಿದ. ದೇವತೆಗಳೂ, ಅಗ್ನಿವಾಯುಗಳೂ, ಬೃಹಸ್ಪತಿಯೂ ತಮ್ಮ ತಮ್ಮ ಮರ್ಯಾದೆ ಉಳಿದರೆ ಸಾಕೆಂದು ಹೇಗೋ ಇರತೊಡಗಿದರು. ಆದರೂ ಇಂದ್ರನೂ ದೇವತೆಗಳೂ ವೃತ್ರನನ್ನು ಸಂಹರಿಸಲು ಹೊಂಚು ಕಾಯುತ್ತಿದ್ದರು. ದಧೀಚಿಯಿಂದ ಆತನ ಮೂಳೆಗಳನ್ನು ಪಡೆದ ಇಂದ್ರನು, ವಿಶ್ವಕರ್ಮನಿಂದ ವಜ್ರಾಯುಧವಾಗಿ ಅವುಗಳನ್ನು ಮಾರ್ಪಡಿಸಿಕೊಂಡನು. ವೃತ್ರನು ಪಾನಮತ್ತನಾಗಿ ದೇವತೆಗಳ ಕಪಟವನ್ನರಿಯದೇ ದೇವೇಂದ್ರನೊಂದಿಗೆ ವಿನೋದವಾಗಿ ಮಲ್ಲಯುದ್ಧಕ್ಕೆ ನಿಂತನು. ವಜ್ರಾಯುಧವನ್ನು ಪ್ರಯೋಗಿಸಿ ಇಂದ್ರನು ವೃತ್ರನನ್ನು ವಧೆ ಮಾಡಿದನು. ವೃತ್ರವಧೆಯೇ ಎಲ್ಲಕ್ಕೂ ಮೂಲವಾಯಿತು. ಹತ್ಯೆ ಇಂದ್ರನ ಬೆನ್ನು ಹತ್ತಿತು. ಆತನು ಅದನ್ನು ಕಳೆದುಕೊಂಡಲ್ಲದೆ ಸಿಂಹಾಸನವನ್ನು ಏರಲಾಗದೆಂದು ಸಿಂಹಾಸನದ ಅಧಿದೇವತೆ ಹೇಳಿದಳು. ಕೆಲವು ಕಾಲ ಇಂದ್ರಸಿಂಹಾಸನ ಶೂನ್ಯವಾಗಿಯೇ ಉಳಿಯುವ ಪರಿಸ್ಥಿತಿ ಒದಗಿತು. ದೇವತೆಗಳು ಚಿಂತಾಕ್ರಾಂತರಾದರು. ಇಂತಹ ಸನ್ನಿವೇಶದಲ್ಲಿ ನಹುಷನು ಇಂದ್ರ ಪದವಿಯನ್ನು ವಹಿಸಿಕೊಳ್ಳಬೇಕಾಯಿತು.

ದಾನಶೌಂಡನೂ, ನಿತ್ಯಾಗ್ನಿಹೋತ್ರಿಯೂ ಆದ ನಹುಷನು ಒಪ್ಪಿಕೊಂಡರೆ ಆತನನ್ನು ಇಂದ್ರನನ್ನಾಗಿ ಮಾಡಲು ಎಲ್ಲರೂ ಒಪ್ಪಿದರು. ನಹುಷನು ಒಪ್ಪುತ್ತಾನೋ ಇಲ್ಲವೋ ಎಂಬ ಸಂದೇಹ

ಅವರಿಗಿತ್ತು. ವಿಶೇಷ ವರಗಳನ್ನಾದರೂ ಕೊಟ್ಟು ಅವನನ್ನು ಇಂದ್ರಪದವಿಗೆ ತರಬೇಕೆಂದು ಕೆಲವರು ಅಭಿಪ್ರಾಯಪಟ್ಟರು. ಬೃಹಸ್ಪತಿಯ ನೇತೃತ್ವದಲ್ಲಿ ಬಂದ ದೇವತೆಗಳ ನಿಯೋಗವು ನಹುಷನನ್ನು ಭೇಟಿ ಮಾಡಿ ತನ್ನ ಮನೋಗತವನ್ನು ತಿಳಿಸಿತು.

ನಹುಷನಿಗೆ ಒಂದು ಸಂದೇಹ. "ಮನುಷ್ಯರು ದೇವತೆಗಳ ಮೇಲೆ ಅಧಿಕಾರವನ್ನು ಚಲಾಯಿಸುವುದು ಹೇಗೆ?" ಎಂದು ಆತನು ಕೇಳಿದ. "ಪಿತೃಗಳು ನಿನ್ನ ಮಾನವತ್ವವನ್ನು ತೆಗೆದು ದೇವತ್ವವನ್ನು ಸ್ಥಾಪಿಸುವರು" ಎಂದು ಭರವಸೆ ನೀಡಿದರು ದೇವತೆಗಳು. ಆನಂದದಿಂದ, ಆನಂದಭೋಗದಿಂದ ಅದರ ಅರಿವು ಆತನಿಗಾಗುವುದೆಂದು ಸಹ ಅವರು ಹೇಳಿದರು.

ಅಧಿಕಾರ, ಆನಂದ ಎರಡನ್ನೂ ಕೊಟ್ಟು ಆತನನ್ನು ದೇವತೆಗಳು ಇಂದ್ರನನ್ನಾಗಿ ಮಾಡಿದರು. ಆದರೆ ನಹುಷ ಬುದ್ಧಿವಂತ. ಅಷ್ಟರಿಂದಲೇ ಆತನಿಗೆ ಸಮಾಧಾನವಾಗಲಿಲ್ಲ. ಅವನು ಹಾಕಿದ ಷರತ್ತುಗಳು ಹೀಗೆ ಇದ್ದವು: "ವಿರಜಾದೇವಿ ಅಲ್ಲಿಯೂ ತನಗೆ ಪತ್ನಿಯಾಗಿರಬೇಕು; ಅರಮನೆಯಲ್ಲಿ ನಡೆಯುವ ಎಲ್ಲಾ ಧರ್ಮಗಳೂ ಅಲ್ಲಿಯೂ ನಡೆಯಬೇಕು. ತಾನು ಕೇಳುವ ಯಾವುದೇ ರಹಸ್ಯವನ್ನು ತನಗೆ ತಿಳಿಸಬೇಕು."

ನಿಬಂಧನೆಗಳಿಗೆ ದೇವತೆಗಳು ಒಪ್ಪಿಕೊಂಡರು. ಆದರೆ "ರಹಸ್ಯ ತಾನಾಗಿ ತಿಳಿದರೆ ವರ; ನೀನಾಗಿ ಭೇದಿಸಿದರೆ ಶಾಪ" ಎಂದು ಹೇಳಿದರು. ಮಾನವೇಂದ್ರನು ಮಹೇಂದ್ರನಾದನು.

ನಹುಷೇಂದ್ರನು ಇಂದ್ರಾಧಿಕಾರವನ್ನು ಚೆನ್ನಾಗಿಯೇ ನಿರ್ವಹಿಸಿದನು. ನಹುಷೇಂದ್ರನು ನಿತ್ಯ ದಾನಶೀಲ. ಧರ್ಮಗಳನ್ನು ಮಾಡುತ್ತಿದ್ದನು. ಆ ಧರ್ಮಗಳು ದೇವಲೋಕದ ಬದಲು, ಭೂಲೋಕದಲ್ಲಿ ವಿನಿಯೋಗವಾಗುತ್ತಿದ್ದವು. ಇಂದ್ರನು ಹತ್ಯೆಗೆ ತಲೆಮರೆಸಿಕೊಂಡು ಎಲ್ಲಿಯೋ ಓಡಿಹೋಗಿರುವನೆಬ ಸುದ್ದಿ ಪ್ರಚಲಿತವಾಗಿತ್ತು. ಈ ವಿಚಾರವನ್ನು ನಹುಷನು ಅಗ್ನಿಯೊಡನೆ ಪ್ರಸ್ತಾಪಿಸಿದನು. "ಇಂದ್ರನು ಹಿಂದಿರುಗುವವರೆಗೂ ಕಾಯಬೇಕು. ಎಷ್ಟು ದಿವಸಗಳಾಗುವುದೋ ಹೇಳಲು ಸಾಧ್ಯವಿಲ್ಲ" ಎಂದು ಅಗ್ನಿ ಹೇಳಿದನು. "ಹಾಗಾದರೆ ಅವನನ್ನು ಕರೆಸಲು ಸಾಧ್ಯವಿಲ್ಲವೆ?" ನಹುಷನು ಮತ್ತೆ ಕೇಳಿದನು. "ಇಬ್ಬರು ಇಂದ್ರರಾಗುವಂತಿಲ್ಲ" ಎಂದು ಹೇಳಿ ಅಗ್ನಿ ಸುಮ್ಮನಾದನು.

`ಇಂದ್ರಪದವಿ ಶಾಶ್ವತವಲ್ಲ' ಎಂಬುದು ನಹುಷನಿಗೆ ಚೆನ್ನಾಗಿ ಅರ್ಥವಾಯಿತು. ಬೃಹಸ್ಪತಿಯನ್ನು ಕರೆಸಿ ಕೇಳಿದ: "ನನ್ನ ಇಂದ್ರಪದವಿ ಪೂರ್ಣವಾಗಿದೆಯೆ" ಎಂದು. ದೇವಗುರು ಹೇಳಿದ : "ನೀನಾಗಿ ಮಾನವತ್ವವನ್ನು ಒಪ್ಪಿಕೊಂಡಿರುವೆಯಾಗಿ ಅದು ಅಪೂರ್ಣ. ಕಾಲದೃಷ್ಟಿಯಿಂದ ಪೂರ್ಣವಾಗುವಷ್ಟು ಅಧಿಕಾರ ನಿನಗಿದೆ." ಶಚೀಪತಿಯಾಗುವವರೆಗೂ ಇಂದ್ರತ್ವವು ಪೂರ್ಣವಾಗುವಂತಿಲ್ಲವೆಂಬ ರಹಸ್ಯವನ್ನು ದೇವಗುರು ಬಯಲುಮಾಡಿದ. ಇಂದ್ರನೂ, ಶಚೀಪತಿಯೂ ಒಬ್ಬನೇ ಆಗಿದ್ದುದರಿಂದ ಈ ಸಮಸ್ಯೆ ಇದುವರೆಗೆ ತಲೆದೋರಿರಲಿಲ್ಲ. ಈ ವಿಚಾರ ಈಗ ಇತ್ಯರ್ಥವಾಗಿ ಬಿಡಬೇಕೆಂದು ನಹುಷನು ಹೇಳಿದ. ದೇವಸಭೆ ನಡೆದು, ಶಚೀದೇವಿ ಅಧಿಕಾರನಿಮಿತ್ತ ಇಂದ್ರಾಣಿಯೆಂಬ ತೀರ್ಮಾನಕ್ಕೆ ಬಂದಿತು. ಶಚೀದೇವಿಯ ಸ್ಥಿತಿ ಶೋಚನೀಯವಾಯಿತು. ಬೃಹಸ್ಪತಿ ದುಡುಕಿ ತೆಗೆದುಕೊಂಡ ನಿರ್ಣಯದಿಂದ ಇಲ್ಲದ ಗೊಂದಲಕ್ಕೆಡೆಯಾಯಿತು.

ದೇವಾಚಾರ್ಯನ ಸೂಚನೆಯಂತೆ ಶಚೀದೇವಿ ನಹುಷನನ್ನು ಭೇಟಿಮಾಡಲು ನಿಶ್ಚಯಿಸಿದಳು. ಆಕೆ ಭಯ ಸಂದೇಹಗಳಿಂದಲೇ ಆತನ ಬಳಿಗೆ ಹೋದಳು. ಶಾಸ್ತ್ರದಲ್ಲಿ ಹೇಳಿರುವಷ್ಟು ಕಾಲ ತನ್ನ ಪತಿಯನ್ನು ಹುಡುಕಿಸಲು ತನಗೆ ಅವಕಾಶಬೇಕೆಂದು ಕೇಳಿದಳು. ನೂತನ ಇಂದ್ರನು ಮಹಾನುಭಾವನೆಂಬ ಅರಿವು ಆಕೆಗೆ ಉಂಟಾಯಿತು. ತನ್ನ ಪತಿಗಿಂತಲೂ ನಹುಷನೇ ಹೆಚ್ಚು ಸಾತ್ವಿಕನೆಂಬ ಭಾವನೆ ಆಕೆಗುಂಟಾಯಿತು. ನಹುಷನು ಇಂದ್ರನಾಗಿರುವುದು ಮೂರು ಲೋಕಗಳ ಸೌಭಾಗ್ಯವೆಂದು ತನ್ನಲ್ಲಿ ಭಾವಿಸಿಕೊಂಡಳು.

"ದೇವತೆಗಳು ಯಾವಾಗಲೂ ವಿಷಮಿಶ್ರಿತವಾದ ಮೃಷ್ಟಾನ್ನವನ್ನೇ ವರವಾಗಿ ಕೊಡುವರು. ನಾವು ಮೃಷ್ಟಾನ್ನವನ್ನು ಕಾಣುವೆವೇ ಹೊರತು ವಿಷವನ್ನಲ್ಲ" ಎಂದು ತನ್ನ ಪತ್ನಿಗೆ ಹೇಳಿದನು ನಹುಷ. "ಅನಿತ್ಯವಾದ ಅರ್ಥಕ್ಕೆ ಹಾನಿಯಾದರೂ ಚಿಂತೆಯಿಲ್ಲ. ನಿತ್ಯವಾದ ಧರ್ಮವನ್ನು ಪಾಲಿಸಿದರಾಯಿತು" ಎಂದು ಹೇಳಿ ಆತನು ವಿರಜೆಗೆ "ಶಚಿ ಒಲಿದರೂ ಅವಳನ್ನು ನಾನು ಒಲಿಯುವುದಿಲ್ಲ: ಗ್ರಹಚಾರ ವಶದಿಂದ ಒಲಿದರೂ ಆಕೆ ಅರ್ಥಪತ್ನಿಯೇ ಹೊರತು ಧರ್ಮಪತ್ನಿಯಾಗಲಾರಳು" ಎಂದು ಭರವಸೆ ನೀಡಿದ.

"ಎಷ್ಟು ಕಾಲವಾದರೂ ನಿನ್ನ ಪತಿಯನ್ನು ಹುಡುಕಿಸು" ಎಂದು ಅಭಯವಿತ್ತು ಶಚಿಯನ್ನು ಗೌರವದಿಂದ ಬೀಳ್ಕೊಟ್ಟ. ಶಚಿ ಹಿಗ್ಗುತ್ತ ತನ್ನ ಅರಮನೆಗೆ ಧಾವಿಸಿದಳು.

ಪರಿಗ್ರಹಕ್ಕಿಂತ ತ್ಯಾಗವೇ ಹೆಚ್ಚು

ದೇವತೆಗಳು ಅನತಿ ಕಾಲದಲ್ಲಿಯೇ ತನ್ನನ್ನು ಉರುಳಿಸಿ ಬಿಡುವರೆಂಬ ಭಾವನೆ ನಹುಷನಿಗೆ ಉಂಟಾಗಲು ಬಹಳ ಕಾಲ ಹಿಡಿಯಲಿಲ್ಲ. ಇಂದ್ರಪದವಿಯಿಂದ ತನಗೇನೂ ಹೆಚ್ಚಿನ ಲಾಭವಾಗಲಿಲ್ಲವೆಂದು ಅವನಿಗೆ ತೋರಿತು. "ದೀಪದ ಪ್ರಕಾಶ ಹೆಚ್ಚಿದಷ್ಟೂ ಕತ್ತಲೆ ದಟ್ಟವಾಗುವುದು. ಹಾಗಾಯಿತು ನಾವು ಇಂದ್ರಪದವಿಯನ್ನು ಒಪ್ಪಿಕೊಂಡದು. ಆನಂದ ಲಭಿಸಿತು. ಆದರೆ ದುಃಖಾಭಾವವು ಮಾತ್ರ ಬರಲಿಲ್ಲ. ಬರುವುದೂ ಇಲ್ಲ. ಹೇಗಾದರೂ ಇವರು ನಮ್ಮನ್ನು ಉರುಳಿಸಿಯೆ ತೀರುತ್ತಾರೆ. ಇಂದ್ರನು ಮಾಡದಿದ್ದ ಏನಾದರೂ ಮಾಡಿ, ಇಂದ್ರ ಪದವಿಯನ್ನು ನಾವಾಗಿ ಬಿಟ್ಟುಬಿಡೋಣ. ಹಾವಿನ ಹೆಡೆಯ ನೆರಳಿನಲ್ಲಿ ವಾಸಮಾಡುವುದು ಸಾಕು. ಅದಕ್ಕೆ ನೀನೇನೆನ್ನುವೆ?" ಎಂದು ವಿರಜಾದೇವಿಯನ್ನು ಆತನು ಪ್ರಶ್ನಿಸಿದ. ಪತಿಪರಾಯಣೆ, ಸಾಧ್ವಿ ವಿರಜಾದೇವಿ ಹೇಳಿದಳು : "ಇದರಲ್ಲಿ ಸಂಪತ್ತಿಗಿಂತ ವಿಪತ್ತೇ ಹೆಚ್ಚು. ನನಗೆ ತಮ್ಮ ಪಾದಸೇವೆಯೊಂದೇ ಸಾಕು. ನನ್ನ ಪತಿದೇವನು ಇಂದ್ರನಾದರೆ ಪಡುವ ಆನಂದವನ್ನು ಆತನು ಯಃಕಶ್ಚಿತನಾದರೂ ಪಡೆಯುವನೆಂಬ ನಂಬಿಕೆ ನನಗಿದೆ. ನೀವು ಯೋಚಿಸಿರುವುದು ಸರಿ."

"ಇಂದ್ರನು ಮಾಡಲು ಹಿಂತೆಗೆಯುತ್ತಿದ್ದುದನ್ನು ಮಾಡೋಣ. ಭೂಲೋಕದಿಂದ ಮಕ್ಕಳು, ಮೊಮ್ಮಕ್ಕಳು ಬರಲಿ. ಅದನ್ನು ನೆರವೇರಿಸಿದ ಮೇಲೆ ಇಂದ್ರ ಪದವಿಯನ್ನು ಬಿಡೋಣ" ಎಂದನು. ವಿರಜೆ ಒಪ್ಪಿದಳು.

ಇಂದ್ರನನ್ನು ಹುಡುಕಿಸುವ ಪ್ರಯತ್ನ ಎಷ್ಟುಮಟ್ಟಿಗೆ ಸಫಲವಾಗಿದೆ ಎಂಬುದನ್ನು ತಿಳಿಯಲು ಆತನು ಬಯಸಿದನು. ದೇವಾಚಾರ್ಯನು ಮಹಾವಿಷ್ಣುವಿನ ಬಳಿಗೆ ಹೋಗಿರುವ ವಿಚಾರವನ್ನು

ಶಚಿ ನಹುಷನಿಗೆ ವಿಜ್ಞಾಪಿಸಿದಳು. "ನಮ್ಮಿಂದ ಏನಾದರೂ ಆಗಬೇಕಾದರೆ ಸಂಕೋಚವಿಲ್ಲದೆ ಹೇಳಬೇಕು" ಎಂದು ನಹುಷನು ಹೇಳಿದಾಗ ಶಚಿಗೆ ಪರಮಾಶ್ಚರ್ಯವಾಯಿತು. ದೇವಸಭೆಯು ಕೊಟ್ಟಿರುವ ಇಂದ್ರ ಪದವಿಯ ಅವಧಿ ಮುಗಿಯುವತನಕ ಕಾಯಬೇಕೆಂದು ಶಚಿ ಹೇಳಿದಳು. "ನಾನು ಈಗ ಹೇಳಿರುವ ಉದ್ದೇಶ ಸಫಲವಾದರೆ ತಾವು ಕಾಲಯಾಪನೆ ಮಾಡಬೇಕಾಗಿಲ್ಲ. ಇಂದ್ರಪತ್ನಿಯೆಂದು ಸಂಬೋಧಿಸಿ ನಾನು ಇಂದ್ರಪದವಿ ಬಿಡುತ್ತೇನೆ. ಇಂದ್ರನು ಮಾಡದೇ ಇದ್ದ ಕೆಲಸವನ್ನು ಮಾಡಿ, `ನ ಭೂತೋ ನ ಭವಿಷ್ಯತಿ' ಎನ್ನಿಸಿಕೊಂಡು ಇಂದ್ರತ್ವವನ್ನು ಬಿಟ್ಟು ವಾನಪ್ರಸ್ಥನಾಗುವೆನು" ಎಂದನು.

ಸಪ್ತರ್ಷಿ ಶಿಬಿಕಾರೋಹಣ ಇಂದ್ರನಿಗೆ ಮಾತ್ರ ಸಲ್ಲುವ ಮರ್ಯಾದೆ. ಮನ್ವಂತರದವರೆಗೂ ವೇದರಕ್ಷಣೆಯ ಹೊರೆ ಹೊತ್ತಿರುವ ಸಪ್ತರ್ಷಿಗಳೇ ಬಂದು ಇಂದ್ರನನ್ನು ಪಲ್ಲಕ್ಕಿಯಲ್ಲಿ ಕೂರಿಸಿ ತಾವು ವಾಹಕರಾಗಿರುವವರು. ಸಪ್ತರ್ಷಿಗಳ ಮೇಲಿನ ಗೌರವದಿಂದ ಇಂದ್ರನು ಏರಿದಂತೆ ಮಾಡಿ ಅಲ್ಲಿಗೆ ಬಿಡುವನು. ಅದಕ್ಕಿಂತ ಹೆಚ್ಚಿನ ಗೌರವ ಇಂದ್ರನಿಗಿಲ್ಲ. ಶಚಿ ಕೆಲವು ಎಚ್ಚರಿಕೆಯ ಮಾತನ್ನು ಹೇಳಿದಳು: "ಭೋಗ ಭೋಗವೂ ಅನುಭವಿಸಿದಂತೆಲ್ಲಾ ಕರ್ತನ ತೇಜಸ್ಸನ್ನು ತಿನ್ನುವುದು. ದೇವಲೋಕದಲ್ಲಿರುವ ದೇವತೆಗಳಿಗಂತೂ ಅದು ತಪ್ಪಿದ್ದಲ್ಲ. ಸಪ್ತರ್ಷಿ ಶಿಬಿಕಾರೋಹಣ ದೇವತೆಗಳಿಗೂ ತೇಜೋಹಾನಿ ಉಂಟುಮಾಡದಿರದು." ಆದರೆ ನಹುಷನ ಜ್ಞಾನ ಇನ್ನೂ ಹೆಚ್ಚು ಪಕ್ವವಾದುದು. ಪ್ರತಿಯೊಂದು ಕರ್ಮವೂ ಅಧಿದೈವ, ಅಧಿಯಜ್ಞ ಆದಾಗ ತೇಜೋಹಾನಿ ಆಗದೆ ವೃದ್ಧಿಯಾಗುವುದು ಎಂದು ಆತನು ಬಲ್ಲ. ಶಚಿ ಅವನ ಪ್ರಶ್ನೆಗೆ ಉತ್ತರಿಸಲಿಲ್ಲ.

ಹತ್ಯಾಭೀತಿಯಿಂದ ತಲೆಮರೆಸಿಕೊಂಡಿದ್ದ ಇಂದ್ರನ ಶುದ್ಧಿಯಾಗುವುದಂತೂ ಖಚಿತವಾಗುತ್ತಾ ಬಂತು. ಆ ವೇಳೆಗೆ ಅಂದರೆ ಉತ್ತರಾಯಣ ಪುಣ್ಯಕಾಲದ ಮರುದಿನ ಶಿಬಿಕಾರೋಹಣ ನಡೆಯತಕ್ಕದ್ದೆಂದು ನಿಶ್ಚಯವಾಯಿತು. ಆ ವೇಳೆಗೆ ದೇವೇಂದ್ರನು ಬಂದರೆ ಇಂದ್ರಾಭಿಷೇಕವನ್ನೂ ನೆರವೇರಿಸುವುದಾಗಿ ನಹುಷ ನಿರ್ಧರಿಸಿದ. ಶಚಿ ಎಂದಳು : "ಇಂದು ದೇವತ್ವಕ್ಕಿಂತ ಮನುಷ್ಯತ್ವ ಶ್ರೇಷ್ಠವಾಯಿತು. ಇದುವರೆಗೂ ದೇವತೆಗಳು ಮಾನವರಿಗೆ ವರಕೊಡುತ್ತಿದ್ದರು. ಈಗ ಮಾನವನು ದೇವತೆಗಳಿಗೆ ವರಕೊಡುವಂತಾಯಿತು. ಅರ್ಥಾತ್ ನೀವು ನಮಗೆ ಪೂಜ್ಯರಾದಿರಿ." ಇಂದ್ರನ ಉತ್ತರ ಸಿದ್ಧವಾಗಿಯೇ ಇತ್ತು : "ನಮಗೆ ಬೇಡವಾದುದನ್ನು ಬಿಡುವುದು, ಇತರರಿಗೆ ವರವಾದೀತೆ?" ಎಂದನು. ಆತನು ಮುಂದುವರಿದು ಹೇಳಿದ :

"ಶಾಸ್ತ್ರಗಳಲ್ಲಿ ಗಾರ್ಹಸ್ಥಕ್ಕಿಂತ ವಾನಪ್ರಸ್ಥವೇ ಹೆಚ್ಚೆಂದು ಹೇಳಿದೆ. ಶಾಸ್ತ್ರಗಳು ಹೇಳಿರುವುದು ನಿಜವಾದರೆ ಪರಿಗ್ರಹಕ್ಕಿಂತ ತ್ಯಾಗವೇ ಹೆಚ್ಚು. ಪದವಿಗಳಲ್ಲೆಲ್ಲಾ ಇಂದ್ರಪದವಿ ಅನಧಿಕವಾದುದು. ಅಂತಹುದು ಸಿಕ್ಕಿತು. ಇಂದ್ರನಿಗಿಂತ ಹೆಚ್ಚಾಗುವ ಉಪಾಯವನ್ನು ನೀವು ಹೇಳಿಕೊಟ್ಟಿರಿ. ಈಗ ಉಳಿದಿರುವುದು ತ್ಯಾಗ ತಾನೆ?"

ಶಚಿ ತನ್ನಲ್ಲಿಯೇ ಹೀಗೆ ಹೇಳಿಕೊಂಡಳು : "ಭೋಗವೆಂದರೆ ಅಂಟಿಗಿಂತಲೂ ಹೆಚ್ಚಾಗಿ ಅಂಟಿಕೊಳ್ಳುವ ದೇವತ್ವಕ್ಕಿಂತಲೂ, ತ್ಯಾಗವನ್ನೂ ಆರಾಧಿಸುವ ಮನುಷ್ಯತ್ವವು ಹೆಚ್ಚು ಎನ್ನಬೇಕು. ಭೋಗಕ್ಕಿಂತ ತ್ಯಾಗ ಹೆಚ್ಚು ಎಂಬುದನ್ನು ಒಪ್ಪಿಕೊಳ್ಳಲು ಚಿತ್ತಶುದ್ಧಿಯು ಬೇಕೋ ಏನೋ."

ವಿಶ್ವಜಿದ್ ಯಜ್ಞ

ಸಪ್ತರ್ಷಿ ಶಿಬಿಕಾರೋಹಣವನ್ನು `ವಿಶ್ವಜಿದ್‌ಯಜ್ಞ' ಎಂದು ಕರೆದ ಭರದ್ವಾಜರು "ಇದನ್ನು ಮಾಡುವವರು ಅಹಂಕಾರವನ್ನು ಬಿಡಬೇಕು. ಅಭಿಮಾನವನ್ನು ತ್ಯಜಿಸಬೇಕು. ಶತ್ರು ಮಿತ್ರ ಭೇದ ವನ್ನು ಬಿಡಬೇಕು. ರಾಗ ದ್ವೇಷಗಳು ಬಿಡಬೇಕು" ಎಂದು ಹೇಳಿದರು. ಧರ್ಮವಾಗಿ ಬಿಡಬಹು ದಾದ್ದನ್ನೆಲ್ಲಾ ಬಿಡುವುದಾಗಿ ಒಪ್ಪಿದ ನಹುಷನು ತನ್ನ ಪತ್ನಿಯನ್ನು ಹೇಗೆ ತ್ಯಾಗ ಮಾಡಬೇಕು? ಧರ್ಮದ ಲೋಪವಾಗುವಂತಹ ಯಾವುದನ್ನೂ ಮಾಡಲು ಸಿದ್ಧನಿಲ್ಲ ಆತ. ರಾಗದ್ವೇಷಗಳನ್ನು ಪೂರ್ತಿಯಾಗಿ ಬಿಡಲೊಲ್ಲ. ಅಸಾಧ್ಯ. ಅವುಗಳ ಬಗ್ಗೆ ಉದಾಸೀನರಾಗಿದ್ದು ಧರ್ಮವನ್ನು ಮಾತ್ರ ಆಚರಿಸಬೇಕು. ರಾಗದ್ವೇಷಗಳನ್ನು ಹದ್ದಿನಲ್ಲಿಡಬಹುದು.

"ಶಿಬಿಕೆಯಲ್ಲಿ ಕುಳಿತಿರುವಾಗ ಮಹಾವಿಷ್ಣುವಿನಲ್ಲಿ ಮನಸ್ಸಿಟ್ಟು ಸರ್ವವನ್ನು ಆತನಿಗೊಪ್ಪಿ ಸಿರಬೇಕಲ್ಲ." ಆಗ ಅದು ವಿಶ್ವಜಿದ್ ಯಜ್ಞವಾಗುವುದೆಂದು ಹೇಳಿದರು. "ಶಿಬಿಕಾರೋಹಣ ಇಂದ್ರತ್ವದ ಪರಮಾವಧಿ ಸಗುಣ ಮೂರ್ತೀಕರಿಸಿ, ನಿರ್ಗುಣವಾಗಿರಬೇಕು. ತ್ರಿಪುಟೀರಹಿತನಾಗಿ ಶಿಬಿಕಾರೋಹಣ ಮಾಡಬೇಕು. ಶಿಬಿಕೆಯಲ್ಲಿರುವಾಗ ತ್ರಿಪುಟಿಯು ಉದಯವಾದರೆ ಅನರ್ಥವಾ ಗುವುದು" ಎಂದು ಮಹರ್ಷಿ ಹೇಳಿದರು.

ಉತ್ಸವಕ್ಕೆ ಸರ್ವಸಿದ್ಧತೆಯೂ ನಡೆಯಿತು. ದಾನವ ಗುರು ಶುಕ್ರಾಚಾರ್ಯನು ಹೇಳಿದಂತೆ ಎಲ್ಲರಿಗೂ ಆಹ್ವಾನಗಳನ್ನು ಕಳುಹಿಸಿಕೊಟ್ಟನು. ಹೊಸ ಇಂದ್ರನ ಸೌಜನ್ಯದಿಂದ ಅಸುರಾಚಾರ್ಯನು ಮುಗ್ಧನಾಗಿ ಹೋದನು. ಭೂಲೋಕದಿಂದ ಯಯಾತಿ, ಆತನ ಮಡದಿ ಮಕ್ಕಳು ಬಂದರು. ಅಮ ರಾವತಿ ಅತಿಥಿಗಳಿಂದ ಕಿಕ್ಕಿರಿಯಿತು. ಬ್ರಹ್ಮವಿದ್ಯೆಯನ್ನು ಮತ್ತಷ್ಟು ಚೆನ್ನಾಗಿ ತಿಳಿಯಲು ನಹುಷ ನಿಗೆ ಆಸೆಯಾಯಿತು. ನಿರ್ವಿಕಲ್ಪ ಸಮಾಧಿಯ ಬಗ್ಗೆ ಹೆಚ್ಚಾಗಿ ತಿಳಿಸಲು ಸಮರ್ಥರು ಮೂವರು. ಪ್ರಜಾಪತಿಯಿಂದ ಅವಸ್ಥಾತ್ರಯಪೂರ್ವಕವಾದ ಬ್ರಹ್ಮವಿದ್ಯೆಯನ್ನು ಇಂದ್ರನು ಪಡೆದನು. ಹೃದ ಯಗ್ರಂಥಿ ವಿಚ್ಛೇದನಾರೂಪವಾದ ಬ್ರಹ್ಮವಿದ್ಯೆಯನ್ನು ಯಮಧರ್ಮನು ಬಲ್ಲ. ವರುಣನು ಪಂಚ ಕೋಶಾತ್ಯಯಪೂರ್ವಕ ಬ್ರಹ್ಮವಿದ್ಯೆಯನ್ನು ಬಲ್ಲ. ಈ ಮೂವರಲ್ಲಿ ಯಾರಿಂದಲಾದರೂ ಬ್ರಹ್ಮ ವಿದ್ಯೆಯನ್ನು ಕಲಿಯಬೇಕೆಂದು ಬೃಹಸ್ಪತಿ ನಹುಷನಿಗೆ ಹೇಳಿದ.

ಮೂವರನ್ನೂ ಕರೆಯಿಸಲು ಇಂದ್ರನು ನಿರ್ಧರಿಸಿದ. ನಹುಷೇಂದ್ರನ ಪ್ರಶ್ನೆಯನ್ನು ಕೇಳಿ ದೇವಾಚಾರ್ಯನು ತಬ್ಬಿಬ್ಬಾದನು. ಇಂದ್ರನ ಹತ್ಯೆಯನ್ನು ನಿವಾರಿಸಿ ದೇವೇಂದ್ರನನ್ನು ಕರೆತರಲು ಕಠಿಣವಾದ ಆಜ್ಞೆ ಮಾಡಿದ. ಇಂದ್ರನನ್ನು ಕರೆತರಲು ಇಂದ್ರನ ಸೇನಾನಿಗಳು ಅಣಿಯಾಗಿ ನಿಂತರು. ಆಯುಧಗಳು ಸಜ್ಜಾಗಿ ನಿಂತವು. `ಇಂದ್ರನು ಇಲ್ಲಿಗೆ ಬರಲೇಬೇಕು' ಎಂದು ನಹುಷೇಂದ್ರನ ಅಪ್ಪಣೆ. ಕ್ಷಣ ಮಾತ್ರದಲ್ಲಿ ಆಡಳಿತಗಾರನಾದ ನಹುಷೇಂದ್ರನ ಗರ್ಜನೆ ಕೆಲಸವನ್ನು ಆರಂಭಿಸಿತು. "ಅಧಿಕಾ ರವನ್ನು ಉಪಯೋಗಿಸುವುದಕ್ಕೂ ಶಕ್ತಿ ಬೇಕು." ಎಂದು ದೇವಾಚಾರ್ಯ ನುಡಿದ. "ಭಲೆ, ಪ್ರಭುವೆಂ ದರೆ ಹೀಗಿರಬೇಕು." ಎಂದು ಶುಕ್ರಾಚಾರ್ಯನು ಹೇಳಿದ. ಅವನ ಪ್ರತಿಭಟನೆಯೇ ಇಲ್ಲದಂತಾ ಯಿತು. ಅಮರಾವತಿಯ ಬಾಗಿಲಲ್ಲಿ ಇಂದ್ರನ ಸ್ವಾಗತಕ್ಕೆ ಸಂಭ್ರಮದ ಏರ್ಪಾಡುಗಳಾದವು. ಆಚಾರ್ಯ ರೆಲ್ಲರೂ "ನಹುಷ, ನೀನು ಇಂದ್ರನಲ್ಲ ಅತೀಂದ್ರ ಪ್ರಭುತ್ವವು ಒಂದು ತೂಕವಾದರೆ, ಅದನ್ನು

ಉಪಯೋಗಿಸಲು ಬೇಕಾದ ಬುದ್ಧಿ ಸಾಮರ್ಥ್ಯಗಳು ಎರಡರಷ್ಟು ತೂಕ. ನೀನು ಇಂದ್ರನಾಗುವುದಕ್ಕೆ ಮಾತ್ರವಲ್ಲ, ಅತೀಂದ್ರನಾಗಿ ಇಂದ್ರಗಣವನ್ನು ಆಳಬಲ್ಲವನು" ಎಂದು ಹೊಗಳಿದರು.

ಯಮನು ಹೃದಯಗ್ರಂಥಿ ವಿಚ್ಛೇದನಾರೂಪವಾದ ಬ್ರಹ್ಮವಿದ್ಯೆಯನ್ನು ಬೋಧಿಸಿ ಅದರ ಅನುಭವವನ್ನು ಮಾಡಿಕೊಟ್ಟ. ನಿರ್ವಿಕಲ್ಪ ಸಮಾಧಿಯೆಂದರೇನು ಎಂಬುದನ್ನು ತಿಳಿದು ನಹುಷ ಆನಂದಿಸಿದ. ವರುಣನು ಪಂಚಕೋಶಾತ್ಯಯ ಪೂರ್ವಕವಾದ ಬ್ರಹ್ಮವಿದ್ಯೆಯನ್ನು ವಿವರಿಸಿ ನಿರ್ವಿಕಲ್ಪ ಸಮಾಧಿಯ ಪರಿಚಯ ಮಾಡಿಕೊಟ್ಟ. ಜ್ಞಾನ, ಅನುಭವ ಎರಡೂ ಒಂದಾಗಲು ನಹುಷನು ಆನಂದ ತುಂದಿಲನಾದನು.

ನಿಯತಿಯ ಇಚ್ಛೆಯಂತೆ ಏಳನೇ ದಿವಸ ನಿರ್ವಿಕಲ್ಪ ಸಮಾಧಿಯ ಭಂಗ ಮಾಡಿಕೊಳ್ಳಲು ಆತನು ಒಪ್ಪಿದ. ಇಂದ್ರ ಶಚಿಯರು ಓಡಿಬಂದು ನಹುಷನ ಕಾಲಿಗೆರಗಿದರು. "ನಿತ್ಯೇಂದ್ರನು ನೈಮಿತ್ತಿಕೇಂದ್ರನಿಗೆ ನಮಸ್ಕಾರ ಮಾಡಬಾರದು" ಎಂದು ನಹುಷನು ತನ್ನ ವಿನಯವನ್ನು ಪ್ರಕಟಿಸಿದನು. "ಬುದ್ಧಿಯಲ್ಲಿ ಪ್ರಭಾವದಲ್ಲಿ ಸಾಮರ್ಥ್ಯದಲ್ಲಿ, ಪ್ರತಿಯೊಂದರಲ್ಲೂ ನೀನು ನನಗಿಂತ ಹೆಚ್ಚು, ಅಲ್ಲದೆ ಹತ್ಯೆಯ ಕೈಗೆ ಸಿಕ್ಕಿ ಗೋಳಿಡುತ್ತಿದ್ದ ನನ್ನನ್ನು ಉದ್ಧರಿಸಿದೆ. ಇಂತಹ ಪರಮೋಪಕಾರಕ್ಕೆ ನಾನೇನು ಮಾಡಲಿ?"

"ಹತ್ಯೆಯನ್ನು ನಿವಾರಿಸಿಕೊಳ್ಳಲು ಸಾಧ್ಯವಿದ್ದರೂ ನನಗೆ ಬುದ್ಧಿ ಓಡಲಿಲ್ಲ. ಆದ್ದರಿಂದ ನೀನು ಬುದ್ಧಿಯಲ್ಲಿ ಜ್ಯೇಷ್ಠನು." ಶಚೀದೇವಿಯು "ನೀನೆ ಇಂದ್ರಪದವಿಗೆ ತಕ್ಕವನು. ಇಂದ್ರಾಣೀತ್ವವನ್ನು ವಿರಜಾದೇವಿಗೆ ಒಪ್ಪಿಸುವೆನು. ದೇವತೆಗಳು ಅನುಗ್ರಹಿಸಿರುವ ಈ ತ್ರೈಲೋಕಾಧಿಪತ್ಯ ನಿನ್ನದಾಗಿರಲಿ" ಎಂದು ಬೇಡಿಕೊಂಡಳು.

ಭೋಗದ ಪರಾಕಾಷ್ಠೆಯನ್ನು ಅನುಭವಿಸಿದ ಮೇಲೆ ಬೇಕಾಗಿರುವುದು ತ್ಯಾಗವೇ ಹೊರತು, ಭೋಗವಲ್ಲ. ಮನುಷ್ಯ ದೇಹದಲ್ಲಿ ದಿವ್ಯಮನಸ್ಸನ್ನು ಧರಿಸಿ ಮಾನುಷಾನಂದಕ್ಕೆ ಕೋಟಿಪಾಲು ಮಿಗಿಲಾದ ಆನಂದವನ್ನು ಅನುಭವಿಸಿದ್ದೂ ಆಯಿತು. ಆದ್ದರಿಂದ ನಹುಷ ದಂಪತಿಗಳು `ಇಂದ್ರಪದವಿ'ಯನ್ನು ಒಪ್ಪಲಿಲ್ಲ.

ಸಪ್ತರ್ಷಿ ಶಿಬಿಕಾರೋಹಣದ ಏಳನೇ ದಿನ ನಹುಷನು ಶಿಥಿಲ ಸಮಾಧಿಯ ಅಪರಾಧಕ್ಕೆ ಪಕ್ಕಾದನು. ಗುರುತರವಾದ ಅಪರಾಧಕ್ಕೆ ಯೋಗ್ಯವಾದ ಶಿಕ್ಷೆಯನ್ನೆ ಆತನು ವಿಧಿಸಿಕೊಂಡನು. ಇಂದ್ರಾದಿಗಳು ದಿಗ್ಭ್ರಾಂತರಾದರು. ಅಜಗರವಾಗಿ ಹುಟ್ಟುವುದೇ ಆತನು ವಿಧಿಸಿಕೊಂಡ ಶಿಕ್ಷೆ. ಇಂದ್ರನು ಸರಿಯಾದ ಶಿಕ್ಷೆ ವಿಧಿಸಿಕೊಂಡನೆಂದು ಎಲ್ಲರೂ ಒಪ್ಪಿಕೊಂಡರು. ಆದರೆ ಶಿಕ್ಷೆಯ ವಿಲೋಪಕ್ಕೆ ನಹುಷನು ಒಪ್ಪಲಿಲ್ಲ. ಎಲ್ಲರಿಗೂ ಸಮಾಧಾನ ಹೇಳಿ ಇಂದ್ರಾಭಿಷೇಕದಲ್ಲಿ ಪಾಲ್ಗೊಳ್ಳಲು ಎಲ್ಲರನ್ನೂ ಪ್ರೋತ್ಸಾಹಪಡಿಸಿದನು.

ಹಲವಾರು ವೇದಾಂತದ ಪ್ರಕ್ರಿಯೆಗಳನ್ನು ವಿವರಿಸಲು ಕಾಲದೇಶಗಳ ಪರಿಮಿತಿಗೆ ಒಳಪಟ್ಟು ಈ ಸಣ್ಣಲೇಖನದಲ್ಲಿ ಸಾಧ್ಯವಿಲ್ಲ. ಅಂತಾಗಿಯೇ ಇಲ್ಲಿ ಅದರ ಬಗ್ಗೆ ವಿವರವಾಗಿ ಏನನ್ನೂ ಹೇಳಿಲ್ಲ. ಆದರೆ ಒಂದು ವಿಷಯ ಸುಸ್ಪಷ್ಟ. ಈ ಕಾದಂಬರಿಯನ್ನು ಓದಿದ ಮೇಲೆ ಮನಸ್ಸಿಗೆ

ನೆಮ್ಮದಿಯುಂಟಾಗುತ್ತದೆ. ತೃಪ್ತಿ ತುಂಬಿ ಬರುತ್ತದೆ. ಅಲ್ಲದೆ ಇದನ್ನು ಮತ್ತೆ ಮತ್ತೆ ಓದಬೇಕು ಎನ್ನಿಸುತ್ತದೆ. ಇದು ಅಡಿಯಿಂದ ಮುಡಿಯವರೆಗೂ ಸರ್ವಾಂಗಸುಂದರವಾದ ಕಾದಂಬರಿ. ಕನ್ನಡಿಗರು ಹೆಮ್ಮೆಪಡುವಂತಹ ಕಾದಂಬರಿ. ಭಾರತೀಯ ಸಂಸ್ಕೃತಿಯನ್ನು ಪ್ರೀತಿಸುವವರಿಗೆಲ್ಲಾ ಇದೊಂದು ಅಮೂಲ್ಯ ಕಾಣಿಕೆ.

ತರುಣ ಜನಾಂಗದ ಕಣ್ತೆರೆಸುವ, ಹಿರಿಯರು ಹೆಮ್ಮೆಪಡುವ, ಅಮೋಘ ಕೃತಿ. ಮಹಿಳೆಯರಿಗೆ ಇದು ಮಾಣಿಕ್ಯ. ಇದನ್ನು ಮತ್ತೆ ಮತ್ತೆ ಓದಿ ಲಾಭ ಪಡೆಯಲಿ ನಮ್ಮ ಜನ. ಓದುವವರ ಧರ್ಮಾಭಿಮಾನ ಹೆಚ್ಚಾಗಲಿ. ದೇವುಡು ಬಯಸಿದಂತೆ ಸಂಹಿತೆ, ಇತಿಹಾಸ, ಪುರಾಣ ಇವುಗಳಲ್ಲಿ ಬರುವ ಕತೆಗಳನ್ನು ಅಧ್ಯಯನ ಮಾಡಿ. ಉಪಬೃಂಹಣ ಮಾಡಿ ವಿಸ್ತಾರವಾಗಿ, ಸಮಂಜಸವಾಗಿ ಹೇಳುವ ಪುಣ್ಯವಂತರ ಪಡೆಯು ಹೆಚ್ಚಾಗಲಿ. ಭಾರತೀಯ ಪೂರ್ವವೈಭವವು ಮತ್ತೆ ಗೋಚರಿಸಲಿ!

★

ದೇವುಡು ಅವರ `ಮಹಾದರ್ಶನ'

ಶ್ರೀ ಕೆ. ನರಸಿಂಹಮೂರ್ತಿ

ಈಶಾವಾಸ್ಯೋಪನಿಷತ್ತಿನ ಮಹತ್ವವನ್ನು ಮಹಾತ್ಮಗಾಂಧಿಯವರು ಹೀಗೆ ವಿವರಿಸಿದ್ದಾರೆ: `ಎಲ್ಲ ಉಪನಿಷತ್ತುಗಳೂ ಇತರ ಶ್ರುತಿಗಳೂ ಒಂದು ವೇಳೆ ಇದ್ದಕ್ಕಿದ್ದಂತೆ ಇಲ್ಲವಾದಂತಾಗಿ ಈಶಾವಾಸ್ಯೋಪನಿಷತ್ತಿನ ಪ್ರಥಮ ಶ್ಲೋಕವೊಂದೇ ಹಿಂದೂ ಜನಸ್ಮೃತಿಯಲ್ಲಿ ಉಳಿದುಕೊಂಡರೂ ಹಿಂದೂ ಧರ್ಮ ಚಿರಸ್ಥಾಯಿಯಾಗಿರುತ್ತದೆ.'–ಈ ಸಂಹಿತೋಪನಿಷತ್ತನ್ನು ಪಡೆದು ನಮಗೆ ನೀಡಿರುವ ಬ್ರಹ್ಮರ್ಷಿಗಳು ಭಗವಾನ್ ಯಾಜ್ಞವಲ್ಕ್ಯರು. ಬೃಹದಾರಣ್ಯಕೋಪನಿಷತ್ತಿನಲ್ಲಿ ನಿರೂಪಿತವಾಗಿರುವಂತೆ ಜನಕ ಮಹಾರಾಜನು ಕೂಡಿಸಿದ ವಿದ್ವತ್ಸಭೆಯಲ್ಲಿ ಆ ಕಾಲದ ಪ್ರಮುಖ ಬ್ರಹ್ಮವಿದ್ಯಾ ಸಂಪನ್ನರೊಡನೆ ಯಶಸ್ವಿಯಾಗಿ ವಾಗ್ವಾದ ನಡೆಸಿದವರೂ ಹಾಗೂ ಆತ್ಮ ಸ್ವರೂಪವನ್ನು ಕುರಿತು ಬ್ರಹ್ಮವಾದಿನಿ ಮೈತ್ರೇಯಿಯೊಡನೆ ಸಂವಾದ ನಡೆಸಿದವರೂ ಈ ಯಾಜ್ಞವಲ್ಕ್ಯರೇ, ಶುಕ್ಲ ಯಜುರ್ವೇದವನ್ನೂ ಶತಪಥ ಬ್ರಾಹ್ಮಣವನ್ನೂ ಆದಿತ್ಯಾನುಹಗ್ರದಿಂದ ಪಡೆದುಕೊಂಡು ನಮಗೆ ನೀಡಿದವರೂ ಈ ಬ್ರಹ್ಮರ್ಷಿಗಳೇ. ಇವರ ಮಹತ್ಸಾಧನೆಯೇ ದೇವುಡು ಅವರ ಅದ್ಭುತ ಆರ್ಷೇಯ ಕಾಲಿಕ ಕಾದಂಬರಿ ತ್ರಯದಲ್ಲಿ ಕಿರೀಟಪ್ರಾಯವಾಗಿರುವ ಅಂತಿಮ ಕಾದಂಬರಿ, `ಮಹಾದರ್ಶನ'.

ದೇವರಾತರ ಚಿಂತೆ

ಇವರನ್ನು ದೇವುಡು ಅವತಾರಿ ಪುರುಷರೆಂದು ಚಿತ್ರಿಸುತ್ತಾರೆ. ದೇವತೆಗಳು ಪಿತೃಗಳು ಋಷಿಗಳು ಕೋರಿದಂತೆ ಮಹಾವಿಷ್ಣುವಿನ ಆಣತಿಯಂತೆ ತಪೋಲೋಕದಲ್ಲಿದ್ದ ಈ ಬ್ರಹ್ಮರ್ಷಿಗಳು ಭೂಮಿಯ ಮೇಲೆ ಅವತರಿಸುತ್ತಾರೆ. ಇವರ ತಂದೆ ಕರ್ಮ ಕಾಂಡದಲ್ಲಿ ಅದ್ವಿತೀಯರಾದ ದೇವರಾತರು. ತಾಯಿ, ಆಲಂಬಿನಿ ದೇವಿ. ವಂಶಪಾರಂಪರ್ಯವಾಗಿ ಬಂದ ತಮ್ಮ ಯಾಜ್ಞಿಕ ಕರ್ಮಕಾಂಡದ ಕಲಾಪಗಳನ್ನು ಈ ಅತಿಪಿತ, ಅತಿ ಪಿತಾಮಹನಾಗುವಂತೆ ಕಾಣುವ ಮಗ ಎಲ್ಲಿ ತ್ಯಜಿಸಿ ಜ್ಞಾನಕಾಂಡದ ಕಡೆ ತಿರುಗಿ ಸಂನ್ಯಾಸವನ್ನು ಗ್ರಹಣ ಮಾಡಿ ಬಿಡುವನೋ ಎಂದು ಚಿಂತಿಸುತ್ತಾರೆ, ದೇವರಾತರು. ಕರ್ಮಕ್ಷೇತ್ರದಲ್ಲಿ ಇರಬೇಕಾದಷ್ಟು ಕಾಲ ಕಾರ್ಯ ನಿರ್ವಹಿಸಿ ಅನಂತರವೇ ಬ್ರಹ್ಮವಿದ್ಯೆಯ ಕಡೆ ಸಾಗುವುದಾಗಿ ಮಗ ಅವರಿಗೆ ಆಶ್ವಾಸನೆ ನೀಡಿದ ಮೇಲೆಯೇಅವರಿಗೆ ಮನಶ್ಶಾಂತಿ. ಮುಂದೆ ಕರ್ಮಕಾಂಡ ಜ್ಞಾನಕಾಂಡಗಳೆರಡನ್ನೂ ಏಕತ್ರವಾಗಿ ಕಂಡಾಗಲೇ ಮಹಾ ದರ್ಶನದ ಸಿದ್ಧಿ ಎನ್ನುವುದು ಅರಿವಾಗಿ ದೇವರಾತರೂ ಪುತ್ರನನ್ನನುಸರಿಸಿ ಬ್ರಹ್ಮೋಪಾಸನೆಗೆ ನಿಲ್ಲುತ್ತಾರೆ.

ಕಾದಂಬರಿಯ ಮೊದಲ ಮೂರನೆ ಭಾಗ ಯಾಜ್ಞವಲ್ಕ್ಯರ ಜನನ, ಬಾಲ್ಯ, ವಿದ್ಯಾಭ್ಯಾಸ, ಸಂಸ್ಕಾರಗಳಿಗೆ ಮೀಸಲು. ಅವರು ಗರ್ಭಸ್ಥ ಶಿಶುವಾಗಿರುವಾಗಲೂ ತಾಯಿ `ಪೂರ್ಣಮದಃ ಪೂರ್ಣಮಿದಂ' ಎಂಬ ಮಂತ್ರವನ್ನೂ `ಭದ್ರಂ ಕರ್ಣೇಭಿಃ ಎಂಬ ಮಂತ್ರವನ್ನೂ' ಜಪಿಸುತ್ತಿರುತ್ತಾರೆ. ಜನನ ಕಾಲದಲ್ಲಿ ನಾಳಚ್ಛೇದಕ್ಕೆ ಮುಂಚೆ ತಂದೆ ಶಿಶುವಿನ ಬಲಭುಜವನ್ನು ಮುಟ್ಟಿ ಸೂಕ್ತ ಮಂತ್ರ ಹೇಳಿ ಅದಕ್ಕೇ ಮೇಧಾಜನನವಾಗುತ್ತದೆ. ದೇವರಾತರ ಮಿತ್ರ ಬ್ರಹ್ಮಜ್ಞ, ಬುಡಿಲರೂ ಯಾಜ್ಞವಲ್ಕ್ಯರ ತಾಯಿ ತಂದೆಯರೊಡನೆ ನಿಂತು ಯಾಜ್ಞವಲ್ಕ್ಯರಿಗೆ ಬಾಲ್ಯದಲ್ಲಿ ವಿಧಿವತ್ತಾದ ಎಲ್ಲ ಸಂಸ್ಕಾ

ರಗಳೂ ನಡೆಸಲ್ಪಡುತ್ತವೆ. ತಾಯಿಯಿಂದಲೇ ಪ್ರೇಯಸ್ಸಿಗಿಂತ ಶ್ರೇಯಸ್ಸು ಹೇಗೆ ಶ್ರೇಷ್ಠ, ಅಪೇಕ್ಷಣೀಯ ಎನ್ನುವ ಪಾಠ ಅವರಿಗಾಗುತ್ತದೆ. ಬುಡಿಲರು ಬ್ರಾಹ್ಮಣ್ಯಕ್ಕೆ ಅಪರಿಗ್ರಹದ ಅಗತ್ಯ ವನ್ನು ಕುರಿತು ಬೋಧಿಸುತ್ತಾರೆ. ತಾಯಿಯಿಂದ ನಚಿಕೇತನ ಕತೆಯಂತಹ ಕತೆಯನ್ನು ಕೇಳುವುದೆಂದರೆ ಸಹಜವಾಗಿಯೇ ಬಾಲಕ ಯಾಜ್ಞವಲ್ಕ್ಯರಿಗೆ ಎಲ್ಲಿಲ್ಲದ ಆಸಕ್ತಿ. ಅಗ್ನಿ ವಾಯು ಆದಿತ್ಯರು ಬೇರೆ ಬೇರೆ ಆದಾಗ ಜಗತ್ತು ಸೃಷ್ಟಿಯಾಗುವುದೆಂದೂ ಅವರೆಲ್ಲರೂ ನಿಜವಾಗಿ ಒಬ್ಬರೇ ಎನ್ನುವ ಅರಿವು ಪೂರ್ಣತ್ವದ ಜ್ಞಾನವೆಂದೂ ಅವರಿಗೆ ಹೋಮ ಧೇನುವಿನಿಂದಲೇ ಉಪದೇಶವಾಗಿ ಅಗ್ನಿಪುರುಷನ ದರ್ಶನವಾಗುವುದಲ್ಲದೆ ಅವರ ಮೈಯಿಂದ ತೇಜಸ್ಸು ವಿಸರಣವಾಗಿ ಅವರು ವಿಪ್ರಾವಸ್ಥೆಯನ್ನು ಉಪನಯನ ಪೂರ್ವವೇ ಮುಟ್ಟುತ್ತಾರೆ. ತಂದೆಯಿಂದ ಗಾಯತ್ರಿ ಮಂತ್ರೋಪದೇಶವೂ ದೇವತಾ ರಾಧನೆಗೆ ಸ್ವತಂತ್ರ ಅಧಿಕಾರವೂ ಉಪನಯನ ಕಾಲದಲ್ಲಿ ಅವರಿಗೆ ಪ್ರಾಪ್ತವಾಗುತ್ತದೆ. ಪಿತ್ರಾಶಿಷ್ಟ ರಾಗುವ ಕಾಲ ಮುಗಿದು ಅವರು ಹೆಚ್ಚಿನ ವೇದಾಧ್ಯಯನಕ್ಕಾಗಿ ವೈಶಂಪಾಯನ ಮಹರ್ಷಿಗಳ ಗುರು ಕುಲಕ್ಕೆ ತೆರಳಿ ಅವರಲ್ಲಿ ಶಿಷ್ಯತ್ವವನ್ನು ವಹಿಸಿಕೊಳ್ಳುತ್ತಾರೆ.

ಈ ಕಾಲದಲ್ಲಿ ಅವರ ಜೀವನ ಒಂದು ಮಹತ್ವದ ತಿರುವನ್ನು ಪಡೆದುಕೊಳ್ಳುತ್ತದೆ. ವೇದಾಧ್ಯಯನವೇನೋ ಸಾಂಗವಾಗಿ ಸಾಗುತ್ತದೆ. ಆದರೆ ಒಮ್ಮೆ ಯಾವುದೋ ಕಾರಣಕ್ಕೆ ಯಾಜ್ಞ ವಲ್ಕ್ಯರ ಮೇಲೆ ವೈಶಂಪಾಯನರು ಸಿಟ್ಟಾಗಿ ತಾವು ಹೇಳಿಕೊಟ್ಟಿದ್ದ ವೇದವನ್ನು ಹಿಂದಕ್ಕೆ ಕೊಡುವಂತೆ ಯಾಜ್ಞವಲ್ಕ್ಯರಿಗೆ ಆದೇಶಿಸುತ್ತಾರೆ. ಯಾಜ್ಞವಲ್ಕ್ಯರು ಅದನ್ನು ಆಜ್ಞಾನುಸಾರ ವಮನ ಮಾಡುತ್ತಾರೆ. ಅದನ್ನು ವೈಶಂಪಾಯನರ ಶಿಷ್ಯರು ತಿತ್ತಿರಿ ಪಕ್ಷಿಗಳ ರೂಪದಲ್ಲಿ ಸೇವಿಸುತ್ತಾರೆ. ಇದೇ ಕೃಷ್ಣ ಯಜುರ್ವೇದ. ಹೀಗೆ ಪ್ರತೀತವಾಗಿರುವ ಕತೆಯನ್ನು ದೇವುಡು ತಮ್ಮ ಕಾದಂಬರಿಯಲ್ಲಿ ಬೇರೆಯೇ ರೀತಿಯಲ್ಲಿ ಚಿತ್ರಿಸಿ ವೈಶಂಪಾಯನರು ದೇವತೆಗಳ ಇಚ್ಛೆಯಂತೆ ಮಾತ್ರ ಹಾಗೆ ವರ್ತಿಸಿದರು ಎಂದು ತೋರಿಸುತ್ತಾರೆ. ಈ ಭಾಗ ದೇವುಡು ಅವರ ಜೀವನ ದರ್ಶನವನ್ನು ಮಾರ್ಮಿಕವಾಗಿ ನಮಗೆ ಮನ ಗಾಣಿಸುತ್ತದೆ. ವೈಶಂಪಾಯನರಿಗೆ ಸ್ವಪ್ನದಲ್ಲಿ, ಶ್ರುತಿ ಭಗವತಿ ಕಾಣಿಸಿಕೊಂಡು ಹೀಗೆ ತಿಳಿಸುತ್ತಾರೆ. `ಇಳಿಜಾರಿನಲ್ಲಿಟ್ಟಿರುವ ಪದಾರ್ಥ ಜಾತವು ತನ್ನ ಭಾರದಿಂದ ತಾನೇ ಜಾರುವಂತೆ ಸೃಷ್ಟಿಕ್ಷಣದಿಂದ ದೂರವಾಗುತ್ತಾ ಬಂದ ಹಾಗೆಲ್ಲಾ ಈ ಜಗತ್ತು ಜಡವಾಗುತ್ತ ಬರುವುದು... ಯಾರು ತಮಗೆ ಏನು ತೋರಿಸಿದರೆ ಅದೇ ಬ್ರಹ್ಮವೆನ್ನುತ್ತಿದ್ದಾರೆ. ಹೀಗೆ ಏಕದೇಶವಾಗಿ ನಡೆಯುವ ಬ್ರಹ್ಮೋಪಾಸನೆಯೇ ಜಗತ್ತಿನ ವಿನಾಶಕ್ಕೆ ಕಾರಣವು. ಹಾಗೆ ಏಕದೇಶವಾಗಿ ನಡೆಯದೇ ಬ್ರಹ್ಮೋಪಾಸನವು ಯಥಾವತ್ತಾಗಿ ಪೂರ್ಣವಾಗಿ ನಡೆಯುವುದೇ ಜಗತ್ತಿನ ಉದ್ಧಾರವು'. ಈ ಉದ್ಧಾರ ಕಾರ್ಯಕ್ಕಾಗಿ ಸಪ್ತರ್ಷಿ ಕಲ್ಪ ನಾದ ಯಾಜ್ಞವಲ್ಕ್ಯನನ್ನು ಭೂಮಿಗೆ ಕಳುಹಿಸಲಾಗಿದೆಯೆಂದೂ ಇದೇ ಕಾರ್ಯಾರ್ಥವಾಗಿ ಅವನನ್ನು ಅಕಾರಣವಾಗಿ ವೈಶಂಪಾಯನರು ಬಿಡುಗಡೆ ಮಾಡಬೇಕೆಂದೂ ಭಗವತಿಯವರ ಆಣತಿ. `ದೇವತೆ ಗಳು ನಿನ್ನನ್ನು ಕೇಳದೆಯೂ ಮಾಡಬಲ್ಲರು. ಆದರೂ ನೀನು ಒಪ್ಪಿದರೆ ನಿನಗೂ ಆ ಕಾರ್ಯದಲ್ಲಿ ಒಂದು ಪಾಲು' ಎಂದು ಶ್ರುತಿ ಭಗವತಿ ನಿರ್ದೇಶಿಸುತ್ತಾರೆ. ಮುಂದೆ ಯಾಜ್ಞವಲ್ಕ್ಯರು ತಮ್ಮ ಉಪ ನಿಷದ್ವಾಕ್ಯಗಳ ಹಿನ್ನೆಲೆಯಲ್ಲಿ ಹೇಳುತ್ತಾರೆ, `ಪ್ರಪಂಚ ಈಶ್ವರನದು, ಅವನವರಾಗಿ ದೇವತೆಗಳು ಇದನ್ನು ಆಳುತ್ತಿರುವಾಗ ಆದದ್ದೆಲ್ಲಾ ಒಳ್ಳೆಯದಕ್ಕೇ ಅಲ್ಲವೆ?' ಇಂಥ ದೈವಶ್ರದ್ಧೆ, ಆಶಾವಾದಿತ್ವ, ಆಸ್ತಿಕತೆ ದೇವುಡು ಅವರ ಆರ್ಷೇಯ ದರ್ಶನದ ವೈಶಿಷ್ಟ್ಯ.

ಈ ಮಹತ್ವದ ಘಟನೆ ಯಾಜ್ಞವಲ್ಕ್ಯರು ಕೃಷ್ಣ ಯಜುರ್ವೇದವನ್ನು ಬಿಟ್ಟುಕೊಟ್ಟು ಶುಕ್ಲ ಯಜುರ್ವೇದವನ್ನು ಪಡೆದುಕೊಳ್ಳುವ ಕಡೆ ಅವರನ್ನು ಪ್ರೇರೇಪಿಸುತ್ತದೆ. ಗುರುಕುಲದಿಂದ ಹಿಂದಿರುಗಿದ ಅವರು ಕೆಲವು ಕಾಲ ತಂದೆಯವರೊಂದಿಗಿದ್ದು ವೇದಾಧ್ಯಯನ ಮುಂದುವರಿಸಿ ಸಾಮಕರಾದ ಮಹರ್ಷಿ ಉದ್ದಾಲಕರ ಗುರುಕುಲವನ್ನು ಸೇರಿಕೊಳ್ಳುತ್ತಾರೆ. ಇಲ್ಲಿನ ಅವರ ಮಹತ್ಸಾಧನೆ ಕಾದಂಬರಿಯ ಮಧ್ಯದ ಮೂರನೇ ಭಾಗವನ್ನು ಆಕ್ರಮಿಸುತ್ತದೆ. ಇದನ್ನೇ ಕಾದಂಬರಿಯ ಹೃದಯವೆನ್ನಬಹುದು. ದೇವುಡು ಅವರ ವೇದವೇದಾಂತ ಪ್ರಜ್ಞೆ, ಅವರ ಅನುಭವಗಳ ಸಂಸ್ಕಾರ ಹಾಗೂ ಅವರ ಅದ್ಭುತ ಕಲ್ಪನಾಶಕ್ತಿಗಳು ಇಲ್ಲಿನ ಅತೀಂದ್ರಿಯ ದರ್ಶನಗಳಲ್ಲಿ ಉಜ್ವಲವಾಗಿ ಮೆರೆದಿವೆ. ಅವಸ್ಥಾ ಪರಿವೀಕ್ಷಣೆಯಿಂದ ಸಾಕ್ಷೀದರ್ಶನ, ಪಂಚಾತ್ಮ ಸಂಕ್ರಮಣ, ಶಚೀಂದ್ರದರ್ಶನ, ಪಂಚಭೂತ ದರ್ಶನ, ಆದಿತ್ಯಾನುಗ್ರಹ ಇವು ಕ್ರಮಪ್ರಾಪ್ತವಾಗಿ ಯಾಜ್ಞವಲ್ಕ್ಯರನ್ನು ವೇದವಲ್ಕ್ಯರನ್ನಾಗಿಸುತ್ತದೆ. ಜಾಗ್ರತ್ತು ಸುಷುಪ್ತಿ ಇವೆರಡು ಅವಸ್ಥೆಗಳೂ ಇದ್ದೂ ಇಲ್ಲವಾದಂತಾದಾಗ ಅವರಿಗೆ ತುರೀಯಾವಸ್ಥೆಯಲ್ಲಿ ಸಾಕ್ಷೀದರ್ಶನವಾಗುತ್ತದೆ. ತತ್ವಜ್ಞಾನದ ಮೂಲಕ ಅದು ಅವರನ್ನು ಮಹಾದರ್ಶನಕ್ಕೊಯ್ಯುತ್ತದೆ.

ಬ್ರಹ್ಮವಿದ್ಯೆಯನ್ನು ಧಾರಣ ಮಾಡುವ ಶಕ್ತಿ ಅಂಗಾಂಗಗಳಿಗೊದಗಿ ಬರುವಂತೆ ಇಂದ್ರ ದಂಪತಿಗಳು ಕಾಣಿಸಿಕೊಂಡು ಯಾಜ್ಞವಲ್ಕ್ಯರನ್ನು ಅನುಗ್ರಹಿಸುತ್ತಾರೆ. ಯಾಜ್ಞವಲ್ಕ್ಯರು ಅನ್ನಮಯ, ಪ್ರಾಣಮಯ, ಮನೋಮಯ ಕೋಶಗಳನ್ನು ದಾಟುತ್ತಾರೆ. ಸತ್ಯ ಸ್ವರೂಪದ ಬಾಹ್ಯರೂಪವಾದ ಪೃಥ್ವೀ ದೇವತೆಯು ಅಂಧಕಾರಾವೃತೆಯಾದರೂ ದೀಪ್ತ ನಯನೆಯಾಗಿ ಕಾಣಿಸಿಕೊಂಡು ಅವರಿಗೆ ಉಡ್ಡಯನ ಶಕ್ತಿಯನ್ನು ನೀಡುತ್ತಾಳೆ. ಮೇಘಮಂಡಲದಲ್ಲಿ ಜಲದೇವತೆಯೂ ಇನ್ನೂ ಮೇಲೆ ಅಗ್ನಿಪುರುಷನೂ ದೃಗ್ಗೋಚರರಾಗುತ್ತಾರೆ. ಅವರ ಶರೀರ ಹೆಚ್ಚು ಹೆಚ್ಚು ಶುದ್ಧವಾಗುತ್ತ ಲಘುತರ ಲಘುತಮವಾಗುತ್ತ ಗಾಜಿನಂತಾಗಿ, ತೇಜಃಫಲಕದಂತಾಗಿ ಅವರು ವಾಯುಮಂಡಲಕ್ಕೇರಿದಾಗ ಅಂಗಾಂಗ ಶಕ್ತಿಗಳಿದ್ದೂ ಅಂಗಾಂಗಗಳಿಲ್ಲದಂತಾಗಿ ವಾಯುವಿನ ರೂಪರಹಿತತೆಯ ದರ್ಶನವಾಗಿ ಶಬ್ದಗುಣಕವಾದ ಆಕಾಶದಲ್ಲಿ ಓಂಕಾರ ಸ್ವರೂಪದ ಅನುಭವ ಅವರಿಗಾಗುತ್ತದೆ. ಇಲ್ಲಿನ ವಿಲಯನ ಗತಿಯನ್ನು ಅಸ್ಮಿತಾ ವೃತ್ತಿಯಿಂದ ತಡೆದುಕೊಂಡು ಅವರು ಕ್ರಮಕ್ರಮವಾಗಿ ಭಾರವಾಗುತ್ತ ಮೊದಲಿನ ವಾಸ್ತವಿಕ ದೇಹಸ್ಥಿತಿಗೆ ಮರಳುತ್ತಾರೆ. ಮುಂದೆ ಸವಿತೃದೇವತೆ ಕಾಣಿಸಿಕೊಂಡು ಪಂಚಭೂತಗಳನ್ನು ಕೂಡಿಸುವ ಹಾಗೂ ಬಿಡಿಸುವ ಕಾಲನ ದರ್ಶನವನ್ನು ಅನುಗ್ರಹಿಸುತ್ತಾನೆ. ಕಾಲ ದೇಶ ವರ್ತಮಾನಗಳ ಅಡ್ಡಿಗಳು ಇನ್ನಿಲ್ಲವಾಗಿ ಯಾಜ್ಞವಲ್ಕ್ಯರು ಸರ್ವಜ್ಞರಾಗುತ್ತಾರೆ. ಅವರ ಶರೀರ ಅತ್ಯಂತ ಶುದ್ಧವಾಗಿ ಪದ್ಮಗಂಧಿಯಾಗುತ್ತದೆ; ಸಾತ್ವಿಕತೆಯಿಂದ ದೇವಾಯತನವಾಗುತ್ತದೆ. ಮುಂದೆ ಒಂದು ವರ್ಷಕಾಲದ ಆದಿತ್ಯೋಪಾಸನೆಯ ಮುಕ್ತಾಯದಲ್ಲಿ ಅವರಿಗೆ ಕೆಂಡದಂತಹ ಕುದುರೆಯ ರೂಪದಲ್ಲಿ ಆದಿತ್ಯದೇವನ ದರ್ಶನವಾಗುತ್ತದೆ. ಈ ಮಹಾದರ್ಶನ ಒಂದು ವೇದ, ಒಂದು ಬ್ರಾಹ್ಮಣ, ಒಂದು ಉಪನಿಷತ್ತನ್ನು ಅವರು ಜಗತ್ತಿಗೆ ನೀಡಲು ನೆರವಾಗುತ್ತದೆ. ವಾಜಿರೂಪದಿಂದ ಆದಿತ್ಯ ಅನುಗ್ರಹಿಸಿದುದರಿಂದ ಅವರು ನೀಡುವ ಸಂಹಿತೆ ವಾಜಸನೇಯ ಸಂಹಿತೆ ಎಂದಾಗುತ್ತದೆ. ಉದ್ದಾಲಕರ ನಂತರ ಅವರೇ ಈ ಗುರುಕುಲಕ್ಕೆ ಭಗವಾನರಾಗುತ್ತಾರೆ.

ಲೋಕವಾಸನೆ

ಈ ಮಧ್ಯದಲ್ಲಿ ಯಾಜ್ಞವಲ್ಕ್ಯರು ಸಂಸಾರಿಯಾಗಿರುತ್ತಾರೆ. ಬುಡಿಲರ ಮೊಮ್ಮಗಳು ಕಾತ್ಯಾಯಿನಿ ವಯಸ್ಸಿನಲ್ಲಿ ಕಿರಿಯಳಾದರೂ ಅವರ ಸೇವೆಯೇ ತನ್ನ ಕರ್ತವ್ಯವೆಂದು ಅರಿತು ಅವರ ನೆರಳಿನಂತೆ ನಡೆದುಕೊಳ್ಳುತ್ತಾಳೆ, ಅವರಿಗೆ ಪಯೋವ್ರತವಿರುವಾಗ ಅವಳೂ ಅದೇ ವ್ರತವನ್ನು ಆಚರಿಸುತ್ತಾಳೆ. ಗುರುಕುಲದ ಭಗವತಿಯಾಗಿ ಅವಳು ಆಶ್ರಮವಾಸಿಗಳನ್ನು ಮಕ್ಕಳಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ಅವಳು ಅವರ ಧರ್ಮಪತ್ನಿಯಾದಂತೆ ಬ್ರಹ್ಮವಾದಿನಿಯಾದ ಮೈತ್ರೇಯಿ ಅವರ ಮೋಕ್ಷ ಪತ್ನಿಯಾಗುತ್ತಾಳೆ. ತನಗಿಂತ ವಯಸ್ಸಿನಲ್ಲಿಯೂ ವಿದ್ಯೆಯಲ್ಲಿಯೂ ಹಿರಿಯಳಾದ ಅವಳನ್ನು ಕಾತ್ಯಾಯಿನಿ, ಅಕ್ಕ ಎಂದು ಗೌರವಿಸುತ್ತಾಳೆ. ಕಡೆಯಲ್ಲಿ ಮೈತ್ರೇಯಿಯನ್ನು ಯಾಜ್ಞವಲ್ಕ್ಯರು ಸಂನ್ಯಾಸ ಸ್ವೀಕಾರಕ್ಕೆ ಮುನ್ನ ಅವಳಿಗೆ ತಾವು ಏನನ್ನು ಕೊಟ್ಟು ಹೋಗಬೇಕೆಂದು ಪ್ರಶ್ನಿಸಿದಾಗ ಅವಳು ಅವರಿಂದ ಬೇಡುವುದು ಅವರ ಆಸ್ತಿಯಲ್ಲಿ ಭಾಗವನ್ನಲ್ಲ, ಅಮೃತತ್ವಕ್ಕೆ ಒಯ್ಯುವ ಜ್ಞಾನವನ್ನು. ಒಬ್ಬನು ಇತರರನ್ನು ಪ್ರೀತಿಸುವುದು ತನ್ನ ವೈಯಕ್ತಿಕ ಹಿತದೃಷ್ಟಿಯಿಂದ, `ಆತ್ಮನಃ ಕಾಮಾಯ' ಎಲ್ಲರೂ ಎಲ್ಲದಕ್ಕೂ ಆಸೆ ಪಡುವುದೂ ಇದೇ ಕಾರಣಕ್ಕಾಗಿ. ಮನುಷ್ಯನು ತಾನು ಪೂರ್ಣ ಎನ್ನುವುದನ್ನು ಮರೆತು ತನ್ನ ಅಪೂರ್ಣತೆಯ ಭ್ರಾಂತಿಯನ್ನು ಪರಿಹರಿಸಿಕೊಳ್ಳಲು ಹೀಗೆ ಇತರರಿಗಾಗಿ, ಬೇರೆಯದಕ್ಕಾಗಿ ಹಂಬಲಿಸುತ್ತಾನೆ. ತಾನು ಪೂರ್ಣ ಎಂಬ ಅರಿವು ಮೂಡಿದಾಗ ಅವನು ಮೃತ್ಯುವನ್ನು ದಾಟುತ್ತಾನೆ. ಆತ್ಮನ ಅಮೃತತ್ವ ಪೂರ್ಣತ್ವಗಳ ಜ್ಞಾನವೇ ಮಹಾದರ್ಶನ.

ವಿದೇಹರಾಜ ಜನಕನಿಗೆ ಎರಡು ಮಹದಾಶೆಗಳು, ಒಂದು ಆತ್ಮಜ್ಞಾನ ಇನ್ನೊಂದು ಕುರುಪಾಂಚಾಲರಲ್ಲಿರುವಂತೆ ವಿದೇಹದಲ್ಲಿಯೂ ಬ್ರಹ್ಮ ವಿದ್ಯಪರಿಣತನಾದ ಮಹಾನುಭಾವನು ಇರಬೇಕು ಎನ್ನುವುದು. ಈ ಆಸೆ ಫಲಿಸುವುದು ಯಾಜ್ಞವಲ್ಕ್ಯರ ಬ್ರಹ್ಮಜ್ಞತೆಯಿಂದ. ಅವರು ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಅವನು ಕೇಳಿಕೊಂಡಾಗ ಅವರು ಪರೀಕ್ಷಿಸದೆ ಗುರುವನ್ನೂ ಯಾರೂ ಆಯ್ಕೆ ಮಾಡಿಕೊಳ್ಳಬಾರದೆಂದು ಹೇಳುತ್ತಾರೆ. ಜನಕರಾಜ ವಿದ್ವತ್ಸಭೆಯನ್ನು ಕರೆಯುತ್ತಾನೆ. ಇದಕ್ಕೆ ತಗುಲುವ ಒಂದು ಕೋಟಿ ಹೊನ್ನಿನ ಖರ್ಚನ್ನು ದೇವತೆಗಳೇ ವಹಿಸಿಕೊಳ್ಳುತ್ತಾರೆ. ಬೃಹಸ್ಪತಿಗಳು ಸ್ವಪ್ನದಲ್ಲಿ ರಾಜನಿಗೆ ತಿಳಿಸಿಕೊಟ್ಟಂತೆ ಅರಮನೆಯ ಉದ್ಯಾನದಲ್ಲಿ ಒಂದು ನಿಧಿ ಈ ಕಾರಣಕ್ಕಾಗಿ ದೊರಕುತ್ತದೆ. ದೇಶವಿದೇಶಗಳಿಂದ ಬ್ರಹ್ಮವಿದ್ಯಾಸಂಪನ್ನ ವಿದ್ವಾಂಸರುಗಳು ಆಗಮಿಸುತ್ತಾರೆ. ಯಾಜ್ಞವಲ್ಕ್ಯರು ಸಾವಿರ ಆಕಳುಗಳ ಗೋಧನವನ್ನು ತಾವು ಒಪ್ಪಿಸಿಕೊಂಡು ತಮಗೆ ಸವಾಲು ಹಾಕುವ ಎಲ್ಲ ವಿದ್ವಾಂಸರೊಡನೆ ಯಶಸ್ವಿಯಾಗಿ ವಾಗ್ವಾದ ನಡೆಸುತ್ತಾರೆ. ರಾಜಪುರೋಹಿತ ಅಶ್ವಲರು, ಭುಜ್ಯು, ಉಷಸ್ತರು, ಕಹೋಲರು, ಉದ್ದಾಲಕ ಅರುಣಿಗಳು ಹಾಗೂ ಬ್ರಹ್ಮವಾದಿನಿ ಗಾರ್ಗಿ ಅವರಿಗೆ ಜಟಿಲ ಪ್ರಶ್ನೆಗಳನ್ನು ಹಾಕುತ್ತಾರೆ, ಎಲ್ಲರಿಗೂ ಸಮರ್ಪಕ ಉತ್ತರಗಳನ್ನಿತ್ತು ಯಾಜ್ಞವಲ್ಕ್ಯರು ತಮ್ಮ ಸರ್ವಜ್ಞತ್ವವನ್ನು ಸ್ಥಾಪಿಸುತ್ತಾರೆ. ಕಡೆಯಲ್ಲಿ ಜನಕರಾಜನ ಈವರೆಗಿನ ಗುರುಗಳಾದ ಕುರುಪಾಂಚಾಲರ ವಿದಗ್ಧ ಶಾಕಲ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತು ಖಂಡತೆ ಅಖಂಡತೆಯಾಗುವುದರ ಬಗ್ಗೆ ಅವರನ್ನೇ ಯಾಜ್ಞವಲ್ಕ್ಯರು ಪ್ರತಿ ಪ್ರಶ್ನಿಸಿದಾಗ ಅವರು ತಿಳಿಯದೆನ್ನುತ್ತಾರೆ. ಆಗ ಪುರುಷತತ್ವದ ಅಗ್ನಿಗೆ ಕೆಣಕಿದಂತಾಗಿ ಶಾಕಲ್ಯರು ವಿದಗ್ಧರಾಗಿ ಹೋಗುತ್ತಾರೆ. ಯಾಜ್ಞವಲ್ಕ್ಯರಿಗೇ ಸರ್ವಜ್ಞಾಭಿಷೇಕವಾಗುತ್ತದೆ.

ಶುಕ್ಲಯಜುರ್ವೇದ, ಶತಪಥ ಬ್ರಾಹ್ಮಣ, ಈಶಾವಾಸ್ಯ ಉಪನಿಷತ್ತು ಇವುಗಳ ವ್ಯಾಖ್ಯೆ ಮತ್ತು ಜನಕರಾಜನ ವಿದ್ವತ್ಸಭೆಯ ಚರ್ಚೆಗಳು ದೇವುಡು ಅವರ ಕಾದಂಬರಿಯ ಕಡೆಯ ಮೂರನೆ ಒಂದು ಭಾಗವನ್ನು ವಿಶಿಷ್ಟಗೊಳಿಸುತ್ತದೆ. ಕಡೆಯಲ್ಲಿ ಕಾತ್ಯಾಯಿನಿ ಹಾಗೂ ಯಾಜ್ಞವಲ್ಕ್ಯರು ತಮ್ಮ ನಂತರ ಗುರುಕುಲಗಳನ್ನು ನಡೆಸುವಂತೆ ಅವರು ನಿಯಮಿಸಿದ ಅವರ ಶಿಷ್ಯರು, ಕಾಣ್ವಮಾಧ್ಯಂದಿನರು ಇನ್ನೂ ಕೆಲವು ದಿನಗಳು ತಮ್ಮೊಡನಿದ್ದು ತಮಗೆ ಮಾರ್ಗದರ್ಶನದ ಅನುಗ್ರಹ ಮಾಡಬೇಕೆಂದು ಕೇಳಿಕೊಂಡಾಗ ಅವರು ಸಂನ್ಯಾಸಾಶ್ರಮ ಸ್ವೀಕಾರವನ್ನು ಸ್ವಲ್ಪಕಾಲ ಮುಂದೂಡುವುದರೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ.

ಸಂನ್ಯಾಸದ ವಿಷಯದ ದೇವುಡು ಅವರ ಜಿಜ್ಞಾಸೆ ಸ್ವಾರಸ್ಯಪೂರ್ಣ. ಕಡೆಕಡೆಯಲ್ಲಿ ಜೀವನ ನಾಟಕವನ್ನು ಕುರಿತು ಭಗವಾನರ ತಾಯಿ ತಮ್ಮ ದೃಷ್ಟಿಯನ್ನು ಹೀಗೆ ಮಗನ ಮುಂದಿಡುತ್ತಾರೆ, `ನೀನು ಸಾವಿರ ಹೇಳು, ಮಗನೆ! ಈ ತಾಯಿ-ಮಗ, ಗಂಡ-ಹೆಂಡತಿ ಎಂಬ ನಾಟಕವೇ ಚೆನ್ನಾಗಿದೆ, ಇದು ನಿಲ್ಲುವುದೂ ಉಂಟೇನು?' ಬ್ರಹ್ಮರ್ಷಿಗಳು ನೀಡುವ ಸಮಾಧಾನ, `ಇದು ನಿಲ್ಲುವುದಿಲ್ಲ. ಆದರೆ ನಮಗೆ ಸಾಕೆಂದರೆ ನಾವು ಎದ್ದು ಹೋಗಬಹುದು'. ಅವರ ಮಾತಿನಲ್ಲಿಯೇ ಹೇಳುವುದಾದರೆ, `ತೃಪ್ತಿಯ ಗುರುತಾಗಿ ನಮ್ಮ ಸಂನ್ಯಾಸ.' ವೈರಾಗ್ಯವಾಗಲೀ ಸಂನ್ಯಾಸವಾಗಲೀ ನಿಷೇಧಾತ್ಮಕವಲ್ಲ.

`ಈಶಾವಾಸ್ಯಮಿದಂ ಸರ್ವಂ' ಎನ್ನುವ ವಾಕ್ಯಾನುಸಾರ ಜಗತ್ತಿನ ಎಲ್ಲರೂ ಈಶ್ವರಾಂಶ ಸಂಭೂತರು, ಈಶ್ವರಾಂಶ ವಿಶಿಷ್ಟರು. ಎಲ್ಲರೂ ಸಮಾನರು. ಸ್ತ್ರೀಯರು ಬೇರೆಯಲ್ಲ, ಪುರುಷರು ಬೇರೆಯಲ್ಲ, ಬ್ರಾಹ್ಮಣರು ಬೇರೆಯಲ್ಲ, ಅಬ್ರಾಹ್ಮಣರು ಬೇರೆಯಲ್ಲ. ಸ್ಥಾವರ ಬೇರೆಯಲ್ಲ, ಜಂಗಮ ಬೇರೆಯಲ್ಲ. ದೇವುಡು ಅವರು ವಿವರಿಸುವಂತೆ ಬ್ರಾಹ್ಮಣ ಅಬ್ರಾಹ್ಮಣ ಶಬ್ದಗಳು ವ್ಯಾವಹಾರಿಕ ಶಬ್ದಗಳು, ಪಾರಮಾರ್ಥಿಕವಾಗಿ ನೋಡುವಾಗ ಇಂಥ ಭೇದಗಳು ಭ್ರಾಮಿಕ. `ಇಹದಲ್ಲಿ ಧರ್ಮ, ಪರದಲ್ಲಿ ಬ್ರಹ್ಮ-ಇದೇ ಮಹಾದರ್ಶನ!

`ಮಹಾಬ್ರಾಹ್ಮಣ'ದ ವಿಶ್ವಾಮಿತ್ರರು, `ಮಹಾಕ್ಷತ್ರಿಯ'ದ ನಹುಷಚಕ್ರವರ್ತಿ, `ಮಹಾದರ್ಶನ'ದ ಯಾಜ್ಞವಲ್ಕ್ಯರು–ದೇವುಡು ಅವರ ಅದ್ಭುತ ಕಲ್ಪನಾಶಕ್ತಿ ತಡೆದು ನಿಲ್ಲಿಸಿರುವ ಹೈಮಾಚಲ ಮಹೋನ್ನತೆಯ ಭವ್ಯಮೂರ್ತಿಗಳು.

★

`ಮಹಾದರ್ಶನ' : ಒಂದು ಸ್ಪಂದನ

ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ

`ಮಹಾದರ್ಶನ' ದೇವುಡು ನರಸಿಂಹ ಶಾಸ್ತ್ರಿಗಳು ಬರೆದ ಮಹಾಕಾದಂಬರಿ. ಅಚ್ಛೋದ ಸರಸ್ಸಿನಲ್ಲಿ ಮೀಯುತ್ತಿರುವಂಥ ಅನುಭವವಾಗುತ್ತದೆ–ಇದನ್ನು ಓದುವಾಗ, ವೇದ-ಉಪನಿಷತ್ತುಗಳ ಕಾಲಘಟ್ಟದ ಬದುಕನ್ನು ಸಮಗ್ರವಾಗಿ, ತೀವ್ರವಾಗಿ, ಉದಾತ್ತವಾಗಿ ಹಿಡಿದಿಡುವ ಪ್ರಯತ್ನವಿದೆ ಇಲ್ಲಿ. ಇದು ಬರಿ ಒಂದು ಪೌರಾಣಿಕ ಕಾದಂಬರಿ ಅಲ್ಲ. ಇದೊಂದು ಆಧ್ಯಾತ್ಮಿಕ ಕಾದಂಬರಿ, ಉಪನಿಷತ್ಕಾದಂಬರಿ ಅಥವಾ ತಾತ್ವಿಕ ಕಾದಂಬರಿ. ದೇವುಡು ಅವರು ತಮ್ಮ ಬಲಗಾಲನ್ನು ಕಳೆದುಕೊಂಡ ದೈಹಿಕ ದಾರುಣತೆಯಲ್ಲಿ ಕೂತು ಇಂಥ ಆತ್ಮಯೋಗದ ಫಲದಂಥ ಕೃತಿಯನ್ನು ರಚನೆ ಮಾಡಿರುವುದು ಒಂದು ಅಸಾಧಾರಣ ಆಧ್ಯಾತ್ಮಿಕ ಸಾಧನೆ. ಹೆಚ್ಚೂ ಕಡಿಮೆ ಇಂಥದೇ ಅವಸ್ಥೆಯಲ್ಲಿ ಕೂತು ನಿರಂಜನರು ಬರೆದಿರುವ `ಮೃತ್ಯುಂಜಯ' ಕೂಡ `ಮಹಾದರ್ಶನ'ದಷ್ಟೆ ತೀವ್ರತೆ, ಸಮಗ್ರತೆ ಮತ್ತು ಉದಾತ್ತತೆಯುಳ್ಳ ನಮ್ಮ ಕಾಲದ ಇನ್ನೊಂದು ಮಹಾಕಾದಂಬರಿ. ದೇವುಡು ಅವರು ಐದು ಸಾವಿರ ವರ್ಷಗಳ ಹಿಂದಿನ ವೈದಿಕ ಸಂಸ್ಕೃತಿಯನ್ನು ಪಾರಮಾರ್ಥಿಕ ಶ್ರದ್ಧೆಯಿಂದ ಕಂಡು ಚಿತ್ರಿಸಿದರೆ ನಿರಂಜನರು ಐದು ಸಾವಿರ ವರ್ಷಗಳ ಹಿಂದಿನ ಇಜಿಪ್ಷಿಯನ್ ಸಂಸ್ಕೃತಿ-ನಾಗರಿಕತೆಗಳನ್ನು ಸಮಾಜವಾದಿ ಶ್ರದ್ಧೆಯಿಂದ ಕಂಡು ಚಿತ್ರಿಸಿದ್ದಾರೆ. ಈ ದೃಷ್ಟಿಕೋನದ ವ್ಯತ್ಯಾಸ ಒಂದು ಬಿಟ್ಟರೆ ಅವರೆಡೂ ಬದುಕನ್ನು ಸಮಗ್ರವಾಗಿ ತೀವ್ರವಾಗಿ ಉದಾತ್ತವಾಗಿ ಹಿಡಿಯಲು ಹೊರಟಿರುವ ಕೃತಿಗಳು ಎಂಬುದು ಹೋಲಿಕೆಗೆ ದಕ್ಕುವ ಸಂಗತಿ. ದೇವುಡು ಅವರ ಕೊನೆಯ ಕಾದಂಬರಿ, ಅವರ ಮಹಾಕಾದಂಬರಿ `ಮಹಾದರ್ಶನ' ಅವರು ತೀರಿಕೊಂಡ ಮೇಲೆ ಪ್ರಕಟವಾಯಿತು.

ತಾವು ಬೆಳಸಿಕೊಂಡ ಶ್ರದ್ಧೆಯ ಮುಂದಿನ ಮಜಲಾಗಿ `ಮಹಾಸನ್ಯಾಸಿ' ಎಂಬ ಕಾದಂಬರಿಯನ್ನು ಬರೆದು, ಅದರಲ್ಲಿ ಶಂಕರರ ಅದ್ವೈತಸಿದ್ಧಾಂತವನ್ನು ಜನಸಾಮಾನ್ಯರಿಗೆ ತಿಳಿಯುವ ಭಾಷೆಯಲ್ಲಿ ನಿರೂಪಿಸಬೇಕು ಎಂದಿದ್ದರಂತೆ ದೇವುಡು ಅವರು. ಅದೇ ರೀತಿ ನಿರಂಜನರು ಸಹ ನಮ್ಮ ಐತಿಹಾಸಿಕ ಶ್ರದ್ಧೆ, ಸಮಾಜವಾದಿ ದರ್ಶನವನ್ನು ವಿಸ್ತರಿಸಿ ಹೇಳುವಂಥ `ಪ್ರಾಗ್ಭಾರತ' ಅಥವಾ `ಹೆಜ್ಜೆ' ಎಂಬ ಮಹಾ ಕಾದಂಬರಿ ಬರೆಯುವ ಯೋಜನೆ ಹಾಕಿಕೊಂಡಿದ್ದರು. ಇವೆರಡೂ ಕನಸು ಕೈಗೂಡದೆ ಹೋದದ್ದು ಕನ್ನಡ ಸಾಹಿತ್ಯಲೋಕದ ದುರಾದೃಷ್ಟವೆ ಸರಿ. ಮನುಷ್ಯನ ಅನುಭವ ಮಹತ್ವದ ಹಣ್ಣಾಗಿ ಮಾಗಿ ಯಾವುದೊ ದಿವ್ಯ ಹೊಳಹು ನೀಡುವ ಕ್ಷಣದಲ್ಲೆ ಸಾವಿಗೆ ಆ ಹಣ್ಣನ್ನು ಮೆಲ್ಲುವ ಅವಸರವಾಗುವುದು ದೊಡ್ಡ ವಿಪರ್ಯಾಸ.

ತನಗೆ ಬೇಕಾದವರ ಕೃತಿಗಳನ್ನು ಹೊಗಳಿ ಹೊಗಳಿ ಅಟ್ಟಕ್ಕೇರಿಸಿ ಬೆಟ್ಟದ ಮೇಲೆ ಕೂರಿಸುವ ನಮ್ಮ ವಿಮರ್ಶಾಲೋಕ ಯಾಕೆ ದೇವುಡುರವರನ್ನು, ನಿರಂಜನರನ್ನು ಮೂಲೆಗುಂಪುಮಾಡಿ ತನ್ನ ಹಗಲುಗುರುಡುತನವನ್ನು ಜಗಜಹೀರು ಮಾಡಿಕೊಂಡಿದೆ? `ಮಹಾದರ್ಶನ' ಮತ್ತು `ಮೃತ್ಯುಂಜಯ' ಕಾದಂಬರಿಗಳನ್ನು ಓದುವಾಗ `ಮರಳಮಣ್ಣಿಗೆ' ಮತ್ತು `ಮಲೆಗಳಲ್ಲಿ ಮದುಮಗಳು' ಕಾದಂ

ಬರಿಗಳನ್ನ ಓದಿದಾಗ ಆದ ಅನುಭವವೆ ಆಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೂ ಯಾಕೆ ಈ ನಿರ್ಲಕ್ಷ್ಯ? ಈ ನಾಲ್ಕೂ ಕಾದಂಬರಿಗಳು ಬದುಕನ್ನು ಇಡಿಯಾದ ಬೀಸಿನಲ್ಲಿ ಹಿಡಿದು ಕೊಡುತ್ತವೆ. ಬದುಕಿನ ಆಳವಾದ ಅನುಭವಗಳನ್ನು ತೀವ್ರವಾಗಿ ಹಿಡಿದುಕೊಡುತ್ತವೆ. ಬದುಕಿನ ಉದಾತ್ತತೆಗೆ ಮನುಷ್ಯ ಸಂಸ್ಕೃತಿಯ ತಳಪಾಯವಾದ ಉದಾತ್ತತೆಗೆ ಸ್ಪಂದಿಸುತ್ತವೆ. ಭೈರಪ್ಪನವರ `ಪರ್ವ' ಮತ್ತು ಪುಣೇಕರರ `ಅವದೇಶ್ವರಿ' ತೀವ್ರತೆ, ಸಮಗ್ರತೆಗಳನ್ನು ನಂಬುವ ಕೃತಿಗಳಾದರೂ ಬದುಕಿನ ಉದಾತ್ತತೆಯಲ್ಲಿ ಅಷ್ಟಾಗಿ ಶ್ರದ್ಧೆಯಿಲ್ಲದ ಕೃತಿಗಳು.

ದೇವುಡು ಅವರ `ಮಹಾಬ್ರಾಹ್ಮಣ' `ಮಹಾಕ್ಷತ್ರಿಯ' ಮತ್ತು `ಮಹಾದರ್ಶನ'ಗಳನ್ನು ಪೌರಾಣಿಕ ಕಾದಂಬರಿ ತ್ರಿವಳಿ ಎಂದು ಪರಿಗಣಿಸುವ ವಾಡಿಕೆ ಬೆಳೆದಿದೆ. ಇದು ಸರಿಯಲ್ಲ. `ಮಹಾಬ್ರಾಹ್ಮಣ', `ಮಹಾಕ್ಷತ್ರಿಯ' ಪೌರಾಣಿಕ ಕಾದಂಬರಿಗಳೆನ್ನುವುದು ಸರಿಯಾದ ಮಾತು. ಡಾ|| ತಿಪ್ಪೇರುದ್ರ ಸ್ವಾಮಿಗಳು `ಕರ್ತಾರನ ಕಮ್ಮಟ' `ಕದಳಿಯ ಕರ್ಪೂರ' ಮುಂತಾದ ಶರಣ ಕಾದಂಬರಿ ಸರಣಿಗಳಲ್ಲಿ ನೀಡಿರುವಂತೆ, ತ.ರಾ.ಸು ಅವರು ಚಿತ್ರದುರ್ಗದ ಐತಿಹಾಸಿಕ ಕಾದಂಬರಿಗಳಲ್ಲಿ ನೀಡಿರುವಂತೆ ದೇವುಡು ಅವರು `ಮಹಾಬ್ರಾಹ್ಮಣ' `ಮಹಾಕ್ಷತ್ರಿಯ'ಗಳಲ್ಲಿ ಪುರಾಣ ಕಾಲದ ಕತೆಯನ್ನು, ಪೌರಾಣಿಕ ವ್ಯಕ್ತಿಗಳ ವ್ಯಕ್ತಿತ್ವವನ್ನು ಕಣ್ಣಿಗೆ ಕಟ್ಟಿಸುವಂಥ ಚಿತ್ರಣವನ್ನು ನೀಡಿದ್ದಾರೆ. ಅಲ್ಲದೇ ದೇವುಡು ಅವರು ಪೌರಾಣಿಕ ಸಂದರ್ಭಗಳನ್ನೂ ಐತಿಹಾಸಿಕ ಸಂಭಾವ್ಯತೆಯೊಡನೆ ಚಿತ್ರಿಸಬಲ್ಲಂಥವರು. ಆಧುನಿಕ ಬದುಕಿನ ಘಟನೆಗಳಂತೆಯೆ ವಾಸ್ತವವಾದಿ ಶೈಲಿಯಲ್ಲಿ ಪೌರಾಣಿಕ ಸಂದರ್ಭಗಳನ್ನು ಕಡೆದು ನಿಲ್ಲಿಸುವಂಥ ಕಲಾವಂತಿಕೆ ಅವರಲ್ಲಿದೆ. ಆದರೆ ಒಂದು ಶ್ರೇಷ್ಟ. ಕಾದಂಬರಿಗೆ, ಮಹಾಕಾದಂಬರಿಗೆ ಈ ಲಕ್ಷಣಗಳಷ್ಟೇ ಸಾಕಾಗುವುದಿಲ್ಲ.

ಹಾಗೆ ನೋಡಿದರೆ ಕತೆ ಹೇಳುವ ಸಲುವಾಗಿ ಕಾದಂಬರಿ ಬರೆಯುವವ ಪ್ರಥಮದರ್ಜೆ ಕಾದಂಬರಿಕಾರನಾಗುವುದಿಲ್ಲ. ಕಾದಂಬರಿ ಎಂದರೆ ಬದುಕಿನ ಮಹಾದರ್ಶನವೆ ಸರಿ. Novel is a book of Life ಎನ್ನುವಂಥ ಮಾತೊಂದಿದೆ. ಅಂದರೆ ಕಾದಂಬರಿ ಬದುಕನ್ನ ಸಮಗ್ರವಾಗಿ, ತೀವ್ರವಾಗಿ ಉದಾತ್ತವಾಗಿ ಹಿಡಿದುಕೊಡುವ ಒಂದು ಶ್ರೇಷ್ಠ ಕಲಾಕೃತಿ ಅದಕ್ಕೆ ಕತೆ ಹೇಳುವ ಗೀಳು ಇರುವುದಿಲ್ಲ. ಕತೆಯ ಹಂಗೇ ಇಲ್ಲದೆ ಬದುಕನ್ನ ಇಡಿಯಾಗಿ ಹಿಡಿಯ ಹೊರಡುವ ಕಾದಂಬರಿಯಲ್ಲಿ ಬಗೆ ಬಗೆಯ ಕತೆಗಳು ತಂತಾವೆ ಬಂದು ಹೋಗಿಬಹುದು. ಆದರೆ ಕಾದಂಬರಿಕಾರನ ಲಕ್ಷ್ಯ ಆ ಚಿಕ್ಕಪುಳ್ಳೆಗಳ ಮೇಲೆ ಇರುವುದಿಲ್ಲ. ತನ್ನ ಕಾದಂಬರಿ ನೀಡುವ ಒಟ್ಟು ದರ್ಶನದ ದಟ್ಟ ಅನುಭವದ ಮೇಲೆ ಅವನ ದೃಷ್ಟಿ ನೆಟ್ಟಿರುತ್ತದೆ. ಉಪಕತೆಗಳು, ಅನುಭವದ ಶೈಲಿ, ತಂತ್ರ, ಮಂತ್ರ ಎಲ್ಲ ತಂತಾವೆ ಅಲ್ಲಿ ಬಂದು ದುಡಿಯುತ್ತವೆ. ಕಾದಂಬರಿಕಾರ ಸದಾ ಆ ಕಾದಂಬರಿಯ ಆತ್ಮಾನುಸಂಧಾನದಲ್ಲಿ ಇರುತ್ತಾನೆ. ಕಾದಂಬರಿಯ ದೇಹ ತನ್ನಷ್ಟಕ್ಕೆ ತಾನೆ ಎದ್ದು ನಿಲ್ಲುತ್ತದೆ. ಅಂಥ ಕಾದಂಬರಿಗೆ ಮಹಾಕಾದಂಬರಿ ಅನ್ನುತ್ತೇವೆ.

ದೇವುಡು ಅವರ `ಮಹಾದರ್ಶನ' ಇಂಥ ಮಹಾಕಾದಂಬರಿ. ಬದುಕಿನ ಒಟ್ಟು ಛಂದವೆ ಇಲ್ಲಿನ ಬಂಧ. ಒಬ್ಬ ಮಹಾತ್ಮನ ಪಿಂಡ ತಾಯಿಯ ಗರ್ಭದ ಶಿಶುವಾಗಿ ಪ್ರವೇಶಿಸುವಲ್ಲಿಂದ ಅವ ಬೆಳೆದು ಬ್ರಹ್ಮಜ್ಞಾನಿಯಾಗಿ ಪರಿಪೂರ್ಣನಾಗಿ ಬ್ರಹ್ಮದೊಡನೆ ಒಂದಾಗಿ ಬೆಳಗುವಲ್ಲಿನವರೆಗಿನ

ವಿಶ್ರಾಂತಕಥನ ಇಲ್ಲಿದೆ. ಬದುಕಿನ ಬಗೆಬಗೆಯ ಅನುಭವಗಳು ಬಗೆಬಗೆಯ ವ್ಯಕ್ತಿತ್ವಗಳು ಬಗೆ ಬಗೆಯ ಭಾವಲೋಕಗಳು ಇಲ್ಲಿನ ಸರಕು. ನಿರ್ಲಿಪ್ತ, ನಿರಹಂಕಾರಿ, ನಿಷ್ಠುರಿಯಾದ ಯಾಜ್ಞವಲ್ಕನ ವ್ಯಕ್ತಿತ್ವಕ್ಕೆ ಬಹುಶಃ ಇನ್ನೊಂದು ಸಮಾನಾಂತರ ವ್ಯಕ್ತಿತ್ವವೆಂದರೆ ಅಲ್ಲಮ ಪ್ರಭುವಿನದೆ ಎನಿಸುತ್ತದೆ. ಒಂದು ಸಂಹಿತೆ, ಒಂದು ಬ್ರಾಹ್ಮಣ, ಒಂದು ಉಪನಿಷತ್ತುಗಳನ್ನು ಪಡೆದ ಯಾಜ್ಞವಲ್ಕ್ಯ ಕನ್ನಡದ ಉಪನಿಷತ್ತುಗಳೆನಿಸಿಕೊಂಡ ವಚನಗಳ ಸೃಷ್ಟಿಕರ್ತನಾದ ಅಲ್ಲಮನಿಗೆ ಸರಿಸಾಟಿಯೇನೊ ಎನ್ನಿಸುವಂತೆ ಅವನ ವ್ಯಕ್ತಿತ್ವ ನಿರ್ಮಾಣವಾಗಿದೆ `ಮಹಾದರ್ಶನದಲ್ಲಿ. ಮೈತ್ರೇಯಿ ಗಾರ್ಗಿಯರ ಪಾತ್ರಕ್ಕೆ ಪೂರ್ಣ ಪೋಷಣೆ ದಕ್ಕಿಲ್ಲ ಇಲ್ಲಿ. ಅವರನ್ನು ಕುರಿತು ಪ್ರತ್ಯೇಕ ಕಾದಂಬರಿಗಳನ್ನು ಬರೆಯಬಲ್ಲ ಕಾದಂಬರಿ ಗಾರ್ತಿಯರು ಹುಟ್ಟಿ ಬಂದಾಗ ಮತ್ತೊಂದು `ಮಹಾದರ್ಶನ' ಸಾಧ್ಯವಾದೀತು. ಶಿಷ್ಟ ಮತ್ತು ಪರಿ ಶಿಷ್ಟ ethosಗಳು ಪ್ರತ್ಯೇಕತೆ ಮುರಿದು, ಒಂದರೊಳಗೊಂದು ಅವಿನಾಭಾವದಲ್ಲಿ ಬೆರೆತು, ಸಾಂಸ್ಕೃ ತಿಯ ಪೂರ್ಣತ್ವ ಮೂಡುವ ಗಳಿಗೆಯೂ ಬಂದೀತು.

★

ಶ್ರೀ ದೇವುಡು ಅವರ ಕೊನೆಯ ಕೃತಿ

ಶ್ರೀ ಎಲ್. ಸುಬ್ರಹ್ಮಣ್ಯ

`ಮಹಾದರ್ಶನ' ಶ್ರೀ ದೇವುಡು ಅವರ ಕೊನೆಯ ಕೃತಿ. ೧೯೬೭ರಲ್ಲೇ ಬೆಳಕು ಕಂಡ ಈ ಕೃತಿ ಇದುವರೆಗೆ ಹಲವಾರು ಆವೃತ್ತಿಗಳನ್ನು ಕಂಡು, ಅವರ ಮೇರು ಕೃತಿಯೆನಿಸಿದೆ.

`ಮಹಾದರ್ಶನ' ಎಂಬ ಹೆಸರೇ ಮೊದಲು ಕುತೂಹಲ ಹುಟ್ಟಿಸುತ್ತದೆ. ಪುಸ್ತಕ ಕೈಗೆತ್ತಿಕೊಂಡಾಗ, ರಕ್ಷಾಪುಟದಲ್ಲಿ ಕಲಾವಿದ ಶ್ರೀ ಚಂದ್ರನಾಥ್ ಅವರು ಸುಂದರವಾಗಿ ಬಿಡಿಸಿರುವ, ಮಹರ್ಷಿ ಯಾಜ್ಞವಲ್ಕ್ಯರ ವರ್ಣಚಿತ್ರ ನಮ್ಮನ್ನು ಸೆಳೆಯುತ್ತದೆ. ಚಿನ್ಮುದ್ರೆಯನ್ನು ಧರಿಸಿ, ಪದ್ಮಾಸನದಲ್ಲಿ ಕುಳಿತು, ಅರ್ಧನಿಮೀಲಿತ ನೇತ್ರರಾಗಿ, ದಿವ್ಯಾನುಭವವೊಂದರಲ್ಲಿ ಮುಳುಗಿಹೋಗಿರುವ ಪ್ರಶಾಂತ ಮುಖಮುದ್ರೆಯ, ಮಹರ್ಷಿಗಳ ಚಿತ್ರ ಪುಸ್ತಕಕ್ಕೆ ಶೋಭೆಯನ್ನಿತ್ತಿದೆ. ಪುಸ್ತಕದ ಒಳಪುಟಗಳನ್ನು ತೆರೆದಾಗ, ಹಾಲು ಬಿಳಿಪಿನ ಕಾಗದದ ಮೇಲೆ ಸುಂದರವಾಗಿ ಮೂಡಿರುವ ಮುದ್ರಣ, ಮೆಚ್ಚುಗೆಯಾಗುತ್ತದೆ. ಓದಲು ಪ್ರಾರಂಭಿಸಿದೊಡನೆಯೇ, ನಮ್ಮ ಮೈ ಮನಸ್ಸುಗಳ ಮೇಲೆ ಲೇಖಕರು ತಮ್ಮ ಪ್ರಭುತ್ವ ಸ್ಥಾಪಿಸಿ ಬಿಡುತ್ತಾರೆ. ಈ ಪುಸ್ತಕವನ್ನೋದುವುದೇ ಒಂದು ಅಪೂರ್ವ ಅನುಭವ. ಮಹೋನ್ನತ ತತ್ತ್ವದರ್ಶನ ಮೂಡಿಸುವ ಇಂತಹ ಕೃತಿಯನ್ನು ಈ ಸೀಮಿತ ಅವಧಿಯಲ್ಲಿ ಪರಿಚಯಿಸುವುದೆಂದರೆ, ಹಿಮಾಲಯ ಪರ್ವತ ಪಂಕ್ತಿಗಳನ್ನು ಅಂಗೈಯಲ್ಲಿ ಹಿಡಿದಿಡುವಂತೆ ಅಸಾಧ್ಯವಾದ ಕೆಲಸವಾದ್ದರಿಂದ, ಕೇವಲ ಸ್ಥೂಲವಾದ ಪರಿಚಯದ ಪ್ರಯತ್ನ ಇಲ್ಲಿ ಮಾಡಲಾಗಿದೆ.

"ದರ್ಶನ" ಎಂದರೆ ನೋಟ; ಕಂಡುಕೊಳ್ಳುವುದು; ಸೂಕ್ಷ್ಮಾರ್ಥದಲ್ಲಿ ಒಳನೋಟ ಅಥವಾ ಜ್ಞಾನ. ಹೀಗಾಗಿ "ಮಹಾದರ್ಶನ" ಎಂದರೆ ಉತ್ತಮೋತ್ತಮ ಜ್ಞಾನ, ಪರಿಪೂರ್ಣಜ್ಞಾನ, ಪರಿಪೂರ್ಣತೆಯೆಡೆಗೆ ಒಯ್ಯುವ ಜ್ಞಾನ ಎಂದು ಅರ್ಥೈಸಬಹುದು.

ಶ್ರೇಯಸ್ಸಿನ ಹಾದಿಯಲ್ಲಿ ಮುನ್ನಡೆಯುತ್ತಾ, ಅನೇಕತ್ವದಲ್ಲಿ ಏಕತ್ವವನ್ನು ಕಾಣುವ ಸಮಗ್ರ ತತ್ತ್ವದರ್ಶನ ಪಡೆದು, ಅಮೃತತತ್ತ್ವವೇ ಆದ ಆತ್ಮ ಬೇರೆಯಲ್ಲ, ತಾನು ಬೇರೆಯಲ್ಲ ಎಂಬುದನ್ನರಿಯಲು ಅಡ್ಡಿಯಾಗಿರುವ ಕಾಮನೆಗಳನ್ನು ದೂರ ಮಾಡಿ, ಪೂರ್ಣತ್ವವನ್ನು ಕಂಡುಕೊಂಡಾಗ, ಅದೇ "ಮಹಾದರ್ಶನ"ವೆಂದೂ, ದೇಹೋಽಹಂಭ್ರಾಂತಿಯಿಂದ ವಿಮುಖರಾಗಿ ಅತ್ಮಾಹಂಮತಿಯಿಂದ ವರ್ತಿಸುತ್ತಾ, ಬಾಹ್ಯಾಭ್ಯಂತರಶುದ್ಧಿಯಿಂದ ಪರಿಶುದ್ಧಾತ್ಮರಾಗಿ, ಸ್ವಾರ್ಥ ಪರಾರ್ಥಗಳಲ್ಲಿ ಅಭೇದವನ್ನು ಕಂಡುಕೊಂಡು, ಆತ್ಮಾನುಸಂಧಾನವನ್ನು ಮಾಡುತ್ತಾ, ನಿಷ್ಕಾಮದಿಂದ ಅಖಂಡೋಪಾಸನೆಯಲ್ಲಿ ತೊಡಗಿ, ಸಾಕ್ಷಾತ್ಕಾರದೆಡೆ ತೀವ್ರತರದ ಸಾಧನೆಯ ಪರಾಕಾಷ್ಠತೆಯಲ್ಲಿ ಮುಳುಗಿದಾಗ, ಆ ಸತ್ಯಸಂಕಲ್ಪವುಳ್ಳ ಶುದ್ಧ ಮನಸ್ಸನ್ನು ಹಿಡಿದುಕೊಂಡು, ನೆಲೆ ನಿಂತು, ದರ್ಶನವನ್ನು ಕರುಣಿಸಿ, ದೇವತೆಗಳು ತಾವಾಗಿ ಪ್ರೇರಕರಂತೆ ಒದಗಿ ಬಂದು, ಲೋಕಕಲ್ಯಾಣದ ಕೆಲಸಗಳನ್ನು ಆಗ ಮಾಡಿಸುವರು ಎಂದು ದೇವುಡು ಅವರು ಮಹರ್ಷಿ ಯಾಜ್ಞವಲ್ಕ್ಯರ ಕಥೆಯ ಮೂಲಕ ನಿರೂಪಿಸುತ್ತಾರೆ.

ತತ್ತ್ವದೃಷ್ಟಿ, ತಾತ್ತ್ವಿಕ ಚಿಂತನೆ ನಮ್ಮ ನಾಡಿನ ಸಹಜ ಗುಣ. ಆಧ್ಯಾತ್ಮಿಕ ಒಲವು ಈ ನೆಲದ ಜೀವನಕ್ರಮದಲ್ಲಿ ಹಾಸುಹೊಕ್ಕಾಗಿದೆಯೆಂಬುದಕ್ಕೆ ನಿದರ್ಶನವಾಗಿ, ಪವಿತ್ರಾತ್ಮರಾದ ಋಷಿ ಮುನಿಗಳು, ತಪಸ್ವಿಗಳು, ಸಂತರು ಇಲ್ಲಿ ಅವತರಿಸಿ, ಇತಿಹಾಸದ ಅಳತೆಗೆ ನಿಲುಕುವಷ್ಟು ಪ್ರಾಚೀನ ಕಾಲದಿಂದಲೂ, ಸೃಷ್ಟಿಯ ರಹಸ್ಯ, ಜೀವ, ಜಗತ್ತು, ಆತ್ಮ, ಪರಮಾತ್ಮ ಇವುಗಳ ಬಗ್ಗೆ ಅಂತರ್ಮುಖಿಗಳಾಗಿ ಚಿಂತಿಸಿ, ತಮ್ಮ ನಿರಂತರ ತಪೋನ್ವೇಷಣೆಯಲ್ಲಿ ಕಂಡುಕೊಂಡ ನಿತ್ಯಸತ್ಯಗಳಾದ ದರ್ಶನಗಳನ್ನು ಮನುಕುಲದ ಉದ್ಧಾರಕ್ಕಾಗಿ, ವೇದೋಪನಿಷತ್ತುಗಳ ರೂಪದಲ್ಲಿ ಕೊಡುಗೆಯಿತ್ತು, ವಿಶ್ವಕ್ಕೇ ಆದರ್ಶಪ್ರಾಯರಾಗಿದ್ದಾರೆ. ಈ ದರ್ಶನಗಳಾದರೋ, ಅಂತರ್ದೃಷ್ಟಿಗೋಚರವೂ, ಅಪರೋಕ್ಷ ಜ್ಞಾನ ಗಮ್ಯವೂ ಆಗಿ, ಸ್ಥೂಲವಸ್ತುವಿನಲ್ಲಿಯೂ ಅಂತರ್ಯಾಮಿಯನ್ನರಸುವ, ಬಾಹ್ಯಾಂಭ್ಯತರಾನ್ವೇಷಣೆಯ, ಫಲಸ್ವರೂಪಗಳಾಗಿವೆ. ಜ್ಞಾನವಿಜ್ಞಾನಪ್ರಜ್ಞಾನಪರಿಪೂರ್ಣರಾದ ಈ ತಪಸ್ವಿಗಳು ಭೂಗೋಳದಿಂದ ಖಗೋಳದವರೆಗೆ, ಪರಮಾಣುವಿನಿಂದ ಪರಮಾತ್ಮನವರೆಗೆ ಚಿಂತಿಸದ ವಿಷಯವಿಲ್ಲ.

ಇಂತಹ ಆರ್ಷೇಯ ಸಂಸ್ಕೃತಿಯ ಭವ್ಯ ಪರಂಪರೆಯಲ್ಲಿ ಉದಿಸಿ, ಪರಿಶುದ್ಧಾಂತಃಕರಣರಾಗಿ, ಹಂತಹಂತವಾಗಿ ಆಧ್ಯಾತ್ಮಿಕ ಪಥದಲ್ಲಿ ಮುನ್ನೇರುತ್ತಾ, ಹಲವಾರು ದಿವ್ಯಾನುಭವಗಳನ್ನು ತಮ್ಮದಾಗಿಸಿಕೊಂಡು ವರ್ಧಿಸುತ್ತಾ, ಕಠಿಣತಮವಾದ ಉಪಾಸನಾವಿಧಿಗಳಿಂದ, ನಿರಂತರ ತಪಸ್ಸಿನಿಂದ, ಸಿದ್ಧಿಯನ್ನು ಪಡೆದು, ತನ್ನ ದೇಹವನ್ನೇ ದೇವಾಯತನವಾಗಿಸಿ ಸರ್ವಜ್ಞತ್ವವನ್ನೂ, ಬ್ರಹ್ಮತ್ವವನ್ನೂ ಗಳಿಸಿ, ಋಷಿಯೆನಿಸಿ ಬ್ರಹ್ಮರ್ಷಿಯೆಂದು ಕರೆಯಿಸಿಕೊಂಡು, ಮಹರ್ಷಿಯೆಂದು ಖ್ಯಾತರಾಗಿ, ಋಗ್ವೇದದ ಶೈಲಿಯಲ್ಲಿರುವ, ಶುದ್ಧ ಮಂತ್ರಗಳ ಸಂಯೋಜನೆಯಿಂದ ಪ್ರಸಿದ್ಧವಾಗಿ, ಆದಿತ್ಯ ಸಂಪ್ರದಾಯಕ್ಕೆ ಸೇರಿದ, ಶುಕ್ಲ ಯಜುರ್ವೇದವೆಂಬ ವಾಜಸನೇಯೀ ಸಂಹಿತೆಯನ್ನೂ, ಯಾಗಾನುಷ್ಠಾನಗಳ ಉತ್ತಮ ಪ್ರತಿಪಾದನೆಯಿಂದ ಮಹತ್ತ್ವವೆನಿಸಿ, ನೂರು ಅಧ್ಯಾಯಗಳಿಂದ ಪರಿಪುಷ್ಟವಾಗಿರುವ ಶತಪಥಬ್ರಾಹ್ಮಣವನ್ನೂ, ಕೇವಲ ಹದಿನೆಂಟೇ ಮಂತ್ರಗಳನ್ನು ಮಾತ್ರ ಹೊಂದಿ ಅತಿ ಚಿಕ್ಕದಾದರೂ, ವೇದಾಂತಸಾರಸರ್ವಸ್ವವನ್ನೂ ಒಳಗೊಂಡಿದೆಯೆಂದು ಪ್ರಸಿದ್ಧವಾದ ಈಶಾವಾಸ್ಯೋಪನಿಷತ್ತನ್ನೂ ಪಡೆದುಕೊಂಡು, ಮಹತ್ತ್ವಪೂರ್ಣವಾದ ಬೃಹದಾರಣ್ಯಕೋಪನಿಷತ್ತಿಗೆ ಕಾರಣವಾಗಿ, ಬೆಳಗಿದ ಮಹಾನ್ ಚೇತನ ಭಗವಾನ್ ಯಾಜ್ಞವಲ್ಕ್ಯರ ರೋಚಕವಾದ ಜೀವನ-ಸಾಧನೆಯನ್ನು ಒಳಹೂರಣವಾಗಿ ತುಂಬಿಕೊಂಡು ಈ ಕೃತಿ ವಿಶಿಷ್ಟವೆನಿಸಿದೆ.

ದೇವುಡು ಅವರ ಶೈಲಿ ಅತ್ಯಂತ ಹೃದ್ಯವಾದದ್ದು. ಅವರು ಬಳಸಿರುವ ಉಪಮಾನಗಳು, ನುಡಿಕಟ್ಟುಗಳು, ಪ್ರತಿಮೆಗಳು, ಧ್ವನಿ, ಸಂಕೇತ, ರೂಪಕಗಳು ಅನನ್ಯ ಸದೃಶವಾದವು. ವೇದ ಋಷಿಗಳ ಕಾಲದ ಜನಜೀವನ, ಶಿಕ್ಷಣ, ಸಂಪ್ರದಾಯ, ಆಚಾರ, ವಿಚಾರ, ಉಪಾಸನೆ, ತಪಸ್ಸು, ಗುರುಕುಲ ಆಶ್ರಮ ಇವುಗಳ ವಿವರಗಳನ್ನು ಸಮರ್ಥವಾಗಿ ಸೆರೆ ಹಿಡಿದು ನಿರೂಪಿಸಿದ್ದಾರೆ.

ಕಥಾ ನಿರೂಪಣೆಗೆ ಸಹಕಾರಿಯಾಗಿ, ಆಧ್ಯಾತ್ಮಪಥದಲ್ಲಿ ಪಾತ್ರಗಳ ಹಂತಹಂತವಾದ ಉನ್ನತಿ, ಕಾಯೋನ್ನತಿ, ಮನೋನ್ನತಿ, ವಿದ್ಯೋನ್ನತಿಗಳ ವಿವರಣೆ, ಪಶು ಸಂಭಾಷಣೆ, ಪ್ರಾಣದ ವಿವರ, ಬ್ರಹ್ಮದ ಬಗ್ಗೆ ಸೂಕ್ತ ವಿವರ, ಕನಸುಗಳೇ ದರ್ಶನಗಳಾಗುವುದು, ಉಪನಯನ ಮುಂತಾದ ಸಂಸ್ಕಾ

ರಗಳಲ್ಲಿ ಅಡಗಿರುವ ಅಂತರಾರ್ಥ, ಅಗ್ನಿಯು ಪ್ರಸನ್ನನಾಗುವುದು, ದೂರಶ್ರವಣವಿದ್ಯೆ, ದೇಹದಿಂದ ಹೊರಹೊಮ್ಮುವ ವಿಕಿರಣ, ಪಂಚಾಗ್ನಿಗಳ ವಿವರ, ಶ್ರುತಿಭಗವತಿಯ, ಆಪೋಜ್ಯೋತಿಯ, ಪ್ರಾಣನ, ಉಷಾದೇವಿಯ, ಇಂದ್ರ-ಇಂದ್ರಾಣಿಯ, ಸವಿತೃವಿನ, ದರ್ಶನಗಳು, ಅಭ್ಯೂಹನ ಮಂತ್ರ ಪ್ರಯೋಗ, ಪಂಚಾತ್ಮಸಂಕ್ರಮಣ ವಿದ್ಯೆ, ತುರೀಯಾವಸ್ಥೆಯಲ್ಲಾಗುವ ಸಾಕ್ಷೀಭಾವ, ವಾರುಣೀ ವಿದ್ಯೆ, ಪಂಚ ಕೋಶಗಳ ವಿವರ, ಪಂಚಭೂತಗಳ ಸಾಕ್ಷಾತ್ಕಾರ, ಆದಿತ್ಯ ಮಂಡಲದ ಹಾಗೂ ಆದಿತ್ಯನ ದರ್ಶನ, ಜನಕ ಮಹಾರಾಜನಿಗೆ ದೇವಗುರುವಿನ ದರ್ಶನ, ಅವನಿಗೆ ನಿಧಿ ಲಭ್ಯವಾದದ್ದು, ಜ್ಞಾನಸತ್ರದಲ್ಲಿ ಬ್ರಹ್ಮಜ್ಞಾನಿಗಳಲ್ಲಿ ನಡೆವ ಅಪೂರ್ವವಾದ ತಾತ್ತ್ವಿಕ ಚರ್ಚೆ, ಜನಕ ಮಹಾರಾಜನಿಗೆ ನೀಡಿದ ಉಪ ದೇಶ, ಇತ್ಯಾದಿ ವಿವರಗಳು ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತವೆ.

ನಮ್ಮಲ್ಲಿಯೇ ಅಡಗಿರುವ ಈ ಧೀಶಕ್ತಿಯನ್ನು ಜಾಗೃತಗೊಳಿಸಿ, ಕಠಿಣ ಸಾಧನೆಯಿಂದ, ಸತ್ಯ ಸಂಕಲ್ಪದಿಂದ, ಈಗಲೂ ಈ ದರ್ಶನಗಳ ಅನುಭವಗಳನ್ನು ನಮ್ಮದಾಗಿಸಿಕೊಳ್ಳಬಹುದೆಂದೂ, ದೇವತೆಗಳು ಎಲ್ಲಿಯೋ ದೂರದ ಅಂತರಿಕ್ಷದಲ್ಲಿರದೇ, ಅವರಿಗಾಗಿ ನಾವು ಹಂಬಲಿಸಿದರೆ, ಅವರು ತಾವಾಗಿ ತಮ್ಮ ಸಾನ್ನಿಧ್ಯವನ್ನು ಪ್ರಕಟಗೊಳಿಸುವರೆಂಬ ನಂಬಿಕೆ ಇಂತಹ ಕೃತಿಗಳನ್ನು ಮನನ ಮಾಡಿಕೊಂಡಾಗ ಬಲವಾಗುತ್ತದೆ. ಇದು ಲೇಖಕರ ಆಶಯವೂ ಆಗಿದ್ದಂತೆ ತೋರುತ್ತದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅಗಾಧ ಸಾಧನೆ ಮಾಡಿ, ಹಲವಾರು ದಿವ್ಯ ಅನುಭವಗಳನ್ನು ತನ್ನದಾಗಿಸಿಕೊಂಡ ವ್ಯಕ್ತಿಯಿಂದ ಮಾತ್ರ, ಇಂತಹ, ಬುದ್ಧಿಶಕ್ತಿಗೆ ಸವಾಲಿನಂತಿರುವ, ವೇದಾಂತಸಂಬಂಧೀ ವಿಚಾರಗ ಳನ್ನು ಬರೆಯಬಹುದೇ ಹೊರತು, ಕೇವಲ ಕಲ್ಪನಾ ಕೌಶಲ್ಯದಿಂದಲೋ, ಬರಿಯ ಪಾಂಡಿತ್ಯದ ನೆರವಿನಿಂದಲೋ, ಬರೆಯಲಸಾಧ್ಯ.

ಪಾತ್ರಗಳ ತರ್ಕಬದ್ಧವಾದ, ತುಂಬು ಗಾಂಭೀರ್ಯದ, ತಾತ್ತ್ವಿಕ ನೆಲೆಗಟ್ಟಿನ, ವಿವೇಚನಾ ಪೂರ್ಣವಾದ, ಸಂದರ್ಭೋಚಿತವಾದ, ಸಂಭಾಷಣೆಗಳನ್ನು ಬರೆಯುವಾಗ, ದೇವುಡು ಅವರು ಕೌಶಲ್ಯ ಪೂರ್ಣವಾಗಿ ದುಡಿಸಿಕೊಂಡಿರುವ ಭಾಷೆಯ ಗಹನತೆ, ಪ್ರೌಢತೆ, ನಮ್ಮನ್ನು ಬೆರಗುಗೊಳಿಸುತ್ತದೆ.

ಪುಣ್ಯಪುರುಷರಾದ ಮಹರ್ಷಿ ಯಾಜ್ಞವಲ್ಕ್ಯರ ಪವಿತ್ರಮಯವಾದ ಕಥಾನಕವನ್ನೊಳಗೊಂಡ ಈ ಕೃತಿ ವೇದೋಪನಿಷತ್ತುಗಳಿಗೆ, ಶಾಸ್ತ್ರಗಳಿಗೆ ಕನ್ನಡದಲ್ಲಿ ಬರೆದ ಭಾಷ್ಯದಂತಿದ್ದು, ಜನಪ್ರಿಯ ಸಾಹಿತ್ಯಪ್ರಕಾರವಾದ ಕಾದಂಬರಿಯೊಳಗೆ ಅಂತಹ ವೇದಾಂತ ತತ್ತ್ವವಿವೇಚನೆಯ ಪ್ರೌಢ ವಿಷಯ ಗಳನ್ನು ಮೇಲ್ಮೆಯನ್ನು ಸಾಧಿಸುವ ದಿಸೆಯಲ್ಲಿ, ಆರೋಗ್ಯಪೂರ್ಣ ಆಹಾರದಂತಿರುವ, ಇಂತಹ ಬೌದ್ಧಿಕ ಹಿನ್ನೆಲೆಯ ಕಥೆಯನ್ನು ರಚಿಸುವುದರ ಮೂಲಕ ಕಾದಂಬರಿ ಕ್ಷೇತ್ರಕ್ಕೆ ಶ್ರೀ ದೇವುಡು ಅವರು ಕೊಟ್ಟ ಅನರ್ಘ್ಯ ರತ್ನವಿದು.

ಪುಸ್ತಕವನ್ನು ಓದಲು ತೊಡಗಿದೊಡನೆಯೇ, ಮಂತ್ರಮುಗ್ಧರಾಗಿ, ನಮಗರಿವಿಲ್ಲದಂತೆ, ನಮ್ಮ ಮನಸ್ಸು ಉನ್ನತ ಸ್ತರಕ್ಕೇರಿ, ಯಾವುದೋ ತೇಜೋಮಯವಾದ ಊರ್ಧ್ವಲೋಕದಲ್ಲಿ ಅಲೆದಾಡುತ್ತಾ, ನಮ್ಮತನ ಕಳೆದು ಹೋಗಿ, ನಾಮರೂಪಗಳು ಅಳಿಸಿಹೋಗಿ, ಕಾಲದೇಶವರ್ತ ಮಾನಗಳ ಎಲ್ಲೆಕಟ್ಟನ್ನು ಮೀರಿ, ಭಾವಸಮಾಧಿಯಲ್ಲಿ ಮುಳುಗಿ, ಪುಸ್ತಕದ ಓದು ಮುಗಿಸಿ, ಕೆಳ

ಗಿಟ್ಟಾಗ ಆ ಔನ್ನತ್ಯದಿಂದ ಸುತ್ತಲ ಲೌಕಿಕ ಪರಿಸರಕ್ಕೆ ಮರಳಿ ಬರಲು ಸ್ವಲ್ಪ ಕಾಲ ಹಿಡಿಯುವಂತಾಗುವುದು ಅತಿಶಯೋಕ್ತಿಯಲ್ಲ. ಮನಸ್ಸು ಇನ್ನೂ ಎಷ್ಟೋ ಹೊತ್ತಿನ ತನಕವೂ, ಕಾದಂಬರಿಯ ಪ್ರಭಾವಲಯದಲ್ಲೇ ಪರಿಭ್ರಮಿಸುತ್ತಾ; ದೇವರಾತರು, ಆಲಂಬಿನಿದೇವಿ, ಬುಡಿಲರು, ವೈಶಂಪಾಯನರು, ಕಬಂದಿನೀ ದೇವಿಯವರು, ಉದ್ದಾಲಕರು, ಆಲಾಪಿನೀ ದೇವಿಯವರು, ಯಾಜ್ಞವಲ್ಕ್ಯರು, ಕಾತ್ಯಾಯಿನೀ ಮೈತ್ರೇಯಿ, ಗಾರ್ಗಿ, ಜನಕ ಮಹಾರಾಜ ಇವರುಗಳ ಸುತ್ತಲೂ ಎಡತಾಕುತ್ತಲೇ ಇರುತ್ತದೆ.

ಮತ್ತೆ ಮತ್ತೆ ಓದಿದಾಗ ಹೊಸ ಹೊಸ ಅರ್ಥಗಳು ಸ್ಫುರಣೆಯಾಗುತ್ತಲೇ ಇರುತ್ತವೆ. ಶ್ರೇಷ್ಠವಾದ ಆರ್ಷೇಯ ಪರಂಪರೆಯ ಮೂಲತತ್ತ್ವಗಳನ್ನು ಇನ್ನಷ್ಟು ಹೆಚ್ಚು ತಿಳಿದುಕೊಳ್ಳಬೇಕೆಂಬ ಹಂಬಲ ಮೂಡುವುದು ಸಹಜ. ಕೃತಿಯ ಯಶಸ್ಸು ಇಲ್ಲಡಗಿದೆ. ನಿಜಕ್ಕೂ ಈ ಕಾದಂಬರಿ ಕನ್ನಡ ಸಾರಸ್ವತ ಲೋಕಕ್ಕೆ ಒಂದು ಅತ್ಯಮೂಲ್ಯ ಕೊಡುಗೆ. ಇಂತಹ ಅಸಾಮಾನ್ಯ ಕೊಡುಗೆಯನ್ನಿತ್ತು ಅಮರರಾದ ಶ್ರೀ ದೇವುಡು ನರಸಿಂಹಶಾಸ್ತ್ರಿಗಳು ಕನ್ನಡ ಸಾಹಿತ್ಯಾಕಾಶದ ಒಂದು ಉಜ್ವಲ ತಾರೆ.

★

ಶ್ರೀ ದೇವುಡು ಅವರ "ಮೀಮಾಂಸಾದರ್ಪಣ"

ಶ್ರೀ ಎಂ. ಕೃಷ್ಣ ಶರ್ಮ

ಭಾರತೀಯ ದರ್ಶನಗಳಲ್ಲಿ ಪೂರ್ವ ಮೀಮಾಂಸಾದರ್ಶನವು ದರ್ಶನ ಮೂರ್ಧನ್ಯವೆನಿಸಿಕೊಂಡಿದೆ. ನಮ್ಮ ಸಂಸ್ಕೃತಿಯ ಮೂಲ ಧರ್ಮ. ಧರ್ಮವೆಂದರೇನು? ಅದನ್ನೇಕೆ ಆಚರಿಸಬೇಕು? ಹೇಗೆ ಆಚರಿಸಬೇಕು? ಅಧರ್ಮವೆಂದರೇನು? ಅದನ್ನೇಕೆ ಆಚರಿಸಬಾರದು? ಎಂಬುದನ್ನು ತಿಳಿಸಿಕೊಡುವದೇ ಪೂರ್ವ ಮೀಮಾಂಸೆಯ ಉದ್ದೇಶ.

ಸುಖವನ್ನು ಬಯಸಿ ಅದನ್ನೊದಗಿಸುವ ವಸ್ತುಗಳನ್ನರಸುವದು, ದುಃಖವು ಬೇಡೆಂದು ಅದನ್ನುಂಟುಮಾಡುವ ವಸ್ತುವಿನಿಂದ ದೂರವಿರಲು ಹವಣಿಸುವದು ಮಾನವನ ಸ್ವಭಾವ. ಸುಖಸಾಧನವು ಧರ್ಮವೆಂದೂ ದುಃಖ ಸಾಧನವು ಅಧರ್ಮವೆಂದೂ ಪೂರ್ವ ಮೀಮಾಂಸಾದರ್ಶನದ ಸಿದ್ಧಾಂತ. "ಇದು ಶ್ರೇಯಃಸಾಧನ"ವೆಂದು ವೇದವು ಯಾವುದನ್ನು ಹೇಳುತ್ತದೋ ಅದು ಧರ್ಮ, "ಇದು ಅನಿಷ್ಟಸಾಧನ" ವೆಂದು ವೇದವು ಯಾವುದನ್ನು ಹೇಳುತ್ತದೋ ಅದು ಅಧರ್ಮ. ಧರ್ಮಶಬ್ದದ ಪರ್ಯಾಯವಾಗಿ ಕರ್ಮಶಬ್ದವನ್ನೂ ಇಲ್ಲಿ ಬಳಸಬಹುದು. ಆದರೆ ಇಲ್ಲಿನ ಕರ್ಮಶಬ್ದಕ್ಕೆ "ವೇದದಲ್ಲಿ ಹೇಳಿದ ಕರ್ಮಗಳು" ಮಾತ್ರವೇ ಅರ್ಥ. ಲೌಕಿಕ ಕರ್ಮಗಳು ಇಲ್ಲಿ ಉದ್ದಿಷ್ಟವಲ್ಲ.

ಕರ್ಮವು ಮೂರುವಿಧ. ನಿತ್ಯ, ನೈಮಿತ್ತಿಕ, ಕಾಮ್ಯ. ಅಗ್ನಿಹೋತ್ರಾದಿಗಳು ನಿತ್ಯ, ವೈಶ್ವಾನರೇಷ್ಟ್ಯಾದಿಗಳು ನೈಮಿತ್ತಿಕ, ಜ್ಯೋತಿಷ್ಟೋಮಾದಿಗಳು ಕಾಮ್ಯ, ಇವುಗಳ ಪೈಕಿ ನಿತ್ಯ–ನೈಮಿತ್ತಿಕ ಕರ್ಮಗಳನ್ನು ತತ್ತದಧಿಕಾರಿಗಳು ಮಾಡಲೇಬೇಕು. ಅನ್ಯಥಾ ಪ್ರತ್ಯವಾಯವೆಂದು ಈ ದರ್ಶನವು ಹೇಳುತ್ತದೆ.

ಆಚರಿಸುವುದಕ್ಕಾಗಿ ಧರ್ಮಸ್ವರೂಪವನ್ನು ಅವಶ್ಯವಾಗಿ ಅರಿತುಕೊಳ್ಳಬೇಕಾದಂತೆಯೇ ಕೈಬಿಡುವದಕ್ಕೋಸ್ಕರ ಅಧರ್ಮ ಸ್ವರೂಪವನ್ನು ತಿಳಿದುಕೊಳ್ಳುವುದು ಅಗತ್ಯ. ಆದ್ದರಿಂದ ಪ್ರತಿಯೊಬ್ಬ ತ್ರೈವರ್ಣಿಕನೂ ವೇದಾಧ್ಯಯನದ ನಂತರ ಈ ಧರ್ಮ ವಿಚಾರ ಶಾಸ್ತ್ರವನ್ನು-ಪೂರ್ವಮೀಮಾಂಸಾದರ್ಶನ-ಖಂಡಿತವಾಗಿ ಅಭ್ಯಾಸ ಮಾಡಲೇಬೇಕೆಂದು "ಅಥಾತೋ ಧರ್ಮ ಜಿಜ್ಞಾಸಾ" ಎಂಬ ಈ ಶಾಸ್ತ್ರದ ಮೊದಲನೇ ಸೂಕ್ತದಲ್ಲಿ ಸೂಚಿಸಲ್ಪಟ್ಟಿದೆ. "ಇದೇ ಧರ್ಮ, ಇದೇ ಅಧರ್ಮ" ಎಂಬ ನಿಶ್ಚಯ ಬುದ್ಧಿಯು ವಿಚಾರದಿಂದಲ್ಲದೆ ಸಿದ್ಧಿಸದು.

ಪೂರ್ವಮೀಮಾಂಸೆಯು, ಧರ್ಮಾಧರ್ಮಗಳನ್ನು ತಿಳಿಸುವ ವೇದವಾಕ್ಯಗಳ ಅರ್ಥನಿರ್ಣಯಕ್ಕಾಗಿ ಹೊರಟ ನ್ಯಾಯಶಾಸ್ತ್ರ. ಆದ್ದರಿಂದ ವಸ್ತುತಃ ಇದು ವಾಕ್ಯಾರ್ಥನಿರ್ಣಾಯಕ ನ್ಯಾಯಶಾಸ್ತ್ರ. ಈ ನ್ಯಾಯಗಳು ಒಂದಲ್ಲ, ಎರಡಲ್ಲ, ಸುಮಾರು ಸಾವಿರ ನ್ಯಾಯಗಳಿವೆಯೆಂದು ಲೆಕ್ಕ ಹಾಕಿದ್ದಾರೆ. ಪ್ರತಿಯೊಂದು ನ್ಯಾಯಕ್ಕೂ ಒಂದೊಂದು ವಾಕ್ಯಾರ್ಥನಿರ್ಣಯ ರೂಪವಾದ ಪ್ರಯೋಜನವಿದೆ ಒಂದೊಂದು ಅಧಿಕರಣದಲ್ಲಿ ಒಂದೊಂದು ನ್ಯಾಯಗಳನ್ನು ಸಂಚಾರಗೊಳಿಸಿ ಒಂದೊಂದು ವಾಕ್ಯಾರ್ಥಗಳನ್ನು ತೀರ್ಮಾನಿಸಲಾಗಿದೆ.

ಉತ್ತರ ಮೀಮಾಂಸಾಶಾಸ್ತ್ರವೆಂದು ಪ್ರಸಿದ್ಧವಾದ ವೇದಾಂತ ದರ್ಶನದಲ್ಲೂ ವಾಕ್ಯಾರ್ಥ ನಿರ್ಣಯದಲ್ಲಿ ಈ ನ್ಯಾಯಗಳನ್ನೇ ನೂರಾರು ಸಂಖ್ಯೆಯಲ್ಲಿ ಬಳಸಿದ್ದನ್ನು ಗಮನಿಸಬಹುದು. ಶ್ರೌತ-ಗೃಹ್ಯ ಕರ್ಮಗಳ ಅನುಷ್ಠಾನದಲ್ಲಿ ಸಂದೇಹವುಂಟಾದರೆ ಅಲ್ಲೂ ಈ ನ್ಯಾಯಗಳೇ ನಿರ್ಣಾಯಕಗಳು, ಧರ್ಮಶಾಸ್ತ್ರಗಳಲ್ಲೂ ಈ ನ್ಯಾಯಗಳಿಗೆ ಉಪಯೋಗವಿದೆ, ಮಾತ್ರವಲ್ಲ ಲೌಕಿಕ ವ್ಯವಹಾರಗಳಲ್ಲೂ ಸಹ ಇವು ಎಷ್ಟೋ ಕಡೆ ಸಮನ್ವಯವಾಗುತ್ತವೆ. ಹೀಗಿರುವಾಗ ಈ ಶಾಸ್ತ್ರದ ಉಪಾದೇಯತೆಯನ್ನು ಕುರಿತು ಹೇಳಬೇಕಾದ ಅವಶ್ಯಕತೆಯಿಲ್ಲ.

ಈ ಶಾಸ್ತ್ರದ ಇನ್ನೊಂದು ಮುಖ್ಯವೈಶಿಷ್ಟ್ಯವೆಂದರೆ ಇದು ಕರ್ಮಕ್ಕೆ ಸರ್ವೋಚ್ಚ ಪ್ರಾಧಾನ್ಯವನ್ನೀಯುತ್ತದೆ. ವಿಹಿತ ಕರ್ಮಗಳ ಅನುಷ್ಠಾನದಿಂದ ಮಾನವನು ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವ ಶಿಲ್ಪಿಯಾಗಬಹುದೆಂದು ಈ ಶಾಸ್ತ್ರವು ಸಾರುತ್ತದೆ. ಕರ್ಮಕ್ಕಿಂತ ಮೇಲಾದುದು ಇಲ್ಲಿ ಇಲ್ಲವೇ ಇಲ್ಲವೆಂದು ಮೀಮಾಂಸಾಶಾಸ್ತ್ರದ ಡಂಗುರ. ಭಾರತೀಯ ದರ್ಶನಗಳು ಒಂದಿಲ್ಲೊಂದು ರೀತಿಯಲ್ಲಿ ನೈಷ್ಕರ್ಮ್ಯವನ್ನು ಪ್ರತಿಪಾದಿಸುವುದರಿಂದ ಇವು ಮಾನವನ ಲೌಕಿಕ ಅಭ್ಯುದಯಕ್ಕೆ ಸಹಕಾರಿಗಳಲ್ಲ" ಎಂಬ ಅಪವಾದಕ್ಕೆ ಈ ದರ್ಶನ ಗುರಿಯಾಗಲಾರದು. ಕರ್ಮದ ಮೇಲ್ಮೆಯನ್ನು ಎತ್ತಿಹಿಡಿದ ಈ ದರ್ಶನ ಜಾಗತಿಕಮಹತ್ವವುಳ್ಳದ್ದೆಂದರೆ ಅತಿಶಯೋಕ್ತಿಯಾಗಲಾರದು. ಪೂರ್ವಮೀಮಾಂಸಾಶಾಸ್ತ್ರವು ಭಾರತೀಯ ಜ್ಞಾನ ಭಂಡಾರದ ಅಮೂಲ್ಯ ರತ್ನ.

ಈ ಶಾಸ್ತ್ರದ ಆಳ-ಅಗಲಗಳು ಕಡಲಿಗೆಣೆಯೆನ್ನಬಹುದು. ಈ ಶಾಸ್ತ್ರವನ್ನು ಕುರಿತು ರಚಿತವಾದ ಗ್ರಂಥರಾಶಿಯನ್ನು ನೋಡಿದರೆ ಯಾರಿಗಾದರೂ ಹೀಗೆನಿಸದಿರದು. ಜೈಮಿನಿ ಮೊದಲ್ಗೊಂಡು ಶಬರ, ಕುಮಾರಿಲ, ಪ್ರಭಾಕರಾದಿಗಳಿಂದ ಇದು ಪ್ರಚಾರಕ್ಕೆ ಬಂದಿತು. ಅಂದಿನಿಂದ ಇಂದಿನವರೆಗೂ ಈ ಶಾಸ್ತ್ರವನ್ನು ಕುರಿತು ವ್ಯಾಖ್ಯಾನಗಳೂ ಪ್ರಬಂಧಗಳೂ ರಚಿತವಾಗುತ್ತಲೇ ಇವೆ. ಆದರೆ ಅವೆಲ್ಲವೂ ಸಂಸ್ಕೃತ ಭಾಷೆಯಲ್ಲಿವೆ. ಈ ಶಾಸ್ತ್ರದ ಪರಿಚಯವನ್ನೊದಗಿಸುವ ಸ್ವತಂತ್ರ ಗ್ರಂಥಗಳಾಗಲೀ, ವ್ಯಾಖ್ಯಾನಗಳಾಗಲಿ, ಕನ್ನಡದಲ್ಲಿ ಇನ್ನೂ ಬರಬೇಕಾಗಿವೆ. ಈ ದಿಕ್ಕಿನಲ್ಲಿ ಶ್ರೀಮಾನ್ ದೇವುಡು ಅವರ ಪೂರ್ವಮೀಮಾಂಸಾದರ್ಪಣವು ಕನ್ನಡಕ್ಕೆ ಅಪೂರ್ವವಾದ ಕೃತಿಯೆನ್ನಬಹುದು. ಶ್ರೀ ದೇವುಡು ಅವರ ಈ ಕೃತಿಯು ಪುರ್ವಮೀಮಾಂಸಾದರ್ಶನದ ಪರಿಚಯವನ್ನು ಚಿಕ್ಕದರಲ್ಲಿ ಚೊಕ್ಕವಾಗಿ ಮಾಡಿಕೊಡುತ್ತದೆ. ಭಾಷ್ಯ-ವಾರ್ತಿಕಾದಿ ಅನೇಕ ಉದ್ಗ್ರಂಥಗಳನ್ನು ಆಳವಾಗಿ ಅಭ್ಯಾಸಮಾಡಿ, ಸಾರಗ್ರಾಹಿಯಾದ ತಮ್ಮ ಅಸಾಧಾರಣವಾದ ಪಾಂಡಿತ್ಯದಿಂದ ರಚಿಸಿದ ಈ ಪ್ರಕರಣ ಗ್ರಂಥದ ರೂಪದಲ್ಲಿ ಶ್ರೀ ದೇವುಡು ಅವರು ಕನ್ನಡ ಸಾಹಿತ್ಯ ಭಂಡಾರಕ್ಕೆ ಒಂದು ಬೆಲೆಯುಳ್ಳ ರತ್ನವನ್ನು ಅರ್ಪಿಸಿದ್ದಾರೆ.

ಮೀಮಾಂಸಾದರ್ಪಣವು ಗಾತ್ರದಿಂದ ಪುಟ್ಟದಾದರೂ, ಕನ್ನಡಕ್ಕೆ ಅದರ ಪಾತ್ರ ಮೇಲಾದ್ದು. ಸುಮಾರು ತೊಂಭತ್ತು ಪುಟಗಳಲ್ಲಿ ವಿವರಿಸಿದ ವಿಷಯಗಳ ಅಭ್ಯಾಸಾನುಕೂಲಕ್ಕಾಗಿ ಅನೇಕ ಗ್ರಂಥಗಳಿಂದ ಸಂಗ್ರಹಿಸಿದ ಟಿಪ್ಪಣಿಗಳನ್ನು ಸುಮಾರು ನಲವತ್ತೆರಡು ಪುಟಗಳಲ್ಲಿ ಒದಗಿಸಲಾಗಿದೆ. ಎಷ್ಟೋ ಅಧಿಕರಣಗಳನ್ನು ಕನ್ನಡಕ್ಕೆ ಅಳವಡಿಸುವಾಗ ಶ್ರೀ ದೇವುಡು ಅವರು ತುಂಬ ಜಾಣ್ಮೆಯನ್ನು ಮೆರೆದಿದ್ದಾರೆ ಪೂರ್ವ ಮೀಮಾಂಸಾ ಶಾಸ್ತ್ರದ ವಿಷಯದಲ್ಲಿ ತಮಗಿದ್ದ ಶ್ರದ್ಧಾದರಗಳ ಸ್ಮಾರಕವಾಗಿ ಶ್ರೀ ದೇವುಡು ಅವರು ಈ ಗ್ರಂಥವನ್ನು ರಚಿಸಿದರು.

ಶ್ರೀ ದೇವುಡು ಅವರು ಎಷ್ಟು ಸನಾತನಿಗಳಾಗಿದ್ದರೋ ಅಷ್ಟೇ ಸುಧಾರಕರೂ ಆಗಿದ್ದರು. ಹಿಂದಿನದನ್ನು ಇಂದಿಗೆ ಅನುಕೂಲವಾಗುವಂತೆ ಹೊಂದಿಸುವದರಲ್ಲೇ ನಾಳಿನ ಹಾಗೂ ನಾಡಿನ ಹಿತವಿದೆಯೆಂದು ಅವರು ಕಂಡುಕೊಂಡಿದ್ದರು. ಸಾಹಿತಿ, ತತ್ವವೇತ್ವರಾಗಿದ್ದ ಶ್ರೀ ದೇವುಡು ಅವರ ಸಾಹಿತ್ಯದಲ್ಲಡಗಿದ ತತ್ವಗಳನ್ನು ಅನುಷ್ಠಾನಕ್ಕೆ ತಂದಿದ್ದಾದರೆ. ನಾಡಿನ ಏಳ್ಗೆಗೆ ಸಹಾಯವಾಗುವದರಲ್ಲಿ ಸಂದೇಹವೇ ಇಲ್ಲ.

ಶ್ರೀ ದೇವುಡು ಅವರು ಸುಮಾರು ೧೯೩೫ರಿಂದ ಸುಮಾರು ನಾಲ್ಕೈದು ವರ್ಷಗಳ ಕಾಲ ಬೆಂಗಳೂರಿನ ಶಂಕರಮಠ ಮಹಾಪಾಠ ಶಾಲೆಯಲ್ಲಿ ಪೂರ್ವ ಮೀಮಾಂಸಾದರ್ಶನವನ್ನು ಅಭ್ಯಾಸ ಮಾಡುತ್ತಿದ್ದುದಲ್ಲದೇ ಅದೇ ಸಮಯದಲ್ಲಿ ಮೀಮಾಂಸಾದರ್ಪಣವನ್ನೂ ಬರೆದರು.

ಧರ್ಮೇ ಪ್ರಮೀಯಮಾಣೇ ಹಿ ವೇದೇನ ಕರಣಾತ್ಮನಾ ।
ಇತಿ ಕರ್ತವ್ಯತಾಭಾಗಂ ಮೀಮಾಂಸಾ ಪೂರಯಿಷ್ಯತಿ
ಮೀಮಾಂಸಾಯಾಂತ್ವಿಹಾಜ್ಞಾತೇ ದುರ್ಜ್ಞಾತೇ ವಾಽವಿವೇಕತಃ ।
ನ್ಯಾಯಮಾರ್ಗೇ ಮಹಾನ್ ದೋಷ ಇತಿ ಯತ್ನೋಽಪಚರ್ಯತಾ ॥

ಆದ್ದರಿಂದ ಧರ್ಮೇಚ್ಛುಗಳು ಪೂರ್ವ ಮೀಮಾಂಸಾ ಶಾಸ್ತ್ರದ ಪರಿಚಯವನ್ನು ಪಡೆಯುವದಗತ್ಯವೆಂದು ಶ್ರೀ ದೇವುಡು ಅವರು ಹೇಳುತ್ತಾರೆ.

★

ಆಶೀರ್ವಾದ

ಮಹಾ ಮಹೋಪಾಧ್ಯಾಯ ವೈದ್ಯನಾಥ ಶಾಸ್ತ್ರಿ

ವೇದಾಂತ ಶಾಸ್ತ್ರಾಧ್ಯಯನವು ಇತ್ತೀಚೆಗೆ ಸಾರ್ವಜನೀನವಾಗುತ್ತಿದೆ. ಹೀಗೆ ಲೋಕವೃತ್ತಿಯು ಪರಮಪುರುಷಾರ್ಥವಾದ ಮೋಕ್ಷದ ಕಡೆಗೆ ಒಲೆದಿದ್ದರೂ ಐಹಿಕಾಮುಷ್ಮಿಕ ಶ್ರೇಯಸ್ಸ್ವರೂಪ ವಾದ ಧರ್ಮವನ್ನು ಸಾಧಿಸಿದಲ್ಲದೆ ಬ್ರಹ್ಮವು ಸಿದ್ಧಿಯಾಗುವುದು ಅಸಂಭವವು. ಕಾಲಮಹಿಮೆಯಿಂದ ಧರ್ಮಶರಣರ ಸಂಖ್ಯೆಯು ನಾಧಿಕವಾದಾಗ ಧರ್ಮಶರಣರಾದ ಆಸ್ತಿಕರು ಜ್ಞಾನ, ಕರ್ಮ, ಉಪಾ ಸನಾ ಎಂಬ ಮಾರ್ಗತ್ರಯಗಳಿಂದ ಧರ್ಮವೃದ್ಧಿಯನ್ನು ಸಂಪಾದಿಸುವರು.

ಧರ್ಮವೆಂಬುದು ಅತೀಂದ್ರಿಯವಾದ ಭವಿಷ್ಯದರ್ಥವು:. ಅಲೌಕಿಕವಾದ ವೇದದಿಂದಲೇ ಅದು ಸಿದ್ಧಿಸಬೇಕು: ಪೌರುಷೇಯ ಶಾಸ್ತ್ರಾಚರಣಗಳಿಂದ ಧರ್ಮವನ್ನು ತಿಳಿಯುವುದೂ ಪಡೆಯು ವುದೂ ಸಾಧ್ಯವಿಲ್ಲ. ಅದರಿಂದ ಮೋಕ್ಷೇಚ್ಛುಗಳು ಉತ್ತರಮೀಮಾಂಸೆಯನ್ನು ಆಶ್ರಯಿಸುವಂತೆ ಧರ್ಮೇಚ್ಛುಗಳು ಪೂರ್ವಮೀಮಾಂಸೆಯನ್ನು ಆಶ್ರಯಿಸುವರು.

ಪೂರ್ವಮೀಮಾಂಸೆಯ ಸಂಪ್ರದಾಯವೇ ಬೇರೆ. ತರ್ಕ ವ್ಯಾಕರಣಾದಿಗಳನ್ನು ಅಧ್ಯಯನ ಮಾಡಿದ ಮಾತ್ರದಿಂದಲೇ ಈ ಶಾಸ್ತ್ರವೂ ಅವಗತವಾಗುವುದು ಎಂದುಕೊಳ್ಳುವುದು ಸಾಹಸದ ಮಾತು. ಅದರಿಂದ ಈ ಶಾಸ್ತ್ರವನ್ನು ತಿಳಿಯಬೇಕೆನ್ನುವವರು ಪ್ರತ್ಯೇಕವಾಗಿಯೇ ಅಧ್ಯಯನ ಮಾಡಬೇಕು.

ಪ್ರಕೃತ, ಚಿ|| ದೇವುಡು ಶಾಸ್ತ್ರಿಯು ಹೀಗೆ ನಮ್ಮಲ್ಲಿ ಅಧ್ಯಯನ ಮಾಡಿದ್ದಾನೆ. ಪರಂಪರಾ ಪ್ರಾಪ್ತವಾಗಿ ಗುರುಮುಖದಿಂದ ಬಂದ ಈ ಸಚ್ಛಾಸ್ತ್ರದ ಅರ್ಥವನ್ನು ಸಂಸ್ಕೃತಭಾಷಾನಭಿಜ್ಞರಾದ ಧರ್ಮೇಚ್ಛುಗಳಿಗಾಗಿ ಬರೆದಿದ್ದಾನೆ. ಈ ಗ್ರಂಥವನ್ನು ಪರಿಶೀಲಿಸಿ "ವಿಚಾರ ಸರಣಿಯು ನವೀನವಾದರೂ ಆದರಣೀಯವಾಗಿದೆ: ಸಂಪ್ರದಾಯ ಶುದ್ಧವಾಗಿದೆ" ಎಂದು ಅಭಿಪ್ರಾಯಪಟ್ಟಿದ್ದೇವೆ. ಪ್ರಸ್ಥಾನ ಗ್ರಂಥ ಗಳಲ್ಲಿ ಅಲ್ಲಲ್ಲಿ ವಿಕೀರ್ಣವಾಗಿರುವ ಅನೇಕಾಂಶಗಳನ್ನು ಏಕತ್ರ ಸಮವೇತ ಮಾಡಿ ಜಿಜ್ಞಾಸುಗಳಿಗೆ ಸುಲಭವಾಗಿ ತಿಳಿಯಲು ಸಾಧ್ಯವಾಗುವಂತೆ ಬರೆದಿರುವುದಕ್ಕಾಗಿ ನಾವು ಆನಂದಪಟ್ಟು ಆಶೀರ್ವಾದ ಮಾಡಿದ್ದೇವೆ.

ಈಗ ದೇಶಾಭ್ಯುದಯಕ್ಕಾಗಿ ಅನಂತ ಪ್ರಯತ್ನಗಳು ನಡೆಯುತ್ತಿವೆ. ಇಂತಹ ಸತ್ಪ್ರಯತ್ನ ಗಳು ಧರ್ಮಮೂಲವಾಗಿದ್ದರೆ ಮಾತ್ರ ಶೀಘ್ರವಾಗಿ ಸುಲಭವಾಗಿ ಫಲಿಸುತ್ತವೆ. ಅಂತಹ ಧರ್ಮ ಸ್ವರೂಪವನ್ನು ತಿಳಿಯಲು ಇಂತಹ ಗ್ರಂಥಗಳಿಂದ ಬಹಳ ಸಹಾಯವಾಗುವುದು.

ಮತ್ತೂ ಸನಾತನಧರ್ಮವನ್ನು ಕುರಿತು ಅನೇಕಾನೇಕ ಸಂದೇಹಗಳು ಅನೇಕ ವಿಧವಾಗಿ ಪ್ರಾದುರ್ಭವಿಸುತ್ತಿರುವ ಈ ಕಾಲದಲ್ಲಿ ಶ್ರೀ ಭಟ್ಟಪಾದರ ವಾರ್ತಿಕ ಗ್ರಂಥಗಳ ಅಧ್ಯಯನದಿಂ ದಲೇ ಈ ಸಂದೇಹಧ್ವಾಂತ ನಿವಾರಣವಾಗಬೇಕಾಗಿದೆ. ಅದರಿಂದ ಅಧಿಕಾರಿಗಳೂ ಉತ್ಸಾಹಿಗಳೂ ಆದ ಈತನಂತಹವರಿಂದ ಅಂತಹ ಸತ್ಕಾರ್ಯಗಳನ್ನು ಮಾಡಿಕೊಳ್ಳುವ ಭಾರವು ಶ್ರೇಯಸ್ಕಾಮಿಗ ಳಿಗೆ ಸೇರಿದುದು.

ಈ ಸದ್ಗ್ರಂಥವನ್ನು ನೋಡಿ ಆನಂದಿಸಿದ್ದೇವೆಯೆಂದು ಇನ್ನೂ ಒಂದು ಸಲ ಹೇಳುತ್ತೇವೆ. ಈ ಜಾತಿಯ ಗ್ರಂಥಗಳನ್ನು ಬರೆಯುವವರು ಅಪರೂಪ. ಆದರೂ ಲೋಕೋಪಕಾರವಾಗುವುದು ಇಂತಹ ಗ್ರಂಥಗಳಿಂದಲೇ! ಅದರಿಂದ, ಈತನು ಇದೇ ಶ್ರದ್ಧೆ, ಇದೇ ಉತ್ಸಾಹ, ಇದೇ ಅಭಿಮಾನ ಗಳಿಂದ ಧರ್ಮವಿಷಯಕವಾದ ಇನ್ನೂ ಅನೇಕ ಗ್ರಂಥಗಳನ್ನು ಬರೆಯುವಂತೆ ಪರಮೇಶ್ವರನು ಆಯುಸ್ಸನ್ನೂ ಅನುಕೂಲಗಳನ್ನೂ ದಯಪಾಲಿಸಲಿ ಎಂದು ಆಶೀರ್ವಾದ ಮಾಡುತ್ತೇವೆ.

★

ಸಂಸ್ಕೃತಿಯ ಗಂಗಾಸ್ನಾನ

- ಶ್ರೀ ಕೆ. ನರಸಿಂಹಮೂರ್ತಿ

ಪ್ರಾಚೀನ ಭಾರತೀಯ ಸಂಸ್ಕೃತಿಯನ್ನೂ ಅದರ ಪ್ರಸ್ತುತ ಹಾಗೂ ಪ್ರಾದೇಶಿಕ ರೂಪಾಂತರಗಳೊಡನೆ ಆಳವಾಗಿ ಅಧ್ಯಯನ ಮಾಡಿ ಅದನ್ನು ತಮ್ಮ ಜೀವನದಲ್ಲಿಯೂ ರೂಢಿಸಿಕೊಂಡಿದ್ದ ದೇವುಡು ನರಸಿಂಹಶಾಸ್ತ್ರಿಗಳಿಗಿಂತ ಭಾರತೀಯ ಹಾಗೂ ಕರ್ನಾಟಕ ಸಂಸ್ಕೃತಿಯ ವಕ್ತಾರರಾಗಲು ಹೆಚ್ಚು ಸಮರ್ಥರು ಯಾರೂ ಇರಲಾರರು. ಈ ಪ್ರಕಾಂಡ ಪಂಡಿತರೂ ಉದ್ದಾಮ ಸಾಹಿತಿಗಳೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೧೯೩೩ರಲ್ಲಿ ಕರ್ನಾಟಕ ಸಂಸ್ಕೃತಿಯನ್ನು ಕುರಿತು ಕೊಟ್ಟ ವಿಶೇಷೋಪನ್ಯಾಸಗಳು ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಲೇಖನಮಾಲೆಯಾಗಿ ಮೊದಲು ಪ್ರಕಟವಾಗಿ ೧೯೩೫ರಲ್ಲಿ ಪುಸ್ತಕ ರೂಪದಲ್ಲಿ ಹೊರಬಂದವು. ಈಚೆಗೆ ತೃತೀಯ ಮುದ್ರಣ ಕಂಡಿರುವ ಈ ಪುಸ್ತಕ ಇಂದಿಗೂ ಪ್ರಸ್ತುತವಾಗಿ ನಮ್ಮ ಶಿಷ್ಟ ಹಾಗೂ ಗ್ರಾಮೀಣ ಸಂಸ್ಕೃತಿ ರೂಪಗಳ ಬಗ್ಗೆ ಸ್ವಾರಸ್ಯಪೂರ್ಣ ಮಾಹಿತಿಗಳ ವಿಪುಲ ಆಕರವಾಗಿ ಸಂಗ್ರಾಹ್ಯವಾಗಿದೆ.

ಮಹತ್‌ಸಾಧನೆ

ನಮ್ಮ ಶ್ರೇಷ್ಠ ಕಾದಂಬರಿಕಾರರಲ್ಲೊಬ್ಬರಾದ ದೇವುಡು ಭಾರತೀಯ ಸಂಸ್ಕೃತಿಯ ಸಾರವನ್ನೇ ತಮ್ಮ ದಾರ್ಶನಿಕ ಕಾದಂಬರಿತ್ರಯದಲ್ಲಿ ಭಟ್ಟಿ ಇಳಿಸಿದ್ದಾರೆ ಎನ್ನುವುದನ್ನೂ ನಾವು ಈ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಳ್ಳಬೇಕು. ವೀರ ಕ್ಷತ್ರಿಯ ರಾಜ ಕೌಶಿಕ ತಪಶ್ಚರ್ಯದಿಂದ ಬ್ರಹ್ಮರ್ಷಿ ಪದವಿಗೇರಿ ಗಾಯತ್ರಿಮಂತ್ರ ದ್ರಷ್ಟಾರನಾಗುವ ಮಹತ್ ಸಾಧನೆ `ಮಹಾಬ್ರಾಹ್ಮಣ' ಕಾದಂಬರಿಯಲ್ಲಿ ಅಪೂರ್ವ ಅಭಿವ್ಯಕ್ತಿ ಪಡೆದಿದೆ. ದೇವತೆಗಳಿಗೂ ಒಂದು ಕೈ ಮೇಲೆನ್ನಿಸಿಕೊಂಡ ನಹುಷ ಚಕ್ರವರ್ತಿಯ ವ್ಯಕ್ತಿತ್ವದ ವಿಶ್ಲೇಷಣೆ `ಮಹಾಕ್ಷತ್ರಿಯ' ಕಾದಂಬರಿಯ ವೈಶಿಷ್ಟ್ಯ. ಬ್ರಹ್ಮಜ್ಞಾನಿ ಯಾಜ್ಞವಲ್ಕ್ಯರ ದಿವ್ಯದರ್ಶನದ ಉದ್ಬೋಧಕ ಚಿತ್ರ `ಮಹಾದರ್ಶನ', ಈ ಪೌರಾಣಿಕ ಕಾದಂಬರಿಗಳಲ್ಲಿ ನಮ್ಮನ್ನು ವೇದವೇದಾಂಗಗಳಲ್ಲಿಯೂ ಶಾಸ್ತ್ರ ಸಾಹಿತ್ಯದಲ್ಲಿಯೂ ಮಹಾಕಾವ್ಯಗಳಲ್ಲಿಯೂ ಪುರಾಣೇತಿಹಾಸಗಳಲ್ಲಿಯೂ ದೇವುಡು ಅವರಿಗಿದ್ದ ಅಪಾರ ವಿದ್ವತ್ತು ಮತ್ತು ಅತೀಂದ್ರೀಯ ಲೋಕಗಳನ್ನು, ಅನುಭವಗಳನ್ನು ದಿವ್ಯಮಂತ್ರಗಳನ್ನೂ ಅಸ್ತ್ರಗಳನ್ನೂ ಸಾಕ್ಷಾತ್ಕರಿಸಿಕೊಂಡಂತೆ ಅಭಿವ್ಯಕ್ತಿಗೊಳಿಸಬಲ್ಲ ದೇವುಡು ಅವರ ಪ್ರಚಂಡ, ಅದ್ಭುತ ಕಲ್ಪನಾಶಕ್ತಿ.

ದೇವುಡು ರಚಿಸಿದ ಇತರ ಕಾದಂಬರಿಗಳಲ್ಲಿ ಹೆಸರಿಸಬೇಕಾದವು ಕದಂಬ ರಾಜವಂಶದ ಮೂಲಪುರುಷ ಮಯೂರವರ್ಮ ಶರ್ಮನ ಸಾಹಸವನ್ನು ಕುರಿತ `ಮಯೂರ' ಹಾಗೂ ಕನ್ನಡದ ಮೊತ್ತಮೊದಲ ಮನೋವೈಜ್ಞಾನಿಕ ಕಾದಂಬರಿ `ಅಂತರಂಗ.'

ಅವರ ಆಸಕ್ತಿ, ವಿದ್ವತ್ತು ಮತ್ತು ಸಾಹಿತ್ಯಸೃಷ್ಟಿ ಕ್ಷೇತ್ರಗಳಿಗೆ ಮಾತ್ರ ಸೀಮಿತವಲ್ಲ. ಹಲವಾರು ಇತರ ಕ್ಷೇತ್ರಗಳಲ್ಲಿಯೂ ಕೈಯಾಡಿಸಿ ಸೈ ಎನ್ನಿಸಿಕೊಂಡವರು ಈ ಧೀಮಂತರು. `ಆರ್ಯ

ವಿದ್ಯಾಶಾಲೆ'ಯ ಸ್ಥಾಪನೆ, `ಮಕ್ಕಳ ಪುಸ್ತಕ' ಪ್ರಕಟಣೆ, `ಯೋಗವಾಶಿಷ್ಠ'ದಂತಹ ಗ್ರಂಥದ `ಸುಲಭ ಕನ್ನಡ' ಅನುವಾದದ ಪ್ರಕಾಶನ, ರಂಗಭೂಮಿ ಚಲನಚ್ಚಿತ್ರಗಳಲ್ಲಿ ನಟನೆ ಇತ್ಯಾದಿ ಅವರವು ಹಲವು ಸಾಧನೆಗಳು.

`ಕರ್ನಾಟಕ ಸಂಸ್ಕೃತಿ'ಯ ಉಪನ್ಯಾಸಗಳಲ್ಲಿ ಅವರು ಮೊದಲು ಸಂಸ್ಕೃತಿಯ ಸ್ವರೂಪ ವನ್ನು ಬಿತ್ತರಿಸಿ ಬಳಿಕ ಭಾರತೀಯ ಕರ್ನಾಟಕ ಸಂಸ್ಕೃತಿಗಳೂ, ಶಿಷ್ಟ ಪಾಮರ ಸಂಸ್ಕೃತಿಗಳೂ ಅಭಿನ್ನವೆಂದು ವಾದಿಸಿ ಗ್ರಾಮೀಣ ಸಂಸ್ಕೃತಿಯು ಪ್ರಕಾಶಗೊಳ್ಳುವ ಹಾಡು, ಕತೆ, ಗಾದೆ, ಒಗಟು ಇತ್ಯಾದಿ ಮೌಖಿಕ ಸಾಹಿತ್ಯ ಪ್ರಕಾರಗಳಿಂದಲೂ ವಿವಿಧ ಪದ್ಧತಿ, ಆಚಾರಗಳಿಂದಲೂ ನಿದರ್ಶನಗ ಳನ್ನು ನೀಡುತ್ತ ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾರೆ. ಈ ಉಪನ್ಯಾಸಗಳ ಸಾರವತ್ತಾದ ಭಾಗ ಎಂದರೆ ನಮ್ಮ ಮೌಖಿಕ ಸಾಹಿತ್ಯದ ಉದ್ಧೃತ ಉದಾಹರಣೆಗಳು ಹಾಗೂ ಪ್ರಾಚೀನ ಸಾಹಿತ್ಯ ಮತ್ತು ಆರ್ಯ ಧರ್ಮದ ಆಚಾರ ವಿಚಾರಗಳು ಇವುಗಳಿಂದ ಅವರು ಎತ್ತಿ ತೋರಿಸುವ ಅವುಗಳ ಪರ್ಯಾಯ ಉಲ್ಲೇಖಗಳು.

ಸಂಸ್ಕೃತಿ ಎಂದರೆ `ಅರಗಿದ ಅನ್ನದಂತೆ ಆಚಾರದಲ್ಲಿ ಪರಿಣಾಮವಾಗಿರುವ ವಿದ್ಯೆ' ಎಂದು ಹೇಳಿ, ಅದಕ್ಕೆ ಪರ್ಯಾಯ ಶಬ್ದವಾಗಿ `ರಘುವಂಶ'ದ ಮೊದಲ ಶ್ಲೋಕಗಳಲ್ಲೊಂದರಲ್ಲಿ ಬಳಸುವ `ವಿನಯ' ಎಂಬ ಶಬ್ದವನ್ನು ಅವರು ನಮ್ಮ ಮುಂದಿಡುತ್ತಾರೆ. ಸಂಸ್ಕೃತಿಯಲ್ಲಿ ಮುಪ್ಪರಿಗೊಳ್ಳುವ ಮೂರುಗುಣಗಳು, `ಹೊಂದಾಣಿಕೆ, ಹೆಚ್ಚುತನ, ಹಿರಿಯತನ.' ಮುಂದೆ ಸಂಸ್ಕೃತಿಯ ಸ್ವರೂಪವನ್ನು ಅವರು ಹೀಗೆ ವಿವರಿಸುತ್ತಾರೆ. `ಬದುಕಿರುವ ಮರ ಬೆಳೆಯುತ್ತಲೇ ಇರುವಂತೆ ಸಂಸ್ಕೃತಿಯ ಅರ್ಥ ದಿನದಿನಕ್ಕೂ ಬೆಳೆಯುತ್ತಲೇ ಇರುತ್ತದೆ. ಅದನ್ನು ಬೆಳೆಸುವುದು ಆತ್ಮಪರೀಕ್ಷೆ... ಶುದ್ಧೀಕರಣ ಮಾಡಿಕೊಂಡ ಅಂತರಂಗದಲ್ಲಿ ಸಾಣೆಗೆ ಹಿಡಿದ ವಜ್ರದ ಕಾಂತಿಯಂತೆ ಒಂದು ಹೊಸ ಕಾಂತಿ ಹುಟ್ಟುತ್ತದೆ. ವಜ್ರದ ಕಾಂತಿಗಿಂತ ಸಹಜವಾಗಿ... ಇರುವ ಮನೋಭಾವ, ಅದರಿಂದ ಮೂಡಿದ, ಅದರಿಂದ ಪ್ರೇರಿತವಾದ ನಡೆ, ಇವೆರಡೂ ಸಂಸ್ಕೃತಿಯ ಗುರುತುಗಳು.' ಸಂಸ್ಕೃತಿಯ ಅರ್ಥ ಬೆಳೆ ಯುತ್ತಲೇ ಇರುತ್ತದೆ ಎನ್ನುವ ಮಾತನ್ನು ವಿಸ್ತರಿಸುತ್ತಾ, ಅವರು ಸಂಸ್ಕೃತಿಯನ್ನು ಉತ್ತರೋತ್ತ ರಣಿ ಎಂದು ಕರೆದು ಹೇಗೆ ಅದು ಮುಂದೆ ಮುಂದೆ ಹೋಗುತ್ತ ನದಿಯ ಹಾಗೆ ವಿಶಾಲವೂ ಆಳವೂ ಆಗುತ್ತದೆ ಎಂದು ವಿವರಿಸುತ್ತಾರೆ. ಪುರುಷಾರ್ಥ ಚತುಷ್ಟಯದಲ್ಲಿ ಮೋಕ್ಷ ಎನ್ನುವುದು ನದಿಯು ಸಮುದ್ರವನ್ನು ಸೇರಿ ಸಮುದ್ರವಾಗುವ ಹಾಗೆ ನಮಗೆ ತ್ರಿವರ್ಗ ಎಂದರೆ ಧರ್ಮಾರ್ಥ ಕಾಮಗಳು ಸಾಕು. ಗೀತೆಯಲ್ಲಿ ಧರ್ಮಾವಿರುದ್ಧ ಕಾಮವನ್ನು ಎತ್ತಿ ಹಿಡಿದಿದೆ. ಹೀಗೆ ಈ ಮೂರು ಪುರುಷಾರ್ಥ ಗಳಲ್ಲಿ ಪರಸ್ಪರ ಹೊಂದಾಣಿಕೆ ಇರಬೇಕು, ಸಾಮರಸ್ಯ ಸಾಧಿಸಿಕೊಳ್ಳಬೇಕು.

ಕರ್ನಾಟಕ ಸಂಸ್ಕೃತಿಯ ವಿಶಿಷ್ಟತೆಯನ್ನು ವಿಶ್ಲೇಷಿಸುತ್ತಾ, ದೇವುಡು ಹೀಗೆ ಹೇಳುತ್ತಾರೆ, ೧. `ಕನ್ನಡದಲ್ಲಿ ಪುರಾಣಗಳಿಲ್ಲ, ಜೈನರು ಬರೆದಿರುವ ಪುರಾಣ ಗ್ರಂಥಗಳಿಗೆ ಸಂಸ್ಕೃತದ ಮಾತೃಕೆಗಳಿವೆ ಎನ್ನುತ್ತಾರೆ. ೨. ನಮ್ಮಲ್ಲಿ ಪುಣ್ಯವಂತರು ಮುಂದೆ ಆಕಾಶದಲ್ಲಿ ನಕ್ಷತ್ರಗಳಾಗಿ ಬಾಳುವರು ಎಂಬ ಪ್ರತೀತಿ ಇದ್ದರೂ ನಕ್ಷತ್ರ ಪುರಾಣಗಳಿಲ್ಲ. ೩. ಸೃಷ್ಟಿ ಪ್ರಲಯದ ಕಥೆಗಳಿಲ್ಲ. ೪. ದೇವರು ಎನ್ನು ವುದಕ್ಕೆ ಸರಿಯಾದ ಪದವಿಲ್ಲ. ದ್ರಾವಿಡರ ಪೆರುಮಾಳ್ ಶಬ್ದವು ಪುರುಷೋತ್ತಮ ಶಬ್ದದ ಭಾಷಾಂ

ತರವಿರಬಹುದು; ಆಂಡವನೇ ಎಂಬುದು ಆಳ್ದವನೇ ಶಬ್ದವಿರಬಹುದು. ೫. ಕನ್ನಡದಲ್ಲಿ ಪ್ರತ್ಯೇಕವಾದ ಧರ್ಮಶಾಸ್ತ್ರವಿಲ್ಲ. ೬. ಕನ್ನಡದಲ್ಲಿ ಪ್ರತ್ಯೇಕವಾದ ಅರ್ಥಶಾಸ್ತ್ರ ದಂಡನೀತಿ, ಮೋಕ್ಷ ಶಾಸ್ತ್ರಗಳುಂಟೆ?' ತಮ್ಮ ಈ ಅನಿಸಿಕೆಗಳನ್ನು ವಿದ್ವಾಂಸರು ವಿಮರ್ಶೆ ಮಾಡಬೇಕೆಂದು ದೇವುಡು ವಿನಯದಿಂದ ಅವನ್ನು ಅವರ ಅವಗಾಹನೆಗೆ ತರುತ್ತಾರೆ.

ಪಾಶ್ಚಾತ್ಯ ವಿದ್ವಾಂಸರು ಜನತೆಯ ಸಂಸ್ಕೃತಿಯನ್ನು ನಿರ್ದೇಶಿಸುತ್ತಾ `ನಾಗರಿಕ ಜನಾಂಗದ ಅಪಂಡಿತ ಕುಲಗಳಲ್ಲಿ ಕಾಣಬರುವ ಪರಂಪರಾಪ್ರಾಪ್ತವಾದ ತಿಳಿವು, ಅರಿವು, ಅದೇ ಜನತೆಯ ಸಂಸ್ಕೃತಿ' ಎಂದು ಅದನ್ನು ಒಂದು ವಿಶಿಷ್ಟ ರೂಪವನ್ನಾಗಿ ವಿಂಗಡಿಸುತ್ತಾರೆ. ನಾಗರಿಕ-ಗ್ರಾಮೀಣ ಶಿಷ್ಟ-ಅನಕ್ಷರಸ್ಥ ಪಂಡಿತ-ಪಾಮರ, ಇಂಥ ಭೇದ ದೇವುಡು ಅವರಿಗೆ ಒಪ್ಪಿಗೆಯಾಗದು. ಅವರು ಹೇಳುತ್ತಾರೆ, `ಈ ದೇಶದಲ್ಲಿ ಜೈಮಿನಿ ರಾಜಶೇಖರಗಳಂತಹ ಪ್ರೌಢ ಗ್ರಂಥಗಳನ್ನು ಈ ಕೊನೆಯಿಂದ ಆ ಕೊನೆಯವರೆಗೆ ಕಂಠಪಾಠ ಮಾಡಿರುವ ನಿರಕ್ಷರರಿದ್ದಾರೆ; ಚುಟಿಕೆ ಹೊಡೆಯುವಷ್ಟು ಹೊತ್ತಿನಲ್ಲಿ ಹಾಡು ಲಾವಣಿಗಳನ್ನು ಕಟ್ಟಬಲ್ಲ ಪಾಮರರಿದ್ದಾರೆ; ಸಾವಿರಾರು ನುಡಿಯ ಹಾಡುಗಳು ಇಪ್ಪತ್ತು ಮೂವತ್ತನ್ನು ನಿರಾಯಾಸವಾಗಿ ಚಾಚೂ ತಪ್ಪಿಲ್ಲದೆ, ಇತರರ ಸಹಾಯವಿಲ್ಲದೆ ಬಾಯಲ್ಲಿ ಹೇಳುವ ಹೆಣ್ಣು ಹೆಂಗುಸರಿದ್ದಾರೆ. ಹೆಸರಾದ ಡಾಕ್ಟರುಗಳು ಕೈಬಿಟ್ಟ ವ್ಯಾಧಿಯನ್ನು ಘುಟಿಕಾ ಮಂತ್ರ ಮೂಲಿಕೆಗಳಿಂದ ಗುಣಪಡಿಸಬಲ್ಲ ಅಜ್ಞರಿದ್ದಾರೆ.

ಇದಕ್ಕೆ ಕಾರಣ, `ಋಷಿಗಳ ತಪೋವನಗಳು, ಜೈನರ ಬಸ್ತಿಗಳು, ಬೌದ್ಧರ ವಿಹಾರಗಳು, ಬ್ರಾಹ್ಮಣರ ದೇವಸ್ಥಾನಗಳು, ರಾಜರ ಸಭೆಗಳು, ವಿದ್ವಾಂಸರ ಗೋಷ್ಠಿಗಳು, ದಾಸರ ಹರಿಕಥೆಗಳು, ಶರಣರ, ಸಾಧುಗಳ ತತ್ವಗಳು, ಕೊನೆಗೆ ಭಿಕ್ಷುಕರ ಹಾಡುಗಳು-ಇವೆಲ್ಲ ಸಾವಿರಾರು ಸಲ ಸಂಸ್ಕೃತಿಯ ತೆರೆಗಳನ್ನು ಜನತೆಯ ಮೇಲೆ ಹರಿಯಿಸಿ ಹರಿಯಿಸಿ ಪ್ರಜಾವರ್ಗಕ್ಕೆ ಬೇಕಾದ ಹಾಗೆ ಸಂಸ್ಕೃತಿಯ ಗಂಗಾಸ್ನಾನವನ್ನು ಮಾಡಿಸಿವೆ. `ಜ್ಞಾನ ಭಕ್ತಿ ಮಾರ್ಗಗಳ ಸೌಂದರ್ಯವನ್ನು ಮೆರೆಯುತ್ತಿರುವ ಶ್ರೇಯಃಪ್ರಧಾನವಾದ ವೈದಿಕ ಸಂಸ್ಕೃತಿ'. `ಕುಲ ಕುಲಾಂತರಗಳ ಆಚಾರ ಸಮಾಯಾದಿ ನಾನಾ ವ್ಯವಹಾರಗಳಲ್ಲಿ ಹಾಸುಹೊಕ್ಕಾಗಿ ಬೆರೆತು ಹೋಗಿದೆ'. ತಮ್ಮ ಇದೇ ಸಿದ್ಧಾಂತವನ್ನೇ ಇನ್ನೊಂದು ರೀತಿಯಲ್ಲಿ ವಿವರಿಸುತ್ತಾ `ವೈದಿಕ ಸಂಸ್ಕೃತಿಯ ಮಾರ್ಗ ಕರ್ನಾಟಕ ಸಂಸ್ಕೃತಿಯ ದೇಶಿ' ಎಂದು ಹೇಳಿ ಹೇಗೆ ಅವುಗಳ ಮೂಲತಃ ಬೇರೆ ಬೇರೆಯಲ್ಲ ಎಂದು ಸಮರ್ಥಿಸಲು ಹಲವು ನಿದರ್ಶನಗಳನ್ನು ನೀಡುತ್ತಾರೆ.

ಸೂರ್ಯನಮಸ್ಕಾರ ವೈದಿಕವೂ ಹೌದು, ಹಳ್ಳಿಗರ ಆಚರಣೆಯಲ್ಲಿಯೂ ಇರುವುದೇ. ವಿಧಿವಿಲಾಸವನ್ನು ಎಲ್ಲರು `ಹಣೆಯ ಬರಹ' ಎಂದೇ ರೂಢಿಯಾಗಿ ಹೇಳಿಕೊಳ್ಳುತ್ತೇವೆ. ವಿವಾಹ ವಿಧಿಗಳಲ್ಲಿಯೂ ಕರ್ನಾಟಕ ಸಂಸ್ಕೃತಿಯು ಹೇಗೆ `ವೈದಿಕ ಸಂಸ್ಕೃತಿಯ ರೂಪಾಂತರ, ಪ್ರತಿಬಿಂಬ' ಎಂಬುದನ್ನು ಕಾಣುತ್ತೇವೆ. `ವೀಳ್ಯದ ಶಾಸ್ತ್ರ' `ನಿಶ್ಚಿತಾರ್ಥ', `ಚಪ್ಪರ', ವಿವಾಹ ಮಂಟಪ ಕಟ್ಟುವಿಕೆ, ಧಾರೆ, ಕನ್ಯಾವರ, `ಸೇಸೆ'ಯಲ್ಲಿ ಕನ್ಯಾರವರು ಪರಸ್ಪರವಾಗಿ ಅಕ್ಷತೆಯಿಂದ ಅರ್ಜಿಸುವರು. ಭೂಮ, ನವದಂಪತಿಗಳ ಒಟ್ಟಿಗೆ ಮಾಡುವ ಭೋಜನ. ಕುಂಕುಮದ ನೀರು ತುಂಬಿದ ಕಲಶಗಳನ್ನು ಹೂಡುವುದು, ನಾಗವಲಿ, ಗದ್ದುಗೆ, ತಾಂಬೂಲ ಚರ್ವಣ. ವಿವಾಹದ ಮುಖ್ಯಾಂಗವಾಗಿ ಮಾಂಗಲ್ಯ ಧಾರಣ,

ಹಲವು ಜಾತಿಗಳಲ್ಲಿದ್ದ ಬಸವಿ ಬಿಡುವ ಸಂಪ್ರದಾಯವೂ ವೇದಗಳ ಕಡೆಯಿಂದ ಬಂದಿರಬಹುದು ಎಂಬ ಊಹೆಗೂ ಸಾಧ್ಯ. ಏಕೆಂದರೆ ಕಾನೀನ ಪುತ್ರ ಪದ್ಧತಿಯನ್ನು ಇದು ಹೋಲುತ್ತದೆ. ಕೆಲವರು ಕ್ಷೇತ್ರಜನನ್ನು ಔರಸನೆಂದು ಗ್ರಹಿಸುವುದೂ ಈ ಅನುಮಾನವನ್ನು ಸಮರ್ಥಿಸುತ್ತದೆ. ಮಕ್ಕಳ ಆಟಗಳನ್ನೂ ಪರಿಶೀಲಿಸಬಹುದು. `ಸ್ವಾದಿಷ್ಟಯ್ಯ ಮಾದಿಷ್ಟಯ್ಯ ಮತ್ತಿಷ್ಟು ತುಪ್ಪ ಹಾಕಯ್ಯ, ಹಾಕಯ್ಯ' ಎಂದು ಕೆನ್ನೆಗಳನ್ನು ಹಿಡಿದು ಮಗುವನ್ನು ಹಿಂದಕ್ಕೆ ಮುಂದಕ್ಕೆ ಜೂಗಾಡಿಸುವುದು ಋಗ್ವೇದದ ಸಾದಿಷ್ಟಯಾ ಮದಿಷ್ಟಯಾ ಪವಸ್ವ ಸೋಮಧಾರಯಾ' ಎಂಬ ಮಂತ್ರದ ಆಭಾಸ. ಈಗಿನ ಹೆಂಗುಸು ಗಂಡಸರ ಉಡುಗೆ ತೊಡುಗೆಗಳೂ ವೇದಕಾಲೀನ `ಹಳ್ಳಿಯ ಹೆಂಗುಸರು ಕಟ್ಟುವ ತುರುಬು, ಅವರು ಸೊಪ್ಪು ಸೆದೆಗಳನ್ನು ತುರುಕಿಕೊಳ್ಳುವುದಕ್ಕಾಗಿ ಮಗ್ಗುಲಾಗಿ ಕಟ್ಟುವ ಮಡಿಲು, ಅವರುಡುವ ಸೀರೆ, ಗಂಡುಸರುಡುವ ಧೋತರ ದಟ್ಟಿ, ಕಠಾರಿ ಕಚ್ಚೆ ಧೋತರ, ಬಣ್ಣದ ತಲೆ ಸುತ್ತು ಪಾಗುಗಳು- ಇವೆಲ್ಲ ವೇದದ ಕಾಲದವು. ಅಷ್ಟೇ ಅಲ್ಲ; ಹಳೆಯ ಕಾಲದ ತೊಟ್ಟಿಯ ಮನೆಗಳು, ನಮ್ಮ ಮನೆಗಳಲ್ಲಿರುವ ಹಳೆಯ ಮಂಚ, ಕಾಲುಮಣೆ, ಮಣೆ, ಚಾಪೆಗಳು... ವೇದಗಳ ಕಾಲದಲ್ಲಿದ್ದ ಜನರು ಉಪಯೋಗಿಸುತ್ತಿದ್ದವು.

ಪೌರಾಣಿಕ ಕತೆಗಳೂ ಜಾನಪದ ಕತೆಗಳೂ ಸಜಾತೀಯ ಎಂದು ಸ್ಥಾಪಿಸಲು ದೇವುಡು ನಿದರ್ಶನಗಳನ್ನು ಕೊಡುತ್ತಾರೆ. ಜಂತದಕ್ಕಯ್ಯನ ಜಾನಪದ ಕತೆಗಳೂ ಐತರೇಯ ಬ್ರಾಹ್ಮಣದ ಹರಿಶ್ಚಂದ್ರನ ಕತೆಗೂ ಇರುವ ಸಾಮ್ಯವನ್ನು ಅವರು ಈ ಸಂಬಂಧದಲ್ಲಿ ಗುರುತಿಸುತ್ತಾರೆ. ಜಂತದಕ್ಕಯ್ಯನ ತಾಯಿ, ರಾಣಿ, ಪಟ್ಟದಾನೆಯ ಹತ್ತಿರ ಹರಕೆ ಹೊತ್ತುಕೊಳ್ಳುತ್ತಾಳೆ. ತನಗೆ ಮಗುವಾದರೆ ಅದನ್ನು ಆ ಆನೆಯ ಮೇಲೆ ಆ ಮಗುವೊಂದನ್ನೇ ಕೂಡಿಸಿ ಮೆರವಣಿಗೆ ಮಾಡಿಸುತ್ತೇನೆಂದು. ಆದರೆ ಜಂತದಕ್ಕಯ್ಯನ ಜನನವಾದ ಮೇಲೆ ಮಗುವಿಗೆ ಅಪಾಯವಾದೀತೆಂದು ಅಂಜಿ ಅವಳು ಹರಕೆ ಪೂರೈಸುವುದನ್ನು ಮುಂದೂಡುತ್ತಾಳೆ. ಕಟ್ಟಕಡೆಗೆ, ಮಗಳು ಮೈನೆರೆದ ಮೇಲೆ, ಆನೆಯ ಒತ್ತಾಯಕ್ಕೆ ಮಣಿದು ಅವಳೊಬ್ಬಳನ್ನೇ ಅದರ ಮೇಲೆ ಕೂಡಿಸಿ ಮೆರವಣಿಗೆಯ ಏರ್ಪಾಡು ಮಾಡುತ್ತಾಳೆ. ಹೀಗೆ ರಾಣಿ ತಡ ಮಾಡಿದುದಕ್ಕೆ ಆನೆ ಸಿಟ್ಟಾಗಿ ಕಾಡಿಗೆ ನುಗ್ಗಿ ಸಾಕಷ್ಟು ಮರಗಿಡಗಳನ್ನು ಧ್ವಂಸಮಾಡಿ ತಾನೂ ಸಾಯುತ್ತದೆ. ದಾರಿಯಲ್ಲಿಯೇ ಅದರ ರೊಚ್ಚನ್ನು ಕಂಡ ರಾಜಪುತ್ರಿಗೆ ಕೈಗ ಸಿಕ್ಕ ಮರದ ಕೊಂಬೆಯನ್ನು ಅವಲಂಬಿಸಿ ಪ್ರಾಣರಕ್ಷಣೆ ಮಾಡಿಕೊಳ್ಳುತ್ತಾಳೆ.

ಮುಂದೆ ಕಾಡು ಕುರುಬರು ಮರದ ಮೇಲೆಯೇ ಸತ್ತ ಆನೆಯ ದಂತದಿಂದ ಒಂದು ಮನೆ ನಿರ್ಮಾಣ ಮಾಡಿಕೊಟ್ಟು ಅದರಲ್ಲಿ ಅವಳು ನೆಲೆಸುತ್ತಾಳೆ. ಇದರಿಂದಲೇ ಅವಳ ಹೆಸರು ಜಂತದಕ್ಕಯ್ಯ ಎಂದಾಗುತ್ತದೆ. ಹರಕೆ ಹೊತ್ತು ಅದನ್ನು ನಡೆಸದೆ ಮುಂದೆ ಹಾಕುವ ಇದೇ ಆಶಯ ಈ ಹಿಂದೆಯೇ ಹರಿಶ್ಚಂದ್ರನ ಪೌರಾಣಿಕ ಕತೆಯಲ್ಲಿ ಕಂಡುಬರುತ್ತದೆ.

ಐಲೂಷ ಪ್ರಸಂಗ

ಇದೇ ಐತರೇಯ ಬ್ರಾಹ್ಮಣದ ಇನ್ನೊಂದು ಕತೆಯಲ್ಲಿ ಸರಸ್ವತೀ ತೀರದಲ್ಲಿ ಯಾಗ ಮಾಡುತ್ತಿದ್ದ ಋಷಿಗಳು ಐಲೂಷನೆಂಬುವನನ್ನು ಶೂದ್ರನೆಂದು ತಮ್ಮೊಳಗೆ ಸೇರಿಸಿಕೊಳ್ಳದೆ ಅಟ್ಟಿ

ಬಿಟ್ಟಾಗ ದೇವತೆಗಳು ಯಾಗ ಭೂಮಿಯನ್ನು ಬಿಟ್ಟು ಹೋಗುತ್ತಾರೆ. ಋಷಿಗಳು ಐಲೂಷನನ್ನು ಕರೆತಂದು ಅವನನ್ನು ತಮ್ಮೊಲ್ಲೊಬ್ಬನನ್ನಾಗಿ ಮಾಡಿಕೊಂಡ ಮೇಲೆಯೇ ದೇವತೆಗಳು ಬರುತ್ತಾರೆ. ಇದೇ ಆಶಯ ಫಕೀರ ಸ್ವಾಮಿಯ ಜಾನಪದ ಕತೆಯಲ್ಲಿಯೂ ಕರಡುಬರುತ್ತದೆ. ಇಲ್ಲಿಯೂ ದೊಡ್ಡ ಶೆಟ್ಟರುಗಳು ಫಕೀರ ಸ್ವಾಮಿ ತನಗೆ ಮೊದಲು ಭೋಜನವಾಗಬೇಕೆಂದು ಕೇಳಿದಾಗ ಅವನನ್ನು ಹೊರಕ್ಕೆ ದೂಡಿಬಿಡುತ್ತಾರೆ. ಆಮೇಲೆ ಅವರ ಕೊರಳುಗಳ ಲಿಂಗಗಳು ಮಾಯವಾಗಿ ಅವರು ಅವನ ಬಳಿ ಸಾಗಿ ಅವನ ಕ್ಷಮೆ ಬೇಡಿದ ಮೇಲೆ ಅವರಿಗೆ ಅವರ ಲಿಂಗಗಳು ಮತ್ತೆ ದೊರಕುತ್ತವೆ.

ಇಂಥ ಎಷ್ಟೋ ನಿದರ್ಶನಗಳಿಂದ ದೇವುಡು ಕರ್ನಾಟಕ ಸಂಸ್ಕೃತಿ ವೈದಿಕ ಸಂಸ್ಕೃತಿಯ ದೇಶೀರೂಪವೇ ಹೊರತು ಅದು ಅದರಿಂದ ಭಿನ್ನವಾದುದಲ್ಲ ಎನ್ನುವ ತಮ್ಮ ಸಿದ್ಧಾಂತವನ್ನು ಸಮರ್ಥವಾಗಿ `ಕರ್ನಾಟಕ-ಸಂಸ್ಕೃತಿ'ಯ ಉಪನ್ಯಾಸಗಳಲ್ಲಿ ಮಂಡಿಸುತ್ತಾರೆ. ಪುಸ್ತಕದ ಅರ್ಧಕ್ಕೂ ಹೆಚ್ಚು ಭಾಗ ಜಾನಪದ ಹಾಡುಗಳ, ಕತೆಗಳ ಗಾದೆ ಒಗಟುಗಳ ಉದ್ಧೃತ ಉಲ್ಲೇಖಗಳಿಂದ ಸಂಪನ್ನವಾಗಿರುವುದರಿಂದ ದೇವುಡು ಅವರ ವಾದವನ್ನು ಒಪ್ಪದವರೂ ಈ ಜಾನಪದ ಸಾಹಿತ್ಯದ ಸೊಗಸನ್ನು ಸವಿದು ಆನಂದಿಸಬಹುದಾಗಿದೆ. ಕರ್ನಾಟಕ ಸಂಸ್ಕೃತಿಯ ಹೆಚ್ಚಿನ ಅಧ್ಯಯನಕ್ಕೆ ದೇವುಡು ಅವರ ಈ ಉಪನ್ಯಾಸಮಾಲೆ ನಿಸ್ಸಂಶಯವಾಗಿಯೂ ಒಂದು ಅಮೂಲ್ಯ ಕೊಡುಗೆ.

ಜನಪದ ಹಾಡುಗಳ ಜೇನುಗೂಡು

ಕರ್ನಾಟಕ ಸಂಸ್ಕೃತಿಯನ್ನು ಕುರಿತ ದೇವುಡು ನರಸಿಂಹ ಶಾಸ್ತ್ರಿಗಳ ವಿಶೇಷೋಪನ್ಯಾಸಮಾಲೆ ಸಹಜವಾಗಿಯೇ ಎರಡು ವಿಭಾಗಗಳಾಗಿ ವಿಂಗಡಗೊಳ್ಳುತ್ತದೆ. ಕರ್ನಾಟಕ ಸಂಸ್ಕೃತಿ ಭಾರತೀಯ ವೈದಿಕ ಸಂಸ್ಕೃತಿಯಿಂದ ಭಿನ್ನವಲ್ಲ, ಅದು ಆ ಸಂಸ್ಕೃತಿಯ ಪ್ರಾದೇಶಿಕ ಪ್ರಸ್ತುತ ರೂಪಾಂತರ, ಎನ್ನುವ ದೇವುಡು ಅವರ ಸಿದ್ಧಾಂತದ ಮಂಡನೆ ಒಂದು ವಿಭಾಗ, ಅದರ ಸಮರ್ಥನೆಗೆ ಅವರು ಉದ್ಧರಿಸಿ ವಾಖ್ಯಾನಿಸುವ ಕನ್ನಡ ಜಾನಪದ ಹಾಡು, ಕತೆ, ಗಾದೆ, ಒಗಟುಗಳ ಸಂಗ್ರಹ ಇನ್ನೊಂದು.

ಈ ಉಪನ್ಯಾಸಗಳನ್ನು ಅವರು ಕೊಟ್ಟ ಕಾಲ ಇನ್ನೂ ಜಾನಪದ ಸಾಹಿತ್ಯ ಸಂಗ್ರಹ ಸಂಶೋಧನೆಗಳ ಅರುಣೋದಯ ಸಮಯ. ಈಚಿನ ಹಲವು ವರ್ಷಗಳಲ್ಲಿ ನಾಡಿನ ಮೂಲೆ ಮೂಲೆಗಳಲ್ಲಿಯೂ ಜನಪದ ಸಾಹಿತ್ಯದ ಸಂಗ್ರಹ ಕಾರ್ಯ ನಡೆಯುತ್ತ ಬಂದಿದೆ, ಹಾಗೂ ಸಂಗ್ರಹಗಳು ಪ್ರಕಟವಾಗುತ್ತ ಬಂದಿವೆ. ಜಾನಪದ ಸಾಹಿತ್ಯವನ್ನು ಕುರಿತು ಸಂಶೋಧನೆಯೂ ಹೆಚ್ಚು ವ್ಯವಸ್ಥಿತವಾಗಿ ಈಗ ನಡೆಯುತ್ತಿದ್ದು ಈ ಕ್ಷೇತ್ರದಲ್ಲಿ ಶ್ರೇಷ್ಠ ಶಾಸ್ತ್ರೀಯ ಕೃತಿಗಳೂ ಹೊರಬರುತ್ತಿವೆ. ಆದರೆ ಈ ಶತಮಾನದ ಮೂರನೇ ದಶಕದ ಮೊದಲ ವರ್ಷಗಳಲ್ಲಿಯೇ ಇಷ್ಟೆಲ್ಲ ಸ್ವಾರಸ್ಯಪೂರ್ಣ ಜಾನಪದ ಹಾಡು ಕತೆ ಗಾದೆ ಒಗಟುಗಳನ್ನು ಕಲೆ ಹಾಕಿ ಅವುಗಳ ಬಗ್ಗೆ ಒಂದು ಅರ್ಥಪೂರ್ಣ ಸಿದ್ಧಾಂತವನ್ನು ದೇವುಡು ಮಂಡಿಸಿದರು ಎನ್ನುವುದು `ಕರ್ನಾಟಕ ಸಂಸ್ಕೃತಿ' ಕೃತಿಯ ಚಾರಿತ್ರಿಕ ಮಹತ್ವಕ್ಕೆ ದ್ಯೋತಕವಾಗಿದೆ.

ಹಾಡುಗಬ್ಬ

ಇಲ್ಲಿ ಶೇಖರವಾಗಿರುವ ಜಾನಪದ ಕೃತಿಗಳಲ್ಲಿ ಮುಖ್ಯವಾದುವು ಶ್ರೇಷ್ಠ ಕಾವ್ಯಗುಣಗಳನ್ನು ಪ್ರದರ್ಶಿಸುವ ಹಾಡುಗಬ್ಬಗಳು. ಈ ಉಪನ್ಯಾಸಗಳಲ್ಲಿ ದೇವುಡು ಅವರ ಲಕ್ಷ್ಯ ಹೆಚ್ಚಾಗಿ ತಮ್ಮ ಸಿದ್ಧಾಂತವನ್ನು ಅವು ಹೇಗೆ ಸಮರ್ಥಿಸುತ್ತವೆ ಎಂದು ತೋರಿಸುವುದರ ಕಡೆಗೆ. ಆದರೆ ಇಷ್ಟೇ ಅಲ್ಲದೆ ಅವು ಶಿಷ್ಟ ಸಾಹಿತ್ಯ ಕೃತಿಗಳ ಜೊತೆಗೂ ನಿಲ್ಲಬಲ್ಲವು, ದೇವುಡು ಅವರ ಸಿದ್ಧಾಂತವನ್ನು ಒಪ್ಪದವರಿಗೂ ಸಹ ಇವು ಅಪ್ಯಾಯಮಾನವಾಗಬಲ್ಲವು. ಇವುಗಳ ಸಾಹಿತ್ಯಕ ಮೌಲ್ಯಗಳ ಕಡೆಗೇ ಹೆಚ್ಚಾಗಿ ಈ ಲೇಖನ ಗಮನ ಸೆಳೆಯುತ್ತದೆ.

ನಮ್ಮ ಅತ್ಯಂತ ಹಳೆಯ ಲಾವಣಿಗಳಲ್ಲೊಂದಾದ `ಪಿರಿಯ ಪಟ್ಟಣದ ಜಗಳ' ಒಂದು ಅಪೂರ್ವ ಐತಿಹಾಸಿಕ ಖಂಡಕಾವ್ಯ. ಸಾವಿರದ ಆರನೂರ ಹದಿನೈದರಲ್ಲಿ ಪಿರಿಯ ಪಟ್ಟಣದ ಮೇಲೆ ಮೈಸೂರು ಸಾಧಿಸಿದ ವಿಜಯವನ್ನು ಈ ವೀರಗಾಥೆ ಕೀರ್ತಿಸುತ್ತದೆ. ಆದರೆ ಇಲ್ಲಿ ಪ್ರಕಟವಾಗುವುದು ಮೈಸೂರಿನ ದಳವಾಯಿ ಧೈರ್ಯ ಶೌರ್ಯಗಳಿಗಿಂತ ದೇವಿ ಚಾಮುಂಡಾಂಬೆಯ ಅಭಿಮಾನ ಶಕ್ತಿ ಪ್ರಭಾವಗಳು. ಇದರ ಮಹತ್ವದ ಒಂದಂಶವೆಂದರೆ ಪ್ರತಿ ನಾಯಕನಿಗೆ ಅದು ಸಲ್ಲಿಸುವ ನ್ಯಾಯ, ಅವನ ಅಪ್ರತಿಮ ಪ್ರತಾಪಕ್ಕೆ ಸಲ್ಲಿಸುವ ಗೌರವ.

ಪಿರಿಯ ಪಟ್ಟಣದ ವೀರರಾಜಭೂಪನೊಡನೆ ಸೆಣಸಹೋಗುವುದು ವಿವೇಕವಲ್ಲವೆಂದು ಅರಸರೇ ಮುನ್ನೆಚ್ಚರಿಸಿದರೂ ಅಂಥ ವೀರನೊಬ್ಬನೊಡನೆ ಕಾದಾಡಿ ಅವನಿಂದ ಕಪ್ಪಕಾಣಿಕೆಗಳನ್ನು ವಸೂಲು ಮಾಡುವ ಮಹತ್ವಾಕಾಂಕ್ಷೆ,ಮೈಸೂರಿನ ದಳವಾಯಿಯದು. ಯುದ್ಧದ ಮೊದಲ ಹಂತದಲ್ಲಿ ನಿರೀಕ್ಷಿಸಿದಂತೆ ದಳವಾಯಿ ಸೋಲನ್ನನುಭವಿಸುತ್ತಾನೆ. ಮೂರು ಪಟಾಲಂಗಳನ್ನು ಕಳೆದುಕೊಂಡ ಅವನು ಹೆಚ್ಚಿನ ದಂಡು ಗುಂಡುಗಳಿಗಾಗಿ ಅರಸರಲ್ಲಿ ಮಾಡಿಕೊಳ್ಳುವ ಬಿನ್ನಹ ನಿರಾಕೃತವಾದಾಗ ತನಗೆ ಉಳಿದಿರುವುದು ವೀರೋಚಿತ ಮರಣವೇ ಎಂದು ಅವನು ನಿಶ್ಚಯಿಸುತ್ತಾನೆ. ಆದರೆ ಮರುಯುದ್ಧದ ಮುನ್ನಾ ದಿನದ ರಾತ್ರಿ ಕನಸಿನಲ್ಲಿ ಚಾಮುಂಡಾಂಬಿಕೆ ಕಾಣಿಸಿಕೊಂಡು ತಾನು ಅವನ ಬೆಂಬಲಕ್ಕಿರುವುದಾಗಿ ಅಭಯವಿತ್ತು ಅವನನ್ನು ಹುರಿದುಂಬಿಸುತ್ತಾಳೆ. ಕೂಡಲೆ ಶತ್ರುಗಳ ಮೇಲೆ ದೇವಿ ಮಂಕುಬೂದಿ ತೂರಿ ಅವರನ್ನು ಬೆಪ್ಪುಗೊಳಿಸುತ್ತಾಳೆ.

ಪಿರಿಯಪಟ್ಟಣದ ಕಡೆಯೂ ಇರುವ ಅತಿಮಾನುಷ ಶಕ್ತಿಗಳು ದೇವಿಯ ಪ್ರಭಾವವನ್ನು ಎದುರಿಸಲಾರದೆ ಹೋಗುತ್ತವೆ. ವೀರಯುಗದ ಸಂಪ್ರದಾಯಕ್ಕನುಗುಣವಾಗಿ ವೀರರಾಜ ತನ್ನ ರಾಣಿವಾಸದೊಡನೆ ಕ್ಷೀರಾನ್ನ ಸಹಭೋಜನ ಮಾಡಿ ಅವರನ್ನು ಕತ್ತಿಗೆ ಬಲಿಕೊಟ್ಟು, ತಾನೂ ರಣರಂಗದಲ್ಲಿ ಹೋರಾಡಿ ವೀರಸ್ವರ್ಗವನ್ನು ಸೇರುತ್ತಾನೆ. ಅವನ ದುರಂತ ಸಾಫೋಕ್ಲೀಸ್‌ನ ಏಜಾಕ್ಸ್ (ಶ್ರೀ ಅವರ ಅಶ್ವತ್ಥಾಮನ್)ನ ದುರಂತವನ್ನು ನೆನಪಿಗೆ ತರುವಂತಹುದು. ದೈವೀಶಕ್ತಿಗಳು ವೀರನಾಯಕರ ಸಂಘರ್ಷದಲ್ಲಿ ತಾವೂ ಪ್ರವೇಶಿಸುವ ವೀರಯುಗದ ಚಿತ್ರ ಅತ್ತ ಹೋಮರ್‌ನ `ಇಲಿಯಡ್' ಇತ್ತ ರಾಮಾಯಣ ಮಹಾಭಾರತಗಳ ಯುದ್ಧಕಾಂಡಗಳನ್ನು ನೆನಪಿಗೆ ತರುತ್ತದೆ. `ಜಗಳ ಹತ್ತಿತು ನೋಡೋ ಕರ್ಣಪಾರ್ಥರಾಗೇ' ಎಂದು ಲಾವಣಿಕಾರನೇ ಉದ್ಗರಿಸುತ್ತಾನೆ.

ಇಂಥದೇ ಇನ್ನೊಂದು `ಹೀರೋಯಿಕ್ ಬ್ಯಾಲಡ್', ವೀರಗಾಥೆ, `ಶ್ರೀರಂಗಪಟ್ಟಣದ ಕಾಳಗ'. ಮೀರ್ ಸಾದಕ್‌ನ ದೇಶದ್ರೋಹವನ್ನೂ ಟೀಪೂವಿನ ದುರಂತವನ್ನೂ ಚಿತ್ರಿಸುವ ಇದೊಂದು ಕರುಣ ರಸಾರ್ದ್ರ ಖಂಡಕಾವ್ಯ. ಇಂಥ ಕಾಳಗ ಪದಗಳಲ್ಲದೆ ನಮ್ಮಲ್ಲಿ ರಮ್ಯ ಶೃಂಗಾರ ಕಾವ್ಯಗಳೂ ಇವೆ. ಇಂಥ `ರೋಮಾನ್ಸ್'ಗಳಲ್ಲಿ ವಿಶೇಷವಾಗಿ ಗಮನ ಸೆಳೆಯುವುವು ಚಾಮಾಯಿ ನಂಜುಂಡರ ಪ್ರಣಯವನ್ನು ಕುರಿತ ಪದಗಳೂ ಕಾಮನ ಪದಗಳೂ. ಕೆಟ್ಟದೊಂದು ಕನಸು ಕಂಡ ಚಾಮಾಯಿ ನಂಜುಂಡನ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರಲು ತಂಗಿ ಉತ್ತನಹಳ್ಳಿ ಮಾರಿಯನ್ನು ಕಳುಹಿಸುತ್ತಾಳೆ. ಚಾಮಾಯಿಯ ಚೆಲುವಿಗೆ ಮನಸೋತಿದ್ದ ನಂಜುಂಡ ಉಪಾಯವಾಗಿ `ಪಟ್ಟದರಾಣಿ ಪಾರ್ವತಿ'ಯ ಕಣ್ಣುತಪ್ಪಿಸಿ ಬಂದು ಚಾಮಾಯಿಯನ್ನು ಕೂಡಿಕೊಳ್ಳುತ್ತಾನೆ. ಈ ಸುಖಾಂತದಿಂದ ಸಂತುಷ್ಟಳಾದ ಚಾಮಾಯಿ ಈ ಮೊದಲು ಭಾವನನ್ನು ಕೂಡಿಕೊಂಡಿದ್ದ ತಂಗಿಯನ್ನು ಕ್ಷಮಿಸಿಬಿಡುತ್ತಾಳೆ.

ಹರನ ಮೇಲೆ ತನ್ನ ಪ್ರತಾಪವನ್ನು ತೋರಿಸಲು ಹೊರಟ ಕಾಮದೇವನ ಸಮರಸನ್ನಾಹವನ್ನು ಸೊಗಸಾಗಿ ಚಿತ್ರಿಸುವ ಕಾಮನಪದ ಒಂದರ ಈ ಸಾಲುಗಳನ್ನು ನೋಡಿ:

`ರತ್ನಮಯ ಕಿರೀಟವಿಟ್ಟು, ಜತನವಾದ ಕವಚ ತೊಟ್ಟು,
ವೀರಮುದ್ರೆ ಇಕ್ಷುಚಾಪ ಪುಷ್ಪಶರವ ಪಿಡಿದನೂ
ಮಘಮಘೀಪ ದಿವ್ಯವಾದ ಹೂವು ಪಿಡಿದು ಸುತ್ತ ಮಲ್ಲಿ
ಯೆಂಬ ಕತ್ತಿ ಯೆತ್ತಿ ಕರದಿ ಪಿಡಿದುಕೊಂಡು ನಡೆದನೂ
ಇರಾವಂತಿಗೆಂಬ ಚೂರಿ ಭರದಿ ನಡುವಿನಲ್ಲಿ ಕಟ್ಟಿ
ನಾಗ ಪುನ್ನಾಗವೆಂಬ ಬತ್ತಳೀಕೆ ಕಟ್ಟಿದಾ
ಗಿಳಿಯ ರಥವೇರಿ ಒಳ್ಳೆ ಸುಳಿಯ ಗಾಳಿ ಮಂತ್ರಿ ಕೂಡಿ
ಚಂದ್ರಬಿಂಬವೆಂಬ ಶ್ವೇತಛತ್ರದಿಂದ ಒಪ್ಪುತಾ'

`ಕುಮಾರಸಂಭವ' `ಗಿರಿಜಾ ಕಲ್ಯಾಣ' ಕಾವ್ಯಗಳ ಇದೇ ಸಂದರ್ಭದ ಚಿತ್ರಗಳೊಂದಿಗೆ ಜೊತೆಜೊತೆಯಾಗಿ ಇಡಬಹುದಾದ ಚಿತ್ರ ಇದಲ್ಲವೆ?

ವಿನೋದದ ಪದಗಳಿಗೇನೂ ನಮ್ಮ ಜನಪದ ಸಾಹಿತ್ಯದಲ್ಲಿ ಕೊರತೆ ಇಲ್ಲ. ದೇವುಡು ಇಲ್ಲಿ ಉದಾಹರಿಸಿರುವ `ಕೊಣವೇಗೌಡನ ಕತೆ' ಒಂದು ಉತ್ತಮ ವಿನೋದದ ಲಾವಣಿ. ಕೊಣವೇಗೌಡ ತುಂಬಾ ಜೀನ. ಇವನಿಗೆ ಸರಿಯಾಗಿ ಬುದ್ಧಿ ಕಲಿಸುವವಳು ಕೊಡಗಿನ ಮಾರಿ. ಬಂದ ಭಿಕ್ಷುಕರಿಗೆ ಗಂಡ ಸತ್ತುಹೋಗಿರುವನೆಂದು ಸುಳ್ಳುಹೇಳಿ ಅವರನ್ನು ಸಾಗಹಾಕುವಂತೆ ಅವನು ಹೆಂಡತಿಗೆ ಹೇಳಿಕೊಡುತ್ತಾನೆ. ದಾಸಯ್ಯನ ವೇಷದಲ್ಲಿ ಕೊಡಗಿನ ಮಾರಿ ಬಾಗಿಲಿಗೆ ಬಂದಾಗಲೂ ಅವಳು ಹೀಗೆಯೇ ಸುಳ್ಳು ಹೇಳುತ್ತಾಳೆ. `ಬಿಕ್ಕಿಬಿಕ್ಕಿ ಅತ್ಲೂ, ಕಣ್ಣಲ್ಲಿ ನೀರೇ ಇಲ್ಲ' ತನ್ನ ಶಂಖ ಜಾಗಟೆಳನ್ನು ತೆಗೆದಿಟ್ಟು ಸತ್ತವನ ದರ್ಶನಕ್ಕೆ ಮಾರಿ ಮನೆಯೊಳಗೆ ಪ್ರವೇಶಿಸುತ್ತಾಳೆ. ಉಸಿರು ಬಿಗಿಹಿಡಿದು ಮಲಗಿದ್ದ ಗೌಡನ ಬಾಯಿ ತೆರೆದು ಅಕ್ಕಿ ತುಂಬಿ ಅವಳು ಮತ್ತೆ ಹೊರಕ್ಕೆ ಬಂದು ಚಟ್ಟ ತಯಾರಿಸಿ ಅವನನ್ನು ಒಳಗಿಂದ ಎತ್ತಿ ತಂದು ಅದರ ಮೇಲೆ ಮಲಗಿಸುತ್ತಾಳೆ. ನೋಡುತ್ತಾಳೆ. `ಅಕ್ಕಿ ಒಂದ್ಕಾಳೂ ಇರಲೇ ಇಲ್ಲ!' ಹೆಣಕ್ಕೆ ದೆವ್ವ ವಕ್ಕರಿಸಿದೆ ಎನ್ನುತ್ತಾ ಅವನ ಮೈಗೆ ಬರೆ ಹಾಕುತ್ತಾಳೆ.' ನೋವಿಗೆ ಬಾಯಿ ಬಡಕೊಳ್ಳುತ್ತಿರುವ ಗಂಡನ ಅವಸ್ಥೆಯನ್ನು ನೋಡಿ ಗೌಡತಿಗೂ ಸಹ `ಅಳ್ಳಿನ ಜೊತ್ಗೇ

ನಗುವೂ ಬಂತು.' ಕಪಟ ದಾಸಯ್ಯನಿಗೆ ದೊಣ್ಣೆಯಿಂದ ಹೊಡೆಯಲು ಗೌಡ ಯತ್ನಿಸಿದಾಗ ಮಾರಿ ನಿಜರೂಪದಲ್ಲಿ ಕಾಣಿಸಿಕೊಳ್ಳುತ್ತಾಳೆ. ಆಗ ಅವನು ತನ್ನ ಸರ್ವಸ್ವವನ್ನೂ ಅವಳಿಗೆ ಸಮರ್ಪಣೆ ಮಾಡಿ ಕಾವಿ ತೊಟ್ಟು ಏಕನಾದ ಹಿಡಿದುಕೊಂಡು, ತನ್ನ ಪಾಪಕ್ಕೆ ಪಶ್ಚಾತ್ತಾಪಪಡುತ್ತ ತಿರುಗುತ್ತಿದ್ದ ಕೋಲ್‌ರಿಜ್‌ನ ಮುದಿನಾವಿಕ (`ಏನ್‌ಷೆಂಟ್ ಮ್ಯಾರಿನರ್')ನಂತೆ, `ಜೀನರಾಗಬೇಡಿರಪ್ಪ' ಎಂದು ಬೋಧಿಸುತ್ತ ಊರೂರು ಅಲೆಯುತ್ತಾನೆ.

ಮೇಲಿನವು ಗಂಡಸರ ಲಾವಣಿಗಳು. ಹೆಂಗಸರ ಹಾಡುಗಬ್ಬಗಳು ಹೆಣ್ಣಿನ ಅಂತಃಕರಣ ಹೆಣ್ಣಿನ ಸಹಜ ಸಂತಾನಾಪೇಕ್ಷೆ ಗಂಡನಲ್ಲಿ ನಿಷ್ಠೆ ತವರಿನ ಮೇಲೆ ಮಮತೆ, ಇವುಗಳನ್ನು ಹೆಚ್ಚಾಗಿ ಪ್ರಕಟಿಸುತ್ತವೆ. `ಪಾರ್ವತಿ ಕೊರವಂಜಿ' ಕೌಸಲ್ಯಾಗೆ ಅವಳ ಗರ್ಭದಲ್ಲಿ ವಿಷ್ಣುವಿನ ಅವತಾರವಾಗಲಿರುವುದನ್ನು (ಮೇರಿಗೆ ಮಾಡುವ `ಅನನ್ಸಿಯೇಷನ್'ನಂತೆ) ಕೊರವಂಜಿ ವೇಷದ ಪಾರ್ವತಿ ಪ್ರಕಟಿಸುವ ಹಾಡು, ಕೊರವಂಜಿಗೆ ಕೌಸಲ್ಯೆ ಹಾಕುವ ಪ್ರಶ್ನೆ ಮತ್ತು ಕೊರವಂಜಿಯ ಉತ್ತರ ಹೀಗಿವೆ :

`ನಾನು ನಿನ್ನಂಥ ರೂಪು ಕಾಣೆ, ಕೊರವಂಜಿ
ಮಂಡಾಲದೊಳು ಚೆಲ್ವೆ, ಕೊರವಂಜಿ ನಿನ್ನಾ
ಗಂಡಾ ನಿನ್ನೆಂಥೋನೆ, ಕೊರವಂಜಿ
`ಕಣ್ಣು ಕೆಂಪಗೆ ಮಾಡಿ ಕರದಿ ಬುರುಡೆಯ ಪಿಡಿದು
ತನ್ನ ತಾನರಿಯದೇ ತಾಂಡವವಾಡುವನೂ',

ಹೊನ್ನಮೊರದೊಳಗೊಂದು ಒಕ್ಕಳ ಮುತ್ತುತರಿಸಿ ಅದನ್ನು ಮೂರು ರಾಶಿ ಮಾಡಿ ಚಿನ್ನದ ಬೆತ್ತ ಹಿಡಿದು ಕೊರವಂಜಿ ಕಣಿ ಹೇಳುತ್ತಾಳೆ, (ಇಲ್ಲಿ ಬರುವ ತಮಿಳು ಸಂಖ್ಯೆಗಳನ್ನು ಗಮನಿಸಿ)

`ವನ್ನೆ ರನ್ನೆ ಮೂಲೆ ನಾಲೆ ಒಂಬತ್ತಾನೆ ತಿಂಗಳೊಳಗೆ
ಗಂಡು ಮಗ ಕಡು ಚೆಲ್ವಾನೆ, ಕೌಸಲ್ಯಾ ದೇವಿ,
ಚಂಡ ದೈತ್ಯಾರನು ತೊಟ್ಟನೆ.' .

ಮುದಿಕೊರಮನಂತೆ ವೇಷ ತೊಟ್ಟ ಶಿವನು ಅಷ್ಟು ಹೊತ್ತಿಗೆ ಆಗಮಿಸುತ್ತಾನೆ:

`ಬಲ್ಲಿ ನಾಮ ಫಣೆಯೊಳಿಟ್ಟು, ಜಲ್ಲಿ ಕೊಕ್ಕರೆ ಗರಿಯ ಸುತ್ತಿ
ಎಲ್ಲ ದಿಕ್ಕು ನೋಡಿ ನಗುತಲೀ, "ವೋ ಸಿಂಗಿ," ಎನುತಾ
ಜೊಲ್ಲು ವೀಳ್ಯವು ಸೋರುತ ಬಾಯೊಳು'

ಹಾಗೂ `ವಾರೆ ನೋಟದಿಂದ ನಗುತಾ' ಬರುವವನನ್ನು ಕಂಡು ವಿಸ್ಮಿತರಾಗುತ್ತಾರೆ ಜನರೆಲ್ಲ:

`ಚಿಕ್ಕ ಪ್ರಾಯದ ಕೊರಚಿ ಮುಪ್ಪಿನ ಕೊರಮನಿವ
ಅಕ್ಕಯ್ಯ ನೋಡಿರೆ ಅತಿ ಚೋದ್ಯಗಳನು'

ಇಲ್ಲಿನ ಶಿವನ ಚಿತ್ರ ಬೇಂದ್ರೆಯವರ `ಹುಬ್ಬಳ್ಳಿಯಂವ'ನನ್ನು ನೆನಪಿಗೆ ತರುತ್ತದೆ.

ದೇವುಡು ಅವರು ಆಯ್ದುಕೊಟ್ಟಿರುವ ಹೆಂಗಸರ ಹಾಡುಗಬ್ಬಗಳಲ್ಲಿ ಮುಖ್ಯ ಎನಿಸುವುವು `ಮಂಗಳವಾರದ ಹಾಡು', `ದೀವಳಿಗೆ ಹಾಡು', `ಗಂಗಮ್ಮನ ಹಾಡು', ಹಾಗೂ `ಗೀಜಗ-ಗೀಜಗಿತ್ತಿ ಹಾಡು', ಹರನ ವರಪ್ರಸಾದದಿಂದ ಹದಿನಾರು ವರ್ಷಗಳಷ್ಟು ಮಾತ್ರ ಆಯುಷ್ಯವಿರುವ ರಾಜಕುಮಾರ ಹುಟ್ಟುತ್ತಾನೆ. ಅವನ ಆಯುಷ್ಯ ಮುಗಿಯುತ್ತಿರುವಂತೆ ಅವನು ತನ್ನ ಸೋದರಮಾವನೊಡನೆ ಕಾಶಿಗೆ ಯಾತ್ರೆ ಹೊರಡುತ್ತಾನೆ. ದಾರಿಯಲ್ಲಿ ಈ ಜಾನಪದ ಮಾರ್ಕಂಡೇಯನಿಗೆ ಮಂಗಳಗೌರಿಯ ಮಹಾಭಕ್ತೆಯಾದೊಬ್ಬ ರಾಜಕುಮಾರಿಯೊಡನೆ `ಮದುವೆ'ಯಾಗಿ ಅವಳೊಡನೆ ಅವನು ರಾತ್ರಿ ಪವಡಿಸಿರುವಾಗ ಒಂದು ವಿಷಸರ್ಪದ ರೂಪದಲ್ಲಿ ಮೃತ್ಯು ಸನ್ನಿಹಿತವಾಗುತ್ತದೆ. ಅದನ್ನು ವೀಕ್ಷಿಸಿದ ರಾಜಕುಮಾರಿ ಮಂಗಳಗೌರಿಯ ಪ್ರಸಾದವನ್ನು ಅದರ ಮೇಲೆ ಹಾಕುತ್ತಾಳೆ. ಆಗ ಅದರ ಆಯುಷ್ಯವೇ ಕ್ಷೀಣಿಸಿ ಅದನ್ನೆತ್ತಿ ಅವಳು ಕಲಶ ಒಂದರಲ್ಲಿ ಅದನ್ನು ಇಟ್ಟರೆ ಮುಂದೆ ರಾಜಕುಮಾರ ಕಾಶಿಗೆ ಪ್ರಯಾಣ ಮಾಡಿ ಹಿಂದಿರುಗಿ ಬಂದ ಮೇಲೆ ನೋಡಿದರೆ ಕಂಠಮಾಲೆಯಾಗಿ ಪರಿವರ್ತಿತವಾಗಿರುತ್ತದೆ. ಅದನ್ನೇ ಅವನು ಕೊರಳಿಗೆ ಹಾಕಿ ವಿಧಿಪೂರ್ವಕವಾಗಿ ರಾಜಕುಮಾರಿ ಅವನನ್ನು ವರಿಸುತ್ತಾಳೆ. ಇದು ಮಂಗಳವಾರದ ಮಹಿಮೆಯನ್ನು ಹೇಳುವ ಹಾಡು.

ತವರಿನ ಮಮತೆ

`ದೀವಳಿಗೆ ಹಾಡು' ದೀವಳಿಗೆ ಹಬ್ಬಕ್ಕೆ ತವರಿಗೆ ತೆರಳಲು ತವಕಿಸುವ ಹೆಣ್ಣನ್ನು ಕರೆದುಕೊಂಡು ಹೋಗಲು ಬರುವ ಅಣ್ಣನ ವಿಷಯದಲ್ಲಿ ತಂಗಿಗಿರುವ ಅಪಾರ ಅಕ್ಕರೆಯನ್ನು ಮನವರಿಕೆ ಮಾಡಿಕೊಡುವ ಹಾಡು. ಅವಳನ್ನು ಕರೆದುಕೊಂಡು ಹೋಗುತ್ತಿರುವ ಅಣ್ಣನಿಗೆ ಅವಳು ತೊಟ್ಟಿದ್ದ ಆಭರಣಗಳ ಮೇಲೆ ಆಸೆಯಾಗಿ ಅವಳನ್ನು ವಟವೃಕ್ಷಕ್ಕೊಂದಕ್ಕೆ ಕಟ್ಟಿಹಾಕಿ ಅವಳನ್ನು ಕೊಲ್ಲಲು ಯತ್ನಿಸುತ್ತಾನೆ. ಇಂಥ ಅನ್ಯಾಯ ನಡೆಯುವುದನ್ನು ತಡೆಯದಿರಲಾರದೆ ಪಾರ್ವತಿ ದೇವಿ ಕಾಳಿಂಗ ಸರ್ಪ ಒಂದನ್ನು ಕಳುಹಿಸುತ್ತಾಳೆ. ಅದು ಅಣ್ಣನನ್ನು ಕಚ್ಚುತ್ತದೆ. ಗತಪ್ರಾಣನಾಗುತ್ತಿದ್ದ ಅವನು ನೀರು ಬೇಕೆಂದು ತಂಗಿಯನ್ನು ಬೇಡುತ್ತಾನೆ. ಅವಳು ಮಡುವಿನಿಂದ ನೀರು ತಂದು ಕೊಟ್ಟು ತನ್ನಿಂದ ತನ್ನ ತವರಿಗೆ ಸರ್ವನಾಶವಾದುದಕ್ಕೆ ಸಂಕಟಪಡುತ್ತ ಹತ್ತಿರದ ಶಕ್ತಿಯ ಗುಡಿಯಲ್ಲಿ ಪಾರ್ವತಿ ಪರಮೇಶ್ವರರನ್ನು ಪ್ರಾರ್ಥಿಸಿ ತನ್ನ ಕೊರಳಿಗೆ ಕತ್ತಿ ಬೀಸಿಕೊಳ್ಳ ಹೋಗುತ್ತಾಳೆ. ಶಿವಪಾರ್ವತಿಯರು ಅವಳನ್ನು ತಡೆದು ಏನು ಬೇಕೆಂದು ಕೇಳಿದಾಗ ಅವಳು ಅಣ್ಣನ ಜೀವ ಉಳಿಯಬೇಕೆಂದು ಕೇಳಿಕೊಳ್ಳುತ್ತಾಳೆ. ಅನಂತರ ಅಣ್ಣನೊಡನೆ ತವರಿಗೆ ಹೋಗಿ ಅಲ್ಲಿ ಎಂಟು ದಿನವಿದ್ದು ಅವನೊಡನೆ ಹಿಂದಿರುಗುವಾಗ ಅವನಿಗೆ ತನ್ನ ಅಭರಣಗಳನ್ನೆಲ್ಲಾ ಕೊಟ್ಟು ಗಂಡನಿಗೆ ತಾನು ಕಳ್ಳರ ಕೈಲಿ ಸಿಕ್ಕಿದುದಾಗಿ ಸುಳ್ಳು ಹೇಳುತ್ತಾನೆ. ಹೀಗಿದೆ ಅವಳ ತವರಿನ ಮೇಲಿನ ಮಮತೆ, ಮೋಹ.

ಈ ಅಣ್ಣ ಕಳ್ಳನಾದರೆ `ಗಂಗಮ್ಮನ ಹಾಡಿ'ನ ಅಣ್ಣ ಕಾಮುಕ. ಅಂಬಿಗರಲ್ಲಿ ಬೆಳೆದ ಅವನು ಜನ್ಮತಃ ತನ್ನ ಅಣ್ಣನೇ ಎಂದು ಗಂಗಮ್ಮ ಎಷ್ಟು ಹೇಳಿದರೂ ಕೇಳದೆ ಅವಳನ್ನು ತನ್ನ ಕಾಮತೃಪ್ತಿಗಾಗಿ ಅವನು ಒತ್ತಾಯಿಸುತ್ತಾನೆ. ನಡು ಹೊಳೆ. ಅವನು ನಡೆಸುತ್ತಿರುವ ಹರಿಗೋಲಿನಲ್ಲಿ ಅವಳು ಕುಳಿತಿದ್ದಾಳೆ ಅಸಹಾಯಕಳಾಗಿ: ಅವನಲ್ಲಿ ಅವಳು ಅಂಗಲಾಚುತ್ತಾಳೆ:

`ಮದುವ್ಯಾಗಿ ಮೂರೇ ತಿಂಗಳು ಮೈನೆರೆದು ಆರೇ ತಿಂಗಳು
ಧಾರೆ ಸೀರೆ ಉಟ್ಟಿರುವೆನಣ್ಣ ಧಾರೆ ಕುಬುಸ ತೊಟ್ಟಿರುವೆನಣ್ಣ
ಮಡುಲಕ್ಕಿ ಕಟ್ಟಿರುವೆನಣ್ಣ ಮುಡಿಯ ಬಾಚಿಂಗ್ ಕಳೆಯಲಿಲ್ಲ ಣ್ಣಾ
ಪಾಪಕಿನ್ನು ಗುರಿಯಾಗಬೇಡ ಒಂದು ತಾಯಿ ಮಕ್ಕಳೋ.'

`ಅಪ್ಪ ಕೊಟ್ಟ ಒಡವೆ ಕೊಳ್ಳೋ, ಅಮ್ಮ ಕೊಟ್ಟ ಬುತ್ತಿ ಕೊಳ್ಳೋ' ಎನ್ನುತ್ತಾಳೆ. `ಕಡು ಚೆಲ್ವೆ'ಯೊಬ್ಬಳನ್ನು ಹುಡುಕಿ ತಂದು ಅವನಿಗೆ ಮದುವೆ ಮಾಡಿಸುವುದಾಗಿ ಹೇಳುತ್ತಾಳೆ. `ನೀನು ಯಾವ ತಾಯಿ ಮಗಳೋ, ನಾನು ಯಾವ ತಂದೆ ಮಗನೋ' ಎನ್ನುತ್ತಾ ಅವನು ಅವಳನ್ನು `ಹವಳದ ಸರ ಕೊಡುತ್ತೇನೆ, ಮುತ್ತಿನ ಸರ ಕೊಡುತ್ತೇನೆ. ನನ್ನವಳಾಗು' ಎಂದು ಮತ್ತೆ ಮತ್ತೆ ಒತ್ತಾಯಿಸುತ್ತಾನೆ. ಈ ಕಠಿಣ ಪರಿಸ್ಥಿತಿಯಲ್ಲಿ ಅವಳು ದೂರದಲ್ಲಿರುವ ಅಕ್ಕನನ್ನು ನೆನೆಯುತ್ತಾಳೆ. ಅದ್ಭುತ ಶಕ್ತಿಗಳ ಈ ಅಕ್ಕ ಕೂಡಲೆ ಕಾಣಿಸಿಕೊಂಡು ಆನೆಗಾತ್ರದ ನೀರೆಬ್ಬಿಸಿ ಹರಿಗೋಲು ಕೊಚ್ಚಿಹೋಗುವಂತೆ ಮಾಡುತ್ತಾಳೆ. ಗಂಗಮ್ಮನನ್ನು ಅವಳು ದಡಕ್ಕೆ ಹಾಯಿಸಿ ಅಣ್ಣನನ್ನು ಮುಳುಗಿಹೋಗಲು ಬಿಡುತ್ತಿರುವಾಗ ಅವನು ಜೀವನದಾನಕ್ಕಾಗಿ ಗೋಗರೆಯುತ್ತಾನೆ. ಆಗ ಅವನನ್ನೂ ಅವಳು ಉಳಿಸುತ್ತಾಳೆ. ಅಣ್ಣ ಕೆಟ್ಟವನಾದಾಕ್ಷಣಕ್ಕೆ ಅಕ್ಕತಂಗಿ ಅವನನ್ನು ಪ್ರೀತಿಸದಿರಲು ಸಾಧ್ಯವೆ?

ಕಡೆಯದಾಗಿ, ಗೀಜಗ-ಗೀಜಗಿತ್ತಿಯರ ಹಾಡು. ಇವರಿಬ್ಬರದು ತುಂಬಾ ನಾಟಕೀಯವಾದ ಸುವಾದ. `ನಿನ್ನ ಮೈ ಘಮಘಮಿಸುತ್ತಿದೆ, ಎಲ್ಲಿದ್ದೆ? ಎಂದು ಗೀಜಗಿತ್ತಿ ಕೇಳಿದರೆ, `ಕಸ್ತೂರಿ ಭರಣಿಯಲ್ಲಿ ಕುಳಿತಿದ್ದೆ' ಎಂದು ಗೀಜಗನ ಉತ್ತರ. ಬಾಳುವ ಮಕ್ಕಳಿಗೆ ಬಾಳೆಗೊನೆ ತಂದಿರುವುದಾಗಿ ಹೇಳುತ್ತ ಮಕ್ಕಳಿಗಾಗಿಯಾದರೂ ತನ್ನನ್ನು ತೊರೆಯದಿರೆಂದು ಅವಳನ್ನು ಬೇಡಿಕೊಳ್ಳುತ್ತಾನೆ. ಆದರೆ ಅವನಿಂದ ದೂರವಿರಲು ಅವಳು ಮಾಡುವ ನಿರ್ಧಾರ ಅಚಲ:

`ಹಾಸಿಗೆಯ ತುಳೀಬೇಡ ಮಂಚವಾ ಹತ್ತಬೇಡ
ತಣಗೇಲಿ ಉಣಬೇಡ ಚೊಂಬಿನಲಿ ಕುಡೀಬೇಡ
ಮಕ್ಕಳನು ಮುಟ್ಟಬೇಡ ಮೇವನೀ ಕೊಡಬೇಡ '
`ಮಕ್ಕಳಾ ಗೋಳು ನೋಡೆ, ಗೀಜಗಿತ್ತಿ, ಮಕ್ಕಳಾ ಚಿಂತೆ ನೋಡೆ,
`ಹುಲ್ಲು ಸೀಮೆಗೆ ಹೋಗಿ ಹುಲ್ಲು ಸಾವಿರ ತಂದು
ಕೆಳಗೊಂದು ಗೂಡು ಕಟ್ಟೋ, ಗೀಜಗ, ಮೇಲೊಂದು ಗೂಡುಕಟ್ಟೋ
ಮೇಲಿನ ಗೂಡಲಿ ನಾನೂ ನನ್ನ ಮಕ್ಕಳೂ ಇರುವೆವು
ಕೆಳಗಿನ ಗೂಡಿನಲಿ ಒಬ್ಬನೇ ನೀನಿರು, ಗೀಜಗಾ.'

ಸಾಂಸಾರಿಕ ಜೀವನದ ಒಂದು ವಿಷಮ ಸಂಧಿಯ ಎಂಥಾ ಮಾರ್ಮಿಕ ಚಿತ್ರಣ!

ಭೃಂಗದ ಬೆನ್ನೇರಿ ಗುಂಗುಂ ಗಾನಗೈಯುತ್ತ ಬರುವ ಇಂಥ ಹಾಡುಗಬ್ಬಗಳು ಇನ್ನೆಷ್ಟೋ ದೇವುಡು ಅವರ `ಕರ್ನಾಟಕ ಸಂಸ್ಕೃತಿ'ಯ ಜನಪದ ಹಾಡುಗಳ ಜೇನುಗೂಡಿನಲ್ಲಿ. ಸರ್ವರಿಗೂ ಶುಭಕೋರುವ ಹಾಡೊಂದರ ಈ ಸಾಲುಗಳೊಡನೆ ಸದ್ಯಕ್ಕೆ ಮಂಗಳ ಹಾಡೋಣ

ಬಾಗಿಲಿದಿರೀಗೆ ಬರೀರಮ್ಮ ಹಸೆಗೋಳೂ
ಬಾಗಲಲ್ಲಾ ವೇ ಗಿಣಿಗೋಳು ।
ಬಾಗಿಲಲ್ಲಾ ವೇ ಗಿಣಿಗೋಳು ನಮ್ಮಾ ನೇ
ಭಾಗ್ಯದಾ ನುಡಿಯ ನುಡಿದಾವೂ ॥

★

ಕರ್ನಾಟಕ ಸಂಸ್ಕೃತಿ

ಪ್ರೊ॥ ಆ.ರಾ. ಮಿತ್ರ

೧೯೩೫ರಲ್ಲಿ ದೇವುಡು ಅವರ ಕರ್ನಾಟಕ ಸಂಸ್ಕೃತಿ ಎಂಬ ವೈಚಾರಿಕ ಶಿಸ್ತಿನ ಅಧ್ಯಯನ ಶೀಲ ಗ್ರಂಥ ಹೊರಬಂದಿತು. ಅದು ಮರು ಮುದ್ರಣಗೊಳ್ಳಲು ಮತ್ತೆ ೨೬ ವರ್ಷಗಳನ್ನು ಕಾಣ ಬೇಕಾಯಿತು ಎಂಬುದೇ ವಿಷಾದದ ಸಂಗತಿ. ಅನ್ಯ ಭಾಷೆಗಳಲ್ಲಾಗಿದ್ದರೆ ಇಂಥ ಗ್ರಂಥವು ಹಲ ವಾರು ಮುದ್ರಣಗಳನ್ನು ಕಾಣುತ್ತಿದ್ದುದರಲ್ಲಿ ಸಂದೇಹವಿಲ್ಲ. ಏಕೆಂದರೆ ಇದು ಸಾಮಾನ್ಯ ಬರವಣಿ ಗೆಯಲ್ಲ ಗಂಭೀರ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸುಲಭವಾಗಿ ಲಭ್ಯವಾಗದ ಆಕ ರಗಳನ್ನೆಲ್ಲ ಹುಡುಕಿ ಅಮೂರ್ತತೆಗೆ ಒಂದು ಶಿಷ್ಟ ಮೂರ್ತರೂಪವನ್ನು ಕೊಡುವ ಪ್ರಯತ್ನವಾ ಗಿದೆ. ಕನ್ನಡದಲ್ಲಿ ಡಿ.ವಿ.ಜಿ. ಪ್ರೊ॥ ಮರಿಯಪ್ಪ ಭಟ್ಟ, ರಂ. ಶ್ರೀ ಮುಗಳಿ ಮೊದಲಾದ ಕೆಲವರು ಮಾತ್ರ ಈ ಬಗೆಯ ಚಿಂತನಗಳನ್ನು ಬರಹರೂಪದಲ್ಲಿರಿಸಿದ್ದಾರೆ. ಇತ್ತೀಚೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಕರ್ನಾಟಕದ ಉಪ ಸಂಸ್ಕೃತಿಗಳ ಅಧ್ಯಯನದ ಶ್ರಮಸಾಧ್ಯವಾದ ಕಾರ್ಯವನ್ನು ವ್ಯಾಪಕವಾಗಿ ಕೈಗೊಂಡು ಹಲವಾರು ಮೌಲಿಕ ಚಂತನೆಗಳ ಸಂವಾದವನ್ನು ಪ್ರಕಟಿಸಿರುವುದು ಒಂದು ಮಹತ್ತ್ವದ ಬೆಳವಣಿಗೆ ಎಂದು ಹೇಳಬಹುದು. ಬರಗೂರು ರಾಮಚಂದ್ರಪ್ಪನವರ ಈ ಶೋಧ ಯತ್ನಕ್ಕಾಗಿ ಅವರನ್ನೂ ಅವರ ರಚನಕಾರರ ತಂಡವನ್ನೂ ಅಭಿನಂದಿಸಬೇಕಾಗಿದೆ.

ಸಂಸ್ಕೃತಿ ಎಂಬ ಶಬ್ದ ಎಲ್ಲ ಘೋಷಣ ವಾಕ್ಯಗಳಂತೆ ಇಂದು ಎಲ್ಲರ ಬಾಯಲ್ಲಿ ನಲಿ ಯುತ್ತಿದೆಯಾದರೂ ಆ ಶಬ್ದದ ಭಾಷಾರೂಪದ ವಿವರಣೆ ಸಾಮಾಜಿಕ ಮಾನವಿಕ ವೈಜ್ಞಾನಿಕ ಲಕ್ಷಣ ನಿರ್ದೇಶನ ತುಂಬ ಕಷ್ಟದ್ದು. ಸಂಸ್ಕೃತಿ ಎಂಬ ಸಾಧಾರಣ ಹೇಳಿಕೆಯ ಲಕ್ಷಣ ನಿರ್ದೇಶನವೇ ಇಷ್ಟು ಕಷ್ಟದ್ದಾಗಿರುವಾಗ ಅದರ ದಟ್ಟ ನೆರಳಿನಲ್ಲಿ ಕನ್ನಡ ಸಂಸ್ಕೃತಿ-ಕರ್ನಾಟಕ ಸಂಸ್ಕೃತಿಯ ಶುದ್ಧ ಸ್ವರೂಪ ವನ್ನು ಬೆಳಕಿಗೆ ತರುವುದು ಇನ್ನಷ್ಟು ಗೋಜಿನ ವಿಷಯು. ಹೀಗೆ ಬಿಡಿಸುವ' ಕರ್ನಾಟಕ ಸಂಸ್ಕೃತಿ'ಯೆಂಬುದು ಭಾರತೀಯ ಸಂಸ್ಕೃತಿಯೆಂದು ನಾವು ಒಟ್ಟಾರೆ ಕರೆಯುವ ಸಂಸ್ಕೃತಿ" ದ್ರವ್ಯಕ್ಕಿಂತ ಯಾವ ರೀತಿಯಲ್ಲಿ ಭಿನ್ನ ಎಂದು ತೋರಿಸುವುದಂತೂ ತುಂಬ ಕಷ್ಟದ ಕೆಲಸ. ಆದರೂ ದೇವುಡು ಅವರು "ಕನ್ನಡ ಸಂಸ್ಕೃತಿಯು ಅಗ್ನಿ ಪೂಜೆಯನ್ನು ತೊರೆದಿರುವ ವೈದಿಕ ಸಂಸ್ಕೃತಿ' ಎಂಬ ನಿಲು ವನ್ನು ಪ್ರಕಟವಾಗಿ ಹೇಳಿ ಈ ವಾದ ಸಮರ್ಥನೆಗೆ ಕರ್ನಾಟಕ ಜನಪದರ ಕುಲವ್ಯವಸ್ಥೆ, ಕಟ್ಟುಪಾ ಡುಗಳು, ಸಾಹಿತ್ಯಗಾದೆ ಕಥೆಗಳ ಮೂಲಕ ವ್ಯಕ್ತವಾಗುವ ಜಾನಾಂಗಿಕ ಚಿಂತನೆ ಸಂಗೀತ, ವೇಷಭೂ ಷಣಗಳು, ಆಹಾರ ಪದ್ಧತಿ, ಕರ್ಮಾಚರಣೆಗಳು, ಹಬ್ಬಹರಿದಿನಗಳು, ಕೃಷಿಪದ್ಧತಿಗಳು, ನಮ್ಮ ಲಾವಣಿಗಳಲ್ಲಿ ಜನಪದಗೀತೆಗಳಲ್ಲಿ ಕಥೆಗಳಲ್ಲಿ ಬರುವ ವಿಶಿಷ್ಟ ಲೋಕ ಸಂಗತಿಗಳು ಇವುಗಳನ್ನು ವಿಸ್ತಾರವಾಗಿ ಪ್ರಸ್ತಾವಿಸಿ ಅವುಗಳ ಆಳದಲ್ಲಿರುವ ಮನಸ್ಸಿನ ನೆಲೆಯನ್ನು ವ್ಯಾಖ್ಯಾನಿಸಿದ್ದಾರೆ. ಶಾಸನ ಸ್ಥಳಪುರಾಣಗಳನ್ನು ಸಮೃದ್ಧವಾಗಿ ಬಳಸಿಕೊಂಡಿದ್ದಾರೆ. ಜನಪದ ನಂಬಿಕೆಗಳನ್ನಂತೂ ವಿಪುಲವಾದ ಸ್ವಾರಸ್ಯಕರ ಕಥಾ ಪ್ರಸಂಗಗಳಿಂದ ವ್ಯಾಖ್ಯಾನಿಸಿದ್ದಾರೆ.

ಸಂಸ್ಕೃತಿಯ ಬಗೆಗೆ ಇರುವ ಅನೇಕ ವ್ಯಾಖ್ಯೆಗಳಲ್ಲಿ ದೇವುಡು ಅವರು ಕೆಲವನ್ನು ಉದ್ಧರಿಸಿದ್ದರೂ ಧಾರ್ಮಿಕ ನೆಲೆಯ ಸಂಸ್ಕೃತಿಯ ವಿವರಣೆಯ ಕಡೆಗೇ ಅವರ ಲಕ್ಷ್ಯ ಹೆಚ್ಚು ಎಂಬುದನ್ನು ಕಂಡುಕೊಳ್ಳುವುದು ಕಷ್ಟವಲ್ಲ. ಬ್ರಿಟಾನಿಕಾ ಮತ್ತು ನೀತಿ ವಿಶ್ವಕೋಶಗಳಿಂದ ಆಂಡ್ರ್ಯೂಲಾಂಗ್‌ನಿಂದ ಅವರು ಲಕ್ಷಣ ನಿರ್ದೇಶನ ಮಾಡಿದ್ದಾರೆ. ಒಂದು `ಸಂಸ್ಕೃತಿ' ಎಂಬ ಪ್ರಧಾನ ಪಂರಪರೆಗೆ ಸಮಾನಾಂತರವಾಗಿ ದೂರದಲ್ಲೇ ಸಾಗುತ್ತಾ ಬಂದಿರುವ ಉಪ ಸಂಸ್ಕೃತಿಗಳ ಒಳನುಗ್ಗಿ ಅದನ್ನು ಪ್ರಧಾನ ಪರಂಪರಾ ಸಂಸ್ಕೃತಿಯೊಂದಿಗೆ ಮುಖಾಮುಖಿಯಾಗಿಸುವುದು ಇತ್ತೀಚಿನ ಸಮಾಜ ಶಾಸ್ತ್ರಜ್ಞರ ದೃಷ್ಟಿಯಾಗಿದೆ. ಇದನ್ನು ಕೂಡ ದೇವರು ಸ್ಥೂಲವಾಗಿ ಬಲ್ಲವರಾಗಿದ್ದರೂ "ಎಲ್ಲರನ್ನೂ ಒಳಗೊಂಡಿರುವ ಜನಾಂಗದಲ್ಲಿ ಪಂಡಿತ ಸಂಸ್ಕೃತಿ ಪಾಮರ ಸಂಸ್ಕೃತಿ ಮೇಲಿನವರ ಸಂಸ್ಕೃತಿ ಕೆಳಗಿನವರ ಸಂಸ್ಕೃತಿ ಎಂದು ವಿಭಾಗ ಮಾಡುವುದು ಸಾಧ್ಯವಿಲ್ಲ" ಎಂದು ಹೇಳಿ "ಕೀಳುಕುಲದವರನ್ನು ಮಾತ್ರ ಲಕ್ಷ್ಯವಾಗಿಟ್ಟುಕೊಂಡು ನಮ್ಮ ಸಂಸ್ಕೃತಿಯನ್ನು ಕುರಿತು ಬರೆಯುವುದು ಸಾಧ್ಯವಿಲ್ಲ." ಅದು ನಮ್ಮ ದೇಶದ ಸ್ಥಿತಿಗತಿಗಳಿಗೆ ಒಪ್ಪುವುದಿಲ್ಲ" ಎಂದು ಸ್ಪಷ್ಟವಾಗಿ ನಿರಾಕರಿಸುತ್ತಾರೆ. ತಮ್ಮ ಕಾಲದಲ್ಲಿ ಪ್ರಚಲಿತವಾಗಿದ್ದ ಸಂಸ್ಕೃತಿಗಳ ಶಿಷ್ಟ ವ್ಯಾಖ್ಯಾನ ಪರಂಪರೆಯ ನಡುವೆಯೂ ಇಂಥದೊಂದು ಚರ್ಚೆಯನ್ನು ಪ್ರಸ್ತಾವಿಸಿರುವುದೇ–ನಿರಾಕರಿಸಲು ಮಾತ್ರ ಪ್ರಸ್ತಾವಿಸಿದ್ದಾರೆ ಎಂಬುದು ನಿಜವಾದರೂ ಅವರ ವಿದ್ವತ್ ಶೋಧನೆಗೆ ಸಾಕ್ಷಿಯಾಗಿದೆ.

ಆದರೆ ಇಂದು ಸಂಸ್ಕೃತಿಯನ್ನು Material Culture Mental culture ಎಂಬ ಎರಡು ಶೀರ್ಷಿಕೆಯಡಿಯಲ್ಲಿ ವ್ಯಾಖ್ಯಾನ ಮಾಡುತ್ತಿದ್ದೇವೆ. ಒಂದು ಗುಂಪು ತನ್ನ ಸಂಸ್ಕೃತಿಯ ವಸ್ತುಮೂಲ (Material Base)ದಲ್ಲಿ ಸಾಕಷ್ಟು ಸ್ಥಿರತೆ ಮತ್ತು ಭದ್ರತೆಗಳನ್ನು ಗಳಿಸಿಕೊಂಡರೆ ಅಂದರೆ ಕೃಷಿ ಕೈಗಾರಿಕೆ ವಿಜ್ಞಾನಗಳಿಂದ ಸ್ವಲ್ಪ ನೆಮ್ಮದಿ ವಿಶ್ರಾಂತಿಗಳನ್ನು ಗಳಿಸಿದೆಯೆ ಎಂಬುದರ ಅಧ್ಯಯನ. ಇಂಥ ವಿಶ್ರಾಂತಿ ಸಂಪನ್ನತೆಯ ಫಲವಾಗಿ ಬರುವ ಮನೋಸಂಸ್ಕೃತಿ.

Culture means the total accumulation of material objects, ideas, symbols, beliefs, sentiments, values and social forms which are passed on from one generation to another in any given society.

ಎಂದು ಕೆ.ಎ. ನೀಲಕಂಠ ಶಾಸ್ತ್ರಿಯವರು ೧೯೫೯ರ UNESCO CHRONICLEನಲ್ಲಿ ಹೇಳಿರುವ ಮಾತಿನಲ್ಲಿ ಈ ಮೊದಲನೆಯ Material cultureನ ವ್ಯಾಖ್ಯಾನವಿದೆ.

A culture is wordly, if worldly success is what its most admired hero represents. It is spiritual or unworldly if renunciation or spirituality are what its most admired hero embodies.

ಎಂದು ಸ್ವಾಮಿ ರಂಗನಾಥಾನಂದರು ಸಂಸ್ಕೃತಿಯ ಎರಡನೆಯ ಸ್ವರೂಪವನ್ನು ಪ್ರಸ್ತಾಪಿಸಿದ್ದಾರೆ. ಸಂಸ್ಕೃತಿಯನ್ನು ಭಾಷಾಶಾಸ್ತ್ರದ ದೃಷ್ಟಿಯಿಂದಲೂ ವಿವೇಚಿಸಿ "ಒಂದು ಜನಾಂಗದ ಮುಂದೆ ಇರಿಸಲಾದ, ಹಾಗೂ ಆ ಜನಾಂಗದ ಜ್ಞಾನಿಗಳು ನಿರಂತರವಾಗಿ ಕಾಪಾಡಿಕೊಂಡು ಬಂದಿರುವ ನಡವಳಿಕೆಯ ಮಟ್ಟ ಏನಿದೆಯೋ ಅದು ಆ ಗುಂಪಿನ ಸಂಸ್ಕೃತಿ" ಎಂದು ರಾಜಾಜಿಯವರು ಹೇಳಿದ್ದಾರೆ.

ಸ್ವಾರಸ್ಯದ ಸಂಗತಿಯೆಂದರೆ ದೇವುಡು ಅವರು ಈ ಮೂರು ವಿಭಾಗ ಕ್ರಮಗಳನ್ನು ಸ್ಪಷ್ಟವಾಗಿ ಪ್ರಸ್ತಾವಿಸಿಲ್ಲವಾದರೂ ಅವರ ಹೇಳಿಕೆಗಳು, ನಿದರ್ಶನಗಳು ಮತ್ತು ಅವುಗಳ ಜಿಜ್ಞಾಸೆಯ ಸಂದರ್ಭದಲ್ಲಿ ಅವರು ಮಾಡಿರುವ ವ್ಯಾಖ್ಯಾನಗಳು ಈ ಮೂರನ್ನೂ ವಿಪುಲ ಸಾಕ್ಷ್ಯಾಧಾರಗಳಿಂದ ಸ್ಪಷ್ಟಪಡಿಸಿದೆ. ನಮ್ಮ ಸಂಸ್ಕೃತಿ ಒಂದು ನಿರ್ದಿಷ್ಟ ಭೌಗೋಳಿಕ ವಲಯದಲ್ಲಿ ಮತ್ತು ನಿರ್ದಿಷ್ಟ ಜನಸಮುದಾಯದಲ್ಲಿ ಬೆಳೆದು ಬಂದ ರೀತಿಯನ್ನು ವಿವರಿಸಲು ಅವರು ಹಾಡುಗಳು, ಶಿಷ್ಟಾಚಾರಗಳು ಸಂಸ್ಕಾರಗಳು ಕಥೆಗಳು ಮುಂತಾದ ಜಾನಪದೀಯ ಅವಧಾರಣೆಯನ್ನೇ ಮೂಲಾಧಾರವಾಗಿಟ್ಟುಕೊಂಡಿರುವುದು ಅವರ ಆಲೋಚನೆಯ ದಿಕ್ಕು ಎಂಥ ಪ್ರಗತಿದಾಯಕವಾದದ್ದೆಂಬುದನ್ನು ಸ್ಪಷ್ಟಪಡಿಸುತ್ತದೆ. ಅವರು ಧಾರ್ಮಿಕ ನಿಲುಗೆ ಒಗ್ಗಿಕೊಂಡವರು. ಸಂಸ್ಕೃತಿಯ ವ್ಯಾಖ್ಯಾನಕಾರರೆಲ್ಲ ಬಹುತೇಕ ಧಾರ್ಮಿಕ ನಿಲುವಿನವರೇ, `A civilization without a philosophy is like a temple without the holy of the holies' ಎಂಬ ಹೆಗೆಲನ ಮಾತನ್ನು ಪುರಸ್ಕರಿಸುವವರೇ. ದೇವುಡು ಕೂಡ ಇದಕ್ಕೆ ಹೊರತಲ್ಲ. ಆದರೂ ಅವರು ಸಂಸ್ಕೃತಿಯ ವ್ಯಾಖ್ಯಾನ ಸಂದರ್ಭದಲ್ಲಿ ಬದುಕಿನ ಯಾವ ಶಾಖೆಯನ್ನೂ ಅವಜ್ಞೆ ಮಾಡಿಲ್ಲ—ಎಂಬುದು ಮೆಚ್ಚಬೇಕಾದ ಅಂಶ.

ಹೇರಳವಾಗಿ ಜಾನಪದೀಯ ಲಕ್ಷ್ಯಗಳನ್ನು ಒದಗಿಸುವಾಗಲೂ ಅವುಗಳ ಅಂತರಾರ್ಥದ ಬಗೆಗೆ ಒಂದೊಂದು ಸೂಕ್ತವಾದ ಭಾಷ್ಯ ಬರೆಯುತ್ತ ಹೋಗುತ್ತಾರೆ. ಜೋಗುಳದ ತ್ರಿಪದಿಗಳನ್ನು ಉದ್ಧರಿಸಿ ಇವು ಚೌಪದಿಗಳೂ ಹೇಗೆ ಆಗುತ್ತವೆ ಎಂಬುದನ್ನು ಸ್ಮರಿಸುತ್ತಾರೆ. ವೈದ್ಯ, ಜೋಯಿಸ, ನೀತಿ, ಸಂಪ್ರದಾಯ, ನಂಬಿಕೆಗಳು ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ ಇವು ಹೇಗೆ ಜಾನಪದ `ವಿಶ್ವಕೋಶ'ವಾಗಿದೆ ಎಂದು ಪೇಳುವುದನ್ನು ಮರೆಯುವುದಿಲ್ಲ. ಐದು ಜೋಗುಳದ ಹಾಡುಗಳನ್ನು ಉದ್ಧರಿಸಿ ಅಲ್ಲಿರು ಐದು ಪದಗಳು ಛಂದೋದೃಷ್ಟಿಯಿಂದ ಹೇಗೆ `ಅಸಮಾನ'ವಾಗಿವೆ ಎಂದು ಗುರುತಿಸುತ್ತಾರೆ. ಶೂದ್ರಾಣಿಯ ಹಾಡುಗಳಲ್ಲಿನ ಭಾಷೆಯೂ ಗ್ರಾಮ್ಯಮುದ್ರೆಯನ್ನು ಸಂಪೂರ್ಣವಾಗಿ ತಳೆದಿರುವುದನ್ನು ಮೆಚ್ಚುತ್ತಾರೆ. "ಕೆಲವು ಪದಗಳು `ಹೊಳ್ಳೊಳ್ಳಹಾಯಿ` ಎಂಬ ಜೋಗುಳದ ಪದಗಳಂತೆ ಸದ್ದುಗದ್ದಲವಿಲ್ಲದ ಜಾತಿಯಲ್ಲವಾಗಿ, ತಟ್ಟಿ ನಿದ್ದೆಗೆಯ್ಯಿಸುವಂತಹ ಶಾಂತ ಕರ್ಮಕ್ಕೆ ಸರಿಹೋಗುವುದಿಲ್ಲವೆಂದು ಇವಕ್ಕೆ ಬಹಿಷ್ಕಾರ ಬಿದ್ದಿರಬಹುದು" ಎಂಬ ಸಕಾರಣ ಊಹೆಯನ್ನು ಮಾಡುತ್ತಾರೆ. ಬೀಗರ ಹಾಡುಗಳು ಹೇಗೆ ಪರಸ್ಪರರ ದೋಷಗಳನ್ನು ಉದ್ಘಾಟಿಸಲು ಹುಟ್ಟಿಕೊಂಡಿವೆ ಎಂಬುದನ್ನು ವಿವರಿಸಿ "ಬಾಂಧವ್ಯವನ್ನು ನಗೆಯ ಸಿಮೆಂಟಿನಿಂದ ಭದ್ರ ಪಡಿಸಿಕೊಳ್ಳಲೆಂದು ಈ ಸಂಪ್ರದಾಯವು ಬಂದಿತು ಎಂದು ಒಪ್ಪುವುದಾದರೆ ಅಂತರ್ಧಾನವಾಗದಂತೆ ಇದನ್ನು ಕಾಪಾಡಿಕೊಳ್ಳುವುದು ಒಳ್ಳೆಯದು" ಎಂಬ ಮಾತಿನಲ್ಲಿ ಗತ ಸಂಪ್ರದಾಯದ ಹಿನ್ನೆಲೆಯಲ್ಲಿ ವಸ್ತು ಸ್ಥಿತಿಯನ್ನು ಸಾದರ ಪಡಿಸುತ್ತಾರೆ.

ಕುಟ್ಟಿ, ಬೀಸುವ ಹಾಡು ಯಾವಾಕೆ ಕಲಿಸ್ಯಾಳ
ಕೃಷ್ಣನ ತಂಗಿ ಸು-ಭದ್ರಿ ಕಲಿಸ್ಯಾಳ
ಕೃಷ್ಣನ ಮೇಲೆ ಪದಗೋಳ

ಎಂಬ ಮಾತಿನ ಹಿನ್ನೆಲೆಯಲ್ಲಿ `ಕರಿಯ' ಕೃಷ್ಣನು ಗೌರ ಪಾಟಲವರ್ಣಗಳ ಆರ್ಯಕುಲಕ್ಕೆ ಸೇರಿದವನಲ್ಲ ಎಂದು ಹೇಳುವ ವಿದ್ವಾಂಸರ ವಿಷಯವನ್ನು ಪ್ರಸ್ತಾವಿಸುತ್ತಾರೆ. ಜನಪರ `ಮೊಹರೆ ವಾಕ್ಯ'ಗಳು ಎಂದು ಗಾದೆ ಒಗಟುಗಳನ್ನು ಗುರುತಿಸಿ ಅವುಗಳಿಂದ ವಿಶಿಷ್ಟವಾಗಿ ಒಡೆದು ಮೂಡುವ ಸಂಸ್ಕೃತಿಯ ಪದರುಗಳನ್ನು ಸ್ವಾರಸ್ಯವಾಗಿ ನಿರೂಪಿಸುತ್ತಾರೆ.

ಇಷ್ಟಾದರೂ ಭಾಷೆ ಸಾಹಿತ್ಯಗಳ ದೃಷ್ಟಿಯಿಂದ ನೋಡಬಯಸುವ ನನ್ನಂಥವರಿಗೆ ಈ ಸಂಪ್ರಬಂಧದಲ್ಲಿ ಕಾಣುವ ಒಂದು ಕೊರತೆಯನ್ನು ಪ್ರಸ್ತಾವಿಸಬೇಕಾಗಿದೆ. ಅದೆಂದರೆ ದ್ರಾವಿಡ ಸಂಸ್ಕೃತಿಯು ಕ್ರಮೇಣ ಆರ್ಯಸಂಸ್ಕೃತಿಯ ಎಳೆಗಳನ್ನು ಸ್ವೀಕರಿಸಿರುವುದನ್ನು ವಿವರಿಸುತ್ತಾರೆಯೇ ಹೊರತು `ಶುದ್ಧ ದ್ರಾವಿಡ ಸಂಸ್ಕೃತಿ'ಯ ಸ್ಪಷ್ಟ ವಿವರಗಳನ್ನು ಇವರು ಕೊಡುವುದಿಲ್ಲ. ದ್ರಾವಿಡ ಜನಾಂಗದ ಸಾಂಸ್ಕೃತಿಕ, ಸಾಮಾಜಿಕ, ಭಾಷಿಕ ಮತ್ತು ಭೌಗೋಳಿಕ ವಿವರಗಳ ಪ್ರಸ್ತಾವ ಅಧಿಕೃತವಾಗಿಲ್ಲ.

ಎರಡನೆಯದಾಗಿ ಕನ್ನಡ ಸಾಹಿತ್ಯದ ಹಿನ್ನೆಲೆಯಿಂದಲೂ ಕನ್ನಡ ಸಂಸ್ಕೃತಿಯನ್ನು ತಿಳಿಯುವ ಒಂದು ಮುಖ್ಯ ಪ್ರಯತ್ನ ಇಲ್ಲಿ ಕೈಬಿಟ್ಟು ಹೋಗಿರುವುದು ತುಂಬ ಆಶ್ಚರ್ಯಕರವಾಗಿದೆ. ಕವಿರಾಜ ಮಾರ್ಗ, ಕಪ್ಪೆ ಅರಭಟ್ಟನ ಶಾಸನ, ಹಲ್ಮಿಡಿ ಶಾಸನದಲ್ಲಿ ವ್ಯಕ್ತವಾಗುವ ಕನ್ನಡದ ಸಂಸ್ಕೃತ ಛಾಯೆ, ಪಂಪ ರನ್ನ ನಯಸೇನ ಕುಮಾರವ್ಯಾಸಾದಿಗಳಲ್ಲಿ ಬರುವ ಕನ್ನಡ ಸಂಸ್ಕೃತಿ, ವಚನ ಸಾಹಿತ್ಯದಲ್ಲಿ ಒಡೆದು ಕಾಣುವ ಕನ್ನಡ ಉಪಸಂಸ್ಕೃತಿಯ ಛಾಯೆ, ಕನ್ನಡ ಭಾಷೆಯ ಸೊಗಸು, ಪ್ರಾಚೀನತೆ ಮೊದಲಾದ ಯಾವ ಸಂಗತಿಗಳೂ ಈ ಗ್ರಂಥದಲ್ಲಿನ ಮೂದಾಗಿಲ್ಲ.

ಈಗ ಕನ್ನಡದಲ್ಲಿ ಸಂಸ್ಕೃತಿಯ ಒಳ ಸತ್ತ್ವಗಳನ್ನು ಕಾಣಿಸಬಲ್ಲ ನೇರ ಪರ್ಯಾಯ ಗ್ರಂಥಗಳು ಸಾಕಷ್ಟು ಬಂದಿವೆ. ಆದರೂ ದೇವುಡು ಅವರ `ಕರ್ನಾಟಕ ಸಂಸ್ಕೃತಿ' ಇಂದಿಗೂ ಒಂದು ಒಳ್ಳೆಯ ಆಕರ ಗ್ರಂಥವಾಗಿ ಉಳಿದುಕೊಳ್ಳುವ ಸತ್ತ್ವ ಸಂಪತ್ತಿನಿಂದ ಮೆರೆದಿದೆ ಎಂದು ಧೈರ್ಯವಾಗಿ ಹೇಳಬಹುದು. ಲವಲವಿಕೆಯ ಭಾಷೆ, ನಿರ್ದುಷ್ಟ ಹೇಳಿಕೆ, ವಿಪುಲ ಸಾಕ್ಷ್ಯಾಧಾರ ಸಂಪತ್ತುಗಳು ಈ ಕೃತಿಯ ಮೌಲ್ಯವನ್ನು ಉಕ್ಕಿಸಿವೆ.

★

ಮಯೂರ: ವಿಶಿಷ್ಟ ಐತಿಹಾಸಿಕ ಕಾದಂಬರಿ

ಶ್ರೀ ಕೆ. ನರಸಿಂಹಮೂರ್ತಿ

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಬಂಗಾಳದ ಬಂಕಿಮಚಂದ್ರರ ಐತಿಹಾಸಿಕ ಕಾದಂಬರಿಗಳೂ ಮಹಾರಾಷ್ಟ್ರದಲ್ಲಿ ತಿಲಕರು ಆರಂಭಿಸಿದ ಗಣೇಶೋತ್ಸವ, ಮರಾಠಿಯ 'ಕೀಚಕವಧ' ನಾಟಕ ಹರಿನಾರಾಯಣ ಆಪ್ಟೆ ಅವರ ಐತಿಹಾಸಿಕ ಕಾದಂಬರಿಗಳೂ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಭಾರತೀಯ ಜನತೆಯನ್ನು ವಿರುದ್ಧ ಭಾರತೀಯ ಜನತೆಯನ್ನು ಎತ್ತಿ ಕಟ್ಟುವುದರಲ್ಲಿ ವಹಿಸಿದ ಪಾತ್ರ ಚಿರಸ್ಮರಣೀಯ.

ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಬಗೆಯ ಪಾರತಂತ್ರ್ಯದ ವಿರುದ್ಧ ನಡೆದ ಹೋರಾಟದ ಚಿತ್ರಗಳೆಲ್ಲವೂ ಸಾಂಕೇತಿಕವಾಗಿ ಬ್ರಿಟಿಷರ ವಿರುದ್ಧ ನಡೆಯಬೇಕಾಗಿದ್ದ, ನಡೆಯುತ್ತಿದ್ದ ಹೋರಾಟವನ್ನೇ ಚಿತ್ರಿಸುತ್ತಿದ್ದವು. ಈ ಕೃತಿಗಳ ಸಾಲಿನಲ್ಲಿ ನಿಲ್ಲುವ ದೇವುಡು ನರಸಿಂಹ ಶಾಸ್ತ್ರಿಗಳ ಈ ಶತಮಾನದ ಮೂರನೆ ದಶಕದ ಮೊದಲ ವರ್ಷಗಳ ಐತಿಹಾಸಿಕ ಕಾದಂಬರಿ 'ಮಯೂರ' ಪಲ್ಲವ ಸಾಮ್ರಾಜ್ಯದ ಭಾಗವಾಗಿ ಹೋಗಿದ್ದ ಬವವಾಸಿ (ವೈಜಯಂತೀ) ರಾಜ್ಯದ ಸ್ವಾತಂತ್ರ್ಯಕ್ಕಾಗಿ ಕದಂಬ ರಾಜಕುಮಾರ ಮಯೂರ ವರ್ಮ ನಡೆಸಿದ ಯಶಸ್ವೀ ಅಹಿಂಸಾತ್ಮಕ ಹೋರಾಟವನ್ನು ಹೃದಯಂಗಮವಾಗಿ ನಿರೂಪಿಸುತ್ತದೆ. ಕಾದಂಬರಿಯ ಮುನ್ನುಡಿಯಲ್ಲಿ ದೇವುಡು, 'ಸರ್ವಗ್ರಾಹಿಯಾದ ಪರಸಂಸ್ಕೃತಿಯ ದಾಳಿಯಲ್ಲಿ ನಮ್ಮ ಅಸ್ತಿತ್ವ ವ್ಯಕ್ತಿತ್ವಗಳು ಕೊಚ್ಚಿ ಹೋಗುತ್ತಿವೆ', ಎನ್ನುತ್ತ ' ಮಯೂರನು ತನ್ನ ಸಿಂಹಾಸನವನ್ನು ಗೆದ್ದುಕೊಂಡಂತೆ ಈಗ ಕರ್ಣಾಟಕರು ತಮ್ಮ ಕರ್ಣಾಟಕತ್ವವನ್ನು ಗೆದ್ದುಕೊಳ್ಳಬೇಕಾಗಿದೆ' ಎಂದು ಉದ್ಗರಿಸುತ್ತಾರೆ. ಈ ಸಂದರ್ಭದಲ್ಲಿ ಈ ಹೊತ್ತಿಗೇ ಅವರು ರಚಿಸಿ ಮುಗಿಸಿದ್ದ 'ಕರ್ಣಾಟಕ ಸಂಸ್ಕೃತಿ' ಉಪನ್ಯಾಸ ಸಂಕಲನ ಕೃತಿಗೂ ನಮ್ಮ ಗಮನವನ್ನು ಸೆಳೆಯುತ್ತಾರೆ.

ದೇಶೀ ಶೈಲಿಯ ಕೃತಿ

ಸ್ವಾತಂತ್ರ್ಯ ಪ್ರೇಮವನ್ನು ವಾಚನಾಭಿರುಚಿಯನ್ನೂ ಈ ಶತಮಾನದ ಮೊದಲ ದಶಕಗಳಲ್ಲಿ ಬೆಳೆಸಿದ ವೆಂಕಟಾಚಾರ್ಯರ ಅನುವಾದಗಳೂ ಗಳಗನಾಥರ ಅನುವಾದಿತ ಹಾಗೂ ಸ್ವತಂತ್ರ ಕೃತಿಗಳೂ ಹಾಕಿದ ಸಂಪ್ರದಾಯ ಇನ್ನೂ ಬಲವಾಗಿಯೇ ಇದ್ದ ಕಾಲವಾದರೂ ದೇವುಡು ಹೆಚ್ಚಾಗಿ ಈ ಸಂಪ್ರದಾಯದ ಕಥನ ಕ್ರಮವನ್ನು ಅನುಸರಿಸದೆ ಹಿಂದಿನ ಶತಮಾನದ ನಮ್ಮ ಮೊದಲ ಐತಿಹಾಸಿಕ ಕಾದಂಬರಿ ಎನ್ನಬಹುದಾದ ಕೆಂಪುನಾರಾಯಣನ 'ಮುದ್ರಾ ಮಂಜೂಷ' ದ ಮಾದರಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದಂತೆ ರಾಜನ 'ಮಯೂರ' ಒಂದು ದೇಶೀ ಶೈಲಿಯ ವಿಶಿಷ್ಟ ಕೃತಿ. ಸರ್ ವಾಲ್ಟರ್ ಸ್ಕಾಟ್‌ನ 'ದಿವಾನ ಹೋ' ಮುಂತಾದ ಐತಿಹಾಸಿಕ ಕಾದಂಬರಿಗಳ ಪ್ರಭಾವ ಯುರೋಪಿನ ಬೇರೆ ಬೇರೆ ಭಾಷೆಗಳ ಸಾಹಿತ್ಯವನ್ನು ಪ್ರಭಾವಿಸಿದಂತೆಯೇ ಭಾರತೀಯ ಭಾಷೆಗಳ ಸಾಹಿತ್ಯದ ಮೇಲೆಯೂ ತಮ್ಮ ಪ್ರಭಾವ ಬೀರಿದವು.

ಬಂಕಿಮರ ಹಾಗೂ ಇತರರ ಕಾದಂಬರಿಗಳಲ್ಲಿ ಸ್ಕಾಟ್‌ನ ಐತಿಹಾಸಿಕ ಕಾದಂಬರಿ ಪ್ರಕಾರದ ಛಾಯೆಯನ್ನು ಗಣನೀಯ ಅಂಶದಲ್ಲಿ ಕಾಣಬಹುದಾಗಿದೆ. 'ಮಯೂರ' ದಲ್ಲಿ ಒಂದೆರಡು ದೃಶ್ಯಗಳಲ್ಲಿ ಮಾತ್ರ ಇಂಥ ಪ್ರಭಾವ ಗೋಚರವಾಗುತ್ತದೆ. ಉದಾಹರಣೆಗೆ ಮಯೂರನು ಪಲ್ಲವ ರಾಜಕುಮಾರಿಯನ್ನು ಮೊದಲ ಬಾರಿಗೆ ಆಕಸ್ಮಿಕವಾಗಿ ಕಾಣುವ ದೃಶ್ಯ, ಅಥವಾ ಮಯೂರ ಯುವರಾಜ ಕುಮಾರ ವಿಷ್ಣುವಿನೊಡನೆ ನಡೆಸುವ ಕತ್ತಿ ಕಾಳಗ. ಆದರೆ ಒಟ್ಟಾರೆ ನೋಡಿದಾಗ 'ಮಯೂರ' 'ಮುದ್ರಾ ಮಂಜೂಷ' ದ ಹಾದಿಯನ್ನು ತುಳಿಯುವ ಕೃತಿ, ಎಂ.ಎಸ್. ಪುಟ್ಟಣ್ಣನವರ 'ಮುಸುಗು' ತೆಗೆಯೇ ಮಾಯಾಂಗನೆ ' ಯ ಕಥನ ಶೈಲಿಯನ್ನೂ ಸ್ವಲ್ಪ ಮಟ್ಟಿಗೆ ಕಾಣಬಹುದಾಗಿದೆ.

ಈ ಶೈಲಿಯು ಪರಿಪಕ್ವವಾಗಿ ಮಹತ್ವದ ಕೃತಿಗಳನ್ನು ನೀಡುವುದು ಮಾಸ್ತಿಯವರ ಐತಿಹಾಸಿಕ ಕಾದಂಬರಿಗಳು, 'ಚನ್ನಬಸವ ನಾಯಕ' ಮತ್ತು 'ಚಿಕವೀರ ರಾಜೇಂದ್ರ'ಗಳಲ್ಲಿ. ಗಮನಾರ್ಹವಾದ ಸಂಗತಿ ಎಂದರೆ ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ವಸಾಹತುಶಾಹಿ ಪ್ರಭಾವವನ್ನು ಗೋದ್ದಿಷ್ಟವಾಗಿ ವಿರೋಧಿಸಿ ದೇಶೀಮಾರ್ಗಗಳನ್ನು ಹುಡುಕಿಕೊಂಡ ಅಪರೂಪದ ಸಾಹಿತಿಗಳು ದೇವುಡು ಅವರು ಎನ್ನುವುದು.

'ಮಯೂರ' ವು ಕಥೆ, ಚರಿತ್ರೆಯಲ್ಲ. ಇದರಲ್ಲಿ ದಿಟಕ್ಕಿಂತಲೂ, ದಿಟದಂತೆ ತೋರುವ ಕತೆಯೇ ಹೆಚ್ಚು', ಎಂದು ದೇವುಡು ಮುನ್ನುಡಿಯಲ್ಲಿ ನಿವೇದಿಸಿಕೊಳ್ಳುತ್ತಾರೆ. ಆದರೂ ಇಲ್ಲಿ ಕಥಿತವಾಗುವ ಒಂದೊಂದು ಅಂಶಕ್ಕೂ ಆಧಾರವಿದೆ ಎಂಬುದನ್ನು ಅವರು ಹೇಳುತ್ತಾರೆ. ಈ ಕಾದಂಬರಿಯ ಚಾರಿತ್ರಿಕ ಕಾಲ ಕ್ರಿಸ್ತಶಕ ನಾಲ್ಕನೆಯ ಶತಮಾನದ ಪೂರ್ವಾರ್ಧ ಕೆಲವು ಶಾಸನಗಳನ್ನು ಬಿಟ್ಟರೆ ಹನ್ನೊಂದನೆ ಶತಮಾನಗಳನ್ನು ಬಿಟ್ಟರೆ ಹನ್ನೊಂದನೆ ಶತಮಾನಗಳಲ್ಲಿ ಹುಟ್ಟಿಕೊಂಡವು ಎನ್ನಲಾದ ಜನಜನಿತ ಕತೆಗಳು ಮಾತ್ರ ಅಂದಿನ ಘಟನೆಗಳ ಮೇಲೆ ಬೆಳಕು ಚೆಲ್ಲುವುದರಿಂದ ಚಾರಿತ್ರಿಕವಾಗಿ ನಿಖರವಾಗಿ ಆಗ ಹೀಗೆಯೇ ನಡೆಯಿತೆಂದು ಏನನ್ನೂ ಹೇಳಬರುವುದಿಲ್ಲ. ಈ ಹಿನ್ನೆಲೆಯಲ್ಲಿ ದೇವುಡು ಅವರು ಮಾಡಿಕೊಂಡಂತೆ ಕಾಣುವ ಕೆಲವು ಬದಲಾವಣೆಗಳು ಅರ್ಥಪೂರ್ಣವಾಗಿ ತೋರುವುದರಿಂದ ಪರಿಶೀಲನಾರ್ಹವೆನಿಸುತ್ತದೆ.

ಮೊದಲಿಗೆ, ಮಯೂರ ಕಳೆದು ಹೋದ ತನ್ನ ತಂದೆಯ ರಾಜ್ಯವನ್ನು ಮತ್ತೆ ಗೆದ್ದುಕೊಂಡನೆ ಅಥವಾ ಬನವಾಸಿ ರಾಜ್ಯವನ್ನು ಮೊದಲ ಬಾರಿಗೆ ಗೆದ್ದುಕೊಂಡು ಕದಂಬ ರಾಜವಂಶದ ಸ್ಥಾಪಕನಾದನೆ ಎನ್ನುವ ಪ್ರಶ್ನೆ. ದೇವುಡು ಅವರು ತನ್ನ ತಂದೆ ಚಂದ್ರವರ್ಮಾ ಹಿಂದೆ ಆಳುತ್ತಿದ್ದ ಬನವಾಸಿ ರಾಜ್ಯವನ್ನು ಅದನ್ನು ಆಕ್ರಮಿಸಿಕೊಂಡಿದ್ದ ಪಲ್ಲವರಿಂದ ಸ್ವತಂತ್ರ್ಯಗೊಳಿಸಿ ಮತ್ತು ರಾಜನಾದನೆನ್ನುವ ಕಥಾಂತರವನ್ನು ಆಯ್ದುಕೊಂಡಿರುವುದು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ಅರ್ಥಪೂರ್ಣ ಎನಿಸದಿರದು. ಎರಡನೆಯದಾಗಿ ಮಯೂರ, ಮಯೂರ ಶರ್ಮನೆ ಮಯೂರ ವರ್ಮನೆ ಎನ್ನುವ ಪ್ರಶ್ನೆ. ದ್ವಿಜೋತ್ತಮನಾದ ಮಯೂರ ಶರ್ಮನು ತಾತ ವೀರಶರ್ಮನೊಂದಿಗೆ ಪಲ್ಲವರ ರಾಜಧಾನಿ ಕಂಚಿಗೆ ಹೋಗಿ ಅಲ್ಲಿ ಅಧ್ಯಯನ ನಡೆಸುತ್ತಿದ್ದಾಗ ಪಲ್ಲವರ ಅಶ್ವದಳನೊಬ್ಬನೊಡನೆ ಜಗಳವಾಗಿ ಕೆರಳಿ ಕ್ಷಾತ್ರವೃತ್ತಿಯನ್ನವಲಂಬಿಸಿ ಶ್ರೀ ಶೈಲ ಬನವಾಸಿ ಪ್ರದೇಶಗಳಲ್ಲಿ ಸೇನೆಯನ್ನು ಕಟ್ಟಿಕೊಂಡು ಪಲ್ಲವರಿಗೆ ಮಗ್ಗುಲ ಮುಳ್ಳಾಗಿ ಕಡೆಯಲ್ಲಿ

ಬನವಾಸಿ ರಾಜ್ಯವನ್ನು ಸ್ಥಾಪಿಸಿದನು ಎನ್ನುವ ಹೆಚ್ಚು ಆಧಾರವುಳ್ಳ ಕತೆಯನ್ನು ದೇವುಡು ಬಿಟ್ಟು ಕೊಟ್ಟಿದ್ದಾರೆ.

ತನ್ನದೇ ರಾಜ್ಯವನ್ನು ಅವನು ಮತ್ತೆ ವಶಪಡಿಸಿಕೊಂಡನೆಂಬ ಕಥಾಂತರವನ್ನು ಆಯ್ದುಕೊಂಡ ಮೇಲೆ ಹೀಗೆ ಈ ಕಥೆಯನ್ನು ಅವರು ಬಿಟ್ಟು ಕೊಡದಿರಲು ಸಾಧ್ಯವಾಗುವುದಿಲ್ಲ, ಅಲ್ಲವೆ? ಕ್ಷತ್ರಿಯನಾದ ವಿಶ್ವಾಮಿತ್ರ ಮಹಾ ಬ್ರಾಹ್ಮಣನಾಗುವುದನ್ನು ಮುಂದೆ ಚಿತ್ರಿಸುವ ದೇವುಡು ಅವರಿಗೆ ಬ್ರಾಹ್ಮಣನೊಬ್ಬ ಕ್ಷತ್ರಿಯನಾಗುವ ಸಿತ್ಯಂತರದ ಚಿತ್ರಣದ ಅವಕಾಶ, ಅದು ಅವರ ಮನಸ್ಸಿಗೆ ಒಪ್ಪಿತವಾಯಿತೋ ಇಲ್ಲವೋ, ಹೀಗೆ ಅವರ ಕೈ ಬಿಟ್ಟಿತು. ಮೂರನೆಯದಾಗಿ ಹಿಂದೆ ಕೌಟಿಲ್ಯನಂತೆ, ನಮ್ಮ ಕಾಲದಲ್ಲಿ ಗಾಂಧೀಜಿಯವರಂತೆ, ಮಯೂರ ಹಾಗೂ ಅವರ ಮಾರ್ಗದರ್ಶಿ ಹಿರಿಯರು ಹಿಂಸಾತ್ಮಕವಾಗಿ ಹೋರಾಡುವುದನ್ನು ಆದಷ್ಟು ವರ್ಜ್ಯಮಾಡಿ ತಂತ್ರದ ಮೂಲಕ ವಿಜಯವನ್ನು ಸಾಧಿಸಿಕೊಳ್ಳುತ್ತಾರೆ. ಚಾರಿತ್ರಿಕವಾಗಿ ಹೀಗೆ ನಡೆಯಿತೆಂದು ಹೇಳುವುದು ಕಷ್ಟ. ಆದರೆ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ರಚಿತವಾದ ದೇವುಡು ಅವರ ಕೃತಿ ಹೀಗೆ ಹಿಂಸಾ ಮಾರ್ಗವನ್ನು ತ್ಯಜಿಸುವುದು ತುಂಬಾ ಅರ್ಥಪೂರ್ಣ. ಅಲ್ಲದೆ ಈ ಕಾದಂಬರಿಯಲ್ಲಿ ದೇವುಡು ಅವರ ಮುಖ್ಯ ಉದ್ದೇಶ ಭಾರತೀಯ ಸಂಸ್ಕೃತಿಯನ್ನು ಹಾಗೂ ಅದರ ಪ್ರತಿಬಿಂಬವೆಂದೇ ಅವರು ನಂಬಿರುವ, ಸಾಧಿಸುವ, ಕರ್ಣಾಟಕ ಸಂಸ್ಕೃತಿಯನ್ನು ಚಿತ್ರಿಸುವುದೇ ಆಗಿದೆ.

ಮಯೂರನಾಗಲೀ ಅವರ ಹಿತೈಷಿ ಮುತ್ಸದ್ದಿಗಳಾಗಲೀ ಅವನಿಗೆ ಬೆಂಬಲ ನೀಡುವ ನಾಡಗೌಡರಾಗಲೀ ಪಲ್ಲವರ ಯುವ ರಾಜನಾಗಲೀ ಎಲ್ಲರೂ ಆದರ್ಶ ವ್ಯಕ್ತಿಗಳು. ಅಧ್ಯಾತ್ಮಿಕತೆಯ ಕಡೆಗೆ ಒಲವು, ದೊರೆಗಳಲ್ಲಿ ಅವಿಚ್ಛಿನ್ನವಾದ ನಿಷ್ಠೆ, ಅಹಿಂಸಾ ಪ್ರವೃತ್ತಿ, ಸಹಕಾರಿ ಮನೋಧರ್ಮ, ಸ್ನೇಹ ಪ್ರೇಮಗಳ ಮೇಲ್ಮೆ, ಈ ಗುಣಗಳು ಇಲ್ಲಿನ ಕ್ರಿಯಾತ್ಮಕ ಚಟುವಟಿಕೆಗಳೆಲ್ಲವುಗಳಲ್ಲಿಯೂ ಪ್ರಕಾಶಿತವಾಗುತ್ತವೆ. ಈ ಸಂದರ್ಭದಲ್ಲಿ ಏಳುವ ಇನ್ನೊಂದು ಪ್ರಶ್ನೆ ಪಲ್ಲವರು ಬೌದ್ಧರಾಗಿದ್ದರೆ ಎನ್ನುವುದು. ದೇವುಡು ಅವರು ಪಲ್ಲವರು ಬೌದ್ಧರಾಗಿದ್ದಂತೆಯೂ ಮಯೂರನ ರಾಜವಂಶದ ಸ್ವರಾಜ್ಯ ಪುನಃಪ್ರಾಪ್ತಿಯೊಂದಿಗೆ ಅವರ ವೈದಿಕ ಸಂಸ್ಕೃತಿಯ ಪುನರುತ್ಥಾನವೂ ಆದಂತೆಯೂ ಈ ಕಥೆಯಲ್ಲಿ ಬಿತ್ತರಿಸುತ್ತಾನೆ.

ಪಲ್ಲವರಿಗೆ ವಿರುದ್ಧವಾಗಿ ಹೋರಾಟ ನಡೆಸುವ ಸಂಕಲ್ಪವನ್ನು ಮಯೂರ ಮಾಡುವುದನ್ನೂ ಆ ಹೋರಾಟದ ಸಿದ್ಧತೆಗಳನ್ನೂ ಕಾದಂಬರಿಯ ಪೂರ್ವಭಾಗ ಚಿತ್ರಿಸಿದರೆ ಅದರ ಉತ್ತರಭಾಗ ಶ್ರೀ ಶೈಲದಲ್ಲಿ ಕದಂಬರು ಸಾಧಿಸುವ ವಿಜಯವನ್ನೂ ಶೀಘ್ರದಲ್ಲಿಯೇ ಬನವಾಸಿಯನ್ನೂ ಅವರು ಕೈವಶಮಾಡಿಕೊಳ್ಳುವುದನ್ನೂ ಕಡೆಯಲ್ಲಿ ಪಲ್ಲವರೊಡನೆ ಸಂಧಿಯಾಗಿ ಮಯೂರವರ್ಮ ರಾಜನಾಗಿ ರಾಣಿ ಪಲ್ಲವರಾಜಕುಮಾರಿ ಪ್ರೇಮಾವತಿಯೊಡನೆ ಬನವಾಸಿಯಲ್ಲಿ ಸಿಂಹಾಸನಾರೋಹಣ ಮಾಡುವುದನ್ನೂ ಚಿತ್ರಿಸುತ್ತದೆ. ಸ್ವಾರಸ್ಯವಾದ ಸಂಗತಿಯೆಂದರೆ ಕಾದಂಬರಿಯ ಆರಂಭದಲ್ಲಿ ಮಯೂರಶರ್ಮ ಬ್ರಾಹ್ಮಣನಾಗಿ ಪಲ್ಲವರು ಮಾಡುವ ಅನ್ಯಾಯ ಅವಮಾನಗಳಿಗೆ ಕೆರಳಿ ಅವರನ್ನು ಎದರಿಸಿ ತಾನೇ ಒಂದು ಬೇರೆ ರಾಜ್ಯ ಕಟ್ಟುವ ಸಂಕಲ್ಪ ಮಾಡುವ ಹೆಚ್ಚು ಆಧಾರವುಳ್ಳ ಚಾರಿತ್ರಿಕ ಕಥೆಯಂತೆಯೇ ಘಟನೆಗಳು ನಡೆಯುತ್ತವೆ.

ಮುಂದೆ ಅವನ ತಂದೆಯ ಬಳಿ ರಾಜಪುರೋಹಿತರೂ, ಮಂತ್ರಿಗಳೂ ಸೇನಾಧಿಪತಿಗಳೂ ಆಗಿದ್ದ ಯತಿ ವೀರಶರ್ಮರು, ಷಡಾನನ ಶರ್ಮರು ಹಾಗೂ ನರಸಿಂಹದತ್ತರು ಅವನನ್ನು ಸಂಧಿಸಿ ಅವನು ಕ್ಷತ್ರಿಯ ರಾಜಕುಮಾರನೆಂದೂ ಬನವಾಸಿ ಅವನಿಗೇ ಸೇರಬೇಕಾಗಿದ್ದ ರಾಜ್ಯವೆಂದೂ ಮನವರಿಕೆ ಮಾಡಿಕೊಟ್ಟು ಅದನ್ನು ಮತ್ತೆ ಅವನ ವಶಕ್ಕೆ ತರುವ ಮಾರ್ಗದಲ್ಲಿ ನೆರವಾಗುತ್ತಾರೆ. ಕಾಂಚೀಪುರದ ಕೋಟೆಯ ಹೊರಗಿನ ಕುದುರೆ ಬಯಲಿನಲ್ಲಿ ಪಲ್ಲವ ರಾಜಕುಮಾರರು ಶರವೇಗದ ಕುದುರೆ ಸವಾರಿ ಕಲಿಯುತ್ತಿರುವ ಸಂದರ್ಭ. ಮಧ್ಯಮನಾದ ಸಿಂಹವರ್ಮ ತನ್ನ ಕುದುರೆಯಿಂದ ಕೆಳಕ್ಕೆ ಬಿದ್ದುಬಿಟ್ಟಾಗ ಹತ್ತಿರದ ಮರ ಒಂದರ ಮೇಲೆ ಕುಳಿತು ಈ ಕವಾಯತ್ ಅನ್ನು ವೀಕ್ಷಿಸುತ್ತಿದ್ದ ಮಯೂರ ಭಂಗನೆ ಕೆಳಕ್ಕೆ ನೆಗದು ರಾಜಕುಮಾರನಿಗೆ ಶೈತ್ಯೋಪಚಾರ ಮಾಡತೊಡುಗುತ್ತಾನೆ.

ಕ್ಷಾತ್ರ ತೇಜಸ್ಸು

ದುಡುಕು ಸ್ವಭಾವದ ಕಿರಿಯ ರಾಜಕುಮಾರ ವಿಷ್ಣುಗೋಪನಿಗೆ ಈ ಹಾರುವರ ಹೈದನ ಪ್ರವೇಶ ಅಧಿಕಪ್ರಸಂಗವಾಗಿ ಕಂಡು ಬಂದು ಅವನನ್ನು ಅವನು ಅವಮಾನಿಸಿ ಬೆನ್ನು ಮೇಲೆ ಬಾಸುಂಡೆ ಏಳುವಂತೆ ಬೆತ್ತದಿಂದ ಬಡಿಯುತ್ತಾನೆ.

ಅಲ್ಲಿಯವರೆಗೂ ಗುಪ್ತವಾಗಿದ್ದ ಮಯೂರನಲ್ಲಿಯ ಕ್ಷಾತ್ರತೇಜಸ್ಸು ಪ್ರಕಟವಾಗಿ ಇದಕ್ಕೆ ಪ್ರತಿಕ್ರಿಯಿಸುತ್ತದೆ.

ವಿಷ್ಣುಗೋಪನನ್ನು ಮಯೂರ ಬೀಳಿಸಿ ಅವನ ಮೇಲೆ ಪ್ರಹಾರಗಳ ಮಳೆಗೈಯತೊಡಗಿದಾಗ ಯುವರಾಜ ಕುಮಾರವಿಷ್ಣು ತಮ್ಮನ ನೆರವಿಗೆ ಬರುತ್ತಾನೆ. ಯುವರಾಜನಿಗೂ ಮಯೂರನಿಗೂ ಕತ್ತಿಕಾಳಗ ನಡೆಯುತ್ತದೆ. ಮಯೂರನ ಕದನಕೌಶಲಕ್ಕೆ ಮಾರುಹೋದ ಯುವರಾಜ ಸಂದರ್ಭವಶಾತ್ ಕೆಳಗೆ ಬಿದ್ದಾಗ ಅವನು ತನಗೆ ಕೊಟ್ಟಿದ್ದ ಕತ್ತಿಯೊಡನೆ ಸಿಂಹವರ್ಮನನ್ನು ಬೀಳಿಸಿದ್ದ ಅವನ ಕುದುರೆಯನ್ನೇರಿಕೊಂಡು ಮಯೂರ ತನ್ನನ್ನು ಮುತ್ತಲು ಧಾವಿಸುತ್ತಿದ್ದ ರಾಜಭಟರ ಕೈಗೆ ಸಿಕ್ಕದೆ ಪಾರಾಗುತ್ತಾನೆ.

ಮುಂದೆ ರಾಜಗುರು ವೀರಶರ್ಮರ ಸಲಹೆಯಂತೆ ಮಯೂರ ಯುವರಾಜನಿಗೆ ಅವನ ಕತ್ತಿಯನ್ನು ಹಿಂದಿರುಗಿಸಿ ರಾಜೋಚಿತವಾಗಿ ಅವನನ್ನು ಬೀಳ್ಕೊಂಡು ಹೊರಟುಬರಲು ಕಂಚಿಗೆ ಹಿಂದಿರುಗುತ್ತಾನೆ. ಯುವರಾಜನ ಶಯ್ಯಾಗಾರವೆಂದು ತಪ್ಪು ತಿಳಿದು ರಾಜಕುಮಾರಿ ಪ್ರೇಮಾವತಿಯ ಶಯ್ಯಾಗೃಹವನ್ನು ಅವನು ಗುಪ್ತವಾಗಿ ಪ್ರವೇಶಿಸಿದಾಗ ಅವನ ವಿಷಯವನ್ನು ತಿಳಿದು ಅವನನ್ನು ಮೆಚ್ಚಿದ್ದ ಆ ರಾಜಕುಮಾರಿ ಆ ಧೀರೋಧಾತ್ತಮೂರ್ತಿಯನ್ನು ಪ್ರತ್ಯಕ್ಷ ಕಂಡು ಅವನಲ್ಲಿ ಅನುರಕ್ತಳಾಗುತ್ತಾಳೆ. ಅವನ ಸುರಕ್ಷಿತತೆಗಾಗಿ ಕಾಮಾಕ್ಷಿಯಲ್ಲಿ ಪ್ರಾರ್ಥನೆ ಸಲ್ಲಿಸಿ ಹರಕೆ ಹೊರುತ್ತಾಳೆ.

ಯುವರಾಜನು ಮಲೆನಾಡಿನಲ್ಲಿರುವುದನ್ನು ಅವಳಿಂದ ಅರಿತ ಮಯೂರ ಮುಂದೆ ಯುವರಾಜನನ್ನು ಅಲ್ಲಿನ ಅವನ ಶಿಬಿರದಲ್ಲಿ ಸಂಧಿಸುತ್ತಾನೆ. ಘನತೆಯ ವ್ಯಕ್ತಿತ್ವದ ಕುಮಾರ ವಿಷ್ಣು ತನ್ನ ಕತ್ತಿ ಮಯೂರನಲ್ಲಿಯೇ ಇರಲೆಂದು ಹೇಳುತ್ತ ತನ್ನ ಉಂಗುರವನ್ನು ಕೊಟ್ಟು ಸಾವಿರ

ಕುದುರೆಯ ಪಡೆವಳತನವನ್ನು ಕೊಡಮಾಡುತ್ತಾನೆ. ಪಡೆವಳತನವನ್ನೊಪ್ಪಿದ ಮಯೂರ ಅಲ್ಲಿಂದ ಶ್ರೀ ಶೈಲಕ್ಕೆ ಹಿಂದಿರುಗುತ್ತಾನೆ.

ಶ್ರೀ ಶೈಲದಲ್ಲಿ ರಾಜಗುರು ವೀರಶರ್ಮರ ಕೆಳಗೆ ಮಯೂರನ ಅಧ್ಯಯನ ಮುಂದುವರಿದು ಪೂರ್ಣವಾದ ಮೇಲೆ ಅವರಿಂದ ಅವನ ಪೂರ್ವಕಥೆ ಅವನಿಗೆ ತಿಳಿಯುತ್ತದೆ. ಶಾತವಾಹನರ ಕೊನೆಯ ಅರಸು ಗಂಡುಸಂತಾನವಿಲ್ಲದೆ ಸ್ವರ್ಗಸ್ಥನಾದಾಗ ವೀರಶರ್ಮರ ಮುತ್ತಾತ ಅಂದಿನ ರಾಜಗುರುಗಳ ಸಲಹೆಯಂತೆ ಹೊರಪಡಿಸಿದ ಪಟ್ಟದಾನೆ ಸೊಂಡಿಲಿಗೆ ಸಿಕ್ಕಿಸಿದ್ದ ಹಾರವನ್ನು ಯೋಗೀಶ್ವರರೊಬ್ಬರ ಬಳಿ ಇದ್ದು ಆಗತಾನೆ ಬನವಾಸಿಗೆ ಆಗಮಿಸಿದ್ದ ತ್ರಿನೇತ್ರ ಕದಂಬನೆಂಬ ತೇಜಸ್ವಿ ತರುಣನಿಗೆ ಹಾಕಿ ತ್ರಿನೇತ್ರ ರಾಜನಾಗುತ್ತಾನೆ. ಮೂರು ತಲೆಮಾರುಗಳ ನಂತರ ಆಳುತ್ತಿದ್ದ ಮಯೂರನ ತಂದೆ ಚಂದ್ರವರ್ಮನ ಪಲ್ಲವರ ರಾಯಭಾರಿ ಶೇಖರವರ್ಮನ ಸಹಾಯದಿಂದ ಶಾತವಾಹನರ ವಂಶದ ಮಗಳ ಕಡೆಯ ಶಾಖೆಯ ನಾಗಶ್ರೀ ಎಂಬ ಮಹತ್ವಾಕಾಂಕ್ಷೆಯ ಹೆಣ್ಣು ಕೊಲ್ಲಿಸಿ ತಾನೇ ರಾಣಿಯಾಗುತ್ತಾಳೆ. ಆದರೆ ಅವಳೂ ಸ್ವಲ್ಪಕಾಲದಲ್ಲಿಯೇ ಹೆತ್ತು ಸತ್ತು ರಾಜ್ಯ ಪಲ್ಲವ ಸಾಮ್ರಾಜ್ಯದಲ್ಲಿ ವಿಲೀನವಾಗಿಬಿಡುತ್ತದೆ.

ಇತ್ತ ಚಂದ್ರವರ್ಮನ ರಾಣಿ ತನ್ನ ತವರಾದ ತಲಕಾವೇರಿಗೆ ಶಿಶು ಮಯೂರನೊಂದಿಗೆ ತಪ್ಪಿಸಿಕೊಂಡು ಹೋಗಿ ಮುಂದೆ ತಾನು ಸಾಯುವ ಸಮಯ ಬಂದಾಗ ವೀರಶರ್ಮ ಷಡಾನನಶರ್ಮ ನರಸಿಂಹ ದತ್ತರ ಮಡಿಲಿಗೆ ಮಗುವನ್ನು ಹಾಕಿ ಅದರ ರಾಜ್ಯ ಅದಕ್ಕೆ ಪುನಃ ಪ್ರಾಪ್ತವಾಗುವಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾನೆ. ರಾಜೋಚಿತ ವಿದ್ಯಾರ್ಜನೆ ಶಿಕ್ಷಣಗಳಿಗಾಗಿ ಈಶ್ವರಭಟರ ಸಾಕುಮಗನಂತೆ ರಾಜಕುಮಾರನನ್ನು ಅವರು ಕಂಚಿಯಲ್ಲಿಟ್ಟು ದೂರದಿಂದ ಅವನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತ ರಾಜ್ಯ ಪುನಃ ಪ್ರಾಪ್ತಿಗಾಗಿ ಸನ್ನಾಹಗಳನ್ನು ನಡೆಸುತ್ತಿರುತ್ತಾನೆ.

ಹೀಗೆ ತನ್ನ ಪೂರ್ಣ ಚರಿತ್ರೆಯನ್ನರಿತ ಕುಮಾರ ಬನವಾಸಿಯಲ್ಲಿ ನೀಲಕಂಠಗುಪ್ತನೆಂಬ ಹೆಸರಿನಲ್ಲಿ ಖನಿಜಸಂಪತ್ತಿನ ವ್ಯವಹಾರ ನಡೆಸುತ್ತಾನೆ. ಹಾಗೂ ಗಣಿಗಳಲ್ಲಿ ಕಾರ್ಮಿಕರ ವೇಷದಲ್ಲಿ ಸೈನಿಕರನ್ನು ಜಮಾಯಿಸುತ್ತಾನೆ. ಕಡಲುಗಳ್ಳರ ಕಾಟವನ್ನು ತಪ್ಪಿಸಿಕೊಳ್ಳಬೇಕಾದ ನೆಪವನ್ನು ಮುಂದಿಟ್ಟು ನೇರವಾಗಿಯೇ ಸೈನ್ಯವನ್ನು ಕಟ್ಟುವ ಸಾಹಸಕ್ಕೆ ಮುಂದಾಗುತ್ತಾನೆ. ಈ ತಂತ್ರ ಬಹುಮಟ್ಟಿಗೆ ಬ್ರಿಟಿಷರು ಅವಲಂಭಿಸಿದ ಸಾಧನಾ ಮಾರ್ಗವನ್ನು ನೆನಪಿಗೆ ತರುತ್ತದೆಯಲ್ಲವೆ? ಹೀಗೆಯೇ ಒಂದು ದೊಡ್ಡ ದೇವಸ್ಥಾನದ ನಿರ್ಮಾಣ ಕಾರ್ಯದಲ್ಲಿ ಕಾರ್ಮಿಕರೆಂದು ಅಲ್ಲಿಯೂ ಸೈನ್ಯದ ಜಮಾವಣೆಯಾಗುತ್ತಿರುತ್ತದೆ. ಹೀಗೆ ಅಶ್ವದಳ, ಗಜಸೇನೆಗಳ ನಿರ್ಮಾಣಕ್ಕೂ ತಂತ್ರಗಳು ಕಾರ್ಯಗತವಾಗುತ್ತದೆ.

ಜಾತ್ರೆಗಳಲ್ಲಿ ಲಾವಣಿಗಾರರ ಸಂಚಾರಗಳಲ್ಲಿ ಹಿಂದಿನ ಕದಂಬವಂಶದ ಮಹಿಮೆಯ ಗುಣಗಾನವಾಗುತ್ತದೆ. ಬನವಾಸಿ ರಾಜ್ಯದ ಹದಿನಾರು ನಾಡುಗಳಲ್ಲಿ ಕದಂಬರಾಜ ಸಂತತಿ ಇನ್ನೂ ಜೀವಂತನಾಗಿದೆಯೆಂದೂ ಆ ರಾಜಕುಮಾರ ಮತ್ತೆ ಸಿಂಹಾಸನವೇರಲು ಗೌಡರು ನೆರವಾಗಬೇಕೆಂದೂ ಅವರಲ್ಲಿ ಗುಪ್ತವಾಗಿದ್ದ ರಾಜಭಕ್ತಿಯನ್ನು ಎಚ್ಚರಿಸುವ ಕಾರ್ಯವೂ

ವಿಚಕ್ಷಣೆಯಿಂದ ನಡೆಯುತ್ತದೆ. ನಾಡಗೌಡರೆಲ್ಲರೂ ಸಹಸ್ರಾರು ಬಂಟರನ್ನು ಸನ್ನದ್ಧಗೊಳಿಸುತ್ತಾರೆ. ಹೀಗೆ ಬನವಾಸಿ ರಾಜ್ಯದ ಸ್ವಾತಂತ್ರ್ಯ ಸಾಧನೆಗೆ ವ್ಯಾಪಕ ಪ್ರಯತ್ನ ನಡೆಯುತ್ತಿರುವಾಗ ಬನವಾಸಿಯಲ್ಲಿರುವ ಸಂಧಿವಿಗ್ರಹಿ ಪಲ್ಲವ ಮಾಂಡಲಿಕ ನಂದಿವರ್ಮ ಈ ಪ್ರಯತ್ನವನ್ನು ವಿಫಲಗೊಳಿಸಲು ತನ್ನ ತಂತ್ರಶಕ್ತಿಯನ್ನೆಲ್ಲ ಪ್ರಯೋಗ ಮಾಡುತ್ತಾನೆ. ಮಯೂರ ಹಾಗೂ ಅವನ ಹಿರಿಯ ಮುತ್ಸದ್ಧಿಗಳಿಗೂ ಈ ನಂದಿವರ್ಮನಿಗೂ ನಡುವೆ ನಡೆಯುವ ತಂತ್ರ ಪ್ರತಿತಂತ್ರಗಳು ಕಾದಂಬರಿಯಲ್ಲಿ ತುಂಬಾ ಸ್ವಾರಸ್ಯವಾಗಿ ನಿರೂಪಿತವಾಗಿವೆ.

ಶ್ರೀಶೈಲ ವಿಭಾಗಕ್ಕೆ ಮಾಂಡಲೀಕೇಶ್ವರನಾಗಿ ಕಿರಿಯ ರಾಜಕುಮಾರ ವಿಷ್ಣುಗೋಪನು ನಿಯುಕ್ತನಾಗಿ ಅಲ್ಲಿಗೆ ಆಗಮಿಸಿ ಆಡಳಿತ ವಹಿಸಿಕೊಂಡ ಮೇಲೆ ಒಂದು ದಿನ ಮಯೂರ ದೊಂಬನ ವೇಷದಲ್ಲಿ ತನ್ನ ಜೊತೆಯವರೊಂದಿಗೆ, ಪಂಜುಗಳೊಂದಿಗೆ ಅದ್ಭುತವಾದ ಆಟವನ್ನು ಮಾಂಡಲಿಕೇಶ್ವರನ ಮತ್ತು ಪ್ರಜಾಪ್ರಮುಖರ ಮುಂದೆ ಆಡುತ್ತಾನೆ. ಹಠಾತ್ತನೆ ಅಗ್ನಿಶಲ್ಯಗಳೊಂದಿಗೆ ಮಯೂರನ ದೊಂಬರವೇಷದ ದಂಡು ಅರಮನೆಗೆ ನುಗ್ಗಿ ರಾಜಕುಮಾರನನ್ನೂ ಇತರ ಮಾಂಡಲಿಕರನ್ನೂ ಬಂಧಿಸಿಬಿಡುತ್ತದೆ. ವಿಷ್ಣುಗೋಪನು ಕಂಚಿಗೆ ತಪ್ಪಿಸಿಕೊಂಡು ಪರಾರಿಯಾಗಿ ಶ್ರೀಶೈಲ ಕದಂಬರ ವಶವಾಗುತ್ತದೆ. ಅನತಿಕಾಲದಲ್ಲಿಯೇ ಬನವಾಸಿಯಲ್ಲಿಯೂ ಪಲ್ಲವರು ಪರಾಜಿತರಾಗುತ್ತಾರೆ.

ಅಲ್ಲಿಗೂ ಒಬ್ಬ ಹೊಸ ಮಾಂಡಲೀಕೇಶ್ವರನ ಆಗಮನವಾಗುತ್ತದೆ. ಯುಗಾದಿಯಂದು ಉತ್ಸವ ನಡೆಯುವುದನ್ನು ಪುರಪ್ರಮುಖರು ನಿರೀಕ್ಷಿಸುತ್ತ ಸಭೆಯನ್ನು ಸೇರುತ್ತಿದ್ದಂತೆಯೇ ಪಲ್ಲವರ ನೆರವಿಗೆಂದು ನಂಬಿಸಿ ತನ್ನ ದಂಡಿನವರೊಂದಿಗೆ ಬಂದ ನೀಲಕಂಠಗುಪ್ತ ತಾನೇ ಮಯೂರನೆಂದು ಪ್ರಜೆಗಳ ಮುಂದೆ ಘೋಷಿಸಿ ಸಿಂಹಾಸನವೇರುತ್ತಾನೆ. ನಂದಿವರ್ಮ ಬಂಧಿತನಾಗುತ್ತಾನೆ. ಮುಂದೆ ಪಲ್ಲವರಿಗೂ ಕದಂಬರಿಗೂ ನಡೆಯುವ ಸಂಧಿ ಮಾತುಕತೆಗಳಲ್ಲಿ ಶ್ರೀಶೈಲ ಪ್ರದೇಶವನ್ನು ಪಲ್ಲವರಿಗೇ ಬಿಟ್ಟುಕೊಡುವುದಾಗಿಯೂ ಬನವಾಸಿ ಪ್ರದೇಶವೆಲ್ಲವೂ ಮಯೂರನಿಗೇ ಸೇರುವುದಾಗಿಯೂ ಒಪ್ಪಂದವಾಗಿ ಮಯೂರ ಪ್ರೇಮಾವತಿಯರ ವಿವಾಹವೂ ಮಯೂರನ ಪಟ್ಟಾಭಿಷೇಕವೂ ವಿಜೃಂಭಣೆಯಿಂದ ನಡೆದು ಹೋಗುತ್ತದೆ.

ಶಾತವಾಹನರೂ ಧಾರವಾಡ, ಬಳ್ಳಾರಿ ಕಡೆಯ ಕನ್ನಡಿಗರೇ ಎಂಬ ಒಂದು ವಾದ ಎದ್ದರೂ ಕದಬಂರಂತೂ ಗಂಗರಂತೆ ಮೊದಮೊದಲ ಕನ್ನಡಿಗ ಅರಸುಮನೆತನಗಳಲ್ಲೊಂದೆನ್ನುವುದು ನಿರ್ವಿವಾದ. 'ಆರಂಕುಸವಿಟ್ಟೊಡಂ ನೆನವುದೆನ್ನ ಮನಂ ಬನವಾಸಿ ದೇಶಮಂ' ಎಂದು ಆರು ಶತಮಾನಗಳ ನಂತರ ಪಂಪ ವರ್ಣಿಸುವ ಸೊಬಗಿನ ಬೀಡಾದ ಬನವಾಸಿ ಕನ್ನಡನಾಡನ್ನು ಅದನ್ನು ವಶಪಡಿಸಿಕೊಂಡಿದ್ದ ಕಾಂಚಿಯ ಪಲ್ಲವರಿಂದ ಸ್ವತಂತ್ರಗೊಳಿಸಿ ಮತ್ತೆ ಅದನ್ನು ಕನ್ನಡ ರಾಜ್ಯವಾಗಿಸಿ ಆಳಿದ ಮಯೂರನ ರಮ್ಯಾದ್ಭುತ ಕಥೆಯನ್ನು ದೇವುಡು ತಮ್ಮ ಕಾದಂಬರಿಯಲ್ಲಿ ಅತ್ಯಂತ ಸರಳ ಸುಂದರ ಶೈಲಿಯಲ್ಲಿ ಚಿತ್ತರಿಸಿದ್ದಾರೆ. ಗಳಗನಾಥರ 'ಮಾಧವಕರುಣಾ ವಿಲಾಸ' ಕ್ಕೆ ಪರ್ಯಾಯವಾದ ಮನೋಜ್ಞಕೃತಿ ಕನ್ನಡಿಗರಿಗೊಂದು ಅನರ್ಘ್ಯ ಕೊಡುಗೆ.

★

ಸಂಗೀತ ನೃತ್ಯ ಕಲೆ ಸಾಧಿಸಿದ ಶಾಂತಿ

ಶ್ರೀ ಕೆ. ನರಸಿಂಹಮೂರ್ತಿ

ನಮ್ಮ ಪ್ರಮುಖ ಕಾದಂಬರಿಕಾರರಲ್ಲೊಬ್ಬರಾದ ದೇವುಡು ನರಸಿಂಹ ಶಾಸ್ತ್ರಿಗಳ ಐತಿಹಾಸಿಕ ಕಾದಂಬರಿಗಳಲ್ಲಿ 'ಮಯೂರ' ಕದಂಬ ರಾಜವಂಶದ ಮೂಲಪುರುಷನ ರೋಮಾಂಚಕಾರಿ ಸಾಹಸಗಳನ್ನೂ 'ಮಲ್ಲಿ' ಸ್ವಾತಂತ್ರ್ಯಪೂರ್ವ ಕಾಲದ ಮೈಸೂರು ರಾಜ್ಯದ ರಾಜಕೀಯ ಸಾಮಾಜಿಕ ಸ್ಥಿತಿಗತಿಗಳನ್ನು ಚಿತ್ರಿಸಿದರೆ ಅವರ 'ಚಿನ್ನಾ' (ಅಥವಾ 'ಅವಳ ಕಥೆ'). ವಿಜಯನಗರ ಗೋಲ್ಕೊಂಡಾ ರಾಜ್ಯಗಳ ನಡುವೆ ಸಂಗೀತ, ನೃತ್ಯ ಕಲೆಗಳು ಒಂದು ವಿಶಿಷ್ಟ ಸಂದರ್ಭದಲ್ಲಿ ಯುದ್ಧಸಾಧ್ಯತೆಯ ಅಪಾಯವನ್ನು ನಿವಾರಿಸಿ ಮೈತ್ರಿ ಶಾಂತಿಗಳನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾದ ಅಪೂರ್ವ ಸಾಧನೆಯನ್ನು ರಸಮಯವಾಗಿ ನಿರೂಪಿಸುತ್ತದೆ.

ಕಥೆಯ ಕಾಲ ತಾಳೀಕೋಟೆ ಯುದ್ಧಕ್ಕೆ ಹತ್ತು ವರ್ಷಗಳ ಹಿಂದಿನ ಕಾಲ. ಈ ಕಥೆ ವಿಜಯನಗರ ಸಾಮ್ರಾಜ್ಯಕ್ಕೆ ಅಡಸಿದ ಗಂಡಾಂತರವೊಂದು ತಪ್ಪಿದ ಸುಸಂದರ್ಭದ ಸ್ವಾರಸ್ಯಪೂರ್ಣ ವಿವರಗಳನ್ನು ಒಕ್ಕಣಿಸುತ್ತದೆ. ಈ ಸಾಧನೆಯಲ್ಲಿ ಮುಖ್ಯ ಪಾತ್ರ ವಹಿಸುವವರು ವಿಜಯನಗರದ ಪ್ರಸಿದ್ಧ ನರ್ತಕಿ ಚಿನ್ನಾಸಾನಿ ಮತ್ತು ಅಲ್ಲಿ ವಣಿಗ್ರತ್ನ ಯಜಮಾನ್ ವೀರಪ್ಪ ಸೆಟ್ಟಿ. ಕಥೆ ಆರಂಭವಾಗುವುದೇ ಉತ್ಥಾನ ದ್ವಾದಶಿಯಂದು. ವಿಜಯವಿಟ್ಠಲ ದೇವಸ್ಥಾನದಲ್ಲಿ ನಡೆಯುವ ಚಿನ್ನಾಳ ಅಮೋಘ ನೃತ್ಯ ಸೇವೆಯಿಂದ. ಅಪ್ರತಿಮ ಸುಂದರಿ, ಅಪೂರ್ವ ಕಲಾವಿದೆ, ಚಿನ್ನಾ ಒಬ್ಬ ಗಂಧರ್ವಾಂಗನೆ ಎಂದೇ ಜನರ ಭಾವನೆ. ಅವಳ ನೃತ್ಯ ಸೇವೆ ಅರಮನೆ ದೇವಾಲಯಗಳಿಗೆ ಮಾತ್ರ ಮೀಸಲು. ತನ್ನ ಗುರು ಭರತಾಚಾರ್ಯರಿಗೆ, ವಿಜಯನಗರದ ಚಕ್ರವರ್ತಿಗೆ, ದೇವರಿಗೆ ಮಾತ್ರ ಅವಳು ಕೈಮುಗಿಯುವವಳು. ಜನ್ಮದಲ್ಲಿ ವೇಶ್ಯೆ. ಜೀವನದಲ್ಲಿ ನಿಷ್ಠಾವಂತೆ. ಅವಳ ಪ್ರೇಮ ಪ್ರಸಿದ್ಧ ನಟ ಗೋಪಾಲರಾಯನಿಗೆ ಮೀಸಲು. ಚಕ್ರವರ್ತಿಯೊಬ್ಬನ ಅಪೇಕ್ಷೆಗೆ ಮಾತ್ರ ಅವಳು ಈ ಮೀಸಲು ಮುರಿಯುವಳು. ಅವಳ ಅದ್ಭುತ ನೃತ್ಯಕಲೆಯನ್ನು ವೀಕ್ಷಿಸಲು ನೆರೆರಾಜ್ಯದ ಸುಲ್ತಾನನೂ ಒಮ್ಮೆ ಛದ್ಮವೇಷದಲ್ಲಿ ಬಂದಿದ್ದನೆಂದು ಪ್ರತೀತಿ. ಈ ನೆರೆರಾಜ್ಯ ಗೋಲ್ಕೊಂಡಾದ ಸುಲ್ತಾನ ಅತಿಶಯ ಕಲಾಪ್ರೇಮಿ. ಅವನ ಮನಸ್ಸನ್ನು ಕಾಡುವ ಮಹದಾಶೆ ತನ್ನ ದರ್ಬಾರಿಗೆ ಚಿನ್ನಾಸಾನಿಯನ್ನು ಕರೆಸಿಕೊಂಡು ಅವಳ ನೃತ್ಯ ಪ್ರದರ್ಶನವನ್ನು ಅಲ್ಲಿ ನಡೆಸಿಕೊಳ್ಳಬೇಕೆಂಬುದು. ಅದಕ್ಕಾಗಿ ಅವನು ಏನೂ ಮಾಡಲೂ ಸಿದ್ಧ. ಕಥೆ ಚಿನ್ನಾಸಾನಿಯ ನಿಷ್ಠೆ ಮತ್ತು ಗೋಲ್ಕೊಂಡಾ ಸುಲ್ತಾನನ ಕಲಾಭಿರುಚಿ ಹಾಗೂ ಶಾಂತಿಪ್ರಿಯತೆಗಳ ಸುತ್ತ ಹೆಣೆದುಕೊಳ್ಳುತ್ತದೆ.

ಗಣಿ ಗುತ್ತಿಗೆ ಆಮಿಷ

ಸುಲ್ತಾನನ ಅಭಿಲಾಷೆ ಫಲಪ್ರದವಾಗುವುದು ಅವನ ವಜ್ರದ ಗಣಿಯ ಆಕರ್ಷಣೆಯಿಂದ. ಗೋಲ್ಕೊಂಡಾದ ಪ್ರಸಿದ್ಧ ವಜ್ರದ ಗಣಿಯ ಅಲ್ಪಾಂಶದ ವ್ಯವಹಾರದಲ್ಲಿ ತೊಡಗಿದ್ದ ವಿಜಯನಗರದ ವಣಿಗ್ರತ್ನ ವೀರಪ್ಪ ಸೆಟ್ಟಿ ಅದರ ಪೂರ್ಣ ಗುತ್ತಿಗೆಯನ್ನು ಪಡೆದುಕೊಳ್ಳಲು ತಾನೂ

ಏನೂ ಮಾಡಲು ಸಿದ್ಧನಿರುತ್ತಾನೆ. ಚಿನ್ನಾಸಾನಿಯ ನೃತ್ಯ ಪ್ರದರ್ಶನವನ್ನು ಸೆಟ್ಟಿ ಏರ್ಪಡಿಸುವುದಾದರೆ ಅವನಿಗೆ ಗಣಿಯ ಗುತ್ತಿಗೆ ಕೊಡುವ ಆಮಿಷವನ್ನು ಸುಲ್ತಾನ್ ಒಡ್ಡಿದಾಗ ಸೆಟ್ಟಿ ಆ ಕಾರ್ಯಸಾಧನೆಗೆ ಕೈಹಾಕುತ್ತಾನೆ. ನಗರದ ವರ್ತಕರ ಸಭೆಯನ್ನು ಕರೆದು ಎಲ್ಲರೂ ಸೇರಿ ಐದು ಕೋಟಿ ರೂಪಾಯಿಗಳ ಬಂಡವಾಳ ಹಾಕುವಂತೆ ಅವನು ವ್ಯವಸ್ಥೆ ಮಾಡಿಕೊಂಡು ಚಿನ್ನಾಸಾನಿ ಗೋಲ್ಕಾಂಡಾಕ್ಕೆ ಹೋಗಲು ಒಪ್ಪುವಂತೆ ಮಾಡುವ ಹುನ್ನಾರದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ.

ಆರ್ಥಿಕ ವ್ಯವಹಾರಕ್ಕೆ ಭದ್ರವಾದ ಬುನಾದಿ ರಾಜಕೀಯ ಶಾಂತ ಪರಿಸ್ಥಿತಿ, ತನ್ನ ಗುತ್ತಿಗೆ ಒಂದು ಹತ್ತು ವರ್ಷ ನಿರಂತರವಾಗಿ ಲಾಭದಾಯಕವಾಗಿ ನಡೆದುಕೊಂಡು ಹೋಗಲು, ವಿಜಯನಗರ ಗೋಲ್ಕೊಂಡಾಗಳ ನಡುವೆ ಹತ್ತು ವರ್ಷಗಳಷ್ಟಾದರೂ ಶಾಂತಿ ಕಾಪಾಡಿಕೊಂಡು ಹೋಗುವ ಕರಾರು ಏರ್ಪಡುವುದು ಆಗತ್ಯ. ಆಗಿನ ಪರಿಸ್ಥಿತಿ ಹೇಗಿತ್ತು ಎಂದರೆ ಗೋಲ್ಕೊಂಡಾ ಬಿಜಾಪುರಗಳು ಅಷ್ಟಾಗಿ ವಿಜಯನಗರದ ವಿರುದ್ಧ ಯುದ್ಧ ಮಾಡುವ ಇರಾದೆಯನ್ನು ಹೊಂದಿರದಿದ್ದರೂ ಉಳಿದ ಬಹಮನೀ ರಾಜ್ಯಗಳು ಅತೀವ ಯುದ್ಧಾಕಾಂಕ್ಷಿಗಳಾಗಿ ಗೋಲ್ಕೊಂಡಾಕ್ಕೆ ತಮ್ಮೊಡನೆ ಸೇರಿಕೊಳ್ಳಲು ರಾಯಭಾರಿಗಳನ್ನು ಕಳುಹಿಸುತ್ತಿದ್ದರು. ಗೋಲ್ಕಾಂಡಾ ಸುಲ್ತಾನ್ ಶಾಂತಿಪ್ರಿಯನೂ ಕಲಾಪ್ರೇಮಿಯೂ ಆಗಿದ್ದು, ವಿಜಯನಗರದೊಡನೆ ಶಾಂತಿ ಕಾಪಾಡುವ ಒಪ್ಪಂದಕ್ಕೆ ಬರಲು ಇಷ್ಟಪಡುತ್ತಿದ್ದ. ಇತ್ತ ವಿಜಯನಗರದ ಚಕ್ರವರ್ತಿ ರಾಮರಾಯನೂ ಈ ಸಂದರ್ಭದಲ್ಲಿ ಯುದ್ಧಕ್ಕೆ ಸಿದ್ಧನಿರಲಿಲ್ಲ. ಅವನಿಗೂ ಕಾಲಾವಕಾಶ ಬೇಕಿದ್ದಿತು. ಹಾಗಾಗಿ ವೀರಪ್ಪ ಸೆಟ್ಟಿ ಗೋಲ್ಕೊಂಡಾದೊಡನೆ ಶಾಂತಿ ಕರಾರಿಗಾಗಿ ಮಾತುಕತೆ ನಡೆಸುವಾಗ ಅವನ ಪ್ರಯತ್ನ ಫಲಕಾರಿಯಾಗುತ್ತದೆ. ಅಹಮದ್‌ನಗರದಿಂದಲೂ ಬೀದರಿನಿಂದಲೂ ಬಂದಿದ್ದ ರಾಯಭಾರಿಗಳಿಗೆ ಗೋಲ್ಕೊಂಡಾ ಸುಲ್ತಾನ ತನ್ನ ನಿಲುವನ್ನು ವ್ಯಕ್ತಪಡಿಸಿ ಅವರೊಡನೆ ಸೇರಿಕೊಂಡು ವಿಜಯನಗರದ ವಿರುದ್ಧ ಯುದ್ಧ ಮಾಡಬೇಕೆಂಬ ಅವರ ಸಲಹೆಯನ್ನು ನಿರಾಕರಿಸುತ್ತಾನೆ. ಇಂಥ ನಿಲುವು ಅವನ ಸ್ವಭಾವಕ್ಕೆ ಸಹಜವಾದರೂ ಚಿನ್ನಾಸಾನಿಯ ನೃತ್ಯದ ಬಗ್ಗೆ ಅವನಿಗಿರುವ ಕಾಳಜಿಯೂ ಇದಕ್ಕೆ ಪ್ರೇರಕವಾಗುತ್ತದೆ.

ವಿಜಯನಗರದ ಅರಮನೆ ದೇವಾಲಯಗಳಲ್ಲಿ ಮಾತ್ರ ನರ್ತಿಸುವ ತನ್ನ ದೃಢ ನಿರ್ಧಾರವನ್ನು ಈ ಒಂದು ವಿಷಯದಲ್ಲಿ ಕದಲಿಸಲು ಸಾಧ್ಯವಾಗುವುದು ಚಕ್ರವರ್ತಿ ರಾಮರಾಯನಿಗೆ. ಗೋಲ್ಕೊಂಡಾದೊಡನೆ ಆಗಬೇಕಾದ ಶಾಂತಿ ಕೌಲಿನ ಅವಶ್ಯಕತೆಯ ಪ್ರಭಾವದಿಂದ. ಸಾಮ್ರಾಜ್ಯದ ಹಿತಕ್ಕಾಗಿ ಅವಳು ಗೋಲ್ಕೊಂಡಾಕ್ಕೆ ಹೋಗಬೇಕೆಂದು ತಾನು ಹೇಳುವುದಲ್ಲದೆ, ಅವಳ ಗುರುಗಳಿಂದಲೂ ಅವಳ ಪ್ರಿಯಕರ ಗೋಪಾಲರಾಯನಿಂದಲೂ ರಾಮರಾಯ ಹೇಳಿಸುತ್ತಾನೆ. ಅಲ್ಲದೆ, ಅವಳ ಜೊತೆಗೆ ಗುರು ಭರತಾಚಾರ್ಯರೂ ಗೋಪಾಲರಾಯರೂ ಹೋಗುವಂತೆಯೂ ಅವನು ಏರ್ಪಡಿಸುತ್ತಾನೆ. ಸುಲ್ತಾನನಿಗೆ ಅವಳು ಕೈಮುಗಿಯಬೇಕಾದ ಅವಶ್ಯಕತೆಯೂ ಇರದು. ಉಪಸ್ಥಿತರಾದ ಅವಳ ಗುರುಗಳಿಗೆ ಅವಳು ಕೈಮುಗಿದು ನೃತ್ಯಾರಂಭ ಮಾಡಬಹುದಾಗಿದೆ. ಎರಡು ರಾಜ್ಯಗಳ ನಡುವೆ ಯುದ್ಧದ ಘೋರ ಹಿಂಸೆ

ಜರುಗದಂತೆ ತಡೆದು ಶಾಂತಿಯನ್ನು ಕಾಪಾಡುವ ಏರ್ಪಾಡಿಗೆ ತನ್ನ ಕಲೆ ನೆರವಾಗುವ ಅವಕಾಶವನ್ನು ಅವಳು ಬಿಟ್ಟುಕೊಡದೆ ವಿಜಯನಗರ ಸಾಮ್ರಾಜ್ಯಕ್ಕೆ ತಾನು ಸದಾ ಇರಿಸಿದ್ದ ನಿಷ್ಠೆಯನ್ನನುಸರಿಸಿ ಅವಳು ಕಡೆಯಲ್ಲಿ ಒಪ್ಪುತ್ತಾಳೆ. ಆದರೆ ಅವಳಿಗೆ ಹೀಗೆ ಗೋಲ್ಕೊಂಡಾಕ್ಕೆ ಹೋಗಿ ಹಿಂದಕ್ಕೆ ಬದುಕಿ ಬರುವ ನಿರೀಕ್ಷೆಯಿಲ್ಲ. ಗೋಲ್ಕೊಂಡಾದಿಂದ ಶ್ರೀಶೈಲಕ್ಕೆ ಯಾತ್ರೆ ಹೋಗಿ ಅಲ್ಲಿಯೇ ನಿಲ್ಲಬಹುದೆಂಬ ಭಾವ ಅವಳ ಮನಸ್ಸಿನಲ್ಲಿ ಉದಿಸುತ್ತದೆ.

ಹೀಗೆ ಶಾಂತಿ ಸ್ಥಾಪನೆಗಾಗಿ ಕಲೆ ಉಪಯೋಗುವಾಗುವ ಈ ಸನ್ನಿವೇಶ ದೇವುಡು ಅವರ ಈ ಕಾದಂಬರಿಯ ಮುಖ್ಯ ಸ್ವಾರಸ್ಯ. ಜೊತೆಗೆ, ಈ ಕಾದಂಬರಿ ಓದುಗನ ಮನಸ್ಸನ್ನು ಸೆಳೆಯುವ ಒಂದು ಆಕರ್ಷಕ ರೋಮಾನ್ಸ್. ದೇವುಡು ಚಿನ್ನಾಳ ಪ್ರೇಮ ಕಥಾನಕಕ್ಕೇ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾರೆ. ಮುನ್ನುಡಿಯಲ್ಲಿ ಅವರು ಹೇಳುವ ಈ ಮಾತು ಇದಕ್ಕೆ ಸಾಕ್ಷಿ. 'ಇದು ಚಿನ್ನಳ ಕಥೆ, ವಿಜಯನಗರದ ಕಥೆಯಲ್ಲ!' ಕಾದಂಬರಿಯ ಪರ್ಯಾಯ ಶೀರ್ಷಿಕೆಯೂ 'ಅವಳ ಕಥೆ' ಎಂದಿರುವುದು ಗಮನಾರ್ಹ. ಜನ್ಮತಃ ಚಿನ್ನಾ ವೇಶ್ಯೆಯಾದರೂ ಅವಳು ನಖಶ್ರೇಷ್ಠ ಗೋಪಾಲರಾಯನಿಗೆ ಸದಾ ನಿಷ್ಠಳು. ಅವಳ ಜೀವನದ ತೀವ್ರವಾದ ಹಂಬಲವೆಂದರೆ ತಾನು ಅವನ ಪತ್ನಿಯಾಗಬೇಕಿತ್ತೆಂಬುದು. ಅವನು ವಿವಾಹಿತ, ಅವಳು ವೇಶ್ಯೆ. ಈ ಜನ್ಮದಲ್ಲಿ ಅವಳು ಅವನ ಧರ್ಮಪತ್ನಿಯಾಗುವುದು ಸಾಧ್ಯವಿಲ್ಲವಾದರೂ ಮುಂದಿನ ಜನ್ಮದಲ್ಲಾದರೂ ಆ ಹಂಬಲ ಪೂರೈಕೆಯಾಗಲೆಂದು ಅವಳು ಹಪಹಪಿಸುತ್ತಾಳೆ. ಗೋಪಾಲರಾಯನಿಗೆ ಮೀಸಲಾದ ಅವಳ ಪ್ರೇಮ ನಿಷ್ಠೆಗಳಿಗೆ ಅಪರಾಧವೆಂದರೆ ಚಕ್ರವರ್ತಿ ಅವಳ ಬಗ್ಗೆ ಅಪೇಕ್ಷೆಪಟ್ಟರೆ ಮಾತ್ರ. ಆದೊಂದು ಅಪರೂಪದ ಸಂದರ್ಭವನ್ನು ಬಿಟ್ಟರೆ ಅವಳು ಗೋಪಾಲನ ರಾಧೆ. ಅವನಿಗೂ ಅವಳು ಅತ್ಯಂತ ಪ್ರಿಯೆ. ಅವನು ಹೇಳುವಂತೆ ಅವನ ಹೆಂಡತಿ ಅವನ ಕುಲದೈವವಾದರೆ ಚಿನ್ನಾ ಅವ ಇಷ್ಟದೈವ. ಕಾದಂಬರಿಯ ಕೊನೆಯಲ್ಲಿ ಅವರಿಬ್ಬರೂ ಶ್ರೀಶೈಲದ ಬಳಿಯ ಕಾಡಿನಲ್ಲಿ ಏಕಾಂತದಲ್ಲಿ ವಿಹರಿಸುವುದರಲ್ಲಿ ಅವರ ಪರಸ್ಪರ ಪ್ರೇಮದ ಪರಾಕಾಷ್ಠೆಯನ್ನು ಕಾಣಬಹುದಾಗಿದೆ. ಕುಲಸ್ತ್ರೀಯಾಗಿ ಹುಟ್ಟದ ಒಂದು ಅನಿವಾರ್ಯ ಕಳಂಕ ಅಪೂರ್ವ ಸೌಂದರ್ಯವತಿಯೂ ಅಪ್ರತಿಮ ಕಲಾವಿದೆಯೂ ಸರಸಿಯೂ ಆದ ಚಿನ್ನಾಳ ಜೀವನಚಂದ್ರಮನ ಏಕಮಾತ್ರ ಕಳಂಕವಾಗಿ ಅವಳನ್ನು ಖಿನ್ನಮನಸ್ಕಳನ್ನಾಗಿಸುತ್ತದೆ.

ಚಿನ್ನಾಳನ್ನು ಬಿಟ್ಟರೆ ನಮ್ಮ ಮನಸ್ಸನ್ನು ಆವರಿಸುವ ಕಾದಂಬರಿಯ ಇನ್ನೊಂದು ಪಾತ್ರ ಗೋಲ್ಕೊಂಡಾ ಸುಲ್ತಾನನದು. ಚಾರಿತ್ರ್ಯದ ದೃಷ್ಟಿಯಲ್ಲಿ ಅವನು ಹೀಗಿದ್ದನೆಂದು ನಂಬುವುದು ಕಷ್ಟವಾದೀತು. ಆದರೆ ಕಾದಂಬರಿಯಲ್ಲಿ ಅವನು ಆತ್ಮಾಕರ್ಷಕ ಆದರ್ಶ ವ್ಯಕ್ತಿ. ಅವನು ಹೇಳುತ್ತಾನೆ 'ನನಗಂತೂ ಯುದ್ಧ ಬೇಡ. ಸಲಾಂ ಅಲ್ಲಾ.ನ ರಾಜ್ಯ ಈ ಜಗತ್ತೆಲ್ಲ ಚಕ್ರವರ್ತಿ.ಯಾಗಲಿ, ಸುಲ್ತಾನನಾಗಲಿ, ಯಾರೇ ಆಳಿದರೂ ಜಗತ್ತಿನ ರಾಜ ಅಲ್ಲಾ. ನಮ್ಮ ರಾಜ್ಯದಲ್ಲಿ ಸುಬೇದಾರ್ ಇದ್ದ ಹಾಗೆ ನಾವೆಲ್ಲ. ಸುಬೇದಾರ್ ಸುಬೇದಾರ್ ಹೊಡೆದಾಡಿದರೆ ನಾವು ಸುಮ್ಮನಿರುವೆವೇ? ಇಬ್ಬರನ್ನೂ ಬಲಿ ಹಾಕುತ್ತೇವೆ. ಹಾಗೆ ಅಲ್ಲಾನ ರಾಜ್ಯದ ಸುಬೇದಾರರಾದ ನಾವೂ ಚಕ್ರವರ್ತಿಗಳೂ ಕಾದಾಡಿದರೆ, ಅಲ್ಲಾನ ಪ್ರಜೆಗಳಿಗೆ ಹಿಂಸೆಯಾಗಿ ಆತನಿಗೆ ಕೋಪ ಬಂದು ನಮ್ಮನ್ನೆಲ್ಲಾ ಧ್ವಂಸ ಮಾಡುವನು. ಆದರಿಂದ ಅಲ್ಲಿಂದ ಬಂದ ಅಧಿಕಾರ ಇಲ್ಲಿ ಇರುವವರೆಗೂ ನಾವು ಸರಿಯಾಗಿ

ನಡೆಸೋಣ. ಸಂಗೀತದಲ್ಲಿ ಅವನಿಗಿರುವ ಗಾಢ ಆಸಕ್ತಿ ಭದ್ರತಾಚಾರ್ಯರ ಗಾಯನದಲ್ಲಿಯೂ ಬೀದರನಿಂದ ಬಂದ ಗವಾಯ್ ಫಾಜಿಯುದ್ದೀನ್ ಹಾಜಿಯವರ ಔತ್ತರೇಯ ಹಾಡುಗಾರಿಕೆಯಲ್ಲಿಯೂ ಅವನು ಪಡೆದುಕೊಳ್ಳುವ ಆನಂದದಲ್ಲಿ ಅಭಿವ್ಯಕ್ತವಾಗುತ್ತದೆ. ಚಿನ್ನಾಳ ಅಭಿನಯದಲ್ಲಿಯೂ ನೃತ್ಯದಲ್ಲಿಯೂ ಅವನು ಕಂಡುಕೊಳ್ಳುವ ಆನಂದಾತಿಶಯವೂ ಅವಳ ಬಗ್ಗೆ ಅವನು ತೋರಿಸುವ ಸಂಯಮ ಗೌರವಗಳೂ ಅವನಿಗೆ ಭೂಷಣಪ್ರಾಯ.

ಅತೀಂದ್ರಿಯ ವ್ಯಾಪಾರ

ಕಾದಂಬರಿಯ ರಾಜಕೀಯ ಆರ್ಥಿಕ ಆಯಾಮಗಳೊಂದಿಗೆ ಚಿನ್ನಾಳ ಶೃಂಗಾರ ಕಥಾನಕವೂ ಸೇರಿಕೊಳ್ಳುವಂತೆ ದೇವುಡು ಅವರಿಗೆ ವಿಶಿಷ್ಟವಾದ ಅತೀಂದ್ರಿಯ ವ್ಯಾಪಾರಗಳ ಹಿನ್ನೆಲೆಯೂ ಈ ಕಾದಂಬರಿಯನ್ನು ಅನನ್ಯಗೊಳಿಸುತ್ತದೆ. ವಿಜಯನಗರ ಸಾಮ್ರಾಜ್ಯಕ್ಕೆ ಮೂರು ಗಂಡಾಂತರಗಳು ಕುಹೂಯೋಗ ಬಂದಿದ್ದಾಗ ವ್ಯಾಸರಾಯ ಗುರುಗಳು ತಾವೇ ಸಿಂಹಾಸವನ್ನೇರಿ ಒಂದು ದುರ್ಯೋಗವನ್ನು ನಿವಾರಿಸಿದರು. ಎರಡನೆಯ ಗಂಡಾಂತರ ಭರತಾಚಾರ್ಯರು ಚಿನ್ನಾಸಾನಿಯು ಗೋಲ್ಕೊಂಡಾದಲ್ಲಿ ನೃತ್ಯಪ್ರದರ್ಶನ ನೀಡುವಂತೆ ಅವಳ ಮನ ಒಲಿಸಿ ತಪ್ಪಿಸುವ ಅಂದಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಅಪಾಯಕಾರಿಯಾಗಬಹುದಾಗಿದ್ದ ಬಹುಮನೀ ರಾಜ್ಯಗಳ ಆಕ್ರಮಣ ಅರ್ಥಾತ್ ಈ ಕಾದಂಬರಿಯ ವಸ್ತು. ವಿಜಯನಗರದ ಸ್ಥಾಪನೆಯ ಕಾಲದಲ್ಲಿಯೇ ವಿದ್ಯಾರಣ್ಯರ ವಾಣಿ ಭವಿಷ್ಯ ನುಡಿದಿರುತ್ತದೆ. 'ದೈವಚಿತ್ತ', ಈ ನಗರಕ್ಕೆ ಆಯಸ್ಸು ಇಷ್ಟು. ಬಂದಿದ್ದ ಗಂಡಾಂತರ ಎರಡು ಸಲ ತಪ್ಪುತ್ತದೆ. ಮೂರನೆಯ ಸಲ ತಪ್ಪುವುದಿಲ್ಲ. ತಪ್ಪಿದರೆ ಅನಂತ ಕಾಲ ಬಾಳುತ್ತದೆ! ಈ ಮೂರನೆ ಸಲದ ಗಂಡಾಂತರವನ್ನು ತಪ್ಪಿಸಲು ಶಾಂಭವಾನಂದರು ಮಾಡುವ ತಾಂತ್ರಿಕ ಸಾಧನೆ ಭರತಾಚಾರ್ಯರ ಅಧೀರತೆಯಿಂದ ಭಗ್ನವಾಗುತ್ತದೆ. ಶಾಂಭವಾನಂದರು ಆವಾಹಿಸುವ ವಿಜಯನಗರದ ಮೃತ್ಯುದೇವತೆ ಬಲಿ ಕೇಳುವಾಗ ಮೊದಲು ತಾವು ಒಪ್ಪಿದ್ದಂತೆ ಶಾಂಭವಾನಂದರನ್ನೇ ಅವಳಿಗೆ ಬಲಿ ಕೊಡಲು ಭರತಾಚಾರ್ಯರು ಹಿಂಜರಿಯುತ್ತಾರೆ. ಹೀಗೆ ಎರಡನೆ ಗಂಡಾತರದ ನಿವಾರಣೆಯನ್ನು ಹೃದಯಂಗಮವಾಗಿ ನಿರೂಪಿಸುವ ಈ ಕಾದಂಬರಿಯು ಮೂರನೆ ಗಂಡಾಂತರ ವಿಜಯನಗರ ಸಾಮ್ರಾಜ್ಯವನ್ನು ತಪ್ಪದೆ ಕಬಳಿಸಿಬಿಡುವ ದುರಂತವನ್ನೂ ಸೂಚಿಸುತ್ತದೆ.

'ಚಿನ್ನಾ' ಒಂದು ಶ್ರೇಷ್ಠ ಐತಿಹಾಸಿಕ ಕಾದಂಬರಿ ಎಂದು ಹೇಳಲು ಸಾಧ್ಯವಿಲ್ಲ ನಿಜ. ಆದರೆ ಅಷ್ಟೇ ನಿಜ ಅದೊಂದು ಚಿತ್ತಾಕರ್ಷಕ ಐತಿಹಾಸಿಕ ರೊಮ್ಯಾನ್ಸ್. ದೇವುಡು ಅವರ ಕಾವ್ಯಾತ್ಮಕ ಸರಸ ಸುಂದರ ಶೈಲಿ ಇಲ್ಲಿನ ರಸಮಯ ಸನ್ನಿವೇಶಗಳೊಂದನ್ನೂ ಆಪ್ಯಾಯಮಾನವನ್ನಾಗಿಸುತ್ತ ವಿಜಯನಗರದ ಗತವೈಭವವನ್ನು - ಕಣ್ಣಿಗೆ ಕಟ್ಟುವಂತೆ ಪುನಸೃಷ್ಟಿಸುತ್ತದೆ.

★

ದೇವುಡು ಅವರ 'ಅಂತರಂಗ'

ಶ್ರೀ ಜಿ ಎಸ್. ರಂಗನಾಥ ರಾವ್

ದೇವುಡು ನರಸಿಂಹ ಶಾಸ್ತ್ರಿಗಳು ಕನ್ನಡದ ಆಧುನಿಕ ಗದ್ಯ ಕಥೆ, ಕಾದಂಬರಿ, ನಾಟಕ ಹೀಗೆ ವಿವಿಧ ಪ್ರಕಾರಗಳಲ್ಲಿ ತನ್ನ ಸಾಧ್ಯತೆ ಕಂಡುಕೊಳ್ಳುತ್ತ, ದಾಂಗುಡಿ ಇಡುತ್ತಿದ್ದ ಆರಂಭಕಾಲದಲ್ಲಿ ಕನ್ನಡಕ್ಕಾಗಿ ದುಡಿದ ಲೇಖಕರಲ್ಲಿ ಒಬ್ಬರು. ದೇವುಡು ಅವರ 'ಅಂತರಂಗ' ಕಾದಂಬರಿಯ ಮೊದಲ ಮುದ್ರಣವಾದದ್ದು ೧೯೩೦ ರಲ್ಲಿ. ಕಾದಂಬರಿಯ ಹೆಸರೇ ಅದು ಮನೋವ್ಯಾಪಾರಕ್ಕೆ ಸಂಬಂಧಿಸಿದ್ದೆಂಬುದನ್ನು ಸೂಚಿಸುತ್ತದೆ. ಅಂತರಂಗಕ್ಕೆ ಬರೆದಿರುವ ಮುನ್ನುಡಿಯಲ್ಲಿ ಎಸ್. ಜಿ ಶಾಸ್ತ್ರಿಗಳು ಹೀಗೆ ಹೇಳಿದ್ದಾರೆ:

''..... ಈ ಬಗೆಯ ಕಥೆಯು ನಮ್ಮಲ್ಲಿ ಇದೇ ಮೊದಲಾದ್ದರಿಂದ ಅನೇಕರು ನಾನಾ ಪ್ರಕಾರವಾಗಿ ಕಥೆಯನ್ನು ಖಂಡಿಸಬಹುದು. ಪ್ರಪಂಚದಲ್ಲಿ ಯಾವ ಹೊಸ ಕೆಲಸವನ್ನು ಮಾಡಿದರೂ ಅದನ್ನು ನಿಂದಿಸಿ ಉತ್ಸಾಹಭಂಗವನ್ನು ಮಾಡುವವರು ಅನೇಕರಿರುವರು. ಅದಕ್ಕೆ ನಾವೇನು ಮಾಡಬೇಕು? ಇದು ಮಾರ್ಗದರ್ಶಕರ ಹಣೆಯಬರಹ. ಆದರೆ ಅಂತರಂಗವು ಹೀಗೆ ಹಳಿಯುವವರ ಕಾಲವನ್ನು ಮೀರಿ ಚಿರಂಜೀವಿಯಾಗಿರುವುದು...''

ಎಸ್.ಜಿ. ಶಾಸ್ತ್ರಿಯವರ ಮಾತು ಎರಡು ಅಂಶಗಳನ್ನು ಸೂಚಿಸುತ್ತದೆ. ಅವೆಂದರೆ: ಸಮಾಜದಲ್ಲಿ ಸರ್ವಕಾಲದಲ್ಲೂ ಇರಬಹುದಾದ ನಿಷೇಧ ಮತ್ತು ವಿರೋಧಗಳು ಹಾಗೂ ನಿರ್ಭಿಡೆಯಿಂದ ಬರೆಯುವ ಲೇಖಕನಿಗೆ ಮತ್ತು ಹೊಸ ಸಾಹಿತ್ಯಕ್ಕೆ ಇವುಗಳಿಂದ ಆಗುವ ಅನ್ಯಾಯ. 'ಅಂತರಂಗ' ಒಳಮನಸ್ಸನ್ನು ಕೆದಕಿ, ಪದರ-ಪದರುಗಳಲ್ಲೂ ಅನ್ವೇಷಣೆಯ ನೋಟ ಬೀರುವುದರಿಂದ, ಒಳಮನಸ್ಸಿನ ಆಕಾಂಕ್ಷೆಗಳನ್ನು ಅನಾವರಣಗೊಳಿಸುವುದರಿಂದ; ಯಾವುದನ್ನೂ ಬಿಚ್ಚಿನೋಡುವ ಧಾರ್ಷ್ಟ್ಯವಿರದ, ಗೋಪ್ಯವಾಗಿರಿಸಿ ಮನಸ್ಸಿನೊಳಗೇ ಬಾಯಿ ಚಪ್ಪರಿಸುವ ಮಡಿವಂತರನ್ನುದ್ದೇಶಿಯೇ ಶಾಸ್ತ್ರಿಗಳು ಈ ಮಾತು ಹೇಳಿದ್ದಾರೆಂಬುದು ಸ್ಪಷ್ಟ. ಇದು ಎಲ್ಲ ಕಾಲದಲ್ಲೂ ಸೃಜನಶೀಲ ಸಾಹಿತ್ಯ ಎದುರಿಸಬೇಕಾಗಿರುವ ಅಹಿತಕರ ವಾತಾವರಣವನ್ನು ದೇವುಡು ಅವರ 'ಅಂತರಂಗ' ಚಿರಂಜೀವಿ ಪಟ್ಟ. ವಸ್ತುವಿನಿಂದಷ್ಟೇ ಅಲ್ಲದೇ ಬರವಣಿಗೆಯಿಂದಲೂ ಇದು ಚಿರಂಜೀವಿಯಾಗಿರುವುದು ಕೃತಿಯ ಅಂತಸ್ಸತ್ವಕ್ಕೆ ಸಾಕ್ಷಿಯಾಗಿದೆ. ನಲವತ್ತೂರು ವರ್ಷಗಳ ನಂತರವೂ 'ಅಂತರಂಗ' ನನ್ನ ತಲೆಮಾರಿನ ಜನರಲ್ಲೂ ಆಸಕ್ತಿ ಕೆರಳಿಸುತ್ತಿರುವುದು ಶಾಸ್ತ್ರಿಯವರು ಕಟ್ಟಿರುವ ಚಿರಂಜೀವಿಪಟ್ಟ ಉತ್ಪ್ರೇಕ್ಷೆಯದಲ್ಲ ಎಂಬುದಕ್ಕೆ ನಿದರ್ಶನವಾಗಿದೆ.

ನಾನು ಈ ಕಾದಂಬರಿಯನ್ನು ಚರ್ಚೆಗೆತ್ತಿಗೊಂಡಿರುವುದಕ್ಕೆ ಕಾರಣ: ಮಡಿವಂತರ ಕಾಲದಲ್ಲೂ ದೇವುಡು ಅವರು ಕಾಮ-ಪ್ರೇಮದ ವಸ್ತುವೊಂದನ್ನು ಬಿಚ್ಚು ಮನಸ್ಸಿನಿಂದ ಆಯ್ದುಕೊಂಡಿರುವುದು; ಆಸಕ್ತಿಯಿಂದ ಓದಿಸಿಕೊಳ್ಳುವ ಗುಣ; ಹಾಗೂ ಲೇಖಕನ Commitments ವಸ್ತುನಿಷ್ಠ ದೃಷ್ಟಿಯ ಮೇಲೆ ಸವಾರಿ ಮಾಡಿದಾದ ಕೃತಿಗೆ ಆಗಬಹುದಾದ ಊನ.

'ಅಂತರಂಗ' ಬಹುಶಃ ಕನ್ನಡದ ಮೊಟ್ಟಮೊದಲ ಮನೋವಿಶ್ಲೇಷಣಾತ್ಮಕ ಕಾದಂಬರಿ. ಮೂವತ್ತರ ದಶಕ ಕನ್ನಡದಲ್ಲಿ ಆಗ ತಾನೆ ಕಾದಂಬರಿ ತಲೆ ಎತ್ತುತ್ತಿದ್ದ ಕಾಲ. ಬಂಗಾಳಿ, ಮರಾಠಿ, ಪ್ರಭಾವ- ಪ್ರೇರಣೆಯಿಂದ ಸ್ವಲ್ಪ ಸ್ವಲ್ಪವಾಗಿ ಮುಕ್ತವಾಗುತ್ತ ಸ್ವತಂತ್ರ ಕಾದಂಬರಿಗಳು ಬರುತ್ತಿದ್ದ ಆ ಕಾಲದಲ್ಲಿ ಕಾಮ-ಪ್ರೇಮಗಳ ಹೊಯ್ದಾಟ ಚಿತ್ರಿಸುವ 'ಅಂತರಂಗ' ಮಡಿವಂತರನ್ನು ಬೆಚ್ಚಿಬೀಳಿಸಿದ್ದರೆ ಅದರಲ್ಲಿ ಸೋಜಿಗವೇನಿಲ್ಲ.

'ಅಂತರಂಗ' ಕನಸಿನ ವಾತಾವರಣದಿಂದ ಮೊದಲಾಗುತ್ತದೆ. ಕಾದಂಬರಿಯ ನಾಯಕ, ಭಟ್ಟ ಸುಸಂಸ್ಕೃತ, ಋಜುಜೀವಿ. ಇವನಿಗೆ ಯಾತ್ರೆಯೊಂದನ್ನು ಮಾಡಿದ ಹಾಗೆ ಕನಸಾಗುತ್ತದೆ. ಈ ಕನಸಿನ ಯಾತ್ರೆಯಲ್ಲಿ ಹೆಣ್ಣೊಂದನ್ನು ಭೇಟಿಯಾದ ಇಂಗಿತವಿದೆ. ಹೀಗೆ, ನಾಯಕ-ನಾಯಕಿಯರ ಭೇಟಿಗೆ ಮನೋರಂಗ ಸಿದ್ಧವಾಗುತ್ತದೆ. ನಾಯಕ-ನಾಯಕಿಯರಿಬ್ಬರಿಗೂ ಸನ್ನಿಹಿತವಾಗಿರುವ ತಮ್ಮಿರ್ವರ ಸಮಾಗಮದ ಒಳ ಅರಿವು (Intution) ಉಂಟಾಗಿದೆ. ಕನಸಿನ ಪರಿಣಾಮವಾಗಿ ಭಟ್ಟರ ಮನಸ್ಸು ತಳಮಳಗೊಳ್ಳುತ್ತದೆ ; ವಿರಹದಲ್ಲಿ ತಹತಹಿಸುತ್ತದೆ. ಸುಬ್ರಹ್ಮಣ್ಯ ಯಾತ್ರೆಯಷ್ಟನ್ನೇ ಹೆಂಡತಿಗೆ ಹೇಳಿ ಭಟ್ಟರು ತಮ್ಮ ಕನಸಿನ ಕನ್ಯೆಯನ್ನು ಅರಸುತ್ತ ಹೊರಟುಬಿಡುತ್ತಾರೆ. ಪೂರ್ವ ನಿಶ್ಚಿತದಂತೆ ಕನಸಿನ ಕನ್ಯೆ ಬಸವಿಯ ಭೇಟಿಯೂ ಆಗುತ್ತದೆ. ಮೊದಲ ನೋಟಕ್ಕೇ ಬಸವಿ ಭಟ್ಟರ ಅಂತರಂಗಕ್ಕಿಳಿದುಬಿಡುತ್ತಾಳೆ. ಬಸವಿ, ದೇವರಿಗೆ ಬಿಟ್ಟ ಹೆಣ್ಣು, ಬಸವಿಯೂ ಭಕ್ತಿಭಾವದಿಂದ ಭಟ್ಟರಿಗೆ ತನ್ನನ್ನು ಒಪ್ಪಿಸಿಕೊಂಡುಬಿಡುತ್ತಾಳೆ. ಭಟ್ಟರ ಮಾತಿನಲ್ಲೇ ಹೇಳುವುದಾದರೆ ''ವಿಷಯ ಸನ್ನಿಧಾನ, ಪೂರ್ವವಾಸನೆ, ಮೋಹ ವಿಜೃಂಭಣೆ ಎಲ್ಲವೂ....'' ಆಗಿಹೋಗಿದೆ.

ಈ ಎಲ್ಲವನ್ನೂ ಮುಗಿಸಿಕೊಂಡು ಭಟ್ಟರು ಮನೆಗೆ ವಾಪಸಾಗಿಬಿಡುತ್ತಾರೆ. ಮನಸ್ಸು ಮಾತ್ರ ಬಸವಿಯ ಸಾನ್ನಿಧ್ಯದಲ್ಲಿರುತ್ತದೆ. ಭಟ್ಟರು ನಾಲ್ಕು ಜನಕ್ಕೆ ಮಾರ್ಗದರ್ಶನ ಮಾಡುವ ಶಾಸ್ತ್ರ ಸಂಪನ್ನರು, ಪುರೋಹಿತರು, ಋಜುಜೀವಿಗಳು ಅಷ್ಟೇ ಅಲ್ಲ , ರಸಿಕರೂ ಹೌದು. ಮನೆಯಲ್ಲಿ ಅನುರೂಪಳಾದ ಪತ್ನಿ, ಅನ್ಯೋನ್ಯ ದಾಂಪತ್ಯ, ಆದರೆ ಜನ್ಮ-ಜನ್ಮಾಂತರಗಳಿಂದ ಬಯಸಿದಂತೆ ಆಗುವ ಭಟ್ಟ- ಬಸವಿಯರ ಸಮಾಗಮ, ಅನುರಾಗಗಳು ಭಟ್ಟರ ದಾಂಪತ್ಯ ಜೀವನದಲ್ಲಿ ಬಿರುಕುಂಟುಮಾಡುತ್ತದೆ.

ಇಲ್ಲಿಯವರೆಗೆ ಕಾದಂಬರಿ ಒಂದು ಘಟ್ಟಕ್ಕೆ ಬಂದು ನಿಲ್ಲುತ್ತದೆ. ಇಲ್ಲಿಂದ ಮುಂದೆ ಕಥೆ ಪಡೆಯುವ ತಿರುವು ಕಾದಂಬರಿಯ ನಿರ್ಣಾಯಕ ಘಟ್ಟವಾಗಿದ್ದು ಲೇಖಕರ ಪೂವಾದರ್ಶ, ನೀತಿಸಂಹಿತೆ, ನಂಬಿಕೆಗಳ ವಿಜಯದಲ್ಲಿ ಪರ್ಯವಸಾನಗೊಳ್ಳುತ್ತದೆ. ಭಟ್ಟರು ಕೇವಲ ರಸಿಕರಷ್ಟೇ ಅಲ್ಲದೇ, 'ಸಂಸ್ಕಾರ'ದ ಪ್ರಾಣೇಶಾಚಾರ್ಯರಂತೆ ವಿದ್ವಾಂಸರು, ಸಮಾಜವನ್ನು ದಿಗ್ದರ್ಶಿಸುವ ಹೊಣೆ ಹೊತ್ತವರು. ದೈವನಿಯಾಮಕವೋ ಎಂಬಂತೆ ತಾವು ಕೂಡಿದ ಬಸವಿಯ ಮೇಲಿನ ಅವರ ಮೋಹ ಹಿಮಾಲಯದಷ್ಟು ಗಾಢವೂ ಎತ್ತರವೂ ಆಗಿದ್ದರೂ ಅವರ ಪಾಪ-ಪುಣ್ಯಗಳ ಪ್ರಜ್ಞೆ, ಧಾರ್ಮಿಕ ಪ್ರಜ್ಞೆ ಸೋತಿಲ್ಲ. ಅವರ ಒಳಮನಸ್ಸಿನಲ್ಲಿ ನೀತಿ, ಧರ್ಮ, ಸಂಪ್ರದಾಯಗಳ ಸಣ್ಣದೊಂದು ಧ್ವನಿ ಎಚ್ಚರಿಕೆ ನೀಡುತ್ತಲೇ ಇದೆ: ಭಟ್ಟ, ಇದು ತಪ್ಪು ಜಾರೀಯ ಜೋಕೆ ಎಂದು.

ಹೆಣ್ಣಿನ ಮೋಹ, ಧಿಕ್ಕರಿಸಲಾಗದ ನೀತಿ ಪ್ರಜ್ಞೆ, ಪಾಪ- ಪುಣ್ಯಗಳ ಭೀತಿ ಅವರನ್ನು ಹಣ್ಣು ಮಾಡಿದೆ. ಜೊತೆಗೆ ಮನೆಯಲ್ಲಿ ಸುಳಿವು ತಿಳಿದು ಹೆಂಡತಿಯ ತಕರಾರು ಬೇರೆ ಆರಂಭವಾಗಿದೆ. ತಾವು ಮಾಡಿದ್ದು ಸರಿ ಎಂಬ ಧ್ವನಿಯೂ ಒಮ್ಮೊಮ್ಮೆ ಅವರ ಮನಸ್ಸಿನಲ್ಲಿ ಏಳುತ್ತದೆ:

ಅದೇನೋ ಗೊತ್ತಿಲ್ಲ. ಆ ಕನಸಿನಲ್ಲಿ ಅವಳು ಬಂದು ಕೈ ಹಿಡಿದುಕೊಂಡಳು. ನನಗೆ ಬಹು ಪ್ರಿಯವಾಗಿ ಅವಳು ಬೇಡವೆಂದರೂ ಬಿಡದೆ ನಾನೇ ಹೊಸ ಹುಡುಗನ ಹಾಗೆ ಬಿದ್ದು ಒಳ್ಳೆಯ ರಭಸದಿಂದ ಮುತ್ತು ಕೊಟ್ಟೆ , ಅವಳು ಕೋಪದಿಂದ ನೋಡುತ್ತ 'ಅನರ್ಥ ಮಾಡಿದೆ. ನಾನು ಹಾಗೂ ಕೆಟ್ಟೆ ಹೀಗೂ ಕೆಟ್ಟೆ' ಎಂದಳು. ದೂರದಲ್ಲಿ ಇನ್ನಾರೋ ಕಿಲ ಕಿಲನೆ ನಕ್ಕು ಎಂದಿದ್ದರೂ ಆಗಿಯೇ ತೀರಬೇಕು. ಬೇಡವೆಂದರೆ ಬಿಟ್ಟೀತೆ? ಎಲ್ಲವೂ ಸರಿಯಾಗುವುದು ಯಾವುದೂ ಕೆಡಲಿಲ್ಲ ಎಂದರು. ನಾವಿಬ್ಬರೂ ಬೆದರಿದ ಮಕ್ಕಳೆರಡು ಒಂದಕ್ಕೊಂದು ಹೊಂದಿಕೊಂಡು ನಿಲ್ಲುವಂತೆ ತಬ್ಬಿಕೊಂಡು ಒಬ್ಬರ ತೆಕ್ಕೆಯಲ್ಲಿ ಒಬ್ಬರು ನಿಂತಿದ್ದೆವು. ಆ ಸ್ವಪ್ನದ ಅನುಭವ ಎಷ್ಟು ಸುಖವಾಗಿತ್ತು ಬಲ್ಲೆಯ? (ಪುಟ-೧೦೬)

ಅಂತರಂಗದಲ್ಲಿ ಏಳುವ ಧಾರ್ಮಿಕ ಪ್ರಜ್ಞೆ, ನೀತಿ ಪ್ರಜ್ಞೆಗಳಿಗೆ ಭಟ್ಟರು ಮೇಲಿನ ಮಾತುಗಳಿಂದ ಸಮಾಧಾನ ಹೇಳುತ್ತಾರೆ. ತಮ್ಮಿಬ್ಬರ ಕೂಡಿಕೆಗೆ ದೇವರ ಅಪ್ಪಣೆಯಾಗಿದೆ ಎಂಬುದನ್ನೂ ಈ ಕನಸು ಸೂಚಿಸುತ್ತದೆ. ಜೊತೆಗೆ ''ಎಲ್ಲವೂ ಸರಿಯಾಗುವುದು, ಯಾವುದೂ ಕೆಡಲಿಲ್ಲ'' ಎಂಬುದು ಭಟ್ಟರ ಇನ್ನೊಂದು ಮುಖದ ದನಿಯಾಗಿದೆ. ಪುರೋಹಿತರಾಗಿ, ಪಂಡಿತೋತ್ತಮರಾಗಿ ಸಮಾಜವನ್ನು ಸನ್ಮಾರ್ಗಕ್ಕೆ ಹಚ್ಚುವುದು ಭಟ್ಟರ ಬಹಿರಂಗ ವ್ಯಕ್ತಿತ್ವವಾದರೆ ಅಂತರಂಗದಲ್ಲಿ ಕಾಮ- ಪ್ರೇಮಗಳ ವಾಸನೆಗೆ ಉದ್ದೀಪನಗೊಂಡು, ಆಕಾಂಕ್ಷಿಸುವ ಇನ್ನೊಂದು ಮುಖವಿದೆ. ಭಟ್ಟರ ಬಹಿರಂಗ ವ್ಯಕ್ತಿತ್ವ ಅವರ ಇನ್ನೊಂದು ಮುಖವನ್ನು ಎಷ್ಟೇ ಅಡಗಿಸಿಟ್ಟರೂ ಅದರ ಧ್ವನಿ ತಪ್ಪಿಲ್ಲ. ಭಟ್ಟರಿಗೆ ತಾನು ತಪ್ಪು ಮಾಡಿದೆನೇನೊ ಎನ್ನಿಸಿದಾಗ ಈ ಒಳಧ್ವನಿ ಅವರಿಗೆ ಸಾಂತ್ವನ ನೀಡುತ್ತದೆ. ಕಾದಂಬರಿಯಲ್ಲಿ ಭಟ್ಟರು pose ಮಾಡುವ ಬಹಿರಂಗ ವ್ಯಕ್ತಿತ್ವವೇ ಪ್ರಶ್ನಾರ್ಹವಾಗಿದೆ.

ನೀತಿ-ಅನೀತಿ, ಪಾಪ-ಪುಣ್ಯ ಕುರಿತ ತಾಕಲಾಟ, ಹೆಂಡತಿಯ ಮುನಿಸು, ಇವೆಲ್ಲದರೊಂದಿಗೆ ಪತ್ನಿಯ ಗೈರುಹಾಜರಿಯಲ್ಲಿ ಬಸವಿ ಹೇಳಿ ಕಳುಹಿಸಿದಂತೆ ಥಟ್ಟನೆ ಭಟ್ಟರ ಮನೆಗೆ ಬಂದು ಬಿಡಾರ ಮಾಡುವುದರಿಂದ ವಾತಾವರಣ ಸ್ಫೋಟದ ಹಂತ ತಲುಪುತ್ತದೆ. ಬಸವಿಯ ಈ ಆಗಮನವೂ ಭಟ್ಟರ Intution ನಂತೆಯೇ ಆಗಿದೆ. ಬಸವಿಯನ್ನು ನೋಡುವ ಮೊದಲು ಕನಸಿನಲ್ಲಿ ಕಾಣುವುದು, ಕನಸು ಕೈಗೂಡುವುದು, ಹಾಗೂ ನೆನೆದವರ ಮನದಲ್ಲಿ ಎಂಬಂತೆ ಬಸವಿ ಭಟ್ಟರ ಮನೆಗೆ ಬರುವುದು ಇವೆಲ್ಲದರಿಂದ ಬಸವಿ ಭಟ್ಟರ ಸಂಬಂಧ ಕೇವಲ ಮೋಹ ಪ್ರೇರಿತವಲ್ಲ, ದೈವ ನಿಯಾಮಕವಾದದ್ದು ಎಂಬ ಸೂಚನೆಯನ್ನು ಬಲಗೊಳಿಸುವ ಯತ್ನವೂ ಕಾದಂಬರಿಯಲ್ಲಿ ಕಾಣುತ್ತದೆ. ಇಲ್ಲಿಯವರೆಗೂ ರಮ್ಯವಾಗಿ ನಡೆಯುವ ಬಸವಿ-ಭಟ್ಟರ ಅನುರಾಗ ಈಗ ಸಮಸ್ಯೆಯಾಗಿದೆ. ಭಟ್ಟರ ಮನೆಯಲ್ಲಿ ಇಬ್ಬರಿಗೆ ಜಾಗವಿಲ್ಲ ಎಂಬಂಥ ಪರಿಸ್ಥಿತಿ. ಭಟ್ಟರ ಮನಸ್ಸಿನಲ್ಲಂತೂ ಬಸವಿ ಅವರ ಜನುಮದ ಜೋಡಿಯಾಗಿ ಬಿಟ್ಟಿದ್ದಾಳೆ. ಈ ಸಮಸ್ಯೆ ಪರಿಹಾರಕ್ಕಾಗಿ ದೇವುಡು ಅವರು ಲೌಕಿಕದ ಪ್ರತಿನಿಧಿಯೋ

ಎಂಬಂತೆ ರಾಯರ ಪಾತ್ರವನ್ನು ಸೃಷ್ಟಿಸಿದ್ದಾರೆ. ಈ ರಾಯ ವಕೀಲ ಎಂಬುದನ್ನು ನಾವು ಮರೆಯುವಂತಿಲ್ಲ. ಹೀಗಾಗಿ ರಾಯ ಭಟ್ಟರ ಒಳಮನಸ್ಸಿನ ಕಾಮವಾಂಛೆಯ ವಕೀಲನೂ ಆಗುತ್ತಾನೆ. ರಾಯ ಸಮಸ್ಯೆಗೆ ಪರಿಹಾರ ಸೂಚಿಸುವುದರಲ್ಲಿ ನಿಪುಣ. ಬೇರೆ ಮನೆ ಮಾಡಿ ಬಸವಿಯನ್ನು ಅಲ್ಲಿಟ್ಟು, ಭಟ್ಟ ಇಬ್ಬರು ಹೆಂಡಿರ ಒಡನಾಟ ಸುಖ ಪಡೆಯಲು ರಾಯ ಸಲಹೆ ಮಾಡುತ್ತಾನೆ. ಆದರೆ ಕಾಂಬರಿಯ ಆಶಯ-ಹಾಗೆನ್ನುವುದಕ್ಕಿಂತ ದೇವುಡು ಆಶಯ ಎಂದರೇ ಹೆಚ್ಚು ಸರಿಯಾದೀತೇನೋ-- ಇದಲ್ಲವಾದ್ದರಿಂದ ಅಂತರಂಗದ ಮುಕ್ತಾಯ ಬೇರೆಯೇ ಆಗಿದೆ. 'ಅಂತರಂಗಕ್ಕೆ' ಬೆಲೆ ಕಟ್ಟುವ ಮುನ್ನ, ಆದರ ಸಾರ್ಥಕ್ಯ ಕುರಿತು ನಿರ್ಣಯಿಸುವ ಮುನ್ನ ದೇವುಡು ಅವರ ಈ ಮಾತುಗಳನ್ನು ನಾವು ಗಮನಿಸಬೇಕಾಗುತ್ತದೆ.

''ಇದು ಸಂಸ್ಕೃತಿ ಸಂಘಟನೆಗಳ ಕಾಲ. ಪುರಾತನ ನೂತನ ಯುಗಗಳ ಸಂಧಿಕಾಲ. ಈಗ ಇನ್ನುಳಿದ ರೀತಿಗಳಲ್ಲಿ ಆಗಿರುವಂತೆ ಸಾಹಿತ್ಯ ಪ್ರಪಂಚದಲ್ಲೂ ಹೊಸ ರೀತಿ ನೀತಿಗಳ ಆವಿರ್ಭಾವವಾಗಿದೆ. ನಮ್ಮ ತರುಣರು ಆಂಗ್ಲ ಸಾಹಿತ್ಯವಾಹಿನಿಗೆ ಸಿಕ್ಕಿ ಮನುಷ್ಯನ ಮನೋದೌರ್ಬಲ್ಯಗಳನ್ನು (ನಮ್ಮ ಹಳಬರ ದೃಷ್ಟಿಯಿಂದ) ಚಿತ್ರ ವಿಚಿತ್ರವಾಗಿ ಚಿತ್ರಿಸುವ ಆಟದಲ್ಲಿದ್ದಾರೆ. ಇಂತಹ ಕಾಲದಲ್ಲಿ, ಈ ಹೊಸ ಅಂಗಡಿಯ ಹರದದಲ್ಲಿ ಪ್ರೇಯಸ್ಸನ್ನು ಹದ್ದಿನಲ್ಲಿಟ್ಟು ಮನಸ್ಸನ್ನು ಶ್ರೇಯಸ್ಸಿನ ಕಡೆಗೆ ತಿರುಗಿಸಬೇಕು ಎಂದು ಹೇಳ ಹೊರಟ ನನ್ನ ಪುಸ್ತಕಕ್ಕೆ ಎಷ್ಟು ಮಾನ್ಯತೆ ಬರುವುದೋ ನಾನು ಹೇಳಲಾರೆ. ಆದರೂ ನಾನು ದಿಟವಾಗಿ ದೊಡ್ಡದು ಎಂದು ನಂಬಿರುವುದರ ಒಂದಂಶವನ್ನು, ಯಥಾಶಕ್ತಿಯಾಗಿ ಚಿತ್ರಿಸಿದ್ದೇನೆ...'' (ಪ್ರಸ್ತಾಪನೆಯಲ್ಲಿ)

ಈ ಮಾತುಗಳು ದೇವುಡು ಅವರ ಸಾಹಿತ್ಯಕ ನಿಲುವನ್ನೂ ಅವರ ದೃಷ್ಟಿಯಲ್ಲಿ ಸಾಹಿತ್ಯ ಮಾಡಬೇಕಾದ ಕೆಲಸವನ್ನೂ ಸ್ಪಷ್ಟಪಡಿಸುತ್ತವೆ. ಮನಸ್ಸನ್ನು ಪ್ರೇಯಸ್ಸಿನಿಂದ ಶ್ರೇಯಸ್ಸಿನತ್ತ ತಿರುಗಿಸುವುದೇ ದೇವುಡು ಅವರ ಮುಖ್ಯ ಗುರಿಯಾದುದರಿಂದ ಅಂತರಂಗದ ಸಮಸ್ಯೆಗೆ ಪರಿಹಾರವೂ ಸುಲಭವಾಗಿದೆ. ಭಟ್ಟ ಹೆಣ್ಣಿನ ಮೋಹದ ಸುಳಿಯಿಂದ ಪಾರಾಗಲು ಕಟ್ಟಿಕೊಂಡವಳು, ಒಲಿದು ಬಂದವಳು ಇಬ್ಬರನ್ನೂ ತೊರೆದು ದೇಶಾಂತರ ಪರಾರಿಯಾಗುವುದು, ಕೊನೆಗೆ ಹೆಂಡತಿ ಒಪ್ಪಿಗೆ ಕೊಟ್ಟ ನಂತರವೂ ''ರಾಯ! ನಿನ್ನ ಕೋಪದ ಆಳವನ್ನೂ ಅರ್ಥವನ್ನೂ ನಾನು ಬಲ್ಲೆ. ಆದರೂ ಲೋಕವು ಉಳಿದಿರುವುದು ಭೋಗದಿಂದಲ್ಲ ತ್ಯಾಗದಿಂದ; ಅದರಲ್ಲಿ ನನ್ನ ಸುಖವಿದೆ'' (ಪುಟ-೧೭೦) ಎಂದು ಹೇಳಿ ಬಸವಿಯನ್ನು ತ್ಯಜಿಸುವುದು ಕಾದಂಬರಿಕಾರರ ಉದ್ದೇಶಕ್ಕನುಗುಣವಾಗಿ ಸಹಜವಾಗಿಯೇ ಇದೆ. ಆದರೆ ಕಾದಂಬರಿಯ ಸಮಸ್ಯೆ ತ್ಯಾಗ-ಭೋಗಗಳಿಗಿಂತ ಹೆಚ್ಚು ಆಳವಾಗಿದ್ದು ಗಂಡು-ಹೆಣ್ಣಿನ ಸಂಬಂಧವೂ ಈ ಸಂಬಂಧಸೂತ್ರ ಆಡಿಸುವ ಅಗೋಚರ ಶಕ್ತಿಯ ಕೈವಾಡವೂ, ವ್ಯಕ್ತಿ-ಸಾಮಾಜಿಕ ಮೌಲ್ಯಗಳ ತಿಕ್ಕಾಟವೂ ಆಗಿದೆ. ಭಟ್ಟ- ಬಸವಿಯರ ಸಂಬಂಧ ಧಾರ್ಮಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಪರೀಕ್ಷೆಗೆ ಗುರಿಪಡಿಸುವ ಸವಾಲಾಗುವುದರಿಂದ ಇಲ್ಲಿ ಸಮಸ್ಯೆಗೆ ಪರಿಹಾರ ತಾತ್ವಿಕ ಪ್ರೇರಿತವಾಗದೇ ಪಾತ್ರಗಳ ಅಂತಸ್ಸತ್ವದ ಕಠಿಣ ಪರೀಕ್ಷೆಯಲ್ಲಿದೆ. ಆದ್ದರಿಂದ ಪಾತ್ರಗಳು ಸಮಸ್ಯೆಗೆ ಪರಿಹಾರವನ್ನು ಸ್ವತಃ ತಾವೇ ಕಂಡುಕೊಳ್ಳಬೇಕಾಗಿದೆಯೇ ವಿನಃ ಲೇಖಕಶಾಹಿಯ ಹುಕುಂನಿಂದಲ್ಲ. ಪ್ರಾರಂಭದಿಂದಲೂ

ದೇವುಡು ಅವರು ಭಟ್ಟ-ಬಸವಿಯ ಸಂಬಂಧ ಕ್ಷಣಿಕ ಸುಖದ ಕಾಮಸಂಬಂಧವನ್ನು ಮೀರಿದ ಒಂದು ಬಗೆಯ ಆಧ್ಯಾತ್ಮಿಕ ಸಂಬಂಧ ಎಂಬ ಊಹೆಗೆಡೆ ಕೊಡುವಂಥ ವಾತಾವರಣ ಸೃಷ್ಟಿಸಿರುವುದರಿಂದ ಇಲ್ಲಿ ಅಂತ್ಯ, ಅಂದರೆ ತ್ಯಾಗದ ಮಾತು ಸಹಜ ಪರಿಹಾರವಾಗದೇ ಪರಿಸ್ಥಿತಿ ಎದುರಿಸಲಾಗದೇ ಪಲಾಯನ ಹೇಳುವ ಭೋಳೆ ಮಾತಾಗಿದೆ ಎನ್ನಿಸುತ್ತದೆ. ''ಕಥೆಯ ಉತ್ತರಾರ್ಧವು ಏನೋ ಅವಸರದಿಂದ ಬರೆದಿರುವ ಹಾಗೆ ಕಾಣುತ್ತದೆ.... ಬಸವಿಯು ಎಲ್ಲವನ್ನೂ ತೊರೆದು ಅಷ್ಟು ಸುಲಭವಾಗಿ ಅದೃಶ್ಯಳಾಗಳು'' ಎಂದು ಎಸ್.ಜಿ. ಶಾಸ್ತ್ರಿಗಳು ಮುನ್ನುಡಿಯಲ್ಲಿ ಹೇಳಿರುವ ಮಾತು ಮನನೀಯವಾದದ್ದು.

ದೇವುಡು ಅವರು ಬೆಳೆದು ಬಂದ ತಲೆಮಾರು, 'ಅಂತರಂಗ' ಬರೆದ ಕಾಲ, ಇವೆರಡೂ ಧರ್ಮ- ಸಂಪ್ರದಾಯಗಳಲ್ಲಿ ನಿಷ್ಠವಾಗಿ ಬೇರೂರಿದ್ದವು. ಪಾಪ-ಪುಣ್ಯ, ಧರ್ಮ-ಕರ್ಮ, ಸಂಪ್ರದಾಯ ಕಂದಾಚಾರಗಳಲ್ಲಿ ನಂಬಿ ನೆಲೆನಿಂತ ದೇವುಡು ಅವರಿಗೆ ವ್ಯಕ್ತಿತ್ವನಿಷ್ಠ ಮೌಲ್ಯಗಳಿಗಿಂತ, ಸಾಮಾಜಿಕ ಮೌಲ್ಯಗಳಿಗಿಂತ ತ್ಯಾಗ-ಶ್ರೇಯಸ್ಸುಗಳೇ ಹೆಚ್ಚು ಮೌಲಿಕವೆನ್ನಿಸುತ್ತದೆ. ಇದು ನಿರ್ವಿವಾದವಾಗಿ ಸಾಂಪ್ರದಾಯಿಕ ಮೌಲ್ಯಗಳನ್ನು ಒಪ್ಪಿಕೊಳ್ಳುವ ದೃಷ್ಟಿ. ಹೀಗಾದಾಗ ಸ್ವಾಭಾವಿಕವಾಗಿಯೇ, ಒಲಿದು ಬಂದ ಹೆಣ್ಣನ್ನು -ಭೋಗಿಸಿಯೂ-ಹೆಂಡತಿಯಾಗಿ ಸ್ವೀಕರಿಸಿ ಮನೆಯಲ್ಲಿರಿಸಿಕೊಳ್ಳುವುದು ನೀತಿಬಾಹಿರವೆನ್ನಿಸುತ್ತದೆ. ಅದರಲ್ಲಿಯೂ ಸಮಾಜವನ್ನು ದಿಗ್ದರ್ಶಿಸುವ ಪುರೋಹಿತ ವರ್ಗಕ್ಕಂತೂ ಇದು ಖರೇ ನೀತಿಬಾಹಿರ ವಿಷಯ. ಆದರಿಂದಾಗಿಯೇ ದೇವುಡು ಅವರು ಭಟ್ಟರನ್ನು ಅಧಃಪತನದಿಂದ ಮೇಲೆತ್ತುವ ಕಾಯಕದಲ್ಲಿ ಸುಲಭವಾಗಿಯೇ ಬಸವಿಯನ್ನು ಮರೆತು ಬಿಡುತ್ತಾರೆ. ದೇವುಡು ಅವರಿಗೆ ಬೇಕಾಗಿರುವುದು ವ್ಯಕ್ತಿಯ moral responsibility ಅಲ್ಲ (ಈ ಕೃತಿಗೆ ಸಂಬಂಧಿಸಿದಂತೆ), ಆಸೆ- ಆಮಿಷಗಳ ಸಾರ್ಥಕ್ಯ ಅಲ್ಲ, ಭ್ರಮ ನಿರಸನದಿಂದ ಆಗಬಹುದಾದ ದುಷ್ಪರಿಣಾಮವಲ್ಲ, ಸಾಮಾಜಿಕ ಹೊಣೆಗಾರಿಕೆಯಲ್ಲ, ಭೋಗಿಸಿ ತಿರಸ್ಕರಿಸಲ್ಪಟ್ಟ ಹೆಣ್ಣಿನ ಸ್ಥಾನ-ಮಾನಗಳ ಪ್ರಶ್ನೆಯಲ್ಲ. ದೇವುಡು ಅವರ ಮುಖ್ಯ ಕಾಳಜಿ: ಧಾರ್ಮಿಕ ಹೊಣೆ. ಅವರಿಗೆ ಮುಖ್ಯವಾಗಿ ಬೇಕಾಗಿರುವುದು: ''ಶ್ರೇಯಸ್ಸು- ಪ್ರೇಯಸ್ಸುಗಳ ಪ್ರಶ್ನೆ'' ಲೋಕ ಉಳಿದಿರುವುದು ಭೋಗದಿಂದಲ್ಲ ತ್ಯಾಗದಿಂದ ಎಂಬ ದೃಢ ನಂಬಿಕೆ. ಈ ದೃಷ್ಟಿಗೆ ದೇವುಡು ಕಟ್ಟುಬಿದ್ದಿದ್ದಾರೆ. ಆದ್ದರಿಂದಲೇ ಅವರ ಶ್ರೇಯಸ್ಸು ಪ್ರೇಯಸ್ಸುಗಳು ತಮ್ಮ ಶಾಬ್ದಿಕ ಅರ್ಥದ ಸೀಮಿತ ವಲಯದಲ್ಲಿ ಕೆಲಸ ಮಾಡುತ್ತವೆ. ಇಡೀ ಕಾದಂಬರಿಯೇ ದೇವುಡು ಅವರ ಈ ನಂಬಿಕೆಯ ಮೇಲೆ ನಿಂತಿದೆ. ಅಥವಾ ಈ ನಂಬಿಕೆಯೇ ಪ್ರಭುವಾಗಿ ಕಥೆಯನ್ನು ತನ್ನ ಗುರಿಯತ್ತ ಓಡಿಸಿಕೊಂಡು ಹೋಗಿದೆ ಎನ್ನಬಹುದು. ಶ್ರೇಯ-ಪ್ರೇಯಗಳ ಉಪದೇಶಾಮೃತ ಹಂಚುವ ಏಕೋದ್ದೇಶದಿಂದಲೇ ದೇವುಡು 'ಅಂತರಂಗ' ಬರೆದಿದ್ದಾರೇನೋ ಎಂಬ ಗಾಢ ಗುಮಾನಿಯೂ ಉಂಟಾಗುತ್ತದೆ. ಈ ಮಾತಿಗೆ ರಾಯರ ಸೃಷ್ಟಿಯ ನಿದರ್ಶನ ನೋಡಬಹುದು. ಸಮಸ್ಯೆ ಸ್ಫೋಟ ಸ್ಥಿತಿ ಮುಟ್ಟಿದಾಗ ರಾಯರ ಪಾತ್ರವನ್ನು ಸೃಷ್ಟಿಸಿ, ಆ ಪಾತ್ರದ ಮೂಲಕ ಹೆಣ್ಣು ಹೊನ್ನುಗಳ ಆಕಾಂಕ್ಷೆ ಹೊಂದಿರುವ ಹುಲುಮಾನವನ ಮಾತನ್ನಾಡಿಸಿ ಕೊನೆಯಲ್ಲಿ ಭಟ್ಟರ ಬಾಯಿ ಮೂಲಕ

ಶ್ರೇಯಸ್ಸಿನ ಹಾದಿ ಹಿಡಿಯುವಂತೆ ದೇವುಡು ತೀರ್ಪು ಕೊಡುತ್ತಾರೆ. ಈ ಉಪದೇಶದ ಗುರಿ ತಲುಪುವ ಆತುರದಲ್ಲಿ ದೇವುಡು ಕಥೆಯ ಸಹಜ ವ್ಯಾಪಾರವನ್ನು ಮರೆತುಬಿಡುತ್ತಾರೆ.

ದೇವುಡು ಅವರು ಕಾದಂಬರಿಯಲ್ಲಿ ಪ್ರಾರಂಭದಿಂದಲೂ ಭಟ್ಟ-ಬಸವಿಯರ ಸಂಬಂಧ ಕಾಮವಾಂಛಿತ ಸಂಬಂಧವೆಂದು ಹೇಳುವುದಿಲ್ಲ. ಪ್ರತಿಯಾಗಿ ಭಟ್ಟ-ಬಸವಿಯರ ಸಂಬಂಧ ಕೇವಲ ಮೋಹವಲ್ಲ, ಅದನ್ನು ಮೀರಿದ್ದು ಎಂಬ ಭಾವನೆಯುಂಟು ಮಾಡುವಂಥ ವಾತಾವರಣ ಕಾದಂಬರಿಯುದ್ದಕ್ಕೂ ಹರಡಿಕೊಂಡಿದೆ. ಅಲ್ಲದೆ, ಕೊನೆಯಲ್ಲಿ ಬಸವಿಯನ್ನು ತಂದಿರಿಸಿಕೊಳ್ಳುವಂತೆ ಹೆಂಡತಿ ಪಾತಮ್ಮ ಸಲಹೆಮಾಡಿ ''ಯಜಮಾನಿ ಅವಳು, ನಾನು ಅವಳ ಗೌಡಿಯಾಗಿರಲು ಒಪ್ಪುತ್ತೇನೆ'' ಎಂದು ಹೇಳಿದಾಗ ಭಟ್ಟ ಆಡುವ ಈ ಮಾತನ್ನು ತಳ್ಳಿಹಾಕಲಾಗದು:

''ಅವಳು ಹೇಳಿದುದೇ ಸರಿ ರಾಯ ಇದು ಮೋಹದ ಬೊಂಬೆ, ಅದು ಪ್ರೇಮದ ಪುತ್ಥಳಿ. ಈ ಲೋಕದಲ್ಲಿ ಸಿಕ್ಕುವುದು ಇದು, ಅದಲ್ಲ'' (ಪುಟ -೧೭೦)

ಇಲ್ಲಿ ಮೋಹ ಕ್ಷಣಿಕವೆನ್ನಬಹುದಾದ ಕಾಮಸಂಬಂಧವನ್ನೂ ಪ್ರೇಮ ಆತ್ಮ ಸಂಬಂಧವನ್ನೂ ಸೂಚಿಸುತ್ತದೆ. ಭಟ್ಟ ಅಂತರಂಗದಲ್ಲಿ ಬಸವಿಯನ್ನು ತನ್ನ ಆತ್ಮ ಸಂಗಾತಿಯಾಗಿ ಸ್ವೀಕರಿಸಿಯೂ ಆಕೆಯನ್ನು ತನ್ನ ಬಳಿ ಇಟ್ಟುಕೊಳ್ಳಲು ನಿರಾಕರಿಸುವುದು ದೇವುಡು ಅವರ ಶ್ರೇಯಸ್ಸಿನ ಮಾರ್ಗದ ಉದ್ದೇಶಕ್ಕೆ ವಿರುದ್ಧವಾಗಿಯೇ ಇದೆ. ಅಲ್ಲದೇ ಭಟ್ಟ ಮುಖ್ಯವಾಗಿ ಬಸವಿಯನ್ನು ತಿರಸ್ಕರಿಸುವುದು ತಾತ್ವಿಕವಾಗಿ ಶ್ರೇಯೋಮಾರ್ಗದಿಂದಲೂ ಅಲ್ಲ, ವೈರಾಗ್ಯದಿಂದಲಂತೂ ಅಲ್ಲವೇ ಅಲ್ಲ. Establishment ನ ಪ್ರಧಾನ ಅಂಗವಾಗಿ ಗುರುವಿನ ಸ್ಥಾನದಲ್ಲಿರುವ ಅವನಿಗೆ ಲೌಕಿಕವಾದ ಪದವಿ- ಸನ್ಮಾನ, ಸಾಮಾಜಿಕ ಅಂತಸ್ತುಗಳ ಮೋಹ ಹೋಗಿಲ್ಲ. ಈ ಅಂತಸ್ತಿನಲ್ಲಿರುವ ತಾನು ಜಾರಿದರೆ ಏನು ಗತಿ ಎಂಬ ಭೀತಿ ಅವನಿಗಿದೆ. ಸಮಾಜದ ಕಣ್ಣಲ್ಲಿ ಅವನು ಸಣ್ಣವನಾಗಬಯಸುವುದಿಲ್ಲ. ಧರ್ಮಗ್ಲಾನಿಯಾಗಬಯಸುವುದಿಲ್ಲ ಅವನು. ಸಮಾಜಕ್ಕೆ ತಾನು ಸೊಪ್ಪು ಹಾಕುವುದಿಲ್ಲವೆಂದು ದೇವುಡು ಅವನ ಬಾಯಲ್ಲಿ ಒಂದೆರಡು ಮಾತನ್ನು ಆಡಿಸುತ್ತಾರಾದರೂ ಅದು ಅವನ ವ್ಯಕ್ತಿತ್ವ ಹಾಗೂ ವೃತ್ತಿಸಹಜವಾದುದಲ್ಲವಾದ್ದರಿಂದ ಆ ಮಾತುಗಳನ್ನು ನಂಬಲು ಕಷ್ಟವಾಗುತ್ತದೆ. ಉದ್ದೇಶಪೂರ್ವಕವಾಗಿಯೇ ದೇವುಡು ಅವರು ಭಟ್ಟನ ಸಾಮಾಜಿಕ ವ್ಯಕ್ತಿತ್ವ ಸಾಮಾಜಿಕ ಮೌಲ್ಯಗಳಿಗೆ ಗಮನ ಕೊಡುವುದಿಲ್ಲ ಅನ್ನಿಸುತ್ತದೆ. ಮುಖ್ಯವಾಗಿ 'ಅಂತರಂಗ' ಸೋಲು ದೇವುಡು ಅವರ Committed Writing ನಲ್ಲಿದೆ. ಅಂತರಂಗದ ಪಾತ್ರಗಳು ತಮ್ಮ ಸಮಸ್ಯೆಗೆ ತಾವೇ ಪರಿಹಾರ ಕಂಡು ಕೊಳ್ಳುವುದು ಸಾಧ್ಯವಿದ್ದಿದ್ದರೆ ಆ ಪರಿಯೇ ಬೇರೆಯಾಗುತ್ತಿತ್ತು. ದೇವುಡು ಅವರ ಸಾಹಿತ್ಯಕ ಉದ್ದೇಶ ಬೇರೆಯೇ ಆದುದರಿಂದ ಕೃತಿಯ ಅಂತ್ಯ ಅನಿವಾರ್ಯವಾಗಿಯೇ ಅಸಹಜತೆಯತ್ತ ಬಾಗಿದೆ. ದೇವುಡು ಅವರು ಮುಖ್ಯವಾಗಿ ಧರ್ಮ ಪುನರುಜ್ಜೀವನದಲ್ಲಿ ನಂಬಿಕೆಯಿದ್ದವರು. ವಾಸ್ತವಿಕ ಸಂಗತಿಗಳು, ಸಂಕೀರ್ಣತೆಗಳು, ಪ್ರೇಮ-ಕಾಮ ಸಂವೇದನೆಗಳು, ಜೀವನಾನುಭವದ ಸತ್ಯ, ನಿಷ್ಠುರತೆಗಳೇನೇ ಇರಲಿ ಅವರು ಬದುಕನ್ನು ಧರ್ಮದ ಪೂರ್ವಾಗ್ರಹದಿಂದಲೇ ನೋಡುವರು. ಇಲ್ಲೇ ಅವರ ಮಾನವೀಯ ದೃಷ್ಟಿ ಎಡವುವುದು. ಈ ಧರ್ಮ ಪೂರ್ವಾಗ್ರಹ ದೃಷ್ಟಿಯೇ ಕ್ರಿಯಾಶೀಲ ಸಾಹಿತ್ಯ ಪ್ರಚಾರ ಸಾಹಿತ್ಯದ ತಿರುವು ಪಡೆಯುವ

ಅಪಾಯದ ಧೋರಣೆಯಾಗಿದೆ. ದೇವುಡು ಅವರು 'ಅಂತರಂಗ 'ದಲ್ಲಿ ತಾಳಿರುವ ನಿಲುವು ಅವರ ಮೂಲಭೂತ ದೃಷ್ಟಿಗನುಗಣವಾಗಿಯೇ ಇದೆ. ಇಲ್ಲಿ ಸೃಜನಶೀಲತೆ ಅನುಭವಜನ್ಯವಾಗಿಯೂ, ವಸ್ತುನಿಷ್ಠವಾಗಿಯೂ ಇರದೇ ಕೇವಲ ತತ್ವನಿಷ್ಠೆಯಿಂದ ಕೂಡಿದೆ. ದೇವುಡು ಅವರ ಧರ್ಮಕ್ಕೆ, ನೀತಿ ಸಂಹಿತೆಗೆ ಕಟ್ಟುಬಿದ್ದ ಮನಸ್ಸು ಎಂಥ ಅನುಭವವನ್ನೂ ಸಮಸ್ಯೆಯನ್ನೂ ಸೂತ್ರದ ಬಂಧಕ್ಕೆ ಸಿಕ್ಕಿಸಿ ಪ್ರಖರತೆಯನ್ನು ತಣ್ಣಗಾಗಿಸಿಬಿಡುತ್ತದೆ. ಸಮಸ್ಯೆಯನ್ನು ನೀತಿಯ ಚೌಕಟ್ಟಿನಲ್ಲಿ compress ಮಾಡಿ, ಅದಕ್ಕೆ ಧರ್ಮ-ಕರ್ಮ, ಪಾಪ-ಪುಣ್ಯಗಳ ಕೋಟಿಂಗ್ ಕೊಟ್ಟು readymade ಪರಿಹಾರ ಸಿದ್ಧವಾಗುತ್ತದೆ. ಈ ಮಾತಿಗೆ ನಿದರ್ಶನವಾಗಿ ಭಟ್ಟ ಮತ್ತು ರಾಯರ ಸಂವಾದವನ್ನೂ ಕೊನೆಗೆ ಅದು ಮುಟ್ಟುವ ಗುರಿಯನ್ನೂ ಗಮನಿಸಬಹುದು. ಭಟ್ಟನಿಗೆ ಬಸವಿಯ ಮೇಲಿನ ಮೋಹದ ಜೊತೆ ಅಗ್ನಿಸಾಕ್ಷಿ ಕೈಹಿಡಿದ ಹೆಂಡತಿಯ ಭೀತಿ ಇದೆ. ಪರಸ್ತ್ರೀ ಜೊತೆ ಸಂಪರ್ಕ ಧರ್ಮಬಾಹಿರವಾದದ್ದು ಎಂಬುದಿದೆ. ಆದರೆ ಭಟ್ಟನ ಮಾತುಗಳೆಲ್ಲ ಸಂದರ್ಭದ ತೊಡಕಿನಲ್ಲಿ ಸಿಕ್ಕಿಬಿದ್ದವನ ನಿಜವಾದ ಮಾತುಗಳಲ್ಲ. ಅವನ ಹೃದಯದಿಂದ ಬಂದ ಮಾತುಗಳಲ್ಲ, ಧರ್ಮದ ಸೋಗಿನಲ್ಲಿ ಪರಾರಿ ಹೇಳುವ ಪಲಾಯನವಾದಿಯ Bogus ನಿಲುವು ಎಂದೆನ್ನಿಸುತ್ತದೆ. ಏಕೆಂದರೆ ಪ್ರೇಯಸ್ಸನ್ನು ಹದ್ದಿನಲ್ಲಿಟ್ಟು ಮನಸ್ಸನ್ನು ಶ್ರೇಯಸ್ಸಿನ ಕಡೆಗೆ ತಿರುಗಿಸಲು ಕಂಕಣ ಬದ್ಧರಾಗಿರುವ ದೇವುಡು ವ್ಯಕ್ತಿತ್ವ ಭಟ್ಟನ ಪಾತ್ರದಲ್ಲಿ ಪ್ರತಿಷ್ಠಾಪನೆಯಾಗಿ ಹೋಗಿದೆ. ಈ ಪರಕಾಯ ಪ್ರವೇಶದಿಂದಾಗಿಯೇ ಭಟ್ಟ ದೇವುಡು ಅವರ ಮುಖವಾಣಿಯಾಗಿ ಮಾತನಾಡಿ ಕಾದಂಬರಿಯನ್ನು ಉದ್ದೇಶಿತ ಗುರಿಗೆ ಒಯ್ಯುತ್ತಾನೆ. ಇದರಿಂದಾಗಿಯೇ ಭಟ್ಟನ ಮಾತುಗಳು, ಅವನು ಕಾಣುವ ಪರಿಹಾರ ಅಸಹಜವೆನ್ನಿಸುತ್ತದೆ. ಆದೇ ಪಾತಮ್ಮ, ಬಸವಿ, ರಾಯರು, ಭಟ್ಟನಿಗಿಂತ ಬೇರೆಯಾಗಿ ಸಹಜವೂ, ಅಂಗೀಕಾರಾರ್ಹವೂ ಆಗಿ ಕಾಣುತ್ತಾರೆ.

ದೇವುಡು ಅವರ committed writingನಿಂದಾಗಿ 'ಅಂತರಂಗ' ಅದರ ಸೀಮಿತ ಆಶಯದಲ್ಲಿ ಅಥವಾ ದೇವುಡು ಆಶಯದಂತೆ, ಸಫಲವೆಂದು ತೋರುವುದಾದರೂ ಕಲಾಕೃತಿಯಾಗಿ ಎಲ್ಲ ಮೋಹ ಪ್ರಭಾವಗಳನ್ನೂ ಮೀರಿದ ಮಣ್ಣಿನ ಬದುಕಿನುಗುಣವಾದ ಸತ್ಯವಾಗಿ ಅದು ನಿಲ್ಲುವುದಿಲ್ಲ. ಲೇಖಕನಿಗಿರಬೇಕಾದ ಸೂಕ್ಷ್ಮಾತಿಸೂಕ್ಷ್ಮ ನಿರೀಕ್ಷಣಾ ಶಕ್ತಿ ಮತ್ತು ನಿರ್ಲಿಪ್ತತೆಗಳೂ, ಮಾನವೀಯ ಗುಣ- ದೌರ್ಬಲ್ಯಗಳನ್ನು ತೂಗಿ ನೋಡಿ ನಡತೆ ನಿಷ್ಕರ್ಷಿಸುವ ವಿಮರ್ಶಕ ಗುಣ ದೇವುಡು ಅವರಲ್ಲಿ ಇಲ್ಲದಿರುವುದೂ ಈ ಕೃತಿಯ ಸೋಲಿಗೆ ಮತ್ತೊಂದು ಕಾಣವಾಗಿದೆ. ಲೇಖಕ ಕೆಲವು ಧ್ಯೇಯ, ಆದರ್ಶ, ಉದ್ದೇಶಗಳಿಗೆ ಕಟ್ಟುಬಿದ್ದಾಗ ಸೃಜನಶೀಲ ಸಾಹಿತ್ಯ ಹೇಗೆ ಎರಡನೆಯ ದರ್ಜೆಗೆ ಇಳಿಯುತ್ತದೆ ಎಂಬುದಕ್ಕೆ 'ಅಂತರಂಗ' ಒಳ್ಳೆಯ ಉದಾಹರಣೆ.

ಇಷ್ಟಾದರೂ 'ಅಂತರಂಗ' ದೇವುಡು ಅವರ ಪ್ರತಿಭೆಯಿಂದಾಗಿ ಆಕರ್ಷಿಸಿ ಓದಿಸಿ ಕೊಳ್ಳುತ್ತದೆ. ಅವರು ಕಥೆ ಬೆಳೆಸಿರುವ ರೀತಿ, ಬಳಸಿರುವ ಭಾಷೆಯಿಂದಾಗಿ ಇದು ಸಾಧ್ಯವಾಗಿದೆ. 'ಅಂತರಂಗ' ವನ್ನು ಕನ್ನಡದಲ್ಲಿ, ಮನಸ್ಸಿಗೆ ಸಂಬಂಧಿಸಿದ ಮೊದಲ ಕಾದಂಬರಿ ಎನ್ನಬಹುದೇನೊ. ಈ ಮಾತನ್ನಾಡುವಾಗ ಆ ಕಾಲದಲ್ಲಿಬಹುದಾದ ಸಾಮಾಜಿಕ ಸ್ಥಿತಿ-ಗತಿ, ಸಾಂಪ್ರದಾಯಿಕ ಮೌಲ್ಯಗಳ ಮೇಲುಗೈ, ವಿದ್ವತ್-- ವೇದಾಂತಗಳ ಪ್ರಭುತ್ವವನ್ನು ಮರೆಯಲಾಗದು. ಇಂಥ

ಪರಿಸ್ಥಿತಿಯಲ್ಲಿ ದೇವುಡು ಅವರು ಮನುಷ್ಯರ ಮೂಲ ಪ್ರವೃತ್ತಿಗೆ ಸಂಬಂಧಿಸಿದ, ಹೆಚ್ಚು ಸೂಕ್ಷ್ಮವಾದ ವಸ್ತುವೊಂದನ್ನು ಆರಿಸಿಕೊಂಡಿರುವುದೇ ಮಹತ್ವದ ಮಾತಾಗಿದೆ. ದೇವುಡು ಅವರ ಸರಳ ಕನ್ನಡದಲ್ಲಿ, ಅಪ್ಯಾಯಮಾನವಾಗಿ ಓದಿಸಿಕೊಳ್ಳುವ ಭಾಷೆಯಲ್ಲಿ ಚಿತ್ರಿಸಿರುವುದು 'ಅಂತರಂಗ' ದ ಪ್ರಶಂಸನೀಯ ಗುಣಗಳಲ್ಲಿ ಒಂದಾಗಿದೆ. ದೇವುಡು ಸಂಸ್ಕೃತದಲ್ಲಿ ಪ್ರಕಾಂಡ ಪಂಡಿತರಾಗಿದ್ದವರು. ಆದರೆ ಇಲ್ಲಿ ಸೋಜಿಗದ ಮಾತೆಂದರೆ 'ಅಂತರಂಗ' ದ ಭಾಷೆ ಸಂಸ್ಕೃತ ಭೂಯಿಷ್ಠ ಕನ್ನಡವಾಗದೇ ಇರುವುದು. ಸಂಸ್ಕೃತ ಭೂಯಿಷ್ಠ ಕನ್ನಡ ಬಳಕೆಯೇ ವಿದ್ವತ್ತಿನ ದ್ಯೋತಕವೆಂದು ನಂಬಿಕೆಯಿದ್ದ ಆ ಕಾಲದಲ್ಲೂ ದೇವುಡು ಕಥಾ ವಸ್ತುವಿನ ಅಭಿವ್ಯಕ್ತಿಗೆ, ಸಂವೇದನೆಗೆ ಅನುಗುಣವಾದ ಸರಳ ಕನ್ನಡವನ್ನು ದುಡಿಸಿಕೊಂಡಿರುವುದನ್ನು ಓದುವಿಕೆಗೆ ಸಹಕಾರಿಯಾಗಿದೆ. ದೇವುಡು ಮನಸ್ಸಿನ ಒಳ ಪದರುಗಳನ್ನು ಬಿಡಿಸುವಾಗ ಚಾಕು ಕತ್ತರಿ ಹಿಡಿದ ಶಸ್ತ್ರಚಿಕಿತ್ಸಾ ತಜ್ಞನಂತೆ, ವಿವರಗಳನ್ನು ವರ್ಣನೆಯ ಬೆಡಗಿನಲ್ಲಿ ಬಿಚ್ಚುವುದಿಲ್ಲ. ಬಹುತೇಕ ಕನಸು ಹಾಗೂ ಜಾಗೃತ ಸ್ಥಿತಿಯ ಸಂಭಾಷಣೆಗಳಲ್ಲಿ, ವ್ಯಾಖ್ಯಾನದಲ್ಲಿ ಪಾತ್ರಗಳ ಒಳ ಮನಸ್ಸನ್ನು ಮೇಲಕ್ಕೆ ತರುತ್ತಾನೆ.

'ಅಂತರಂಗ'ದ ಊನ, ಓರೆಕೋರೆ, ವೈಫಲ್ಯಗಳೇನಿದ್ದರೂ ಇದಕ್ಕೆ ಐತಿಹಾಸಿಕ ಮಹತ್ವವಿದೆ ಎಂಬುದನ್ನೂ ಇದು ಕನ್ನಡ ಕಾದಂಬರಿ ಆರಂಭದಲ್ಲಿ ಬಂದ ಕೃತಿಯೆಂಬುದನ್ನೂ ನಾವು ಮರೆಯುವಂತಿಲ್ಲ. ಕನ್ನಡ ಸಾಹಿತ್ಯ ಸಂಕೋಚ ನಿಷೇಧಗಳಿಂದ ಭೋಳೆ ಮಾತಾಗಿದ್ದ, ಪ್ರಕೃತಿ-ದೈವಾರಾಧನೆಗಳ ಅಭಿವ್ಯಕ್ತಿ ಮಾಧ್ಯಮವಾಗಿದ್ದ ಕಾಲದಲ್ಲಿ, ಕನ್ನಡದ ಮೊದಲ ಕಾದಂಬರಿಗಳಲ್ಲಿ ಒಂದಾದ 'ಅಂತರಂಗ' ಮನುಷ್ಯನ ಮೂಲಭೂತ ಅಗತ್ಯಗಳನ್ನೂ, ಪ್ರೇಮ-ಕಾಮಗಳನ್ನೂ ವ್ಯಕ್ತಿ-ಸಮಾಜ ಮೌಲ್ಯಗಳನ್ನು ಧಾರ್ಷ್ಟ್ಯದಿಂದ ನೋಡುವ ಆ ಕಾಲಕ್ಕೆ ಕ್ರಾಂತಿಕಾರ ಎನ್ನಬಹುದಾದ ಗುಣಗಳನ್ನು ಹೊಂದಿದೆ. ಇಂದಿಗೂ ಇದು ಸವಕಲಾಗದೇ ಓದಿಸಿಕೊಳ್ಳುವ ಗುಣ ಹೊಂದಿರುವುದು ಇದರ ವೈಶಿಷ್ಟ್ಯವಾಗಿದೆ.

★

‘ಅಂತರಂಗ’ದ ಸಂಸ್ಕಾರ, ‘ಸಂಸ್ಕಾರ’ದ ಅಂತರಂಗ

ಶ್ರೀ ಕೆ. ನರಸಿಂಹಮೂರ್ತಿ

ದೇವುಡು ನರಸಿಂಹ ಶಾಸ್ತ್ರಿಗಳ ‘ಅಂತರಂಗ’ ಕನ್ನಡದ ಪ್ರಪ್ರಥಮ ತಾತ್ವಿಕ ಹಾಗೂ ಮನೋವೈಜ್ಞಾನಿಕ ಕಾದಂಬರಿ. ಈ ಮಾದರಿಯ ಕಾದಂಬರಿಯನ್ನು ‘ಭಾವ ಕಥೆ’ ಎಂದು ಕರೆದು ಅದರ ರೂಪರೇಷೆಗಳನ್ನು ಅವರೇ ಹೀಗೆ ವಿವರಿಸಿದ್ದಾರೆ, ‘ಇದರಲ್ಲಿ ವಸ್ತುವಿಗೆ ಅಷ್ಟು ಪ್ರಾಮುಖ್ಯ ಇಲ್ಲ, ಇದರಲ್ಲಿರುವುದು, ಇರಬೇಕಾದುದು ಹೃದಯಾಂತರಾಳದಲ್ಲಿ ಎದ್ದೆದ್ದು ಉರುಳುವ ಭಾವತರಂಗ ಮಾಲೆಗಳ ಚಿತ್ರಗಳು, ಈ ತರಂಗರಾಶಿಯನ್ನು ಎಬ್ಬಿಸುವ ಝುಂಝಾವಾತಗಳು ಭಾವ ಪ್ರಪಂಚದ ಬಗ್ಗೆ ತಮ್ಮ ಗ್ರಹಿಕೆಯನ್ನು ಅವರು ಸ್ಪಷ್ಟಪಡಿಸುತ್ತ ‘ಪ್ರತಿಯೊಬ್ಬನ ಹೃದಯದಲ್ಲೂ ಏಕಜಾತಿಯ ಭಾವಗಳು ಮಿಡಿಯುವುದೆಂದು ಒಪ್ಪಿದರೂ ಭಾವಗಳು ಏಕತಾನವೆಂದು ನಾನೊಪ್ಪಲಾರೆ..... ಭಾವಗಳೂ ಸಂಸ್ಕೃತಿ ಸ್ಥಿತಿಗಳಿಗನುಸಾರವಾಗಿ ರೂಪಾಂತರವನ್ನು ಹೊಂದುವುವು’ ಎನ್ನುತ್ತಾರೆ.

ಹೃದಯಂಗಮ

ಆಳವಾದ ಪ್ರೇಮದ ಆವೇಗದ ಆವರ್ತಕ್ಕೆ ಸಿಕ್ಕ ಅಧ್ಯಾತ್ಮ ಜೀವಿಗಳಿಬ್ಬರ ಅಂತರಂಗಗಳ ತುಡಿತ ಮಿಡಿತಗಳನ್ನೂ ತುಯ್ದಾಟ ಹೊಯ್ದಾಟಗಳನ್ನೂ ಅದ್ಭುತ ರೀತಿಯಲ್ಲಿ ಚಿತ್ರಿಸುವ ‘ಅಂತರಂಗ’ ದ ಮಹತ್ವ ಐತಿಹಾಸಿಕ ಮಟ್ಟಕ್ಕೇ ಸೀಮಿತವಾದುದಲ್ಲ. ಅದೊಂದು ಅವಿಸ್ಮರಣೀಯ ಹೃದಯಂಗಮ ಸಾಹಿತ್ಯ ಕೃತಿರತ್ನ, ಪ್ರೇಮದ ಸ್ವರೂಪದ ಬಗ್ಗೆಯೂ ವೈಯಕ್ತಿಕ, ಸಾಮಾಜಿಕ, ಆಧ್ಯಾತ್ಮಿಕ ಜೀವನದಲ್ಲಿ ಅದರ ಸ್ಥಾನ ಮಾನಗಳ ಬಗ್ಗೆಯೂ ಸೂಕ್ಷ್ಮ ಜಿಜ್ಞಾಸೆ ಈ ಕಾದಂಬರಿಯ ವೈಶಿಷ್ಟ್ಯ. ಈ ಚಿಂತನಶೀಲ ಪ್ರೇಮಕಥಾನಕದ ಪಾತ್ರಗಳು, ‘ಎಲ್ಲರೂ ಸಂಸ್ಕಾರಗಳನ್ನು ಪಡೆದವರು, ಜೀವನ ಶ್ರೇಯೋಮಾರ್ಗದಲ್ಲಿ ಬೇರೆ ಬೇರೆಯ ಸಂಸ್ಕೃತಿ ಘಟ್ಟಗಳಲ್ಲಿರುವವರು’. ಪ್ರಕೃತಿಯ ಸೆಳೆತಕ್ಕೂ ಸಂಸ್ಕೃತಿಯ ಸಂಯಮಕ್ಕೂ ನಡುವೆ ನಡೆಯುವ ಸಂಘರ್ಷ ಇಲ್ಲಿನ ಇಬ್ಬರು ಆದರ್ಶ ಪ್ರೇಮಿಗಳ ಚಿತ್ರದಲ್ಲಿ ಒಂದು ‘ಸಣ್ಣ ಪ್ರಳಯ’ ವನ್ನೇ ಎಬ್ಬಿಸುತ್ತದೆ. ಇಲ್ಲಿನ ಕಥಾನಾಯಕ ಭಟ್ಟರ ಪಾತ್ರ ಮುಂದೆ ‘ಮಹಾಬ್ರಾಹ್ಮಣ’ ಮೊದಲಾದ ದಾರ್ಶನಿಕ ಕಾದಂಬರಿ ತ್ರಯವನ್ನು ಸೃಷ್ಟಿಸುವ ಪ್ರತಿಭೆಯ ಸೃಷ್ಟಿಸಿರುವ ಒಂದು ಪಾತ್ರ. ಶ್ರೇಯಸಾಧನೆಯೇ ಜೀವನದ ಪರಮೋದ್ದೇಶವೆಂದು ನಂಬಿರುವ ಸದಾಚಾರ ಸಂಪನ್ನರು, ಜ್ಞಾನಿಗಳು ಭಟ್ಟರು. ಕಥಾನಾಯಕಿಯ ಪಾತ್ರವೂ ಭಾವನೆಗಳ ಮಟ್ಟದಲ್ಲಿ ಅಷ್ಟೇ ಉದಾತ್ತವಾದುದು. ‘ದೇವರಿಗೆಂದು ಬಿಟ್ಟು ದೇವರವಳೇ’ ಆಗಿರುವವಳು ಬಸವಿ, ಗೌರಿ. ಪ್ರೇಮ ಪ್ರಪಂಚಕ್ಕೇ ಅಪರಿಚಿತವಾದ ಈ ಮುಗ್ಧೆ ಭಟ್ಟರ ‘ಅಲೌಕಿಕ ಸಿರಿ’ಗೆ ಮಾರುಹೋಗಿ ಪ್ರಥಮ ದರ್ಶನದಲ್ಲಿಯೇ ಅವರಲ್ಲಿ ಅನುರಕ್ತಳಾಗುತ್ತಾಳೆ. ಅವಳ ಅಪೂರ್ವ ಸೌಂದರ್ಯರಾಶಿಯ ಆಕರ್ಷಣೆಗೆ ಸಿಕ್ಕ ಭಟ್ಟರಲ್ಲಿ ಪೂರ್ವವಾಸನೆ ಜಾಗೃತವಾಗುತ್ತದೆ. ಈ ಕ್ಷಣ ಪ್ರಬಲಿಸುತ್ತದೆ, ‘ಮಮ ಮಾಯಾ ದುರಿತ್ಯಯಾ’ ಎಂಬ ಭಗವದ್ವಾಕ್ಯ ಅವರಿಗೆ ಅನುಭವವೇದ್ಯವಾಗುತ್ತದೆ. ವರ್ಷಾಂತರಗಳಿಂದ ಅವರ

ಛಾಯಾನುವರ್ತಿಯಾಗಿ ಅವರೊಡನೆ ಸುಖಸಂಸಾರ ನಡೆಸುತ್ತಿರುವ ಪ್ರೀತಿಯ ಪತ್ನಿ ಪಾತಮ್ಮ ಸಂಸ್ಕಾರದಲ್ಲಿ ಇವರಿಬ್ಬರಿಗೆ ಸಮಳಲ್ಲ. 'ಪ್ರೇಯಸ್ಸಿನ ತೋಟದಿಂದ ತಂದು ಶ್ರೇಯಸ್ಸಿನ ಭೂಮಿಯಲ್ಲಿ ನೆಟ್ಟಿರುವ ಎಳೆ ಸಸಿ' ಈಕೆ ತನ್ನ ಪತಿಯ ಪ್ರೇಮದ ಮೇಲೆ ತನಗಿರುವ ಏಕಸ್ವಾಮ್ಯವನ್ನೂ ಹಕ್ಕನ್ನೂ ಉಳಿಸಿಕೊಳ್ಳಲು ಸಹಜವಾಗಿಯೇ ಪಾತಮ್ಮ ನಿಷ್ಠುರ ನಿಷ್ಠೆಯಿಂದ ಸೆಣಸುತ್ತಾಳೆ. ಪತಿ - ಪತ್ನಿಯರ ಘರ್ಷಣೆ ಭಟ್ಟರ ಒಳತೋಟಿಯ ಬಾಹ್ಯ ರೂಪ. ಈ ಪ್ರೇಮ ತ್ರಿಕೋನದ ಕುತೂಹಲಭರಿತ ಚಿತ್ರಣವೇ ಅರ್ಥಪೂರ್ಣ ಶೀರ್ಷಿಕೆಯುಳ್ಳ ಈ ಕಾದಂಬರಿ, 'ಅಂತರಂಗ'.

ಕಥಾವಾಹಿನಿ ಎರಡು ಧಾರೆಗಳಲ್ಲಿ ಹರಿಯುತ್ತದೆ. ಒಂದು ಧಾರೆ ಕಾದಂಬರಿಯ ಪ್ರವೇಶಿಕೆ. ಇನ್ನೊಂದು ಕಥಾಂತರಂಗ. ಪ್ರವೇಶಿಕೆಯ ಹಿನ್ನೆಲೆ ಬಸವಿ ವಾಸಿಸುವ ಒಂದು ಗ್ರಾಮ. ಯಾತ್ರಾರ್ಥಿಯಾಗಿ ಹೊರಟ ಭಟ್ಟರ ಆ ಗ್ರಾಮಕ್ಕೆ ಆಗಮನ, ಬಸವಿಯ ದರ್ಶನ, ಕ್ವಚಿತ್ ಸಂಪರ್ಕ, ಅಲ್ಲಿಂದ ಅವರ ನಿರ್ಗಮನ. ಇದು ಈ ಧಾರೆಯ ಮೊದಲ ತರಂಗ, ಎರಡನೆಯದು ಮೈಸೂರಿನಲ್ಲಿ ಪತ್ನಿಯೊಡನೆ ಉಂಟಾಗುವ ವಿರಸ. ಈ ವಿರಸ ಪರಿಹಾರವಾಗುವ ಸೂಚನೆ ಕಾಣುತ್ತಿರುವಾಗಲೇ ಪಾತಮ್ಮ ತವರುಮನೆಗೆ ಹೋಗಬೇಕಾಗಿ ಬರುವ ಪ್ರಸಂಗ. ಕಥೆಯ ಮುಖ್ಯಧಾರೆ ಪಾತಮ್ಮ ತೆರವು ಮಾಡಿದ್ದ ಮನೆಗೆ ಬಸವಿಯ ಪ್ರವೇಶ. ಭಟ್ಟರ ಹಾಗೂ ಬಸವಿಯ ಅನಿರೀಕ್ಷಿತ ಸಮಾಗಮ. ಪಾತಮ್ಮನ ಪುನರಾಗಮನ, ಭಟ್ಟರ ರಹಸ್ಯದ ಹಠಾತ್ ಸ್ಫೋಟ, ಭಟ್ಟರು ಪತ್ನಿಯಿಂದ ಎದುರಿಸುವ ಆಹ್ವಾನ, ಅವರ ದೇಶಾಂತರ ಗಮನ ಮತ್ತು ಅವರನ್ನು ಹಿಂದಕ್ಕೆ ಕರೆತಂದು ಬಸವಿ ಕಥೆಯನ್ನು ಸುಖಾಂತಗೊಳಿಸಿ ತಾನು ತನ್ನ ಹಳ್ಳಿಗೆ ವಾಪಸಾಗುವಿಕೆ, ಈ ತರಂಗ ಮಾಲೆ.

ಕಥಾ ರಚನೆಯ ಕಾಲ ಬಿ. ವೆಂಕಟಾಚಾರ್ಯರ ಅನುವಾದಗಳ ಪ್ರಭಾವ ಇನ್ನೂ ಕ್ರಿಯಾಶೀಲವಾಗಿದ್ದ ಕಾಲ, ದೇವುಡು ಅವರ 'ಮಯೂರ' ಎಂಬ ಐತಿಹಾಸಿಕ ಕಾದಂಬರಿಯಲ್ಲಿ ಇದರ ಸಾಕಷ್ಟು ದುಷ್ಪರಿಣಾಮವನ್ನು ಕಾಣುವಂತೆ ನಾವು 'ಅಂತರಂಗ'ದ ಪ್ರಾರಂಭಿಕ ಹಾಗೂ ಅಂತಿಮ ಸನ್ನಿವೇಶಗಳಲ್ಲಿಯೂ ಅದನ್ನು ಕಾಣುತ್ತೇವೆ. ಸುಬ್ರಹ್ಮಣ್ಯಕ್ಕೆ ಯಾತ್ರೆ ಹೊರಟ ಭಟ್ಟರು ಮಧ್ಯದಲ್ಲಿ ಒಂದು ಹಳ್ಳಿಯ ಬಳಿಯ ಕೊಳ ಒಂದರ ಹತ್ತಿರ ಸಂಜೆಗತ್ತಲಿನಲ್ಲಿ ಸಂಧ್ಯಾವಂದನಾನಂತರ ಕುಳಿತಿರುವಾಗ ಕಳ್ಳರ ನಾಯಕನೊಬ್ಬನ ಕಣ್ಣಿಗೆ ಬಿದ್ದು ತಮ್ಮ ಚೀಲದೊಳಗಿರುವ ದ್ರವ್ಯದ ಬಗ್ಗೆ ಅವನು ವಿಚಾರಿಸಿದಾಗ ತಮ್ಮಲ್ಲಿದ್ದ ಹಣವನ್ನು ಪ್ರಕಟಿಸದೆ ಏನೂ ಇಲ್ಲವೆಂದು ಅಂಜುತ್ತ ಹೇಳಿಬಿಡುತ್ತಾರೆ. ಅವನು ನಿರ್ಗಮಿಸಿದ ಮೇಲೆ ತಮ್ಮ ಅಸತ್ಯ ವಾಕ್ಯಕ್ಕೆ ಅವರು ಪಶ್ಚಾತ್ತಾಪ ಪಡುತ್ತ ಅವನು ಮತ್ತೆ ಮಾರನೆ ಸಂಜೆ ಬರುವವರೆಗೂ ಕಾದಿದ್ದು ಅವನ ಕ್ಷಮಾಪಣೆ' ಬೇಡಿ ತಮ್ಮಲ್ಲಿದ್ದ ಅಲ್ಪ ಹಣವನ್ನು ಅವನಿಗೆ ಒಪ್ಪಿಸಿಹೋಗುತ್ತಾರೆ. ಇಂಥ ಅವ್ಯಾವಹಾರಿಕ ವರ್ತನೆ ಸಹಜವಾಗಿಯೇ ಅವನನ್ನು ಅಚ್ಚರಿಗೊಳಿಸುತ್ತದೆ. ಇದೊಂದು ಅಲೌಕಿಕ ವ್ಯಕ್ತಿಯೆಂದು ನಿಶ್ಚಯಿಸಿದ ಅವನು ಅವರನ್ನು ತನ್ನ ಹಳ್ಳಿಗೆ ಕರೆದೊಯ್ಯುತ್ತಾನೆ. ಇದರ ಛಾವಡಿಯಲ್ಲಿಯೇ ಭಟ್ಟರಿಗೆ ಬಸವಿಯ ದರ್ಶನವಾಗುತ್ತದೆ. ಕಥಾಂಕುರ ಹೀಗಾದರೆ, ಕಥಾ ಸಮಾಪ್ತಿಯಲ್ಲಿಯೂ ಇಂಥ ಅತಿರಂಜಿತ ರಮ್ಯ ಸನ್ನಿವೇಶ ಏರ್ಪಡುತ್ತದೆ. ದೇಶಾಂತರಗತರಾದ

ಭಟ್ಟರು ರಾತ್ರೆ ಪಶ್ಚಿಮವಾಹಿನಿಯಲ್ಲಿ ತಂಗಿರುವಾಗ ಅಶ್ವಾರೋಹಿ ಪುರುಷ ವೇಷಧಾರಿ ಬಸವಿ ಕಳ್ಳ ನಾಯಕನೊಡನೆ ಹಠಾತ್ತನೆ ಅಲ್ಲಿ ಅವತರಿಸಿ ಭಟ್ಟರಿಗೆ ಮನೆಗೆ ಹಿಂದಿರುಗಲು ಆದೇಶಿಸುತ್ತಾಳೆ. ಭಟ್ಟರು ಒಪ್ಪದಿದ್ದಾಗ ನಾಯಕ ಅವರನ್ನು ಎಚ್ಚರತಪ್ಪಿಸುತ್ತಾನೆ. ಅವರನ್ನು ಅವರು ಎತ್ತಿಕೊಂಡು ಹೋಗಿ ಪಾತಮ್ಮನ ವಶಕ್ಕೆ ಒಪ್ಪಿಸುತ್ತಾರೆ. ಬಸವಿ ಭಟ್ಟರಿಂದ ದೂರವಾಗುತ್ತಾಳೆ. ಕೊನೆ ಮೊದಲುಗಳ ಅವಾಸ್ತವದ ಕೊರತೆಯನ್ನು ಒತ್ತಟ್ಟಿಗಿಟ್ಟು ಕಾದಂಬರಿಯ ತಾತ್ವಿಕ – ಮನೋವೈಜ್ಞಾನಿಕ ಒಳನೋಟಗಳ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಿದರೆ ಅದರ ಮನೋಜ್ಞತೆಗೆ ಮರುಳಾಗದಿರೆವು.

'ಅಂತರಂಗ' ಪ್ರಕಟವಾದುದು ೧೯೩೦ ರಲ್ಲಿ. ನವೋದಯಾರಂಭ ಕಾಲ. ೧೯೬೬ರಲ್ಲಿ ಪ್ರಕಟವಾದ ನವ್ಯ ಸಾಹಿತ್ಯ ಕೃತಿ 'ಸಂಸ್ಕಾರ' ದೊಡನೆ ಅದನ್ನಿಟ್ಟು ನೋಡಿದರೆ ಇವೆರಡರ ಸಾದೃಶ್ಯ ವೈದೃಶ್ಯಗಳು ನವೋದಯ – ನವ್ಯ, ವೇದಾಂತ – ಅಸ್ತಿತ್ವವಾದಗಳ ಪ್ರಭಾವ ವ್ಯತ್ಯಯಗಳ ಮೇಲೆ ಅರ್ಥಪೂರ್ಣ ಬೆಳಕು ಚೆಲ್ಲುತ್ತದೆ.

ಭಟ್ಟರ ಬಸವಿಯ ಸಂಪರ್ಕವನ್ನೂ ಪ್ರಾಣೇಶಾಚಾರ್ಯ ಚಂದ್ರಿಯರ ಸಂಪರ್ಕವನ್ನೂ ಅವರ ಜೀವನಕ್ಕೆ ಅವು ಕೊಡುವ ಅಥವಾ ಕೊಡದಿರುವ ತಿರುವುಗಳನ್ನೂ ಗಮನಿಸಿದರೆ ಮೂರು ದಶಕಗಳ ದೃಷ್ಟಿಭೇದ ಧಾರಾಳವಾಗಿ ಅರಿವಾಗುತ್ತದೆ. ಭಟ್ಟರ ತ್ರಿಪುಂಡ್ರರಂಜಿತ ತೇಜಃ ಪುಂಜ ಮುಖವನ್ನು ಕಂಡ ಬಸವಿ 'ನನ್ನ ಭಾಗದ ಶಿವನು ನನ್ನನ್ನು ಅನುಗ್ರಹಿಸಲು ಬಂದಿದ್ದಾನೆ' ಎಂದುಕೊಳ್ಳುತ್ತಾಳೆ. ಅವಳ ಸ್ಥಿರವಾಗಿದ್ದ ನೋಟದಲ್ಲಿ ಚಾಂಚಲ್ಯ ಸುಳಿಯುತ್ತದೆ. 'ವಿಷಯಗಳ ಸೆಳೆತವನ್ನು ಅರಿಯದ ಇಂದ್ರಿಯಗಳು, ಇಂದ್ರಿಯಗಳ ದಮನವನ್ನು ಅರಿಯದ ಮನಸ್ಸು ಅವಳ ಚಿತ್ತವನ್ನು ವಿಹ್ವಲಗೊಳಿಸುತ್ತದೆ. ಅವರನ್ನು ಮತ್ತೆ ನೋಡುವ ಹಂಬಲವನ್ನು ಹತ್ತಿಕ್ಕಲಾಗದೆ ಅವಳು ಭಟ್ಟರು ಕುಳಿತಿದ್ದ ಚಾವಡಿಗೆ ಬರುತ್ತಾಳೆ. ಬವಳಿ ಬಂದವಳಂತೆ ಬಾಗಿಲ ಬಳಿಯೆ ಬಿದ್ದುಬಿಡುತ್ತಾಳೆ. ಯಾವ ವಿಚಾರವನ್ನೂ ಮಾಡದೆ ಭಟ್ಟರು ಕೂಡಲೆ ಅವಳನ್ನೆತ್ತಿಕೊಂಡು ಒಳಕ್ಕೆ ತಂದು ಮಲಗಿಸಿ ಅವಳ ಎದೆಯ ಮೇಲೆ ನೀರು ತಟ್ಟುತ್ತಾರೆ. ಅರೆಎಚ್ಚರವಾದ ಬಸವಿ ನಾಚಿ ನೀರಾಗುತ್ತಾಳೆ. ಮತ್ತೆ ಅವಳು ಬೀಳುವಂತಾದಾಗ ಅವರು ಅವಳನ್ನು ತಮ್ಮೆದೆಗೆ ಆನಿಸಿಕೊಳ್ಳುತ್ತಾರೆ. ಆನಂದಪರವಶಳಾದ ಅವಳ ತುಟಿಗಳನ್ನು ಹಠಾತ್ತನೆ ಅವರು ಚುಂಬಿಸುತ್ತಾರೆ. ಅವಳ ಹೆಸರೇನೆಂದು ಅವರು ಕೇಳಿ, ಅವಳು 'ಗೌರಿ' ಎಂದಾಗ ಇದ್ದಕ್ಕಿದ್ದಂತೆ ಅವರಿಗೆ ತಾವು ದುಡುಕುತ್ತಿರುವ ಅರಿವಾಗಿ ಅವರು ತಟ್ಟನೆದ್ದು ಹೊರಟುಹೋಗುತ್ತಾರೆ. ತಾವು ಯಾವ ಗಂಡೂ ಮುಟ್ಟದ ಹೆಣ್ಣೆಂದು ಅವಳು ಅವರಿಗೆ ತಿಳಿವಳಿಕೆ ಕೊಡುತ್ತಿದ್ದರೂ, ಅವಳನ್ನು ಮತ್ತೆ ಕಾಣಲು ಅವರ ಹೃದಯ ಹಂಬಲಿಸಿದರೂ ಅವರು ತಮ್ಮನ್ನು ಹಿಡಿತದಲ್ಲಿಟ್ಟುಕೊಳ್ಳುತ್ತಾರೆ. ಅವಳು ಅರ್ಪಿಸಿಬಂದ ಆಭರಣಗಳನ್ನೂ ಅವರು ಒಪ್ಪಿಸಿಕೊಳ್ಳುವುದಿಲ್ಲ. ಮೈಸೂರಿಗೆ ಅವರು ಹಿಂದಿರುಗಲು ಹೊರಟಾಗ ತಮ್ಮ ಕಾಲ ಬಳಿ ನಮಿಸಿದ ಅವಳಿಗೆ, 'ಅಳದಿರು, ಈಶ್ವರನಿದ್ದಾನೆ' ಎಂದು ಮಾತ್ರ ಉಸುರುತ್ತಾರೆ.

ಮೈಸೂರಿನಲ್ಲಿ ಹೆಂಡತಿಯನ್ನು ತವರಿಗೆ ಕಳುಹಿಸಿ ತಾವೊಬ್ಬರೇ ಇರುವಾಗ ಹೆಂಡತಿಗೆ ಕಾಗದ ಬರೆಯಲು ಅವರಿಗೆ ಮನಸ್ಸಾಗದು. ಅವರು ಹಾಗೆಂದು ನೇರವಾಗಿ ಒಪ್ಪಲಾರರಾದರೂ

ಅವರು ಬರೆಯದಿರಲು ಕಾರಣ, 'ನಾನು ಬಾ ಎಂದು ಬರೆಯಬೇಕೆಂದಿರುವುದು ಅವಳಿಗಲ್ಲ, ಇನ್ನೊಬ್ಬಳಿಗೆ' ಎಂಬುದು. ಯಾರೋ ಬಂದು ಅವರನ್ನು ಕರೆಯುತ್ತಿರುವಂತೆ ಅವರಿಗೆ ಹಲವು ಸಲ ಕನಸು. ಒಂದು ದಿನ ನಿಜವಾಗಿಯೇ ಬಸವಿ ಕಾಣಿಸಿಕೊಳ್ಳುತ್ತಾಳೆ. ಸಂತೋಷ ವಿಷಾದಗಳೂ ಒಮ್ಮೆಗೇ ಅವರಲ್ಲಿ ಮೂಡುತ್ತವೆ. ಮುಂದೆ ತಮ್ಮ ಮಿತ್ರರಲ್ಲಿ ಅವರು ಹೇಳಿಕೊಳ್ಳುವಂತೆ ಅವಳು ಬಂದ ಒಂದು ವಾರ 'ಅವಳ ಮುಖ ನಾನು ಕಾಣಲಿಲ್ಲ. ನನ್ನ ಮುಖ ಅವಳು ಕಾಣಲಿಲ್ಲ. ಇಬ್ಬರೂ ಒಂದೇ ಮನೆಯಲ್ಲಿದ್ದೆವು. ಇಬ್ಬರೂ ರಾತ್ರಿ ಎಲ್ಲಾ ಒಂದು ಬಾಗಿಲು ಅಡ್ಡವಾಗಿ ಅಳುತ್ತ ಕುಳಿತಿರುತ್ತಿದ್ದೆವು.' ಒಂದು ರಾತ್ರಿ ಅತಿಯಾಗಿ ನಿದ್ರಾವಶರಾಗಿ ಅವರು ಬಾಗಿಲು ಚಿಲಕ ಹಾಕುವುದನ್ನು ಮರೆಯುತ್ತಾರೆ. ಅದನ್ನು ತನಗಾದ ಆಹ್ವಾನವೆಂದು ಅಪಾರ್ಥ ಮಾಡಿಕೊಂಡ ಬಸವಿ ಮಧ್ಯರಾತ್ರಿಯಲ್ಲಿ ಅವರ ಕೋಣೆಯನ್ನು ಪ್ರವೇಶಿಸಿ ಅವರ ಕಾಲುಗಳನ್ನೊತ್ತುತ್ತಾ ಕೂಡುತ್ತಾಳೆ. ಭಟ್ಟರಿಗೆ ಎಚ್ಚರವಾಗುತ್ತದೆ. ಮುಂದೆ ಅವರೇ ಹೇಳುವಂತೆ, 'ವಿಷಯ ಸನ್ನಿಧಾನ, ಪೂರ್ವವಾಸನೆ, ಮೋಹ ವಿಜೃಂಭಣ' ಭವಿತವ್ಯಂ ಭವತ್ಯೇವ.

ಹೀಗೆ ಆ ರಾತ್ರಿಯ ಘಟನೆಯನ್ನು ಮಿತ್ರರಿಗೆ ಭಟ್ಟರು ಅರುಹುತ್ತಿರುವಾಗಲೇ ಬಾಗಿಲ ಬಳಿಗೆ ಕಾಫಿ ತೆಗೆದುಕೊಂಡು ಬಂದಿದ್ದ ಪಾತಮ್ಮನ ಕಿವಿಗೆ ಅವರ ಮಾತುಗಳು ಬಿದ್ದು ಸ್ಪಷ್ಟಾಸ್ಪಷ್ಟವಾಗಿ ಭಟ್ಟರ ಗುಟ್ಟು ರಟ್ಟಾಗುತ್ತದೆ. ಎಚ್ಚರ ತಪ್ಪಿ ಕೆಡೆದು ಬಿದ್ದ ಪಾತಮ್ಮನನ್ನು ಎತ್ತಿಕೊಂಡು ಹೋಗಿ ಶಯ್ಯಾಗೃಹದಲ್ಲಿ ಅವಳಿಗೆ ಭಟ್ಟರು ಶೈತ್ಯೋಪಚಾರ ಮಾಡುತ್ತಿರುವಾಗ ಬಸವಿ ಬಾಗಿಲ ಬಳಿ ಬಂದು ತನಗೆ ಒಂದು ರಾತ್ರಿ ಜೀವನಸಾರ್ಥಕ್ಯವನ್ನು ತಂದುಕೊಟ್ಟಿದ್ದ ಆ ರಸಮಯ ಕೋಣೆಯನ್ನು ಮೊದಲ ಬಾರಿಗೆ ಬೆಳಕಿನಲ್ಲಿ ಕಾಣುತ್ತಾಳೆ.

ಮುಂದೆ ತಾನೂ ಬಸವಿಯೂ ಮನೆಯಲ್ಲಿ ಒಟ್ಟಿಗಿರುವುದು ಸಾಧ್ಯವಿಲ್ಲವೆಂದು ನೇರವಾಗಿ ಪಾತಮ್ಮ ಭಟ್ಟರಿಗೆ 'ನೋಟಿಸ್' ಕೊಡುವಾಗಲೂ ಅವಳ ಮನಸ್ಸೂ ಭಾವತುಮುಲದಲ್ಲಿ ತೊಳಲಾಡುತ್ತಿರುತ್ತದೆ. ಭಟ್ಟರ ವಿಷಯದಲ್ಲಿ ಸಂಶಯಪಡುವುದು ಸರಿಯಲ್ಲವೆಂದು ಅವಳಿಗೆ ಎಷ್ಟೋ ಸಲ ಅನಿಸಿ ಅವರೊಡನೆ ಮೊದಲಿನಂತೆಯೇ ಇರಲು ಅವಳು ಸನ್ನದ್ಧಳಾಗುತ್ತಾಳೆ. ಆದರೆ ಮತ್ತೆ ಮಾತ್ಸರ್ಯ ಮಸಗುತ್ತದೆ. 'ಪಾತಮ್ಮನವರ ಪ್ರಣಯಾವೇಶವು ಮೊದಲನೆಯ ಹೆಜ್ಜೆಯಲ್ಲಿ ಮುಗಿದು, ಎರಡನೆಯ ಹೆಜ್ಜೆಯಲ್ಲಿ ಔದಾಸೀನ್ಯವಾಗಿ ಮೂರನೆಯ ಹೆಜ್ಜೆಗೆ ಕುರ್ಚಿಯ ಬಳಿಗೆ ಬಂದು ನಿಂತುಕೊಳ್ಳುವುದರೊಳಗಾಗಿ ಜುಗುಪ್ಸೆಯಾಗಿತ್ತು.' 'ತನ್ನ ಮೊಟ್ಟೆಗಳನ್ನು ಕಿತ್ತುಕೊಳ್ಳಲು ಬಂದವರ ಮೇಲೆ ಎರಗುವ ಉರಗಿಯ ದೃಷ್ಟಿಯ' ಉರಿ ಅವಳ ಕೆಂಡದಂಥ ಕಂಗಳಲ್ಲಿ. ಅದನ್ನು ಎದುರಿಸಲಾರದೆ ಭಟ್ಟರು ದೇಶಾಂತರ ಹೊರಡುತ್ತಾರೆ.

ಯಾವ ನ್ಯಾಯ?

ವ್ಯಾವಹಾರಿಕ ಕ್ಷೇತ್ರದ ಭಟ್ಟರ ಮಿತ್ರರು ರಾಯರಿಗೆ ಕೊಡುವ ಸಲಹೆ ಎಂದರೆ ಬಸವಿಗೆ ಬೇರೆ ಮನೆ ಮಾಡಿಕೊಟ್ಟು ಅವಳನ್ನು ಉಪಪತ್ನಿಯಾಗಿ ನಡೆಸಿಕೊಳ್ಳುವುದು, ಬಸವಿಯ ಮನಸ್ಸಿನಲ್ಲಿಯೂ ಇಂತಹುದೇ ಸಾಧ್ಯತೆ ಅವಳಿಗೆ ನೆಮ್ಮದಿ ಕೊಡುತ್ತಿರುತ್ತದೆ. ಇದು ಭಟ್ಟರಿಗೆ ಅಸಮ್ಮತವೆಂದು ತಿಳಿದೊಡನೆ ಬಸವಿ ' ನರ ಮತ್ತು ಅವರ ಪತ್ನಿಯ ನಡುವೆ ಅಡ್ಡ ಬರದಿರಲು

ನಿಶ್ಚಯಿಸುತ್ತಾಳೆ. ಭಟ್ಟರು ತಮ್ಮ ನಿಲುವನ್ನು ತಮ್ಮ ಮಿತ್ರರಿಗೆ ವಿವರಿಸುತ್ತಾರೆ. 'ನಡೆದವನು ಮುಗ್ಗರಿಸುವುದರಲ್ಲಿ ತಪ್ಪೂ ಇಲ್ಲ, ಆಶ್ಚರ್ಯವೂ ಇಲ್ಲ. ಆದರೆ ಮುಗ್ಗರಿಸಿದೆನೆಂದು ಅರಿತು ಮುಗ್ಗರಿಸುವುದನ್ನು ಬಿಡದೆ ಅದನ್ನೇ ಆಟವಾಗಿ ಹೂಡಿಕೊಂಡರೆ ಅದು ಸರ್ವಥಾ ತಪ್ಪು... ಆ ಕ್ಷಣಿಕ ಸಂಬಂಧಕ್ಕಾಗಿ ಒಂದು ಜನ್ಮವನ್ನೇ ತೆರಬೇಕೆಂದು ಹೇಳುವುದು ಯಾವ ನ್ಯಾಯ?.... ನನಗೆ ಇತರರ ಭೀತಿ ಇಲ್ಲ. ಇತರರಿಗೆ ಅಂಜಿ ನನ್ನ ಬಯಕೆಯನ್ನು ಈಡೇರಿಸಿಕೊಳ್ಳದೆ ಬಿಡುವಷ್ಟು ಸತ್ವಹೀನನೂ ನಾನಲ್ಲ. ಆದರೂ ನಿಜವನ್ನು ಹೇಳಬೇಕೆಂದರೆ ಇಂದ್ರಿಯಗಳಿಗೆ ಆಳಾಗಿ ಸವೆಯುವುದು ಉತ್ತಮ ಮಾರ್ಗವಲ್ಲವೆಂದು ನನ್ನ ನಂಬಿಕೆ. ಅದಕ್ಕಾಗಿ ನಾನೀ ಹಾದಿಯನ್ನು ಹಿಡಿದಿದ್ದೇನೆ.' ಬಸವಿಯೂ ಭಟ್ಟರೂ ಹೀಗೆ ತಮ್ಮ ಪ್ರೇಮಭಾವವನ್ನು ದಮನ ಮಾಡಿಕೊಂಡು ತಮ್ಮ ಹಿಂದಿನ ಜೀವನಕ್ಕೆ ಮರಳುತ್ತಾರೆ.

ಭಟ್ಟರ ಬಸವಿಯ ಪ್ರೇಮ ಸಂಪರ್ಕ 'ಮುಗ್ಗುರಿಸುವಿಕೆ' ಎಂದೂ ಆದರಿಂದ ಇನ್ನೊಬ್ಬರಿಗೆ ನೋವಾಗಬಾರದೆಂದೂ ಪ್ರೇಯಸ್ಸಿಗಿಂತಲೂ ಶ್ರೇಯಸ್ಸು ಅನುಸರಣೀಯವೆಂದು ವೇದಾಂತ ಪ್ರಭಾವವಲಯದಲ್ಲಿ ಎನಿಸುವುದು ಸಹಜ. ತಾವೂ ವೇದಾಂತಿಗಳಾದರೂ ಪ್ರಾಣೇಶಾಚಾರ್ಯರು ವೇದಾಂತ ತತ್ತ್ವದ ಮಡಿಲಿನಿಂದ ಕಳಚಿಕೊಂಡು ತಮ್ಮ ಕರ್ತವ್ಯವೇ ಕಲ್ಪಿಸಿಕೊಳ್ಳಬೇಕಾದ ಜೀವನ ಮಾರ್ಗವನ್ನು ಅರಸಿಕೊಂಡು ಹೊರಡುತ್ತಾರೆ. ಅಸ್ತಿತ್ವವಾದದ ನೆರಳಿನಲ್ಲಿ ಜೀವನಪರವೆಂದು ತಾವು ಕಂಡುಕೊಳ್ಳುತ್ತಿರುವ ಹೊಸ ಹಾದಿಯ ಕಡೆಗೆ ಅವರು ಮೊಗದಿರುಗಿಸುತ್ತಾರೆ. ಚಂದ್ರಿಯ ಸಂಪರ್ಕ ಅವರ ದೃಷ್ಟಿಯಲ್ಲಿ ತಪ್ಪು ಹೆಜ್ಜೆ ಎನ್ನಿಸದು. ಅದೊಂದು ಹೊಸ ದರ್ಶನವನ್ನು ತೆರೆದುಕೊಡುತ್ತದೆ. ಅವರ ಜೀವನ ಮಾರ್ಗವೇ ಹೊಸ ದಿಕ್ಕಿನ ಕಡೆಗೆ ಕವಲೊಡೆಯುತ್ತದೆ. 'ಸಂಸ್ಕಾರದ್ದು ಮುಕ್ತ ಅಂತ್ಯ.' 'ಅಂತರಂಗ'ದ ಅಂತ್ಯ ಸುಸ್ಪಷ್ಟ' ನಿಶ್ಚಿತ, ದೃಢ. ಪತ್ನಿಯ ಪಾರ್ಶ್ವಕ್ಕೇ ಹಿಂದಿರುಗಿದ ಭಟ್ಟರ ಕಟ್ಟಕಡೆಯ ಮಾತು, 'ಲೋಕವು ಉಳಿದಿರುವುದು ಭೋಗದಿಂದಲ್ಲ, ತ್ಯಾಗದಿಂದ. ಅದರಲ್ಲಿ ನನ್ನ ಸುಖವಿದೆ.'

★

'ಮಲ್ಲಿ' : ಕಸ್ತೂರಿ ಕಟ್ಟಿದ ಬಟ್ಟೆ

ಶ್ರೀ. ಕೆ. ನರಸಿಂಹಮೂರ್ತಿ

ನಮ್ಮ ಪ್ರಮುಖ ಕಾದಂಬರಿಕಾರರಲ್ಲಿ ಒಬ್ಬರಾದ ದೇವುಡು ನರಸಿಂಹ ಶಾಸ್ತ್ರಿಗಳ ಕಾದಂಬರಿಗಳು ವೈಶಿಷ್ಟ್ಯಪೂರ್ಣ, ಅನನ್ಯ. ಭಾರತೀಯ ಸಂಸ್ಕೃತಿಯ ಇತಿಹಾಸವೇ ಅವುಗಳಲ್ಲಿ ತೆರೆದುಕೊಳ್ಳುತ್ತದೆ. ವೈದಿಕ ಪೌರಾಣಿಕ ಯುಗಗಳನ್ನು ಪುನಸ್ಸೃಷ್ಟಿಸುವ ಅವರ ಪ್ರಸಿದ್ಧ ಕಾದಂಬರಿತ್ರಯ, 'ಮಹಾ ಬ್ರಾಹ್ಮಣ ',' ಮಹಾ ಕ್ಷತ್ರಿಯ' ಮತ್ತು 'ಮಹಾ ದರ್ಶನ' ಅಂದಿನ ಮಹಾ ಚೇತನದ ಆದರ್ಶ ಮೂರ್ತಿಗಳನ್ನು ಅದ್ಭುತ ರೀತಿಯಲ್ಲಿ ಕಣ್ಣ ಮುಂದೆ ಕಡೆದು ನಿಲ್ಲಿಸುತ್ತವೆ.

'ಮಯೂರ' ಹಾಗೂ 'ಅವಳ ಕತೆ' ಮಧ್ಯಕಾಲೀನ ಯುಗದ ರಮ್ಯ ಐತಿಹಾಸಿಕಗಳು. ಆದ್ಯತನ ಭೂತಕಾಲದ ಆಗುಹೋಗುಗಳನ್ನು ಅಚ್ಚಳಿಯದಂತೆ ಚಿತ್ರಿಸುವ 'ಅಂತರಂಗ' ಮತ್ತು 'ಮಲ್ಲಿ' ವಾಸ್ತವಿಕ ಕೃತಿಗಳು. ಇವುಗಳಲ್ಲಿ 'ಅಂತರಂಗ' ಉದಾತ್ತ ವ್ಯಕ್ತಿಗಳಿಬ್ಬರನ್ನು ಪರಸ್ಪರ ಸೆಳೆಯುವ ಅಪೂರ್ವ ಶಕ್ತಿಯ ಪ್ರೇಮವನ್ನು ವಿಶ್ಲೇಷಿಸುವ ಕನ್ನಡದ ಮೊಟ್ಟ ಮೊದಲ ಮನೋವೈಜ್ಞಾನಿಕ ಕಾದಂಬರಿ. 'ಮಲ್ಲಿ'ಯೂ ಒಂದು ಮನೋಜ್ಞ ಪ್ರೇಮ ಕಥಾನಕವೇ. ಆದರೆ ಅದಕ್ಕಿಂತಲೂ ಮಿಗಿಲಾಗಿ ಅದು ನಮ್ಮ ಮೆಚ್ಚುಗೆಯನ್ನು ಪಡೆದುಕೊಳ್ಳುವುದು ಒಂದು ಸಮರ್ಥ ರಾಜಕೀಯ ಕೃತಿಯಾಗಿ.

ಈ ಶತಮಾನದ ಮೊದಲ ದೃಶ್ಯಗಳು ಮಹಾರಾಜರ ಕಾಲದ ಮೈಸೂರಿನ ರಾಜಕೀಯ ಹಾಗೂ ಸಾಮಾಜಿಕ ಜನಜೀವನದ ಆಶಯವೊಂದು ಸ್ಮರಣೀಯ ಚಿತ್ರಸರಣಿ. ಗಮನಾರ್ಹವಾದ ಸಂಗತಿ ಎಂದರೆ ಈ ಕಾದಂಬರಿಗಳು ಪೌರಾಣಿಕ ಯುಗವನ್ನು ಚಿತ್ರಿಸಲಿ, ಚಾರಿತ್ರಿಕ ಕಾಲಮಾನವನ್ನು ಪ್ರತಿಬಿಂಬಿಸಲಿ, ಇಂದಿನ ವಾಸ್ತವಿಕಕ್ಕೆ ಕನ್ನಡಿ ಹಿಡಿಯಲಿ, ಅವುಗಳ ನಾಯಕ ನಾಯಕಿ ಪಾತ್ರಗಳ ಸೃಷ್ಟಿಯಲ್ಲಿ ನಮಗೆ ಪ್ರತ್ಯಕ್ಷವಾಗುವುದು ನಮ್ಮ ಸನಾತನ ಸಂಸ್ಕೃತಿಯ ಅವಿಚ್ಛಿನ್ನ ಸಂತಾನ. ಭಾರತೀಯ ಸಂಸ್ಕೃತಿ ಭಾಗೀರಥಿಯು ನಿರಂತರವಾಗಿ ಹರಿಯುತ್ತ ಬರುತ್ತಿರುವುದನ್ನು ದೇವುಡು ಅವರ ಕಾದಂಬರಿ ಮಾಲೆಯಲ್ಲಿ ಯಾರೂ ಗುರುತಿಸಬಹುದಾಗಿದೆ.

ಸ್ವಾತಂತ್ರ್ಯದ ಕಿಚ್ಚು

ಭಾರತಾದ್ಯಂತ ಹಬ್ಬಿದ್ದ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ಮೈಸೂರಿಗೂ ಹರಡದಿರುವುದೆಂತು? ವಂಗ ವಿಭಜನೆಗೆ ಪ್ರತಿಕ್ರಿಯೆಯಾಗಿ ಆರಂಭವಾದ ಆಂದೋಲನ ಲಾಲ್ ಬಾಲ್ ಪಾಲ್‌ರ ನೇತೃತ್ವದಲ್ಲಿ ಮಸಗುತ್ತಿದ್ದಾಗ ಆ ಬಿರುಗಾಳಿಗೆ ಮಹಾರಾಜರಲ್ಲಿ ಭಕ್ತಿಗೌರವಗಳಿಂದಲೂ ನಿಷ್ಠೆಯಿಂದಲೂ ನಡೆದುಕೊಳ್ಳುತ್ತಿದ್ದ ಮೈಸೂರಿನ ಜನತೆಯೂ ಪ್ರಕ್ಷುಬ್ಧವಾದುದರಲ್ಲಿ ಆಶ್ಚರ್ಯವೇನು? ಮೈಸೂರಿನ ಜನಮನದ ಶಾಂತಸರಸ್ಸಿನಲ್ಲೆದ್ದ ತರಂಗಮಾಲೆಗಳನ್ನು ದೇವುಡು ಅವರ ಸಾಕಷ್ಟು ಇನ್ನೂ ಬೆಳಕಿಗೆ ಬರದಿರುವ ರಾಜಕೀಯ ಕಾದಂಬರಿ 'ಮಲ್ಲಿ' ಸೂಕ್ಷ್ಮ ಸಂವೇದನೆಯಿಂದ ದಾಖಲಿಸುತ್ತದೆ. 'ಮಲ್ಲಿ'

ರಾಷ್ಟ್ರದ ಎಲ್ಲೆಡೆಯಲ್ಲಿಯೂ ಉಂಟಾದ ಜಾಗೃತಿ, ತಿಲಕರ ಧೀರ ಹೋರಾಟ, ಜಲಿಯನ್‌ವಾಲಾಬಾಗಿನ ಘೋರ ನರಹತ್ಯೆ, ಗಾಂಧೀಜಿಯವರ ಅಸಹಕಾರ ಚಳವಳಿ ಇವುಗಳಿಗೆ ಈ ಕಾದಂಬರಿಯಲ್ಲಿ ಪ್ರಾತನಿಧಿಕವಾಗಿ ಪ್ರತಿಕ್ರಿಯಿಸುವ ಪಾತ್ರ ವಿವೇಕಾನಂದ ಸಂಘವೊಂದನ್ನು ಸ್ಥಾಪಿಸಿ ವಿವೇಕಾನಂದರ ಭಾಷಣಗಳ ಭಾಷಾಂತರದಿಂದ ಜನಜಾಗೃತಿಗೆ ಕಾರಣನಾಗಿ ಉದ್ದಕ್ಕೂ ಸ್ವಾತಂತ್ರ್ಯ ಸಾಧನೆಗೆ ತನ್ನ ಜೀವನವನ್ನೇ ಮೀಸಲಿಡುವ ದಿಟ್ಟ ತರುಣ ನರಸಿಂಹಯ್ಯ ಇವರ ಗುರು, ತಾತಯ್ಯನೆಂದೇ ಹೆಸರಾಗಿರುವ ವೆಂಕಟಕೃಷ್ಣಯ್ಯನವರು. ಕಾದಂಬರಿಯ ನಾಯಕಿ ಮಲ್ಲಿಗೆ ಇಂಗ್ಲೀಷ್ ಸಂಸ್ಕೃತಗಳನ್ನು ಕಲಿಸುವುದರ ಜೊತೆಗೆ ಅವಳಲ್ಲಿ ದೇಶಾಭಿಮಾನವನ್ನು ಕೆರಳಿಸುತ್ತಾನೆ.

ಕಾದಂಬರಿಯ ಮೊದಲ ಗಣನೀಯ ಪ್ರಸಂಗ ಮೈಸೂರಿಗೆ ಪ್ರಿನ್ಸ್ ಆಫ್ ವೇಲ್ಸನ ಭೇಟಿ. ಪ್ರಿನ್ಸಿಗಾಗಿ ಏರ್ಪಾಡಾಗುವ ಖೆಡ್ಡಾ ಶಿಕಾರಿ ಸನ್ನಿವೇಶಗಳಲ್ಲಿ ಎಲ್ಲರ ಗಮನವನ್ನೂ ಸೆಳೆಯುವವನು ಕಾದಂಬರಿ ನಾಯಕ, ಮಜ್ಜಿಗೆಹಳ್ಳಿ ಪಟೇಲ ಪುಟ್ಟಸಿದ್ಧನಾಯಕ. ಇವನು ಪ್ರದರ್ಶಿಸುವ ಕರಕೌಶಲಗಳು, ಶೌರ್ಯಸಾಹಸಗಳು ಮಹಾರಾಜರ ಹಾಗೂ ಪ್ರಿನ್ಸ್‌ನ ಮೆಚ್ಚುಗೆಯನ್ನು ಗಳಿಸುತ್ತವೆ. ಭಾರತೀಯರ ಸಾಮರ್ಥ್ಯಕ್ಕೆ ವಿಶ್ವಸನೀಯ ಸಾಕ್ಷ್ಯವಾಗಿ ಮೂರು ಹಂದಿಗಳನ್ನು ಮೂರು ವಿಧಾನಗಳಲ್ಲಿ ಬೇಟೆಯಾಡಿ ಅವನು ತೋರಿಸುತ್ತಾನೆ. ಅನಂತರ ಅವನ ಬಲದೋಳನ್ನು ಮುಟ್ಟಿದ್ದರೆ ವಜ್ರಕಠೋರವಾಗಿ ಅದು ತೋರುತ್ತದೆ. ಭಾರೀ ಆನೆಯೊಂದು ರೋಷಾವಿಷ್ಟವಾಗಿ ಪ್ರಿನ್ಸ್‌ನೂ ಮಹಾರಾಜರೂ ಇರುವ ಸಣ್ಣ ಗುಂಪಿನೆಡೆಗೆ ಧಾವಿಸುತ್ತಿರುವಾಗ ಅದಕ್ಕೆ ಮೊದಲು ಗುಂಡಿಟ್ಟು ಅದನ್ನು ತಡೆಯುವವನು ಈ ನಾಯಕ. ಕಾದಂಬರಿಯ ಈ ಭಾಗ ಖೆಡ್ಡಾದ ಸೊಗಸಾದ ವರ್ಣನೆಯನ್ನೊಳಗೊಂಡಿದೆ. ಅದರ ಸಾಂಕೇತಿಕತೆಯೂ ದೇವುಡು ಅವರ ಅರಿವಿಗೆ ಮರೆಯಾಗುವುದಿಲ್ಲ. ಎರಡು ಕುಂಕಿ ಆನೆಗಳ ನಡುವೆ ಸಿಕ್ಕಿ ಬಿದ್ದಿರುವ ಕಾಡಾನೆ ಭಾರತದ ಅಂದಿನ ಪರಿಸ್ಥಿತಿಗೆ ದ್ಯೋತಕವಾಗುತ್ತದೆ.

ಪ್ರಿನ್ಸ್‌ರನ್ನು ಭೇಟಿ ಮಾಡಲು ಬರುವ ಒಬ್ಬ ಬಿಷಪ್ ಅವರೊಡನೆ ನಡೆಸುವ ಚರ್ಚೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಉಳಿವಿನ ವ್ಯವಸ್ಥೆಗೆ ಇಲ್ಲಿನ ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸುವುದೂ ನೆರವಾಗಬಲ್ಲದು ಎಂಬ ಅಂಶವನ್ನು ಪ್ರಕಟಿಸುತ್ತದೆ. ಇಂಥ ಮತಾಂತರಗಳನ್ನು ನಡೆಸಲು ಇನ್ನೆಲ್ಲಿಯೂ ಇಲ್ಲದಷ್ಟು ಈ ದೇಶದಲ್ಲಿರುವ ತೊಡಕುಗಳನ್ನು ಬಿಷಪ್ ಪ್ರಿನ್ಸ್‌ಗೆ ನಿವೇದಿಸುತ್ತಾನೆ. ಉತ್ತರದಲ್ಲಿ ಹಿಂದೂ ಮುಸ್ಲಿಮ್ ದಕ್ಷಿಣದಲ್ಲಿ ಬ್ರಾಹ್ಮಣ - ಬ್ರಾಹ್ಮಣೇತರ ವಿರೋಧಗಳನ್ನು ಹುಟ್ಟಿ ಹಾಕಿ ಭೇದೋಪಾಯವನ್ನು ಅನುಸರಿಸಬೇಕಾದ ಅಗತ್ಯವೂ ಚರ್ಚೆಯ ವಿಷಯಗಳಲ್ಲೊಂದು. ಪ್ರಿನ್ಸ್ ಸೇನಾಬಲಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾನೆ.

ಕಾದಂಬರಿಯ ಅತ್ಯಂತ ಸ್ವಾರಸ್ಯಪೂರ್ಣ ಭಾಗಗಳೆಂದರೆ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಹಾಗೂ ತಾತಯ್ಯನವರ ವ್ಯಕ್ತಿತ್ವವನ್ನು ಚಿತ್ರಿಸುವ ಸಂದರ್ಭಗಳು. ವಿಶ್ವೇಶ್ವರಯ್ಯನವರ ಹಾಗೂ ತಾತಯ್ಯನವರ ವ್ಯಕ್ತಿತ್ವವನ್ನು ಚಿತ್ರಿಸುವ ಸಂದರ್ಭಗಳು ವಿಶ್ವೇಶ್ವರಯ್ಯನವರ ಕ್ರಿಯಾಶೀಲತೆ ಇಷ್ಟು ಪರಿಣಾಮಕಾರಿಯಾಗಿ ನಮ್ಮ ಸಾಹಿತ್ಯದ ಇನ್ನೆಲ್ಲಿಯೂ ಪ್ರದರ್ಶಿತವಾಗುವುದಿಲ್ಲ. ಮಜ್ಜಿಗೆ ಹಳ್ಳಿಗೆ ಅವರು ನೀಡುವ ಭೇಟಿಯ ವರ್ಣನೆಯನ್ನು ಕೊಂಚ

ವಿವರವಾಗಿಯೇ ಪರಿಶೀಲಿಸುವುದು ಸೂಕ್ತ. ರುಮಾಲನ್ನು ತೆಗೆದು ಅವರು ಹ್ಯಾಟ್ ಹಾಕಿಕೊಂಡು ನಮ್ಮ ರೈತರಿಗೆ ಹ್ಯಾಟ್ ಅವಶ್ಯಕ ರಕ್ಷಣೆ ಕೊಡುತ್ತದೆ ಎಂದು ತಿಳಿಸುತ್ತಾ ಅವರು ಕೃಷಿಯ ಅಭಿವೃದ್ಧಿ ಹೇಗಾಗಬೇಕೆಂದು ತಿಳಿಸಿ ಕೊಡುತ್ತಾರೆ. ' ರೈತ ನಮ್ಮ ದೇಶದ ಬೆನ್ನುಮೂಳೆ. ಅವನು ಗಟ್ಟಿಯಾಗಬೇಕು, ಎಂದು ಹೇಳುತ್ತಾ ಅವರು 'ಅವನಿಗೆ ಈಗ ಮಾತು ಬರೋಲ್ಲ. ಅವನು ಮಾತು ಕಲಿಯಬೇಕು. ಜಪಾನಿನಿಂದ ಹಿಡಿದು ಆಸ್ಟ್ರೇಲಿಯಾ ಕ್ಯಾಲಿಫೋರ್ನಿಯಾವರೆಗೂ ಎಲ್ಲೆಲ್ಲಿ ಏನೇನು ಸುಧಾರಣೆ ಆಗಿದೆ ಅದನ್ನು ಕಲಿಯಬೇಕು' ಎಂದು ತಿಳಿಸುತ್ತಾರೆ.

ಕುಲಿಮೆ ಸುಬ್ಬಾಚಾರಿ ನೀಡಿದ ಹಾರತುರಾಯಿಗಳನ್ನು ಒಪ್ಪಿಸಿಕೊಂಡು ಅವನನ್ನು ಪ್ರಶ್ನಿಸುತ್ತಾರೆ. ' ದಿನಕ್ಕೆ ಎಷ್ಟು ಕಬ್ಬಿಣ ತಟ್ಟುತ್ತೀರಿ? ನಿಮಗೆ ಎಷ್ಟು ಸಿಕ್ಕುತ್ತೆ? ತಿದಿಯವನಿಗೆ ಎಷ್ಟು ಕೊಡುತ್ತೀರಿ? ಇಜ್ಜಲು ಎಲ್ಲಿಂದ ತರುತ್ತೀರಿ? ನಿಮಗೆ ಕಬ್ಬಿಣ ಎಲ್ಲಿಂದ ಸಪ್ಲೈ ಆಗುತ್ತೆ? ಒಂದು ಗುಳ ಮಾಡೋಕೆ ಎಷ್ಟು ಹೊತ್ತು ಕಾಯಿಸಬೇಕು. ಇದೆಲ್ಲಾ ಚಾರ್ಟ್ ಹಾಕಬೇಕು. ದಿನದಿನವೂ ರೆಕಾರ್ಡ್ ಬ್ರೇಕ್ ಮಾಡೋಕೆ ಪ್ರಯತ್ನ ಮಾಡಬೇಕು. ಏನಯ್ಯ ನೀವು ಕಬ್ಬಿಣ ಉಕ್ಕು ಮಾಡುತ್ತೀರಾ? ಆಚಾರಿ ಸ್ವಲ್ಪ ಮಾಡುತ್ತೇನೆಂದು ಹೇಳಿ ಅವನ ಪೂರ್ವಿಕರು ತಯಾರಿಸಿದ್ದ ಎರಡು ಕತ್ತಿಗಳನ್ನು ತೋರಿಸುತ್ತಾನೆ.

ಅವುಗಳನ್ನು ಪರೀಕ್ಷಿಸಿ ದಿವಾನರು ಹೇಳುತ್ತಾರೆ. 'ನಮ್ಮ ದೇಶದಿಂದ ಇಂಗ್ಲೆಂಡಿಗೆ ಉಕ್ಕು ಹೋಗುತ್ತಿತ್ತು. ಈಗ ಕಬ್ಬಿಣದ ಮೊಳೆ ಕೊನೆಗೆ ಸೂಜಿ ಕೂಡಾ ನಮಗೆ ಹೊರ ದೇಶದಿಂದ ಬರಬೇಕು. ಜೊತೆಗೆ ಸ್ವದೇಶಿ ಪರದೇಶಿಯ ದ್ವೇಷವಾಗದೆ ಸ್ವದೇಶಿ ಪ್ರೇಮವಾಗಬೇಕು' ಮುಂದುವರಿಸಿ ಅವರು ' ನೋಡಿ, ಇಲ್ಲಿದೆ ನಮ್ಮ ಅವನತಿ, ನಾಯಕರೆ, ಎಲ್ಲಾ ಕಸ್ತೂರಿ ಕಟ್ಟಿದ ಬಟ್ಟೆಯಾಗಿದೆ. ಕಸ್ತೂರಿ ಹೋಗಿದೆ. ನಾವು ಕಸ್ತೂರಿ ತರಬೇಕು. ಆಗ ದೇಶೋದ್ಧಾರ. ನಮ್ಮಲ್ಲಿ ಅದರಲ್ಲೂ ಬಾಬಾ ಬುಡನ್‌ನಲ್ಲಿ ಒಳ್ಳೆಯ ಕಬ್ಬಿಣದ ಅದುರು ಇದೆ. ನಾವು ಒಂದು ಕಬ್ಬಿಣದ ಕಾರ್ಖಾನೆ ಮಾಡಬೇಕು. ಆದರೆ ಅದಕ್ಕೆ ಬ್ರಿಟಿಷ್ ಸರಕಾರ ಒಪ್ಪಬೇಕು. ಊರಿಗೊಬ್ಬ ರಾವ್ ಬಹದ್ದೂರ್ ಮಾಡಿಯಾರು. ಕಾರ್ಖಾನೆ ಮಾಡಗೊಡುವುದಿಲ್ಲ. ಚಾಕು ಬೇಕು ರಾಡ್ಜರ್ಸ್, ಕ್ಷೌರದ ಕತ್ತಿ ಬೇಕು, ಹಾಲೋವೇಸ್, ಗರ್ಡರ್ ಬೇಕು. ಮ್ಯಾಂಚೆಸ್ಟರ್, ಉಡೋಕೆ ಬಟ್ಟೆ ಬೇಕು. ೧೭೦೨ ರಲ್ಲಿ ನಾವು ಬದುಕುವವರೇ? ಇಂಗ್ಲಿಷ್ ಓದಿದ್ದವರೂ ಈ ಎಕಾನಾಮಿಕ್ಸ್ ಅಂದರೆ ಹಣಕಾಸು ಈ ವಿಚಾರವೇ ನೋಡೋಲ್ಲ. ಸರಕಾರ ಬೇಕು ಎಂದಾಗ ಹತ್ತು ಕೋಟಿ ಸಾಲ ದೇಶದಲ್ಲಿ ಹುಟ್ಬೋ ಹಾಗೆ ಆಗಬೇಕು. ಹಾಗೆ ಆಗಲು ಜನ ವಿದ್ಯಾವಂತರಾಗಬೇಕು. ಅದಕ್ಕೇ ನಾನು ಯೂನಿವರ್ಸಿಟಿ ಬೇಕು ಎನ್ನುವುದು. ನಾನು ದಿವಾನಗಿರಿ ಬಿಡುವುದರೊಳಗೆ ಒಂದು ಕನ್ನಂಬಾಡಿ, ಒಂದು ಯೂನಿವರ್ಸಿಟಿ, ಒಂದು ಕಬ್ಬಿಣದ ಕಾರ್ಖಾನೆ, ಇಷ್ಟು ಮಾಡಿಯೇ ತೀರುತ್ತೇನೆ' ಎಂದು ತಮ್ಮ ಯೋಜನೆಗಳನ್ನು ಅವರು ವಿವರಿಸುತ್ತಾರೆ.

ಮುಂದೆ ಭಾರಿ ಆಲದ ಮರವೊಂದು ಅವರ ಕಣ್ಣಿಗೆ ಬೀಳುತ್ತದೆ. ಅದರ ಮೇಲೆ ಹತ್ತು ಹನ್ನೆರಡು ಹೆಜ್ಜೇನು ಗೂಡುಗಳು. ಬೇರೆ ದೇಶಗಳಲ್ಲಿ ದೊಡ್ಡ ದೊಡ್ಡ ಪೆಟ್ಟಿಗೆಗಳಲ್ಲಿ ಜೇನು ಹುಳುಗಳನ್ನು ಸಾಕಿ ಜೇನು ತೆಗೆಯುವುದನ್ನು ಅವರು ಜನಕ್ಕೆ ತಿಳಿಸುತ್ತಿರುವಾಗ ಗುಂಪಿನಲ್ಲೊಬ್ಬ

ಆಲದ ಮರದ ಕಡೆ ತೋರಿಸಿ 'ನಮ್ಮಲ್ಲಿ ತಪ್ಪದೆ ಅಲ್ಲಿ ಎರಡ ಮಾಡುತ್ತಾರೆ' ಎನ್ನಬೇಕೆ? ನಗುತ್ತ ದಿವಾನರು, 'ಅದನ್ನು ಸರಿಯಾಗಿ ಉಪಯೋಗಿಸಿದರೆ ಅದೂ ಒಳ್ಳೇ ಗೊಬ್ಬರ' ಎನ್ನುತ್ತಾರೆ.

ಅಲ್ಲಿಂದಾಚೆಗೆ ರೇಷಿಮೆಪಾಳ್ಯ, ಅಲ್ಲೆಲ್ಲಾ ಮುಸ್ಲಿಮರು. ಹಿಪ್ಪನೇರಳೆ ತೋಟಗಳು, ಚಂದ್ರಂಕಿಗಳು, ತಡಕೆಗಳು, ಅಲ್ಲಿನ ಮುಖ್ಯಸ್ಥ ಹಕೀಂ ಎನ್ನುವವನೊಡನೆ ದಿವಾನರ ಪ್ರಶ್ನೋತ್ತರ ನಡೆಯುತ್ತದೆ. ಅವರು ಎಷ್ಟು ರೇಷ್ಮೆ ತೆಗೆಯುತ್ತಾರೆ. ಎಲ್ಲಿಗೆ ಕಳುಹಿಸುತ್ತಾರೆ. ಯಾವ ಬಣ್ಣ ಬೇಕು ಎಂದು ತಿಳಿದಿದೆಯೇ? ಇತ್ಯಾದಿ ದಾದಾ ಪೀರ್ ಖಾನ್ ಎನ್ನುವ ಒಬ್ಬಾತ ಮಾತ್ರ ಅತಿ ನವಿರಾದ ಎಳೆಯನ್ನು ತೆಗೆದು ತೋರಿಸಿದಾಗ ಅವರು ಹೇಳುತ್ತಾರೆ, 'ಜಪಾನಿನಲ್ಲಿ ಹೀಗೇ ತೆಗೆಯುತ್ತಾರೆ. ಅವರು ಅದಕ್ಕೆ ಯಂತ್ರ ಮಾಡಿದ್ದಾರೆ. ಅದಕ್ಕೆ ಫಿಲೇಚರ್ಸ್ ಎಂದು ಹೆಸರು. ನಾವೂ ಅದನ್ನು ತರಿಸಬೇಕ.' ಕಡೆಯಲ್ಲಿ ಅವರನ್ನೆಲ್ಲಾ ದಿವಾನರು ಮೈಸೂರಿನಲ್ಲಿ ನಡೆಯಲಿರುವ ಎಗ್ಸಿಬಿಷನ್‌ಗೆ ಆಹ್ವಾನಿಸುತ್ತಾರೆ.

ಕಡೆಯಲ್ಲಿ ಹರಿಜನ, ಪಾಳ್ಯ. ಅವರಿಗೆ ಮನೆಗಳಿವೆಯೇ, ಕುಡಿಯುವ ನೀರಿನ ಬಾವಿಗಳಿವೆಯೇ, ವಿದ್ಯೆ ಕಲಿಸಲು ತಕ್ಕ ಏರ್ಪಾಡಾಗಿದೆಯೇ ಎಂದು ನಾಯಕರನ್ನು ವಿಚಾರಿಸಿ ಅಲ್ಲಿನ ಜನರನ್ನೇ ಅವರ ಅಗತ್ಯಗಳನ್ನು ಕುರಿತು ನೇರವಾಗಿಯೇ ಅವರು ಪ್ರಶ್ನಿಸುತ್ತಾರೆ. ಅವರು ಮಾಡುವ ಬೇಡಿಕೆಗಳು ಭೂಮಿ, ನೇಗಿಲು, ಎತ್ತು, ಪೈರು ಕೊಯ್ಲಿಗೆ ಬರುವವರೆಗೂ ಹೊಟ್ಟೆಪಾಡಿಗಾಗಿ ಒಂದಿಷ್ಟು ನಗದು ಹಣ ಹಾಗೂ ಇರಲು ಮನೆ ಬಾಗಿಲು. ಅವರಲ್ಲಿ ವಿದ್ಯಾವಂತರಾದವರಿಗೆ ಅಧಿಕಾರ ಕೊಡುವ ವಿಷಯ ದಿವಾನರು ಎತ್ತಿದಾಗ, ಅವರು ತಮ್ಮ ಅನುಭವಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ. ಒಳ್ಳೇದು ಬಂದ್ರೆ ಬಂದವ್ನಿಗೇ ಒರ್ತು ಇನ್ಯಾರಿಗೂ ಇಲ್ಲ ಬುದ್ದಿ. ಅವರೇನೋ ಉತ್ತಮರಂಗೇ ಆಡ್ತಾರೆ. ಇವರ ದುಃಸ್ಥಿತಿ ತಪ್ಪಬೇಕು ಎಂದುಕೊಳ್ಳುತ್ತಾ ದಿವಾನರು ಇಳಿಮುಖದೊಂದಿಗೆ ಕ್ಯಾಂಪಿಗೆ ಮರಳುತ್ತಾರೆ.

ಮುಂದೆ ಕನ್ನಂಬಾಡಿ ಕಟ್ಟೆಯ ನಿರ್ಮಾಣ ಒಂದು ಹಂತಕ್ಕೆ ಬಂದಾಗ ನಾಯಕ ಮಲ್ಲಿಯೊಡನೆ ಅಲ್ಲಿಗೆ ಅದನ್ನು ನೋಡಿಕೊಂಡು ಬರಲು ಹೋಗುತ್ತಾನೆ. ಇದರ ಸುಂದರ ವರ್ಣನೆ ಗಮನಾರ್ಹ.

ತಾತಯ್ಯನವರ ವ್ಯಕ್ತಿಚಿತ್ರವೂ ಗಂಭೀರವಾಗಿ ಪಡಿಮೂಡಿದೆ. ಕ್ರಾಂತಿಕಾರಿ ಮನೋಭಾವದ ಶಿಷ್ಯ ನರಸಿಂಹಯ್ಯನಿಗೆ ಅವರು ಹೇಳುವ ಈ ಮಾತುಗಳನ್ನು ಪರಿಶೀಲಿಸಿ, 'ಈಗೀಗ ಕಾಂಗ್ರೆಸ್ ಪಿಟಿಷನ್ ಸ್ಟೇಜಿನಿಂದ ಥ್ರೆಟನಿಂಗ್ ಸ್ಟೇಜಿಗೆ ಬರುತ್ತಿದೆ. ಈ ಬನಿಯರುಗಳ ಗುಟ್ಟು ಬಲ್ಲ ಇನ್ನೊಬ್ಬ ಬನಿಯನೇ ಬರಬೇಕು. ಎಲ್ಲದಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಇನ್ನೂ ಅರ್ಬನ್ ಏರಿಯಾ ಬಿಟ್ಟು ಹಳ್ಳಿಗಳ ಕಡೆ ಹೋಗಿಲ್ಲ. ಇನ್ನೂ ಮುಂದಿನ ಸ್ಟೇಜ್ ಮಾಸ್ ಸ್ಟೇಜ್, ಇನ್ನೊಂದು ಸಂದರ್ಭದಲ್ಲಿಯೂ ಅವರು ಈ ಮಾತನ್ನೇ ಒತ್ತಿ ಹೇಳುತ್ತಾರೆ. 'ಹಳ್ಳಿ ಹಳ್ಳಿಗೂ ಸ್ವಾತಂತ್ರ್ಯದ ಸಂದೇಶ ಒಯ್ಯುವುದು ಇಂಗ್ಲೀಷ್‌ಗೆ ಸಾಧ್ಯವಿಲ್ಲ. ಭಾರತವು ಗೆಲ್ಲಬೇಕಾದರೆ ಮಾಸ್ ಮೂವ್‌ಮೆಂಟ್ ಬೇಕು. ಅದಾಗಲು ಎಚ್ಚರವಾಗಬೇಕು. ಅದರಿಂದಲೇ ಈ ಮಾತೃಭಾಷೆ ಬೆಳೆಯಬೇಕು. ಯುದ್ಧಕ್ಕೆ ಮುಂಚೆ ಪೇಪರ್ ಓದುವವರು ಸಾವಿರಕ್ಕೆ ಒಬ್ಬರಿರಲಿಲ್ಲ. ಈಗ ನಾಲ್ಕೈದು

ಆಗಿದ್ದಾರೆ. ಬಹುಶಃ ಇನ್ನೊಂದು ಯುದ್ಧ, ಇದಕ್ಕಿಂತ ಭಾರಿಯಾದ ಯುದ್ಧ ಬಂದೇ ಭಾರತಕ್ಕೆ ಸ್ವಾತಂತ್ರ್ಯ ಬರುವುದೇನೋ. ಅವರ ಕಲ್ಪನೆಯ ಭವಿಷ್ಯದ ಚಿತ್ರ ಹೀಗಿದೆ. ಈ ಇಂಪೀರಿಯಲಿಸಂ, ಬೇಟೆ ಹೊಡೆದು ಅದರ ಮೇಲೆ ಕಾಲಿಟ್ಟು ನಿಂತಿರುವ ಸಿಂಹ. ಇದನ್ನು ಯಾವುದೋ ಮೊಲ ಪಲ್ಟಿ ಹೊಡೆಸಿ, ಬಾವಿಗೆ ಕೆಡುವುತ್ತೆ. 'undamentally equal but functionally different ಎಂಬ ತತ್ವದ ಮೇಲೆ ಭೇದ - ಅಭೇದವನ್ನು ಒಪ್ಪಿ ಸಮಾಜ ಪುನರ್ರಚನೆಯಾಗುತ್ತದೆ.

ಕವಿ ರವೀಂದ್ರರ ಭೇಟಿ

ಕವಿ ರವೀಂದ್ರರು ಮೈಸೂರಿಗೆ ಇತ್ತ ಭೇಟಿ ಕಾದಂಬರಿಯ ಇನ್ನೊಂದು ರಸವತ್ತಾದ ಪ್ರಸಂಗ. ಕಪಿನಿಯಂತಹ ಅಂಜೂರ ವರ್ಣದ ನಿಲುವಂಗಿಯನ್ನು ತೊಟ್ಟ ತಪಸ್ವಿಯದಂತಹ ನೀಳಗಡ್ಡದ ಆ ದೀರ್ಘದೇಹಿಯ ದೀಪಗಳಂತೆ ಮೊಳಗುವ ಕಣ್ಣುಗಳ ದೀಪ್ತಿಗೆ ಮಾರುಹೋದ ವಿದ್ಯಾರ್ಥಿ ವೃಂದ ಪ್ರಶ್ನೆಗಳನ್ನು ಕೇಳಿ ಇಂಥ ಅಪರೂಪದ ಅವಕಾಶದ ಪೂರ್ಣ ಲಾಭ ಪಡೆದುಕೊಳ್ಳುತ್ತಾರೆ. ಕಾವ್ಯದಲ್ಲಿ ತತ್ವದ ಸ್ಥಾನವನ್ನು ಕುರಿತ ಪ್ರಶ್ನೆಗೆ ಕವಿಗಳು ಕೊಡುವ ಉತ್ತರ ಹೀಗಿದೆ : 'ಕಬ್ಬಿನಲ್ಲಿ ಸಕ್ಕರೆ ಎಷ್ಟಿದೆ ಆ ಸಕ್ಕರೆ ಎಂಥದು? ಎಂಬುವುದನ್ನೆಲ್ಲಾ ಸೈನ್ಸ್ ಹೇಳಬಹುದು. ಆದರೆ ಸಕ್ಕರೆಯನ್ನು ತಂದ ಕಬ್ಬಿಗೆ ಅದೆಲ್ಲಾ ಗೊತ್ತೇನು? ನಮ್ಮ ಫಿಲಾಸಫಿಯನ್ನು ಕುರಿತು ರಾಧಾಕೃಷ್ಣನ್ ಬರೆದ ಪುಸ್ತಕದ ಬಗ್ಗೆ ಅವರು ಹೇಳುತ್ತಾರೆ. 'ನನ್ನ ಪಾಡಿಗೆ ನಾನು ಹಾಡಿಕೊಳ್ಳುತ್ತೇನೆ. ಆದರಲ್ಲಿ ಅವರು ವೇದಾಂತ ಕಾಣುತ್ತಾರೆ'

ನಾಯಕನನ್ನು ಮಹಾರಾಜರು ತಮ್ಮ ವರ್ಧಂತಿಯ ಸಂದರ್ಭದಲ್ಲಿ ಕರೆಸಿಕೊಳ್ಳುತ್ತಾರೆ. ನಾಯಕನಿಗೆ ಅವರು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಪ್ರಜಾಪತಿ ನೀಡುವ ಸಂದೇಶವನ್ನು ನೆನಪಿಗೆ ತಂದುಕೊಂಡು ಹೀಗೆ ಅಪ್ಪಣೆ ಕೊಡಿಸುತ್ತಾರೆ. 'ತಮಗೆ ಕೊಟ್ಟ ದೇವರು, ಇಲ್ಲದವರಿಗೆ ಕೊಡು, ಕೊಡುವ ನಿನ್ನಲ್ಲಿ ಅವರು ನನ್ನನ್ನು ಕಾಣಲಿ, ಎಂದೇ ಹೇಳುವುದು ಎಂದು ದಾನ-ಧರ್ಮದ ಪ್ರಾಶಸ್ತ್ಯವನ್ನು ವಿವರಿಸಿ ವಿದ್ಯಾಭ್ಯಾಸಕ್ಕೆ ನೆರವು ಕೊಡುವುದು ಶ್ರೀಮಂತರ ಕರ್ತವ್ಯ ಎಂದು ಈ ರೀತಿ ತಿಳಿಸಿರುತ್ತಾರೆ. 'ನಮ್ಮ ದೇಶಕ್ಕೆ ಶಾರದೆಯನ್ನು ತಂದವರು ಸನ್ಯಾಸಿಗಳು. ಆಕೆಯು ಇಲ್ಲಿಯೇ ಇರುವಂತೆ ಇರಿಸಿಕೊಳ್ಳುವ ಕೆಲಸ ಶ್ರೀಮಂತರದು. ಇದೇ ಸಂದರ್ಭದಲ್ಲಿ ಅವರು ಮುಂದುವರಿಸಿ ದೇವುಡು ಅವರ ಹಿರಿಯರ ಪ್ರಸ್ತಾಪ ಮಾಡುತ್ತಾರೆ. ನಮ್ಮ ಅರಮನೆಗೆ ಈಶಾನ್ಯವಾಗಿ ತೃಣೇಶ್ವರನ ದೇವಸ್ಥಾನವಿದೆ. ಅದರ ಮಗ್ಗುಲಲ್ಲಿ ದಿನವೂ ಭಾರತ ಓದುತ್ತಾರೆ. ದೇವುಡು ಶಾಸ್ತ್ರಿಗಳು ಓದುತ್ತಾರೆ. ರಂಗಣ್ಣನವರು ಅರ್ಥ ಹೇಳುತ್ತಾರೆ. ಹಾಗೇ ಊರಿನಲ್ಲಲ್ಲ ಕೇರಿ ಕೇರಿಯಲ್ಲೂ ಆದ ದಿನ ನಮ್ಮ ಸಂತೋಷಕ್ಕೆ ಪಾರವಿಲ್ಲ.

ಕಾದಂಬರಿಯ ಆರಂಭದಲ್ಲಿ 'ಆಗ ಮೇಲಿನ ಅಧಿಕಾರಗಳೆಲ್ಲ ಹಾರುವರಿಗೆ ತಪ್ಪಿದರೆ ಮುಸಲ್ಮಾನರಿಗೆ ಮೀಸಲಾಗಿದ್ದ ಕಾಲ' ಎಂಬ ಮಾತು ಬರುತ್ತದೆ. ವರುಷಗಳು ಉರುಳಿದಂತೆ ಪರಿಸ್ಥಿತಿ ಬದಲಾಯಿಸುತ್ತದೆ. ಮಿಲ್ಲರ್ ಕಮಿಟಿಯ ರಿಪೋರ್ಟಿನ ಹಿನ್ನೆಲೆ ಹಾಗೂ ಪರಿಣಾಮಗಳ ಚಿತ್ರ ಸೂಕ್ಷ್ಮವಾಗಿ ಮೂಡುತ್ತದೆ. ಹಿಂದಿನ ಕಾಲದ ನಾಯಕ ಹೊಸದಾಗಿ ತನ್ನ ಪಟೇಲಿಕೆಯನ್ನು ತನ್ನಿಂದ ವಹಿಸಿಕೊಂಡ ಸಂಬಂಧಿ ಗೌಡನಿಗೆ ಹೀಗೆ ಹೇಳುತ್ತಾನೆ. 'ಏನೂ ಗತಿ ಇಲ್ದೆ, ಪುಸ್ತಕ

ಇಡಿವಿರೋ ಈ ಹಾರುವರ ಹೈಕಳ್ಗೆ ಹೊಟ್ಟೆಗಿಲ್ಲ. ಅವರಿಗೆ ಚಾಕರಿ ಬೇಕು. ಅನ್ನೋದು ಏನೋ ಸರಿ, ಅದೇಕೆ ನಮ್ಮ ಮಕ್ಕಳ್ಗೂ ಅದೇ ಗತಿ ಅಂತಾ ಆಯ್ಕೆ ಗೌಡ. ಇದು ಹೊಟ್ಟೆಗ್ಹಿಟ್ಟಿಲ್ಲ ಇಲ್ಲ ಅನ್ನೋ ಮಾತಲ್ಲ. ಅಧಿಕಾರದ ಮಾತು ಕೋಟಿ ರೂಪಾಯಿ ಕಂದಾಯ ಕಟ್ಟೋ ಜನ ಅಲ್ವಾ ನಾವು? ಏನೂ ಕಂದಾಯ ಕೋಳಿ ಕೊಡದೋರೆಲ್ಲಾ ದೊಡ್ಡ ದೊಡ್ಡ ಹುದ್ದೆಗೆ ಬರಬೋದು? ನಮ್ಮೋರು ಏಕೆ ಕೂಡದು? ನಮಗೆ (ಇಂಗ್ಲೀಷ್) ಬರದಿದ್ದರೆ ಕಲೀತೀವಿ' ಎಂದು ಉತ್ತರ ಕೊಡುತ್ತಾರೆ. ಗೌಡ. ಈ ದಿಕ್ಕಿನಲ್ಲಿ ಹಿಡಿಯುವ ಹಿಂಸಾಮಾರ್ಗ ನಾಯಕನಿಗೆ ಒಪ್ಪಿಗೆಯಾಗದು.

ಪ್ರೇಮ ಕಥಾನಕ

ಮೊದಲೇ ಹೇಳಿದಂತೆ ಇಲ್ಲಿಗೆ ಸೊಗಸಾದ ಒಂದು ಪ್ರೇಮ ಕಥಾನಕ ಕೊಳ್ಳೋಣ. ಒಂದು ಆಶ್ರಮ ನಡೆಸುತ್ತಿದ್ದ ದೇಶವೆಲ್ಲ ಸುತ್ತಿದ್ದ ಶಂಭುರಾಮಯ್ಯನ ಮತ್ತು ಸುಶಿಕ್ಷಿತ ಥಿಯೋಸೋಫಿಸ್ಟ್ ಆನಂದಮ್ಮನ ಮಗಳು ಮಲ್ಲಿ. ಅವರು ಎಳೆ ಶಿಶುವನ್ನೇ ದೊಂಬರಪಾಲು ಮಾಡುತ್ತಾರೆ. ದೊಂಬರಿಂದ ಅದು ತತ್ತ್ವ ಹೇಳುವ ಮಲ್ಲಣ್ಣ ಮತ್ತು ಮಕ್ಕಳಿಲ್ಲದೆ ತಪಿಸುತ್ತಿದ್ದ ಅವನ ಹೆಂಡತಿ ಕೆಂಪಿಯ ವಶಕ್ಕೆ ಬರುತ್ತದೆ. ಅವರು ನಾಯಕನ ಆಶ್ರಯದಲ್ಲಿದ್ದುಕೊಂಡು ಮಲ್ಲಿಯನ್ನು ಸಾಕುತ್ತಾರೆ. ಅವಳು ಇನ್ನೂ ಐದು ವರ್ಷದವಳಿದ್ದಾಗಲೇ ನಾಯಕನ ಮುಂದೆ ತತ್ವಪದ ಹೇಳುವ ಸಂದರ್ಭ ಬರುತ್ತದೆ. ಆಗಿನಿಂದಲೂ ಅವಳಿಗೆ ಮಾರುಹೋಗುತ್ತಾನೆ. ಅವಳ ಒಂಭತ್ತನೇ ಹುಟ್ಟುಹಬ್ಬದ ದಿನ ಅವನು ಅವಳನ್ನು ತನ್ನ 'ಬಂದಿ'ಯನ್ನಾಗಿ ಮಾಡಿಕೊಳ್ಳುತ್ತಾನೆ.

ಈ ಪ್ರೇಮಕಥಾನಕದ ವೈಶಿಷ್ಟ್ಯಗಳು ಮೂರು. ಪ್ರೌಢನಾದ ನಾಯಕ ಈ ಎಳೆಯಳ ಮೋಹಕ್ಕೆ ಸಿಲುಕುವ ಈ ಅಪರೂಪ ಪ್ರಸಂಗ. ನಬೊಕಾವ್‌ರ ಕಾದಂಬರಿ 'ಲೋಲಿಟಾ'ದಲ್ಲಿ ಲೋಲಿಟಾ ಎಂಬ ನಿಂಫೆಟ್‌ನ ಮೋಹಪಾಶಕ್ಕೆ ಸಿಕ್ಕಿದ ಆ ಕಾದಂಬರಿಯ ನಾಯಕನ ಪರಿಸ್ಥಿತಿಯನ್ನು ನೆನಪಿಗೆ ತರುತ್ತದೆ. ಮಲ್ಲಿ ಒಂದು 'ಹಣ್ಣು ಮೊಗ್ಗು' 'ಅಂಬರದಲ್ಲಿ ತೂಗುವ ಚಿನ್ನದ ಚೊಂಬಿನಂತೆ ಇರುವ ಮಾವಿನಕಾಯಿ' ' ಹೆಪ್ಪು ಒಡೆಯುವುದಕ್ಕೆ ಇಷ್ಟವಿಲ್ಲದೆ ಒಬ್ಬ ಗೃಹಿಣಿ ಮುಟ್ಟಿ ಇಡುವ ಮಡಕೆ. ಪ್ರೌಢೆಯಾದ ಮಲ್ಲಿ ಅಪ್ರತಿಮ ಸುಂದರಿ. ಈ ಕಥಾನಕದ ಇನ್ನೊಂದು ವೈಶಿಷ್ಟ್ಯವೆಂದರೆ ನಾಯಕನ ಧರ್ಮಪತ್ನಿ ಸುಂದರಮಣ್ಣಿಯೇ ಸ್ವತಃ ತರಪೇತಿ ಕೊಟ್ಟು ಮಲ್ಲಿಯನ್ನು ಅವನಿಗೆ ಅರ್ಪಿಸುವುದು. 'ಅಂತರಂಗ' ಕಾಂದಬರಿಯ ಪತ್ನಿ ಪ್ರೇಯಸಿ ಇವರಿಬ್ಬರ ಘರ್ಷಣೆ ಇಲ್ಲಿಲ್ಲ. ಕಾಳಿದಾಸನ ಔಶೀನರಿಗಿಂತಲೂ ಮಿಗಿಲಾದ ಪಾತ್ರವಾಗಿ ಸುಂದರಮ್ಮಣ್ಣಿಯನ್ನು ದೇವುಡು ಚಿತ್ರಿಸುತ್ತಾರೆ. ಔಶೀನರಿ ಪುರೂರವ ಊರ್ವಶಿಯನ್ನು ಪ್ರೇಮಿಸಿ ಅವಳೊಡನಿರುವ ಸ್ವಾತಂತ್ರ್ಯವನ್ನು ಅವನಿಗೆ ಕೊಡುತ್ತಾಳೆ. ಆದರೆ ಅವನ ಪ್ರೇಮವನ್ನು ಅವಳೊಡನೆ ಹಂಚಿಕೊಳ್ಳಲಾರಳು. ಮಲ್ಲಿ – ಸುಂದರಮಣ್ಣಿಯವರಾದರೋ 'ನಾಯಕ ಮಣೆಯ ಅತ್ತಿತ್ತ ಹಾಕುವ ಒತ್ತುಮಣೆಗಳಂತೆ' ನಾಯಕನ ಪ್ರೇಮದಲ್ಲಿ ಸಹಭಾಗಿಗಳು.

ಮೂರನೆಯ ವೈಶಿಷ್ಟ್ಯವೆಂದರೆ ಮಲ್ಲಿ ಶೃಂಗಾರ ಭೂಮಿಕೆಯಲ್ಲಿಯೇ ಉಳಿಯುವುದಿಲ್ಲ. ಎನ್ನುವುದು. ಹೇಗೆ ಅವಳು ನಾಯಕನೊಡನೆ ಕುದುರೆ ಸವಾರಿ, ಕತ್ತಿವರಸೆ ಕಲಿತು ಅವನಿಗೆ ಸರಿದೊರೆಯಾದ ಪ್ರೆಯಸಿಯಾದಳೋ ಹಾಗೆಯೇ ಇಂಗ್ಲಿಷ್ ಸಂಸ್ಕೃತ ಕಲಿತು ನರಸಿಂಹಯ್ಯನಿಂದ

ದೇಶಾಭಿಮಾನದ ದೇಶಸೇವೆಯ ದೀಕ್ಷೆ ಪಡೆದುಕೊಂಡು ನಾಯಕನನ್ನು ಬೀಳ್ಕೊಟ್ಟು ಹಿಂದೊಮ್ಮೆ ತಾನು ಪ್ರತ್ಯಕ್ಷವಾಗಿ ಕಂಡಿದ್ದ ಗಾಂಧೀಜಿಯವರ ಆಶ್ರಮಕ್ಕೆ ಬರುತ್ತಾಳೆ. ಅವರ ತಾಯಿ ತಂದೆಯವರ, ತತ್ಸಪದ ಹೇಳುವ ಸಾಕುತಂದೆಯ ಹಾಗೂ ಗುರುಸ್ಥಾನೀಯ ನರಸಿಂಹಯ್ಯನ ಪ್ರಭಾವ ಅವಳ ಜೀವನದ ಎರಡನೆ ಘಟ್ಟವನ್ನು ನಿರ್ದೇಶಿಸುತ್ತದೆ. ಮೊದಲಿನಿಂದಲೂ ರಾಜಕೀಯ ಕಾದಂಬರಿಯ ಲಕ್ಷಣಗಳನ್ನು ರೂಢಿಸಿಕೊಂಡು ಸಾಗುವ ಈ ಕಾದಂಬರಿಗೆ ತಾನು ಕಡೆಕಡೆಯಲ್ಲಿ ಇಡುವ ಹೆಜ್ಜೆಗಳಲ್ಲಿ ತಕ್ಕ ನಾಯಕಿಯಾಗುತ್ತಾಳೆ. ಮಲ್ಲಿಯ ಪಾತ್ರದ ಇಂಥ ವಿಕಾಸ ಈ ಪ್ರೇಮ ಕಥಾನಕದ ಸಾಲು ಕಡೆಯಲ್ಲಿ. ಕೊನೆಯಲ್ಲಿ ಮಲ್ಲಿ ಶಂಕರಾಭರಣದಲ್ಲಿ ಸಣ್ಣಗೆ, ತನ್ನ ಕಿವಿಗೆ ಮಾತ್ರ ಕೇಳಿಸುವಷ್ಟು ಸಣ್ಣಗೆ ಹಾಡಿಕೊಳ್ಳುವ ಈ ಸಾಲುಗಳು ಅವಳು ಸಾಧಿಸುವ ಪರಿಣತಿಯ ದ್ಯೋತಕ.

ಹಂಸ ನೀ ಪರಮಾತ್ಮನೆಂದು ಭಾರತದ ಮಾತು.
ಸಂಸಾರಿ ನೀನಲ್ಲ ಹಂಸ |
ಸಂಶಯ ಮೊದಲಾದ ಅಜ್ಞಾನ ಕಾರ್ಯವ
ಧ್ವಂಸ ಮಾಡಲೆ ಹಂಸ.

★

ದೇವುಡು ಅವರ ನಿಷ್ಕಾಮ ಸೂತ್ರ

ಶ್ರೀ ಕೆ. ನರಸಿಂಹಮೂರ್ತಿ

ನಮ್ಮ ಭಾರತ ಸಂಸ್ಕೃತಿಯ ಸ್ವರೂಪವೇನು? ಆ ಪುರಾತನ ಸಂಸ್ಕೃತಿಯಲ್ಲಿ ಯಾವ ಭಾಗ ನಮಗೆ ಬೇಕು? ಯಾವುದು ಬೇಡ? ಈಗಿನ ಜಗತ್ತು ಎತ್ತ ಸಾಗುತ್ತಿದೆ? ಇದರ ಗತಿಯೇನು? ಇತಿಯೇನು? ಮಿತಿಯೇನು? ಇವುಗಳನ್ನೆಲ್ಲಾ ಈಗಿನ ಸಾಹಿತಿಯು ವಿಮರ್ಶಿಸಬೇಕು. ಸಾಮಾಜಿಕ ಎಂಬ ವಿಷಯ ನೋಡುವುದಕ್ಕೆ ಒಂದಾದರೂ ಎಲ್ಲವೂ ಅಲ್ಲಿ ಸೇರಿದೆ. ದೇಶದ ಪುನರುದ್ಧಾರದ ಸಮಸ್ಯೆಗಳೂ ಸಾವಿರವೂ ಅಲ್ಲಿವೆ; ಹೀಗೆ ಸಾಮಾಜಿಕ ಕಾದಂಬರಿಯ ಸ್ವರೂಪವನ್ನು ಕುರಿತ ತಮ್ಮ ಪರಿಕಲ್ಪನೆಯನ್ನು ತಮ್ಮ 'ಡಾ.ವೀಣಾ' ಎಂಬ ಸಾಮಾಜಿಕ ಕಾದಂಬರಿಯ ಪೀಠಿಕೆಯಲ್ಲಿ ದೇವುಡು ನರಸಿಂಹಶಾಸ್ತ್ರಿಗಳು ಮಂಡಿಸುತ್ತಾರೆ. ಅವರ ದೃಷ್ಟಿಯಲ್ಲಿ 'ಸಾಮಾಜಿಕ ಸ್ಥಿತಿಗತಿಗಳನ್ನು ಜನರ ಮನಸ್ಸಿಗೆ ಹಿಡಿಸುವಂತೆ ಬಣ್ಣಿಸಿ' ದರೆ ಸಾಲದು, ' ಸಮಸ್ಯೆಗಳನ್ನು ಕುರಿತು ಚಿಂತಿಸುವಾಗ ಭರತ ಖಂಡದ ಜೀವನಾಡಿಯಾದ ಸಂಸ್ಕೃತಿಯ ಚಿತ್ರಣವನ್ನು, ವೇದಾಂತದ ಸಂದೇಶವನ್ನು ಮರೆಯುವುದೆಂತು? ' ಎಂದು ಅವರು ಪ್ರಶ್ನಿಸುತ್ತಾರೆ. ಮುಂದುವರಿಸಿ, ' ಅನೇಕರಿಗೆ ಲಘುಸಾಹಿತ್ಯ ಬೇಕು, ಹಾಗೆಂದ ಮಾತ್ರಕ್ಕೆ ವಿಚಾರ ಪೂರ್ಣವಾದ ಸಾಹಿತ್ಯ ಬೇಕಾಗಿಲ್ಲ ಎಂದು ಅರ್ಥವಲ್ಲ, ಅಂತಹ ಸಾಹಿತ್ಯವನ್ನು ಗುರಿಯಾಗಿ ಇಟ್ಟುಕೊಂಡವನು ತಪ್ಪು ಎಂದೂ ಅಲ್ಲ; ಎಂದು ತಮ್ಮ ವಿಚಾರಪೂರ್ಣ ಸಾಮಾಜಿಕ ಕಾದಂಬರಿಯ ಪರಿಕಲ್ಪನೆಯನ್ನು ಸಮರ್ಥಿಸಿಕೊಳ್ಳುತ್ತಾರೆ.

ಸವಾಲು

ಕಾದಂಬರಿಯ ಆಕಾರವನ್ನು ಕುರಿತೇ ಅವರು ಹಾಕುವ ಸವಾಲು, 'ಬಹುಜನ ಪಾಶ್ಚಾತ್ಯ ಕಾದಂಬರಿಕಾರರ ನಡೆಯನ್ನು ಹಿಡಿದು ನಡೆದಿದ್ದಾರೆ. ಇನ್ನೂ ಅದೇ ನಡೆಯೇ? ಅಥವಾ ನಡೆಯನ್ನು ಬದಲಾಯಿಸಬೇಕೆ? ಇದು ಈಗಿನ ಪ್ರಧಾನ ಪ್ರಶ್ನೆ ಅಥವಾ ಸಮಸ್ಯೆ' ಕಾದಂಬರಿ ಕ್ಷೇತ್ರದಲ್ಲಿ ಪಾಶ್ಚಾತ್ಯ ಮಾದರಿಗಳಿಗೆ ಮಾರುಹೋದ ನಮ್ಮ ಸಾಹಿತಿಗಳ ನಿಲುವನ್ನು ಪ್ರಶ್ನಿಸುತ್ತ ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕೃತಿರಚನೆ ಮಾಡುವ ತಮ್ಮ ಉದ್ದೇಶವನ್ನು ಒಕ್ಕಣಿಸುವುದಲ್ಲದೆ ಅದರ ಒಂದು ಮಾದರಿಯನ್ನು ತಮ್ಮ ಈ ಸಾಮಾಜಿಕ ಕಾದಂಬರಿಯಲ್ಲಿ ಕೂಡುವ ಪ್ರಯತ್ನವನ್ನು ಅವರು ಮಾಡುತ್ತಾರೆ. ಹೀಗೆ ವಸ್ತು ಮತ್ತು ಆಕೃತಿ ಇವುಗಳ ಅವಿನಾ ಸಂಬಂಧವನ್ನು ಮರೆಯದೆ ಅವುಗಳೆರಡರಲ್ಲಿಯೂ ವಸಾಹತುಶಾಹಿ ಪ್ರಭಾವವನ್ನು ಎದುರಿಸಿ ಭಾರತೀಯ ಸಾಹಿತ್ಯ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಒಂದು ಕುತೂಹಲಕಾರಿ ಪ್ರಯೋಗ, 'ಡಾ ವೀಣಾ'. ಈ ಪ್ರಯೋಗ ಅಷ್ಟಾಗಿ ಯಶಸ್ವಿಯಾಗಿಲ್ಲವೆನ್ನುವುದು ಬೇರೆ ಮಾತು. ಆದರೆ ಪ್ರಯೋಗ ಮಾತ್ರ ಅರ್ಥಪೂರ್ಣ, ಗಮನಾರ್ಹ.

'ಸಮಾಜದ ಸುಖದುಃಖಗಳು ಯಾರನ್ನು ಅವಲಂಬಿಸಿವೆಯೋ, ಮುಂದಿನ ಆಗುಹೋಗುಗಳಿಗೆ ಯಾರು ಕಾರಣಳೋ ಆ ಹೆಣ್ಣು ಹೇಗಿರಬೇಕು? ಉತ್ತರ ಪುಸ್ತಕದಲ್ಲಿದೆ. ಈ

ಸಮಸ್ಯೆಯ ನಾನಾ ಮುಖಗಳನ್ನು ಇಲ್ಲಿ ಅಷ್ಟಷ್ಟಾಗಿ ವಿಮರ್ಶಿಸಲಾಗಿದೆ', ಎಂದು ಇಲ್ಲಿ ತಾವು ಪರಾಮರ್ಶೆಗೆ ತೆಗೆದುಕೊಂಡಿರುವ ಸಾಮಾಜಿಕ ಸಮಸ್ಯೆಯನ್ನು ದೇವುಡು ನಿರ್ದೇಶಿಸುತ್ತಾರೆ. ಮೂಲಭೂತ ಸ್ತ್ರೀವಾದದ ಅತಿ ದೂರ ಹೋಗುವ ಒಂದು ರೂಪದ ವಿಶ್ಲೇಷಣೆಯನ್ನು ಪ್ರಯತ್ನಿಸುತ್ತ ಜನ ಜೀವನದಲ್ಲಿ ಭೋಗಾಸಕ್ತಿಯನ್ನು ನಿಯಂತ್ರಿಸಿಕೊಂಡು ಲೋಕ ಕಲ್ಯಾಣಕ್ಕಾಗಿಯೂ ರಾಷ್ಟ್ರೋದ್ಧಾರಕ್ಕಾಗಿಯೂ ಅವಶ್ಯಕವಾಗಿ ಅನುಸರಿಸಬೇಕಾದ ಸುಸಂಸ್ಕೃತ ನಡತೆಯನ್ನು ಅವರು ಇಲ್ಲಿ ಚಿತ್ರಿಸುತ್ತಾರೆ. ಐವತ್ತರ ದಶಕದ ಕೊನೆಯಲ್ಲಿ ರಚಿತವಾದ ಈ ಸಾಮಾಜಿಕ ಕಾದಂಬರಿ ಆ ದಿನಗಳಲ್ಲಿ ಪ್ರವರ್ಧಮಾನವಾಗಿದ್ದ ಪ್ರಗತಿಶೀಲ ಸಾಹಿತ್ಯದ ಮಾದರಿಗೆ ಪೂರಕವಾಗಿ, ಚಿಕಿತ್ಸಕವಾಗಿ ನಡೆಸುವ ಒಂದು ವಿಮರ್ಶಾತ್ಮಕ ಪ್ರಯೋಗವಾಗಿ ಪರಿಶೀಲನಾರ್ಹವಾಗಿದೆ.

ಅನೈತಿಕ ನೇತೃತ್ವದ ಒಂದು ಮಹಿಳಾ ಸಮಾಜಕ್ಕೆ ಪ್ರತಿಯಾಗಿ ಉದಾತ್ತ ಮೌಲ್ಯಗಳ ಸಾಧನೆಗೆ ಮೀಸಲಾದ ಒಂದು ಕನ್ಯಾಮಂದಿರವನ್ನು ದೇವುಡು ನಮ್ಮ ಮುಂದಿಡುತ್ತಾರೆ. ಇವೆರಡು ಸಂಸ್ಥೆಗಳನ್ನು ನಡೆಸುವವರು ವೈಯಕ್ತಿಕ ನೆಲೆಯಲ್ಲಿನ ತಾಯಿ ಮಗಳು ಆಗಿರುವುದು ಇಲ್ಲಿನ ಒಂದು ಅರ್ಥಪೂರ್ಣ ವ್ಯಂಗ್ಯ. ಮಹಿಳಾ ಸಮಾಜದ ಅಧ್ಯಕ್ಷೆ ಮೋಹನೆ ರಮೇಶನ ಪತ್ನಿಯಾಗಿದ್ದಾಗ ದಾರಿತಪ್ಪದೆ ಇದ್ದವಳು ವಿಧವೆಯಾದ ಮೇಲೆ ರಮೇಶನ ಮಿತ್ರ ಪ್ರಾಣೇಶರಾಯರ ಪ್ರೇಯಸಿಯಾಗಿದ್ದಾಳೆ. ಅವಳ ವಾದವೇನೆಂದರೆ 'ಹೋದ ಜೀವಕ್ಕಾಗಿ ಇದ್ದ ಜೀವ ತಪಿಸಬೇಕೆ?' ಎಂದು, ಈ ವಾದವನ್ನು ಪುನರ್ವಿವಾಹದ ಕಲ್ಪನೆಯನ್ನು ಸಮರ್ಥಿಸಿಕೊಳ್ಳಲು ಉಪಯೋಗಿಸಿಕೊಳ್ಳದೆ ತನ್ನ ಕಾಮೇಚ್ಛೆಯ ಈಡೇರಿಕೆಯ ನೆರವಿಗೆ ಅವಳು ಬಳಸುತ್ತಾಳೆ. ಅವಳು ಆಲೋಚಿಸುವಂತೆ 'ಕಾಮ ಎನ್ನುವುದು ಆರೋಗ್ಯವಾಗಿರುವ ದೇಹದ, ಮನಸ್ಸಿನ ಸಹಜ ಪ್ರವೃತ್ತಿ. ಮೃಗದಲ್ಲಿ ಆಗಾಗ ಕಾಣಸಿಕೊಳ್ಳುವಂತೆ ಮನುಷ್ಯರಲ್ಲಿ ಯಾವಾಗಲೂ ಇರುತ್ತದೆ. ಅರ್ಥಕಾಮಗಳು ಅವರವರ ಸ್ವಂತ, ಹಣ ಸಂಪಾದಿಸುವಾಗ ನ್ಯಾಯ - ಅನ್ಯಾಯ ಎಂದೇಕೆ ಸಮಾಜ ಕೇಳುವುದಿಲ್ಲ? ಸರಕಾರದ ನ್ಯಾಯಕ್ಕೆ ಸಿಕ್ಕದಂತೆ ಕದ್ದವನನ್ನು ಸಮಾಜ ಗೌರವಿಸುತ್ತದೆ. ಹೀಗಿರಲು, ಒಬ್ಬ ಹೆಂಗಸು ತನ್ನ ಪಾಡಿಗೆ ತಾನು ಇತರರಿಗೆ ಹಾನಿಯಾಗದಂತೆ ತನ್ನ ತೃಪ್ತಿಯನ್ನು ಸಂಪಾದಿಸಿಕೊಂಡರೆ ಇತರರು ಏತಕ್ಕೆ ಹಾರಾಡಬೇಕು? 'ಗಂಡಸಿಗೆ ಒಂದು ನ್ಯಾಯ, ಹೆಣ್ಣಿಗೆ ಒಂದು ನ್ಯಾಯವೆ?,ಎನ್ನುವುದು ಅವಳ ಇನ್ನೊಂದು ಸವಾಲು' 'ಹೆಂಡತಿ ಸತ್ತರೆ ಅವರೂ ವ್ರತ ಹಿಡಿಯುತ್ತಾರೇನು? 'ಎಂದು ಅವಳು ಪ್ರಶ್ನಿಸುತ್ತಾಳೆ. ಮುಂದುವರಿದು ಅವಳು ಪ್ರಶ್ನಿಸುತ್ತಾಳೆ. ಮುಂದುವರಿದು ಅವಳು ವಾದಿಸುತ್ತಾಳೆ, ' ಸಮಾಜ ಸ್ತ್ರೀಯನ್ನು ದಾಸಿಯೆಂದೇ ಭಾವಿಸಿದೆ. ಈ ದಾಸ್ಯ ಮರಿಯಬೇಕು', ಅವಳ ಹಿಂದೆ ಮಹಿಳಾ ಸಮಾಜದ ಅಧ್ಯಕ್ಷೆಯಾಗಿದ್ದ ಸೀತಮ್ಮ ಇನ್ನೂ ಹೆಚ್ಚಿನ ತೀವ್ರಗಾಮಿ, 'ಸ್ತ್ರೀಪುರುಷರು ಇಬ್ಬರೂ ಸಮಾನ ಅನ್ನುವುದರ ಅರ್ಥವೇನು? ಧರ್ಮೇಚ ಅರ್ಥೇಚ ಕಾಮೇಚ ಅನ್ನುವುದು ಅದೇಕೆ? ಧರ್ಮ, ಅರ್ಥ ಎರಡರಲ್ಲಿಯೂ ಸ್ವಾತಂತ್ರ್ಯ ಬಂದಿದೆ. ಇನ್ನು ಕಾಮದಲ್ಲಿ ಒಂದು ಉಳಿದಿದೆ. ಅದೂ ಬಂದೇ ಬರುತ್ತದೆ; ಇನ್ನೂ ಒಂದು ಹೆಜ್ಜೆ ಹೋಗಿ ಅವಳು ಹೇಳುತ್ತಾಳೆ, 'ತಾನೇ ಕಾಮತೃಪ್ತಿಯನ್ನು ಹುಡುಕಿಕೊಂಡು ಹೋಗುವುದು ಅವಮಾನ. ಸಣ್ಣತನ ಅಂದುಕೊಂಡಿದ್ದಾನೆ. .. ದೇಶ ವಿದೇಶಗಳಲ್ಲಿ

ಹೀಗಿಲ್ಲ. ಇದನ್ನು ನಮ್ಮ ಇಂಡಿಯದಲ್ಲಿಯೂ ಸಾಧಿಸಬೇಕು', ಇವರಿಬ್ಬರ ಆಲೋಚನೆಗಳಲ್ಲಿನ ವ್ಯಂಗ್ಯ ಎಂದರೆ ಇಬ್ಬರೂ ವಿಧವೆಯರು, ಗಂಡಂದಿರು ಇರುವವರೆಗೂ ಪತಿವ್ರತೆಯರಾಗಿದ್ದವರು, ಕಾಯಾ ವಾಚಾ ಮನಸಾ, ಈಗಲೂ ಪತಿಗಳು ಜೀವಂತವಿದ್ದಿದ್ದರೆ ಹಾಗೆಯೇ ಆಲೋಚಿಸುತ್ತಿದ್ದವರು ಎನ್ನುವುದು. ಇಬ್ಬರಲ್ಲಿ ಮೋಹನೆ ಅಷ್ಟು ಧೈರ್ಯಸ್ಥೆಯಲ್ಲ. ಗಂಡನ ಪ್ರತಿರೂಪದಂತಿರುವ ಮಗಳೆದುರು ತನ್ನ ನಡತೆಗೆ ಸ್ವಲ್ಪ ಮಟ್ಟಿಗಾದರೂ ನಾಚುತ್ತಾಳೆ, ಅಂಜುತ್ತಾಳೆ.

ಮಹಿಳಾ ಸಮಾಜದಲ್ಲಿ ಕೆಲಸ ಮಾಡುವ ನಂಜಿಗೆ ಮೋಹನೆ ಮತ್ತು ಸೀತಮ್ಮ ತಮ್ಮ ಸಿದ್ಧಾಂತವನ್ನು ಬೋಧಿಸುತ್ತಾರೆ. ಮೋಹನೆ ಅವಳ ಸಂಬಳವನ್ನು ಹೆಚ್ಚಿಸುತ್ತಾಳೆ, ಅವಳ ಗಂಡನ ಸಂಬಳಕ್ಕಿಂತ ಎರಡು ಮೂರರಷ್ಟು ಅದು ಹೆಚ್ಚಾಗುವಂತೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಇನ್ನೂ ಬಹುಮಟ್ಟಿಗೆ ಜೀವಂತವಾಗಿ ಉಳಿದುಕೊಂಡಿರುವ ಸಂಸ್ಕೃತಿಯಲ್ಲಿ ಬೆಳೆದು ಬಂದಿರುವ ನಂಜಿಯ ಹಾಗೂ ಅವಳ ಗಂಡ ಮಂಚನ ದೃಷ್ಟಿಯಲ್ಲಿ ಪರಸ್ಪರ ಪ್ರೇಮದ ಸಂಸಾರವೇ ಶ್ರೇಷ್ಠ ಮೌಲ್ಯ, 'ನಮ್ಮ ಅಮ್ಮನೋರಿಗೆ ಗಂಡ ಇಲ್ಲ. ಇದ್ದ ಮಗಳು ಹೊಂಟೋದಳು. ಅವರಿಗೆ ಹುಚ್ಚು ಹಿಡಿದಿದೆ. ನಂಗೂ ಆ ಹುಚ್ಚು ಹಿಡಿಯೋದಾದರೂ ಹೆಂಗೆ? ನಂಗೆ ಮುತ್ತಿನಂಥ ಗಂಡ, ಹವಳದ ಕುಡಿ ಅಂಥ ಮಕ್ಕಳು ಇಲ್ಲವಾ? 'ಎಂದು ನಂಜಿ ವಾದಿಸಿದರೆ ,'ಗಂಡು ಹೆಣ್ಣು ಮಾಡೋವಾಗ ದೇವರು ಬಲಾ ಎಡಾ ಆಗಿರಿ. ನೀವಿಬ್ಬರೂ ಜೊತೆ ಜೊತೆ ಆಗಿ ಸಂಸಾರ ನೀಸಿ ಅಂತಲ್ಲವಾ ಮಾಡಿರೋದು? 'ಎಂದು ಮಂಚ ದನಿಗೂಡಿಸುತ್ತಾನೆ.

ನಂಜಿ ಮಂಚರಂಥ ಅನ್ಯೋನ್ಯ ಪ್ರಣಯಿಗಳ ಬೇರೆ ಜೋಡಿಗಳನ್ನು ಕಾದಂಬರಿ ಸಮಾಜದ ವಿವಿಧ ಸ್ತರಗಳಲ್ಲಿ ಕಂಡುಕೊಳ್ಳುತ್ತದೆ. ಕನ್ಯಾ ಮಂದಿರದಲ್ಲಿ ದೇವಮಂದಿರ ಆರೋಗ್ಯ ಮಂದಿರಗಳಿವೆ. ದೇವ ಮಂದಿರದಲ್ಲಿ ಪೂಜೆ ಮಾಡುವವರು ವೆಂಕಟೇಶಯ್ಯ ಹಾಗೂ ಅವರ ಧರ್ಮ ಪತ್ನಿ ಪುಟ್ಟಮ್ಮ ಇಂಥ ಆದರ್ಶ ದಂಪತಿಗಳು. ಆರೋಗ್ಯ ಮಂದಿರ ನಡೆಯುವುದು ಆಯುರ್ವೇದ ವಿದ್ವಾಂಸರಾದ ನಾಯರ್ ಅವರ ನೇತೃತ್ವದಲ್ಲಿ. ಅವರಿಂದ ಉದ್ಧೃತಳಾದವಳು ವೇಶ್ಯಾವೃತ್ತಿಯಲ್ಲಿದ್ದರೂ ಸಂಸಾರ ಮಾಡಬೇಕೆಂದು ಹಂಬಲಿಸುತ್ತಿದ್ದ ಗಾನಕೋಗಿಲೆ ಕೆಂಪಮ್ಮ. ಐವತ್ತು ವರ್ಷಗಳಿಗೂ ಮೀರಿದ ವಯಸ್ಸಿನ ಈ ಜೋಡಿಯ ಪರಸ್ಪರ ಪ್ರೇಮ ಅಮೃತ ಪಾನದಂತೆ ಅವರಿಗೆ ಅಪೂರ್ವ ಚೈತನ್ಯದಾಯಿನಿ. ಪ್ರೊಫೆಸರ್ ಶತಾನಂದರು ಕನ್ಯಾ ಮಂದಿರದ ಅಧ್ಯಕ್ಷರು. ಅವರ ಪತ್ನಿ ಜನತಾ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಲು ಪ್ರಯತ್ನ ಮಾಡುತ್ತಿರುವಾಕೆ. ಈ ವಿದ್ಯಾವಂತ ಜೋಡಿಯೂ ಸುಂದರವಾಗಿ ಇಲ್ಲಿ ಚಿತ್ರಿತವಾಗಿದೆ. ಕೆಂಪಮ್ಮನ ಮಗಳು ಮೇರಿ ತಾಯಿಯಂತೆ ಸಂಸಾರಿಯಾಗಲು ಹಾತೊರೆಯುತ್ತಿದ್ದರೂ ಒಬ್ಬರಿಂದೊಬ್ಬರಿಗೆ ಹಸ್ತಾಂತರಿತಳಾಗುತ್ತಿದ್ದವಳು. ಕಡೆಗೂ ಅವಳಿಗೆ ಸ್ಥಿರವಾದ ನೆಲೆ ಸಿಗುವುದು ಪ್ಲ್ಯಾಂಟರ್ ಓಳ್ಳೆಗೌಡನಲ್ಲಿ. ಈ ಜೋಡಿಯೂ ಅನ್ಯೋನ್ಯತೆಯಿಂದ ಸುಖೀ ಜೀವನ ನಡೆಸುತ್ತಿದೆ ಮೇರಿಗೆ ಅನಾಥಾಶ್ರಮ ಒಂದನ್ನು ಸ್ಥಾಪಿಸುವ ಮಹದಾಶೆ.

ಕಾದಂಬರಿಯಲ್ಲಿ ಚಿತ್ರಿತವಾಗಿರುವ ಅನ್ಯೋನ್ಯ ಪ್ರೇಮದ ಅಸ್ತಿಭಾರದ ಮೇಲೆ ಸ್ಥಿರವಾಗಿ

ನಿಂತ ಸಂಸಾರಿ ಜೋಡಿಗಳಿಗೆ ಕಿರೀಟಪ್ರಾಯವಾದುದು ಕಥಾನಾಯಕಿ ನಾಯಕರು ವೀಣಾ ಶ್ರೀನಿವಾಸರ ಜೋಡಿ. ಹತ್ತಿರ ಹತ್ತಿರ ಹದಿನೆಂಟು ವರ್ಷಗಳ ನವಯೌವನೆ ವೀಣಾ ಅಪ್ರತಿಮ ಸುಂದರಿ, ದೃಢಕಾಯದ ಧೀರೆ, ಅಧ್ಯಾತ್ಮಿಕ ಮನೋಧರ್ಮದ ಸಂಯಮಶೀಲೆ. ನಾಯರ್‌ರ ಶಿಷ್ಯೆಯಾಗಿ ಅವಳು ಆಯುರ್ವೇದದಲ್ಲಿ ಪಂಡಿತೆ, ಸಂಶೋಧಕಿ. ಜೊತೆಗೆ ಅವಳು ಎಂ.ಬಿ.ಬಿ.ಎಸ್. ಪದವೀಧರೆ. ಕೆಂಪಮ್ಮನಲ್ಲಿ ಶಿಷ್ಯವೃತ್ತಿ ಮಾಡಿ ಅವಳು ಗಾನ ಕಲಾಕೋವಿದೆ. ನಾಲ್ಕೈದು ಭಾಷೆಗಳಲ್ಲಿ ಪರಿಣತಳಾದ ಇವಳಿಗೆ ಸಂಸ್ಕೃತ ಕಾವ್ಯ ಶಾಸ್ತ್ರಗಳಲ್ಲಿ ಹೆಚ್ಚಿನ ಆಸಕ್ತಿ, ಒಲವು. ಕಾಳಿದಾಸನ ' ಕುಮಾರ ಸಂಭವ' 'ಮೇಘ ಸಂದೇಶ' ಗಳು ಅವಳಿಗೆ ಸ್ಫೂರ್ತಿದಾಯಕ ಆಕರಗಳು. ಅವಳ ಆದರ್ಶಮೂರ್ತಿ ಮಹೇಶ್ವರನನ್ನು ತನ್ನ ತಪಸ್ಸಿನಿಂದ ಗೆದ್ದುಕೊಂಡ ಉಮಾದೇವಿ. ಅದೇ ಮಾದರಿ ಯಲ್ಲಿ ಅವಳು 'Man and the unseen' ಎಂಬ ವಿಷಯವನ್ನು ಕುರಿತ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪಡೆದಿದ್ದ ಇಪ್ಪತ್ತಮೂರು, ಇಪ್ಪತ್ತನಾಲ್ಕು ವರ್ಷಗಳಷ್ಟೇ ವಯಸ್ಸಿನ ಅಧ್ಯಾತ್ಮಿಕ ಅನುಭವದಲ್ಲಿ ಎಲ್ಲರನ್ನೂ ಮೀರಿಸಿ ಜಗದ್ಗುರು ಆಗಬಲ್ಲವನೆಂದು ಕೀರ್ತಿತನಾದ ಶ್ರೀನಿವಾಸನಿಗೆ ತನ್ನ ಹೃದಯವನ್ನು ಸಮರ್ಪಿಸಿದ್ದಾಳೆ. ತನ್ನ ಮಹಾ ಪ್ರಬಂಧಕ್ಕೆ ಪ್ರೊಫೆಸರ್ ಶತಾನಂದರು ಮಾರ್ಗದರ್ಶಕರಾಗಿದ್ದರೂ. ಶ್ರೀನಿವಾಸನ ಗುರುಗಳು ಕಾದಂಬರಿಯಲ್ಲಿ ಅಪ್ರತ್ಯಕ್ಷರಾದ ಒಬ್ಬ ಮಹಾಮಹಿಮರು. ಅವರ ಆದೇಶದಂತೆ ಶ್ರೀನಿವಾಸನನ್ನು ಹೀಗೆ ರೂಪಿಸುತ್ತರುವವರು ನಾಯರ್ ಅವರು. ಆದರೆ ಗುರುಗಳು ತಮ್ಮ ಆಲೋಚನೆಯನ್ನು ಬದಲಿಸಿ ಶ್ರೀನಿವಾಸ , ಸಂಸಾರಿಯಾಗುವಂತೆ ನಿರ್ದೇಶಿಸುತ್ತಾರೆ. ಸನ್ಯಾಸದೀಕ್ಷೆ ತೆಗೆದುಕೊಂಡು ಜಗತ್ತಿಗೇ ಉಪದೇಶಿಸಬೇಕಾದ ಶ್ರೀನಿವಾಸ ವೀಣೆಯ ಪ್ರೇಮವನ್ನು ಪರಿಗ್ರಹಿಸಿ ತಾನೂ ಅವಳಲ್ಲಿ ಸಮಸಮ ಅನುರಕ್ತನಾಗಿ ಸಂಸಾರಿಯಾಗುವುದೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ.

ಇಲ್ಲಿ ವಿಶ್ಲೇಷಣೆಗೆ ಒಳಗಾಗುವ ಸ್ತ್ರೀವಾದ, ಸ್ತ್ರೀವಾದದ ನಿಖರವಾದ ನಿರ್ವಚನಕ್ಕೆ ಅಷ್ಟು ಸಮರ್ಪಕವಾಗಿ ಹೊಂದುವಂಥದಲ್ಲವಾದರೂ ಸ್ತ್ರೀವಾದದ ವ್ಯಾಪಕವಾದ ಅರ್ಥದಲ್ಲಿ ಜಿಜ್ಞಾಸೆ ಇಲ್ಲಿಲ್ಲವಾದರೂ ಅದಕ್ಕೆ ಸರಿಯಾದ ನ್ಯಾಯ ಒದಗದಿದ್ದರೂ ಒಂದು ವಿಶಿಷ್ಟಸ್ತರದಲ್ಲಿ ಈ ವಾದವನ್ನು ಮಂಡಿಸುವ ದೇವುಡು ಅವರ 'ಡಾ. ವೀಣಾ' ಸ್ತ್ರೀವಾದವನ್ನು ವೈಚಾರಿಕವಾಗಿ ಪರಿಶೀಲಿಸುವ ಕನ್ನಡದ ಮೊದಲ ಕಾದಂಬರಿಗಳಲ್ಲಿ ಒಂದೆಂಬುದರಲ್ಲಿ ಸಂದೇಹವಿಲ್ಲ.

ಅರ್ಥಪೂರ್ಣ ಆಯಾಮ

ಈ ಕಾದಂಬರಿಯ ಒಂದೆರಡು ಇತರ ಅರ್ಥಪೂರ್ಣ ಆಯಾಮಗಳ ಕಡೆ ಗಮನ ಹರಿಸುವುದು ಅವಶ್ಯಕ. ಇಲ್ಲಿನ ಮೋಹನೆ, ರಮೇಶ, ವೀಣಾರ ಕೌಟುಂಬಿಕ ಸನ್ನಿವೇಶ ಹ್ಯಾಂಲೆಟ್ ಕ್ಲಾಡಿಯಸ್ ಗಟ್ರೂಡ್‌ರ ಸನ್ನಿವೇಶದೊಡನೆ ಹೋಲಿಸಿ ನೋಡಿದಾಗ ಕಾಣಸುವ ಸಾದೃಶ್ಯ ವೈದೃಶ್ಯಗಳು ಸ್ವಾರಸ್ಯಪೂರ್ಣ. ರಮೇಶನ ಪ್ರೇತ ವೀಣೆಗೆ ದೃಷ್ಟಿಗೋಚರವಾಗಿ 'ನೀನು ಶ್ರೀನಿವಾಸನನ್ನು ಮದುವೆಯಾಗುವಾಗ ಆ ಶುಭದಿನದಲ್ಲಿ ನಿನ್ನ ಅಮ್ಮ ಇರಬಾರದು. ನಾನು ಬೇಡ ಬೇಡ ಅಂತಿದ್ದೆ.' ಈಗ ಖಂಡಿತ ಮಾಡಿದ್ದೇನೆ. ಅವಳನ್ನು ನಾನು ಮುರಿದುಕೊಂಡು ಹೋಗುತ್ತೇನೆ. ನೀನು ಅಡ್ಡ ಬರಬೇಡ! ಎಂದು ಹೇಳುತ್ತದೆ. ಹ್ಯಾಂಲೆಟ್ ತಂದೆಯ ಪ್ರೇತ ಪತ್ನಿಯ ವಿಷಯದಲ್ಲಿ

ಅಕ್ಕರೆಯನ್ನು ಕಳೆದುಕೊಳ್ಳುವುದಿಲ್ಲ. ಹ್ಯಾಂಲೆಟ್‌ನಂತೆ ತಾಯಿಯ ವರ್ತನೆಯನ್ನು ಖಂಡಿಸುವಂತೆ ವೀಣಾ ಸಹ ಮೋಹನೆಯ ಕಾಮುಕತೆಯನ್ನು ಖಂಡಿಸಿದರೂ ಇಬ್ಬರೂ ತಾಯಿಯ ವಿಷಯದಲ್ಲಿ ಪ್ರೀತಿಯನ್ನು ಪೂರ್ಣ ಕಳೆದುಕೊಳ್ಳುವುದಿಲ್ಲ.

ಸೈನ್ಸ್ ಫಿಕ್ಷನ್ ಬಗೆಯ ಒಂದು ಎಳೆಯೂ ಇಲ್ಲಿಯ ಕಥನದಲ್ಲಿ ಮುಖ್ಯವಾಗುತ್ತದೆ. ತನ್ನ ಮಿತ್ರನ ಮಡದಿಯನ್ನು ವಶಪಡಿಸಿಕೊಳ್ಳುವ ಪ್ರಾಣೇಶರಾಯನ ಮಗ ಗೋವಿಂದನ ಅತಿಕಾಮಿತ್ವಕ್ಕೆ ಡಾ. ವೀಣಾ ಚಿಕಿತ್ಸೆ ಮಾಡಿ ಅವನನ್ನು ಮಾನಸಿಕವಾಗಿ ಆರೋಗ್ಯ ವಂತನನ್ನಾಗಿಸಲು ಆಯುರ್ವೇದದಲ್ಲಿ ಸಂಶೋಧನೆ ನಡೆಸುತ್ತಾಳೆ. ಕಡೆಗೂ ಅವಳು ಒಂದು ಭಸ್ಮವನ್ನು ಕಂಡುಹಿಡಿಯುತ್ತಾಳೆ. ಗೋವಿಂದನನ್ನು ಗುಣಮುಖ ಮಾಡುವ ಕ್ರಿಯೆಯಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳಲು ಸಿದ್ಧವಾಗಿ ವೀಣಾಳ ಕನ್ಯಾಮಂದಿರದ ಸ್ನೇಹಿತೆ ಲಲಿತಾ ಅವನನ್ನು ಮದುವೆಯಾಗಲು ಮುಂದಾಗುತ್ತಾಳೆ. ಗೋವಿಂದನಿಗೆ ಮಾನಸಿಕ ಸ್ವಾಸ್ಥ್ಯ ಕೊನೆಗೂ ಸಿದ್ಧಿಸುತ್ತದೆ. ಅಷ್ಟೆ ಅಲ್ಲ, ವೀಣಾ ಕಂಡುಹಿಡಿದ ಭಸ್ಮ ಲೋಕಕ್ಕೇ ಉಪಯುಕ್ತ ಔಷಧಿಯಾಗ ಬಲ್ಲದು, ಅತಿಕಾಮುಕತೆಯ ರೋಗಕ್ಕೆ ಅದು ರಾಮಬಾಣ.

ಪೂರ್ವಪಶ್ಚಿಮ ಸಂಸ್ಕೃತಿಗಳ ತುಲನಾತ್ಮಕ ವಿಶ್ಲೇಷಣೆ ಈ ಕಾದಂಬರಿಯ ಇನ್ನೊಂದು ವೈಶಿಷ್ಟ್ಯ. ಕನ್ಯಾಮಂದಿರಕ್ಕೆ ಶ್ರೇಷ್ಠ ಶಿಕ್ಷಣ ತಜ್ಞನಾದ ಒಬ್ಬ ಅಮೆರಿಕನ್ ವಿದ್ವಾಂಸ, ಡಾ| ಮೈಕೇಲ್ ಭೇಟಿ ಕೊಡುತ್ತಾನೆ. ಶ್ರೀನಿವಾಸನೊಂದಿರೂ ಪ್ರೊಫೆಸರ್ ಶತಾನಂದ ನಾಯರ್ ವೀಣಾರೊಂದಿಗೂ ಅವನು ವಿಚಾರ ವಿನಿಮಯ ಮಾಡುತ್ತಾನೆ. ಇವರ ಸಂವಾದಗಳು ಭಾರತೀಯ ಸಂಸ್ಕೃತಿಯ ಸತ್ವವನ್ನು ಸಾಧಾರವಾಗಿ ಪ್ರತಿಪಾದಿಸಲು ಕಾದಂಬರಿಕಾರರಿಗೆ ಅವಕಾಶ ನೀಡುತ್ತವೆ. ಡಾ| ಮೈಕೇಲ್ ಭಾರತೀಯ ಸಂಸ್ಕೃತಿಯನ್ನು ಬಹುಮಟ್ಟಿಗೆ ಮೆಚ್ಚಿಕೊಳ್ಳುತ್ತಾನೆ. ಅಮೆರಿಕಾಕ್ಕೆ ಹೋಗಲು ವೀಣಾಗೆ ಆಹ್ವಾನ ಬಂದಾಗ ಅವಳು ತಾನು ಅಲ್ಲಿಗೆ ಅಧ್ಯಯನ ಮಾಡಲು ಹೋಗಬೇಕಾಗಿಲ್ಲ. ಅಧ್ಯಾಪನಕ್ಕೆ ಹೋಗಬಹುದೆಂದು ಸರ್ ಎಸ್. ರಾಧಾಕೃಷ್ಣನ್ ಅವರು ಹೇಳಿದಂತೆ ಹೇಳುತ್ತಾಳೆ. ಪಾಶ್ಚಾತ್ಯ ವಿಜ್ಞಾನಕ್ಕಿಂತಲೂ ಪೂರ್ವದ ಆಧ್ಯಾತ್ಮಿಕ ಜ್ಞಾನ ಹೆಚ್ಚು ಉನ್ನತ, ಗಾಢ, ಲೋಕಕಲ್ಯಾಣಕಾರಿ ಎನ್ನುವ ತಿಳುವಳಿಕೆ ಈ ಸಂವಾದಗಳಲ್ಲಿ ವ್ಯಕ್ತವಾಗುತ್ತದೆ.

ಈ ಸಂವಾದಗಳಲ್ಲಿಯೂ ಕೆಲವು ಇತರ ಸನ್ನಿವೇಶಗಳಲ್ಲಿಯೂ ಈ ಕಾದಂಬರಿ ದೇವುಡು ಅವರು ಮುಂದೆ ರಚಿಸಿದ 'ಮಹಾದರ್ಶನ' ಕಾದಂಬರಿಯ ಪೂರ್ವಸಿದ್ಧತೆಯಂತೆ ಭಾಸವಾಗುವುದು ಕುತೂಹಲಕಾರಿಯಾದ ಒಂದು ಅಂಶ. ಯಾಜ್ಞವಲ್ಕ್ಯರು ಒಂದು ಗುಡಿಸಿಲಿನಲ್ಲಿ ತಮ್ಮ ತಪಸ್ಸನ್ನು ನಡೆಸುವಾಗ ಕಾತ್ಯಾಯಿನಿ ಮೈತ್ರೇಯಿಯರು ಅವರಿಗೆ ಸಲ್ಲಿಸುವ ಸೇವೆ ಇಲ್ಲಿ ಶ್ರೀನಿವಾಸ ಒಂದು ಗುಡಿಸಿಲಿನಲ್ಲಿರುತ್ತ ವೀಣಾ ಸಲ್ಲಿಸುವ ಸೇವೆಯ ಮುಂದಿನ ಬೆಳವಣಿಗೆಯಂತೆ ತೋರುತ್ತದೆ. ಕನ್ಯಾಮಂದಿರದ ಆವರಣ ಯಾಜ್ಞವಲ್ಕ್ಯರು ನಡೆಸಿಕೊಡುವ ಜ್ಞಾನಸತ್ರಕ್ಕೆ ಜನಕಮಹಾರಾಜ ನಿರ್ಮಿಸಿರುವ ಯಾಗಮಂಟಪದ ಆವರಣದ ನೀಲನಕ್ಷೆಯಂತೆ ಕಾಣಿಸುತ್ತದೆ. ಯಾಜ್ಞವಲ್ಕ್ಯರು ಸನ್ಯಾಸ ಸ್ವೀಕಾರ ಮಾಡಿಯಾರೆಂಬ ಆತಂಕ ಅವರ ತಂದೆಯನ್ನು ಕಾಡುವಂತೆ ಶ್ರೀನಿವಾಸನ ಸನ್ಯಾಸೀಮನೋವೃತ್ತಿ ಅವನನ್ನು ತಾನು ಪತಿಯಾಗಿ ಪಡೆದುಕೊಳ್ಳಲು ಅವಕಾಶ ಕೊಡುವುದೋ

ಇಲ್ಲವೋ ಎನ್ನುವ ಕೊರಗು ವೀಣಾಳನ್ನು ಬಾಧಿಸುತ್ತದೆ. ಯಾಜ್ಞವಲ್ಕ್ಯರು ಮುಂದೆ ಸನ್ಯಾಸಿಗಳಾಗುವವರಾದರೂ ಸಂಸಾರಿಯಾಗಿ ತಾಯಿತಂದೆಯರನ್ನು ಸಂತೋಷಪಡಿಸುತ್ತಾರೆ. ಹಾಗೆಯೇ ಶ್ರೀನಿವಾಸನೂ ವೀಣಾಳನ್ನು ವರಿಸುತ್ತಾನೆ.

ಕಲಾತ್ಮಕವಾಗಿ 'ಮಹಾದರ್ಶನ' ಸಾಧಿಸುವ ಯಶಸ್ಸು 'ಡಾ| ವೀಣಾ'ಗೆ ದಕ್ಕುವುದಿಲ್ಲ. ಇದಕ್ಕೆ ವೀಣಾ ಶ್ರೀನಿವಾಸರಂತಹ ಆದರ್ಶ ಪಾತ್ರಗಳು ವಾಸ್ತವಿಕ ಕಾದಂಬರಿಯೊಂದರಲ್ಲಿ ವಿಶ್ವಸನೀಯವಾಗಿ ಚಿತ್ರಿತವಾಗಲು ಅಗತ್ಯವಾದ ವಿಶಾಲಭೂಮಿಕೆ ಇಲ್ಲಿ ಇಲ್ಲದಿರುವುದು. ಈ ಆದರ್ಶ ಪಾತ್ರಗಳ ವಿಕಾಸ ಪ್ರಕ್ರಿಯೆಗೆ ಇಲ್ಲಿ ಅವಕಾಶವೇ ಇಲ್ಲವಾಗಿದೆ. ಇಲ್ಲಿ ಪಾತ್ರಗಳಿಗಿಂತಲೂ ಅವರ ಇಲ್ಲಿ ಪಾತ್ರಗಳಿಗಿಂತಲೂ ಅವರ ವಾದವಿವಾದಗಳೇ ಪ್ರಾಶಸ್ತ್ಯ ಹೆಚ್ಚಾಗಿಬಿಟ್ಟಿದೆ..

ಗಮನಾರ್ಹವಾದ ಅಂಶವೆಂದರೆ ಒಂದು ಸಮಸ್ಯೆಯ ವಿಶ್ಲೇಷಣೆಗೆ ಉಚಿತವಾಗಬಹುದಾದ ಒಂದು ಆಕಾರವನ್ನು ಈ ಕಾದಂಬರಿ ಶೋಧಿಸುತ್ತದೆ. ಪ್ರಯೋಗ ಅಷ್ಟಾಗಿ ಯಶಸ್ವಿಯಾಗದಿದ್ದರೂ ಆ ದಿಕ್ಕಿನಲ್ಲಿ ಇದು ಒಂದು ಕುತೂಹಲಕಾರಿ ಪ್ರಯತ್ನವೆನ್ನುವುದರಲ್ಲಿ ಸಂಶಯವಿಲ್ಲ.

ಒಟ್ಟಾರೆ ಸ್ತ್ರೀವಾದವನ್ನು ಕುರಿತು ಮೊದಮೊದಲ ವೈಚಾರಿಕ ಕಾದಂಬರಿಗಳಲ್ಲೊಂದಾಗಿ, ಒಂದು ಅದ್ಭುತ ರಮ್ಯ ಪ್ರೇಮ ಕಥಾನಕವಾಗಿ, ಒಂದು ವೈಜ್ಞಾನಿಕ ಸಂಶೋಧನಾತ್ಮಕ ಕಾಲ್ಪನಿಕ ಕಥೆಯಾಗಿ, ಭಾರತೀಯ ಸಂಸ್ಕೃತಿಯ ಸಾರವತ್ತಾದ ಸಂಕ್ಷಿಪ್ತ ಚಿತ್ರವಾಗಿ 'ಮಹಾದರ್ಶನ'ದಂತಹ ಮಹತ್ವದ ಕಾದಂಬರಿಯ ಮುಂಗಾಣ್ಕೆಯಾಗಿ, ಒಂದು ಹೊಸ ಕಾದಂಬರಿ ಪ್ರಕಾರದ ಶೋಧದ ಪ್ರಯತ್ನವಾಗಿ ದೇವುಡು ಅವರ ಕೃತಿ ಶ್ರೇಣಿಯಲ್ಲಿಯೂ ಕನ್ನಡ ಕಾದಂಬರಿ ಪರಂಪರೆಯಲ್ಲಿಯೂ 'ಡಾ|ವೀಣಾ' ನಿಸ್ಸಂಶಯವಾಗಿ ತನ್ನ ಗಣ್ಯ ಸ್ಥಾನವನ್ನು ಗಳಿಸಿಕೊಳ್ಳುತ್ತದೆ.

★

ಈ ಜನ್ಮದಲ್ಲಿಯೇ ಪುನರ್ಜನ್ಮ ಸಿದ್ಧಿ

ಶ್ರೀ ಕೆ. ನರಸಿಂಹಮೂರ್ತಿ

ಪ್ರಗತಿಶೀಲ ಸಾಹಿತ್ಯ ಪ್ರವರ್ಧಮಾನವಾಗಿದ್ದ ಕಾಲದಲ್ಲಿ ಅದರ ಆದರ್ಶಗಳನ್ನು ಮೆಚ್ಚಿಯೂ ಅವುಗಳ ಸಾಧನೆಗೆ ಅದು ಸೂಚಿಸಿದ ಮಾರ್ಗವನ್ನು ಪೂರ್ಣವಾಗಿ ಅನುಮೋದಿಸದೆ ಭಾರತೀಯ ಸಂಸ್ಕೃತಿಗೆ ಹೆಚ್ಚು ಹೊಂದಿಕೆಯಾಗುವಂಥ ಸಾಧನ ಪಥ ಒಂದನ್ನು ಪ್ರತಿಪಾದಿಸುವ ಮೂಲಕ ದೇವುಡು ನರಸಿಂಹಶಾಸ್ತ್ರಿಗಳ ಸಾಮಾಜಿಕ ಕಾದಂಬರಿಗಳಲ್ಲೊಂದಾದ 'ಎರಡನೆಯ ಜನ್ಮ' ಗಮನಾರ್ಹವಾಗುತ್ತದೆ. ನಮ್ಮ ಪಾರಂಪರಿಕ ಸಂಸ್ಕೃತಿಯನ್ನೂ ಆಧುನಿಕ ಮನೋಧರ್ಮದ ಪರಾಮರ್ಶೆಯ ಬೆಳಕಿನಲ್ಲಿ ಪರಿಷ್ಕರಿಸಿಕೊಳ್ಳುತ್ತ ವಾಸ್ತವದಲ್ಲಿ ಆಚರಣೆಗೆ ಸಾಧ್ಯವಾಗಬಲ್ಲಂಥ ಜೀವನ ವಿಧಾನವನ್ನು ದೇವುಡು ಅವರು ತಮ್ಮ ಈ ಕೃತಿಯಲ್ಲಿ ಅರಸುತ್ತಾರೆ. ಇಲ್ಲಿನ ಒಂದು ಪಾತ್ರ ನಮ್ಮ ಹಿಂದಿನ ಸಾಂಪ್ರದಾಯಕ ನಂಬಿಕೆಯೊಂದಕ್ಕೆ ತನ್ನ ಬೆಂಬಲ ನೀಡುತ್ತಾಳೆ. ಈ ಜನ್ಮದಲ್ಲಿ ಸದಾಚಾರ ಮಾರ್ಗದಲ್ಲಿ ನಡೆದು ದಾನಧರ್ಮ ಮಾಡಿ ಪುಣ್ಯ ಗಳಿಸಿದರೆ ಮುಂದಿನ ಜನ್ಮದಲ್ಲಿ ತಾವು ಶ್ರೀಮಂತರಾಗಿ ಸುಖ ಪಡುತ್ತೇವೆ ಎನ್ನುವ ಅವಳ ಅಭಿಪ್ರಾಯ ಸಹಜವಾಗಿಯೇ ಅವಳ ಎಡ ಪಂಥೀಯ ಪತಿಯಿಂದ ತಿರಸ್ಕರಿಸಲ್ಪಡುತ್ತದೆ. ಅಂಥ ಉತ್ತಮ ಜನ್ಮವನ್ನು ಈ ಜನ್ಮದಲ್ಲಿಯೇ ಸಾಧಿಸಿಕೊಳ್ಳಬೇಕು, ಸಾಧಿಸಿಕೊಳ್ಳಬಲ್ಲೆವು ಎನ್ನುವ ಆಧುನಿಕ ಮನೋಧರ್ಮದ ಆಶಯ ಈ ಕಾದಂಬರಿಯಲ್ಲಿ ಶಕ್ತಿಯುತವಾಗಿ ಅಭಿವ್ಯಕ್ತಿಗೊಳ್ಳುತ್ತದೆ.

ವಿಶಿಷ್ಟ ರೀತಿ

ನಮ್ಮ ಸಂಸ್ಕೃತಿಯ ಬೆಳಕಿನಲ್ಲಿಯೂ ಇಂದಿನ ಮನೋ ವೈಜ್ಞಾನಿಕ ಸೂಕ್ಷ್ಮಗಳ ಅರಿವಿನಲ್ಲಿಯೂ ಪರಸ್ಪರ ಸಂಬಂಧಗಳನ್ನು ಪರಿಷ್ಕರಿಸಿಕೊಳ್ಳುತ್ತಾ, ಯುಕ್ತ ಆರ್ಥಿಕ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಾ, ಸಾಮಾಜಿಕ ಅಜ್ಞಾನ ಅನ್ಯಾಯಗಳ ಪಿಡುಗನ್ನು ಪರಿಹರಿಸಿಕೊಳ್ಳುತ್ತಾ ವೈಯಕ್ತಿಕ ಸಂಕಲ್ಪ ಶಕ್ತಿಯನ್ನು ಉದ್ದೀಪನಗೊಳಿಸಿ ವೃದ್ಧಿಗಳಿಸಿಕೊಳ್ಳುತ್ತ ಒಮ್ಮೆಗೇ ವೈಯಕ್ತಿಕ ಹಾಗೂ ಸಾಮಾಜಿಕ ಪುನರುದ್ಧಾರವನ್ನು ನಾವು ಸಾಧಿಸಿಕೊಳ್ಳಲು ಸಾಧ್ಯ. ಹೀಗೆ ಪ್ರಗತಿಶೀಲ ಸಾಹಿತ್ಯದ ಪ್ರಮುಖ ವಸ್ತುವನ್ನೇ ತೆಗೆದುಕೊಂಡು ಅದನ್ನು ನಮ್ಮ ದೇಶೀಯ ಸಂಸ್ಕೃತಿಗೆ ಅನುಗುಣವಾಗುವಂತೆ ತಮ್ಮದೇ ವಿಶಿಷ್ಟ ರೀತಿಯಲ್ಲಿ ದೇವುಡು ಅವರು ಈ ವಿಚಾರಾತ್ಮಕ ಕಾದಂಬರಿಯಲ್ಲಿ ವಿನ್ಯಾಸಗೊಳಿಸುತ್ತಾರೆ.

ಇಲ್ಲಿನ ನಾಲ್ಕು ಮುಖ್ಯ ಪಾತ್ರಗಳ ಮೂಲಕ ನಾಲ್ಕು ಬಗೆಯ ಸಾಮಾಜಿಕ ಸಮಸ್ಯೆಗಳನ್ನು ದೇವುಡು ಇಲ್ಲಿ ವಿಶ್ಲೇಷಿಸತೊಡಗುತ್ತಾರೆ. ಕ್ಯಾಪಿಟಲಿಸ್ಟ್ ವರ್ಗವನ್ನು ಪ್ರತಿನಿಧಿಸುವವನು ನಾಯಕ ಪಾತ್ರನಾದ ಗೋವಿಂದ. ಇವನು ಶ್ರೀಮಂತ ವ್ಯಾಪಾರಿ ಅನ್ವರ್ಥನಾಮಕ ಹಿರಣ್ಯಪ್ಪನ ಏಕಮಾತ್ರ ಪುತ್ರ. ತಂದೆ ಗಳಿಕೆಯಲ್ಲಿಯೇ ಬಾಳು ಕಳೆದವ. ಕಡೆಯಲ್ಲಿ ತೀರ್ಥಯಾತ್ರೆ ಗೋವಿಂದನಿಗೆ 'ಕೆರೆಯ ನೀರನು ಕೆರೆಗೆ ಚೆಲ್ಲುವ' ಸಾಮಾಜಿಕ ಹಿತದೃಷ್ಟಿ. ನಾರಾಯಣರಾಯನದು ವಿದ್ಯಾಕ್ಷೇತ್ರ. ಇವನು

ಸಿಟಿ ಟ್ಯುಟೋರಿಯಲ್ ಇನ್‌ಸ್ಟಿಟ್ಯೂಟ್ ಒಂದರ ಪ್ರಿನ್ಸಿಪಾಲ್, ಸಮಾಜದಲ್ಲಿ ವ್ಯಾಪಕವಾಗಿರುವ ಅನಕ್ಷರತೆ ಅಜ್ಞಾನಗಳ ನಿವಾರಣೆ ಇವನ ಜೀವನ ಧ್ಯೇಯ. ಕಮ್ಯೂನಿಸಂ ಅನ್ನು ಹೆಚ್ಚಾಗಿ ಭಾವುಕ ನೆಲೆಯಲ್ಲಿ ಎಂದು ಹೇಳಬೇಕು ಪ್ರತಿನಿಧಿಸುವವನು ಕಚೇರಿಯೊಂದರ ಗುಮಾಸ್ತೆ, ಗುಂಡಪ್ಪ. ಸಮಾಜದಲ್ಲಿ ಉತ್ಪನ್ನವಾಗುವ ಸಕಲ ಸಿರಿ ಸಂಪತ್ತೂ ಸಮ ಪಾಲಾಗಿ ಸರ್ವರಿಗೂ ಸಂದಾಯವಾಗಬೇಕೆನ್ನುವುದು ಇವನ ವಾದದ ಸಾರ. ಗೋವಿಂದ, ನಾರಾಯಣ, ಗುಂಡ ಇವರು ಮೂವರು ಗಳಸ್ಯ ಕಂಠಸ್ಯ ಎನ್ನುವಂಥ ಗೆಳೆಯರು. ಗೋವಿಂದನಿಗೆ ಆಕಸ್ಮಾತ್ತಾಗಿ ಸಿಕ್ಕಿ ಬಹುಬೇಗ ಅವನ ಆತ್ಮೀಯ ಮಿತ್ರರಲ್ಲೊಬ್ಬನಾಗುವ ಹಾಗೂ ಅವನಿಗೆ ಲಾಭದಾಯಕ ಮ್ಯಾಂಗನೀಸ್ ಸಪ್ಲೈ ಕಂಟ್ರಾಕ್ಟ್ ಒಂದನ್ನು ಒದಗಿಸಿಕೊಟ್ಟು ನೆರವಾಗುವ ಇನ್ನೊಬ್ಬ ಶ್ರೀಮಂತ ಮದರಾಸ್ ನಿವಾಸಿ ಮೊದಲಿಯಾರ್. ಮದರಾಸಿನಲ್ಲಿಯೇ ಅಷ್ಟೇ ಆಕಸ್ಮಿಕವಾಗಿ ಗೋವಿಂದನಿಗೆ ಪರಿಚಯವಾಗಿ ಅವನನ್ನು ತನ್ನ ಹಿತೈಷಿಯನ್ನಾಗಿ ಪಡೆದುಕೊಳ್ಳುವ ಇನ್ನೊಬ್ಬ ವ್ಯಕ್ತಿ ನಿಷ್ಕಾರಣವಾಗಿ ಗಂಡನಿಂದ ಹೊರದೂಡಲ್ಪಟ್ಟು ದಾಂಪತ್ಯ ವಿಚ್ಛೇದನ ಪಡೆದುಕೊಂಡು ತನಗೆ ತೆರೆದಿರುವುದೆಂದು ಅವಳು ಭಾವಿಸಿದ ಒಂದೇ ಉದ್ಯೋಗವಕಾಶವನ್ನು ಉಪಯೋಗಿಸಿಕೊಂಡು ಸ್ವಾವಲಂಬಿಯಾಗಿ ತನಗೆ ಮುಂಚಿನಿಂದಲೂ ಇದ್ದ ಸಮಾಜ ಸೇವಾಕಾಂಕ್ಷೆಯನ್ನು ಈಡೇರಿಸಿಕೊಳ್ಳುವ ಲೀಲಾ ಎಂಬ ಧೈರ್ಯಸ್ಥ ಹೆಣ್ಣು. ಆಗಾಗ ರಾತ್ರಿಗಳಲ್ಲಿ ವೇಶ್ಯೆಯಾಗಿ ತಾನು ಪುರುಷರಿಂದ ಸುಲಿದುಕೊಳ್ಳುವ ಹಣದಿಂದ ಹಗಲು ಹೊತ್ತಿನಲ್ಲಿ ಬಡ ರೋಗಿಗಳಿಗೆ ಉಚಿತ ಅಥವಾ ಅಲ್ಪ ಶುಲ್ಕದ ಶುಶ್ರೂಷೆ ನಡೆಸುವ ಇವಳು ಒಬ್ಬ ಹೋಮಿಯೋಪತಿ ವೈದ್ಯೆ. ಸಿರಿವಂತರು ಟ್ರಸ್ಟಿಗಳಾಗಿ ಸಮಾಜ ಹಿತ ಸಾಧಿಸುವ ಕಲ್ಪನೆ, ಹಿಂಸಾಮಾರ್ಗ, ವರ್ಜ್ಯವೆಂದು ಪರಿಗಣಿಸುವ ನಮ್ಮ ಸಂಸ್ಕೃತಿಗೆ ಹೊಂದಿಕೊಳ್ಳುವಂತೆ ರೂಪಾಂತರಗೊಳ್ಳುವ ಕಮ್ಯೂನಿಸಂನ ಅಂತಸ್ಸತ್ವ ಪುರುಷ ಕೇಂದ್ರಿತ ಸಮಾಜ ವ್ಯವಸ್ಥೆಯಲ್ಲಿ ಸಂಕಷ್ಟಕ್ಕೆ ಸಿಕ್ಕ ಸ್ತ್ರೀಯರ ಪರಿಸ್ಥಿತಿಯ ಸೂಕ್ತ ಸುಧಾರಣೆ, ಸಮಾಜದಲ್ಲಿ ವ್ಯಾಪಕವಾಗಿ ನಡೆಯಬೇಕಾದ ಜ್ಞಾನ ಪ್ರಸಾರ, ಈ ಆಶಯಗಳು ಕಾದಂಬರಿಯ ಸಂಕೀರ್ಣ ಕ್ರಿಯೆಯನ್ನು ರೂಪಿಸುವ ಶಕ್ತಿಗಳು.

ಜೊತೆಗೆ ದಾಂಪತ್ಯದಲ್ಲಿ ತಟ್ಟನೆ ತಲೆದೋರಬಹುದಾದ ವಿರಸವೂ ಮತ್ತೆ ಯತ್ನತಃ ಸಾಧಿತವಾಗಬಲ್ಲ ಸಾಮರಸ್ಯವೂ ಕಾದಂಬರಿಯಲ್ಲಿ ಸ್ವಾರಸ್ಯಪೂರ್ಣವಾಗಿ ಚಿತ್ರಿತವಾಗಿದೆ. ವಿರಸ ಎಳ್ಳಷ್ಟೂ ಕಲುಷಿತಗೊಳಿಸಿದ ಅನ್ಯೋನ್ಯತೆಗಳೂ ಅವಿಚ್ಛಿನ್ನ ಪ್ರೇಮಕ್ಕೂ ಮಾದರಿಯಂತಿರುವ ಸುಭದ್ರ ಸಂಸಾರ ನಾರಾಯಣರಾಯ ಸರಸಮ್ಮರದು. ಗೋವಿಂದ ಜಯರ ದಾಂಪತ್ಯದಲ್ಲಿ ಗೋವಿಂದನ ಸಾಮಾಜಿಕ ಹಿತ ಯೋಜನೆಯ ಬಗ್ಗೆ ಜಯ ತಳೆಯುವ ನಿಲುವು ಅವರ ನಡುವಣ ವಿರಸಕ್ಕೆ ಕಾರಣವಾದರೂ ಜಯಳ ಗಾಢ ಪ್ರೇಮನಿಷ್ಠೆಗೂ ಗೋವಿಂದನ ಸ್ವಂತ ವಿವೇಚನೆ ಹಾಗೂ ಅವರ ತಾಯಿ ತಂದೆಯರ ಹಿತೋಪದೇಶವೂ ಅವರಲ್ಲಿ ಹಿಂದಿದ್ದ ಸಾಮರಸ್ಯವನ್ನು ಪುನಸ್ಸೃಷ್ಟಿಸಲು ಶಕ್ತವಾಗುತ್ತದೆ. ಗುಂಡ ಆಕ್ರೋಶಪೂರಿತ ಸಂತತ ಭಾಷಣ ಪ್ರವೃತ್ತಿ ಸುಧಾರಿಸುವುದರಿಂದಲೂ ಅವರ ಸಂಬಂಧದಲ್ಲಿ ಕೊರತೆಯಾಗಿದ್ದ ಲೈಂಗಿಕ ತೃಪ್ತಿ ಮತ್ತು ಲಭ್ಯವಾಗುವುದರಿಂದಲೂ ಗುಂಡ ಶಂಕರಮ್ಮರ ದಾಂಪತ್ಯವೂ ಸುಖೀಸಂಸಾರವಾಗಿ ಪರಿಣಮಿಸುತ್ತದೆ. ಮಾನವಂತ ಬದುಕಿನ

ಅವಕಾಶಕ್ಕಾಗಿ ಹಾತೊರೆಯುವ ಲೀಲಾಳಿಗೆ ಪ್ರೀತಿಯ ಪತ್ನಿಯ ಹಠಾತ್ ಸಾವಿನಿಂದ ವಿಹ್ವಲವಾಗಿದ್ದ ಮೊದಲಿಯಾರ್‌ನ ಪರಿಚಯ ಮಾಡಿಸಿಕೊಟ್ಟು ಅವರಿಬ್ಬರೂ ಪುನಃ ದಾಂಪತ್ಯ ಸುಖವನ್ನು ಅನುಭವಿಸುವಂತೆ ಗೋವಿಂದ ಏರ್ಪಡಿಸುತ್ತಾನೆ. ದಾಂಪತ್ಯದಲ್ಲಿ ಸಾಂದರ್ಭಿಕವಾಗಿ ಉದ್ಭವಿಸಬಹುದಾದ ವಿರಸದ ಚಿತ್ರಣದಲ್ಲಿಯೂ ಪರಸ್ಪರ ಪ್ರೇಮಸಂಬಂಧದ ಸರಸ ಶೃಂಗಾರದ ಚಿತ್ರಣದಲ್ಲಿಯೂ ದೇವುಡು ತಮ್ಮ ಮನೋವೈಜ್ಞಾನಿಕ ಸೂಕ್ಷ್ಮ ಸಂವೇದನಾ ಶಕ್ತಿಯನ್ನೂ ನಾಟಕೀಯ ಪ್ರಜ್ಞೆಯನ್ನೂ ಕಾವ್ಯಾತ್ಮಕ ರಸಿಕತೆಯನ್ನೂ ಪ್ರದರ್ಶಿಸುತ್ತಾರೆ.

ಸಾಮಾಜಿಕ ಹಾಗೂ ಕೌಟುಂಬಿಕ, ಎರಡು ನೆಲೆಗಳಲ್ಲಿಯೂ ಕಾದಂಬರಿಯ ಪಾತ್ರಗಳು ಈ ಜೀವನದಲ್ಲಿಯೇ ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಮ್ಮ ತಮ್ಮ ಗುರಿಗಳನ್ನು ಮುಟ್ಟಿ ಪುನರ್ಜನ್ಮ ಪಡೆದುಕೊಳ್ಳುವುದರಲ್ಲಿ ಯಶಸ್ವಿಗಳಾಗುತ್ತಾರೆ. ಸಾಮಾಜಿಕ ಸ್ಥಿತಿಗತಿಗಳ ಸೂಕ್ಷ್ಮ ವಿಶ್ಲೇಷಣೆಯಲ್ಲಿ ವಿಚಾರಾತ್ಮಕವಾಗಿ ಬೆಳೆಯುವ ಕಾದಂಬರಿ ದಾಂಪತ್ಯದ ಸರಸವಿರಸಗಳು ನಾಟಕೀಯ ಚಿತ್ರಣದಲ್ಲಿ ಭಾವನಾತ್ಮಕವಾಗಿ ಹೃದಯಸ್ಪರ್ಶಿಯಾಗುತ್ತದೆ. ವೈಚಾರಿಕ ವಾದ ವಿವಾದಗಳಲ್ಲಿ ವ್ಯಕ್ತವಾಗುವ ಆಕ್ರೋಶವೂ ಭಾವನಾತ್ಮಕ ನೆಲೆಯಲ್ಲಿ ವಿರಸದಿಂದುದಿಸುವ ಅತೀವ ವ್ಯಥೆಯೂ ಮುಂದೆ ಶಾಂತಿ ಸೌಖ್ಯಗಳಾಗಿ ಪರಿವರ್ತಿತವಾಗುವ ರಸವಿದ್ಯೆ ದೇವುಡು ಅವರ ಕಲಾ ಪ್ರೌಢಿಮೆಯ ರಹಸ್ಯ, ವೈಶಿಷ್ಟ್ಯ. ಪಾತ್ರಗಳು ತಮ್ಮ ಸ್ವಭಾವದಲ್ಲಿಯೂ ಇತರರೊಡನೆಯ ಸಂಬಂಧಗಳಲ್ಲಿಯೂ ಸಾಧಿಸಿಕೊಳ್ಳುವ ಸಂಸ್ಕಾರ ಮುಂದಿನ ಜನ್ಮದಲ್ಲಿ ಸಿಗಬಹುದೆಂದು ಸಂಪ್ರದಾಯಸ್ಥರು ನಂಬುವ ದುಃಖ ಪರಿಹಾರ ಸೌಖ್ಯಪ್ರಾಪ್ತಿಗಳನ್ನು ಈ ಜನ್ಮದಲ್ಲಿಯೇ ಅವರಿಗೆ ತಂದುಕೊಡುತ್ತದೆ. ಇಂಥ ಶ್ರೇಯಸ್ಕರ ಸಂಸ್ಕಾರದ ಸಾಧನೆಯೇ ಈ ಕಾದಂಬರಿಯ ಸಂದೇಶವೆಂದರೂ ಸಲ್ಲುತ್ತದೆ.

ಪ್ರಗತಿಶೀಲ ಚಳವಳಿಯ ಮುಖ್ಯ ವಿಚಾರಗಳನ್ನು ದೇವುಡು ಎದುರಿಸುವ ಬಗೆ ಗಮನಾರ್ಹ. ಕಮ್ಯೂನಿಸಂನ ಆಶಯಗಳನ್ನು ಸಾಕಷ್ಟು ಸೂಕ್ಷ್ಮವಾಗಿಯೇ ಗೆಳೆಯರ ಮುಂದೆ ಮಂಡಿಸುವವನು ಗುಂಡ, ಲೇಖಕರ ಅಭಿಪ್ರಾಯಗಳನ್ನು ಬಹುಮಟ್ಟಿಗೆ ಪ್ರತಿಬಿಂಬಿಸುವಂತೆ ತೋರುವ ಕೇಂದ್ರಸ್ಥ ಪಾತ್ರ ನಾರಾಯಣನದು. ಅವನ ದೃಷ್ಟಿಯಲ್ಲಿ ಸಮಾಜದ ಅಶಾಂತಿಗೆ ಕಾರಣ ಅನಕ್ಷರತೆ, ಅಜ್ಞಾನ, ಸೋಮಾರಿತನ, ಹಾಗೂ ಅತಿ ಶೀಘ್ರವಾಗಿ ಸಾಗುತ್ತಿರುವ ನಗರೀಕರಣ. ಒಂದು ಜನತಾ ವಿಶ್ವವಿದ್ಯಾನಿಲಯದ ಸ್ಥಾಪನೆ ಅವನ ಒಂದು ಮುಖ್ಯಯೋಜನೆ. ಬಸವಣ್ಣನವರು ಹೇಳುವಂತೆ ಕಾಯಕವೇ ಕೈಲಾಸವೆನ್ನುನವುದು ಅವನು ಉಚ್ಚರಿಸುವ ಒಂದು ಮಂತ್ರ. ಗುಂಡ ಹೇಳುವ ಒಬ್ಬೊಬ್ಬರಿಗೂ ಅನ್ನ ಬಟ್ಟೆ ಒಂದು ಗೂಡು ಒದಗಬೇಕೆನ್ನುವ ಆಶಯ ಗೋವಿಂದ ನಾರಾಯಣರ ಆಶಯ ಸಹ, ಸರ್ವೆಂಟ್ಸ್ ಆಫ್ ಇಂಡಿಯದಂತಹ ಸಂಸ್ಥೆಯೊಂದರ ಸ್ಥಾಪನೆ, ಜನತೆಯ ಸೌಕರ್ಯಕ್ಕಾಗಿಯೂ ಹೆಚ್ಚು ಉದ್ಯೋಗಾವಕಾಶಗಳ ಸೃಷ್ಟಿಗೂ ನೆರವಾಗುವಂಥ ಒಂದು ಬೃಹದ್ಗೃಹ ನಿರ್ಮಾಣ ಯೋಜನೆ ಗೋವಿಂದನದು. ಪ್ರೈವೇಟ್ ಪ್ರಾಪರ್ಟಿ ಅಬಾಲಿಷ್ ಮಾಡಬೇಕೆಂದು ಒತ್ತಾಯ ಮಾಡುವ ಗುಂಡನಿಗೆ ಅದರಿಂದ ಬಡತನವೇನಾದರೂ ಅಬಾಲಿಷ್ ಆಗುತ್ತದೆಯೇ ಎಂದು ಪ್ರತಿಪ್ರಶ್ನೆ ಹಾಕುವ ನಾರಾಯಣ ಅಬಾಲಿಷ್ ಆಗಬೇಕಾದುದು ಲೇಜಿನೆಸ್ ಎನ್ನುತ್ತಾನೆ. ಹಿಂದೆ ನಡೆಯುತ್ತಿದ್ದ ಹರಿಕಥೆ ಪುರಾಣ ಪ್ರಸಂಗಗಳಿಂದಾದರೂ ಆಗುತ್ತಿದ್ದ ಒಂದಿಷ್ಟು

ಜ್ಞಾನ ಪ್ರಸಾರ ಇಂದು ಪೂರಾ ನಿಂತೇಹೋಗಿರುವುದಕ್ಕೆ ನಾರಾಯಣ ವಿಷಾದಿಸುತ್ತಾನೆ. ಆವನ ವಿದ್ಯಾವರ್ಧಕ ಚಟುವಟಿಕೆಗಳಿಗೂ ಯೋಜನೆಗಳಿಗೂ ಗೋವಿಂದನ ಆರ್ಥಿಕ ಬೆಂಬಲವಿದ್ದೇ ಇದೆ.

ವೇಶ್ಯಾವೃತ್ತಿಯ ಬಗ್ಗೆ ಪ್ರಗತಿಶೀಲರ ಹಾಗೂ ದೇವುಡು ಅವರ ನಿಲುವುಗಳು ಲೈಂಗಿಕ ಶೋಷಣೆಯ ವಿಷಯದಲ್ಲಿ ಪ್ರತಿಭಟನಾತ್ಮಕವಾಗಿದ್ದರೂ ಪ್ರಗತಿ ಶೀಲರ ಲೇಖಕರೊಬ್ಬರ ಒಂದು ಕತೆಯಲ್ಲಿ ತನ್ನ ಹೆಂಡತಿಯೊಡನೆ ಜಗಳವಾಡಿದ ಗಂಡ ಅವಳಿಗೆ ಬುದ್ಧಿ ಕಲಿಸುತ್ತೇನೆಂದು ಒಬ್ಬ ಸೂಳೆಯ ಮನೆಗೆ ಹೋಗುತ್ತಾನೆ ಹಾಗೂ ಕೇಳಿಕೊಳ್ಳುತ್ತಾನೆ, ಗೆದ್ದವರು ಯಾರು ಎಂದು. ಇಂಥದೇ ಒಂದು ಸನ್ನಿವೇಶ ದೇವುಡು ಅವರ ಈ ಕಾದಂಬರಿಯಲ್ಲಿಯೂ ನಮಗೆದುರಾಗುತ್ತದೆ. ಆದರೆ ದೇವುಡು ಅದನ್ನು ಚಿತ್ರಿಸುವ ರೀತಿಯೇ ಬೇರೆ. ತನ್ನ ಯೋಜನೆಗಳಿಗೆ ವಿರೋಧ ವ್ಯಕ್ತಪಡಿಸಿದ ಜಯಳ ಮೇಲೆ ಅಸಾಧ್ಯ ರೋಷಗೊಂಡ ಗೋವಿಂದ ವ್ಯಾವಹಾರಿಕ ಕಾರಣಗಳಿಂದಾಗಿ ಕೂಡಲೆ ಮದರಾಸಿಗೆ ಹೋದಾಗ ಅನಿರೀಕ್ಷಿತವಾಗಿ ಒಬ್ಬ ರಿಕ್ಷಾವಾಲಾನಿಂದ ಲೀಲಾಳ ಮನೆಗೆ ಒಂದು ರಾತ್ರಿ ಕರೆದೊಯ್ಯಲ್ಪಡುತ್ತಾನೆ. ಹೆಂಡತಿಗೆ ಏಕೆ ಈ ವೇಶ್ಯಾ ಸಂಸರ್ಗದ ಮೂಲಕ ಬುದ್ಧಿ ಕಲಿಸಬಾರದು ಎಂದೂ ಒಮ್ಮೆ ಅವನಿಗೂ ಎನಿಸುತ್ತದೆ. ಆದರೆ ಅವನ ವಿವೇಚನಾಶಕ್ತಿಯೂ ತಾಯಿತಂದೆಯರ ಹಿತೋಕ್ತಿಗಳು ಅವನನ್ನು ನಿಯಂತ್ರಿಸುತ್ತವೆ. ಅವನು ಅವಳ ಸ್ನೇಹಿತನಾಗುತ್ತಾನೆ, ಅವಳ ಶೋಚನೀಯ ಶೋಷಿತತೆಗೆ ಮರುಗುತ್ತಾನೆ, ಅವಳ ಪುನರ್ವಿವಾಹಕ್ಕೆ ಸಿದ್ಧತೆ ನಡೆಸುತ್ತಾನೆ. ಶ್ರೀಮಂತರಿಗೆ ಹೆಣ್ಣೆಂದರೆ ಯಾವಾಗಲೂ ಟೆಂಪೊರೆರಿ ಇಂಟರೆಸ್ಟ್ ಅಷ್ಟೆ ಎನ್ನುತ್ತಿದ್ದ ಲೀಲಾಳಿಗೆ ಅವಳಲ್ಲಿ ಪರ್ಮನೆಂಟ್ ಇಂಟರೆಸ್ಟ್ ಹೊಂದಿರುವಂಥ ಶ್ರೀಮಂತನೇ ದೊರಕುತ್ತಾನೆ. ಇಲ್ಲಿನ ಲೀಲಾ, ಗೋವಿಂದ, ಮೊದಲಿಯಾರ್ ಈ ಮೂವರ ಪಾತ್ರಚಿತ್ರಣದಲ್ಲಿ ದೇವುಡು ತೋರಿಸುವ ಸಂಯಮ ಸಂಸ್ಕಾರಗಳು ಅವರ ಜೀವನದರ್ಶನದ ದ್ಯೋತಕಗಳು.

ವೈಚಾರಿಕ ನೆಲೆಯಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಅಗಾಧ ಶ್ರದ್ಧೆ, ಸಮಕಾಲೀನ ಸಾಮಾಜಿಕ ಸುಧಾರಣೆಯ ವಿಷಯದಲ್ಲಿ ಆಳವಾದ ಕಾಳಜಿ, ವಾಸ್ತವ ಚಿತ್ರಣದಲ್ಲಿಯೂ ಆದರ್ಶಪ್ರಿಯತೆ ಹಾಗೂ ಆಶಾವಾದಿತ್ವ ಇವುಗಳನ್ನು ಮೈಗೂಡಿಸಿಕೊಂಡು ಬೌದ್ಧಿಕವಾಗಿ ನಮ್ಮ ಗಮನ ಸೆಳೆಯುವ ದೇವುಡು ಅವರ 'ಎರಡನೆಯ ಜನ್ಮ' ರಸಾತ್ಮಕವಾಗಿ ವೈವಾಹಿಕ ಸಂಬಂಧಗಳನ್ನು ವಿಶ್ಲೇಷಿಸುತ್ತ ಒಂದು ದಾಂಪತ್ಯ ದೀಪಿಕೆಯೇ ಆಗಿ ರಸಿಕ ಮನೋರಂಜನಿಯಾಗಿ ಪರಿಣಮಿಸಿದೆ.

★

ಗಂಭೀರ ಕಾವ್ಯ ನಾಟಕದ ಮರುಸೃಷ್ಟಿ

ಶ್ರೀ ಕೆ ನರಸಿಂಹಮೂರ್ತಿ

ಉದ್ದಾಮ ವಿದ್ವಾಂಸರೂ ನಮ್ಮ ಪ್ರಮುಖ ಕಾದಂಬರಿಕಾರರಲ್ಲೊಬ್ಬರೂ ಆದ ದೇವುಡು ನರಸಿಂಹಶಾಸ್ತ್ರಿಗಳು ಶ್ರೇಷ್ಠ ನಟರೂ ಆಗಿದ್ದರು. ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್‌ನ ಸದಸ್ಯರಾಗಿದ್ದ ದೇವುಡು 'ನಚಿಕೇತ' 'ಮಂಡೋದರಿ' ಹಾಗೂ 'ಯಶೋಧರಾ' ಮೊದಲಾದ ನಾಟಕಗಳಲ್ಲಿ ಪ್ರಧಾನ ಭೂಮಿಕೆಯಗಳಲ್ಲಿಯೇ ಅಭಿನಯಿಸುತ್ತಿದ್ದರು. 'ನಚಿಕೇತ' ದಲ್ಲಿನ ಅವರ ಅಮೋಘ ನಟನಾ ವೈಖರಿ ಈ ಲೇಖಕನ ನೆನಪಿನಲ್ಲಿ ಹಸಿರಾಗಿ ಉಳಿದಿದೆ. ಅಂತಹ ಬಹುಮುಖ ಪ್ರತಿಭಾ ಸಂಪನ್ನರು ನಮ್ಮ ಗಣನೀಯ ನಾಟಕಕಾರಲೊಬ್ಬರಾಗದಿದ್ದುದು ಒಂದು ಸೋಜಿಗದ ಸಂಗತಿ. ಅವರ ಸ್ವಂತ ನಾಟಕ ಕೃತಿ ' ಯಾಜ್ಞವಲ್ಕ್ಯ' ಅಷ್ಟಾಗಿ ನಾಟಕೀಯ ಗುಣವನ್ನು ಮೈಗೂಡಿಸಿಕೊಳ್ಳದೆ ಅಯಶಸ್ವಿಯಾಯಿತು. ಅದು ಕಾದಂಬರಿಯಾಗಿಯೇ ಹೆಚ್ಚು ಶೋಭಿಸಿತು. ಆದರೆ ನಾಟಕ ಕ್ಷೇತ್ರದಲ್ಲಿ ಅವರು ನೀಡಿರುವ ಗಮನಾರ್ಹ ಕೊಡುಗೆ ಇಲ್ಲದಿಲ್ಲ. ಈ ಶತಮಾನದ ಆದ್ಯ ದಶಕಗಳ ಜಾರ್ಜಿಯನ್ ಕವಿಗಳ ಅಗ್ರಪಂಕ್ತಿಯಲ್ಲಿ ನಿಲ್ಲುವ ಜಾನ್ ಮ್ಯಾನ್ಸ್‌ಫೀಲ್ಡ್‌ನ 'ದಿ ಟ್ರಯಲ್ ಆಫ್ ಜೀಸಸ್' ('ಏಸುವಿನ ವಿಚಾರಣೆ') ಎಂಬ ಗಂಭೀರ ಕಾವ್ಯ ನಾಟಕದ ಅವರ ಅನುವಾದ ಒಂದೆರಡು ಅಗತ್ಯವಾದ ಬದಲಾವಣೆಗಳೊಂದಿಗೆ ರಂಗಮಂಚದ ಮೇಲೆ ರಂಜಿಸಬಲ್ಲ ಕೃತಿ. ಇದು ಇನ್ನೂ ರಂಗಪ್ರದರ್ಶನವನ್ನು ಕಂಡಂತೆ ತೋರುವುದಿಲ್ಲ.

ಇಂಗ್ಲಿಷ್ ಕಾವ್ಯಪ್ರಿಯರಿಗೆ ಮ್ಯಾನ್ಸ್‌ಫೀಲ್ಡ್‌ನ ಹೆಸರು ನೆನಪಿಗೆ ತರುವುದು ಹೆಚ್ಚಾಗಿ ಅವನ 'ಸೀ ಫೀವರ್' ('ಕಡಲ ಜ್ವರ ಅಥವಾ ಹಂಬಲ') 'ಕಾರ್ಗೋಸ್' ('ಹಡಗುಗಳಲ್ಲಿ ಸಾಗುವ ಸರಕುಗಳು') ' ಬ್ಯೂಟ್' ('ಸೌಂದರ್ಯ') ಇವುಗಳಂಥ ಸುಂದರ ಭಾವಗೀತೆಗಳು. ಆದರೆ ಅವನು ಒಳ್ಳೆಯ ನೀಳ್ಗವನಗಳನ್ನೂ ಬರೆದಿದ್ದಾನೆ: 'ಪಾಪಿಯೊಬ್ಬನು ಪಶ್ಚಾತ್ತಾಪದ ಮೂಲಕ ತನ್ನ ಉದ್ಧಾರವನ್ನು ಕಂಡುಕೊಳ್ಳುವ 'ದಿ ಎವರ್ ಲಾಸ್ಟಿಂಗ್ ಮರ್ಸಿ' ('ಅನಂತ ಕೃಪೆ') ಅಲ್ಲಿನ ನಾವಿಕ ವರ್ಗದವರೊಂದಿಗೆ ಸಂಘರ್ಷಕ್ಕೊಳಗಾಗುವ ಹಡಗೊಂದರ ಕಲಾವಿದನಾದ ಒಬ್ಬ ಪ್ರಯಾಣಿಕನ ನಿಲುವನ್ನು ಚಿತ್ರಿಸುವ ' ಡಾಬರ್' ಹಾಗೂ ಬೇಟೆಯ ಹಿಂಸಾತ್ಮಕತೆಗೆ ರೋಸಿ ಹೋದ ಕವಿ ನೀಡುವ ನರಿ ಬೇಟೆಯ ತುಂಬಾ ಲವಲವಿಕೆಯ ವರ್ಣನೆಯುಳ್ಳ 'ರಿಯೊನಾಲ್ಡ್ ದಿ ಫಾಕ್ಸ್' ಇವುಗಳನ್ನು ಇಲ್ಲಿ ಹೆಸರಿಸಬಹುದು.

ಗಮನಾರ್ಹ ಕೃತಿ

ಜನಸಾಮಾನ್ಯರಿಗೆ ಕಾವ್ಯವನ್ನು ಮುಟ್ಟಿಸಿದವನೆಂಬ ಹೆಮ್ಮೆಯ ಮ್ಯಾನ್ಸಫೀಲ್ಡ್ ೧೯೩೦ರಲ್ಲಿ ಪೊಯೆಟ್ ಲಾರಿಯೆಟ್ ಸಹ ಆದ. ಕಾದಂಬರಿ ಕ್ಷೇತ್ರದಲ್ಲಿಯೂ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿಯೂ ಕೈಯಾಡಿಸುವ ಮ್ಯಾನ್ಸ್‌ಫೀಲ್ಡ್ 'ಏಸುವಿನ ವಿಚಾರಣೆ' (೧೯೨೬) ಯೊಂದಿಗೆ 'ದಿ ಕಮಿಂಗ್ ಆಫ್ ಕ್ರೈಸ್ಟ್ ,('ಕ್ರೈಸ್ತನ ಆಗಮನ') (೧೯೨೮) ಎಂಬ ಇನ್ನೊಂದು ನಾಟಕವನ್ನೂ

ರಚಿಸಿದ್ದಾನೆ. ಇವೆರಡು ನಾಟಕಗಳು ಅಂಥ ಮಹತ್ತ್ವದ ಕೃತಿಗಳೇನಲ್ಲ. ಹುತಾತ್ಮರ ಬಲಿದಾನದಂಥ ವಸ್ತುವನ್ನುಳ್ಳ ಈ ಕಾಲಮಾನದ ಮಹತ್ವಪೂರ್ಣ ನಾಟಕಗಳೆಂದರೆ ಜಾರ್ಜ್ ಬರ್ನಾರ್ಡ್ ಷಾನ 'ಸೇಂಟ್ ಜೋನ್' (೧೯೨೩) ಹಾಗೂ ಟಿ.ಎಸ್ ಎಲಿಯಟ್‌ನ 'ಮರ್ಡರ್ ಇನ್ ದಿ ಕಾಥಿಡ್ರಲ್' (೧೯೩೫). ಈ ಮಟ್ಟ ಮ್ಯಾನ್ಸ್‌ಫೀಲ್ಡ್‌ನದಲ್ಲವಾದರೂ 'ಏಸುವಿನ ವಿಚಾರಣೆ' ಗಮನಾರ್ಹ ಗಂಭೀರ ಕೃತಿ. ದೇವುಡು ಅವರದು ಅದರ ಅನುವಾದವಾದರೂ ನಾಟಕೀಯ ಗುಣಸಂಪನ್ನ ಪುನಸ್ಸೃಷ್ಟಿ.

'ಏಸುವಿನ ವಿಚಾರಣೆ' ಗ್ರೀಕ್ ದುರಂತ ನಾಟಕಗಳ ಪಡಿಯಚ್ಚಿನಲ್ಲಿ ಮೂಡಿರುವ ಪ್ರೊಲಾಗ್ ಎಪಿಲಾಗ್, ಮೇಳಗೀತಗಳುಳ್ಳ ಮೂರಂಕದ ಕಾವ್ಯ ನಾಟಕ. ನಿಶ್ಚಿತ ಅಂತ್ಯಕ್ಕೆ ಅಭಿಮುಖನಾಗಿಯೂ ಕ್ರಿಸ್ತನು ಪ್ರಕಟಿಸುವ ಸಂಕಲ್ಪಶಕ್ತಿ ದೃಢಚಿತ್ತತೆ ಪ್ರೊಲಾಗ್‌ನ ವಿವೇಕ ಹಾಗೂ ಏಸು ಅವರ ಸಂಭಾಷಣೆಯ ಸಾರಸ್ವಾರಸ್ಯ. ಆದರೆ ಮಾತು ಹೆಚ್ಚಾಯಿತು ಎಂದು ಯಾರಿಗೂ ಎನಿಸೀತು. ನಾಟಕದ ಅಂತ್ಯದಲ್ಲಿ ಕ್ರಿಸ್ತನೇ ಪ್ರತ್ಯಕ್ಷನಾಗಿ ಆಡುವ ಮಾತುಗಳು ನಾಟಕಕ್ಕೆ ಅರ್ಥಪೂರ್ಣತೆಯನ್ನು ತಂದು ಪರಿಣಾಮಕಾರಿಯಾಗಿವೆ. ಮೇಳಗೀತೆಗಳಲ್ಲಿ ಕಲ್ಪನೆ ಮೆಚ್ಚುಗೆಯಾದರೂ ಗೀತೆಗಳು ಲಯದ ದೃಷ್ಟಿಯಿಂದ ಮಧುರ ರಚನೆಗಳೆಂದು ಹೇಳುವುದು ಕಷ್ಟ. ರಂಗಪ್ರಯೋಗದಲ್ಲಿ ಪ್ರೊಲಾಗ್ ಹಾಗೂ ಮೇಳಗೀತೆಗಳನ್ನು ಮೊಟಕುಗೊಳಿಸುವ ನಿರ್ಧಾರವನ್ನು ನಿರ್ದೇಶಕರು ತೆಗೆದುಕೊಂಡರೆ ಆಶ್ಚರ್ಯಪಡಬೇಕಾಗಿಲ್ಲ.

ಗ್ರೀಕ್ ನಾಟಕದ ಪ್ರಕಾರಕ್ಕೆ ಅಗತ್ಯವೆನಿಸುವ ಮೂರೂ ಐಕ್ಯಗಳು ಇಲ್ಲಿ ಸಾಧಿತವಾಗಿದೆ. ಏಸುವಿನ ವಿಚಾರಣೆ ಯೆಹೂದಿ ಮುಖ್ಯ ಆಚಾರ್ಯ ಕಯ್ಯಫಸ್ ಮತ್ತು ಅವನ ಮಾವ ಅನ್ನಸ್ ಅವರ ಮುಂದೆ ಆರಂಭವಾಗಿ ರೋಮನ್ ಚಕ್ರಾಧಿಪತಿಯ ಪ್ರಾದೇಶಿಕ ಪ್ರತಿನಿಧಿ ಪಾಂಟಿಯಸ್ ಪೈಲೇಟನ ಮುಂದೆ ಮುಕ್ತಾಯವಾಗುತ್ತದೆ. ಮಧ್ಯಂತರದಲ್ಲಿ ಪೈಲೇಟ್ ಏಸುವನ್ನು ಅಧಿಕಾರ ವ್ಯಾಪ್ತಿಯ ತಾಂತ್ರಿಕ ಕಾರಣಕ್ಕಾಗಿ ರಾಜಾ ಹೆರಾಡ್‌ನ ಬಳಿಗೆ ಕಳುಹಿಸುತ್ತಾನೆ. ಹೆರಾಡ್ ಮತ್ತೆ ಅವನನ್ನು ಪೈಲೇಟಿಗೇ ಒಪ್ಪಿಸುತ್ತಾನೆ. ಹೆರಾಡ್‌ನ ಮುಂದೆ ನಡೆಯುವ ವಿಚಾರಣೆ ವರದಿಯಾಗಿ ಬರುತ್ತದೆಯೇ ವಿನಾ ದೃಶ್ಯವಾಗಿ ಬರುವುದಿಲ್ಲ. ಯೆಹೂದೀ ದೇವಾಲಯ, ಪೈಲೇಟ್‌ನ ನ್ಯಾಯಾಲಯ ಮತ್ತು ಪೈಲೇಟ್‌ನ ನಿವಾಸ ಇವುಗಳಲ್ಲಿ ಮಾತ್ರ ಕ್ರಿಯೆ ನಡೆಯುತ್ತದೆ. ಅಲ್ಲದೆ ವಿಚಾರಣೆ ನಿರಂತರವಾಗಿ ನಡೆದು ಪೂರ್ವಸಿದ್ಧವಾದ ಪರಿಣಾಮದಲ್ಲಿ ಕೊನೆಗೊಳ್ಳುತ್ತದೆ.

'ವಿಚಾರಣೆ' ಎನ್ನುವ ಶಬ್ದವೇ ಇಲ್ಲಿ ವ್ಯಂಗ್ಯಾರ್ಥ ದ್ಯೋತಕ. ಒಂದು ದೃಷ್ಟಿಯಿಂದ ತುಂಬಾ ಕ್ರಮಬದ್ಧವಾಗಿನಡೆಯುವ ವಿಚಾರಣೆ ಪೂರ್ವ ನಿರ್ಧಾರಿತವಾದುದಾಗಿ ವಿಚಾರಣೆ ಎನ್ನುವ ಶಬ್ದಕ್ಕೇ ಅಪಮಾನವೆನಿಸುತ್ತದೆ. ಕಯ್ಯಫಸ್, ಪೈಲೇಟ್ ಇಬ್ಬರಿಗೂ ಏಸುವಿನಲ್ಲಿ ಏನೂ ತಪ್ಪು ಕಾಣುವುದಿಲ್ಲ. ಕಂಡ ಲೋಪವೂ ಮರಣಾಂತಿಕ ಶಿಕ್ಷೆಯನ್ನು ಅಪೇಕ್ಷಿಸುವಂತಹುದಲ್ಲ. ಇಷ್ಟಾಗಿಯೂ ಅವರು ಏಸುವನ್ನು ಶಿಲುಬೆಗೆ ಏರಿಸುವಂತಹ ನಿರ್ಧಾರಕ್ಕೆ ಬರುತ್ತಾರೆ. ಸಾಂಪ್ರದಾಯಕ ಶಕ್ತಿಗಳಿಗೂ ಕ್ರಾಂತಿಕಾರಿ ಅಧ್ಯಾತ್ಮಕ್ಕೂ ಇರುವ ಸಂಘರ್ಷದ ಜೊತೆಗೆ ವಿಚಾರಣೆಯ ತಾಂತ್ರಿಕ ಕ್ರಮಬದ್ಧತೆಗೂ ಅದರ ಮೂಲಭೂತ ಅನ್ಯಾಯಕ್ಕೂ ನಡುವಣ

ವಿಪರ್ಯಾಸವೂ ಸೇರಿ ನಾಟಕೀಯತೆಗೆ ಕಳೆ ಕಟ್ಟುತ್ತದೆ.

ಈ ನಾಟಕದ ಸ್ವಾರಸ್ಯವನ್ನು ಕಯ್ಯಫಸ್, ಜೂಡಾಸ್, ಪೈಲೇಟ್, ಪ್ರೋಕ್ಯುಲಾ, ಹೆರಾಡ್ ಈ ಪಾತ್ರಗಳ ಸ್ವಭಾವ ಚಿತ್ರಣ ಬಹುಮಟ್ಟಿಗೆ ಹೆಚ್ಚಿಸುತ್ತದೆ . ಕಯ್ಯಫಸ್ ಜೂಡಿಯಾ ದೇಶಾಭಿಮಾನಿ. ರೋಮನ್ನರ ವಿರುದ್ಧ ದಂಗೆ ಎಬ್ಬಿಸಿ ದೇಶಕ್ಕೆ ಸ್ವಾತಂತ್ರ್ಯ ತರುವ ಆಶಯ ಅವನದು. ಇವನಿಂದ ಸ್ಫೂರ್ತಿ ಪಡೆದು ಬಂಡೆದ್ದು ಕೊಲೆ ಮಾಡುವ ಬರಬ್ಬಾಸ್‌ನನ್ನು ಹೇಗಾದರೂ ಉಳಿಸಿಕೊಳ್ಳುವುದು ಅವನಿಗೆ ಅವಶ್ಯಕವೆನಿಸುತ್ತದೆ. ತಮ್ಮವನೇ ಆದ ಏಸುವನ್ನೂ ಶಿಕ್ಷೆಗೆ ರೋಮನ್ ಪ್ರಾಕ್ಯುರೇಟರ್‌ನಾದ ಪೈಲೇಟನ ಮುಂದೆ ಕಳುಹಿಸುವುದೂ ಈ ದೇಶಾಭಿಮಾನಿಗೆ ಸಮ್ಮತವಲ್ಲ. ಇವನ ಮಾವ ಅನ್ನಸ್ ರೋಮನ್ ಸಾಮ್ರಾಜ್ಯಶಾಹಿಯ ಬಗ್ಗೆ ಭೀತಿ ಗೌರವಗಳುಳ್ಳವನು. ಈ ಸಂಪ್ರದಾಯ ಶರಣ ವಯಸ್ಕನಿಗೂ ಕಯ್ಯಫಸ್‌ನಿಗೂ ಈ ವಿಷಯದಲ್ಲಿ ಅಭಿಪ್ರಾಯ ವಿರೋಧ. ಏಸುವನ್ನು ಬಿಟ್ಟು ಬಿಡಲು ಪೈಲೇಟ್ ನಿರ್ಧರಿಸಿದಾಗ ಇದೇ ಅನ್ನಸ್ ಅವರ ಬಳಿಗೆ ಹೋಗಿ ಅಂಥ ನಿರ್ಧಾರದಿಂದ ತಮಗೆ, ತಮ್ಮ ಧರ್ಮಕ್ಕೆ ಆಗುವ ಅಪಾಯವನ್ನು ಒತ್ತಿ ಹೇಳಿ ಅವನನ್ನು ಶಿಕ್ಷೆಗೆ ಗುರಿಪಡಿಸಲು ಒತ್ತಾಯಿಸುತ್ತಾನೆ. ರೂಢಿಗತ ಜನಸ್ತೋಮವೂ ಪೈಲೇಟ್‌ನನ್ನು ಇದೇ ರೀತಿ ಬಲಾತ್ಕರಿಸುತ್ತದೆ.

ಪೈಲೇಟ್ ಸ್ವಭಾವತಃ ಒಬ್ಬ ನ್ಯಾಯನಿಷ್ಠುರ ಅಧಿಕಾರಿಯಾಗಿ ಚಿತ್ರಿತನಾಗಿದ್ದಾನೆ. ಅವನ ಪತ್ನಿ ಪ್ರೋಕ್ಯುಲಾ ಏಸುವನ್ನು ಮರಣಾಂತಿಕ ಶಿಕ್ಷೆಗೆ ಗುರಿಪಡಿಸಬಾರದೆಂದು ಪರಿಪರಿಯಾಗಿ ಬೇಡಿದಾಗ ಅವನು ಚಕ್ರವರ್ತಿಗೆ ತಾನು ನಿಷ್ಠನೆಂದೂ, ನ್ಯಾಯಪಾಲನೆ ತನ್ನ ಕರ್ತವ್ಯವೆಂದೂ, ಸಾಕ್ಷ್ಯ ವಿರೋಧವಾದರೆ ತಾನು ಈ ವಿಷಯದಲ್ಲಿ ಅಸಹಾಯಕನೆಂದೂ ಪ್ರತ್ಯುತ್ತರಿಸುತ್ತಾನೆ. ಆದರೂ ಅವಳಿಗೆ ಮತ್ತೆ ಮತ್ತೆ ಆಶ್ವಾಸನೆ ನೀಡುತ್ತಾನೆ. ಏಸುವಿನಲ್ಲಿ ಅಂಥ ಘೋರ ಶಿಕ್ಷಾರ್ಹವಾದ ಯಾವ ಅಪರಾಧವೂ ಕಂಡು ಬರುವುದಿಲ್ಲವಾಗಿ ಅವಳು ನಿಶ್ಚಿಂತೆಯಿಂದ ಇರಬಹುದೆಂದು. ಆಡಳಿತದಲ್ಲಿ ಒಮ್ಮೊಮ್ಮೆ ಕ್ರೂರವಾಗಿ ವರ್ತಿಸಬೇಕಾದ ಅವಶ್ಯಕತೆಯನ್ನು, ಮನವರಿಕೆ ಮಾಡಿ ಕೊಡುವ ಸಂದರ್ಭದಲ್ಲಿ ಅವನು ಮಾನವ ಸ್ವಭಾವ ಮತ್ತು ಸಮಾಜಗಳ ಬಗ್ಗೆ ವ್ಯಕ್ತಪಡಿಸುವ ನಿಲುವು, ನೇತ್ಯಾತ್ಮಕ. ಪ್ರೇಮ, ಸೌಂದರ್ಯ, ಆನಂದ ಇವು ಮಾನವನ ಸ್ವಭಾವದ ಮೂಲ ಲಕ್ಷಣಗಳೆಂದು ಏಸು ಹೇಳುತ್ತಾನೆಂದು ಪ್ರೋಕ್ಯುಲಾ ವಾದಿಸುತ್ತಾಳೆ. ಆದರೆ ಅವನ ಅನುಭವದಲ್ಲಿ ಲೋಕ ಇದಕ್ಕೆ ವ್ಯತಿರಿಕ್ತ. ಲೋಕದಲ್ಲಿ ತುಂಬಿರುವುದು ದ್ವೇಷ, ಮೋಸ, ಕೊಲೆ ಆದ್ದರಿಂದಲೇ ಅವನು ಶಿಕ್ಷೆಯನ್ನು ವಿಧಿಸುವ ಜವಾಬ್ದಾರಿಯನ್ನು ಹೊತ್ತಿದ್ದಾನೆ.

ರಾಜಾ ಹೆರಾಡ್‌ನ ಪಾತ್ರ ಚಿತ್ರಣ ಬೈಬಲ್ಲಿನ ಮೂಲಕ್ಕಿಂತಲೂ ಮಧ್ಯಯುಗದ ಕಾರ್ಪಸ್ ಕ್ರಿಸ್ತಿ ಹಬ್ಬಕ್ಕೆ ಸಂಬಂಧಿಸಿದಂತೆ ಪ್ರದರ್ಶಿತವಾಗುತ್ತಿದ್ದ ಮಿರಕಲ್ ನಾಟಕಗಳಲ್ಲಿ ಬರುವ ಹೆರಾಡ್‌ನ ಪಾತ್ರ ಚಿತ್ರಣವನ್ನು ಹೆಚ್ಚಾಗಿ ಅನುಸರಿಸುತ್ತದೆ. ಹೆರಾಡ್ ಇಲ್ಲಿ ಒಬ್ಬ ಹಾಸ್ಯ ಪ್ರಧಾನ ಪಾತ್ರವಾಗಿ ಕಾಣಿಸಿಕೊಳ್ಳುತ್ತಾನೆ, ನಿಜ. ಆದರೂ ತನ್ನ ಅರಸೊತ್ತಿಗೆಯ ಹಿತರಕ್ಷಣೆಯೇ ಅವನ ರಾಜತಂತ್ರದ ನಿರ್ದೇಶಕ ಶಕ್ತಿಯಾಗಿ ಅವನ್ನೆಲ್ಲ ಚಿಂತನೆಗಳನ್ನೂ ಕಾರ್ಯಕಲಾಪಗಳನ್ನೂ ರೂಪಿಸುತ್ತದೆ. ಬೆಂಗಾಡಿನಂತಹ ಜೂಡಿಯಾದ ಹವೆಯಲ್ಲಿ ಸಹಜವಾಗಿಯೇ ಜನಕ್ಕೆ ಹುಚ್ಚು ಹಿಡಿಯುತ್ತದೆ. ಅಲ್ಲದೆ

ಯಶಸ್ಸು ಸಂಪಾದಿಸಲು ಸ್ವಲ್ಪ ಮಟ್ಟಿಗೆ ಹುಚ್ಚು ಆಗತ್ಯ. ಜಾನ್ ದಿ ಬ್ಯಾಪ್ಟಿಸ್ಟ್, ಏಸು ಅಂಥವರು ಇಂಥ ಹುಚ್ಚರು. ಇವರು ಜನಮನದಲ್ಲಿ ತಮ್ಮ ತತ್ವಗಳನ್ನು ಬಿತ್ತಲು ಅವಕಾಶ ಕೊಟ್ಟರೆ ಅಪಾಯ. ಆ ಕಾರಣ ಜಾನ್‌ನನ್ನು ತಾನು ಸೆರೆಯಲ್ಲಿಡಬೇಕಾಯಿತು. ರಾಜನಿಗಿಂತ ದೊಡ್ಡವರು ಇನ್ನೊಬ್ಬರಿರಬಹುದೆಂಬ ಭಾವನೆಯೇ ಜನರಿಗೆ ಬರಬಾರದು. ಅಲ್ಲದೆ ಹೆರಾಡನ ದೃಷ್ಟಿಯಲ್ಲಿ ದೇವರಿಲ್ಲ, ಪರಲೋಕವಿಲ್ಲ. ಮಾನವ ಪ್ರಕೃತಿಯ ಶಿಶು, ಜೀವನದ ಪೂರ್ಣಪರ್ಯವಸಾನ ಮರಣದಲ್ಲಿ. ಅವನು ಸಾವಿನ ವಿಷಯವನ್ನೇ ಚಿಂತಿಸಲು ಹೋಗುವುದಿಲ್ಲ. ಜನರಲ್ಲಿ ಅಂಧಶ್ರದ್ಧೆಗಳು ಇದ್ದರೆ ಅದು ರಾಜನ ದೃಷ್ಟಿಯಲ್ಲಿ ಒಳ್ಳೆಯದೇ. ಆ ಕಾರಣವೇ ಅವನು ಇಂಥ ಅಂಧಶ್ರದ್ಧೆಗಳನ್ನು ಇನ್ನಷ್ಟು ಬೆಳೆಸಲು ಹಣ ವೆಚ್ಚ ಮಾಡುತ್ತಾನೆ. ಹೀಗೆ ರಾಜತಂತ್ರ ನಾಸ್ತಿಕತೆಗಳು ಹೆರಾಡ್‌ನ ವಿನೋದಾತ್ಮಕ ವಾಗ್ಝರಿಯ ಹಿಂದೆ ವಿಜೃಂಭಿಸುತ್ತವೆ. ತಾನು ಯಹೂದಿಗಳ ದೊರೆ ಎಂದು ಹೇಳಿಕೊಳ್ಳುತ್ತಾನೆಂಬ ಆರೋಪದ ಮೇಲೆ ಏಸುವಿಗೆ ಶಿಲುಬೆಗೇರಿಸುವ ಶಿಕ್ಷೆ ಆಯಿತೆಂದಾಗ ಅವನು ಹೇಳುವ ' ಈ ದೊರೆತನ ತಪ್ಪಿದರೆ ಸಾಕು ಎನ್ನುವ ಹಾಗಿದೆ ನಮಗೆ ! ' ಎನ್ನುವ ತಮಾಷೆಯ ಮಾತು ತನ್ನ ರಾಜತಂತ್ರದ ಮೇಲೆ ಅವನು ಹಾಕುವ ಆಷಾಢಭೂತಿತನದ ಮುಸುಕು, ಪ್ರೋಕ್ಯುಲಾ ಹಾಗೂ ಪೈಲೇಟ್ ಏಸುವಿನ ಸಾವಿಗೆ ಮಮ್ಮಲ ಮರುಗುತ್ತಾರೆ. ಹೆರಾಡ್ ನಗುನಗುತ್ತಲೇ ಇರುತ್ತಾನೆ.

ವಿಶ್ವಾಸ ದ್ರೋಹಿ ಜರಾಡಾಸ್‌ನ ಪಾತ್ರವೂ ಅಚ್ಚ ಕಪ್ಪು ಬಣ್ಣದಲ್ಲಿ ಚಿತ್ರಿತವಾಗಿಲ್ಲ. ಏಸುವಿನಲ್ಲಿ ಅವನಿಟ್ಟುಕೊಂಡಿದ್ದ ಶ್ರದ್ಧಾ ಗೌರವಗಳನ್ನು ಶಿಥಿಲಗೊಳ್ಳುವುದು ಒಬ್ಬ ಹೆಣ್ಣು ಏಸುವಿಗೆ ತೈಲಾಭಿಷೇಕ ಮಾಡಿ ಅವನೇ ಕ್ರಿಸ್ತನೆಂದು ಗುರುತಿಸಿದಾಗ. ಏಸುವಿನ ಜಂಭ ಇಳಿಯಬೇಕು. ಅವನಿಗೆ ಯೆಹೂದಿ ಆಚಾರ್ಯರು ಎರಡು ಬುದ್ಧಿಮಾತು ಹೇಳಲಿ, ಎನ್ನುವ ಉದ್ದೇಶದಿಂದ ಮಾತ್ರ ಅವನು ಏಸುವನ್ನು ಆಚಾರ್ಯರ ವಶಕ್ಕೆ ಒಪ್ಪಿಸುವ ಉಮೇದಿಗೆ ಕೈಹಾಕುತ್ತಾನೆ. ಮುಂದೆ ಏಸುವಿಗೆ ಮರಣದಂಡನೆಯಾಗಬಹುದೆಂಬ ಸಾಧ್ಯತೆಯ ಅರಿವಾದಾಗ ಅವನು ಪಾಶ್ಚಾತ್ತಾಪಪಟ್ಟು ತನಗೆ ಆಚಾರ್ಯರಿತ್ತಿದ್ದ ಮೂವತ್ತು ನಾಣ್ಯಗಳನ್ನು ಅವರಿಗೇ ಹಿಂದಿರುಗಿಸಿ ತಾನು ಕೊಟ್ಟಿದ್ದ ಸಾಕ್ಷ್ಯ ಸುಳ್ಳು ಸಾಕ್ಷ್ಯವೆಂದು ಹೇಳಿಕೆ ಕೊಟ್ಟು ಆ ಸಾಕ್ಷ್ಯವನ್ನು ಹಿಂದಕ್ಕೆ ತೆಗೆದುಕೊಳ್ಳಲು ಶತಪ್ರಯತ್ನ ಮಾಡುತ್ತಾನೆ. ಆದರೆ ಕಾಲ ಮೀರಿಹೋಗಿದೆ. ತಾನು ಮಾಡಿದ ಪಾಪಕ್ಕೆ ಹೇಸಿ ನೇಣು ಹಾಕಿಕೊಂಡು ಸಾಯಲು ನಿಶ್ಚಯಿಸುತ್ತಾನೆ.

ತೀರ್ಪು

ವಿಚಾರಣೆಯ ದೃಶ್ಯಗಳನ್ನು ಅತಿಶಯವಾಗಿ ನಾಟಕೀಯಗೊಳಿಸುವುದು ವಿಚಾರಣೆಯ ವಿಪರ್ಯಾಸದ ಪ್ರಜ್ಞೆ ತನ್ನ ಮುಂದೆ ದಾಖಲಾದ ಜುಡಾಸ್‌ನದೊಂದನ್ನುಳಿದ ಮಿಕ್ಕ ಎಲ್ಲ ಸಾಕ್ಷ್ಯವೂ ಮಂಕುತನ ಇಲ್ಲವೆ ಅಸೂಯೆಯಿಂದ ಪ್ರೇರಿತವಾದ ಸುಳ್ಳು ಸಾಕ್ಷ್ಯವೆಂದು ಮರುವಿಚಾರಣೆ ನಡೆಸಿದ ಅನ್ನಸ್ ಅಭಿಪ್ರಾಯಪಡುತ್ತಾ ಏಸುವನ್ನು ಕಂಡರೆ ತನಗೆ ಸಂತೋಷವಾಗುತ್ತದೆಂದು ಹೇಳುತ್ತಾನೆ. ಧರ್ಮವನ್ನು ಕುರಿತ ವಿಷಯಗಳಲ್ಲಿ ಮುಖ್ಯ ನ್ಯಾಯ ನಿರ್ಣಾಯಕನಾದ ಅವನ ಅಳಿಯ ಕಯ್ಯಾಫಸ್ ಜುಡಾಸ್ ಒಬ್ಬನ ಏಕಮೇವ ಸಾಕ್ಷ್ಯದ ಆಧಾರದ ಮೇಲೆ ಶಿಕ್ಷೆ ವಿಧಿಸುವುದು ಕ್ರಮಬದ್ಧವಲ್ಲ

ಎನ್ನುತ್ತಾನೆ. ಆದರೆ ಆಪಾದಿತನೇ ಈ ರೀತಿ ಸಾಕ್ಷ್ಯ ಒಪ್ಪಿಕೊಂಡ ಹೇಳಿಕೆ ಕೊಟ್ಟರೆ ಅದು ನ್ಯಾಯ ಸಮ್ಮತವಾಗುವುದೆಂದು ಅವನು ಸೂಚಿಸಿ, ಏಸುವಿನ ವಿಚಾರಣೆಯನ್ನು ಕೈಗೊಳ್ಳುತ್ತಾನೆ. ಮೊದಲಿಗೆ ಎಲ್ಲರೂ ವಿಚಾರಣೆಯಲ್ಲಿ ಸತ್ಯಕ್ಕೆ ಜಯವಾಗಲಿ ಎಂದು ಪ್ರಾರ್ಥಿಸುತ್ತಾರೆ. 'ನೀನು ದೇವಪುತ್ರ ಕ್ರಿಸ್ತನೇ?' ಎಂದು ಕಯ್ಯಫಸ್ ಹಾಕಿದ ಪ್ರಶ್ನೆಗೆ, 'ಹಾಗಂದವರು ನೀವು, ನಾನಲ್ಲ 'ಎಂದು ಏಸು ಉತ್ತರಿಸುತ್ತಾನೆ. ಮುಂದೆ ಇನ್ನೊಂದು ಸಲ ಕೇಳಿದ ಇದೇ ಪ್ರಶ್ನೆಗೆ ಏಸು 'ಹೌದು' ಎನ್ನುತ್ತಾನೆ. ಆಗ ಕಯ್ಯಫಸ್ 'ನಮ್ಮ ದಯಾವಂತ ಧರ್ಮಶಾಸ್ತ್ರಗಳ ರಕ್ಷಣೆಯಿಂದ ನಿನ್ನನ್ನು ದೂರೀಕರಿಸಿ ರೋಮನ್ನರ ನ್ಯಾಯ ವಿಚಾರಣೆಗೆ ಗುರಿ ಮಾಡಬೇಕಾಗಿದೆ' ಎಂದು ತೀರ್ಪು ಕೊಡುತ್ತಾನೆ. ಸುತ್ತ ಮುತ್ತಿಕೊಂಡಿದ್ದ ಜನ 'ಅವನನ್ನು ಕಲ್ಲು ಹೊಡೆದು ಕೊಂದು ಬಿಡಿ' ಎಂದು ಕೂಗಿಕೊಳ್ಳುತ್ತಾರೆ.

ಫೈಲೇಟ್‌ನ ಮುಂದೆ ಏಸುವಿನ ವಿಚಾರಣೆ ಎರಡು ಹಂತಗಳಲ್ಲಿ ನಡೆಯುತ್ತದೆ. ಮೊದಲನೆಯ ವಿಚಾರಣೆಯಲ್ಲಿ ಪೈಲೇಟ್ ರೋಮನ್ ನ್ಯಾಯದ ಪ್ರಕಾರ ಏಸು ನಿರ್ದೋಷಿ ಎಂದು ಘೋಷಿಸುತ್ತಾನೆ. ಅವನ ದೃಷ್ಟಿಯಲ್ಲಿ ಏಸು ಒಬ್ಬ ಉಪದೇಶಕ ಮಾತ್ರ ಯೆಹೂದಿಗಳ ಧರ್ಮಶಾಸ್ತ್ರಗಳನ್ನು ಕುರಿತಂತೆ ಏನು ಹೇಳಿದ್ದರೂ ಆ ಲೋಪದೋಷಗಳಿಗೆ ರೋಮನ್ ನ್ಯಾಯ ಅನ್ವಯವಾಗುವುದಿಲ್ಲ. ಅಲ್ಲದೆ ಏಸು ಗ್ಯಾಲಿಲಿ ಪ್ರದೇಶದವನಾಗಿ ಅವನ ವಿಚಾರಣೆ ತನ್ನ ಅಧಿಕಾರವ್ಯಾಪ್ತಿ ವಲಯಕ್ಕೊಳಪಡದು. ಹೀಗೆಂದು ಪೈಲೇಟ್ ಏಸುವನ್ನು ದೊರೆ ಹೆರಾಡ್‌ನ ಮುಂದೆ ಹಾಜರಾಗಲು ಆದೇಶವೀಯುತ್ತಾನೆ. ಆದರೆ ಹೆರಾಡ್ ಜೂಡಿಯಾದಲ್ಲಿ ಅಧಿಕಾರ ಏಕಮುಖವಾಗಿರಬೇಕೆಂಬ ವಾದವನ್ನೊಡ್ಡಿ ಮರಳಿ ಪೈಲೇಟ್‌ನ ಸುಪರ್ದಿಗೇ ಏಸುವನ್ನು ಒಪ್ಪಿಸಿಬಿಡುತ್ತಾನೆ. ಈಗ ನಡೆಯುವ ಎರಡನೆ ಹಂತದ ವಿಚಾರಣೆಯಲ್ಲಿ ಪೈಲೇಟ್ ಏಸುವಿಗೆ ಕಶಾಪ್ರವಾಹದ ಶಿಕ್ಷೆಯನ್ನು ವಿಧಿಸುತ್ತಾನೆ. ಕಾರಣ, ಆಡಳಿತದ ಅವಶ್ಯಕತೆಗಳು, ಈಗಲೂ ಏಸು ನಿರಪರಾಧಿ ಎಂದೇ ಪೈಲೇಟ್‌ನ ಅನಿಸಿಕೆ. ಆದರೆ ಏಸುವಿನ ಉದ್ದೇಶ ಎಷ್ಟೇ ಉದಾತ್ತವೆಂದು ಒಪ್ಪಿಕೊಂಡರೂ ತಿಳಿಗೇಡಿ ತರುಣರು ಅವನ ಉಪದೇಶದಿಂದ ಎಷ್ಟೋ ಪ್ರಮಾದಗಳನ್ನೆಸಗಿಯಾರು. ಅಪಾಯವನ್ನು ತಪ್ಪಿಸಬೇಕು.

ಇಲ್ಲಿಗೇ ವಿಚಾರಣೆ ಮುಗಿಯಬೇಕು. ಆದರೆ ಪೈಲೇಟ್‌ನ ಈ ತೀರ್ಪನ್ನು ತಿಳಿದೊಡನೆಯೇ ಆಚಾರ್ಯ ಅನ್ನಾಸ್ ಪೈಲೇಟ್ ಬಳಿಗೆ ಧಾವಿಸಿ ಏಸುವಿಗೆ ಪ್ರಾಣಾಂತಿಕ ಶಿಕ್ಷೆಯೇ ಆಗಬೇಕೆಂದು ಮತ್ತೆ ವಾದಿಸುತ್ತಾನೆ. ಅವನ ಒತ್ತಾಯಕ್ಕೆ ಮಣಿದು ಪೈಲೇಟ್ ಏಸುವಿನ ವಿಚಾರಣೆಯನ್ನು ಪುನಶ್ಚೇತನಗೊಳಿಸಿ ಮುಂದುವರಿಸುತ್ತಾನೆ. ಹಾಗೂ ಅವನನ್ನು ಹೇಗಾದಲೂ ಉಳಿಸಬೇಕೆಂಬ ಉದ್ದೇಶದಿಂದ ತಾನು ದೈವಕುಮಾರನೆಂದೂ ಯೆಹೂದಿಯರ ದೊರೆಯೆಂದೂ ಹೇಳಿಕೊಂಡನೆಂದು ದಾಖಲಾಗಿರುವ ಸಾಕ್ಷ್ಯ ಸುಳ್ಳು ತಾನೆ ಎಂದು ಏಸುವನ್ನು ನೇರವಾಗಿ ಪ್ರಶ್ನಿಸುತ್ತಾನೆ. ಏಸು ಮೌನಿ. ಕ್ರಮಬದ್ಧವಾಗಿ ಮುಂದೆ ಪೈಲೇಟ್ ತಾನು ಕೇಳಲೇಬೇಕಾದ ಕಡೆಯ ಪ್ರಶ್ನೆಯನ್ನೂ ಕೇಳುತ್ತಾನೆ, 'ನಿನಗೆ ಮರಣದಂಡನೆಯನ್ನು ಏಕೆ ವಿಧಿಸಕೂಡದು? 'ಈಗಲೂ ಏಸು ಮೌನಿ.

ಮರಣ ದಂಡನೆ

ತನಗಿದ್ದ ಕಟ್ಟಕಡೆಯ ಒಂದು ಅವಕಾಶವನ್ನು ಸದುಪಯೋಗಿಸಿಕೊಳ್ಳಲು ಪೈಲೇಟ್

ಯತ್ನಿಸುತ್ತಾನೆ. ಅಂದು ಆಚರಿತವಾಗುತ್ತಿದ್ದ fassovet (‘ಬಂಧ ವಿಮೋಚನೆ’) ಎಂಬ ಯೆಹೂದಿ ಹಬ್ಬದ ಸಂದರ್ಭದಲ್ಲಿ ಒಬ್ಬ ಯೆಹೂದಿ ಬಂದಿಯನ್ನು ಬಿಡುಗಡೆಗೊಳಿಸುವ ಸಂಪ್ರದಾಯಕ್ಕನುಸಾರವಾಗಿ ‘ ಏಸುವನ್ನು ಬಿಟ್ಟು ಬಿಡಲೋ’ ಎಂದು ಜನಸ್ತೋಮವನ್ನು ಪ್ರಶ್ನಿಸುತ್ತಾನೆ. ಜನಸ್ತೋಮ ‘ ಬರಬ್ಬಾಸನನ್ನು ಬಿಡುಗಡೆ ಮಾಡಿ!’ ಎಂದು ತನ್ನ ದೃಢ ಅಭಿಮತವನ್ನು ವ್ಯಕ್ತಪಡಿಸುತ್ತದೆ. ವಿಧಿಯಿಲ್ಲದೆ ಪೈಲೇಟ್ ಏಸುವಿಗೆ ಮರಣದಂಡನೆ ವಿಧಿಸುತ್ತಾನೆ. ಎಷ್ಟೇ ಕ್ರಮಬದ್ಧವಾಗಿ ನಡೆದರೂ ವಿಚಾರಣೆ ನಿಜವಾದ ಅರ್ಥದಲ್ಲಿ ವಿಚಾರಣೆ ಆಗದೆ ನ್ಯಾಯ ಅನ್ಯಾಯವಾಗಿ ಪರಿಣಮಿಸುತ್ತದೆ.

ಗ್ರೀಕ್ ರುದ್ರ ನಾಟಕದ ಸಂಪ್ರದಾಯಕ್ಕನುಗುಣವಾಗಿ ಪೈಲೇಟ್ ಆಜ್ಞಾಪನೆ ದೂತಮುಖೇನ ಮಾತ್ರ ವರದಿಗೊಳ್ಳುತ್ತದೆ.

ಕೃತಿಯ ಮಕುಟದಲ್ಲಿ ಒಂದು ನವಿರಗರಿ ಎನ್ನುವಂತಿದೆ ಮಾಸ್ತಿಯವರ ಅನರ್ಘ್ಯ ಮುನ್ನುಡಿ. ತನ್ನ ಹಿತದೃಷ್ಟಿಯಿಂದ ನಮ್ಮ ಸಮಾಜ ಸದಾ ನೆನಪಿನಲ್ಲಿಡಬೇಕಾದ ಮುತ್ತಿನಂಥ ನುಡಿಗಳಲ್ಲಿ ಮಾಸ್ತಿ ಧರ್ಮಾಂಧತೆಯನ್ನು ಖಂಡಿಸಿ ವಿಶ್ವಧರ್ಮದ ರೇಖಾ ಚಿತ್ರವನ್ನು ಹೀಗೆ ಬಿಡಿಸಿದ್ದಾರೆ’, ನಾವು ಕಂಡೆವೆಂಬ ದೇವರನ್ನು ನಮ್ಮ ದೇವರು ಮಾತ್ರ ಎಂದು ಭಾವಿಸಿ ನಮ್ಮ ಬೊಮ್ಮ ಉಳಿದ ಜನರಿಗೆಲ್ಲಾ ಗುಮ್ಮನಾಗುವಂತೆ ನಡೆಯುತ್ತೇವೆ.... (ನಮ್ಮ ಸನಾತನ ಧರ್ಮಕ್ಕೇ) ಬುದ್ಧ ಧರ್ಮವು ಬೇರೆಯಲ್ಲ. ಕ್ರಿಸ್ತ ಧರ್ಮವು ಬೇರೆಯಲ್ಲ. ಮಹಮ್ಮದನ ಧರ್ಮವು ಹಗೆಯಲ್ಲ. ಅದರ ಆಚಾರದಲ್ಲಿ ಬುದ್ಧ ಧರ್ಮದ ಆಚಾರಗಳಲ್ಲಿರುವ ಭಾವ ವೈಶಾಲ್ಯವನ್ನೂ, ಕ್ರಿಸ್ತ ಧರ್ಮದ ಆಚಾರದಲ್ಲಿರುವ ದೀನವಾತ್ಸಲ್ಯವನ್ನೂ, ಮಹಮ್ಮದನ ಧರ್ಮದ ಆಚಾರಗಳಲ್ಲಿರುವ ಸಮದರ್ಶಿತೆಯನ್ನೂ ಸೇರಿಸಿಕೊಳ್ಳುವೆವು. ಸನಾತನ ಧರ್ಮವು ಹಿಂದೆ ಉದ್ದೇಶಿಸಿದಂತೆ ವಿಶ್ವ ಧರ್ಮವಾಗುವುದು...... ಈ ಸಣ್ಣ ಗ್ರಂಥವು (‘ವಿಚಾರಣೆ’) ಧರ್ಮಲತೆ ಮುಂದೆ ಹೀಗೆ ಹೂ ಬಿಡುವಂತೆ ಇಂದು ಇಲ್ಲಿ ಆದಕ್ಕೇ ಒಂದು ಚೆಂಬು ನೀನ್ನೆರೆಯುತ್ತಿದೆ ! ,

★

ದೇವುಡು ಅವರ ಸಂಗ್ರಹ ರಾಮಾಯಣ

ಡಾ|| ಪ್ರಣತಾರ್ತಿ ಹರನ್

ಭಾರತದ ಸುಮಾರು ೮೦೦ ಮಿಲಿಯ ಜನರಿಗೆ ಎಲ್ಲರಿಗೂ ಒಂದಲ್ಲ ಒಂದು ಪ್ರಮಾಣದಲ್ಲಿ ರಾಮಾಯಣದ ಕಥೆಯು ಗೊತ್ತೆಂದು ಘಂಟಾಘೋಷವಾಗಿ ಸಾರಬಹುದೆಂದರೆ, ನಮ್ಮಲ್ಲಿ ಯಾರಿಗೂ ಆಶ್ಚರ್ಯದ ಮಾತಾಗುವುದಿಲ್ಲ. ಹರಿಕಥೆ, ಉಪನ್ಯಾಸ, ನೃತ್ಯ, ನಾಟಕ, ಚಿತ್ರ, ಶಿಲ್ಪ, ಹಬ್ಬ - ಹೀಗೆ ಯಾವ ಮಾಧ್ಯಮವೆಂದರೆ ಆ ಮಾಧ್ಯಮದಲ್ಲಿ ರಾಮಾಯಣವು ನಮ್ಮ ಬದುಕನ್ನು ನಿತ್ಯವೂ ತಾಗುತ್ತಿರುತ್ತದೆ. ಅದು ಧಾರ್ಮಿಕರ ನಿತ್ಯ ಪಾರಾಯಣದ ವಸ್ತು; ಮಕ್ಕಳಿಗೆ ಮಲಗುವ ಮುನ್ನ ಮನರಂಜನೆಯ ವಸ್ತು. ಆದ್ದರಿಂದಲೇ, ಒಂದು ರೀತಿಯಲ್ಲಿ ಧರ್ಮಗ್ರಂಥವಲ್ಲದ, ಕೇವಲ ಇತಿಹಾಸ ಕಾವ್ಯವಾದ ಪುಸ್ತಕವು ಇತರ ಅಂಥ ಯಾವ ಪುಸ್ತಕವೂ ಮಾಡದ ಪ್ರಮಾಣದಲ್ಲಿ ಜನ ಮಾನಸವನ್ನು ಸೂರೆ ಮಾಡಿದೆ ಎಂಬ ಅದ್ಭುತವನ್ನು ನಾವು ಸರಳವಾಗಿ ಸ್ವೀಕರಿಸಬಲ್ಲವರಾಗುತ್ತೇವೆ.

ಇಂಥ ಗಾಢ ಸತ್ಯದ ಹಿನ್ನೆಲೆಯಲ್ಲಿಯೇ ನಮ್ಮ ಮುಂದೆ ಒಂದು ಪ್ರಶ್ನೆ ನಿಲ್ಲುತ್ತದೆ. ಸುಮಾರು ೬೦೦ ವರ್ಷಗಳಷ್ಟು ಹಿಂದೆಯೇ ಕುಮಾರವ್ಯಾಸನಂಥ ಮಹಾಕವಿಯೊಬ್ಬನು 'ರಾಮಾಯಣದ ಕವಿಗಳ ಭಾರದಲ್ಲಿ ಫಣಿರಾಯನು ತಿಣಿಕುತ್ತಿದ್ದಾನೆ' ಎಂದು ಉದ್ಗರಿಸಿ ಮಹಾಭಾರತವನ್ನು ತನ್ನ ಕಾವ್ಯದ ವಸ್ತುವಾಗಿ ಮಾಡಿಕೊಂಡನು. ಅಂಥದರಲ್ಲಿ ಇಪ್ಪತ್ತನೆಯ ಶತಮಾನದ ಲೇಖಕನೊಬ್ಬನು ಮತ್ತೆ ರಾಮಾಯಣಕ್ಕೆ ಏಕೆ ಕೈಹಾಕಿದ? ಕುಮಾರವ್ಯಾಸನ ಉದ್ಗಾರವೇ ಅದಕ್ಕೆ ಉತ್ತರವನ್ನೂ ಇಟ್ಟುಕೊಂಡಿದೆ. ರಾಮಾಯಣದ ಕಥೆಯನ್ನು ತೆರೆತೆರೆದು ಸಾರಿಸಾರಿ ಹೇಳಿದರೂ, ಕೇಳಿದರೂ, ಹೇಳುವ ಮತ್ತು ಕೇಳುವ ಶ್ರದ್ಧೆ ಮತ್ತು ಕುತೂಹಲವು ತಣಿಯುವುದಿಲ್ಲ. ಮೋಕ್ಷಸಾಧಕವಾದ ಕಥಾಮಾಧ್ಯಮವೊಂದು ಹೀಗೆ ಕುತೂಹಲವನ್ನು ನಿತ್ಯನೂತನವಾಗಿ ಉಳಿಸಿಕೊಡುತ್ತದೆಂಬುದು ಕೇವಲ ಸೋಜಿಗ; ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಲ್ಲಿ ಮತ್ತೂ ದೊಡ್ಡ ಸೋಜಿಗ. ಹೀಗೆ, ಜನ ಸಮೂಹವನ್ನು ನಿರಂತರವಾಗಿ ಪ್ರಚೋದಿಸಿ, ತಿದ್ದಿ, ರೂಪಿಸಬಲ್ಲ ಮಹಾಕಾವ್ಯವೊಂದು ತನ್ನಲ್ಲಿಲ್ಲವಲ್ಲಾ ಎಂದು ಅಮೆರಿಕದಂಥ ಭೋಗರಾಷ್ಟ್ರವೊಂದು ಮರುಗುವುದೆಂದರೆ, ರಾಮಾಯಣದ ಮಹತ್ತಿನ ಬಗೆಗೆ ಹೆಚ್ಚು ಹೇಳಬೇಕಿಲ್ಲ. ತನ್ನ ವ್ಯಕ್ತಿತ್ವ ವಿಶೇಷವನ್ನು ಸೇರಿಸಿ ಮತ್ತೆಮತ್ತೆ ನಿರೂಪಿಸುವಂತೆ ಕವಿಯೊಬ್ಬನಿಗೆ ರಾಮಾಯಣವು ಸ್ಫೂರ್ತಿಯನ್ನು ನೀಡುತ್ತದೆನ್ನುವುದಕ್ಕೆ, ಕುಮಾರವ್ಯಾಸ ಪೂರ್ವದ ರಾಮಾಯಣ ಗ್ರಂಥಗಳ ಬಾಹುಳ್ಯವು ಸಾಕ್ಷಿಯಾದಂತೆ ಅವನ ನಂತರದ ಗ್ರಂಥಗಳೂ ಸಾಕ್ಷಿಗಳಾಗಿವೆ; ಮುಂಬಯಿ, ಕಾಶ್ಮೀರ, ಬಂಗಾಳದ ಭಿನ್ನ ಪಾಠಗಳು ಸಾಕ್ಷಿಗಳಾಗಿವೆ; ಈಗ ಭಾರತದ ವಿವಿಧ ಭಾಷೆಗಳಲ್ಲಿರುವ ನೂರಿಪ್ಪತ್ತೈದು ರಾಮಾಯಣದ ವಿವಿಧ ಆವೃತ್ತಿಗಳು ಸಾಕ್ಷಿಗಳಾಗಿವೆ; ಬೌದ್ಧ, ಜೈನ ರಾಮಾಯಣ ಮಾರ್ಗಗಳು ಸಾಕ್ಷಿಗಳಾಗಿವೆ. ಭಾರತದಲ್ಲಿ ರಾಮಾಯಣವನ್ನೇ ಆಶ್ರಯಿಸಿ ಎಷ್ಟು ಮಹಾಕವಿಗಳು ಉದಯಿಸುತ್ತಿದ್ದಾರೆ ನೀವೇ ನೋಡಿ! ರಾಮಾಯಣವನ್ನು ಆಧರಿಸಿ ಕೃತಿರಚಿಸಿದವರು ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿದ್ದಾರೆ. ಇದು ರಾಮಾಯಣದ ಹಿಂದೆ ಕವಿಯ ಗರಿಮೆಗೆ ಸ್ಫೂರ್ತಿ ಮೈಮೆ.

ದೇವುಡು ಅವರೂ ಶ್ರೀಮದ್ರಾಮಾಯಣದ ಮಿಂಚಿನ ಸ್ಪರ್ಶದಿಂದ ದೂರ ಉಳಿಯಲಾಗದುದಕ್ಕೆ ಹಲವು ಕಾರಣಗಳಿವೆ. ಆ ಕಾರಣಗಳು ಅವರ ವ್ಯಕ್ತಿತ್ವದಲ್ಲೂ ಸಾಧನೆಗಳಲ್ಲಿಯೂ ನಿಚ್ಚಳವಾಗಿವೆ.

ಸಂಪೂರ್ಣ ಸಾಂಪ್ರದಾಯಿಕ ಜೀವನ ಮಾರ್ಗದಲ್ಲಿ ನಡೆಯುತ್ತಿದ್ದ ದೇವುಡು ಅವರು ಕ್ರೈಸ್ತಪಾದ್ರಿ ಕನ್ನಡಸಾಹಿತಿ ಫಾದರ್ ರೆವರೆಂಡ್ ಉತ್ತಂಗಿ ಚೆನ್ನಪ್ಪನವರಲ್ಲಿ ಕ್ರಿಸ್ತ ಪ್ರಭೆಯನ್ನು ಕಂಡು ಅವರ ಭಕ್ತನಲ್ಲಿ ಭಗವಂತನನ್ನು ಕಂಡು, ಜಾತ್ಯಾತೀತ ಘೋಷಣೆ ಇಲ್ಲದೆ ವಿಶ್ವಮಾನವರಾಗಿ ಆತ್ಮೀಯ ಅತಿಥಿ ಸತ್ಕಾರ ನೀಡಿದ್ದು ಇಂದಿನ ತಲೆಮಾರಿಗೆ ಜೀವಂತ ಆದರ್ಶವಾಗಿದೆ. ಸುಲ್ತಾನ್ ಪೇಟೆಯ ಗಲಭೆಯಲ್ಲಿ ಗುಂಡುತಾಕಿದ ಮುದುಕನೊಬ್ಬನ ಬಳಿಗೆ ಸುಳಿಯಲು ಜನರು ನಡುಗುತ್ತಿದ್ದಾಗ ದೇವುಡು ಮುಂದೆ ಹೋಗಿ ಉಪಚರಿಸಿದರೆಂಬುದನ್ನು ಇಲ್ಲಿಯೇ ಹೇಳಬೇಕಾಗಿದೆ. ಇಂಥ ಮಿಂಚಿನ ಮಾನವೀಯತಾ ಪ್ರಚೋದನೆ ಇರುವ ಶಾಸ್ತ್ರಿಗಳು ಅದನ್ನು 'ಸಂಗ್ರಹ ರಾಮಾಯಣ'ದ ರೂಪದಲ್ಲಿ ಸಹೃದಯಿಗಳ ಮುಂದೆ ಇಟ್ಟಿದ್ದಾರೆ.

ಅವರು ಬರೆದಿರುವ 'ಶ್ರೀರಾಮಾಯಣದ ಮಹಾಪುರುಷರು' ಎಂಬ ಗ್ರಂಥದ ಉಪಸಂಹಾರ ಇದು; ''ನಿರ್ಗುಣವಾಗಿರುವಾಗ ತಾನೇ ತಾನಾಗಿರುವ ಬ್ರಹ್ಮವು ಮಾಯೆಯನ್ನಾಶ್ರಯಿಸಿ ಸಗುಣವಾಗಿ ವಿಶ್ವವನ್ನು ಸೃಷ್ಟಿಸಿ ಅಲ್ಲಿ ಆಟವನ್ನಾಡುವುದು. ಒಂದೇ ನಾಟಕ ಸಂಘದವರು ನಾಟಕದಲ್ಲಿ ಬೇರೆ ಬೇರೆ ಪಕ್ಷಗಳನ್ನು ಹಿಡಿದು ಹೋರಾಡಿ ಸಭಿಕರ ಮನಸ್ಸನ್ನು ಮೆಚ್ಚಿಸುವಂತೆ, ಅಭೇದ್ಯವಾದ ಉದ್ದೇಶದಿಂದ, ಆ ಈಶ್ವರನು ದೇವ ಮಾನುಷ ರಾಕ್ಷಸ ತಿರ್ಯಗಾದಿ ನಾನಾ ಭೇದಗಳುಳ್ಳ ಜಂತು ಜಾಲಗಳನ್ನು ಸೃಷ್ಟಿಸಿ ಅವರಿಂದ ನಾನಾ ಲೀಲೆಗಳನ್ನು ನಡೆಸುವನು.

''ಇಂತಹ ಮಹಾ ನಾಟಕಗಳಲ್ಲಿ ರಾಮಾಯಣವೂ ಒಂದು: ರಾಮಾಯಣವನ್ನು ಈ ರೀತಿಯಿಂದ ನೋಡಿ ಧನ್ಯರಾಗುವ ಮಹನೀಯರ ಪಾದಾರವಿಂದಗಳಿಗೆ ನಮೋ ನಮಃ'' ದೇವುಡು ಅವರ ಈ ಕಾಣ್ಕೆಗೆ ಅನುಗುಣವಾದುದು ಅವರ ಜೀವನ ಹಾಗೂ ಸಾಹಿತ್ಯ ಕೃತಿಗಳು; ಅದರಲ್ಲಿಯೂ ಸಂಗ್ರಹ ರಾಮಾಯಣ ಕನ್ನಡ ಕೃತಿ.

ಪಾಂಡಿತ್ಯ ಮತ್ತು ಪ್ರತಿಭೆಯ ಸಂಗಮವಾದ ದೇವುಡು ಪ್ರಯೋಗಶೀಲರು. ನಾಟಕ, ಸಿನಿಮಾ ರಂಗಗಳಲ್ಲಿ ದುಡಿಯಬಲ್ಲವರು; ಪತ್ರಿಕೆ ನಡೆಸಬಲ್ಲವರು; ಮಹಾಕಾದಂಬರಿಗಳನ್ನು ಕೊಡುತ್ತಲೇ ಸಂಗೀತ ಶಿಕ್ಷಣಕ್ಕೆ ಒಡ್ಡಿಕೊಳ್ಳಬಲ್ಲವರು; ವೈದಿಕ ಸನಾತನಿಯಾಗಿದ್ದು ಲೈಂಗಿಕ ವಸ್ತುವುಳ್ಳ ಪುಸ್ತಕವನ್ನು ಮೊದಲು ಕೊಡಬಲ್ಲವರು; ಸಾಂಪ್ರದಾಯಿಕ ಜೀವನ ನಡೆಸಿಯೂ ಆಧುನಿಕ ದೃಷ್ಟಿ ಹೊಂದಬಲ್ಲವರು; ಮನಸ್ಸಿನ ಸೂಕ್ಷ್ಮ ವ್ಯಾಪಾರಗಳನ್ನು ಗ್ರಹಿಸಿ ಚಿತ್ರಿಸಬಲ್ಲವರು. ಈ ಪ್ರಯೋಗಶೀಲತೆಯ ಒಂದು ಫಲವೇ 'ಸಂಗ್ರಹ ರಾಮಾಯಣ' ವೂ ಆಗಿದೆ. ಅದಕ್ಕೆ ಆಗತ್ಯವಿದ್ದ ಪೂರ್ವಸಿದ್ಧತೆ ಇದ್ದುದರಿಂದಾಗಿ ಈ ಪುಸ್ತಕದ ಯೋಗ್ಯತೆ ಹೆಚ್ಚಿದೆ.

ದೇವುಡು ಶಿಕ್ಷಕರಾಗಿದ್ದವರು. ಮಕ್ಕಳ ಶಿಕ್ಷಣಕ್ಕಾಗಿ ಪುಸ್ತಕಗಳನ್ನು ಬರೆದವರು, ಮಕ್ಕಳ ಪತ್ರಿಕೆಯನ್ನು ತಂದವರು. ಅದರ ಫಲವಾಗಿ 'ಸಂಗ್ರಹ ರಾಮಾಯಣ'ವು ಸರಳವಾದ, ಲಲಿತವಾದ, ರಂಜಕವಾದ ಮತ್ತು ಪರಿಣಾಮಕಾರಿಯಾದ ಶೈಲಿಯನ್ನು ಹದಗೊಳಿಸಿಕೊಂಡಿದೆ. ಅವರ ಭಾಷೆಯ

ಹದಕ್ಕೆ ಒಂದು ಉದಾಹರಣೆ ಇಲ್ಲಿದೆ. ಬಾಲಕಾಂಡದ ಭಾಗ ಇದು. ದಶರಥನ ವರ್ಣನೆಯನ್ನು ನೋಡಿ. ''ಆ ಮನುವಂಶದಲ್ಲಿ ದಶರಥನೆಂಬ ಅರಸನು ಹುಟ್ಟಿದನು. ಆತನು ವೇದಗಳನ್ನು ಬಲ್ಲವನು. ಅಪಾರವಾದ ಐಶ್ವರ್ಯವುಳ್ಳವನು. ಮಹರ್ಷಿಗಳಂತೆ ತಪಸ್ವಿಯು. ಎಲ್ಲರಿಗಿಂತಲೂ ಶೂರನು. ಆತನ ಆಳ್ವಿಕೆಯಲ್ಲಿ, ಭಾಗ್ಯವಂತರಿಂದ ಹಿಡಿದು ಬಡವರವರೆಗೆ ಎಲ್ಲರೂ ಸುಖವಾಗಿದ್ದರು.'' ಈ ಭಾಷೆ ಹೇಗೆ ಸುಲಲಿತವಾಗಿದೆ ಎಂಬುದನ್ನು ಎಲ್ಲರೂ ಮನಗಾಣಬಹುದು. ಯುದ್ಧವರ್ಣನೆಯೇ ಬೇಕಾದರೆ ನೋಡಿ ''ರಾಕ್ಷಸ ಮಾನುಷ ಯುದ್ಧವು ಮೊದಲಾಯಿತು. ಕೋಪದಿಂದ ಒಬ್ಬರನ್ನೊಬ್ಬರು ಬಾಣಗಳಿಂದ ಹೊಡೆಯುತ್ತಲೂ ಒಬ್ಬರ ಬಾಣಗಳನ್ನು ಇನ್ನೊಬ್ಬರು ಕಡಿಯುತ್ತಲೂ ಹೋರಾಡಿದರು. ಲಕ್ಷ್ಮಣನ ಬಾಣವು ಅತಿಕಾಯನ ಹಣೆಯನ್ನೂ ಅವನ ಬಾಣವು ಇವನ ಎದೆಯನ್ನೂ ಭೇದಿಸಲು ಇಬ್ಬರ ಕೋಪವೂ ಮೇರೆ ಮೀರಿತು. ಸೌಮಿತ್ರಿಯು ಆಗ್ನೇಯಾಸ್ತ್ರವನ್ನು ಹೊಡೆದನು ...'' ರಾಕ್ಷಸನು ಸೌರಾಸ್ತ್ರವನ್ನು ಹೊಡೆದನು. ಹೀಗೆ ಸಾಗುತ್ತದೆ. ದೇವುಡು ಅವರ ಈ ಗದ್ಯವನ್ನು ಓದಿದವರಿಗೆ ಹೊಸಗನ್ನಡದ ಅಶ್ವಿನೀ ದೇವತೆಗಳಲ್ಲೊಬ್ಬರೆನಿಸಿದ ಎ.ಆರ್. ಕೃಷ್ಣಶಾಸ್ತ್ರಿಗಳ ವಚನಭಾರತದ ನೆನಪಾಗುತ್ತದೆ. ಇಬ್ಬರೂ ಸಂಸ್ಕೃತ ಮತ್ತು ಕನ್ನಡಭಾಷೆ ಹಾಗೂ ಅವುಗಳ ಸಾಹಿತ್ಯವನ್ನು ಅರಗಿಸಿಕೊಂಡವರು. ಕನ್ನಡವನ್ನು ಕಸ್ತೂರಿಗೆ ಹೋಲಿಸಿದವರು ಇಂಥ ಉಭಯಭಾಷಾ ಪಂಡಿತರ ತಿಳಿಗನ್ನಡವನ್ನು ಓದಿ ಪ್ರೇರಣೆ ಪಡೆದಿರಬಹುದು.

ಈಗಿರುವಂತೆ ಈ ಪುಸ್ತಕವು ಜನಸಾಮಾನ್ಯರಿಗೆ ಹಿತವಾಗಿದೆ. ಅದನ್ನೇ ದೊಡ್ಡ ಅಕ್ಷರಗಳಲ್ಲಿ ಮುದ್ರಿಸಿ ಬಣ್ಣದ ಚಿತ್ರಗಳನ್ನು ಜೋಡಿಸಿಕೊಟ್ಟರೆ ಪುಟಾಣಿಗಳಿಗೆ ಮೆಚ್ಚಿನದಾಗುತ್ತದೆ. ಈ ಪುಸ್ತಕದ ಸಂಗ್ರಹ ಗುಣದಿಂದಾಗಿಯೇ ಪಂಡಿತರಿಗೂ ಹೊಸದೊಂದು ಅನುಭವವಾಗುತ್ತದೆ. ಅಲ್ಲಲ್ಲಿ ಬಂದಿರುವ ಅಡಿ ಟಿಪ್ಪಣಿಗಳು ಯಾವತ್ತೂ ಪ್ರಯೋಜಕವಾದುವು; ಮುಂಬರುವ ಪೀಳಿಗೆಗಳಿಗೆ ಅಗತ್ಯವಾದುವು. ಅವು ಕಠಿಣಪದಗಳಿಗೆ ಅರ್ಥಗಳನ್ನು ಕೊಡುತ್ತವೆ; ಹಿನ್ನೆಲೆಯನ್ನು ಚಿತ್ರಿಸುತ್ತದೆ; ಗಹನ ಸಂಗತಿಗಳನ್ನೂ ಒಳಗೊಂಡಿವೆ.

'ಸಂಗ್ರಹ ರಾಮಾಯಣ' ದಲ್ಲಿ ಸಾಮಾನ್ಯ ಓದುಗರಿಗಾಗಿ ಮತ್ತು ವಿಷಯಕ್ಕೆ ಅನುಗುಣವಾಗಿ ದೇವುಡು ಅವರು ಭಾಷೆಯನ್ನು ಹದಗೊಳಿಸಿಕೊಂಡಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬಹುದು. ಸಂಸ್ಕೃತವನ್ನು ಕಲಿಯುವವರಿಗಾಗಿ ಕನ್ನಡದಲ್ಲಿ 'ಮೂಲ ಸಂಸ್ಕೃತ' ಪಾಠಗಳನ್ನು ರಚಿಸಿದ ದೇವುಡು ಉಭಯ ಭಾಷಾನಿಪುಣರು ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಭಾಷೆಯ ಮೂಲಕ ಪರಿಸರವನ್ನು ಕಟ್ಟಬಲ್ಲ ಶಕ್ತಿಗೆ ನಿದರ್ಶನವಾಗಿ ಅವರ 'ಮಹಾಬ್ರಾಹ್ಮಣ'ದ ಒಂದೆರಡು ಸಾಲುಗಳನ್ನು ಇಲ್ಲಿ ಉದ್ಧರಿಸುತ್ತಿದ್ದೇನೆ. ಅದರ ಪ್ರಾರಂಭವೇ ಹೀಗಿದೆ. ''ಭಗವಾನ್ ಆದಿತ್ಯದೇವನು ಉಷೆಯಿತ್ತ ಹಸ್ತಲಾಘವವನ್ನು ಸ್ವೀಕರಿಸಿ, ಜಗತ್ತಿನ ಚರಾಚರಗಳಿಗೆಲ್ಲ ಚೈತನ್ಯವನ್ನು ದಾನಮಾಡುತ್ತ ಪ್ರಾಚೀ ಸಿಂಹಾಸನವನ್ನು ಏರ ಬರುತ್ತಿದ್ದಾನೆ. ನಕ್ಷತ್ರಗಳು ದೂರದಲ್ಲಿ ಪಶ್ಚಿಮ ದಿಗಂತದಲ್ಲಿ ಅಲ್ಲೊಂದು ಇಲ್ಲೊಂದು ಇದ್ದು, ಹೊಸರಾಜನ ಪ್ರಾದುರ್ಭಾವ ಕಾಲದಲ್ಲಿ ಇರುವ ಹಳೆಯ ರಾಜನ ಕಡೆಯವರಂತೆ ಅಸ್ತತೇಜರಾಗುತ್ತಿವೆ. ಮಹಾನುಭಾವರ

ಕೀರ್ತಿಯಂತೆ ಆಶ್ರಮಗಳಲ್ಲಿ ಹೋಮಧೂಮವು ಸೂಕ್ಷ್ಮವಾದರೂ ಸುಗಂಧ ಭೂಯಿಷ್ಠವಾಗಿ ಮೇಲಕ್ಕೇಳುತ್ತಿದೆ....''

'ಸಂಗ್ರಹ ರಾಮಾಯಣ'ದ ಭಾಷೆಯನ್ನು ಇದರೊಂದಿಗೆ ಹೋಲಿಸಿ ನೋಡಿದರೆ, ದೇವುಡು ಅಗತ್ಯಕ್ಕೆ ತಕ್ಕಂತೆ ಭಾಷೆಯನ್ನು ಹೇಗೆ ದುಡಿಸಿಕೊಳ್ಳಬಲ್ಲರು ಎಂಬುದು ತಿಳಿಯುತ್ತದೆ.

ದೇವುಡು ಅವರಿಗೆ, 'ಸಂಗ್ರಹ ರಾಮಾಯಣ'ವನ್ನು ರಚಿಸುವುದಕ್ಕೆ ಇದ್ದ ಅರ್ಹತೆಗಳಲ್ಲಿ ಎರಡನೆಯದು ಅವರ ಭಾಷಾಂತರ ಸಾಮರ್ಥ್ಯ. ಇಂಗ್ಲೀಷ್‌ನಿಂದ ಅವರು ಭಾಷಣಗಳನ್ನೂ ನಾಟಕಗಳನ್ನು ಭಾಷಾಂತರಿಸಿದ್ದಾರೆ. ರೂಪಾಂತರವನ್ನು ಮಾಡಿದ್ದಾರೆ. ಸಂಸ್ಕೃತದಿಂದ ಮಾಡಿರುವ ಪ್ರಸ್ತುತ ಸಂಗ್ರಹಾನುವಾದವು ಅವರ ಉಭಯಭಾಷಾ ಪ್ರಭುತ್ವದಿಂದಾಗಿ ಹೆಚ್ಚು ಗಟ್ಟಿಯಾಗಿದೆ. ಅರ್ಥಕ್ಕೆ ಲೋಪವಾಗದಂತೆ, ಮೂಲದ ಅನುಭವವನ್ನು ಕನ್ನಡದ ಓದುಗನಿಗೆ ತಲುಪಿಸುವುದಕ್ಕೆ ಅವರೊಬ್ಬ ಸೃಜನಶೀಲ ಸಾಹಿತಿಯೂ ಆಗಿರುವುದು ಪೂರಕ ಗುಣವಾಗಿ ಒದಗಿದೆ. ಮೂಲದಂತೆಯೇ ಈ ಗ್ರಂಥವು ಸಲೀಲವಾಗಿ ಓದಿಸಿಕೊಳ್ಳುತ್ತದೆ. ಪರಿಸರ, ಸಂಸ್ಕೃತಿ, ವ್ಯಕ್ತಿತ್ವ ಭಿನ್ನತೆಯು ಇಲ್ಲದುದರಿಂದಲೂ, ಅದಾಗಲೇ ಓದುಗನಿಗೆ ಗೊತ್ತಿರುವ ಕಥೆಯನ್ನೇ ಹೊಸದಾಗಿ ನಿರೂಪಿಸುವುದರಿಂದಲೂ ರಾಮಾಯಣದಂಥ ಕಾವ್ಯದ ಎಂಥದೇ ಅವತರಣಿಕೆಯೂ ಕಳೆಗೆಡುವ ಸಂಭವ ಕಡಿಮೆ. ಆದರೆ ಪ್ರತಿಭೆ, ಔಚಿತ್ಯಪ್ರಜ್ಞೆ, ಪರಿಶ್ರಮ ಇರುವ ದೇವುಡು ಅವರಂಥವರಲ್ಲಿ ಅದು ಮೂಲದ ಜೀವಂತಿಕೆಯನ್ನು ಆವೇಶಪೂರ್ಣವಾಗಿಯೇ ಉಳಿಸಿಕೊಳ್ಳುತ್ತದೆ. ಮೂಲಕಾವ್ಯದ ಗುಣಕ್ಕೆ ಲೋಪಬಾರದಂತೆ ಸ್ವಯಂಪೂರ್ಣವೂ, ಸುಸಂಬದ್ಧವೂ ಆದ ಘಟಕವಾಗಿ ಸಂಗ್ರಹಿಸುವುದರಲ್ಲಿ ದೇವುಡು ಯಶಸ್ವಿಯಾಗಿರುವುದು ಸಹಜವಾಗಿದೆ. ಇಪ್ಪತ್ತು ನಾಲ್ಕು ಸಾವಿರದಷ್ಟು ಶ್ಲೋಕಗಳಷ್ಟು ವಿಸ್ತಾರವಿರುವ ಸಂಸ್ಕೃತದ ವಾಲ್ಮೀಕಿ ರಾಮಾಯಣವನ್ನು (ಉತ್ತರ ಕಾಂಡ ಹೊರತಾಗಿ) ಕನ್ನಡ ಗದ್ಯಕ್ಕೆ ಅಷ್ಟದಳ ಆಕೃತಿಯ ೩೩೦ ಪುಟಗಳಿಗೆ ಸಂಗ್ರಹಿಸಿರುವ ದೇವುಡು ಮೂಲದ ಮಹಿತಿಯನ್ನು ಉಳಿಸಿಕೊಂಡಿದ್ದಾರೆ; ಸಂಗ್ರಹ ಸಾಮರ್ಥ್ಯವನ್ನು ಮೆರೆದಿದ್ದಾರೆ.

ತಕ್ಷಣ ಸಿಗುವ ಒಂದು ಸಣ್ಣ ಉದಾಹರಣೆ ನೋಡಿ. ಅಯೋಧ್ಯಾಕಾಂಡದ ಶ್ರೀರಾಮನ ಗುಣವರ್ಣನೆಯ ೩೪ ಶ್ಲೋಕಗಳು ದೇವುಡು ಅವರಲ್ಲಿ ೧೫ ಸಾಲುಗಳ ಒಂದು ಪ್ಯಾರಾವಾಗಿ ಬಂದಿದೆ. ಶ್ರೀರಾಮನು ಭರತನಿಗೆ ರಾಜನೀತಿಯನ್ನು ಬೋಧಿಸುವ, ಮೂಲದ ೭೬ ಶ್ಲೋಕಗಳು ೧೨ ಸಾಲುಗಳ ಪ್ಯಾರಾದಲ್ಲಿ ಅಡಕವಾಗಿದೆ. ಅಷ್ಟೇಕೆ? ಅಯೋಧ್ಯಾಕಾಂಡದ ೧೧೯ ಸರ್ಗಗಳು ದೇವುಡು ಅವರಲ್ಲಿ ೫೬ ಪುಟಗಳಲ್ಲಿ ಸೇರಿವೆ. ಸಂಗ್ರಹಾನುವಾದದಲ್ಲಿ ಇಂಥ ಅಡಕವು ಅನಿವಾರ್ಯವೇ. ಆದರೆ, ಮೂಲದ ವಿವರಗಳ ಆಶಯವನ್ನು ಬಿಡದೆ, ಮೂಲದ ಬಗೆಗೆ ಕುತೂಹಲ ಹುಟ್ಟಿಸುವ ಕೆಲಸವನ್ನು ಈ ಅನುವಾದ ಮಾಡುತ್ತದೆ. ವರ್ಣನೆಗಳು ಮತ್ತು ಹೆಚ್ಚಿನ ವಿವರಗಳನ್ನು ಕೈಬಿಡುವುದೋ ಸಂಗ್ರಹಿಸುವುದೋ ಉಚಿತವೆನಿಸಿದಾಗ ಹಾಗೆ ಮಾಡಲು ಹಿಂದುಮುಂದು ನೋಡದ ದೇವುಡು ರಸವದ್ ಭಾಗಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳುವ ಜಾಣ್ಮೆಯನ್ನು ಮೆರೆದಿರುವುದಕ್ಕೆ ನಿದರ್ಶನಗಳಿವೆ.

ರಾವಣನು ಹತನಾಗಿ ಬಿದ್ದಾಗ ರಾಮನು ವಿಭೀಷಣನಿಗೆ ಹೇಳುವ ಮಾತು ಇದು.

ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಂ
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷಯಥಾ ತವ||

ದೇವುಡು ಅವರಲ್ಲಿ ಅದು - ''ಮರಣದೊಡನೆ ವೈರವೂ ಕಳೆಯಿತು. ನಮ್ಮ ಕೆಲಸವಾಯಿತು. ಈಗ ಈತನು ನಿನಗೆ ಹೇಗೋ ನನಗೂ ಹಾಗೇ; ಕರ್ಮಗಳನ್ನು ಮಾಡು'' ಎಂದನು - ಹೀಗೆ ಬಂದಿದೆ.

ಯುದ್ಧವು ಮುಗಿದ ಮೇಲೆ ಆಂಜನೇಯನು ಅಶೋಕವನಕ್ಕೆ ಬಂದು ಸೀತೆಗೆ ಹೇಳುತ್ತಾನೆ ''ನೀನು ಅಪ್ಪಣೆ ಕೊಟ್ಟರೆ ಈ ರಾಕ್ಷಸಿಯರನ್ನೆಲ್ಲಾ ಸಂಹರಿಸುವೆನು. ಇವರೆಲ್ಲರೂ ನಿನ್ನನ್ನು ಬಹಳ ಗೋಳುಗುಟ್ಟಿಸಿರುವರು'' ಅದಕ್ಕೆ ಸೀತೆ ಕೊಡುವ ಉತ್ತರವನ್ನು ನೋಡಿ:

ರಾಜ ಸಂಶ್ರಯವಶ್ಯಾನಾಂ ಕುರ್ವತೀನಾಂ ಪರಾಜ್ಞಯಾ
ವಿಧೇಯಾನಾಂಚ ದಾಸೀನಾಂ ಕಃ ಕುಪ್ಯೇದ್ವಾನರೋತ್ತಮ||
ಭಾಗ್ಯ - ವೈಷಮ್ಯ - ಯೋಗೇನ ಪುರಾ ದುಶ್ಚರಿತೇನ ಚ
ಮಯ್ಯೈತತ್ ಪ್ರಾಪ್ಯತೇ ಸರ್ವಂ ಸ್ವಕೃತಂ ಹ್ಯುಪಭುಜ್ಯತೇ||
ಪ್ರಾಪ್ತವ್ಯಂ ತು ದಶಾಯೋಗಾನ್ಮಯ್ಯೈತದಿತಿ ನಿಶ್ಚಿತಮ್
ದಾಸೀನಾಂ ರಾವಣಸ್ಯಾಹಂ ಮರ್ಷಯಾಮೀಹ ದುರ್ಬಲಾ||
ಆಜ್ಞಸ್ತಾ ರಾವಣೇನ್ಯೈತಾ ರಾಕ್ಷಸ್ಯೋ ಮಾಮತರ್ಜಯನ್
ಹತೇ ತಸ್ಮಿನ್ನ ಕುರ್ಯರ್ಹಿ ತರ್ಜನಂ ವಾನರೋತ್ತಮ||
ಅಯಂ ವ್ಯಾಘ್ರಸಮೀಪೇ ತು ಪುರಾಣೋ ಧರ್ಮಸಂಹಿತಃ
ಋಕ್ಷೇಣ ಗೀತಃ ಶ್ಲೋಕೋ ಮೇ ತನ್ನಿಬೋಧ ಪ್ಲವಂಗಮ''
ನ ಪರಃ ಪಾಪಮಾದತ್ತೇ ಪರೇಷಾಂ ಪಾಪಕರ್ಮಣಾಮ್|
ಸಮಯೋ ರಕ್ಷಿತವ್ಯಸ್ತು ಸಂತಶ್ಚಾರಿತ್ರಭೂಷಣಾಃ ||
ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣಾಂ ಪ್ಲವಂಗಮ
ಕಾರ್ಯಂ ಕರುಣಮಾರ್ಯೇಣ ನ ಕಶ್ಚಿನ್ನಾಪರಾಧ್ಯತಿ||

ದೇವುಡು ಈ ಭಾಗವನ್ನು ಸಂಗ್ರಹಿಸಿರುವುದು ಹೀಗೆ: ''ರಾಜನ ಆಶ್ರಯದಲ್ಲಿದ್ದು ಇನ್ನೊಬ್ಬರ ಅಪ್ಪಣೆಗೆ ಒಳಗಾಗಿ ನಡೆಯುವ ದಾಸಿಯರಲ್ಲಿ ಯಾರು ತಾನೇ ಕೋಪಗೊಳ್ಳುವರು? ನನ್ನ ಭಾಗ್ಯವು ಬೇರೆಯಾಗಿ, ನನ್ನ ಪಾಪದಿಂದ ಈ ಅವಸ್ಥೆಯು ಬಂತು. ಎಲ್ಲರೂ ತಮ್ಮ ತಮ್ಮ ಕರ್ಮದ ಫಲವನ್ನು ಅನುಭವಿಸುವರು. ರಾವಣನ ಆಜ್ಞೆಯಾಯಿತು; ಅವರು ನನ್ನನ್ನು ಕಾಡಿದರು. ಅವನೇ ಹೋದಮೇಲೆ ಇವರು ಈಗ ಕಾಡುವರೆ? ಪಾಪಿಗಳಾಗಲಿ ಪುಣ್ಯವಂತರಾಗಲಿ ವಧಕ್ಕೆ ಅರ್ಹರಾಗಿರಲಿ, ಅವರಲ್ಲಿ ಸಜ್ಜನರು ದಯೆ ತೋರಬೇಕು! ಲೋಕದಲ್ಲಿ ಅಪರಾಧ ಮಾಡದವರು ಯಾರುಂಟು?''

ಕೊನೆಯದಾಗಿ ಒಂದೇ ಒಂದು ಪುಟ್ಟ ಸಂಗತಿ. ಇಂದ್ರನು ಕೊನೆಯಲ್ಲಿ ಬಂದು ರಾಮನಿಗೆ ವರವೊಂದನ್ನು ನೀಡಲು ಮುಂದಾದನು. ರಾಮನು ಕೇಳಿದ್ದು ಇದು:

ಮಮ ಹೇತೋಃ ಪರಾಕ್ರಾಂತಾ ಯೇ ಗತಾ ಯಮಸಾದನಮ್
ತೇ ಸರ್ವೇ ಜೀವಿತಃ ಪ್ರಾಪ್ಯ ಸಮುತ್ತಿಷ್ಠಂತು ವಾನರಾಃ ||
ಮತ್ಕೃತೇ ವಿಪ್ರಯುಕ್ತಾ ಯೇ ಪುತ್ರೈರ್ದಾರೈಶ್ಚ ವಾನರಾಃ
ಮತ್ಪ್ರಿಯೇಷ್ವಭಿಯುಕ್ತಾಶ್ಚ ನ ಮೃತ್ಯುಂ ಗಣಯಂತಿ ಚ ||
ತ್ವತ್ಪ್ರಸಾದಾತ್ ಸಮೇಯಸ್ತೇ ವರಮೇತಮಹಂ ವೃಣೇ
ನೀರುಜೋ ನಿರ್ವ್ರಣಾಂಶ್ಚೈವ ಸಂಪನ್ನ ಬಲಪೌರುಷಾನ್||
ಗೋಲಾಂಗೂಲಾಂಸ್ತಥೈವರ್ಷಾನ್ ದ್ರಷ್ಟುಮಿಚ್ಛಾಮಿ ಮಾನದಿ
ಅಕಾಲೇ ಚಾಪಿ ಪುಷ್ಪಾಣಿ ಮೂಲಾನಿ ಚ ಫಲಾನಿ ಚ ||

ಅದಕ್ಕೆ ದೇವುಡು ಅವರ ಗದ್ಯ ಹೀಗಿದೆ: ''ನನಗಾಗಿ ಮಡದಿ ಮಕ್ಕಳನ್ನು ಬಿಟ್ಟುಬಂದ ವಾನರರು ಅನೇಕರು ಹತರಾಗಿರುವರು. ಅವರೆಲ್ಲ ಬದುಕಲಿ. ಇನ್ನು ಮೇಲೆ, ನನಗೆ ಸಹಾಯ ಮಾಡಿದ ಈ ವಾನರರು ಇರುವ ಕಡೆ ಯಾವಾಗಲೂ ಮರಗಳಲ್ಲಿ, ಹಣ್ಣು ಹೂಗಳಿರಲಿ. ನೀರು ತಿಳಿಯಾಗಿರಲಿ'' 'ಅಕಾಲೇಚಾಪಿ' ಎನ್ನುವುದನ್ನು 'ಅಕಾಲದಲ್ಲಿಯೂ' ಎಂದೋ 'ಕಾಲಾಕಾಲಗಳೆನ್ನದೆ' ಎಂದೋ ಅನುವಾದಿಸುವುದು ಮೂಲಕ್ಕೆ ಹೆಚ್ಚು ನ್ಯಾಯವನ್ನೊದಗಿಸೀತು. ಆದರೂ, ಈ ಎಲ್ಲ ನಿದರ್ಶನಗಳಲ್ಲಿ ವ್ಯಕ್ತವಾಗುವಂತೆ ದೇವುಡು ಅವರು ತಮ್ಮ ಔಚಿತ್ಯ ಪ್ರಜ್ಞೆಯಿಂದ ಆ ಮಾತುಗಳಿಗೆ ಯೋಗ್ಯಸ್ಥಾನವನ್ನು ನೀಡಿರುವುದು ಶ್ಲಾಘ್ಯವಾಗಿದೆ ಎಂದೇ ಹೇಳಬೇಕು.

ಮುದ್ದಾಗಿ ಮುದ್ರಿತವಾಗಿರುವ ಈ ಗ್ರಂಥವು ಮುದ್ರಾರಾಕ್ಷಸನ ಕಾಟದಿಂದ ಬಹುಪಾಲು ಮುಕ್ತವಾಗಿದೆ. ಆದರೆ ದೇವುಡು ಅವರಂಥ ಪಂಡಿತರ ಪುಸ್ತಕಗಳನ್ನು ಅಚ್ಚು ಮಾಡುವಾಗ ಒಂದೇ ಒಂದು ತಪ್ಪೂ ನುಸುಳಬಾರದೆಂದು ಕನ್ನಡ ಸಾರಸ್ವತ ಲೋಕ ಬಯಸುತ್ತದೆ. ಏಕೆಂದರೆ ಅಂಥ ಪಂಡಿತರ ಲೇಖನವು ಭಾಷಾಶುದ್ಧಿಗೂ ಮೇಲ್ಪಂಕ್ತಿಯನ್ನು ಹಾಕುತ್ತದೆ.

ಇದು ಗುಣಕ್ಕಿಂತ ರೂಪಕ್ಕೆ ಹೆಚ್ಚು ಬೆಲೆ ಕೊಡುವ ಕಾಲ; ಕೊನೆಯ ಪಕ್ಷ ಬಾಹ್ಯ ಲಕ್ಷಣಗಳು ಆಕರ್ಷಣೆಯನ್ನೊಡ್ಡುವ ಕಾಲ. ಅಂತರಂಗ ಸೌಂದರ್ಯದಿಂದ ಕೂಡಿದ ಈ ಗ್ರಂಥವು ಸ್ಫುಟವಾಗಿ, ಮುದ್ದಾಗಿ, ಅಚ್ಚುಕಟ್ಟಾಗಿ ಮುದ್ರಣಗೊಂಡು ಹೊರಕವಚವೂ ರಂಜಕವಾದಾಗ ಮಾತ್ರ ದೇವುಡು ಅವರ ಶ್ರಮಕ್ಕೆ ಗೌರವವನ್ನು ಸಲ್ಲಿಸಿದಂತಾಗುತ್ತದೆ. ಪ್ರಸ್ತುತ ಗ್ರಂಥದ ಮುಖಪುಟದಲ್ಲಿನ ಪ್ರಖ್ಯಾತವಾದ ಸೀತಾ, ರಾಮ, ಲಕ್ಷ್ಮಣ, ಹನುಮದ್ವರ್ಣಚಿತ್ರವು ಸೂಕ್ತವಾದುದೂ ಆಕರ್ಷಕವಾದುದೂ, ಪರಿಣಾಮಕಾರಿಯಾದುದೂ ಹೌದು.

ಕಂಬನ್ ಎಂಬ ತಮಿಳು ಕವಿಯು ನಿತ್ಯವೂ ಮೂಲ ರಾಮಾಯಣವನ್ನು ಆಳವಾಗಿ ಅಧ್ಯಯನ ಮಾಡಿ ಬಹು ಪರಿಶ್ರಮದಿಂದ ತನ್ನ ನಿರೂಪಣೆಯನ್ನು ಮಾಡಿದನಂತೆ. ಭಾರತದಲ್ಲಿ

ದೊರೆಯುವ ರಾಮಾಯಣದ ಆವೃತ್ತಿಗಳಲ್ಲಿ ಅದೂ ಮುಖ್ಯವಾದುದು. ಅಂಥ ದೊಡ್ಡ ಹೆಸರಿನ ಕಂಬನ್ ಕೊನೆಗೆ, ''ಕ್ಷೀರ ಸಾಗರದ ದಂಡೆಯಲ್ಲಿ ಕುಳಿತ ಬೆಕ್ಕೊಂದು ಇಡೀ ಸಾಗರದ ಹಾಲನ್ನೆಲ್ಲಾ ಚಪ್ಪರಿಸಿಬಿಡುವೆನೆಂದು ಆಶಿಸುವ ಹಾಗಿದೆ, ರಾಮಾಯಣವನ್ನು ಮತ್ತೆ ಬರೆಯುವ ನನ್ನ ಪ್ರಯತ್ನ'' ಎಂದು ಉದ್ಗರಿಸಿದನಂತೆ! ಆ ಮಾತು ಮೂಲ ರಾಮಾಯಣದ ಪ್ರೇರಕ ಶಕ್ತಿಯನ್ನು ಧ್ವನಿಸುತ್ತದೆ. ಹಾಗೆಯೆ ರಾಮಾಯಣದ ಪುನರ್‌ಸೃಷ್ಟಿಯ ಸಾಧ್ಯತೆಯನ್ನೂ ಅಗತ್ಯವನ್ನೂ ಸೂಚಿಸುತ್ತದೆ. ವ್ಯಕ್ತಿಯಿಂದ ಸಮಷ್ಟಿಯವರೆಗೆ ರಾಮ ರಾವಣರಿಂದ ತುಂಬಿದ ಈ ನಾಟಕ ಶಾಲೆಯಲ್ಲಿ ಅಂತಿಮವಾಗಿ ರಾಮಶಕ್ತಿಗೆ ಜಯವಾಗುವುದಕ್ಕಾಗಿ ಮನಮನದಲ್ಲಿ ಶ್ರೀಮದ್ರಾಮಾಯಣವು ಹೊಸಹೊಸದಾಗಿ ಅವತರಿಸುತ್ತಿರಲಿ

ದೇವುಡು ಅವರ 'ಸಂಗ್ರಹ ರಾಮಾಯಣ'ದಂತೆಯೇ ಅವರ ಸಂಗ್ರಹ ಭಾರತ, ಸಂಗ್ರಹ ಭಾಗವತ ಗ್ರಂಥಗಳೂ ಕನ್ನಡಿಗರಿಗೆ ಮರುಮುದ್ರಣವಾಗಿ ಶೀಘ್ರದಲ್ಲಿ ದೊರೆಯಲಿ. ಸಂಸ್ಕೃತ ಓದಲಾಗದ ಜನಕ್ಕೆ ಆ ಭಾಷೆಯಲ್ಲಿನ ಸಾಹಿತ್ಯರತ್ನಗಳು ಕನ್ನಡಿಗರಿಗೆ ದೊರೆಯಲಿ ಎಂದು ಹಾರೈಸುತ್ತೇನೆ.

★

ದೇವುಡು ಕಥೆಗಳ ಸ್ಥೂಲ ನೋಟ

ಶ್ರೀ. ಲಿಂಗರಾಜು

ಕನ್ನಡದಲ್ಲಿ ಕಥೆಗಳು ಒಂದು ಪ್ರಕಾರವಾಗಿ ಬೆಳೆಯುತ್ತ ಬಂದಿರುವುದನ್ನು ಇಪ್ಪತ್ತನೆಯ ಶತಮಾನದ ಉದ್ದಕ್ಕೂ ಹಲವು ಮಜಲುಗಳಲ್ಲಿ ಗುರುತಿಸಬಹುದು. ಒಂದು ಶತಮಾನದವರೆಗಿನ 'ಕಥೆ'ಯ ಈ ಬೆಳೆವಣಿಗೆಗೆ 'ವಡ್ಡಾರಾಧನೆ'ಯಂಥ ಕನ್ನಡದ ಮೊಟ್ಟಮೊದಲ ಕೃತಿಯೊಂದನ್ನು ಹಿನ್ನೆಲೆಯಾಗಿ ನೋಡಬಹುದಾದರೆ ಈ ಪ್ರಕಾರಕ್ಕೆ ಒಂದು ಸಾವಿರಕ್ಕೂ ಮಿಕ್ಕ ವರ್ಷಗಳ ಸುದೀರ್ಘಕಾಲವೂ ಇದೆ. ಬದುಕಿನ ಎಲ್ಲ ಮಗ್ಗಲುಗಳ ಚಿತ್ರಣವನ್ನು ತನ್ನೆಲ್ಲ ವೈವಿಧ್ಯತೆಯಲ್ಲಿ ಹಿಂದೆಂದಿಗಿಂತ ಅನನ್ಯವಾಗಿ ಇಪ್ಪತ್ತನೆಯ ಶತಮಾನದಲ್ಲಿ ಸೃಜಿಸಿಕೊಂಡಿರುವುದರಿಂದಲೂ ಕಥಾಪ್ರಕಾರಕ್ಕೆ ಒಂದು ವಿಶೇಷ ಸ್ಥಾನ ಲಭಿಸಿದೆ ಹಾಗೂ ಕಾವ್ಯ ಪ್ರಕಾರಕ್ಕೆ ಇದು ಹೆಗಲೆಣೆಯಾಗಿ ನಿಂತಿದೆ.

'ಕಥೆ' ಎನ್ನುವುದು ಹೀಗೆ ಒಂದು ಮುಖ್ಯಪ್ರಕಾರವಾಗಿ ಆಧುನಿಕ ಸಾಹಿತ್ಯದಲ್ಲಿ ಬೆಳೆಯಲು ಇಂಗ್ಲೀಷರು ರೂಢಿಸಿದ ಶಿಕ್ಷಣ ಪದ್ಧತಿ ಹಾಗೂ ಇದರೊಂದಿಗೇ ಸಂಪರ್ಕಕ್ಕೆ ಬಂದ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಮತ್ತು ಅದು ಹುಟ್ಟು ಹಾಕಿದ ಓದಿನ ಅಭಿರುಚಿ ಕೂಡ ಪ್ರಮುಖ ಕಾರಣವಾಗಿದೆ. ಹೀಗಾಗಿಯೇ, ಇಪ್ಪತ್ತನೆಯ ಶತಮಾನದ ಆರಂಭದವರೆಗೂ ಶ್ರವ್ಯದ – ಕೇಳು – ಹೇಳುವ – ನೆಲೆಯನ್ನೇ ಪ್ರಧಾನವಾಗಿಸಿಕೊಂಡಿದ್ದ ಕನ್ನಡ ಸಾಹಿತ್ಯ ಹಿಂದೆಂದೂ ಇಲ್ಲದ ಮಟ್ಟಿನಲ್ಲಿ ಓದಿನ ವಾಚಕವರ್ಗವನ್ನು ಬೆಳೆಸಿಕೊಂಡಿತು. ಇಂಥ ಓದಿನ ಅಭಿರುಚಿ ಕೂಡ, ಕನ್ನಡದಲ್ಲಿ ಆವರೆಗೂ ಗೌಣವಾಗಿದ್ದ 'ಕಥೆ' ಯನ್ನು ಒಂದು ಮುಖ್ಯ ಪ್ರಕಾರವಾಗಿಸಿತು; ಕಥೆ ಎನ್ನುವುದು ಹಿಂದೆಂದಿಗಿಂತ ಭಿನ್ನವಾದ ನಾವಿನ್ಯತೆ ಪಡೆಯಿತು. ತನ್ನನ್ನು ತಾನು ಸೃಜಿಸಿಕೊಳ್ಳುವ ಹೊಸತನವನ್ನು ಹಲವು ನಿಟ್ಟಿನಲ್ಲಿ ತುಂಬಿಕೊಂಡಿತು. ಬದುಕಿನ ಎಲ್ಲ ರಂಗದ ಅನುಭವವನ್ನು ಸುಲಭವಾಗಿ ಒಳಗೊಳ್ಳುವಂಥ ಸರಳತೆ ಕಥಾಪ್ರಕಾರಕ್ಕೆ ಇರುವುದು ಕೂಡ ಸಮೃದ್ಧಸೃಷ್ಟಿಗೆ ಕಾರಣವಾಯಿತು.

೨

ಹತ್ತೊಂಬತ್ತು-ಇಪ್ಪತ್ತನೇ ಶತಮಾನದ ಸಂಧಿಕಾಲದಲ್ಲಿ ಬರವಣಿಗೆ ಆರಂಭಿಸಿದ ಕನ್ನಡ ಲೇಖಕರಲ್ಲಿ ಹೆಚ್ಚಿನ ಮಟ್ಟಿಗೆ ಎಲ್ಲರೂ ಕಥಾ ಪ್ರಕಾರಕ್ಕೆ ವಿಶೇಷ ಒಲವನ್ನು ತೋರಿದ್ದಾರೆ. ಕಥೆ ಬರೆಯುವುದು, ಕಥೆಗಾರರಾಗಿ ತಮ್ಮನ್ನು ಗುರುತಿಸಿಕೊಳ್ಳುವುದು ಮೂರು ನಾಲ್ಕನೇ ದಶಕದ ಅವಧಿಯಲ್ಲಿ ಒಂದು ಗೌರವ ಎಂಬಂತೆ ಕಾಣಸಿಗುತ್ತದೆ. ಆದರೆ, 'ಕಥೆ'ಯ ಬಗೆಗಿನ ಈ ಸೆಳೆತ ಈ ಪ್ರಕಾರದಲ್ಲಿ ಕಥೆ ಬರೆದ ಎಲ್ಲರನ್ನೂ ಕಥೆಗಾರರನ್ನಾಗಿಸಿಲ್ಲ ಎನ್ನುವುದು ಲಕ್ಷಿಸಬೇಕಾದ ಸಂಗತಿಯಾಗಿದೆ.

ಈ ಅವಧಿಯಲ್ಲಿ ಬರವಣಿಗೆಗೆ ತೊಡಗಿದ ಲೇಖಕರು ಒಂದೆಡೆಯಲ್ಲಿ ಸ್ವಾತಂತ್ರ್ಯ ಹೋರಾಟ, ಗಾಂಧಿ ಪ್ರಭಾವವನ್ನು ಒಳಗೊಳ್ಳುತ್ತಿರುವಂತೆಯೇ, ಕರ್ನಾಟಕ ಏಕೀಕರಣ ಹಾಗೂ ಆಧುನಿಕತೆಗೆ ಹೊರಳಿಕೊಳ್ಳುತ್ತಿದ್ದ ಜನಜೀವನವನ್ನೂ ಕಾಣುತ್ತಿದ್ದರು. ಹೀಗಾಗಿ ಏಕಕಾಲಕ್ಕೆ ಹಲವು

ಒತ್ತಡಗಳಿಗೆ ಸ್ಪಂದಿಸುವ ಸಂದರ್ಭ ಈ ಲೇಖಕರಿಗಿತ್ತು. ಆಗ ಕನ್ನಡ ಮಾತಾಡುವ ಪ್ರಾಂತ್ಯಗಳು ನಾಲ್ಕೆಸೆಗಳಲ್ಲಿ ಆಡಳಿತಾತ್ಮಕ ನೆಲೆ ಹೊಂದಿದ್ದವು. ಮೈಸೂರು, ಮದರಾಸು, ಮುಂಬೈ ಹಾಗೂ ಹೈದರಾಬಾದು ಪ್ರಾಂತ್ಯಗಳಲ್ಲಿ ಚೆದುರಿಕೊಂಡಿದ್ದ ಕನ್ನಡ ಭಾಷಿಕ ನೆಲದಲ್ಲಿ ಒಂದೊಂದೆಡೆಯಲ್ಲಿ ಒಂದೊಂದು ತೆರನ ಪ್ರಭಾವವಿತ್ತು. ಮೈಸೂರು ಭಾಗದಲ್ಲಿ ಬಂಗಾಳಿ ಸಾಹಿತ್ಯವನ್ನೊಳಗೊಂಡು ಆಂಗ್ಲ ಸಾಹಿತ್ಯದ ಪ್ರಭಾವವಿದ್ದರೆ, ಮುಂಬೈ ಪ್ರಾಂತ್ಯದಲ್ಲಿ ಮರಾಠಿ ಸಾಹಿತ್ಯದ ಪ್ರಭಾವವಿತ್ತು; ಹೈದರಾಬಾದು ಪ್ರಾಂತ್ಯ ಉರ್ದು ಪರಿಸರದಲ್ಲಿತ್ತು.

ಹೀಗೆ ನಾಲ್ಕೆಸೆಯಲ್ಲಿದ್ದ ಕನ್ನಡ ಭಾಷೆಯಾಡುವ ಪ್ರದೇಶ ಮತ್ತೆ ತಾನು ಒಗ್ಗೂಡಿಕೊಳ್ಳುವ ಸಂದರ್ಭಕ್ಕೆ ಮುನ್ನ ಲೇಖನಿ ಹಿಡಿದ ಕೈಗಳು ಒಂದು ಉತ್ಕರ್ಷದ ಕಾಲಘಟ್ಟವನ್ನು ತಮ್ಮ ಸೃಜನಾತ್ಮಕತೆಯಿಂದ ತುಂಬುತ್ತಿದ್ದವು; ಒಂದು ಭಾಷಿಕ ನೆಲ ಮರಳಿ ಒಗ್ಗೂಡುವ ಪ್ರಕ್ರಿಯೆಗೆ ಪರೋಕ್ಷವಾಗಿ ತಮ್ಮದೇ ಆದ ಒತ್ತಾಸೆಯನ್ನು ನೀಡುತ್ತಿದ್ದವು. ಈ ಒತ್ತಾಸೆಯಲ್ಲಿ ಒಂದು ಭಾಷಿಕ ಜನಾಂಗದ ಪರಂಪರೆ, ಸಂಸ್ಕೃತಿಗಳೆಲ್ಲ ಒಟ್ಟೊಟ್ಟಿಗೇ ಮೇಳೈಸಿದ್ದವು. ದೇವುಡು ನರಸಿಂಹ ಶಾಸ್ತ್ರಿಗಳು ಇಂಥದೊಂದು ಪರಿವರ್ತನಾಶೀಲ ಕಾಲಘಟ್ಟದಲ್ಲಿ ಇದರ ಎಲ್ಲ ತಿರುವು ಮುರುವುಗಳಲ್ಲಿ ಹಾಯ್ದ ಲೇಖಕರು.

೩

ದೇವುಡು ನರಸಿಂಹಶಾಸ್ತ್ರಿಗಳು 'ದೇವುಡು' ಎಂದೇ ಪ್ರಸಿದ್ಧರು. ದೇವುಡು ಎನ್ನುವುದು ಇವರ ಮನೆತನದ ಹೆಸರು. ಇವರ ಪೂರ್ವಿಕರು ಆಂಧ್ರದವರು. ದೈವದೊಂದಿಗೆ ಸಂಭಾಷಣೆ ನಡೆಸುವ ಅಲೌಕಿಕತೆ ಪಡೆದುಕೊಂಡಿದ್ದನ್ನು 'ದೇವುಡು' ಎಂದು ಕರೆಯಲಾರಂಭಿಸಿದ್ದೇ ಮನೆತನದ ಹೆಸರಾಗಿ ಉಳಿಯಿತು. ಸುಮಾರು ಮುನ್ನೂರು ವರ್ಷಗಳಷ್ಟು ಹಿಂದೆ ಆಂಧ್ರದಿಂದ ಮೈಸೂರು ಪ್ರಾಂತ್ಯಕ್ಕೆ ಬಂದರೂ 'ದೇವುಡು' ಹೆಸರಿನ ವಿಶೇಷತೆ ಇವರಲ್ಲಿ ಉಳಿದು ಬಂದಿತು.

ನರಸಿಂಹಶಾಸ್ತ್ರಿಗಳ ತಂದೆ-ತಾಯಿಗಳು ದೇವುಡು ಕೃಷ್ಣಶಾಸ್ತ್ರಿ-ಸುಬ್ಬಮ್ಮ. ಜನಿಸಿದ್ದು ಮೈಸೂರಿನಲ್ಲಿ ೨೯-೧೨-೧೮೯೭ ರಲ್ಲಿ. ವಿದ್ಯಾಭ್ಯಾಸ ಸಂಸ್ಕೃತ ಎಂ.ಎ.ವರೆಗೆ ನಡೆಯಿತು. ಡಾ. ರಾಧಾಕೃಷ್ಣನ್ ಅವರಂಥ ಮೇಧಾವಿಗಳು ಇವರ ಗುರುವರ್ಗದಲ್ಲಿದ್ದರು. ತತ್ತ್ವಶಾಸ್ತ್ರದ ಗಂಭೀರ ಅಭ್ಯಾಸ ವಿದ್ಯಾರ್ಥಿ ಜೀವನದೊಂದಿಗೇ ಇವರನ್ನು ಸೆಳೆದುಕೊಂಡಿತ್ತು. ಎಂ.ಎ. ಪದವಿ ಪಡೆದ ಹದಿನೇಳು ವರ್ಷಗಳ ನಂತರ ಮೀಮಾಂಸ ಅಧ್ಯಯನಕ್ಕೆ ಮಹಾಮಹೋಪಾಧ್ಯಾಯ ವೈದ್ಯನಾಥ ಶಾಸ್ತ್ರಿಗಳಲ್ಲಿ ಗುರುಕುಲ ಪದ್ಧತಿಯಂತೆ ಶಿಷ್ಯತ್ವ ಸ್ವೀಕರಿಸಿದ್ದು ಇವರ ಜ್ಞಾನದಾಹಕ್ಕೆ ಉದಾಹರಣೆಯನ್ನು ತೋರುತ್ತದೆ.

ವಿದ್ಯಾರ್ಥಿ ದೆಸೆಯಿಂದಲೇ ಬರವಣಿಗೆ ಆರಂಭಿಸಿದ ದೇವುಡು ಅವರ ಜೀವನ ಹಲವು ನಿಟ್ಟಿನಲ್ಲಿ ಸಾಗಿತು. ೧೯೨೫ ರಲ್ಲಿ ಮೈಸೂರಿನ ಸದ್ವಿದ್ಯಾ ಶಾಲೆಯಲ್ಲಿ ಮುಖ್ಯೋಪಾಧ್ಯಾಯ ವೃತ್ತಿಯೊಂದಿಗೆ ವೃತ್ತಿ ಜೀವನ ಆರಂಭಿಸಿದರು. ೧೯೨೮ ರಲ್ಲಿ ಬೆಂಗಳೂರಿನ ಆರ್ಯ ವಿದ್ಯಾಶಾಲೆಗೆ ಮುಖ್ಯೋಪಾಧ್ಯಾಯರಾಗಿ ಬಂದರು. ಬೆಂಗಳೂರಿಗೆ ಬಂದ ನಂತರ ಉಪಾಧ್ಯಾಯ ವೃತ್ತಿಯೊಂದಿಗೆ ಇತರೆ ಚಟುವಟಿಕೆಗಳಲ್ಲಿ ಇವರನ್ನು ತೊಡಗಿಸಿತು. ಹೀಗಾಗಿ 'ಕರ್ನಾಟಕ ಫಿಲ್ಮ್ ಕಾರ್ಪೊರೇಷನ್'

ಸ್ಥಾಪನೆಗೆ ಒಬ್ಬ ಕಾರಣಕರ್ತರಾದರು; 'ರಂಗಭೂಮಿ' ಹಾಗೂ 'ನಮ್ಮ ಪುಸ್ತಕ' ನಿಯತಕಾಲಿಕೆಗಳ ಸಂಪಾದನಾ ಕಾರ್ಯ ಮಾಡಿದರು; ರಂಗಭೂಮಿ ಹಾಗೂ ಚಲನಚಿತ್ರಗಳ ಒಡನಾಟದಲ್ಲಿ ನಟನೆ ಮತ್ತು ಚಿತ್ರಕಥೆ ಸಂಭಾಷಣೆಗಳ ರಚನೆಯಲ್ಲಿ ತೊಡಗಿದರು; ಪ್ರಜಾಪ್ರತಿನಿಧಿ ಸಭೆಗೆ ನೇಮಕಗೊಂಡರು; ಸಿಟಿ ಕಾರ್ಪೊರೇಟರ್ ಆಗಿ ಚುನಾಯಿತರಾದರು; ಗೀರ್ವಾಣ ವಿದ್ಯಾಪೀಠ ಸ್ಥಾಪಿಸಿದರು.

ದೇವುಡು ಅವರ ಕಾರ್ಯಕ್ಷೇತ್ರ ಸಾಹಿತ್ಯಕ್ಕಷ್ಟೇ ಸೀಮಿತವಾಗಿರಲಿಲ್ಲ; ಸುತ್ತಿನ ಜೀವನ ಒಳಗೊಳ್ಳುತ್ತಿದ್ದ ಮುಖ್ಯ ತಿರುವುಗಳಿಗೆಲ್ಲ ಸ್ಪಂದಿಸುತ್ತಿತ್ತು ಎನ್ನುವುದನ್ನು ಮೇಲಿನ ಅವರ ಜೀವಿತದ ಸ್ಥೂಲರೇಖೆ ತೋರಿಕೊಡುತ್ತದೆ. ೧೯೫೧ ರಲ್ಲಿ ನಡೆದ ದೇಶದ ಮೊದಲ ಲೋಕಸಭಾ ಚುನಾವಣೆಯಲ್ಲಿ ಕೂಡ ದೇವುಡು ಸಕ್ರಿಯವಾಗಿ ಭಾಗವಹಿಸಿದ್ದು ಇಲ್ಲಿ ಉಲ್ಲೇಖನೀಯವಾದುದು.

ಸದಾ ಒಂದಿಲ್ಲೊಂದು ಚಟುವಟಿಕೆಯನ್ನು ಇರಿಸಿಕೊಂಡಿದ್ದೂ ನಿರಂತರವಾದ ಅಧ್ಯಯನ; ಬರವಣಿಗೆಯನ್ನು ತಮ್ಮ ಬದುಕಿನುದ್ದಕ್ಕೂ ದೇವುಡು ನಡೆಸಿದರು. ಆಳದಲ್ಲಿ ಭಾರತೀಯ ಸಂಸ್ಕೃತಿಯ ಮೂಲನೆಲೆಯ ಎಳೆಗಳನ್ನು ಉಳಿಸಿಕೊಂಡೂ ಹೊಸ ವಿಷಯಕ್ಕೆ ಮನಸ್ಸನ್ನು ಮುಕ್ತವಾಗಿ ಇರಿಸಿಕೊಂಡಿದ್ದನ್ನು ದೇವುಡು ಅವರ ಬದುಕು ಹಾಗೂ ಸಾಹಿತ್ಯ ತೋರಿಸುತ್ತಿದೆ. ತತ್ತ್ವಶಾಸ್ತ್ರದಲ್ಲಿನ ಅವರ ಅಭ್ಯಾಸ ಒಬ್ಬ ಜಿಜ್ಞಾಸುವಿನದಾಗಿರಲಿಲ್ಲ. ಅಂತರಂಗದಲ್ಲಿ ಅವರು ಒಬ್ಬ ಸಾಧಕರಾಗಿದ್ದರು. ಈ ಬಗೆಗಿನ ಒಂದು ದೃಷ್ಟಾಂತವನ್ನು ಬೆಳಗೆರೆ ಕೃಷ್ಣಶಾಸ್ತ್ರೀಗಳ 'ಸಾಹಿತ್ಯ ಸ್ಮೃತಿ' ಕೃತಿಯಲ್ಲಿನ 'ದೇವುಡು' ವ್ಯಕ್ತಿ ಚಿತ್ರದಲ್ಲಿ ಕಾಣಬಹುದು. ಜಡ-ಚೇತನಗಳ ನಡುವಿನ ವ್ಯತ್ಯಾಸವನ್ನು ಮತ್ತೊಬ್ಬರ ಅನುಭವಕ್ಕೆ ತಂದುಕೊಡುವ ಸಿದ್ಧಿ ದೇವುಡು ಅವರಲ್ಲಿತ್ತು ಎಂಬುದು ಕೃಷ್ಣಶಾಸ್ತ್ರಿಗಳು ನೀಡಿರುವ ಅಪರೂಪದ ಸಂದರ್ಭದಲ್ಲಿ ಲಭ್ಯವಿದೆ.

ದೇವುಡು ವ್ಯಕ್ತಿತ್ವದ ಒಳಹೊರಗನ್ನು ಬೇಂದ್ರೆಯವರು ಕವಿತೆಯೊಂದರಲ್ಲಿ ತುಂಬ ಸೂಕ್ಷ್ಮವಾಗಿ ನೀಡಿದ್ದಾರೆ :

ಬಾಲನಂಥ ದೇವುಡು | ಉನ್ಮತ್ತನಂಥ ದೇವುಡು
ಜಡ-ಪಿಶಾಚಿ ದೇವುಡು| ಹುಚ್ಚು ಮರುಳು ದೇವುಡು
ಜೀವನವೇ ನಾಟಕ| ತಾನೂ ಒಬ್ಬ ನೋಟಕ
ಆಟವೋ ಬೂಟಾಟವೋ | ನೋಟವೆಂದ ದೇವುಡು

ಬಾಲಕನ ಮುಗ್ಧತೆಯೊಂದಿಗೆ ವಿದ್ವತ್ತಿನ ಪ್ರಕಾಂಡ ಅಹಮಿಕೆಯೂ ದೇವುಡು ಅವರಲ್ಲಿ ಬೆರೆತಿತ್ತು. ದೇವುಡು ಜೀವಿತ ಹಾದ ಬಗೆಯನ್ನು ಈ ಕವಿತೆಯೇ ಚಿತ್ರಿಸುತ್ತದೆ :

ಎದ್ದ, ಬಿದ್ದ ಒದ್ದಾಡಿದ| ಗುದ್ದಾಡಿದ ದೇವುಡು
ಸುತ್ತಾಡಿದ, ಲೆತ್ತಾಡಿದ | ಕಿತ್ತಾಡಿದ ದೇವುಡು
ಕುಂಟುಗಾಲಿನಿಂದ ಹೊರಟ | ವೈಕುಂಠತೆ ದೇವುಡು
ಕುರುಡುಗಣ್ಣಿನಿಂದ ಕಂಡ | ಕೈಲಾಸವೆ ದೇವುಡು

ಶಸ್ತ್ರಚಿಕಿತ್ಸೆಯಿಂದ ತಮ್ಮ ಕೊನೆಗಾಲದಲ್ಲಿ ದೇವುಡು ಒಂದು ಕಾಲನ್ನು ಕಳೆದುಕೊಂಡಿದ್ದರು 'ಕುಂಟು ಗಾಲಿನಿಂದ ಹೊರಟ.'

ತಮ್ಮ ಕೊನೆಯ ಕೃತಿ 'ಮಹಾದರ್ಶನ' ವನ್ನು ದೇವುಡು ಬರೆದದ್ದು ಶಸ್ತ್ರ ಚಿಕಿತ್ಸೆಯ ನಂತರವೇ. ಸುಮಾರು ಅರವತ್ತಕ್ಕೂ ಹೆಚ್ಚು ಕೃತಿಗಳಿರುವ ದೇವುಡು ಲೇಖನಿ ಕೃತ ಕೃತಿಗಳಲ್ಲಿ ಕಥೆ-ಕಾದಂಬರಿಗಳನ್ನೊಳಗೊಂಡ ವಿದ್ವತ್ತಿನ ಕೃತಿಗಳಿವೆ. ಅನುವಾದಿತ ಕೃತಿಗಳಿವೆ. ಮಕ್ಕಳಿಗಾಗಿ ಕಥೆ ಬರೆದಂತೆಯೇ ವಿದ್ವಾಂಸರಿಗಾಗಿ 'ಮೀಮಾಂಸ ದರ್ಪಣ'ದಂಥ ಕೃತಿ ರಚಿಸಿದ್ದಾರೆ. 'ಯೋಗವಾಸಿಷ್ಠ' ದಂತ ಕೃತಿಯನ್ನು ೨೪ ಸಂಪುಟಗಳಲ್ಲಿ ಅನುವಾದಿಸಿದಂತೆಯೇ 'ವಾಲ್ಡನ್' ನಂಥ ಮೇರು ಕೃತಿಯನ್ನು ಕನ್ನಡಿಸಿದ್ದಾರೆ. ಅವರ ಸಾಹಿತ್ಯ ಸಮಕಾಲೀನತೆಯನ್ನು ಕಟ್ಟಿಕೊಟ್ಟಿರುವಂತೆಯೇ ಸಂಸ್ಕೃತಿಯ ಮೂಲ ನೆಲೆಗಟ್ಟನ್ನು ಸೃಜಿಸುವತ್ತ ಹೊರಳಿ ಕೊಂಡಿರುವಂಥದು.

೪

ದೇವುಡು ಅವರ ಸಾಹಿತ್ಯಿಕ ಬದುಕಿನಲ್ಲಿ ತುಂಬ ಮುಖ್ಯವಾಗಿ ಕಾಣುವುದು ಅವರು ತಮ್ಮನ್ನು ಯಾವುದೇ ಪಂಥದೊಂದಿಗೆ ಗುರುತಿಸಿಕೊಳ್ಳದಿರುವುದು : ಅವರು ಬರವಣಿಗೆ ಆರಂಭಿಸಿದ ಸಂದರ್ಭದಲ್ಲಿ ನವೋದಯದ ಪ್ರಭಾವವಿತ್ತು; ಅನಂತರ ಪ್ರಗತಿಶೀಲ ನವ್ಯ ಬಂದವು. ಈ ಪಂಥಗಳಿಂದ ಹೊರಗೆ ಉಳಿಯುತ್ತ ತಮ್ಮದೇ ಸ್ವಂತಿಕೆ ಉಳಿಸಿಕೊಂಡು ಸೃಜನಶೀಲ ಪ್ರತಿಭೆ ಮೆರೆದಿರುವುದು ದೇವುಡು ಅವರ ವೈಶಿಷ್ಟ್ಯ. ಪಾಶ್ಚಾತ್ಯ ಸಾಹಿತ್ಯದ ಪರಿಚಯವಿದ್ದರೂ, ಅದೂ ಅವರ ಸಾಹಿತ್ಯಕ ಹಾದಿಗೆ ಪುಟಗೊಡುವಷ್ಟಕ್ಕೆ ನಿಂತಿತು.

ದೇವುಡು ಕೃತಿಗಳಲ್ಲಿ ಅವರ 'ಸೃಜನಶೀಲ' ಕೃತಿಗಳು ಬಹಳ ಕಾಲ ಉಳಿಯುವಂಥ ಗುಣ ಪಡೆದಿವೆ. ಮತ್ತೆ ಮತ್ತೆ ಮರುಓದಿಗೆ ಹಚ್ಚುವ ಕುತೂಹಲಕಾರಿ ಅಂಶಗಳೂ ಈ ಕೃತಿಗಳಲ್ಲಿವೆ. ಅಪೂರ್ಣವಾಗಿ ನಿಂತಿರುವ 'ಪರಿಪೂರ್ಣ' ಕಾದಂಬರಿಯ ಹಸ್ತ ಪ್ರತಿಯನ್ನು ಒಳಗೊಂಡಂತೆ ದೇವುಡು ಕಾದಂಬರಿಗಳು ಹದಿನೈದರಷ್ಟಿವೆ. ತಮ್ಮೆಲ್ಲ ಸೃಜನ ಪ್ರತಿಭೆಯನ್ನು ದೇವುಡು ಮೆರೆದಿರುವುದು ಕಾದಂಬರಿಗಳಲ್ಲೇ ಎನ್ನುವುದು ಅವರ 'ಮಹಾ' ಸರಣಿಯ ಕಾದಂಬರಿಗಳನ್ನೊಳಗೊಂಡಂತೆ 'ಅಂತರಂಗ' ಹಾಗೂ 'ಮಯೂರ' ಕಾದಂಬರಿಗಳಲ್ಲಿಯೂ ಕಾಣಸಿಗುತ್ತದೆ. ಇವರ ಸೃಜನಶೀಲತೆ ಮೂರು ಮಜಲುಗಳಲ್ಲಿ ಹರಡಿಕೊಂಡಿರುವುದನ್ನು ನಾವೀಗ ಗುರುತಿಸಬಹುದು. 'ಅಂತರಂಗ' 'ಮಲ್ಲಿ' ಯಂಥವು ಸಮಕಾಲೀನತೆಯಲ್ಲಿ ನಿಲ್ಲುವಂತಿದ್ದರೆ, 'ಚಿನ್ನಾ' 'ಮಯೂರ' ದಂಥವು ಐತಿಹಾಸಿಕ ಕೇಂದ್ರತೆಯಲ್ಲಿ ನಮ್ಮನ್ನು ಹಿಂದಕ್ಕೆ ಒಯ್ಯುತ್ತವೆ; ಪೌರಾಣಿಕ ವಲಯವನ್ನು ಆವರಿಸಿಕೊಳ್ಳುವ 'ಮಹಾ' ಸರಣಿಯ ಕಾದಂಬರಿಗಳು ವೈದಿಕ ಸಂಸ್ಕೃತಿಯ ಮೂಲವನ್ನು ಕಟ್ಟುತ್ತವೆ. ದೇವುಡು ಅವರಿಗೆ ಆರಂಭದಲ್ಲಿ ಸಮಕಾಲೀನ ಬದುಕು ಸೃಜನತೆಗೆ ಒತ್ತು ಕೊಟ್ಟದ್ದು, ಮುಂದೆ ಸಂಸ್ಕೃತಿಯ ಬೇರುಗಳತ್ತ ಸಾಗಿಸಿರುವುದನ್ನು ಇಲ್ಲಿ ಕಾಣಬಹುದು. ಆದರೆ ಉದ್ದಕ್ಕೂ ನಮಗೆ ಒಬ್ಬ ಸಂಸ್ಕೃತಿನಿಷ್ಠ ಲೇಖಕರಾಗಿಯೇ ದೇವುಡು ಕಾಣಿಸಿಕೊಳ್ಳುತ್ತಾರೆ. ಇವರ ಸಂಸ್ಕೃತಿನಿಷ್ಠತೆ ಯಾವ ರೀತಿಯದು ಎಂಬುದನ್ನು ಯಹೂದಿ ಲೇಖಕ ಐಸಾಕ್ ಭಾಷೆವಿಸ್ ಸಿಂಗರ್‌ನ ಸಾಹಿತ್ಯದೊಂದಿಗೆ ಇರಿಸಿದಾಗ ಇದು ಸ್ಪಷ್ಟವಾಗಿಯೇ ಕಾಣಿಸುತ್ತದೆ.

ಸಿಂಗರ್ ಒಬ್ಬ ಯಹೂದಿ. ಪೋಲೆಂಡ್‌ನಿಂದ ಅಮೆರಿಕೆಗೆ ಹೋದ ಲೇಖಕ. ತನ್ನ ಕಥೆ ಕಾದಂಬರಿಗಳಲ್ಲಿ ಯಹೂದಿ ಸಂಸ್ಕೃತಿಯನ್ನು ಅನಾವರಣ ಮಾಡಿರುವ ಈತ ಬರೆದಿರುವುದು ಯಹೂದಿ ಸಂಸ್ಕೃತಿಯನ್ನು ಚಿತ್ರಿಸುವ ಯಹೂದಿ ಪಾತ್ರಗಳ ಬದುಕನ್ನು ಮಾತ್ರ. ಯಹೂದಿತನವಿಲ್ಲದ ಒಂದು ಪಾತ್ರವೂ ಈತನಲ್ಲಿಲ್ಲ. ಫ್ಯಾಂಟಸಿ ಕಥೆಗಳಲ್ಲಿ ಕೂಡ ಇವನು ಇದೇ ಮಾರ್ಗವನ್ನು ಅನುಸರಿಸುತ್ತಾನೆ. ಯುರೋಪಿನ ಲೇಖಕನೊಬ್ಬನಿಗೆ ಇದು ಸಾಧ್ಯವಿದೆ. ಅಲ್ಲಿ ಮುಖ್ಯವಾಗಿ ಎರಡೇ ಸಂಸ್ಕೃತಿಗಳು, ಯಹೂದಿ ಮತ್ತು ಕ್ರೈಸ್ತ. ಧಾರ್ಮಿಕ ನೆಲೆಯಲ್ಲಿ ಇವು ಒಂದೇ ನೆಲೆಯಿಂದ ಕವಲೊಡೆದಿರುವಂಥವಾದರೂ ಸಿಂಗರ್‌ನಂಥ ಒಬ್ಬ ಸಂಸ್ಕೃತಿನಿಷ್ಠ ಲೇಖಕ ತನ್ನ ಸಾಂಸ್ಕೃತಿಕ ಧಾರೆಗೆ ಗಟ್ಟಿಯಾಗಿ ಅತು ನಿಂತು ತನ್ನ ಸೃಜನ ಪ್ರತಿಭೆ ಮೆರೆಯಬಲ್ಲ ಎನ್ನುವುದನ್ನು ಇವನ ಸಾಹಿತ್ಯ ತೋರಿಸುತ್ತದೆ. ಆದರೆ ಇಂಡಿಯಾದಂಥ ಪರಿಸರದಲ್ಲಿ ಇಂಥ ಸಂಸ್ಕೃತಿನಿಷ್ಠತೆ ತುಂಬ ಕಷ್ಟದ್ದು. ಒಂದು ಹಿಡಿತಕ್ಕೆ ಸಿಕ್ಕದಂತೆ ಇಲ್ಲಿನ ಸಂಸ್ಕೃತಿಯ ನೆಲೆಗಟ್ಟು ಒಬ್ಬ ಲೇಖಕ ಅಥವಾ ಕಲಾವಿದನಿಗೆ ಸವಾಲೊಡ್ಡುತ್ತದೆ. ಈ ಸವಾಲು ಶೋಧನಾತ್ಮಕತೆಗೆ ಹೊರಳಿದರೆ ಏನನ್ನು ಕಾಣಬಹುದು ಎನ್ನವುದು ದೇವುಡು ಅವರ ಕೃತಿಗಳಲ್ಲಿ , ಮುಖ್ಯವಾಗಿ 'ಮಹಾ' ಸರಣಿಯ ಕಾದಂಬರಿಗಳಲ್ಲಿ ದೊರೆಯುತ್ತದೆ.

ದೇವುಡು ಎಂದೊಡನೆ ಥಟ್ಟನೆ ನೆನಪಿಗೆ ಬರುವಂತೆ 'ಮಹಾಕ್ಷತ್ರಿಯ' 'ಮಹಾಬ್ರಾಹ್ಮಣ' ಹಾಗೂ ' ಮಹಾ ದರ್ಶನ' ಕಾದಂಬರಿಗಳು ಜನಪ್ರಿಯಗೊಂಡಿವೆ. ಇವಲ್ಲದೆ ಪ್ರಜ್ಞಾಪ್ರವಾಹ ತಂತ್ರವನ್ನು ಮುವತ್ತರ ದಶಕದಲ್ಲೇ ತಂದಿರುವ 'ಅಂತರಂಗ' ಕಾದಂಬರಿಯಲ್ಲಿಯೂ ದೇವುಡು ತಮ್ಮದೇ ಆದ ಅನನ್ಯತೆ ಮೆರೆದಿದ್ದಾರೆ. ರಾಜಮನೆತನಗಳು ಸ್ವಾತಂತ್ರ್ಯಾನಂತರ ಪರಿವರ್ತನೆಗೊಂಡ ಚಿತ್ರಣವಿರುವ ' ಮಲ್ಲಿ' ಹಾಗೂ ಇತರೆ ಕಾದಂಬರಿಗಳು ಚರ್ಚೆಗೆ ಒಳಗಾಗಬೇಕಿವೆ. ಕಾದಂಬರಿ ಪ್ರಕಾರದಲ್ಲಿನ ಸಾಧನೆಯೇ ದೇವುಡು ಅವರಿಗೆ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನ ನೀಡುವಂತಿದೆ – ಇವರ ಈ ಸಾಧನೆಗೆ ಕಥೆಗಳ ಬರವಣಿಗೆ ಕೂಡ ಪುಟ ಇರಿಸಿದೆ.

೫

ಕಥಾ ಸಂಕಲನಗಳೆಂದು ದೇವುಡು ಅವರಿಂದ ಪ್ರಕಟವಾಗಿರುವುದು ನಾಲ್ಕು ಸಂಕಲನಗಳು ಮಾತ್ರ. ' ದೇವುಡು ಕಥೆಗಳು' 'ಮೂರು ಕನಸು' ' ಘಾಟಿ ಮುದುಕ ಮತ್ತು ಇತರ ಕಥೆಗಳು' ಹಾಗೂ 'ಸೋಲೋ ಗೆಲುವೋ.'

ಈ ನಾಲ್ಕರಲ್ಲಿ 'ಸೋಲೋ ಗೆಲುವೋ' ಸಂಕಲನದ ಕಥೆಗಳು ಬಿಡಿಯಾಗಿ ಓದಿಕೊಂಡಾಗ ಪ್ರತ್ಯೇಕ ಕಥೆಗಳೆನಿಸುವಂತೆಯೇ, ಒಟ್ಟಿಗೆ ಓದಿದಾಗ ನೀಳ್ಗತೆಯ ಅಧ್ಯಾಯಗಳೆನ್ನುವಂತೆ ಹೆಣೆದುಕೊಳ್ಳುವ ಲಕ್ಷಣ ಪಡೆದಿವೆ. ಇವಲ್ಲದೆ ಅನುವಾದ ಸಂಕಲನದ 'ದೇಶಾಂತರ ಕಥೆಗಳು' ಕೂಡ ಇದೆ. ಈ ಅನುವಾದಗಳಲ್ಲಿ ಹ್ಯಾನ್ ಅಂಡರ್ಸ್‌ಸನ್ ಕಥೆಗಳೊಂದಿಗೆ ಉಳಿದ ಮೂಲದ ಹಲವೂ ಸೇರಿವೆ. ಮಕ್ಕಳಿಗಾಗಿ ಬರೆಯುತ್ತಿದ್ದ ' ನಮ್ಮ ಪುಸ್ತಕ' 'ಗೀತಾ' ನಿಯತ ಕಾಲಿಕಗಳಲ್ಲಿನ ಕಥೆಗಳೂ, 'ಬುದ್ಧಿಯ ಕಥೆಗಳು' (ಎರಡು ಭಾಗಗಳಲ್ಲಿ) ಸಂಕಲನವೂ ಇವೆ.

ಕಥೆಗಳ ಬರವಣಿಗೆಯಲ್ಲಿಯ ದೇವುಡು ಮೂರು ತೆರನಾದ ಮಾರ್ಗವನ್ನು ತೋರುತ್ತಾರೆ. ೧. ಮಕ್ಕಳ ಕಥೆಗಳು. ೨. ಅನುವಾದ ಕಥೆಗಳು ೩. ಸ್ವಾನುಭವ ಸೃಜನ-ಕಥೆಗಳು.

ಈ ಸಂಕಲನವನ್ನು ಈ ಹಿನ್ನೆಲೆಯಲ್ಲಿ ಮೂರು ಭಾಗಗಳಾಗಿ ವಿಂಗಡಿಸಿದೆ. 'ಬುದ್ಧಿಯ ಕಥೆಗಳು' ಪ್ರಥಮ ಸಂಪುಟದ ಪೀಠಿಕೆಯಲ್ಲಿ ದೇವುಡು ಈ ಕಥೆಗಳ ಬಗೆಗೆ ಸ್ಥೂಲವಾದ ವಿವರವನ್ನು ಹೀಗೆ ನೀಡಿದ್ದಾರೆ:

''ಮೈಸೂರು ಸರಕಾರದವರು ಪ್ರಾಥಮಿಕ ಶಿಕ್ಷಣ ಶಾಲೆಗಳಲ್ಲಿ ವಿಧಿಸಿರುವ ನೀತಿ ಬೋಧೆಗೆ ಅನುಕೂಲಿಸಲೆಂದು ಈ ಕಥೆಗಳನ್ನು ಶೇಖರಿಸಿದೆ. ಮಕ್ಕಳಿಗಾಗಿ ಮಕ್ಕಳ ಮಾತಿನಲ್ಲಿ ಬರೆಯುವುದು ಸುಲಭಸಾಧ್ಯವಲ್ಲವೆಂದು ಎಲ್ಲರೂ ತಿಳಿದಿರಲು, ಹೊಸದಾಗಿ ಹೇಳಬೇಕಾದುದೇನೂ ಇಲ್ಲ.

ಒಂದನೇ ತರಗತಿಯ ಉಪಯೋಗಕ್ಕಾಗಿ ಬರೆದಿರುವ ಈ ಪುಸ್ತಕದಲ್ಲಿ ನೀತಿಯನ್ನು ಕಂಠೋಕ್ತವಾಗಿ ಹೇಳಿಲ್ಲ. ಆ ನೀತಿಯ ಸ್ವರೂಪವು ಮಕ್ಕಳ ಮನಸ್ಸಿನಲ್ಲಿ ಮೂಡಲು ಅನುಕೂಲಿಸುವಂತೆ ಕಥೆಗಳನ್ನು ಮಾತ್ರ ಹೇಳಿದೆ.

ಈ ತರಗತಿಯಲ್ಲಿ ಇರುವ ಮಕ್ಕಳು ಸುಮಾರು ೬-೮ ರವರೆಗಿನ ವಯಸ್ಸಿನವರು. ಅವರಿಗೆ ಬೇಸರವಾಗದಂತೆ ಹೇಳಿಕೊಟ್ಟರೆ ಕಲಿಯುವುದು ಹೆಚ್ಚು ಸುಲಭ. ಅದರಲ್ಲೂ ತಾಯಿಯವರು ಮಾಡುವಂತೆ, ಔಷಧದ ಗುಳಿಗೆಯನ್ನು ಸಕ್ಕರೆಯಲ್ಲಿ ಹುಗಿದಿಟ್ಟು ತಿನ್ನಿಸುವುದು ಬಲುಕ್ಷೇಮ ಹಾಗೂ ಲಾಭಕರ...''

ಈ ಕಥೆಗಳನ್ನು ಪ್ರಕಟಿಸುವ ಮುನ್ನ ದೇವುಡು ಅವರು ತಮ್ಮ ಮನೆಯ ಮಕ್ಕಳಿಗೆ ಹೇಳಿ ಅವರು ಹೇಗೆ ಸ್ವೀಕರಿಸುತ್ತಾರೆ ಎಂಬುದನ್ನು ಪರೀಕ್ಷಿಸಿಯೇ ಪ್ರಕಟಿಸಿದ್ದಾರೆ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

'ದೇವುಡು ಕಥೆಗಳು' ಸಂಕಲನದ 'ಬಿನ್ನಹ'ದಲ್ಲಿ ''ಅನುಭವಗಳನ್ನು ಹಿಡಿದು ಬರೆದ ಈ ಹನ್ನೆರಡು ಕಥೆಗಳನ್ನು ಸೇರಿಸಿ ಒಂದು ಗ್ರಂಥವನ್ನು ಮಾಡಿದ್ದೇನೆ.'' ಎಂದು ತಮ್ಮ ಕಥೆಗಳಿಗೆ ಒಂದು ಸೂಚ್ಯ ಮಾತನ್ನು ಹೇಳಿಕೊಂಡಿದ್ದಾರೆ.

ಅನುವಾದ ಕಥೆಗಳ ಸಂಕಲವಾದ 'ದೇಶಾಂತರದ ಕಥೆಗಳು' ಸಂಕಲನಕ್ಕೆ ಹೀಗೆ ಬರೆದಿದ್ದಾರೆ:

''ಇದೊಂದು ಸಂಗ್ರಹ. ಹಲವು ತೋಟಗಳಿಂದ ಆಯ್ದು ತಂದ
ಹೂವುಗಳ ಮಾಲೆ, ಹೂವುಗಳು ಜಾತಿ ಜಾತಿಯವು. ಒಂದೇ ಜಾತಿಯಲ್ಲ.
ಆದರಿಂದ ಅವುಗಳ ಬಣ್ಣವೂ ಪರಿಮಳವೂ ಒಂದೇ ರೀತಿಯವಲ್ಲ. ಈ
ಗ್ರಂಥವನ್ನು ದೊಡ್ಡವರೂ ಓದಬಹುದು. ಆನಂದ ಪಡಬಹುದು.
ಆದರೂ ಇದನ್ನು ಬರೆದಿರುವುದು ೧೦-೧೫ ವಯಸ್ಸಿನ ಹುಡುಗರಿಗಾಗಿ''

ಒಂದು ಪ್ರೇಮಕಥೆಯಾಗಿ ಸಫಲಗೊಂಡಿರುವ 'ಕಳ್ಳರ ಕೂಟ' ನೀಳ್ಗತೆಯೂ ಅವರ ಕಥೆಗಳಲ್ಲಿ ಸೇರಿದೆ. ಸೇರಿಸಿದೆ. ಅನುವಾದಿತ ಕಥೆಗಳಲ್ಲಿ 'ದೇಶಾಂತರ ಕಥೆಗಳು ಸಂಕಲನದಲ್ಲಿ

ಸೇರಿರದ ಕಥೆಗಳನ್ನು ಕೂಡ ಜೋಡಿಸಿದೆ. ಈ ಕಥೆಗಳು 'ಮೂರು ಕನಸು' ನಂಥ ಸ್ವಾನುಭವದ ಕಥೆ ಇರುವಂತೆಯೇ ಬೆಂಗಳೂರಿನ ಐತಿಹಾಸಿಕತೆಯಲ್ಲಿ ಹುದುಗಿರುವ 'ಆತ್ಮಾರ್ಪಣ' ದಂಥ ಕಥೆಯೂ ಇದೆ. 'ವೈಣಿಕ' ದಂಥ ಸಾಂಕೇತಿಕತೆಯನ್ನು ಧ್ವನಿಪೂರ್ಣವಾಗಿ ಒಡೆದುತೋರುವ ಕಥೆಯಿದೆ; ಹೀಗೆಯೇ 'ಕೆರೆಗೆ ಹಾರ' ದಂಥ ಜಾನಪದ ಕಥೆಯನ್ನು ನೆನಪಿಸುವ 'ಬಲಿದಾನ' ಅನುವಾದಿತ ಕಥೆಯಿದೆ.

ಎಲ್ಲ ವಯೋಮಾನದ ಎಲ್ಲ ಅಭಿರುಚಿಯ ಓದುಗರಿಗೂ ಇಷ್ಟವಾಗಬಲ್ಲ ಕಥೆಗಳು ದೇವುಡು ಅವರಲ್ಲಿದೆ ಎಂಬುದನ್ನು ಅವರ ಕಥಾ ಸಂಕಲನಗಳು ತೋರಿಕೊಡುವಂತಿದೆ.

★

ಸೋಲೋ ಗೆಲುವೋ

ಶ್ರೀ ಕೆ. ನರಸಿಂಹಮೂರ್ತಿ

ಅತೀಂದ್ರಿಯ ಶಕ್ತಿಗಳನ್ನೂ ಲೋಕಗಳನ್ನೂ ಚಿತ್ರಿಸುವ ಮೂರು ಮಹತ್ವಪೂರ್ಣ ಕಾದಂಬರಿಗಳನ್ನು ನೀಡಿ ಕನ್ನಡವನ್ನು ಶ್ರೀಮಂತಗೊಳಿಸಿದ ದೇವುಡು ನರಸಿಂಹ ಶಾಸ್ತ್ರಿಗಳ ಅಸಾಧಾರಣ ಪ್ರತಿಭೆ ಸಣ್ಣಕತೆಯ ಕ್ಷೇತ್ರದಲ್ಲಿಯೂ ತನ್ನ ಸೃಷ್ಟಿಶೀಲತೆಯನ್ನು ಮೆರೆದಿರುವುದು ಅಷ್ಟಾಗಿ ವಿಮರ್ಶಕರ ಗಮನವನ್ನು ಸೆಳೆದಂತೆ ಕಾಣುವುದಿಲ್ಲ. ಅವರ 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ', 'ಮಹಾದರ್ಶನ' ಗಳ ಸಾಲಿನಲ್ಲಿಯೇ ನಿಲ್ಲಬಲ್ಲ ಮಹೋನ್ನತ ಕೃತಿ ಅವರ ಸಣ್ಣಕತೆ 'ವೈಣಿಕ.' ಕನ್ನಡ ಪ್ರಪ್ರಥಮ ಮನೋವೈಜ್ಞಾನಿಕ ಕಾದಂಬರಿಯೆಂದು ವಿಮರ್ಶೆ ಗುರುತಿಸಿರುವ 'ಅಂತರಂಗ'ದ ಕರ್ತೃಶಕ್ತಿಯೆ ಅವರ 'ಸೋಲೋ ಗೆಲುವೊ' ಕಥಾತ್ರಯವನ್ನೂ ರೂಪಿಸಿದೆ. 'ಅಂತರಂಗ'ದಲ್ಲಿ ಹೇಗೋ ಹಾಗೆಯೆ ಈ ಕಥಾತ್ರಯದಲ್ಲಿಯೂ ಗಂಡು ಹೆಣ್ಣಿನ ಸಂಬಂಧವನ್ನು ಕುರಿತ ಸೂಕ್ಷ್ಮವಾದ ಜಿಜ್ಞಾಸೆ ಅದರ ಅರ್ಥವಂತಿಕೆಯನ್ನು ಗಾಢವಾಗಿಸುತ್ತದೆ. ಇವುಗಳ ಮಟ್ಟವನ್ನು ಮುಟ್ಟದಿದ್ದರೂ 'ನಮ್ಮ ಪುಸ್ತಕ' ದಂತಹ ಪತ್ರಿಕೆಗಳಲ್ಲಿ ಪ್ರಕಟವಾದ ಅವರ ಉಳಿದ ಕತೆಗಳೂ ಅವರ ಪ್ರತಿಭೆಯನ್ನು ಭಾಗಶಃವಾದರೂ ಪ್ರದರ್ಶಿಸಿ ನಮ್ಮನ್ನು ಆಕರ್ಷಿಸುತ್ತವೆ.

ಮಾಂತ್ರಿಕ ವಾಸ್ತವತೆ

'ವೈಣಿಕ'ಒಂದು ಅದ್ಭುತ ಕೃತಿ. ಸಮಗ್ರ ಸಾವಯುವ ಶಿಲ್ಪವನ್ನು ಯಶಸ್ವಿಯಾಗಿ ಸಾಧಿಸಿರುವ ಈ ಸಣ್ಣಕತೆ ಇಂದು ಪ್ರಸಿದ್ಧವಾಗಿರುವ ಮಾಂತ್ರಿಕ ವಾಸ್ತವತೆಗೆ ಒಂದು ಉತ್ತಮ ನಿದರ್ಶನವಾಗಬಲ್ಲದು. ಜೊತೆಗೆ, ಸಂಗೀತ ಕಲೆಯ ಪಾವಿತ್ರ್ಯವನ್ನು ಘೋಷಿಸುವ ಇದೊಂದು ಉದ್ಬೋಧಕ ಕತೆಯೂ ಆಗಿದೆ. ಲಘುವಾದ ಧಾಟಿಯಲ್ಲಿ ಆರಂಭವಾಗುವ ಕೃತಿ ಗಂಭೀರವಾಗಿ ಸಮಸ್ಯಾತ್ಮಕವಾಗಿ ಕೊನೆಗೊಳ್ಳುತ್ತದೆ. ವಸ್ತುವಿಗೆ ತಕ್ಕಂತೆ ಶೈಲಿಯೂ ಗಂಭೀರ, ಕಾವ್ಯಾತ್ಮಕ ಅರ್ಥವಂತಿಕೆಯ ಹಲವು ಆಯಾಮಗಳ ಧ್ವನಿಪೂರ್ಣ ಕೃತಿ ಈ 'ವೈಣಿಕ.'

ಐತಿಹಾಸಿಕ ಹಿನ್ನೆಲೆಯಲ್ಲಿ ನಡೆಯುವ ಇಲ್ಲಿನ ಘಟನೆ ವಾಸ್ತವ ಅಲೌಕಿಕಗಳ ನಡುವಣ ಗೆರೆಯನ್ನು ಅಳಿಸಿಬಿಡುವ ಚೋದ್ಯ ಚಿತ್ತಾಪಹಾರಿ. ಅಂಬಾವಿಲಾಸದಲ್ಲಿ ಮಹಾರಾಜರು, ವಿದ್ವದ್ಗೋಷ್ಠಿಯೊಂದಿಗೆ ಸರಸಸಲ್ಲಾಪದಲ್ಲಿ ಭಾಗಿಗಳಾಗಿರುವಾಗ ತಂತಿಗೆ ಬದಲು ಇನ್ನೇನನ್ನಾದರೂ ಕಟ್ಟಿ ವೀಣೆ ನುಡಿಸಲು ಸಾಧ್ಯವೇ ಎನ್ನುವ ಪ್ರಶ್ನೆ ಎದ್ದು ವಿದ್ವಾಂಸರೊಬ್ಬರು ಉಗಿನೀಹಂಬನ್ನು ಸೂಚಿಸಿ ಅದು ಕಿತ್ತುಹೋಗುವ ಅಪಾಯವನ್ನೂ ಸಭೆಯ ಗಮನಕ್ಕೆ ತಂದಾಗ ಕುಹಕಿಗಳೊಬ್ಬರು, 'ಹಾಗಾದರೆ ತಲಚೇರಿಯ ಹುರಿಯನ್ನು ಕಟ್ಟಿದರಾಯಿತು' ಎಂದುಬಿಡುತ್ತಾರೆ. ಆ ಮಾತು ಪ್ರಭುಗಳ ಮನಸ್ಸಿಗೆ ನಾಟಿ ತಮ್ಮ ಆಸ್ಥಾನದಲ್ಲಿರುವವರಲ್ಲಿ ಯಾರಾದರೂ ತಲಚೇರಿ ಹುರಿಯನ್ನು ಕಟ್ಟಿ ವೀಣೆ ಬಾಜಿಸಬಲ್ಲಿರಾ ಎಂದು ಸವಾಲು ಹಾಕುತ್ತಾರೆ. ನೆರೆದ ವಿದ್ವದ್ಗೋಷ್ಠಿ ತನ್ನ ಅಶಕ್ತತೆಯನ್ನು ಪ್ರದರ್ಶಿಸುತ್ತಿದ್ದಾಗ ಕಟ್ಟಕಡೆಯಲ್ಲಿ ಉಪಸ್ಥಿತನಾಗಿದ್ದ ಒಬ್ಬ ವೈಣಿಕ

ಮೂಲಭೂತವಾದ ಪ್ರಶ್ನೆಯನ್ನೇ ಕೇಳುತ್ತಾನೆ, 'ಶಾರದೆಗೆ ತಲಚೇರಿಯ ಹುರಿಯನ್ನು ಕಟ್ಟಿ ಕುಣಿಸಬೇಕೋ?' ಎಂದು. 'ರಾಜಸದ ಬಿಗುಹಿ'ನಲ್ಲಿ ಆ ಪ್ರಶ್ನೆ ಮಹತ್ವ ಪ್ರಭುಗಳಿಗೆ ಅರಿವಾಗದೆ ಅವರು 'ಅದು ತಮ್ಮಿಂದ ಸಾಧ್ಯವೇ?' ಎಂದು ಮಾತ್ರ ವಿಚಾರಿಸುತ್ತಾರೆ. 'ಸಾಧ್ಯ ಒಂದು ದಿನ ಗೊತ್ತು ಮಾಡಿ. ಆ ದಿನ ದೇವಿಯು ಸೂಳೆಯಾಗುವಳು' ಎಂದು ಭಾರವಾದ ಧ್ವನಿಯಲ್ಲಿ ವೈಣಿಕ ಉತ್ತರಿಸುತ್ತಾನೆ. ಆ ಮಾತು ವಿದ್ವದ್ಗೋಷ್ಠಿಯನ್ನು ವಿಸ್ಮಿತಗೊಳಿಸುತ್ತದೆ. ಮರು ಶುಕ್ರವಾರ ಸಂಜೆ ಈ ಸಾಧನೆಯ ಪ್ರದರ್ಶನವೆಂದು ನಿಶ್ಚಯವಾಗುತ್ತದೆ.

ಆ ಶುಕ್ರವಾರದ ಪ್ರಾತಃಕಾಲ ಎಂದಿನಂತೆ ಮಹಾರಾಜರು ಶಿವಪೂಜೆಯಲ್ಲಿ ತೊಡಗಿರುವಾಗ ಒಂದು ಪವಾಡ ನಡೆಯುತ್ತದೆ. ಪ್ರಭುಗಳ ಬೆನ್ನ ಹಿಂದಿನಿಂದಲೇ ಬೆರಗುಗೊಳಿಸುವಂತಹ ಮಾಧುರ್ಯದ ವೀಣಾವಾದನ ಅವರಿಗೆ ಶ್ರವಣವಾಗುತ್ತದೆ. ಬಾಜಿಸುತ್ತಿರುವವರು ಯಾರೆಂದು ಪ್ರಭುಗಳು ವಿಚಾರಿಸಿದಾಗ, 'ತಮ್ಮ ಆಶ್ರಿತನೇ, ಇದು ನನ್ನ ಅಂತಿಮ ವೀಣಾವಾದನವಾದುದರಿಂದ ನನ್ನ ಸರ್ವಸಾಮರ್ಥ್ಯವನ್ನೂ ಇಂದು ಪ್ರದರ್ಶಿಸುತ್ತಿದ್ದೇನೆ' ಎನ್ನುವ ಮಾತುಗಳು ಕಿವಿಗೆ ಬೀಳುತ್ತವೆ. ಇಂಥ ಸಾಮರ್ಥ್ಯ ಎಲ್ಲಿಯದು ಎಂದು ಪ್ರಭುಗಳ ಅಚ್ಚರಿ ನುಡಿದಾಗ, 'ಶಾರದೆಯ ವರಪ್ರಸಾದ' ಎನ್ನುವ ಉತ್ತರ ಬರುತ್ತದೆ. ವೈಣಿಕ ಮಾತ್ರ ಅದೃಶ್ಯ.

ಆ ಸಂಜೆ ಅರಮನೆಯ ಕುದುರೆ ತೊಟ್ಟಿಯಲ್ಲಿ ವ್ಯವಸ್ಥಿತವಾಗಿದ್ದ ರಾಜಸಭೆಯನ್ನು ವಾರವೆಲ್ಲವೂ ದೇವರ ಮನೆಯಲ್ಲಿಯೇ ಕಳೆದಿದ್ದ ವೈಣಿಕ ಶಾಕ್ತೇಯನಂತೆ ವಸ್ತ್ರಧಾರಣೆ ಮಾಡಿಕೊಂಡು ಪ್ರವೇಶಿಸಿ ತಲಚೇರಿಯ ಹುರಿಯನ್ನು ಕಟ್ಟಿದ್ದ ವೀಣೆಯನ್ನು ಶ್ರುತಿ ಮಾಡಿ ತನ್ನ ಸೂಚನೆಯಂತೆಯೇ ಮೊರೆಯುತ್ತಿದ್ದ ವಿವಿಧ ವಾದ್ಯಘೋಷವನ್ನೂ ಮೆಟ್ಟಿ ನಿಲ್ಲುವಂತೆ 'ದೇವಿ ಮೀನಾಕ್ಷಿ' ಎಂಬ ಸ್ತೋತ್ರವನ್ನು ಕಲ್ಯಾಣಿ ರಾಗದಲ್ಲಿ ನುಡಿಸತೊಡಗುತ್ತಾನೆ. ಎರಡೂವರೆ ಘಳಿಗೆಗಳ ಕಾಲ ಅವಿರತವಾಗಿ ನಡೆದ ಅಮೋಘ ವೀಣಾವಾದನವನ್ನು ಮೈಮರೆತು ಸಭೆ ಆಲಿಸುತ್ತದೆ. ಅಂತ್ಯದಲ್ಲಿ 'ಮಹಾಪ್ರಭುವಿಗೆ ತೃಪ್ತಿಯಾಯಿತೇ?' ಎಂದು ವೈಣಿಕ ಪ್ರಶ್ನಿಸಿದರೆ, 'ಮಹಾಪ್ರಭು ನಾನಲ್ಲ, ಆ ತಾಯಿಯ ಅನುಗ್ರಹ ಪಡೆದ ತಾವು' ಎನ್ನುತ್ತಾರೆ ಪ್ರಭುಗಳು. ಇನ್ನೇನು ಈ ಸಾಧನೆಯನ್ನೂ ಯಶಸ್ವಿಯಾಗಿ ನಡೆಸಿಕೊಟ್ಟರೆ ಕೊಡುವೆನೆಂದು ಪ್ರಭುಗಳು ಆಶ್ವಾಸನೆ ಕೊಟ್ಟಿದ್ದ ನವರತ್ನಖಚಿತ ಪದಕಯುಕ್ತ ಪಚ್ಚಮಣಿಗಳ ರತ್ನಹಾರ ವಸ್ತ್ರವಿಭೂಷಣಗಳೊಂದಿಗೂ ಕಂಠೀ ವರಹಗಳ ಥೈಲಿಯೊಂದಿಗೂ ಪಾರಿತೋಷಕ ಪ್ರದಾನ ಸನ್ನಿಹಿತವಾಗಬೇಕು. ಅಷ್ಟರಲ್ಲಿ ವೈಣಿಕನು ಅಲ್ಲಿಂದ ನಿರ್ಗಮಿಸಿ ಬಿಟ್ಟಿರುವುದು ಎಲ್ಲರ ಗಮನಕ್ಕೂ ಬರುತ್ತದೆ.

ವೀಣೆಗೆ ತಲಚೇರಿಯ ಹುರಿಯನ್ನು ಕಟ್ಟಿ ಬಾಜಿಸುವುದು ಸಂಗೀತದ ಅಭಿಮಾನಿ ದೇವತೆಗೆ ಘೋರ ಅಪಚಾರವೆನ್ನುವ ಭಾವನೆ 'ದೇವಿ ಸೂಳೆಯಾಗುವಳು' ಎನ್ನುವ ಕಠೋರವಾಕ್ಕಿನಲ್ಲಿ ಧ್ವನಿತವಾಗುತ್ತದೆ. ನಿಶಾಂತ ಆರಾಧನೆಯಿಂದ ದೇವಿಯನ್ನು ಒಲಿಸಿಕೊಂಡಿರುವ ನಿಷ್ಠ ವೈಣಿಕ ಅಸಾಧ್ಯವನ್ನು ಸಾಧ್ಯ ಮಾಡಿ ತೋರಿಸಿ ಮೈಲಿಗೆಯಾದ ವೀಣೆಯನ್ನು ಮತ್ತೆ ಮುಟ್ಟದೆ ಹೊರಟು ಹೋಗುವುದರಲ್ಲಿ ಕಲೆಯ ಪ್ರಾಸ್ತಾವಿಕ ಪಾವನತ್ವ ಎದ್ದು ಕಾಣುತ್ತದೆ.

ಇಂಥದೇ ಅಲೌಕಿಕ ಶಕ್ತಿ ಪ್ರದರ್ಶನವುಳ್ಳ ಇನ್ನೊಂದು ಕತೆ 'ನಮ್ಮ ಪುಸ್ತಕ' ಪತ್ರಿಕೆಯ

'ದುರಭಿಮಾನ.' ಇದರ ನಾಯಕ ದರಿದ್ರನಾದರೂ ದೀನನಲ್ಲದ ಅದಕ್ಕೆ ಪ್ರತಿಯಾಗಿ ಮಹಾಸ್ವಾಭಿಮಾನಿಯಾದ ಭೀಮಕಾಯನಾದ ಗ್ರಾಮಸ್ಥ. ಊರಿನ ಕಂಟ್ರಾಕ್ಟರ್ ಅವನೊಡನೆ ದುರಹಂಕಾರದಿಂದ ನಡೆದುಕೊಂಡು ಅವನಿಂದ ಏಟು ತಿಂದು ಸೇಡು ತೀರಿಸಿಕೊಳ್ಳಲು ಅವನ ಮೇಲೆ ಕಳ್ಳತನದ ಸುಳ್ಳು ಆರೋಪ ಹೊರಿಸಿ ಅವನಿಗೆ ಒಂದು ತಿಂಗಳ ಸೆರೆವಾಸವಾಗುವಂತೆ ಏರ್ಪಡಿಸುತ್ತಾನೆ. ಬಿಡುಗಡೆಯಾಗಿ ಬಂದ ಬಡವ ರತ್ನದಂತಹ ಮಡದಿಯನ್ನು ಕಳೆದುಕೊಳ್ಳುತ್ತಾನೆ. ಧೃತಿಗೆಡದೆ ಅವನು ಹಾಳು ಬಿದ್ದಿದ್ದ ಒಂದು ಭೂಮಿಯನ್ನು ಗುತ್ತಿಗೆಗೆ ತೆಗೆದುಕೊಂಡು ಪ್ರಾಮಾಣಿಕವಾಗಿ ದುಡಿಯುತ್ತ ಅದನ್ನು ಅಭಿವೃದ್ಧಿ ಪಡಿಸುತ್ತಾನೆ. ಅದರ ಪೂರ್ಣ ಪ್ರಯೋಜನವನ್ನು ಅವನು ಪಡೆಯುವುದರೊಳಗಾಗಿ ಊರಿನ ಸಾಹುಕಾರ ಅದನ್ನು ಕೊಂಡು ಇನ್ನೊಬ್ಬನಿಗೆ ಅದನ್ನು ಗುತ್ತಿಗೆಗೆ ಕೊಡುತ್ತಾನೆ. ಕಾರಣ, ತನಗೇ ಅದನ್ನು ಗುತ್ತಿಗೆಗೆ ಕೊಡುವಂತೆ ಸಾಹುಕಾರನ ಬಳಿಗೆ ಹೋಗಿ ಬೇಡಿಕೊಳ್ಳಲು ಆ ಬಡವನಿಗೆ ಅಡ್ಡಬಂದ ಅವನ ಸ್ವಾಭಿಮಾನ.

ಅವನ ಮೇಲೆ ಸುಳ್ಳು ಆರೋಪ ಹೊರಿಸಿದ್ದ ಕಂಟ್ರಾಕ್ಟರ್ ಅವನೊಡನೆ ಅವಮಾನಕಾರವಾಗಿ ವರ್ತಿಸಿದಂತೆ ಕಣಿ ಹೇಳುವವಳೊಬ್ಬಳ ಮೈಮೇಲೆ ಬಂದ ಕೊಲ್ಲಾಪುರದಮ್ಮನ ಮೇಲೆಯೂ ಕೈ ಮಾಡಹೋಗಿ ದೇವಿಯ ಕೋಪಕ್ಕೆ ಪಾತ್ರವಾಗಿ ಎಂಟೇ ದಿನಗಳಲ್ಲಿ ಕೊರ ಕೊರಗಿ ಸಾಯುತ್ತಾನೆ. ಕೊನೆಯ ಘಳಿಗೆಗಳಲ್ಲಿ ಅವನ ಬಾಯಿಂದಲೇ ನಮ್ಮ ಮಾನಸ್ಥಾ ಬಡವನ ಬಗ್ಗೆ ಸತ್ಯವನ್ನು ಅರಿತುಕೊಂಡ ಅವನ ಹೆಂಡತಿ ತನ್ನ ಭೂಮಿಯನ್ನು ಅವನಿಗೇ ಗುತ್ತಿಗೆಗೆ ಕೊಡುತ್ತಾಳೆ. ಅವರಿಬ್ಬರ ಸಂಬಂಧ ಕಾಲಕ್ರಮದಲ್ಲಿ ಪ್ರೇಮವಾಗಿ ಪರಿಣಮಿಸಿ ಅವರು ಮದುವೆಯಾಗುತ್ತಾರೆ. ಕತೆಯ ಸಮೃದ್ಧ ವಿವರಗಳಲ್ಲಿ ಗಮನಾರ್ಹವಾದ ಒಂದು ವಿವರವೆಂದರೆ ಮೈಮೇಲೆ ಬಂದಿದ್ದ ದೇವಿ ಅವಳನ್ನು ಬಿಟ್ಟು ಹೋದಾಗ ಕಣಿ ಹೇಳುವವಳು ಧೊಪ್ಪನೆ ಭೂಮಿಗೆ ಅಪ್ಪಳಿಸಿ ಬಿದ್ದರೂ ಅವಳಿಗೆ ಏನೂ ಪೆಟ್ಟಾಗದೆ ಕೆಲವೇ ಕ್ಷಣಗಳ ಬಳಿಕ ಅವಳು ಇನ್ನೊಮ್ಮೆ ಬಿದ್ದಾಗ ಹಲ್ಲು ಮುರಿದು ರಕ್ತ ಬರುತ್ತದೆ ಎನ್ನುವುದು. ಈ ಕತೆಯಲ್ಲಿಯೂ ವಾಸ್ತವವೂ ಅಲೌಕಿಕತೆಯೂ ಹದವಾಗಿ ಹೊಂದಿಕೊಂಡು ಬೆರೆತಿರುವುದನ್ನು ನಾವು ನೋಡುತ್ತೇವೆ. 'ವ್ರಣಕ'ದಂತೆ ಈ ಕತೆ ಏಕತೆಯನ್ನು ಸಾಧಿಸಿದ ನಾಟಕೀಯ ಆಧುನಿಕ ಸಣ್ಣಕತೆಯಲ್ಲ. ಇದೊಂದು 'ಟೇಲ್', ಮೌಖಿಕ ಪರಂಪರೆಯ ಕಾಲಕ್ರಮದಲ್ಲಿ ನಿರೂಪಿತವಾಗುವ ಕತೆ.

ಸ್ವಾಭಿಮಾನಿ ಹೆಣ್ಣು

ಸ್ವಾಭಿಮಾನಿಯಾದ ಕ್ರಿಯಾಶೀಲೆ ಹೆಣ್ಣು ಗಂಡನ್ನು ಗೆದ್ದುಕೊಳ್ಳುವ ವಿವಿಧ ಪರಿಗಳನ್ನು 'ಸೋಲೋ ಗೆಲುವೋ' ಸಂಕಲನದ ಮೂರು ಕತೆಗಳೂ ನಿದರ್ಶಿಸುತ್ತವೆ. ಮೊದಲ ಕತೆಯ ಗಂಡು ಕ್ಲಬ್ ಅಡಿಕ್ಟ್, ಸದಾ ಕ್ಲಬ್ಬಿನಲ್ಲಿ ಇಸ್ಪೀಟಾಟ ಟೆನಿಸ್ ಆಟ ಮಾತುಕತೆಯಲ್ಲಿ ಕಾಲಕಳೆಯುತ್ತಾನೆ. ಕಡೆಯ ಕತೆಯ ಗಂಡಿಗೆ ಸ್ತ್ರೀ ವ್ಯಾಮೋಹ, ಚಿತ್ತ ಚಾಂಚಲ್ಯ, ದಿನವೂ ಹೊಸ ಹೊಸ ಸುಂದರಿಯರಿಗೆ ಅವನು ಹಂಬಲಿಸುತ್ತಾನೆ. ಮೊದಲ ಕತೆಯ ಗಂಡು ಮದುವೆಯಾಗಿದ್ದರೂ ಹುಡುಗಿಯನ್ನು ಮನೆ ತುಂಬಿಸಿಕೊಂಡಿರುವುದಿಲ್ಲ. ಕಡೆಯ ಕತೆಯ ಗಂಡು ತಾನು ಪ್ರೇಮಿಸುವ ಮತ್ತು ತನ್ನನ್ನು ಗಾಢವಾಗಿ ಪ್ರೇಮಿಸುತ್ತಿರುವ ಹೆಣ್ಣನ್ನು ಮದುವೆಯಾಗದೆ ಇದ್ದಾನೆ. ಕಾರಣ, ಹೆಣ್ಣುಗಳ ಬಗ್ಗೆ ಅವನ ಹುಚ್ಚು.

ಹೆಣ್ಣುಗಳೇ ಇವರಿಬ್ಬರ ಹುಚ್ಚನ್ನು ಬಿಡಿಸುತ್ತಾರೆ. ಸಾಕು ತಾಯಿಯ ವಿಶ್ವಾಸಕ್ಕೂ ಮದುವೆಯಾದ ಹೆಣ್ಣಿನ ಪ್ರೇಮಕ್ಕೂ ವ್ಯಾಪಾರಿಯಂತೆ ಬೆಲೆ ಕಟ್ಟುವ ಮೊದಲ ಕತೆಯ ಗಂಡು ಸಾಕು ತಾಯಿಗೂ ಹೆಂಡತಿಗೂ ಮೂವತ್ತು ಹಾಗೂ ಐವತ್ತು ರೂಪಾಯಿಗಳ ಮಾಸಾಶನ ಸಿಗುವಂತೆ ಏರ್ಪಡಿಸಿ ತನ್ನನ್ನು ತನ್ನ ಪಾಡಿಗೆ ಬಿಡುವಂತೆ ಅವರಿಬ್ಬರನ್ನು ಒತ್ತಾಯಿಸುತ್ತಾನೆ. ಅವನ ಏರ್ಪಾಡನ್ನು ಇಬ್ಬರೂ ತಿರಸ್ಕರಿಸಿ ಅಮ್ಮ ಕಾಶಿಗೆ ಹೊರಡಲು ಸಿದ್ಧಳಾದರೆ ಹೆಂಡತಿ ತಾನೇ ಅವನಿಗೆ ನೂರು ರೂಪಾಯಿಯ ಮಾಸಾಶನದ ವ್ಯವಸ್ಥೆ ಮಾಡಲು ಮುಂದಾಗುತ್ತಾಳೆ. ಗಂಡಿನ ಮಾನಸಿಕ ತುಮುಲ ವಿಲಕ್ಷಣ ಸ್ವಪ್ನ ರೂಪದಲ್ಲಿ ಪ್ರಕಟಗೊಂಡು ಬುದ್ಧಿ ತಿಳಿದ ಗಂಡು ಅಮ್ಮನ ಆದೇಶವನ್ನನುಸರಿಸಿ ತನ್ನ ಪ್ರೇಮ ಪುತ್ಥಳಿಯನ್ನು ಕೂಡಿಕೊಳ್ಳುತ್ತಾನೆ. ಕತೆಯ ಸ್ವಾರಸ್ಯವನ್ನು ಹೆಚ್ಚಿಸುವ ಅಂಶ ಸ್ವಪ್ರತಿಷ್ಠೆಯ ವ್ಯಕ್ತಿಯೊಬ್ಬ ಅವರಿಬ್ಬರನ್ನೂ ಕೂಡಿಸಲು ಗಂಡಿನ ಕ್ಲಬ್ಬಿಗೆ ಹೋಗಿ ಅವನಿಗೆ ಬುದ್ಧಿ ಹೇಳಲು ಮಾಡುವ ಒರಟುತನದ ಹಾಸ್ಯಾಸ್ಪದ ಪ್ರಯತ್ನ. ಅವನಿಗೆ ಮುಖಕ್ಕೆ ಮಂಗಳಾರತಿಯಾಗಿ ಬಾಲಮುದುರಿಕೊಂಡು ಅವನು ಹಿಂದಿರುಗುತ್ತಾನೆ.

ಕಡೆಯ ಕತೆಯ ಗಂಡಿಗೆ ಬುದ್ಧಿ ಕಲಿಸುವವರು ಅಪೂರ್ವ ಸೌಂದರ್ಯವತಿಯಾದ ಒಬ್ಬ ಅಪಹೃತ ಮಾನವತಿ ಹೆಣ್ಣು.

ಅವನಲ್ಲಿ ಆಸಕ್ತಿ ತೋರಿಸಿದ್ದ ಅವಳ ಜೊತೆಗಾತಿಯ ಬದಲಿಗೆ ತಪ್ಪು ಗ್ರಹಿಕೆಯ ಕಾರಣ ಅವಳೇ ಅಪಹೃತಳಾಗುವ ಈ ಸ್ವಾಭಿಮಾನದ ಹೆಣ್ಣು ಅವನ ಪ್ರಲೋಭನೆಯನ್ನು ತಿರಸ್ಕರಿಸಿ ನಿರಶನ ಸತ್ಯಾಗ್ರಹ ಹೂಡುತ್ತಾಳೆ. ತನ್ನನೇರ ನಡತೆಯನ್ನು ಅವನು ಅವಳಿಗೆ ಒಕ್ಕಣಿಸುತ್ತಾನೆ. ಅವಳೇ ಅವನಿಗೆ ಒಲಿದು ಬರದೆ ಅವಳನ್ನು ಅವನು ಮುಟ್ಟುವವನಲ್ಲವೆಂದೂ ಮೂರು ನಾಲ್ಕು ದಿನಗಳ ಕಾಲಾವಧಿಯಲ್ಲಿಯೂ ಅವಳಿಗೆ ಅವನ ಮೇಲೆ ಮನಸ್ಸಾಗದಿದ್ದರೆ ಅವಳನ್ನು ಸುರಕ್ಷಿತವಾಗಿ ಮನೆಗೆ ಹಿಂದಿರುಗಿಸುವುದಾಗಿಯೂ ಅವನು ಅವಳಿಗೆ ಆಶ್ವಾಸನೆ ನೀಡುತ್ತಾನೆ. ಬಲಾತ್ಕಾರವಾಗಿ ಅವಳಿಗೆ ಆಹಾರ ಕೊಡಲು ಅವನು ಒಬ್ಬ ಡಾಕ್ಟರನ್ನು ಕರೆತರುತ್ತಿರುವಾಗ ಆ ದಿಟ್ಟ ಹೆಣ್ಣು ಮೂರನೆಯ ಮಹಡಿಯಿಂದ ಧುಮುಕಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸುತ್ತಾಳೆ. ಇಂಥ ಪ್ರತಿರೋಧ ಅವನ ಮನಸ್ಸನ್ನು ಆಳವಾಗಿ ತಟ್ಟಿ ಅವನು ಅವಳನ್ನು ಪ್ರೀತಿಸುವಂತೆ ಮಾಡುತ್ತದೆ. ಮುಂದೆ ಯಾವ ಹೆಣ್ಣನ್ನೂ ಹೀಗೆ ಅಪಹರಿಸುವುದಿಲ್ಲವೆಂದು ಅವನು ಶಪಥ ಮಾಡುತ್ತಾನೆ. ಅವನ ಮನಃ ಪರಿವರ್ತನೆಯನ್ನು ಕಂಡು ಅವಳಿಗೂ ಬದುಕಬೇಕು. ಅವನ ಅಭಿಲಾಷೆಯಂತೆ ಅವನನ್ನು ಮದುವೆಯಾಗಬೇಕು ಎಂದು ಎನಿಸುತ್ತದೆ. ಆದರೆ ಕಾಲ ಮೀರಿದೆ, ಅವಳು ಸಾವನ್ನಪ್ಪುತ್ತಾಳೆ. ಮುಂದೆ ಅವನೂ ತನ್ನನ್ನು ಮೊದಲಿನಿಂದಲೂ ಪ್ರೀತಿಸಿದ್ದ ಚೆಲುವೆ ಹೆಣ್ಣನ್ನು ಮದುವೆಯಾಗುತ್ತಾನೆ. ಇದರ ಹೆಚ್ಚಿನ ಕಲಾತ್ಮಕತೆಯಿಂದಲೂ ಇಲ್ಲಿ ಪ್ರಕಟವಾಗುವ ಮನೋವೈಜ್ಞಾನಿಕ ಸೂಕ್ಷ್ಮತೆಯಿಂದಲೂ ಈ ಕತೆ ಈ ಸಂಕಲನದ ಮೊದಲ ಕತೆಗಿಂತಲೂ ಹೆಚ್ಚು ಯಶಸ್ವಿ ಎನಿಸುತ್ತದೆ.

ಮಾಸ್ತಿಯವರ ರಂಗಪ್ಪನ ಕತೆಗಳನ್ನು 'ರಾಧೆಯ ಕ್ಷಮೆ'ಯಂತಹ ಆನಂದರ ಕತೆಗಳನ್ನು ನೆನಪಿಗೆ ತರುವ ಈ ಸಂಕಲನದ ಎರಡನೆ ಕತೆ ಒಂದು ರಮ್ಯ ಸರಸ ಶೃಂಗಾರದ ಕತೆ, ಇಲ್ಲಿ ಕ್ಲಬ್ ಅಡಿಕ್ಟ್ ಆಗಿರುವಳು ಹೆಣ್ಣು. ಕ್ರಮೇಣ ತನ್ನ ಗಂಡನ ಪ್ರೇಮವನ್ನೂ ತನ್ನ ಪುಟ್ಟ ತನ್ನ ಮಗಳ

ಪ್ರೀತಿಯನ್ನೂ ಗಳಿಸಿಕೊಳ್ಳುತ್ತ ಕ್ಲಬ್ಬಿನ ಜೀವನ ಶೈಲಿಯ ನಿರರ್ಥಕತೆಯನ್ನು ಅವಳು ಮನಗಾಣುತ್ತಾಳೆ. ಗಂಡನ ಒಲುಮೆಯನ್ನು ಅವಳು ಸಂಪಾದಿಸಿಕೊಳ್ಳುವ ಹೆಜ್ಜೆ ಹೆಜ್ಜೆಗಳು ಅವಳ ಡೈರಿಯ ಪುಟಗಳನ್ನು ದಾಖಲಾಗುತ್ತಾ ಹೋಗುತ್ತದೆ.

ಓದುಗರ ಕುತೂಹಲವನ್ನು ಕೆರಳಿಸಿ ತೃಪ್ತಿಕರವಾಗಿ ತಣಿಸುವ 'ಘಾಟಿ ಮುದುಕ' ದಂತಹ 'ನಮ್ಮ ಪುಸ್ತಕ' ಪತ್ರಿಕೆಯ ದೇವುಡು ಅವರ ಇತರ ಕತೆಗಳೂ ಮೇಲಿನ ಕತೆಗಳ ಮಟ್ಟ ಮುಟ್ಟದಿದ್ದರೂ ಜನಪ್ರಿಯವಾಗಬಲ್ಲ ಕೃತಿಗಳು.

ನಮ್ಮ ಮಹತ್ವದ ಕತೆಗಳಲ್ಲೊಂದಾದ 'ವೈಣಿಕ' ಹಾಗೂ ಮನೋವಿಜ್ಞಾನಿಕ ಸೂಕ್ಷ್ಮಗಳನ್ನೂ ನಮ್ಮ ಅಂತರಂಗ ಪ್ರವೃತ್ತಿಗಳ ಬಗ್ಗೆ ಒಳನೋಟಗಳನ್ನು ನೀಡುವ 'ದುರಭಿಮಾನ' ಮತ್ತು 'ಸೋಲೋ ಗೆಲುವೋ' ಕಥಾತ್ರಯವೂ ಸಣ್ಣ ಕತೆಯ ಕ್ಷೇತ್ರದಲ್ಲಿಯೂ ದೇವುಡು ಅವರ ಹೆಸರನ್ನು ಚಿರಸ್ಥಾಯಿಯಾಗಿಸುವ ಮನೋಜ್ಞ ಕೃತಿಗಳು.

★

ದೇವುಡು : ಸಂಸ್ಕೃತಿ ಚಿಂತನೆ : ಒಂದು ನೋಟ

ಪ್ರೊ||. ಮಲ್ಲೇಪುರಂ ಜಿ. ವೆಂಕಟೇಶ್

ದೇವುಡು ಆ ಹೆಸರೇ ರೋಮಾಂಚನಗೊಳಿಸುತ್ತದೆ. ಕನ್ನಡ ಸಂಸ್ಕೃತಿಯ ಅಧ್ಯಯನ ಮಾಡುವ ಪ್ರತಿಯೊಬ್ಬರೂ ದೇವುಡು ಅವರನ್ನು ನೋಡದೆ, ಅಧ್ಯಯನ ಮಾಡದೆ; ಮುಂದೆ ಹೋಗುವಂತಿಲ್ಲ. ದೇವುಡು ಅವರ ಬರೆಹ ಆಧುನಿಕ ಕನ್ನಡ ಸಾಹಿತ್ಯದ ಅರ್ಧಶತಮಾನದ ತುಂಬಾ ಬೆಳೆದಿದೆ. ಈ ಶತಮಾನದ ಆರನೆಯ ದಶಕದ ವರೆಗೂ ಅವರು ಬರೆದದ್ದು, ಕಂಡದ್ದು ಒಂದೇ ಎರಡೇ. ಅವು ಹತ್ತಾರು ಕ್ಷೇತ್ರಗಳು. ಅವುಗಳಲ್ಲಿ ವಿಶಿಷ್ಟವಾದ ಚಹರೆಗಳನ್ನು ಅವರು ಗುರುತಿಸಿದ್ದಾರೆ. ದೇವುಡು ಕೇವಲ ಆಧುನಿಕ ಋಷಿ ಮಾತ್ರವಲ್ಲ; ಪ್ರಾಚೀನ ಋಷಿಯೂ ಹೌದು. ಋಷಿಯಾದವನು ನಿನ್ನೆ - ಇಂದು - ನಾಳೆಗಳ ಅನುಕ್ರಮದಲ್ಲಿ ಇರುತ್ತಾನೆ. ಅವನು ಕೇವಲ ಕಾಲಲಬ್ಧವಲ್ಲ; ಕಾಲಬದ್ಧನೂ ಅಲ್ಲ.

ದೇವುಡು ಅವರು ಬದುಕಿದ್ದ ಕಾಲ ಆಧುನಿಕ ಕನ್ನಡವು ಸಮೃದ್ಧತೆಯನ್ನು ಪಡೆಯಲು ಹಾತೊರೆಯುತ್ತಿದ್ದ ಕಾಲ. ಈ ಕಾಲದಲ್ಲೇ ಬೇಂದ್ರೆ, ಶಂಬಾ, ಕುವೆಂಪು, ಪುತಿನ, ಆಲೂರು ವೆಂಕಟರಾಯರು, ತಿ.ತಾ. ಶರ್ಮ ಇವರೇ ಮೊದಲಾದ ಮಹನೀಯರು ಬದುಕಿದ್ದರು. ಒಬ್ಬೊಬ್ಬರೂ ತಿಳಿವಿನ ಶಕ್ತಿಯಾಗಿದ್ದರು. ದೇವುಡು ಇವರ ನಡುವೆ ನಡೆದವರು. ಬೇರೆ ಯಾರೂ ನಡೆಯದ ಹಾದಿಯಲ್ಲಿ ಹೆಜ್ಜೆ ಇಕ್ಕಿದರು. ಬೇರೆ ಇನ್ನಾರಿಗೂ ಲಬ್ಧವಾಗದ ವಿಶಿಷ್ಟ ಸಾಧನೆಗಳನ್ನು ಅವರು ಕೈಗೊಂಡರು. ಧರ್ಮದ ಋಜುದರ್ಶನವನ್ನು ಕಂಡವರು. ಶ್ರುತಿ, ಸ್ಮೃತಿ, ಯೋಗ, ಆಗಮ, ಶಾಸ್ತ್ರ, ಪುರಾಣ, ಕಾವ್ಯ, ಮಕ್ಕಳ ಸಾಹಿತ್ಯ ಹೀಗೆ ಹಲವಾರು ಬಗೆಗಳಲ್ಲಿ, ಕ್ಷೇತ್ರಗಳಲ್ಲಿ ಹೊಕ್ಕು ಬಳಸು ನಡೆಸಿದವರು. ಅವೆಲ್ಲವನ್ನೂ ಅವರು ಬಿಡಿ ಬಿಡಿಯಾಗಿ ಪರಿಗಣಿಸಲಿಲ್ಲ. ಅವೆಲ್ಲವನ್ನೂ ಒಂದು ಎರಕದಲ್ಲಿ ಹೊಯ್ಯಲು ಅಣಿಯಾದರು.

ಈ ಹಿನ್ನೆಲೆಯಲ್ಲಿ ಮನದಂದರೆ : ದೇವುಡು ಅವರದ್ದು ವಿಶಿಷ್ಟ ಭೂಮಿಕೆ ಉಳ್ಳದ್ದು. ಆ ಭೂಮಿಕೆಗೆ ಶ್ರೇಯಸ್ಸಿನ ಮಾರ್ಗವೇ ಗಂತವ್ಯ. ಅದೇ ನಿಲುಗಡೆ. ಇದಕ್ಕೆ ಆಧ್ಯಾತ್ಮಿಕವೇ ನೆಲೆಮನೆ. ಸಂಸ್ಕೃತಿಯ ಬೇರುಗಳನ್ನು ಮಾನವಶಾಸ್ತ್ರ, ಭಾಷಾಶಾಸ್ತ್ರ, ಭೌತಶಾಸ್ತ್ರಗಳ ಬೇರಿನಲ್ಲಿ ಹುಡುಕುವುದು ಒಂದು ಕ್ರಮವೇನೋ ಹೌದು. ಆದರೆ ಇದು ಹೊರಗೂ ಸಿಪ್ಪೆಯನ್ನು ಸುಲಿದು; ಅದಕ್ಕೆ ಚಪ್ಪರಿಸಿ ಕಬ್ಬಿನ ರುಚಿಯನ್ನು ಸವಿದಂತೆ ಮಾತ್ರ. ಇದು ಅರ್ಧದಾರಿಯಲ್ಲಿ ನಡೆಯುವ ಕುರುಡು ಸಾಹಸ. ಈ ಸಾಹಸದ ಬಗ್ಗೆ ದೇವುಡು ಅವರಿಗೆ ಅಷ್ಟು ಮನಸ್ಸಿಲ್ಲ. ಆದರೆ, ಇದರ ಹಿಂದಿರುವ ಸಂಸ್ಕೃತಿಯ ಆತ್ಮವನ್ನು ತಿಳಿಯುವುದು ಅವರ ಅಪೇಕ್ಷೆ. ಈ ಆತ್ಮವೂ ಕೂಡ ಸಮಷ್ಟಿಪರವಾದದ್ದು ಪರಂತು ವ್ಯಷ್ಟಿಪರವಾದುದಲ್ಲ. ಈ ಬಗ್ಗೆ ಅವರು ಸಾಕಷ್ಟು ಚಿಂತನೆ ಮಾಡಿದ್ದರು. ಆದರಿಂದಾಗಿಯೇ ಅವರು ವೇದೋಪನಿಷತ್ತು - ಯೋಗಶಾಸ್ತ್ರ ಮತ್ತು ಪುರಾಣ ಕಾವ್ಯಗಳನ್ನು - ಅವುಗಳ ಅನುಸಂಧಾನದ ಮೂಲಕ ಚಿಂತನೆ ನಡೆಸಿದ್ದರು. ಅವರ ಎಲ್ಲ ಕೃತಿಗಳೂ ಇವೆಲ್ಲದರ ಪರಸ್ಪರ ಮೈತ್ರೀಭಾವದಲ್ಲಿ ಜ್ವಲಿಸುತ್ತವೆ.

ಈ ಹಂತದಲ್ಲಿ ದೇವುಡು ಮತ್ತು ಇತರ ಚಿಂತಕರು ಬೇರೆಯಾಗುವುದು. ಉಳಿದವರಿಗೆ ಭೌತಿಕಶಾಸ್ತ್ರ ಮತ್ತು ಮಾನವ ಪರಿಕರಗಳ ಬಗ್ಗೆ ಆಸಕ್ತಿಯಿದ್ದರೆ; ದೇವುಡು ಅವರಿಗೆ ಸಮಸ್ತ ಭಾರತೀಯ ವಿದ್ಯೆಗಳು ಪರಸ್ಪರ ಪೂರಕನೆಲೆಗಳೇ ಆಗಿವೆ. ಮಾನವನ ಚರ್ಯೆಯನ್ನು ಅವನ ನಡವಳಿಕೆಗಳಲ್ಲಿ ಹುಡುಕುವುದು ಒಂದು ಮಾರ್ಗವೇನೋ ಹೌದು. ಆದರೆ, ಅದಕ್ಕಿಂತ ಅಚಾರಿತ್ರಿಕ ನಡೆ ಯಾವ ಬಗೆಯ ಫಲಕಗಳನ್ನು ನೀಡಬಹುದು? ಎಂಬ ಕುತೂಹಲವೂ ಇತ್ತು. ಇತಿಹಾಸ -ಪುರಾಣ ಈ ಮಾತುಗಳೆರಡನ್ನು ಭಾರತೀಯ ಮೂಲದಲ್ಲೆ ವ್ಯಾಖ್ಯಾನಿಸಬೇಕೆಂಬ ಇರಾದೆ ಅವರದ್ದು. ಒಂದರ್ಥದಲ್ಲಿ ಇದು ತನ್ನ ಮೂಲನೆಲೆಗಳ ಹುಡುಕಾಟ ಕೂಡಾ.

ಈ ಹಿನ್ನೆಲೆಯಲ್ಲಿ ಸಂಸ್ಕೃತಿಯನ್ನು ಮೂರು ಬಗೆಗಳಲ್ಲಿ ನೋಡಬಹುದು. ಮೊದಲನೆಯದು ಧರ್ಮಸಂಸ್ಕೃತಿ, ಎರಡನೆಯದು ಅರ್ಥಸಂಸ್ಕೃತಿ, ಮೂರನೆಯದು ಕಾಮಸಂಸ್ಕೃತಿ. ಸಂಸ್ಕೃತಿಯನ್ನು ತ್ರಿವರ್ಗಸಾಧಕಗಳ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುತ್ತಾರೆ. ಚತುರ್ವರ್ಗ ಪುರುಷಾರ್ಥಗಳಲ್ಲಿ ಅರ್ಥ ಮತ್ತು ಕಾಮಗಳು ನಡುವೆ ಇವೆ. ಅವನ್ನು ತಿರಸ್ಕರಿಸುವುದೂ ಸಲ್ಲ. ದೇವುಡು ಈ ಧರ್ಮ, ಅರ್ಥ, ಕಾಮಗಳ ಬಗ್ಗೆ ನಿಶ್ಚಿತ ಅರಿವನ್ನೂ ಇಟ್ಟುಕೊಂಡಿದ್ದರು. ಧರ್ಮಯುಕ್ತವಾದ ಅರ್ಥ ಹಾಗೂ ಧರ್ಮಯುಕ್ತವಾದ ಕಾಮ ಬಾಳ್ವೆಗೆ ಅನುಕೂಲವನ್ನು ಒದಗಿಸಿಕೊಡುತ್ತದೆಂಬ ನಂಬುಗೆ ಅವರದು. ಅವರೇ ಒಂದೆಡೆ ಹೇಳಿರುವ ಈ ಮಾತುಗಳು ಮನನೀಯವಾಗಿವೆ:

"ಬುದ್ಧಿಯು ಇನ್ನೂ ಬಾಲ್ಯದಶೆಯಲ್ಲಿರುವಾಗ ಬಹುವಾಗಿ ಮೃಗಗಳಂತೆ ಅರ್ಥಕಾಮನೆಗಳನ್ನೇ ಆರಾಧಿಸುವುದು. ಬುದ್ಧಿಯು ಪಕ್ವವಾಗುತ್ತ ಬಂದ ಹಾಗೆಲ್ಲ ಅರ್ಥ ಕಾಮಗಳು ಧರ್ಮಕ್ಕೆ ಅಂಕಿತವಾಗಿರಬೇಕು. ಇಲ್ಲವಾದರೆ ವಿಕೋಪಕ್ಕೆ ಕಾರಣವಾಗುವುದು ಎಂಬ ಅರಿವು ತಲೆದೋರುವುದು. ಆ ಅರಿವೂ ಚೆನ್ನಾಗಿ ಪ್ರವೃದ್ಧವಾದಾಗ ಧರ್ಮದ ಆರಾಧನೆಯು ಮೊದಲಾಗಿ ಅದು ಶುದ್ಧವಾದ ಹಾಗೆಲ್ಲಾ ಮೋಕ್ಷದತ್ತ ಹೊರಳುವುದು ಎಂಬ ಶ್ರದ್ಧೆ ಉದಯವಾಗುವುದು"

ಬಹುಶಃ ಧರ್ಮ, ಅರ್ಥ, ಕಾಮ, ಸಂಸ್ಕೃತಿಗಳ ಬಗೆಗೆ ಇಷ್ಟು ಅಡಕವಾಗಿ ಹೇಳಲು ಇನ್ನು ಯಾರಿಂದಲೂ ಸಾಧ್ಯವಿಲ್ಲ.

ದೇವುಡು ಅವರು ಸ್ವಾತಂತ್ರ್ಯಪೂರ್ವದ ಭಾರತದ ಬದುಕೂ ನೋಡಿದ್ದರು; ಅವರೋಹಿಣಿ ದಶೆಯಲ್ಲಿದ್ದ ಧರ್ಮ, ಅರ್ಥ, ಕಾಮಗಳ ನಿಲುವುಗಳನ್ನೂ ಕಂಡಿದ್ದರು. ಅದೇ ಹೊತ್ತಿಗೆ ಸ್ವಾತಂತ್ರ್ಯದ ನೆಲೆಗೆ ಬಂದ ಹೊತ್ತಿನಲ್ಲಿ ಭಾರತವು ಪಡೆಯಬೇಕಾದ ಉಜ್ಜೀವನದ ಬಗ್ಗೆ ಯೋಚಿಸಿಯೂ ಇದ್ದರು. ಅದು ಪಶ್ಚಿಮದ ಸಂಸ್ಕೃತಿ ಚಿಂತನೆಯ ಮಾದರಿಗಳು ಆಗಿರಲಿಲ್ಲ ಅನ್ನುವುದನ್ನು ತಿಳಿಯಬೇಕು. ಅಥವಾ ಅನೈತಿಹಾಸಿಕ ನೆಲೆಯನ್ನು ಉದ್ದೀಪಿಸುವ ಆಸಕ್ತಿಯೂ ಇರಲಿಲ್ಲ. ಹೊರಗಣ ಬೆಳಕು ಹೊರಗಿರುತ್ತದೆ. ಅದು ತುಸು ವ್ಯಾಪಿಸಬಹುದು. ಆದರೆ, ಒಳಗಣ ಬದುಕು ಮುಖ್ಯ. ಒಳಗಿನ ಸಂಸ್ಕಾರ ಪಕ್ವವಾದರೆ, ಹದವಾದರೆ ಹೊರಗಿನದೂ ಚೆನ್ನಾಗುತ್ತದೆ. ಏಕೆಂದರೆ ಸ್ವಾತಂತ್ರ್ಯ ಬಂದ ಹೊತ್ತು ಭಾರತೀಯತೆಯು ಪುನಃ ಉಜ್ವಲಗೊಂಡ ನೆಲೆಯೇ ಆಗಿದೆ.

ಅವರೋಹಿಣಿ ದಶೆಯಿಂದ ಆರೋಣಿದಸೆಗೆ ಬಂದ ಕಾಲವೂ ಆಗಿದೆ. 'ಸ್ವಾತಂತ್ರ್ಯ' ಎಂಬ ಮಾತಿನಲ್ಲೇ ಇವೆಲ್ಲವೂ ಅಡಗಿ ಕೂತಿದೆ.

ಭಾರತವು ಅವರೋಹಿ ಗತಿಯಲ್ಲಿರುವಾಗ ಅಥವಾ ವಸಾಹತುಶಾಹಿ ಸಂಸ್ಕೃತಿಯ ಹಿಡಿತದಲ್ಲಿರುವಾಗ ಹೊಟ್ಟೆ ಬಟ್ಟೆಗಳ ಪೂರ್ಣವಷ್ಟೆ ಜೀವನವೆಂದು ಒಪ್ಪಿಕೊಂಡು ಮನುಷ್ಯನನ್ನು ಮೃಗದ ವರ್ಗಕ್ಕೆ ಇಳಿಸಲಾಗಿತ್ತು. ಅದನ್ನು ತಿಳಿಯುವುದು, ಅದರಿಂದ ಬಿಡುಗಡೆ ಪಡೆಯುವುದು ಅಗತ್ಯವೆಂದು ತಿಳಿಯಲಾಯಿತು. ಈ ತಿಳಿವಳಿಕೆಯು : ಮನುಷ್ಯನಿಗೂ ಪ್ರಗತಿ ಇದೆ; ಅದು ಇಂದ್ರಿಯ ಭೋಗವನ್ನು ಧಿಕ್ಕರಿಸಿ ಮುಂದೆ ಹೋಗಬೇಕು ಎಂಬುದು ಪ್ರಬಲವಾದಾಗ. ಭಾರತವೇನೋ ರಾಜಕೀಯವಾಗಿ ಸ್ವತಂತ್ರವಾಗಿದೆ. ಆದರೆ ಸಾಂಸ್ಕೃತಿಕವಾಗಿ ಸ್ವತಂತ್ರವಾಗಿದೆಯೇ? ಎಂಬ ಪ್ರಶ್ನೆ ಅವರನ್ನು ಕಾಡಿತ್ತು. ಎಲ್ಲಿಯವರೆಗೆ ಸಾಂಸ್ಕೃತಿಕ ಸ್ವಾತಂತ್ರ್ಯ ಸಿಗುತ್ತದೋ ಆಗ ಮನುಷ್ಯ ಊರ್ಧ್ವಗತಿಯ ಕಡೆ ಹೋಗಬಲ್ಲ. ಅದು ನಿಜದ ಪ್ರಗತಿ. ನಾವು ಪಾಶ್ಚಿಮಾತ್ಯದ ಪ್ರತೀಕ, ಭಾಷೆ, ವಸ್ತು, ಧ್ಯೇಯ, ಧೋರಣೆ ಮೊದಲಾದವುಗಳನ್ನು ಎಷ್ಟು ಬೇಕೋ ಅಷ್ಟಕ್ಕಿಂತ ಬಹುಪಾಲು ಸ್ವೀಕರಿಸಿಬಿಟ್ಟೆವು. ಎಲ್ಲಿಯವರೆಗೆ ಈ ಬಗೆಯ ಪರಿಕರಗಳಿಗೆ ದಾಸ್ಯರಾಗಿರುತ್ತೇವೋ - ನಮ್ಮ ವಿಚಾರಗಳಿಗೆ ಮಿಡಿತವಿಲ್ಲ. ಅಲ್ಲಿ ಸಂಸ್ಕೃತಿ ಪ್ರಕಾಶಕ್ಕೆ ದಾರಿಯಿಲ್ಲ. ಈ ಅಂಶವನ್ನು ವಿವರಿಸುತ್ತ ದೇವುಡು ಅವರು 'ಯಾಜ್ಞವಲ್ಕ್ಯ' ನಾಟಕಕ್ಕೆ ಬರೆದ ಮುನ್ನುಡಿಯಲ್ಲಿ

''ಪ್ರಪಂಚವೆಲ್ಲವೂ ಒಂದು ಪ್ರತೀಕ. ಇದು ದೇಶದೇಶಕ್ಕೂ ಸಮಾಜ ಸಮಾಜಕ್ಕೂ ವ್ಯಕ್ತಿ ವ್ಯಕ್ತಿಗೂ ಭಿನ್ನೈಸುವುದು. ಈಗ ಭರತಖಂಡದಲ್ಲಿ ಪಾಶ್ಚಿಮಾತ್ಯ ಪ್ರತೀಕಗಳು ತುಂಬಿವೆ. ಇದನ್ನೇ ನಾವು ಸಂಸ್ಕೃತಿ ದಾಸ್ಯವೆನ್ನುವುದು. ಇದು ತಪ್ಪಬೇಕಾದರೆ ನಮ್ಮ ಪ್ರತೀಕಗಳು ಬದಲಾಗಬೇಕು. ಎಂದರೆ ಆಗ ನಮ್ಮ ದೃಷ್ಟಿಕೋನವು ಬದಲಾಯಿಸುವುದು. ಇವನು ತನ್ನವನೇ? ಪರಕೀಯನೇ? ಎಂದು ಯೋಚಿಸುವುದು ಲಘುಚೇತರಸರ ಪ್ರೇಯಸ್ಕಾಮಿಗಳ ಗುರುತು. 'ಉದಾರಚರಿತರಿಗೆ ವಸುಧೆಯೆಲ್ಲವೂ ಕುಟುಂಬ' ಎನ್ನುವುದು ನಿಜವಾಗಲಿ''

ಹೀಗೆ ಹಾರೈಸುವ ದೇವುಡು, ಅಂತಶ್ಚೈತನ್ಯದ ಬಗ್ಗೆ ತೀವ್ರ ತಾಪವುಳ್ಳವರಾಗಿದ್ದರು. ಅದು ಸಹಜ ಕೂಡಾ.

ದೇವುಡು ಅವರ ಸಂಸ್ಕೃತಿಚಿಂತನೆ ಹೊರಗಿನಿಂದ ಒಳಕ್ಕೆ ಬರುವ ಮಾರ್ಗವನ್ನು ಹಿಡಿಯುವುದಿಲ್ಲ. ಹೀಗೆ, ಹೊರಗಿನ ಚಾಲನೆಯನ್ನೇ ಪ್ರಧಾನವಾಗಿ ಹಿಡಿಯುವುದಿಲ್ಲ. ಹೊರಗಣ ನೆಲೆಗೂ ಒಳಗಣ ನೆಲೆಗೂ ಇರುವ ಅಂತರವನ್ನು ತೋರಿಸಿಕೊಡುವ ಅಂತಃಸತ್ವ ಸಂಸ್ಕೃತಿಯಲ್ಲಿ ಇರುತ್ತದೆಂದು ನಂಬಿದ್ದರು. ಮೃಗವೃತ್ತಿಯಿಂದ ಮಾನವವೃತ್ತಿಯ ಕಡೆ ಚಲಿಸುವುದು ಆದ್ಯ ಕರ್ತವ್ಯವೆಂದು ತಿಳಿದಿದ್ದರು. ಆ ಬಗ್ಗೆ ದೇವುಡು ಅವರ ಮಾತು ಹೀಗಿದೆ:

''ಹೊರಗಿನ ವಿಷಯಾದಿಗಳ ಸೆಳೆತಕ್ಕೆ ಸಿಕ್ಕಿದ ಇಂದ್ರಿಯಗಳ ವೃತ್ತಿಗೆ ಅಧೀನವಾಗಿ ನಡೆಯುವುದು ಮೃಗವೃತ್ತಿಯೆಂದೂ ಜೀವನದಲ್ಲಿ ಗುರಿಯೊಂದುಂಟು ಎಂದುಕೊಂಡು ಹೊರಗಿನ ಸೆಳೆತ -ತುಳಿತಗಳನ್ನೆಲ್ಲ ತಡೆದುಕೊಂಡು ತನ್ನ ಕಾರ್ಯಗಳನ್ನೆಲ್ಲ ಆ ಗುರಿಯ ಕಡೆಗೆ ತಿರುಗಿಸಿಕೊಂಡು, ಹೆಜ್ಜೆ ಹೆಜ್ಜೆಗೂ ಆ ಗುರಿಯ ಬಳಿ ಸಾರಬೇಕು ಎಂಬ ಉದ್ದೇಶದಿಂದ ಬದುಕುವುದು

ಮಾನವವೃತ್ತಿಯೆಂದೂ ಒಪ್ಪಿಕೊಂಡರೆ ಆಗ ಆ ಮಾನವನ ಕಾರ್ಯಪ್ರಪಂಚದಲ್ಲಿ ಕಾಣಬರುವ ಮನಸ್ಸಿನ ಬೆಳವಣಿಗೆಯನ್ನೂ ಅಥವಾ ಬೆಳೆದ ಮನಸ್ಸಿನ ಸ್ಥಿತಿಯನ್ನೂ ತೋರಿಸುವ ಭಾವವೇ ಸಂಸ್ಕೃತಿಯೆನ್ನಬಹುದು''

ದೇವುಡು ಅವರ ಈ ಮಾತುಗಳು ಅವರ ಚಿಂತನೆಗಳು 'ಭಾರತೀಯ ನೆಲೆ' ಗಳಲ್ಲಿವೆ ಎಂಬುದನ್ನು ರುಜುವಾತುಗೊಳಿಸುತ್ತವೆ.

ಈ ಹಿನ್ನೆಲೆಯಿಂದ ನೋಡಿದರೆ ಸಂಸ್ಕೃತಿಯೆನ್ನುವುದು ಒಂದು ಮನಃಪರಿಪಾಕ. ಅದರ ಹಬ್ಬುಗೆಯಲ್ಲಿ ಪ್ರತಿಯೊಬ್ಬರ ಉಳಿವು ಇದೆ ಎನ್ನುವ ಅಚಲ ನಂಬುಗೆ ಬೆಳೆಯಿತು. ಈ ಹಿನ್ನೆಲೆಯಿಂದಲೇ ಅವರ ಎಲ್ಲ ಕೃತಿಗಳನ್ನೂ ನೋಡಬೇಕು. ಅವರ ಕೃತಿಗಳನ್ನು ಪ್ರತ್ಯೇಕಿಸಿ ನೋಡುವುದು ಒಂದು ಅಧ್ಯಯನ ಕ್ರಮವಾಗಬಹುದು. ಆದರೆ ಅವೆಲ್ಲವೂ ಒಂದರೊಡನೊಂದು ಬೆರೆತುಕೊಂಡಿವೆ ಎಂಬ ಸಂಗತಿಯನ್ನೂ ಅವೆಲ್ಲವೂ ಬೆಳಕಿನ ಸರಮಾಲೆ ಎಂಬುದನ್ನೂ ತಿಳಿಯುವುದು ಅಗತ್ಯವಿದೆ.

★

1

'ದೇವುಡು ವಿಚಾರಧಾರಾಶತಕ'

ಸಂಕಲನಕಾರರು ಪ್ರೊ|| ಜಿ. ಅಶ್ವತ್ಥನಾರಾಯಣ, ಬೆಂಗಳೂರು

ದೇವುಡು ಅವರು ಕನ್ನಡದ ಧೀಮಂತ ಸಾಹಿತಿಗಳಲ್ಲಿ ಒಬ್ಬರು. ಕನ್ನಡವನ್ನು ಶ್ರೀಮಂತಗೊಳಿಸಿದ ದಿಟ್ಟ ಸಾಹಿತಿಗಳಲ್ಲಿ ಅವರೊಬ್ಬರು. ವಾಗ್ಮಿಗಳಾಗಿ ಸಂಸ್ಕೃತಿ ಪ್ರತಿಪಾದಕರಾಗಿ ಬರಹಗಾರರಾಗಿ, ಗೀತಾ- ಸಂಸ್ಕೃತ ಪ್ರಚಾರಕರಾಗಿ ರಸಿಕರಾಗಿ ಸಹೃದಯರಾಗಿ ವಿದ್ವಾಂಸರಾಗಿ ಆಚಾರವಂತರಾಗಿ ದೇಶಪ್ರೇಮಿಗಳಾಗಿ ನಾಡು-ನುಡಿಗಳಿಗೆ ಸೇವೆ ಸಲ್ಲಿಸಿದ ಅವರು ಕನ್ನಡದ ಭಾಷಾ ಶ್ರೀಮಂತಿಕೆ- ಭಾವ ಶ್ರೀಮಂತಿಕೆ ಹೆಚ್ಚಿಸಲು ವಿಶಿಷ್ಟ್ಯ ಕೊಡುಗೆಗಳನ್ನಿತ್ತವರು. ಗಹನ ಗಂಭೀರವಾದ ವೇದಾಂತವನ್ನು ಕನ್ನಡದ ಭಾಷೆಯಲ್ಲಿ ಎಷ್ಟು ಹೃದ್ಯವಾಗಿ ಹೇಳಲು ಸಾಧ್ಯ ಎಂಬುದನ್ನು ಮೀಮಾಂಸಾದರ್ಪಣ, ರಾಮಾಯಣವೂ ಭಗವದ್ಗೀತೆಯೂ ಮೊದಲಾದ ಗ್ರಂಥದಲ್ಲಿ ತೋರಿಸಿದ್ದಾರೆ ಇನ್ನು ಅದರ 'ಧಾರ್ಮಿಕ ಕಾದಂಬರಿತ್ರಯ' ಕನ್ನಡದಲ್ಲಿ ಬೇರೆ ಯಾರೂ ನೀಡಲಾಗದ ಕೊಡುಗೆ ಆಗಿದೆ. ದೇವುಡು ಅವರ ಬರಹಗಳನ್ನೆಲ್ಲಾ ಓದುತ್ತಿದ್ದಾಗ ಅವರು ಎಲ್ಲ ಕಾಲಕ್ಕೂ ಎಲ್ಲ ಜನರಿಗೂ ಬೇಕಾದ ಅಪೂರ್ವ ವಿಚಾರಧಾರೆ ಹರಿಸಿರುವುದು ಕಂಡು ಬೆರಗಾಗುತ್ತಿದ್ದೆ. ಅವುಗಳನ್ನು ದೇವುಡು ವಿಚಾರಧಾರೆ ಎಂದು ಸಂಗ್ರಹಿಸುತ್ತಿದೆ. ಈ ಪೈಕಿ ದೇವುಡು ಶತಾಬ್ದಿಯ ನೆನಪಿಗಾಗಿ ಒಂದು ನೂರನ್ನು ಆಯ್ದು ಇಲ್ಲಿ ಸಂಕಲಿಸಿದ್ದೇನೆ. ದೇವುಡು ಅವರ ವ್ಯಕ್ತಿತ್ವ ವಿಚಾರಸರಣಿ, ಪ್ರತಿಭೆ ಪಾಂಡಿತ್ಯಗಳನ್ನು ಸಹೃದಯತೆ ಸ್ವಂತಿಕೆಗಳನ್ನು ಇಲ್ಲಿನ ವಿಚಾರಧಾರೆಯಲ್ಲಿ ಗುರುತಿಸಬೇಕಾಗಿದೆ. ದೇವುಡು ವಾಣಿಯ ಪರಿಚಯ ಈ ಸಂಗ್ರಹದಿಂದ ಆಗುತ್ತದೆ ಎಂದು ನಂಬಿದ್ದೇನೆ.

ಭಾಗ -೧ ಸಾಹಿತ್ಯ

ಸಾಹಿತ್ಯ ಯಾರಿಗಾಗಿ?

ಸಾಹಿತ್ಯ ಸೃಷ್ಟಿಯಾಗುವುದು ಸನ್ಮಿತ್ರರಿಗಾಗಿ. ಬಾಳೆಯ ಹಣ್ಣು ಹಲಸಿನ ಹಣ್ಣು ಹುಟ್ಟಿರುವುದು ಹೊಟ್ಟೆಯ ನೋವಿನಿಂದ ನರಳುತ್ತಿರುವವರಿಗೆ ಅಲ್ಲ; ಹಸಿವನ್ನು ತಡೆಯಲಾರದವರಿಗಾಗಿ

'ಮಹಾಬ್ರಾಹ್ಮಣ'ದ ಮುನ್ನುಡಿ

ಸಾಹಿತ್ಯ ಎಂದರೇನು?

ಸಾಹಿತ್ಯವು ಜೀವನದ ಪ್ರತೀಕ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಪ್ರತೀಕವೆಂದರೆ ಫೋಟೋ ಅಲ್ಲ ಎನ್ನುವುದು ಅನೇಕರಿಗೆ ಗೊತ್ತಿದ್ದಂತೆ ಇಲ್ಲ. ನೆಲದಲ್ಲಿ ಇರುವುದೂ ನೀರೇ! ಮಳೆಯಾಗಿ ಬರುವುದೂ ನೀರೇ! ನೆಲದ ಮೇಲಿನ ನೀರು ಜೀವನ ಮಳೆಯಿಂದ ಬಂದ ನೀರು ಸಾಹಿತ್ಯ. ಕರಿಯ ಮೋಡದಿಂದ ಇಳಿದ ನೀರಿನಲ್ಲಿ ಏನೋ ವಿಶೇಷವಿದೆ. ಅದು ಅದರ ಗುಣ. ಹಾಗೆ ಸಾಹಿತ್ಯ ಅದರಿಂದಲೇ ಹ್ಲಾದೈಕಮಯವಾಗಿಯೂ ಅನನ್ಯ ಪರತಂತ್ರವಾಗಿ ಬರುವ ಸಾಹಿತ್ಯ

ಮೇಘಪುಷ್ಪದಂತೆಯೇ ಇರುತ್ತದೆ. ಪುರುಷತಂತ್ರವಾದರೂ ವಸ್ತು ತಂತ್ರವೆಂಬಂತೆ ಕಾಣುವಂತೆ ಮಾಡಿದ ಉಪಾಸನಾ ಸಾಮರ್ಥ್ಯದಿಂದ ಅದು ಸುಲಭವಾಗಿರುವಂತೆ ಕಂಡರೂ ಅದು ಎಲೆಯ ಹಾಗೆ ಒಂದು ಪ್ಯಾಕ್ಟರಿಯಾಗಿದ್ದರೇನೇ ಸಾಹಿತ್ಯ

ಮಲ್ಲಿ ಕಾದಂಬರಿ

ಓದುಗ ಬೆಳೆಯಬೇಕು

ಕೆಲವರು ಜನಕ್ಕೆ ಹಿಡಯುವ ಪುಸ್ತಕ ಬರೆದರೆ ಯಾಕೆ ಆಗುವುದಿಲ್ಲ ಎನ್ನುತ್ತಾರೆ. ನಾನು 'ಓದುವವರ ಮಟ್ಟಕ್ಕೆ ಪುಸ್ತಕ ಇಳಿದರೆ, ಹೋಟೆಲ್ ತಿಂಡಿಗೂ ಇದಕ್ಕೂ ವ್ಯತ್ಯಾಸವೇನು? ಓದುವವನು ಬರೆಯುವವನ ಮಟ್ಟಕ್ಕೆ ಏರಬೇಕು. ಬೇರು ನೆಲದಲ್ಲಿಯೇ ಬಿಟ್ಟರೂ ಹೂ ಮಾತ್ರ ಗಿಡದ ತಲೆಯಲ್ಲಿಯೇ ಬಿಡುವುದು. ಹಾಗೆ 'ಸಾಹಿತ್ಯ' ಎನ್ನುತ್ತೇನೆ ಅಲ್ಲದೆ ಮನಃಪೂರ್ವಕ ಪ್ರಯತ್ನ ಓದಿನಲ್ಲಿರಬೇಕು ಆ ಪ್ರಯತ್ನ ಬಹಳ ಕಡೆ ಇನ್ನೂ ಬೆಳೆಯಬೇಕು.

ದೇವುಡು ಆತ್ಮ ಕಥೆ

ಅಕ್ಷರ ಪ್ರಚಾರ ಏಕೆ?

ಅಕ್ಷರ ಪ್ರಚಾರ ಮುಂದಿನ ಸಾಹಿತಿಗಳ ಕಾಮಧೇನು

ಒಂದು ಕೋಟಿ ಇಪ್ಪತ್ತು ಲಕ್ಷ ಜನರು ಇರುವ ಕರ್ನಾಟಕದಲ್ಲಿ ಒಂದು ಸಾವಿರ ಪುಸ್ತಕ ಉಂಟೆ? ಸಾವಿರ ಹಾಕಿ ಅದು ಕ್ರಯವಾಗಲು ಐದಾರು ವರ್ಷವಾದರೂ ಕಾದಿರಬೇಕು. ಈಚೆಗೆ ಕೆಲವಲ್ಲದೆ ಅಖಿಲ ಕರ್ನಾಟಕದಲ್ಲೆಲ್ಲಾ ಏಜೆನ್ಸಿಗಳಿರುವ ಪುಸ್ತಕ ವ್ಯಾಪಾರಿಗಳೆಷ್ಟು ಜನ ? ಇದೆಲ್ಲವನ್ನೂ ಕುರಿತು ಚಿಂತಿಸಿ ಏನು ಮಾಡಿದರೆ ಈ ಸ್ಥಿತಿ ತಪ್ಪುವುದು ಎಂದು ಆಲೋಚಿಸಿ ಅಕ್ಷರ ಪ್ರಚಾರಕ್ಕೆ ಇಳಿದೆ.

ದೇವುಡು ಆತ್ಮ ಕಥೆ

ವಿಮರ್ಶಕ ಹೇಗಿರಬೇಕು?

ವಿಮರ್ಶಕನೂ ಸಾಹಿತಿಯಂತೆ ಉಪಾಸಕನಾಗಿರಬೇಕು. ಆದರೆ ತತ್ಕರ್ಮ ಮರ್ಮಜ್ಞನಾದಾನು. ಇಲ್ಲದಿದ್ದರೆ ತೋಡಿ ರಾಗವನ್ನು ಕೇಳಿ ಇದೆ ತಾನೇ ಕಲ್ಯಾಣಿ? ಎಂದ ಹಾಗಾಗುವುದು. ಇನ್ನು ಮುಂದಾದರೂ ಹಾಗಾಗದಿರಲಿ. ಕೆಟ್ಟಿದೆ ನೋಡಿ ಎಂದು ಕಾಲಂ ಕಾಲಂ ಬರೆದು ಮೆರೆಯುವವರು ಚೆನ್ನಾಗಿದೆ ನೋಡಿ ಎಂದೂ ಕಾಲಂ ಕಾಲಂ ಬರೆಯುವಂತಾಗಲಿ.

ಮಲ್ಲಿ ಕಾದಂಬರಿ
ಮೊದಲಮಾತು

ಮಕ್ಕಳ ಕತೆಗಾರರಿಗೆ ಮಾರ್ಗಸೂಚಿ

ಇತರರಿಗೆ ತಾವೊಂದು ಕಥೆಯನ್ನು ಹೇಳಿ ಅವರನ್ನು ಮೆಚ್ಚಿಸುವುದು ಪ್ರಧಾನೋದ್ದೇಶ. ಆದರೆ ಕಥೆ ಹೇಳುವಾಗ ಈಗಿನ ಕಾಲದ ನೀರಾವರಿ ಕಟ್ಟೆಗಳನ್ನು, ಕಟ್ಟುವಾಗ ನಡೆಯುವ ಮಹತ್ತರವಾದ ಪ್ರಯತ್ನ ನಡೆಯಬೇಕು. ಹಳ್ಳದಲ್ಲಿ ಹರಿಯುತ್ತಿರುವ ನೀರಿಗೆ ಅಡ್ಡಗಟ್ಟೆ ಹಾಕಿ

ಅದನ್ನು ಮೇಲಕ್ಕೆ ತಂದುಕೊಂಡು ಕಾಲುವೆಗಳ ಮೂಲಕ ಹಂಚಿ ಎರಡು ಮೂರು ಅಂಗುಲ ನೀರು ನೆಲದ ಮೇಲೆ ನಿಲ್ಲುವಂತೆ ಮಾಡಿದರೆ ಅಲ್ಲಿ ಭತ್ತವು ಬೆಳೆಯುವುದು. ಹಾಗೆ ಮಕ್ಕಳಿಗೆ ಬರೆಯುವವರು ತಾವು ಅಗಾಧವಾದ ಕೃಷಿಮಾಡಿ ತಮ್ಮ ಕೃಷಿಯ ಫಲವನ್ನು ಮಕ್ಕಳ ಮಟ್ಟಕ್ಕೆ ತಂದುಕೊಡಬೇಕು.

(ಕನ್ನಡನುಡಿ ೧೯೫೭)

ನನ್ನ ಕೃತಿಗಳ ಗುರಿ 7

ನನ್ನ ಕೃತಿಗಳಲ್ಲಿ ಸಮಸ್ಯೆಗಳು ಉಂಟು; ಅವು ಜಟಿಲವೂ ಹೌದು. ದೇವರನಾಮ, ಜಾವಳಿ, ಪಲ್ಲವಿ, ಮೂರೂ ಬೇರೆ ಬೇರೆಯಾಗಿರಲಿ ಎನ್ನುವವರದೇ ಕಚೇರಿ. ಆದರೆ ತಾನಾಗಿ ಬಂದ ಸಂಗೀತದಲ್ಲಿ ದೇವರನಾಮದ ಭಕ್ತಿ, ಜಾವಡಿಯ ಶೃಂಗಾರ, ಪಲ್ಲವಿಯ ಜ್ಞಾನ ಮೂರೂ ಇದ್ದರೆ ತಪ್ಪಿಲ್ಲವಲ್ಲ? ಜೀವನದಲ್ಲಿ ಮೂರು ಬೆರೆದಿವೆ. ಹಾಗೇ ನನ್ನ ಕೃತಿಗಳಲ್ಲಿ ಮೂರೂ ಬೆರೆದಿವೆ. ಒಬ್ಬೊಬ್ಬರಿಗೆ ಒಂದೊಂದು ಕಾಣುತ್ತವೆ. ''ಧರ್ಮಾರ್ಥ ಕಾಮಗಳು ಮೂರೂ ಜೀವನದಲ್ಲಿ ಇರಬೇಕು'' ಎಂದು ಕಾಳಿದಾಸನ ಸಿದ್ಧಾಂತ, ಆರ್ಯ ಸಿದ್ಧಾಂತ, ನನ್ನ ಗುರಿ

ಮಲ್ಲಿ ಕಾದಂಬರಿ
ಮೊದಲ ಮಾತಿನಿಂದ

ಕಾಳಿದಾಸನ ನಾಟಕಗಳಲ್ಲಿ ಅಗ್ರಸ್ಥಾನ ಯಾವ ನಾಟಕಕ್ಕೆ? 8

ಕಾಳಿದಾಸನ ನಾಟಕಗಳಲ್ಲಿ ಅಗ್ರಸ್ಥಾನವು ಶಾಕುಂತಲಕ್ಕೆಂದು ಅಂಗೀಕೃತವಾಗಿದೆ. ಆದರೆ ಕೂಲಂಕಷವಾಗಿ ವಿಚಾರಿಸಿ ನೋಡಿದರೆ ಅಗ್ರಸ್ಥಾನವನ್ನು ವಿಕ್ರಮೋರ್ವಶೀಯಕ್ಕೆ ಕೊಡಬೇಕು ಎನ್ನಿಸುತ್ತದೆ. ವಸ್ತು ವಿನ್ಯಾಸ, ಪಾತ್ರ ರಚನ, ಭಾವ ಪ್ರದರ್ಶನ, ಅಭಿನಯ ಸೌಲಭ್ಯ, ಈ ದೃಷ್ಟಿಗಳಿಂದ ವಿಚಾರ ಮಾಡಿದರೆ ಈ ಅಭಿಪ್ರಾಯವಾದರೋ ಮಾನ್ಯವಾಗುವುದೆಂದೇ ನನ್ನ ನಂಬಿಕೆ.

ವಿಕ್ರಮೋರ್ವಶೀಯದ ಮುನ್ನುಡಿ

ವಿಕ್ರಮೋರ್ವಶೀಯ ನಾಟಕದ ಪ್ರಭಾವ ನನ್ನ ಮೇಲೆ 9

ನಿಶ್ಶಬ್ದವಾದ ಅರ್ಧರಾತ್ರಿಯ ಸಮಯದಲ್ಲಿ ಏಕಾಂಗಿಯಾಗಿ ಕುಳಿತು, ವಿಕ್ರಮೋರ್ವಶೀಯವನ್ನು, ಓದಿ ಓದಿ ಕಣ್ಣೀರಿಟ್ಟು ಆನಂದ ಸಾಗರದಲ್ಲಿ ಓಲಾಡಿದ ನನ್ನ ಸೌಭಾಗ್ಯವನ್ನು ನನ್ನ ಭಾಷಾ ಬಂಧುಗಳಿಗೂ ಕೊಡಬೇಕೆಂಬ ಆಸೆಯಿಂದ ಬರೆದ ಕಾವ್ಯವಿದು. ನಮ್ಮಲ್ಲಿ ಪಗಡೆಯ ಹೂವನ್ನು ಒಣಗಿಸಿ ಸರಮಾಡಿಟ್ಟು ಕೊಂಡಿದ್ದು ಆಗಾಗ ಬಿಸಿನೀರು ಚಿಮುಕಿಸಿ ಅದರ ವಾಸನೆಯನ್ನು ಅನುಭವಿಸುವ ವಾಡಿಕೆಯುಂಟು. ಆದರಂತೆಯೇ ರಸಿಕರಾದವರು ಅಭಿಮಾನದ ನಸು ಬಿಸಿಯ ನೀರನ್ನು ತಳಿದು ಕಾವ್ಯರಸದ ತನಿಗಂಪನ್ನು ಸೌಹಾರ್ದದಿಂದ ಅನುಭವಿಸಲು ಒಮ್ಮೆಯಾದರೂ ಈ ಗ್ರಂಥವು ಒದಗಲಿ ಎಂದು ಹಾರೈಸುವೆನು.

ವಿಕ್ರಮೋರ್ವಶೀಯದ ಮುನ್ನುಡಿ

ಈಗಿನ ಸಾಹಿತ್ಯ ಸ್ವರೂಪ

ಈಗ ಸಾಹಿತ್ಯವು ಮನುಷ್ಯ ಸಾಮಾನ್ಯವನ್ನು ಚಿತ್ರಿಸುವ ಕಾರ್ಯದಲ್ಲಿದೆ. ತುಂಬೆಯ ಗಿಡದಲ್ಲಿ ತೆಂಗಿನಕಾಯಿ ಸಿಕ್ಕುವುದಿಲ್ಲವೆಂದು ತೆಂಗಿನ ತೋಟ ನೆಡುವ ಕಾರ್ಯ ಇಲ್ಲಿ (ಮಹಾಬ್ರಾಹ್ಮಣ ಕಾದಂಬರಿಯಲ್ಲಿ) ನಡೆದಿರುವುದು.

ಕೆಲವರಿಗೆ ಹಿಮಾಲಯ ಹತ್ತುವ ಹಂಬಲ. ಅನೇಕಾನೇಕರು ಬೆಂಗಳೂರಿನಲ್ಲಿಯೇ ಇದ್ದರೂ ಬ್ಯೂಗಲ್‌ರಾಕ್ ಹತ್ತಿರುವುದಿಲ್ಲ. ಯಾರು ಸರಿ? ಅಲ್ಲದೆ ಸಾಣೆಗೆ ಒಡ್ಡುವುದು ರತ್ನವನ್ನಲ್ಲದೆ ಕಲ್ಲನ್ನಲ್ಲ. ಹಾಗೆ ಮಹಾ ವಿಷಯಗಳನ್ನು ವಿಮರ್ಶಿಸಬೇಕೆಂದು ಆಶೆ ಇದ್ದವರು ಮಹಾಪುರುಷರನ್ನು ಚಿತ್ರಿಸಲು ಹೊರಡದೆ ಬೇರೆ ದಾರಿಯಿದೇನು? ಗುಡಸಿಲಿನ ಚಿತ್ರ ಬರೆಯುವಾಗ ಭಾರಿಯ ಬ್ಯಾಂಕ್ ವಿಷಯ ಬರುವುದಾದರೂ ಹೇಗೆ?

'ಮಹಾಬ್ರಾಹ್ಮಣ'ದ ಮುನ್ನುಡಿಯಿಂದ

ಕ್ರಿಸ್ತನ ಸಾಹಿತ್ಯ ಯಾರಿಂದ ಕನ್ನಡಕ್ಕೆ ಬರಬೇಕು?

ಇದುವರೆಗೂ ನಮಗೆ ಕ್ರಿಸ್ತನ ಪರಿಚಯವಾಗಿರುವುದು ಪಾದ್ರಿಗಳಿಂದ. ಅದಕ್ಕೆ ಬದಲಾಗಿ, ಒಳಗಿನ ಪ್ರೇರಣೆಯ ದಿವ್ಯವಾಣಿಯಾಗಿ, ಅಮೋಘ ಕಾವ್ಯ ಕಲ್ಪನಾ ಚಾತುರ್ಯದಿಂದ ಲೋಕಸೇವೆಗೆಂದೋ ಲೋಕಬೋಧೆಗೆಂದೋ ಪ್ರಕಟವಾಗುವ ಮಹಾಕವಿಯ ಆವೇಶದ ಮೂಲವಾದ ಕ್ರಿಸ್ತನ ಪರಿಚಯವಾದರೆ, ಹಿಂದೂಗಳು, ''ಕ್ರಿಸ್ತನು ಹೊಸಬನಲ್ಲ, ಆತನ ಉಪದೇಶವೂ ಹೊಸತಲ್ಲ ''ಎಂದು ಮನಗಂಡಾರು; ಆಗ ಅರಗಿದ ಆಹಾರವು ರಕ್ತವಾಗಿ ಪೋಷಕವಾಗುವಂತೆ, ಕ್ರಿಸ್ತನ ಉದ್ದೇಶವೂ ದಾಸರ ಪದವನ್ನೋ, ಗೀತೆಯ ವಾಕ್ಯವನ್ನೋ, ಉಪನಿಷತ್ತಿನ ಪಂಕ್ತಿಯನ್ನೋ ನೆನಪಿಗೆ ತಂದು, ತಾನೂ ರೂಢಮೂಲವಾಗುವುದು. ವಿಶ್ವಬಾಂಧವ್ಯದ ಬೇರು ಬಲಿಯುವುದು.

'ವಿಚಾರಕ' ಪೀಠಿಕೆ

ಸಂಸ್ಕೃತಿ ಪರಿಚಯಕ್ಕೆ ಆರು ಗ್ರಂಥಗಳು ಸಾಕು

ಭಾರತ ಸಂಸ್ಕೃತಿಯ ಪರಿಚಯವನ್ನು ಬಯಸುವವರು ರಾಮಾಯಣ, ಮಹಾಭಾರತ, ಭಾಗವತ, ಕಾಳಿದಾಸ, ಪಂಚತಂತ್ರ, ಕಥಾಸರಿತ್ಸಾಗರಗಳನ್ನು ಓದಬೇಕು. ಅದರೊಳಗೂ ಹೈಸ್ಕೂಲಿಗೆ ಬರುವುದರೊಳಗಾಗಿ ಇದನ್ನು ಓದಿದ್ದರೆ ಬಹಳ ಸರಿ. ಹಾಗಾಗಲೆಂದು ಈ ಆರು ಗ್ರಂಥಗಳನ್ನು ಕನ್ನಡಕ್ಕೆ ತರಲಾಗಿದೆ. ಈ ಆರೂ ಪ್ರತಿಯೊಬ್ಬ ಬಾಲಕ ಬಾಲಕಿಯು ಓದಲೆಂಬ ನಮ್ಮ ಆಸೆಯು ಸಫಲವಾಗಿ ಇವು ನಮ್ಮ ಆಸ್ತಿಯೆಂಬ ಸದ್ಭಾವನೆ ಎಲ್ಲೆಲ್ಲೂ ಮೂಡಲಿ.

'ಪಂಚತಂತ್ರ'ದ ಮುನ್ನುಡಿ

ಮಹಾಕೃತಿರಚಕರ ಅನುಭವ

ಮಹಾಕೃತಿಗಳನ್ನು ಸಾಧಿಸಿದವರಿಗೆಲ್ಲ ಒಂದು ವಿಷಯ ಅನುಭವಕ್ಕೆ ಬರುತ್ತದೆ. ತಾನು ಏನು ಎಂದು ಹಗಲಿರಳೂ ಒದ್ದಾಡುತ್ತಿರುವ ಈ ಜೀವ ತನ್ನ ಸಣ್ಣತನವನ್ನು ಬಿಟ್ಟು ಚಿಮ್ಮಿದ ಕವಡೆಯಂತೆ ಮೇಲಕ್ಕೆ ಹಾರಿ ಅದುವರೆಗೆ ತನಗೆ ತಿಳಿಯದ ವಿಷಯವನ್ನು ಸಂಪಾದಿಸಿಕೊಂಡು ಬಂದು ಹೃದಯಕ್ಕೆ ತುಂಬುತ್ತದೆ. ಆ 'ತುಂಬು' ಕೃತಿರೂಪವಾಗಿ ಹೊರಗೆ ಬರುತ್ತದೆ.

'ಮಹಾಬ್ರಾಹ್ಮಣ'ದ
ಮುನ್ನುಡಿಯಿಂದ

ವ್ಯಾಖ್ಯಾನಗಳನ್ನು ಬರೆಯಬೇಕು

ಕಾಲೇಜಿನಲ್ಲಿದ್ದಾಗ ಮೌಲ್ಟನ್, ಬ್ರಾಡ್ಲಿಗಳನ್ನು ಓದಿದಾಗಿನಿಂದ ಒಂದು ಭಾರಿಯ ಹುಚ್ಚು, ಕಾಳಿದಾಸನ ವಿಕ್ರಮೋರ್ವಶೀಯ, ಮೇಘಸಂದೇಶಗಳಿಗೆ ಹಾಗೆ ವ್ಯಾಖ್ಯಾನ ಬರೆಯಬೇಕು ಎಂದು. ಮೇಘಸಂದೇಶ ಪೂರ್ವಭಾಗಕ್ಕೆ ಏನೋ ಬರೆದು ಹಾಕಿದ್ದೇನೆ. ವಿಕ್ರಮೋರ್ವಶೀಯಕ್ಕೂ ಬರೆಯಬೇಕು.

ದೇವುಡು ಆತ್ಮ ಕಥೆ

ಇದು ದೇಶಭಾಷೆಗಳ ಯುಗ

ಇದು ದೇಶಭಾಷೆಗಳ ಯುಗ, ಕಾಲಾನುಗುಣವಾಗಿ ಸಂಸ್ಕೃತವು ಹಿಂದುಳಿಯುತ್ತಾ ಬಂದಿರುವುದರಿಂದ ಸಂಸ್ಕೃತಗ್ರಂಥಗಳೆಲ್ಲ ಕನ್ನಡಕ್ಕೆ ಬರಬೇಕು. ಅಧಿಕೃತನಾದ ಪ್ರತಿಯೊಬ್ಬ ಸನಾತನಿಯೂ ತನ್ನ ಋಣವನ್ನು ಕಳೆದುಕೊಳ್ಳುವುದಕ್ಕಾದರೂ ಶಾಸ್ತ್ರಾರ್ಥಗಳನ್ನು ಓದಬೇಕು; ಓದಿಸಬೇಕು. ಈ ಅಧ್ಯಯನ, ಅಧ್ಯಾಪನಗಳು ಸಂಸ್ಕೃತದಲ್ಲಿ ನಡೆಯುತ್ತಿದ್ದವು. ಈಗ ಕನ್ನಡದಲ್ಲಾದರೂ ನಡೆಯಬೇಕು.

ಮೀಮಾಂಸಾ ದರ್ಪಣ ಪೀಠಿಕೆ

ಕನ್ನಡಕ್ಕೆ ವಿಶ್ವಕೋಶ ಬೇಕು

ಕನ್ನಡದಲ್ಲಿ ಒಂದು ವಿಶ್ವಕೋಶ ಆಗಬೇಕು. ಅದು ಇನ್ನೂ ಐದುವರುಷ ಬಿಟ್ಟು ಸುಮಾರು ೧೯೫೦ ರಲ್ಲಿ ಆರಂಭಿಸುವ ಕೆಲಸ. ಅದಕ್ಕೆ ಬರೆಯುವವರು ಬೇಕು. ಪ್ರಕಾಶಕರು ಬೇಕು, ಕೊಳ್ಳುವವರು ಬೇಕು. ಎಲ್ಲಕ್ಕಿಂತ ಮುಂಚೆ ಜನದಲ್ಲಿ ಬ್ರಾಹ್ಮಣ -ಅಬ್ರಾಹ್ಮಣ ಭೇದ ಸಾಯಬೇಕು. ಅದು ಸಾಯುವವರೆಗೆ ವಿಶ್ವಕೋಶ ಬರುವುದಿಲ್ಲ.

ದೇವುಡು ಆತ್ಮ ಕಥೆ

ಸತ್ಕಾವ್ಯ ನಿಕ್ಷೇಪಣವು ಹಬ್ಬದೂಟದಂತೆ

ನಿತ್ಯಕ್ಕಿಂತ ಹೆಚ್ಚಿಗೆ ಮಾತ್ರವಲ್ಲ; ಅದರಲ್ಲಿ ಏನೋ ಹೆಚ್ಚುಗಾರಿಕೆಯಿದೆ ಅದು ಆ ದಿನ ನಡೆದ ಪೂಜಾ ಫಲವೋ ಏನೋ? ಅಂತೂ ಹಬ್ಬದಲ್ಲಿ ಏನೋ ತುಂಬು, ಏನೋ ಪೆಂಪು, ಏನೋ

ಹೆಚ್ಚುಗಾರಿಕೆಯಿದೆ.

ನಾವಾಡುವ ಮಾತು ನಿತ್ಯದೂಟವಾದರೆ ಕಾವ್ಯವು ಹೆಚ್ಚುಗಾರಿಕೆಯ ಹಬ್ಬದೂಟ.

ಮಹಾಕ್ಷತ್ರಿಯ
ಪರಿಶಿಷ್ಟ.

ಭಾಷೆಗೆ ವ್ಯಕ್ತಿತ್ವವಿದೆ

ಭಾಷೆಗೆ ಒಂದು ವ್ಯಕ್ತಿತ್ವವಿದೆ. ಆ ವ್ಯಕ್ತಿತವು ಪೂರ್ಣವಾಗಲು ಒಂದು ಕ್ಷೇತ್ರ ಒಂದು ಸಂಸ್ಕಾರ ಎರಡು ಬೇಕು. ಆ ಎರಡೂ ಇದ್ದರೆ ಅದರ ಸೊಗಸು. ಹಳ್ಳಿಯವಳಿಗೆ ತನ್ನದೇ ಭಾಷೆಯಾಡುವ ಸಮಾಜದ ಬಲವಿದ್ದು, ಒಂದು ಕ್ಷೇತ್ರವು ಏರ್ಪಟ್ಟಿದೆ. ಆದರೆ ಅವಳ ವಾಣಿಗೆ ಸಂಸ್ಕಾರವಿಲ್ಲ. ಆದರಿಂದ ಸಂಸ್ಕಾರ ರಹಿತವಾದುದರಿಂದ ಅದು ವಿದ್ವನ್ಮಾನ್ಯವಾಗುವುದಿಲ್ಲ.

ಸಾಮಾನ್ಯವಾಗಿ ಓದಿದವರಿಗೆ ಸಂಸ್ಕಾರ ಬರುತ್ತದೆ. ಆದರೆ ಓದಿದವರಿಗೆಲ್ಲ ಬರುತ್ತದೆಯೆನ್ನುವುದಕ್ಕೂ ಬರುವುದಿಲ್ಲ. ಭಾಷಾ ಸಂಸ್ಕಾರವಾಗಬೇಕಾದರೆ ಮನಃಪೂರ್ವಕವಾದ ಪ್ರಯತ್ನ ಬೇಕು. ಈಗ ನಾವು ಇಂಗ್ಲಿಷ್ ಓದಿದ್ದೇವೆ. ಬಹುಕಾಲ ಶ್ರಮಪಟ್ಟು ಅದರಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ್ದೇವೆ. ನಮ್ಮ ಸಂಸ್ಕಾರ ಆಕ್ಸಫರ್ಡ್, ಕೆಂಬ್ರಿಡ್ಜ್‌ನವರಿಗಿಂತ ಏನೂ ಕಡಿಮೆಯಿಲ್ಲ. ಆದರೂ ನಮಗೆ ಇಂಗ್ಲಿಷ್ ಬರುತ್ತದೆ ಎಂಬ ನಂಬಿಕೆ ಇದೆಯೇನು? ಏಕೆಂದರೆ ನಮಗೆ ಕ್ಷೇತ್ರವಿಲ್ಲ. ಆದ್ದರಿಂದ ಭಾಷೆಗೆ ಸಂಸ್ಕಾರವೂ ಬೇಕು, ಕ್ಷೇತ್ರವೂ ಬೇಕು. ಎರಡೂ ಇದ್ದರೆ ಭಾಷೆಯ ಸೊಬಗು. ಆ ಸೊಬಗು ಬಲ್ಲವ ಭಾಷೆಯನ್ನು ಮನಸ್ವಿಯಾಗಿ ಬಳಸಬಲ್ಲವ. ಅವನಭಾಷೆ ಸಂಸ್ಕಾರವತಿಯೂ ಹೌದು; ಕ್ಷೇತ್ರವತಿಯೂ ಹೌದು.

'ಮಹಾಕ್ಷತ್ರಿಯ ಪರಿಶಿಷ್ಟ (ಕಾಳಿದಾಸನದೃಷ್ಟಿಯಲ್ಲಿ)

ಸಂಗೀತ-ಕಾವ್ಯ

ಸಂಗೀತದಲ್ಲಿ ಮಾತು ಕಡಿಮೆಯಾದರೂ ಅರ್ಥವೇ ತೋರದಿದ್ದರೂ ಭಾವವೊಂದೇ ಇದ್ದರೆ ಸಾಕು ಮನಸ್ಸಿಗೆ ಹಿಡಿಯುವುದು.

ಈ ಸಂಗೀತದ ಸ್ವರೂಪವು ಮಾತಿನಲ್ಲಿಯೂ ಬರುವಂತೆ ಮಾಡುವುದು ಕಾವ್ಯ. ಆ ಕಾವ್ಯವು ಮಹಾಕಾವ್ಯವೆನ್ನಿಸಿಕೊಂಡು ಅಷ್ಟಾದಶ ಲಕ್ಷಣಗಳಿಂದ ಕೂಡಿದ್ದರೂ ಕೂಡಿರಬಹುದು ಅಥವಾ ನಮ್ಮಲ್ಲಿ ಬಳಕೆಯಲ್ಲಿರುವ ಹಾಡುಗಳಂತೆ ''ಮಡದಿಬಾರಳು. ಮಂಚಬಾರದು ಕಂಚುಕನ್ನಡಿ ಬಾರದು'' ಎಂಬ ಅನುಭವದ ಎರಡು ಮಾತು ಆಗಿರಬಹುದು. ಅಥವಾ 'ವಿಷ್ಣು ಸಹಸ್ರನಾಮ'ದ ಹಾಗೆ ಹೆಸರುಗಳ ಪಟ್ಟಿಯೂ ಇರಬಹುದು. ಆದರೆ ಆ ಹೆಸರುಗಳ ಪಟ್ಟಿಯ ಭಾವವನ್ನು ಉದ್ಬೋಧಗೊಳಿಸುವುದಾದರೆ ಅದೂ ಕಾವ್ಯವೇ.

ಮಕ್ಕಳ ಹಾಡುಗಳು
ನಮ್ಮ ಪುಸ್ತಕ ಆಗಸ್ಟ್, ೧೯೪೯

ಇಂದಿನ ಪ್ರಕಾಶಕರು

ಈಗ 'ಪಂಡಿತರ ಪಾಂಡಿತ್ಯವನ್ನು ಪಾಮರರಿಗೆ ತಂದು ಹಂಚುವ 'ಪ್ರಕಟಣಕಾರರು ಹುಟ್ಟಿದ್ದಾರೆ. ಆದರೆ ಅವರು ಒದಗಿಸುವುದು ಜ್ಞಾನಭಂಡಾರವನ್ನೋ ಅಥವಾ ಮಾಡುವುದಕ್ಕೆ ಬೇರೆ ಕೆಲಸವಿಲ್ಲದರ ಮನಸ್ಸಿನ ತೀಟೆಯನ್ನು ತೀರಿಸುವ ಸಾಧನವನ್ನೋ? ಎಂಬ ಪ್ರಶ್ನೆ ಬಂದರೆ ಕಷ್ಟ ! ಈ ವಿಷಯವನ್ನು ಯೋಚಿಸುತ್ತಾ ಹೋದರೆ ಪ್ರಕಾಶಕರು ಬಹುಶಃ ಬ್ರಿಟಿಷರು ಭಾರತಕ್ಕೆ ಮಾಡುತ್ತಿರುವಂತೆ ನಮಗೂ ಉಪಕಾರವನ್ನೇ ಮಾಡುತ್ತಿರಬಹುದು ಎನ್ನಿಸುತ್ತದೆ. ಅಷ್ಟೇನು? ಲಾಭ ಬರುವ ಪುಸ್ತಕವನ್ನು ಪ್ರಕಾಶಕರು ಪ್ರಕಾಶಿಸುತ್ತಾರೆ. ವ್ಯಾಪಾರಗಾರರು ಮಾರುತ್ತಾರೆ. ಅದೊಂದು ವ್ಯಾಪಾರ ಅಕ್ಕಿಬೇಳೆಯ ಬದಲು, ವ್ಯಾಪಾರ ಸಾಮಗ್ರಿ ಇಲ್ಲಿ ಪುಸ್ತಕ.

ನಮ್ಮ ಪುಸ್ತಕಗಳು

ಪ್ರಕಾಶಕರು ಲೋಕೋಪಕಾರಿಗಳಾವುದು ಶಕ್ಯವೇ?

ಪ್ರಕಾಶಕರೂ ಲೋಕೋಪಕಾರಿಗಳಾಗಬಹುದು. ಆದರೆ ಅದು ಸಾಧ್ಯವೇ? ನಾಳೆಯದಿನ ಒಂದು ಹೋಟಲಿನಲ್ಲಿ ಬಂದ ಬಂದವರಿಗೆಲ್ಲ ಕೈನೋಡಿ ಅವರಿಗೆ ಪಥ್ಯವಾದ ತಿಂಡಿಗಳನ್ನು ಮಾತ್ರ ಕೊಡುವುದು ಎಂದು ಒಂದು ಏರ್ಪಾಡಾಯಿತು ಎಂದುಕೊಳ್ಳಿ. ಅಲ್ಲಿ ವ್ಯಾಪಾರವಾಗುವುದೇನು? ಬಂದವರಿಗೆ ಅವರಿಗೆ ಬೇಕಾದುದನ್ನು ಮಾರುವ ಹೋಟಲು, ವೈದ್ಯಶಾಲೆಯಾದರೆ ಹೇಗೆ? ಇಂದಿನ ಜಗತ್ತಿಗೆ ಅವಶ್ಯವಾಗಿ ಬೇಕಾಗುವ ಪುಸ್ತಕಗಳನ್ನೇ ಪ್ರಕಟಿಸಿ ಮಾರಲು ಹೊರಟ ವ್ಯಾಪಾರಿಯ ಗತಿಯೂ ಹಾಗೆಯೇ ಆಗುತ್ತದೆ. ಹೋಟೇಲಿನವನು ವೈದ್ಯನಲ್ಲ ; ಪ್ರಕಾಶಕನು ಗುರುವಲ್ಲ; ಇಬ್ಬರೂ ವ್ಯಾಪಾರಿಗಳು

ನಮ್ಮ ಪುಸ್ತಕ- 'ಸದ್ಯ' ಲೇಖನಗಳು

ನಮಗೆ ಬೇಕಾಗಿರುವ ಪಾಂಡಿತ್ಯ

ಆಧುನಿಕ ವಿದ್ವಾಂಸರು ಏನಿದ್ದರೂ ವಿಶಾಲತೆಯುಳ್ಳವರು ಆಳವಾಗಿ ಹೋಗುವವರಲ್ಲ ಎನ್ನುವುದೊಂದು ಆಕ್ಷೇಪಣೆ. ನಾವು ಅಪೇಕ್ಷಿಸುತ್ತಿರುವುದು, ಲೋಕವು ಬೇಕೆನ್ನುತ್ತಿರುವುದು, ಒಂದು ಮಳೆಗೆ ತುಂಬಿ ಎರಡುಬಿಸಿಲಿಗೆ ಒಣಗುವ ಕೋಲಾರದ ಕೆರೆಗಳೇನೂ ಅಲ್ಲ; ಅಥವಾ ನೂರಾರು ಅಡಿಗಳ ಆಳವಾಗಿದ್ದು ಸೇದುವವರ ರಟ್ಟೆಗಳನು ಮರಿಯದ ಧಾರವಾಡದ ಭಾವಿಗಳನ್ನು ಅಲ್ಲ, ನಾವು ಕೋರುವುದು ಗಂಭೀರವಾಗಿ ಪ್ರಸನ್ನವಾಗಿ, ವಿಶಾಲವಾಗಿ ಮಹಾದೇವಿಯ ವರದಂತೆ ಸೌಭಾಗ್ಯ ಸಂಪನ್ನವಾಗಿರುವ ಕೃಷ್ಣರಾಜಸಾಗರವನ್ನು. ಕವಿಶೇಖರನು ಹೇಳುವಂತೆ ನಮ್ಮ ವಿದ್ಯಾಲಕ್ಷ್ಮೀಯ ವೈಶಾಲ್ಯ ಗಾಂಭೀರ್ಯ ಎರಡನ್ನೂ ಪಡೆದು ವಿರಾಜಿಸಲಿ

ದೇವುಡು ಅವರ ಲಿಖಿತ ಭಾಷಣದ ಪ್ರತಿಯಿಂದ

ಏಕತಾನದ ಭಾವಗಳು ಶಕ್ಯವಲ್ಲ

ಈಗಿನ ಕಥಾಪ್ರಪಂಚದಲ್ಲಿ ಪ್ರತಿಯೊಬ್ಬರೂ ರಸಾರ್ದ್ರಚಿತ್ತರೇ ಆಗಿರುವಂತೆ ಚಿತ್ರಿಸುವುದು ಪದ್ಧತಿಯಾಗಿದೆ. ಆದರೆ ನಾನು ಈ ಪದ್ಧತಿಯನ್ನು ಒಪ್ಪುವುದಿಲ್ಲ. ಪ್ರತಿಯೊಬ್ಬನ ಹೃದಯದಲ್ಲೂ

ಏಕಜಾತಿಯ ಭಾವಗಳು ಮಿಡಿಯುವುವೆಂದು ಒಪ್ಪಿದರೂ ಭಾವಗಳು ಏಕತಾನವೆಂದು ನಾನೊಪ್ಪಲಾರೆ. ಭಾವಗಳ ಶಬಲತೆಗೂ, ದಾರಿದ್ರ್ಯಕ್ಕೂ ಸಂಸ್ಕೃತಿ, ಜೀವನಕ್ರಮ, ಜೀವನೋದ್ದೇಶಗಳು ಕಾರಣ. ಸುಂದರಿಯಾದ ಭಾಮಿನಿಯನ್ನು ಕಂಡಾಗ ಸ್ತ್ರೀಯೆಂಬ ಭಾವಬೀಜ ಎಲ್ಲರಲ್ಲೂ ಮೊಳೆತರೂ ಎಲ್ಲರಲ್ಲೂ ಒಂದೇ ವಿಧವಾಗಿ ಪಲ್ಲವಿಸಿ ಬೆಳೆಯಲಾರದು ಎಂದು ನನ್ನ ನಂಬಿಕೆ. ಅನುಭವವು ಈ ನಂಬಿಕೆಗೆ ಬೆಂಬಲವಾಗಿದೆಯಾಗಿ ನಾನೀ ಮಾತನ್ನು ಧೈರ್ಯವಾಗಿ ಹೇಳುತ್ತಿದ್ದೇನೆ.

'ಅಂತರಂಗ ಪ್ರಸ್ತಾವನೆ

ಯಾರಿಗಾಗಿ ಮಹಾಭಾರತ? 24

ಅಲ್ಪವೀರ್ಯರಾಗಿ ಹೊಟ್ಟೆಬಟ್ಟೆಗಳನ್ನೂ ಸರಿಯಾಗಿ ಕಾಣದವರಿಗೆ ಮಹಾ ಪುರುಷರ ವಿಚಾರವೇಕೆ? ಎನ್ನುವುದು ಇನ್ನೊಂದು ಕಡೆಯಿಂದ ಕೇಳುತ್ತಿರುವ ಕೂಗು. ಹೊಟ್ಟೆಬಟ್ಟೆಗಳ ಪೂರಣವಷ್ಟೇ ಜೀವನವೆಂದು ಒಪ್ಪಿಕೊಂಡು ಮನುಷ್ಯನನ್ನು ಮೃಗದವರ್ಗಕ್ಕೆ ಇಳಿಸುವವರೊಡನೆ ನಮ್ಮ ಹೋರಾಟವಿಲ್ಲ. ಮನುಷ್ಯನು ಮೃಗಧರ್ಮಿಯಾಗಿ ಹುಟ್ಟಿದರೂ ಅತಿಮೃಗವಾದುದು ಇನ್ನು ಯಾವುದೋ ಉಂಟು ಅವನಲ್ಲಿ ಎಂಬುವರೊಡನೆ ನಮ್ಮ ವಾದ. ಇತರರಿಗೂ ನಮಗೂ ಪ್ರಸ್ಥಾನಭೇದವಾದುದರಿಂದ ನಮನಮಗೆ ವಿಮತ. ನಮ್ಮಂತೆಯೇ ''ಮನುಷ್ಯನಿಗೆ ಪ್ರಗತಿಯಿರುವುದು ಇಂದ್ರಿಯಭೋಗವನ್ನು ಧಿಕ್ಕರಿಸಿ ಮುಂದೆ ಹೋದಾಗ ಎಂಬುವವರ ವರ್ಗವೂ ಇನ್ನೂ ಅಸಂಖ್ಯವಾಗಿದೆ.

ಭಾರತದ ಮಹಾಪುರುಷರು
ಪೀಠಿಕೆ

ಭಾಗ -೨ ವ್ಯಕ್ತಿತ್ವ

ಸಾಹಿತ್ಯ ರಂಗವನ್ನು ಕುರಿತು ಪ್ರವೇಶಿಸಿದ ಬಗೆ 75 ಟಿ

೧. ಶಾಸ್ತ್ರಗಳನ್ನು ಬೋಧಿಸಬೇಕೆಂಬ ಪದ ಪ್ರಚೋದನೆ

೨. ವಿದ್ವದ್ವಂಶದಲ್ಲಿ ಹುಟ್ಟಿದುದರಿಂದ ವಿದ್ವಾಂಸನಾಗಬೇಕು. ಕಾವ್ಯಕರ್ತನಾಗಬೇಕು ಎಂಬ ಹಂಬಲ

೩. ಇತರರು ವಿದ್ಯಾವಂತರಾಗದಿದ್ದರೆ ರಾಜಕೀಯಾದಿ ದಾಸ್ಯಗಳು ಅಳಿಯುವುದಿಲ್ಲವೆಂಬ ಅರಿವು

೪. ಅಧ್ಯಯನ-ಅಧ್ಯಾಪನಗಳಿಂದ ಶಾಸ್ತ್ರಗಳನ್ನು ಗೌರವಿಸಿದಲ್ಲದೆ ಋಷಿ ಋಣವು ತೀರುವುದಿಲ್ಲವೆಂಬ ನಂಬಿಕೆ.

೫. ತಾನು ತಿಳಿದುದನ್ನು ಇತರರಿಗೆ ಹೇಳುವುದರಲ್ಲಿ ಇರುವ ಆತ್ಮಸೋತೋಷ ಕಾರಣಗಳಿಂದ ನಾನು ಸಾಹಿತ್ಯ ರಂಗವನ್ನು ಪ್ರವೇಶಿಸಿದೆ.

ದೇವುಡು ಟಿಪ್ಪಣಿ ಪುಸ್ತಕದಿಂದ

ಅತಿಥಿದೇವೋಭವ

ರೆವರೆಂಡ್ ಉತ್ತಂಗಿಯವರನ್ನು ಒಂದು ದಿನ ಊಟಕ್ಕೆ ಕರೆದಿದ್ದೆ. ಅವರನ್ನು ಸ್ವಾಗತಿಸುವುದು ಹೇಗೆ ಎಂದು ಗೊತ್ತಾಗದೆ ಶ್ರೀ ಗುರುಗಳನ್ನು ಕೇಳಿದೆ. ಅವರು ಕ್ರಿಸ್ತನು ಬಂದಿದ್ದರೆ ಹೇಗೆ ಗೌರವಿಸಿ ಸ್ವಾಗತಿಸುತ್ತಿದ್ದೆಯೋ ಹಾಗೆಯೇ ಮಾಡು ಎಂದರು. ನಾನು ಸಂಧ್ಯಾನಂದನಾದಿಗಳನ್ನು ಮಾಡಿ ಸಿದ್ಧನಾಗಿದ್ದೆ. ಶ್ರೀ ಉತ್ತಂಗಿಯವರು ಬರಲು ಅವರಿಗೆ ಕಾಲು ತೊಳೆಯಲು ಹೋದೆ. ಅವರು ಮೊದಲು ಹಿಂತೆಗೆದರು. ಅನಂತರ ಬಲವಂತವಾಗಿ ಕಾಲು ತೊಳೆದು ಊಟ ಮಾಡಿಸಲಾಯಿತು. ಅವರು ಪೂರ್ವಾಭಿಮುಖವಾಗಿ ನಾನು ಉತ್ತರಾಭಿಮುಖವಾಗಿ ಕುಳಿತಿದ್ದೆವು. ಊಟದ ನಂತರ ಮಾತನಾಡುವಾಗ ಅವರು ಹೇಳಿದರು ''ನಾವು ಎವಾಂಜಲಿಕ್ ಮಿಷನ್ ಮೇಲೆ ಹೋದಾಗ ಒಂದು ಹಳ್ಳಿಯಲ್ಲಿ ಮಂಡಿಯೆಲ್ಲ ಹುಣ್ಣಾಗಿದ್ದವನನ್ನು ಕಂಡೆವು. ಅವನನ್ನು ಕ್ಯಾಂಪಿಗೆ ಬಾ ಔಷಧವನ್ನು ಹಾಕುತ್ತೇವೆ ಎಂದರೆ ಆತನು ''ಬಿಡಿ, ಸ್ವಾಮಿ.... ಪ್ರಸಾದ ತಂದು ಹಚ್ಚಿದರೆ ಹೋಗುತ್ತದೆ'' ಎಂದನು. ಮತ್ತೆ ಆರು ತಿಂಗಳು ಹೋದ ಮೇಲೆ ಅತ್ತ ಕಡೆ ಹೋದಾಗ ವಿಚಾರಿಸಲು ಅವನಿಗೆ ಪ್ರಸಾದದಿಂದ ಗುಣವಾಗಿರುವುದು ತಿಳಿಯಿತು.

ದೇವುಡು 'ಟಿಪ್ಪಣಿ ಪುಸ್ತಕದಿಂದ

ನನ್ನ ಸಾಹಿತ್ಯ ಸೇವೆ

ನನ್ನ ಸಾಹಿತ್ಯ ಸೇವೆ ನಡೆದಿರುವುದು ರಂಗಭೂಮಿ, ಶಾಲೆ, ಪತ್ರಿಕೆ, ಭಾಷಣ ಲೇಖನ, ಗ್ರಂಥ ರಚನೆಗಳಲ್ಲಿ. ಒಂದೊಂದು ಕಡೆಯೂ ಒಂದು ವೈಶಿಷ್ಟ್ಯವಿರುವ ಕೆಲಸ ನಡೆದಿದೆ. ನನಗೆ ಬಿರುದಾವಳಿಗಳು ಬಂದಿಲ್ಲ. ಆದರೂ ನನ್ನ ಕೆಲಸದಿಂದ ಕನ್ನಡ ದೇವಿಗೆ ಸೇವೆ ಸಂದಿದೆಯೆಂಬುದು ನನಗೆ ಗೊತ್ತಿದೆ, ಸಾಕು. ಆಗಲೇ ಹೇಳಿದಂತೆ ಕೀರ್ತಿ ಹಣ ಮೊದಲಾದವು ಬರುವುದು ಒಂದು ವಿಶಿಷ್ಟ ವರ್ಗಕ್ಕೆ. ನಾನು ಯಾವ ವರ್ಗಕ್ಕೂ ಸೇರದೆ ಸ್ವತಂತ್ರ ನಾಗಿರುವುದೇ ನನಗೆಷ್ಟೋ ಆನಂದ.

ದೇವುಡು ಆತ್ಮ ಕಥೆ.

ಹಳೆಯ ಅಭಿಮಾನ ಕನ್ನಡ ಕನ್ನಡ ಎನ್ನುತ್ತಿದೆ

ನನ್ನ ಜೀವನದಲ್ಲಿ ಪರೇಚ್ಛಾ ಪ್ರಾರಬ್ಧ ಬಹಳ ಹೆಚ್ಚು. ನಾನು ವಿನಾಯಕನನ್ನು ಮಾಡಬೇಕೆಂದು ಹೊರಡುತ್ತೇನೆ. ಪರೇಚ್ಛಾಪ್ರಾರಬ್ಧವು ಅದನ್ನು ಹನುಮಂತರಾಯನ್ನು ಮಾಡುತ್ತದೆ. ಒಳಗಿನಿಂದ ಏನೋ ಒಂದು ದನಿ ''ನಿನ್ನ ಕನ್ನಡ ಸೇವೆ ಸಾಕು ಇಂಗ್ಲಿಷ್‌ಗೆ ತಿರುಗು ಈ ಯುಗ ಪ್ರೊವಿನ್ಷಿಯಲ್, ನ್ಯಾಷನಲ್, ಎರಡೂ ಅಲ್ಲ ಇಂಟರ್ ನ್ಯಾಷನಲ್ ಎನ್ನುತ್ತದೆ. ಹಿಂದೆ ಬಿ. ಎ. ಓದುತ್ತಿದ್ದಾಗ ಕನ್ನಡದಲ್ಲಿ ಹೆಸರಾಂತು ಮಿಕ್ಕೆಲ್ಲ ಕೆಲಸ ''ಚಾರಿಟಿ ಬಿಗಿನ್ಸ್ ಅಟ್ ಹೋಂ'' ಎಂದು ಕೊಂಡಿದ್ದುದು ನೆನಪಾಗಿ ಕನ್ನಡದ ಸಹಾರದಲ್ಲಿ ಇದಕ್ಕಿಂತ ಇನ್ನೇನು ಖ್ಯಾತಿ! ಸಾಕು ಹೊರಡು ಎನ್ನುತ್ತಿದೆ, ಆದರೂ ಹಳೆಯ ಅಭಿಮಾನ. ಕನ್ನಡ ಕನ್ನಡ ಎನ್ನುತ್ತಿದೆ.

ದೇವುಡು ಆತ್ಮ ಕಥೆ

ಯಾವುದು ಹೆಚ್ಚು?

ಒಂದು ದಿನ ಸಾಮಾಜಿಕ ಪ್ರತಿಷ್ಠೆಯನ್ನು ಗಳಿಸುವುದೇ? ಅಥವಾ ಸದ್ಗತಿಯನ್ನು ಗಳಿಸುವುದೇ? ಎಂಬ ವಿಚಾರ ತೀವ್ರವಾಗಿ ಬಂತು. ಏಷ್ಟಾದರೂ ಬ್ರಾಹ್ಮಣ ಮನಸ್ಸು ಸದ್ಗತಿಯನ್ನು ಗಳಿಸುವುದೇ ಹೆಚ್ಚು ಎನ್ನಿಸಿತು.

(ನವಜೀವನದ ಪತ್ರಿಕೆಯನ್ನು ಬಿಡುವ ಸಂದರ್ಭದಲ್ಲಿ ದೇವುಡು ಅವರಿಗೆ ಬಂದ ವಿಚಾರಲಹರಿ)

ದೇವುಡು ಆತ್ಮ ಕಥೆ

ದತ್ತಾತ್ತ್ರೇಯನೇ ಬರಬೇಕು

೧೯೩೧ಫೆಬ್ರವರಿ ಒಂದರಂದು ಬುಧವಾರ ಈ ದಿನ ನಾನು ಐಹಿಕ ಆಮುಷ್ಮಿಕ ಸಿದ್ಧಿಗಳಲ್ಲಿ ಯಾವುದನ್ನೂ ಪಡೆಯಲಿಲ್ಲವೆಂದು ಬಹು ಚಿಂತಾಕ್ರಾಂತನಾಗಿ ಅಳುತ್ತಿರುವಾಗ ಶ್ರೀ ಶಾಸ್ತ್ರಿಗಳು ದಯಮಾಡಿಸಿ ನನ್ನನ್ನು ಸಮಾಧಾನ ಮಾಡುತ್ತಾ ''ನೀನು ಸಾಮಯಾಚಾರಿಕ ದತ್ತಾತ್ರೇಯ ಪಂಥದವನು. ನಿನಗೆ ಯಾರು ಉಪದೇಶ ಕೊಟ್ಟರೂ ಸರಿಹೋಗುವುದಿಲ್ಲ. ದತ್ತಾತ್ರೇಯರೇ ಬರಬೇಕು ಅಥವಾ ಶೃಂಗೇರಿಯವರು ಮನಸ್ಸು ಮಾಡಬೇಕು. ಅನ್ಯಥಾ ಗತಿಯೇ ಇಲ್ಲ ಎಂದರು.'' ನಮ್ಮ ಮನೆಯಲ್ಲಿ ಇದ್ದ ಏಕಮುಖ ದತ್ತಾತ್ರೇಯ ಚಿತ್ರವನ್ನು ತೋರಿಸಿದೆ ಇದು ನಿನಗೆ ಬೇಕಾದುದು ಎಂದರು.

ದೇವುಡು ಟಿಪ್ಪಣಿಗಳಿಂದ

ಸಣ್ಣಗೆ ನಗಬಲ್ಲೆಯಾದರೆ....

ಬದುಕಿದೆ ನೀನು ||ಪ||
ಬದುಕಿದೆ ನೀನು||ಅ.ಪ||
ಕಣ್ಣೀರು ಕರೆವಂಥ
ಬಣ್ಣ ಬಣ್ಣದ ದುಃಖ
ಎಣ್ಣೆಗೆ ಎಳ್ಳಂತೆ ಎದೆ ಹಿಂಡುವಾಗ
ನುಣ್ಣನೆ ಶಿಖರವನೇರಿ ನೀನಿಂತು
ಸಣ್ಣಗೆ ನಗಬಲ್ಲೆಯಾದರೆ.

ದೇವುಡು ಟಿಪ್ಪಣಿಗಳು

ಅಮನಸ್ಕಯೋಗಕ್ಕಿಂತ ಇನ್ನೇನಿದೆ?

ಎಲ್ಲಾ ಆಯಿತು ಎನ್ನೋಣ, ಕಸ್ಮೈ ದೇವಾಯ ಹವಿಷಾ ವಿಧೇಯ? ಕಸ್ಯ? ಕುತಃ? ಗೀತೆಯ

ಒಂದು ಶ್ಲೋಕ ಹಿಡಿದುಕೊಂಡು ಚಿಂತಿಸುತ್ತಾ ಒಂದೆರಡು ಗಂಟೆಗಳ ಕಾಲ ಒಂದೇ ಶ್ಲೋಕದ ಮೇಲೆ, ಅಸಂಬದ್ಧ ಪ್ರಲಾಪವಲ್ಲದಂತೆ, ಹರಟೆ ಹೊಡೆಯುವುದಕ್ಕಿಂತ ಇವೆಲ್ಲ ಆನಂದಕರವೆ? ಬ್ರಹ್ಮಸೂತ್ರಗಳಲ್ಲಿ ಒಂದನ್ನು ಹಿಡಿದು ಒಳನುಗ್ಗಿ ಅದರ ವಿಚಾರ ಚಿಂತಿಸುತ್ತಾ ಮೈಮರೆಯುವುದಕ್ಕಿಂತ ಇದರಲ್ಲೆಲ್ಲಾ ಸೌಖ್ಯವಿದೆಯೇ? ಅಥವಾ ಅದ್ವೈತಿಗಳು ಹೇಳುವ ಅಮನಸ್ಕಯೋಗಕ್ಕಿಂತ ಇನ್ನೇನಿದೆ?

ದೇವುಡು ಆತ್ಮ ಕಥೆ

ಸಾಧಕನಾಗಿರುವುದೇ ಹಿರಿದು

ಸಂತೋಷವೆಂದರೇನು ಎಂದು ವಿಚಾರ ಮಾಡುತ್ತಾ ಅತೃಪ್ತ ಆಶೆಗಾಗಿ ಹೆಣಗುವುದೇ ಸಂತೋಷ ಎಂಬುದು ೧೯೨೧ರಲ್ಲಿ ನ್ನ ಸಿದ್ಧಾಂತವಾಗಿತ್ತು. ಆದಿನ್ನೂ ನನಗೆ ಹೋಗಿಲ್ಲ (೧೯೩೮) ಗಮ್ಯವನ್ನು ಕೈಗೆ ಸಿಕ್ಕುವಷ್ಟು ಕೆಳಗಿಟ್ಟು ಸಾಧಿಸುವ ಸಿದ್ಧನಾಗುವುದಕ್ಕಿಂತ 'ಅತ್ಯತಿಷ್ಠತ್ ದಶಾಂಗುಲಂ' ಆಗಿ ನಾವು ಐದಡಿ ಬೆಳೆದರೆ ಐದು ಅಡಿ ಹತ್ತಂಗುಲದಲ್ಲಿದ್ದು ಹತ್ತಡಿ ಬೆಳೆದರೆ ಹತ್ತು ಅಡಿ ಹತ್ತು ಅಂಗುಲದಲ್ಲಿರುವ ಗಮ್ಯವನ್ನು ಕುರಿತು ಸಾಧಕನಾಗಿರುವುದೇ ಹಿರಿದು ಎಂದು ನನ್ನ ಭಾವನೆ.

ದೇವುಡು ಆತ್ಮ ಕಥೆ

ಮಹಾಬ್ರಾಹ್ಮಣ ಬರೆದ ಹಿನ್ನೆಲೆ

'ಮಹಾಬ್ರಾಹ್ಮಣ 'ಕಾದಂಬರಿಯನ್ನು ಮೊದಲು ಬರೆಯಬೇಕೆಂಬ ಹಂಬಲ ಹುಟ್ಟಿದ್ದು ೧೯೨೭ರಲ್ಲಿ ಆ ವೇಳೆಗೆ ಗಾಯತ್ರಿ ಮಹಿಮೆ ಗೊತ್ತಾಗಿ. ಗಾಯತ್ರಿಯನ್ನು ಬಲ್ಲವನು ಚತುರ್ವಿಂಶತಿ ತತ್ವಗಳನ್ನು ತಿರುಗಿಸಬಲ್ಲನು ಎಂಬ ನಂಬಿಕೆಯು ಬಂದಿತ್ತಾಗಿ ಆ ಗಾಯತ್ರಿಯನ್ನು ಕಂಡು ಲೋಕಕ್ಕೆ ಸಾರಿ ಪರಮೋಪಕಾರ ಮಾಡಿದ ಮಹಾನುಭಾವನ ಕಥೆಯನ್ನು ಬರೆಯಬೇಕು ಎನ್ನಿಸಿತು. ಆದರೆ ಸಚ್ಛಾಸ್ತ್ರವೊಂದನ್ನು ಸಂಪ್ರದಾಯ ಶುದ್ಧವಾಗಿ ಓದಿ ಆರ್ಷಋಣವನ್ನು ತೀರಿಸುವವರೆಗೂ ಆ ಮಹಾಮಹಿಮನ ಕಥೆಯನ್ನು ಬರೆಯುವುದು ಸರಿಯಲ್ಲ ಎಂದು ಸುಮಾರು ೨೦ವರ್ಷ ಹಾಗೆಯೇ ಇರಲು ೧೯೪೭ರಲ್ಲಿ ಬರೆಯುವ ಪ್ರವೃತ್ತಿ ಬಲಿದು ಲೇಖನ ಕಾರ್ಯ ಮೊದಲಾಯಿತು. ಸುಮಾರು ೧೯೫೦ ಆಗಸ್ಟ್ ವೇಳೆಗೆ ಮುಗಿಯಿತು.

ನೆರವೇರದ ಆಸೆಗಳು/ ಕೆಲವು ಯೋಜನಾ ಲಹರಿಗಳು

ಇಂತಹ (ವಿಕ್ರಮೋರ್ವಶೀಯ ನಾಟಕ) ಉತ್ತಮ ಸಾರಸ್ವತ ಸಂಪತ್ ಭವನ ಶಿಖರಕ್ಕೆ ಇದುವರೆಗೂ ಕನ್ನಡದಲ್ಲಿ ಯಾವುದೂ ವ್ಯಾಖ್ಯಾನಗಳು ಆಗಿಲ್ಲವೆಂಬುದೊಂದು ದೊಡ್ಡಕೊರತೆ ಈ ಕುಂದನ್ನು ತಪ್ಪಿಸಲು ಸ್ವತಂತ್ರವಾದ ಕಥಾ ಚರಿತ್ರ ಕಲಾವಿಲಾಸ ತರಂಗ, ತಾರತಮ್ಯ ತರಂಗ, ವಿಚಾರ ತರಂಗ ಎಂಬ ನಾಲ್ಕು ತರಂಗಗಳಿಂದ ಒಂದು ದೊಡ್ಡ ಪ್ರಬಂಧವನ್ನು ಬರೆಯಬೇಕೆಂದು ಕೊಂಡಿರುವ ನನ್ನ ಸಂಕಲ್ಪವು ಈಡೇರುವುದು ಉದಾರ ಚಿತ್ತರಾದ ವಾಚಕರನ್ನೇ ಸೇರಿದೆ.

'ವಿಕ್ರಮೋರ್ವಶೀಯ' ಮುನ್ನುಡಿ

ಸಂತೋಷವುಂಟಾಗುವುದು ಹೇಗೆ?

ಸಂತೋಷವನ್ನು ಹಣದ ಹಾಗೆ ಆರ್ಜಿಸಬೇಕಿಲ್ಲ. ಅದು ಗಿಡದಲ್ಲಿರುವ ಚಿಗುರು ಹೂವಿನ ಹಾಗೆ. ಗಿಡಕ್ಕೆ ನೀರು ಹುಯ್ದರೆ ಚಿಗುರು ಬಿಡುವುದು. ಅದೇ ಬೆಳೆದರೆ ಮುಂದೆ ಅಲ್ಲಿ ಹೂವೂ ಬಿಡುವುದು ಹಾಗೆ ಮನಸ್ಸಿಗೆ ಕೊಂಚ ಪರಿವರ್ತನೆ ಆಗಬೇಕು. ಸಂಸ್ಕಾರ ಆಗಬೇಕು. ಅದಷ್ಟಾದರೆ ದುಃಖದಲ್ಲಿದ್ದ ಮನಸ್ಸು ಹೊರಳಿ ಸಂತೋಷದತ್ತ ತಿರುಗುವುದು.

ಪುಣ್ಯಾತ್ಮರೂ ಪಾಪಾತ್ಮರೂ
ನಮ್ಮ ಪುಸ್ತಕಗಳು

ದೇವುಡು ಅವರನ್ನು ಕೊಳ್ಳುವರು

ನಮ್ಮ ಕನ್ನಡ ದೇಶದಲ್ಲಿ ದೇವುಡುವನ್ನು ಕೊಂಡುಕೊಳ್ಳುವಂತಹ ವಿದ್ವಾಂಸರು ಅನೇಕಾನೇಕರು ಇದ್ದಾರೆ.

(ನಂಜನಗೂಡು ಸದ್ವೈದ್ಯ ಶಾಲಾ ಪಂಡಿತರಾದ ಶ್ರೀ ಯುತ ಬಿ.ವಿ. ಪಂಡಿತರು ಪ್ರತಿ ಭಾನುವಾರ ಗೀತೆ ಮೇಲೆ ಭಾಷಣ ಏರ್ಪಡಿಸಿದಾಗ ದೇವುಡು ಉಪನ್ಯಾಸವಿದ್ದಾಗ ದೇವುಡು ಅವರು ಹೇಳಿದ್ದು)

ನಮ್ಮ ಪುಸ್ತಕ ೧೯೩೮

ಬಿಶ್ರೀಖ ಬಗೆಗೆ ಸಹೃದಯನ ಸಂತೋಷ

ಶ್ರೀಕಂಠಯ್ಯನವರಿಗೆ ರಾಜಸೇವಾಸಕ್ತ ಬಿರುದು ಬಂತು. ಅವರಿಗೆ ಬಂದ ಬಿರುದು ಅವರಿಗಲ್ಲ. ಅವರಿಗೆ ರಾಜಾನುಗ್ರಹದಿಂದ ದೊರೆತ ಪ್ರಶಸ್ತಿ ಹೊಸಗನ್ನಡ ಸಾಹಿತ್ಯಕ್ಕೆ ದೊರಕಿದ ರಾಜಮನ್ನಣೆ.

ಶ್ರೀ ಯವರು, ನಮ್ಮ ಸಾಹಿತ್ಯದ ಹೊಸ ಬೆಳೆಯನ್ನು ಬೆಳೆಯುವುದಕ್ಕೆ ನಿಂತವರು. ಅವರ ಗೆಲುವು ನಮ್ಮ ಗೆಲುವು. ಆದರಿಂದ ಅವರು ಗೆಲ್ಲಲಿ ಎಂದು ಹರಕೆ ಹೊರೋಣ. ಅವರ ಜೀವ ಕನ್ನಡಕ್ಕೆ ಮೀಸಲು. ಅವರ ಉಸಿರು ಕನ್ನಡಕ್ಕೆ ವಿರೆವು. ಅವರಿಗೆ ಬಂದ, ಕೀರ್ತಿ ಅವರು ಸಂಪಾದಿಸಿದ ಖ್ಯಾತಿ ಅವು ನಮ್ಮ ಧ್ವಜಸ್ಥಂಭಗಳು.

(ಬಿ.ಎಂ. ಶ್ರೀ ಅವರಿಗೆ ರಾಜಸೇವಾಸಕ್ತ ಬಿರುದು ಬಂದಾಗ ದೇವುಡು ಅವರು ವ್ಯಕ್ತಪಡಿಸಿದ ಸಂತೋಷ)

ನಮ್ಮ ಪುಸ್ತಕ ಅಕ್ಟೋಬರ್ ೧೯೩೮

ಭಾಗ - ೩ ವೇದಾಂತ

ಕರ್ಮಯೋಗದ ಗುಟ್ಟು

ಕರ್ಮಯೋಗದ ಗುಟ್ಟು ಇಲ್ಲಿದೆ. ಲೌಕಿಕವಾದ ಉಪಮಾನದಿಂದ ಇದನ್ನು ಅನುಸಂಧಾನ ಮಾಡೋಣ. ದೊಂಬಿ ಆಗುತ್ತದೆ. ಮ್ಯಾಜಿಸ್ಟ್ರೇಟರು ರಿಸರ್ವ್ ಪೋಲೀಸ್ ತರುತ್ತಾರೆ. ಯತ್ನವಿಲ್ಲದೆ ಷೂಟ್ ಎನ್ನುತ್ತಾರೆ. ಜನ ಉರುಳುತ್ತಾರೆ. ಮ್ಯಾಜಿಸ್ಟ್ರೇಟ್ ರಿಸರ್ವ್ ಪೋಲೀಸರನ್ನು ಸರಕಾರ ಸೆಷನ್‌ಗೆ ಕಮಿಟ್ ಮಾಡುತ್ತಾರೇನು? ಸೆಷನ್ ಜಡ್ಜ್ ನೋಡಿ ತನ್ನ ಮುಂದೆ ಇರುವ ಅಪಾದಿತನನ್ನು ಕೊಲೆಗಾರನೆಂದು ತೀರ್ಪುಕೊಟ್ಟು ಅವನನ್ನು ಘಾಸಿಗೆ ಹಾಕಿರೆನ್ನುತ್ತಾನೆ. ಕೊಲೆಗಾರನನ್ನು ಕೊಲೆ ಮಾಡಿಸುತ್ತಾನೆ, ಆದರೆ ಅವನು ಅಪರಾಧಿಯೇನು? ಹಾಗೆ ಕರ್ಮ ಮಾಡಿದರೂ ಕರ್ತೃತ್ವವಿಲ್ಲದೆ ಇರುವುದು. ಅದು ಸಿದ್ಧಿಸಿದರೆ ಕರ್ಮಯೋಗ

ಭಗವದ್ಗೀತೆ ಕುರಿತು ಭಾಷಣದಿಂದ

ಜೀವಂತ ವೇದಾಂತ

ಭರತಖಂಡದಲ್ಲಿ ವೇದಾಂತಕ್ಕೆ ಬಹಳ ಪ್ರಾಶಸ್ತ್ಯ. ಆದರೆ ಈಗ ವೇದಾಂತವು ಬರಿಯ ಬಾಯಿಮಾತಿನ ಬಡಿವಾರವಾಗಿ ಕುಳಿತಿದೆ. ಕ್ಷಯರೋಗ ಬಂದು ಹಾಸಿಗೆ ಹಿಡಿದಿರುವನು ಬೆಟ್ಟವನ್ನು ಪುಡಿಗುಟ್ಟುವೆನು ಎಂಬಂತಿದೆ. ಅದರಿಂದ ಆ ವೇದಾಂತ ಸಪ್ಪೆ ಮಾತು. ಅದು ನಮಗೆ ಬೇಡ. ನಮಗೆ ಬೇಕಾದುದು ಬದುಕಿರುವ ವೇದಾಂತ. ಜೀವನದ ಜೀವಾಳವಾದ ವೇದಾಂತ. ಆ ವೇದಾಂತ ಹೇಳುವುದಿಷ್ಟು. ಬಾಳಿನಲ್ಲಿ ಲಾಭ ನಷ್ಟ ಎರಡೂ ಉಂಟು. ಆದಷ್ಟು ಮಟ್ಟಿಗೆ ನಷ್ಟ ತಪ್ಪಿಸಿ, ಲಾಭ ಮಾಡಿಕೊಳ್ಳಿ, ಎಂದು. ಲಾಭದಲ್ಲಿಯೂ ಸಣ್ಣ ಲಾಭ, ದೊಡ್ಡ ಲಾಭ, ಎಂದುಂಟು. ಸಣ್ಣ ಲಾಭ ಬಿಡಿ, ದೊಡ್ಡ ಲಾಭ ಬರುವ ಹಾಗೆ ಮಾಡಿಕೊಳ್ಳಿ ಎಂದು. ಇದು ವೇದಾಂತ. ವಿಚಾರ , ವಿವೇಕ, ಕಾರ್ಯ, ಆನಂದ ಎಂಬ ನಾಲ್ಕು ಕಾಲು ವೇದಾಂತವೆಂಬ ಕಾಮಧೇನುವಿಗೆ. ಈ ಕಾಲುಗಳಿಲ್ಲದ ವೇದಾಂತ ತಾನೂ ಬದುಕಲಾರದು ಇತರರನ್ನೂ ಬದುಕಿಸಲಾರದು.

ನಮ್ಮ ಪುಸ್ತಕ ೧೯೩೮ ನವೆಂಬರ್

ವೇದಾಂತವನ್ನು ತಿಳಿದು ಆಡಬೇಕು

ನಮ್ಮ ಜನರಲ್ಲಿ ವೇದಾಂತ ಹಾಸುಹೊಕ್ಕಾಗಿ ಬೆರೆತುಹೋಗಿದೆ. ಲಾವಣಿಗಳು, ತತ್ವಗಳು, ಹಾಡುಗಳು, ಗಾದೆಗಳು, ಕಥೆಗಳು, ಸ್ಥಳಪುರಾಣಗಳು, ರಾಮಾಯಣ-ಭಾರತ-ಭಾಗವತಗಳು ಎಲ್ಲವೂ ನಮ್ಮ ಜನರ ಮನಸ್ಸನ್ನು ನಾದಿವೆ. ಅಲ್ಲಿ ಎಣ್ಣೆ ಬತ್ತಿ ಎಲ್ಲ ಸಿದ್ಧವಾಗಿದೆ. ಬುದ್ಧಿವಂತರಿಂದು ವೇದಾಂತ ಶಾಸ್ತ್ರವನ್ನು ಅಟ್ಟದ ಮೇಲಿರುವ ದರ್ಶನ ಶಾಸ್ತ್ರದ ಗಂಟನ್ನು ಬಿಚ್ಚಿ, ಜನಸಾಮಾನ್ಯಕ್ಕೆ ಸುಲಭವಾಗಿ ದೊರಕುವಂತೆ ಮಾಡಬೇಕು. ಆಗ ಜನರ ಮನಸ್ಸು ಕಬ್ಬಿಣವು ಉಕ್ಕಾದಂತೆ ಆಗುತ್ತದೆ. ವೇದಾಂತ ಎಂದು ತಿಳಿಯದೆ ವೇದಾಂತದ ಮಾತುಗಳನ್ನು ಆಡಿ ನಂಬಿರುವ ಜನ ತಾವು ಆಡುತ್ತಿರುವುದು ವೇದಾಂತ ಎಂದು ತಿಳಿದು ಆಡುವಂತೆ ಆಗಬೇಕು. ಆಗ ಮರದಲ್ಲಿ ಕೆಚ್ಚು ಕಟ್ಟಿದಂತೆ ಆಗುವುದು.

ನಮ್ಮ ಪುಸ್ತಕ ಜುಲೈ ೧೯೩೦

ಕಾಲಿಗೆ ನಮಸ್ಕಾರ ಮಾಡುವುದು ಏಕೆ?

ದೇಹದಲ್ಲಿ ಪ್ರಧಾನವಾದುದು ಶಿರಸ್ಸು. ಜ್ಞಾನೇಂದ್ರಿಯಗಳೆಲ್ಲ ಅಲ್ಲಿಯೇ ಇವೆ. ಹೀಗೆ ಪ್ರಧಾನವಾದ ಶಿರಸ್ಸನ್ನು ಬಿಟ್ಟು ಕಾಲಿಗೆ ನಮಸ್ಕಾರ ಮಾಡಬೇಕು ಎರಡು ವಿಧಾಯಕವಾಗಿರುವುದೇಕೆ! ಎಂದು ಭಕ್ತರೊಬ್ಬರು ಬೌರಿಂಗ್ ಪೇಟೆಯಲ್ಲಿ ನಡೆದ ಶಂಕರ ಜಯಂತಿಯಲ್ಲಿ ದೇವುಡು ಅವರು ಉಪನ್ಯಾಸ ಮಾಡಿದಾಗ ಅಲ್ಲಿ ಮಿತ್ರರೊಬ್ಬರು ಪ್ರಶ್ನೆ ಮಾಡಿದರು. ಅದಕ್ಕೆ ದೇವುಡು ಹೀಗೆ ಉತ್ತರಿಸಿದರು.

''ದೇಹ ಎನ್ನುವುದು ಒಂದು ಬ್ಯಾಟರಿಯ ಹಾಗೆ. ಇದರಲ್ಲಿ ಕಾಲು ಕೈಗಳು ಬ್ಯಾಟರಿಯಲ್ಲಿರುವ ಛಾರ್ಜನ್ನು ಹೊರಕ್ಕೆ ಬಿಡುವ ಸ್ಥಾನಗಳು. ಮೈಗೆ ಮೈ ತಗುಲಿದರೂ ಛಾರ್ಜು ಹೊರಗೆ ಬರುತ್ತದೆ. ಆದರೂ ದೇಹದ ಇನ್ನು ಯಾವ ಭಾಗದಿಂದಲೂ ಕೈಕಾಲುಗಳಿಂದ ಬರುವಷ್ಟು ಹೆಚ್ಚಾಗಿ ಸುಲಭವಾಗಿ ಬರುವುದಿಲ್ಲ.

ದೇಹ ದೇಹವೂ ಬ್ಯಾಟರಿ ಎನ್ನುವುದನ್ನು ಸೈನ್ಸ್ ಕೂಡಾ ಒಪ್ಪಿದೆ. ಬ್ಯಾಟರಿಯಿಂದ ಬ್ಯಾಟರಿಗೆ ಛಾರ್ಜ್ ಕೊಡಬಹುದು ಎಂಬುದು ಎಲ್ಲರಿಗೂ ಗೊತ್ತು.

ನಮ್ಮ ಶಾಸ್ತ್ರದ ಪ್ರಕಾರ ಪ್ರತಿಯೊಂದು ಉಸಿರಾಡುವಾಗಲೂ ದೇಹದ ಬ್ಯಾಟರಿಯಲ್ಲಿ ಛಾರ್ಜು ಹೆಚ್ಚು ಕಡಿಮೆ ಆಗುತ್ತಲೇ ಇರುತ್ತದೆ. ಇದನ್ನೇ ಪ್ರಾಣಶಕ್ತಿ ಎನ್ನುವುದು. ಪ್ರಾಣಾಯಾಮ ಮಾಡಿದಾಗ ಈ ಶಕ್ತಿ ಹೆಚ್ಚುತ್ತದೆ. ಧ್ಯಾನದಿಂದ ಇನ್ನೂ ಹೆಚ್ಚುತ್ತದೆ. ಹಾಗೆ ಶಕ್ತಿಯು ದೇಹದಲ್ಲಿ ತುಂಬಿರುವಾಗ ದೇಹವು ಹಗುರವಾಗಿ ಉತ್ಸಾಹಪೂರ್ಣವಾಗಿ ಸಂತೋಷವಾಗಿರುತ್ತದೆ.

ಈ ಶಕ್ತಿಯು ದೇಹದಲ್ಲಿ ನಖಶಿಖಾಂತವಾಗಿ ತುಂಬಿದ್ದರೆ ದೃಷ್ಟಿ ಮಾತ್ರದಿಂದಲೇ ಇತರರಿಗೆ ಈ ಶಕ್ತಿಯು ವ್ಯಾಪಿಸುತ್ತದೆ. ಸ್ತ್ರೀ ಸಂಗವಾಗಿರುವ ದೇಹಕ್ಕಿಂತ ಸ್ತ್ರೀ ಸಂಗವಿಲ್ಲದ ದೇಹದಲ್ಲಿ ಶಕ್ತಿಯ ಶೇಖರಣ ಚೆನ್ನಾಗಿ ನಡೆಯುತ್ತದೆ. ನಿಶ್ಚಿಂತವಾಗಿ ಶಾಂತವಾಗಿರುವ ಮನಸ್ಸಿನವರು ಈ ಶಕ್ತಿಯನ್ನು ತಮ್ಮ ದೇಹದಲ್ಲಿ ಹೆಚ್ಚಾಗಿ ಸಂಗ್ರಹಿಸಬಲ್ಲರು.

ದೇಹದಲ್ಲಿ ಶಕ್ತಿ ಶೇಖರಣ ಮಾಡಬಲ್ಲವರಿಗೇ ನಮಸ್ಕಾರವನ್ನು ಗ್ರಹಿಸಲು ಅಧಿಕಾರ. ಅಂತಹವರಿಗೆ ಪಾದಾಭಿವಂದನ ಮಾಡಿದರೆ ವಂದನೆ ಮಾಡಿದವರ ದೇಹದಲ್ಲಿ ವ್ಯತ್ಯಾಸಗಳಾಗುವುದನ್ನು ನಿದರ್ಶನ ಮಾಡಿಕೊಡಬಹುದು. ಶಕ್ತಿ ಸಂಗ್ರಹಣವಿಲ್ಲದಿದ್ದವರಿಗೆ ಅಭಿವಂದನೆ ಮಾಡಿದರೆ, ಅಭಿವಂದನ ಮಾಡಿದವರಿಗೆ ಲಾಭವಿಲ್ಲ. ಮಾಡಿಸಿಕೊಂಡವರಿಗೆ ತಪ್ಪದೆ ಶಕ್ತಿಯು ವಿನಿಯೋಗವಾಗಿ ನಷ್ಟವಾಗುವುದು. ಆದರೆ ಅದು ಅಭಿವಂದನ ಮಾಡಿದವರಿಗೆ ಬರುವುದಿಲ್ಲ.

ಪ್ರಶ್ನೋತ್ತರದಿಂದ ನಮ್ಮ ಪುಸ್ತಕ ಜೂನ್ ೧೯೫೦

ಮಾನವನನ್ನು ಮೇಲಕ್ಕೆತ್ತುವ ಸಾಧನ : ವೇದಾಂತ

ಹಿಂದೆ ಅಕಬರನ ಆಸ್ಥಾನದಲ್ಲಿ ಬೀರಬಲ್ಲನೆಂಬ ಬುದ್ಧಿವಂತನಿದ್ದ. ಒಂದು ದಿನ ಅಕ್ಬರ್ ಚಕ್ರವರ್ತಿಯು ಅವನ ಕೈಗೆ ಒಂದು ಕಡ್ಡಿಯನ್ನು ಕೊಟ್ಟು ಇದನ್ನು ಮುರಿಯದೆ ಚಿಕ್ಕದು

ಮಾಡಬಲ್ಲೆಯಾ? ಎಂದು ಕೇಳಿದನು. ಅವನು ಒಂದು ದೊಡ್ಡ ಕಡ್ಡಿಯನ್ನು ಅದರ ಮಗ್ಗುಲಲ್ಲಿಟ್ಟು ಅದನ್ನು ಮುರಿಯದೆ ಚಿಕ್ಕದು ಮಾಡಿದನಂತೆ. ಹಾಗೆ ಈಗಿರುವ ಭೋಗ ಸಾಮಗ್ರಿಗಳನ್ನು ನಾಶಮಾಡದೆ ಮಾನವನನ್ನು ಮಾತ್ರ ಮೇಲಕ್ಕೆತ್ತುವ ಸಾಧನ ಈ ವೇದಾಂತ.

ಶ್ರೀ ಶಂಕರವೇದಾಂತ ಗ್ರಂಥದ ಪೀಠಿಕೆಯಿಂದ

ವೇದಾಂತದ ಪ್ರಯೋಜನ : ನಗುವ ಶಕ್ತಿ ಲಭ್ಯ

ಆಗುವ ಕೆಲಸಕ್ಕೆ ನಡುಗಟ್ಟಿಸುವುದು ವೇದಾಂತದ ಕೆಲಸ. ಆದರಿಂದ ಎಲ್ಲರೂ ವೇದಾಂತವನ್ನು ಓದಬೇಕು. ಮನಸ್ಸಿನಲ್ಲಿಟ್ಟುಕೊಳ್ಳಬೇಕು. ದಿವಸಕ್ಕೆ ಹೇಗೆ ಹೇಗೋ ಇಪ್ಪತ್ತನಾಲ್ಕೇ ಗಂಟೆ. ಅಳುತ್ತಿದ್ದರೂ ಅಷ್ಟೆ; ನಗುತ್ತಿದ್ದರೂ ಅಷ್ಟೆ. ಹಾಗಾದರೆ ದಿನವನ್ನೆಲ್ಲಾ ನಗುತ್ತಲೇ ಕಳೆಯೋಣ. ಆ ನಗುವ ಶಕ್ತಿ ಬರುವುದು ವೇದಾಂತದಿಂದ.

ಶ್ರೀ ಶಂಕರವೇದಾಂತ ಗ್ರಂಥದ ಪೀಠಿಕೆಯಿಂದ

ವೇದಾಂತದಿಂದ ಗಟ್ಟಿಮನಸ್ಸು ಸಾಧ್ಯ

ಈಗ ಜಗತ್ತಿನಲ್ಲಿ ಎಲ್ಲದಕ್ಕೂ ಯಂತ್ರಗಳು ಬಂದು ಮಾನವನ ಶಕ್ತಿ, ಅಹಂಕಾರ, ಬಿಡುವುಗಳು ಹೆಚ್ಚಿವೆ. ಆದರೆ ಆದರಿಂದ ಅವನಿಗೆ ಸುಖವಾಗುವ ಬದಲು ಭೀತಿ ಅಸೌಖ್ಯಗಳು ಹೆಚ್ಚಾಗಿವೆ. ಈ ಹೆದರಿಕೆಯಿಂದ ಅವನು ಒಟ್ಟುಗೂಡಿದರೆ ಸುಖವಾದೀತೇನೋ ಎಂದು ಒಟ್ಟುಗೂಡುತ್ತಿದ್ದಾನೆ. ಜಗತ್ತು, ಮಾನವಕುಲ ಒಟ್ಟಾಗದಿದ್ದರೆ ಜಗಳವಾಡಿದರೆ, ಹುಟ್ಟಣಗಿ ಹೋಗುವುದೇನೋ ಎಂಬ ದಿಗಿಲು ವಿಚಾರಿಗಳಿಗೆ ಮೂಡಿದೆ. ಇಂತಹ ವೇಳೆಯಲ್ಲಿ ಮಾನವನಿಗೆ ಬೇಕೇ ಬೇಕಾಗಿರುವುದು ಗಟ್ಟಿ ಮನಸ್ಸು. ಆ ಜಳ್ಳು ಪೊಳ್ಳಾಗಿರುವ, ಅಂಜಿರುವ ಮನಸ್ಸನ್ನು ಗಟ್ಟಿ ಮಾಡುವುದೆಂದು ಈ ವೇದಾಂತ ಎಲ್ಲರಿಗೂ ಬೇಕು.

ಶ್ರೀ ಶಂಕರವೇದಾಂತ ಗ್ರಂಥದ ಪೀಠಿಕೆಯಿಂದ

ವೇದಾಂತ ಎಲ್ಲರಿಗೂ ಏಕೆ ಬೇಕು?

ಜನಸಾಮಾನ್ಯಕ್ಕೆ ಬೇಕಾಗಿರುವುದು ಸುಖ ಜೀವನ. ಅದಕ್ಕೆ ಬೇಕಾದ್ದು ಹಣ. ಹೀಗಿರಲು ಈ ವೇದಾಂತವೇಕೆ ಎಂಬುದು ಅನೇಕರ ಮನದಲ್ಲಿ ಸುಳಿಯುವ ಒಂದು ಪ್ರಶ್ನೆ. ಅದಕ್ಕೆ ಉತ್ತರವೂ ಸುಲಭ. ಪ್ರತಿಯೊಬ್ಬರೂ ಒದ್ದಾಡುವುದು ಸುಖಕ್ಕಾಗಿ ನಿಜ. ಹಣವಿದ್ದವರಿಗೆಲ್ಲ ಸುಖವು ಸಿಕ್ಕುವುದು ಎಂಬುದು ಸಾಮಾನ್ಯರ ನಂಬಿಕೆ. ಆದರೂ ಸುಖವನ್ನು ಅನುಭವಿಸುವುದು ಮನಸ್ಸು. ಅದರ ಯೋಗ್ಯತೆಯನ್ನು ಅನುಸರಿಸಿ ಅನುಭವಿಸುವ ಸುಖವು ಹೆಚ್ಚು ಕಡಿಮೆ ಆಗುವುದು. ಅದು ಚಾಕುವಿನಂತೆ.

ಆದರೆ ಚಾಕುವು ಬೀಡು ಕಬ್ಬಿಣದ್ದೋ ಅಥವಾ ಉಕ್ಕಿನದೋ ಎಂಬುದು ಪ್ರಶ್ನೆ. ಬೀಡು ಕಬ್ಬಿಣದ್ದಾದರೆ ಅದು ಇಟ್ಟ ಕಡೆಯೇ ತುಕ್ಕು ಹಿಡಿದು ಹೋಗುವುದು ಎಂದರೇನು? ಇದ್ದು ಇಲ್ಲವಾಗುವುದು. ಉಕ್ಕಿನದಾಗಿದ್ದರೆ ಅದರ ತೇಜಸ್ಸು ತೀವ್ರವಾಗಿದ್ದು ಬಹುಕಾಲ ಬಾಳಿಕೆ ಬರುವುದು. ಆದರಂತೆ ಮನಸ್ಸಿಗೆ ಸಂಸ್ಕಾರವಾಗದೆ ಹೋದರೆ ಅದು ಬೀಡು ಕಬ್ಬಿಣದಂತಾಗುವುದು.

ಸಂಸ್ಕಾರವಾದರೆ ಉಕ್ಕಾಗುವುದು. ಹೀಗೆ ಮನಸ್ಸಿಗೆ ಸಂಸ್ಕಾರವನ್ನು ಕೊಡುವುದು ವೇದಾಂತ ಒಂದೇ. ಮಿಕ್ಕ ಸಂಸ್ಕಾರಗಳು ಮನಸ್ಸಿಗೆ ಮುಲಾಂ ಮಾಡಿದಂತೆ. ಆದರೆ ವೇದಾಂತ ಸಂಸ್ಕಾರವು ಮನಸ್ಸನ್ನು ಸಂಪೂರ್ಣವಾಗಿ ಕರಗಿಸಿ ಎರಕ ಹೊಯ್ದಂತೆ. ಆದರಿಂದ ವೇದಾಂತಕ್ಕೆ ಅಷ್ಟು ಹಿರಿಮೆ. ಮನಸ್ಸಿಗೆ ಗಟ್ಟಿತನವನ್ನು ಕೊಡುವುದು ಎಂದು ಅದರ ಹೆಚ್ಚುಗಾರಿಕೆ. ಆದರಿಂದ ಇದು ಮಿಕ್ಕೆಲ್ಲದಕ್ಕಿಂತ ಹೆಚ್ಚಾಗಿ ನಿತ್ಯ ಜೀವನದ ಸಾಧನಕ್ಕಿಂತ ಹೆಚ್ಚಾಗಿ ಬೇಕು. ಇದನ್ನು ಬಗ್ಗಿಸಿಕೊಂಡವರಿಗೆ ನಿತ್ಯಜೀವನದಲ್ಲಿ ಸುಖ ಹೆಚ್ಚು. ಅವರ ಸುಖವು ಹಾಲುಕ್ಕಿದಂತೆ ಉಕ್ಕುವುದು. ಆದರಿಂದ ವೇದಾಂತವು ಎಲ್ಲರಿಗೂ ಬೇಕು.

ಶ್ರೀ ಶಂಕರ ವೇದಾಂತ

ವೇದಾಂತದ ಪುಸ್ತಕಕ್ಕೆ ಟಿಪ್ಪಣಿ, ಪರಿಶಿಷ್ಟಗಳೇಕೆ?

ಜೀವ, ಜಗತ್ತು ಈಶ್ವರ ಎಂಬ ಈ ಮೂರನ್ನೂ ವೇದಾಂತಿಗಳು ವಿಚಾರಮಾಡಿ ಯಥಾಮತಿಯಾಗಿ ಉತ್ತರ ಕೊಟ್ಟಿದ್ದಾರೆ. ಅವರವರ ಉತ್ತರಗಳು ಒಂದೊಂದೂ ಅವರವರ ಹೆಸರಿನಿಂದ ಪ್ರಸಿದ್ಧವಾಗಿವೆ. ಹೀಗೆ ಶಂಕರಸಿದ್ಧಾಂತ ಅದ್ವೈತ ಎಂದು ಪ್ರಸಿದ್ಧವಾಗಿದೆ. ಅದರ ಪರಿಚಯವಾಗಲಿ ಎಂದು ಈ ಪುಸ್ತಕ ಬರೆದಿರುವುದು.

ಇದರಲ್ಲಿ ಟಿಪ್ಪಣಿಗಳನ್ನು ಕೊಟ್ಟಿರುವುದು ವಿಷಯವನ್ನು ವಿಸ್ತರಿಸುವುದಕ್ಕೆ ಪರಿಶಿಷ್ಟವು ಓದಿದ್ದನ್ನು ನಂಬಲು ಅನುಕೂಲವಾಗುವುದಕ್ಕೆ. ಇಷ್ಟು ಸುಲಭವಾಗಿ ಬರೆದಿರುವುದು ಜನ ಸಾಮಾನ್ಯಕ್ಕೆ ತಾನಾಗಿ ಓದಿಕೊಳ್ಳಬಲ್ಲವರಿಗೆ ಪಂಡಿತರಿಗಲ್ಲ ಆದರೆ ಪಂಡಿತರು ಓದಿದರೆ ತಪ್ಪಿಲ್ಲ.

ಶ್ರೀ ಶಂಕರವೇದಾಂತ ಗ್ರಂಥದಿಂದ

ವೇದಾಂತ ಅರ್ಥವಾಗುವುದು ಕಷ್ಟ

ಹಿಂದೆ ಪಂಡಿತರತ್ನ ಸೀತಾರಾಮಶಾಸ್ತ್ರಿಗಳು ವೇದಾಂತವನ್ನು ಓದಬೇಕೆಂದು ಶೃಂಗೇರಿಗೆ ಹೋದರು. ಅಲ್ಲಿ ಎರಡು ಮೂರು ದಿನ ಪಾಠವೂ ಆಯಿತು. ಒಂದು ದಿನ ಶಾಸ್ತ್ರಿಗಳು ತುಂಗಾ ತೀರದಲ್ಲಿ ಯೋಚನಾಮಗ್ನರಾಗಿ ಕುಳಿತುಬಿಟ್ಟರು. ಆಗಿನ ದಿವಾನರು ಶೇಷಾದ್ರಿ ಅಯ್ಯರ್ ಅವರು ಮಗ್ಗುಲಲ್ಲಿ ಬಂದು ನಿಂತರೂ ಅವರಿಗೆ ಎಚ್ಚರವಾಗಲಿಲ್ಲ. ಆಗ ದಿವಾನರು ''ಏನು ಶಾಸ್ತ್ರಿಗಳು ತುಂಬಾ ಯೋಚನೆಯಲ್ಲಿ ಇರುವಂತೆ ಕಾಣುತ್ತದೆ'' ಎಂದರು. ಆಗ ಶಾಸ್ತ್ರಿಗಳು ಎಚ್ಚರಗೊಂಡು ''ಅದೇ? ಈ ವೇದಾಂತವು ನಮಗೆ ತಿಳಿಯುವುದು ಹೇಗೆ? ಎಂದು ಯೋಚಿಸುತ್ತಿದ್ದೆ'' ಎಂದರಂತೆ!

ಹಾಗೆ ವೇದಾಂತವು ಅರ್ಥವಾಗುವುದು ಕಷ್ಟ ಎಂಬುದನ್ನು ನಾನು ಅನುಭವದಿಂದ ಬಲ್ಲೆ.

ಶ್ರೀ ಶಂಕರವೇದಾಂತ ಗ್ರಂಥದಿಂದ

'ಗ್ರಂಥ ಏಕೆ ಬಂತು? : ಎರಡು ಉತ್ತರಗಳು

ವೇದಾಂತವು ಅರ್ಥವಾಗುವುದು ಕಷ್ಟ ಎಂಬುದನ್ನು ನಾನು ಅನುಭವದಿಂದ ಬಲ್ಲೆ ಆದರೂ ಈ ಪ್ರಯತ್ನವೇಕೆ (ಶಂಕರ ಭಾಷ್ಯ ಗ್ರಂಥ ಬರೆಯುವ ಪ್ರಯತ್ನ) ಎಂದರೆ ಅದಕ್ಕೆ ಎರಡು ಉತ್ತರ:

ಹಿಂದೆ ಒಬ್ಬ ರಾಜನಿದ್ದನು. ಅವನನ್ನು ಒಲಿಸಿಕೊಂಡರೆ ರಾಜ್ಯವೆಲ್ಲ ಒಲಿಯುತ್ತಿತ್ತು. ಈಗ

ಒಬ್ಬ ರಾಜನ ಬದಲು ಓದು ಇರುವವರೆಲ್ಲ ರಾಜರಾಗಿದ್ದಾರೆ. ಅವರನ್ನು ಒಲಿಸಿಕೊಳ್ಳಲು ಅವರು ದೊಡ್ಡ ಮನಸ್ಸಿನವರು ಆಗುವಂತೆ ಮಾಡುವುದು ಎಲ್ಲರ ಕರ್ತವ್ಯ. ಅದಕ್ಕಾಗಿ ನಾನು ದೊಡ್ಡದೆಂದು ತಿಳಿದಿರುವುದನ್ನು ಬೇಕೆಂದವರಿಗೆ ಹಂಚುವ ಪ್ರಯತ್ನವಿದು. ಈ ಶಾಂಕರಾಭಾಷ್ಯಾ ಗ್ರಂಥ ರಚನೆ.

ಎರಡು ತ್ತರಗಳು

ಎರಡನೆಯದು ಹಸಿದಿರುವವರಿಗೆ ಬೇಕಾಗಿರುವುದು. ಸಮಾರಾಧನೆ. ಅದು ನಡೆಯುವುದು ದೂರದಲ್ಲಿ. ಅಲ್ಲಿಗೆ ಹೋಗುವವರೆಗೂ ತಡಿಯುವ ಹಾಗಾಗಲಿ ಎಂದು ಹಣ್ಣೋ ಹಂಪಲೋ ಹುರಿಹಿಟ್ಟೋ ಕೊಡುವಂತೆ ಈ ಪ್ರಯತ್ನ. ಅಥವಾ ಸಮಾರಾಧನಕ್ಕೆ ಹೋಗುವವನಿಗೆ ಹಸಿವು ಚೆನ್ನಾಗಿ ಆಗಲೆಂದು ಕೊಡುವ ಶುಂಠಿಯಿದ್ದರೂ ಇರಬಹುದು ಇದು.

ಇದು ತನ್ನ ಕೆಲಸವನ್ನು ಚೆನ್ನಾಗಿ ಮಾಡಲಿ. ನಮ್ಮ ಜನತೆ ವೇದಾಂತವನ್ನು ಮೂಲ ಗ್ರಂಥಗಳಲ್ಲಿ ಓದುವಂತಾಗಲಿ.

ಅಪ್ರಕಟಿತ ಶ್ರೀ ಶಂಕರವೇದಾಂತ ಗ್ರಂಥದ ಪೀಠಿಕೆಯಿಂದ

ಸಣ್ಣ ಮನಸ್ಸು - ಗಟ್ಟಿ ಮನಸ್ಸು

ಧೈರ್ಯವಾಗಿ ಸಣ್ಣತನವನ್ನು ಬಿಟ್ಟು ದೊಡ್ಡತನವನ್ನು ಹಿಡಿಯುವಲ್ಲಿ ಗಟ್ಟಿ ಮನಸ್ಸು, ಈಗ ಎಲ್ಲರಿಗೂ ಬೇಕಾಗಿದೆ. ಸಣ್ಣಮನಸ್ಸು ತಾನು ತನ್ನದು ಎಂದು ಒದ್ದಾಡಿ ಅಪಾಯಕ್ಕೆ ಆಹ್ವಾನ ಕೊಟ್ಟು ಬರಮಾಡಿಕೊಂಡರೆ, ದೊಡ್ಡ ಮನಸ್ಸು ಈ ಜಗತ್ತೆಲ್ಲ ನನ್ನದು ಎಂದು ಬಂದ ಅಪಾಯವನ್ನು ತಪ್ಪಿಸಿಕೊಳ್ಳುತ್ತದೆ. ಅಥವಾ ದೊಡ್ಡಮನಸ್ಸನ್ನು ಕಂಡು ಅಪಾಯವು ಅಂಜಿ ಇಲ್ಲವಾಗುತ್ತದೆ.

ಶ್ರೀ ಶಂಕರವೇದಾಂತ ಪೀಠಿಕೆಯಿಂದ

ಜಗತ್ತಿನ ಉದ್ಧಾರ ಮಾರ್ಗ

ವೇದಾಂತ ಅರ್ಥವಾದವರಿಗೆಲ್ಲಾ ಹಾಹಾ ಎಂದು ಒದ್ದಾಡುತ್ತಿರುವ ಅನರ್ಥವು ತಪ್ಪುವುದು. ಹೊಸಕಣ್ಣು ತೆರೆಯುವುದು. ಅಂಥವರು ಜಗತ್ತಿನ ನಾಗರಿಕರಾಗಿ ಜಗತ್ತೆಲ್ಲಾ ಒಂದೇ ಎನ್ನುವರು. ಈ ಲೋಕವನ್ನೆಲ್ಲಾ ತುಂಬಿರುವ ನಾನು ಎಂಬುದು ಮನಸ್ಸಿಗೆ ಅರಿವಾಗಿ ಮನಸಾರೆ ನಕ್ಕು ಹೊಸಬಾಳನ್ನು ಆರಂಭಿಸುವರು. ಆ ನಗುವಿನಿಂದ ಕೂಡಿದ ಹೊಸಬಾಳಿನಲ್ಲಿ ಜಗತ್ತಿನ ಉದ್ಧಾರ ಮಾರ್ಗವಿದೆ.

ಶ್ರೀ ಶಂಕರವೇದಾಂತದ ಪೀಠಿಕೆಯಿಂದ

ಉತ್ತಮರಾಗುತ್ತಾರೆ ವೇದಾಂತ ಓದಿದರೆ

ವೇದಾಂತವನ್ನು ಓದಿದವರೆಲ್ಲ ವೇದಾಂತಿಗಳಾಗುವುದಿಲ್ಲ; ಕ್ರಿಸ್ತನ ಶಿಷ್ಯರೆಲ್ಲರೂ ಕ್ರಿಸ್ತರಾಗಲಿಲ್ಲ. ಆದರೆ ಇತರರಿಗಿಂತ ಉತ್ತಮರಾದುದು

ಶ್ರೀ ಶಂಕರ ವೇದಾಂತ ಪೀಠಿಕೆಯಿಂದ

ಅಂತರಂಗ ಶುದ್ಧಿ ಹೇಗೆ?

ಆನೆಯ ಫೋಟೋ ಜೇಬಿನಲ್ಲಿದೆ ಎಂದು ಆನೆಯೂ ಜೇಬು ಹಿಡಿಸುತ್ತದೆ ಎನ್ನುವುದಕ್ಕೆ ಆದೀತೆ ? ಹಾಗೆ ಸಂಸ್ಕೃತಿ ಎಂದು ಮೂರಕ್ಷರದ ನುಡಿ ನುಡಿದರೂ ಅದರ ಅರ್ಥ ಬಹಳ ದೊಡ್ಡದು. ಬದುಕಿರುವ ಮರ ಬೆಳೆಯುತ್ತಲೇ ಇರುತ್ತದೆ. ಅದನ್ನು ಬೆಳೆಸುವುದು ಆತ್ಮ ಪರೀಕ್ಷೆ. ಹೆಂಗಸರು ಗಳಿಗೆಗೊಂದು ಸಲ ಕನ್ನಡಿ ನೋಡಿಕೊಳ್ಳುವಂತೆ ಮನುಷ್ಯ ದಿನದಿನವೂ ಅಲ್ಲ, ದಿನಕ್ಕೆ ಹಲವು ಸಲ ತಾನು ಸರಿಯಾಗಿ ಇದ್ದಿನೆಯೋ ಎಂದು ಪರೀಕ್ಷೆ ಮಾಡಿಕೊಳ್ಳಬೇಕು. ಹಾಗೆ ಪರೀಕ್ಷೆ ಮಾಡುತ್ತಾ ಮಾಡುತ್ತಾ ತನ್ನ ನಡತೆಯನ್ನು ತಿದ್ದಿಕೊಳ್ಳಬೇಕು. ಅಂತರಂಗವನ್ನು ಶುದ್ಧಿ ಮಾಡಿಕೊಳ್ಳಬೇಕು.

‘ಸಂಸ್ಕೃತಿ ಎಂದರೇನು? ಲೇಖನ ಸಂಸ್ಕೃತಿ ಗ್ರಂಥದಿಂದ

ಇಂದಿನ ನಮ್ಮ ತರುಣರ ಗತಿ

ಇದು ಸಂಸ್ಕೃತಿ ಸಂಘಟನೆಗಳ ಕಾಲ. ಪುರಾತನ ನೂತನ ಯುಗಗಳ ಸಂಧಿಕಾಲ. ಈಗ ಇನ್ನುಳಿದ ರೀತಿಗಳಲ್ಲಿ ಆಗಿರುವಂತೆ ಸಾಹಿತ್ಯ ಪ್ರಪಂಚದಲ್ಲೂ ಹೊಸ ರೀತಿ ನೀತಿಗಳ ಆವಿರ್ಭಾವವಾಗಿದೆ. ನಮ್ಮ ತರುಣರು ಆಂಗ್ಲ ಸಾಹಿತ್ಯವಾಹಿನಿಗೆ ಸಿಕ್ಕಿ ಮನೋದೌರ್ಬಲ್ಯಗಳನ್ನು (ನಮ್ಮ ಹಳಬರ ದೃಷ್ಟಿಯಿಂದ) ಚಿತ್ರ ವಿಚಿತ್ರವಾಗಿ ಚಿತ್ರಿಸುವ ಆಟದಲ್ಲಿದ್ದಾರೆ.

‘ಅಂತರಂಗ’ದ ಪ್ರಸ್ತಾವನೆ

ಬ್ರಹ್ಮಜ್ಞನು ಬಂದಾಗ

ಭರತಖಂಡದಲ್ಲಿ ನೀಚ ದಶೆಯು ಕಳೆದು ಉಚ್ಚದಶೆಯು ಆರಂಭವಾದಾಗಲೆಲ್ಲ ಯಾವನಾದರೊಬ್ಬ ಬ್ರಹ್ಮಜ್ಞನು ಬಂದು ‘‘ಧಾರ್ಮಿಕರಾಗಿ, ಧರ್ಮಜ್ಞರಾಗಿ’’ ಎಂದು ಉಪದೇಶ ಮಾಡಿ ಜನ ಸಾಮಾನ್ಯದ ದೃಷ್ಟಿಯನ್ನು ಧರ್ಮದ ಕಡೆಗೆ ಎಳೆಯುತ್ತಾನೆ. ಆಗ ಜನವು ‘‘ಆಚಾರವಿಲ್ಲದ ಧರ್ಮವು ಬರಡು, ವಿಚಾರವಿಲ್ಲದ ಧರ್ಮವು ಕುರುಡು’’ ಎಂಬುದನ್ನು ಉಪದೇಶದಿಂದ ತಿಳಿದು ಜ್ಞಾನ, ಕರ್ಮ, ಉಪಾಸನಾ ಎಂಬ ಸ್ಕಂಧ ತ್ರಯಾತ್ಮಕವಾದ ಧರ್ಮವನ್ನು ಅನುಷ್ಠಾನ ಮಾಡಲು ಪ್ರವೃತ್ತವಾಗುವುದು.

ಮೀಮಾಂಸಾದರ್ಪಣದ ಪೀಠಿಕೆ ಪು. VI

ಹಿಂದೂ ಸಂಸ್ಕೃತಿ ಹಿರಿಮೆ

ಹಿಂದೂ ಸಂಸ್ಕೃತಿ ‘‘ತಾನು, ತನ್ನವರು ತನಗಿಂತ ಮೇಲಿನದೊಂದು, ತನಗಿಂತ ಕೀಳೊಂದು ಎಂದರೆ ವ್ಯಕ್ತಿ, ಅವನ ಕುಲ – ಮೇಲು, ಕೀಳು ಎಂದು ಒಪ್ಪಿಕೊಂಡಿದೆ. ದೇವರು ಎಲ್ಲಿಯೋ ಸ್ವರ್ಗದಲ್ಲಿಲ್ಲ. ಇಲ್ಲಿ ಈಗ ಹೊರಗೆ ಒಳಗೆ ಎಲ್ಲಾ ಕಡೆ ಇದ್ದಾನೆ. ವಿಶ್ವಮಾವೃತ್ಯ ತಿಷ್ಠತಿ’’ ಎಲ್ಲವನ್ನೂ ಆವರಿಸಿಕೊಂಡಿದ್ದಾನೆ ಎಂದು ಅಂಗೀಕರಿಸಿದೆ. ಇದಕ್ಕೆ ವಿರುದ್ಧವಾದ ಭಾವನೆ ಇಂದಿನ ಜನಾಂಗದಲ್ಲಿ ಮೂಡಿದೆ. ಆದರಿಂದ ಹಿರಿಯ ಸಂಸ್ಕೃತಿ ತನ್ನ ಸಮಾಜ, ತನ್ನ ದೇವರು ಇವುಗಳನ್ನು ಹೇಳುವುದು ಹೊಸಬರಿಗೆ ಸೋಜಿಗವಾಗಿ ತೋರಿದರೂ ಹಳೆಯ ವಾಸನೆ ಬಿಟ್ಟಿಲ್ಲ ಬಿಡುವುದಿಲ್ಲ ಬಿಡುವುದಕ್ಕಾಗಲ್ಲಾ ಎಂದು ಬಲ್ಲವರಿಗೆ ಹೊಸತೇನೂ ಇಲ್ಲ.

‘ಚಿನ್ನಾ’ ಮುನ್ನುಡಿ

ಯಾವುದು ಪ್ರಶ್ನೆ?

ಚಿನ್ನವು ಆಸ್ಟ್ರೇಲಿಯಾದ್ದೋ ಕ್ಯಾಲಿಫೋರ್ನಿಯದ್ದೋ, ಆಫ್ರಿಕಾದ್ದೋ, ಇಂಡಿಯಾದ್ದೋ ಎಂಬುದು ಪ್ರಶ್ನೆಯಲ್ಲ. ಚಿನ್ನವು ಎಷ್ಟು ಬಣ್ಣದ್ದು ಎಂಬ ಪ್ರಶ್ನೆ. ಅದೆಷ್ಟು ದೂರ ನಮ್ಮನ್ನು ಬ್ರಹ್ಮದತ್ತ ಕರೆದೊಯ್ಯುವುದು ಎಂಬುದು ಪ್ರಶ್ನೆಯಾಗಬೇಕು. ಆ ವಿಶಾಲದೃಷ್ಟಿ ನಮ್ಮಲ್ಲಿ ಮೂಡಲಿ.

ಉಪನಿಷತ್ತು ಅನುವಾದ ಪೀಠಿಕೆ

ಅದೆಂತಹ ಭಕ್ತಿ

ಮಡದಿ ಮಕ್ಕಳನ್ನು ನೋಡಿ ಎಲ್ಲವನ್ನೂ ಮರೆಯುವಷ್ಟು ಮೋಹವಿರುವ ಮನಸ್ಸಿಗೆ ದೇವರ ಹೆಸರನ್ನು ಕೇಳಿದರೆ, ದೇವರ ರೂಪವನ್ನು ಕಂಡರೆ ಪರವಶವಾಗುವಷ್ಟು ಆನಂದ ಬರದಿದ್ದರೆ ಅದೆಂತಹ ಭಕ್ತಿ.

೧೯೩೯ ನಮ್ಮ ಪುಸ್ತಕ 'ಭಕ್ತಿ' ಲೇಖನ

ಗೀತೆ : ತ್ರಿಗುಣ ಜನರು

ಸತ್ತ್ವಗುಣದವರು ದೀಪಗಳಿದ್ದ ಹಾಗೆ. ರಜೋಗುಣದವರು ಕುಡುಕಟ್ಟಿ ಬೆಳಕು ತೋರದ ದೀಪದ ಹಾಗೆ. ತಮೋಗುಣದವರು ಕತ್ತಲಿನ ಉಂಡೆಗಳ ಹಾಗೆ. ಜಗತ್ತಿಗೆ ಬೆಳಕಿನ ಮೇಲೆ ವಿಶ್ವಾಸ. ಬೆಳಕಿರುವಾಗ ಏನೋ ನಂಬಿಕೆ. ಹಾಗೆ ಸಾತ್ವಿಕರು ಹೆಚ್ಚಿದರೆ ಲೋಕದಲ್ಲಿ ಶಾಂತಿ. ಏನೋ ನಂಬಿಕೆ. ತಾಮಸರು ಹೆಚ್ಚಿದರೆ ಲೋಕದಲ್ಲಿ ದಿಗಿಲು, ಅಪನಂಬಿಕೆ.

ಸತ್ತ್ವಗುಣದವರು ಕರಟವನ್ನು ಬಿಟ್ಟು ಗಿಟಕು, ತಾಮಸರು ಎಳೆಯಕಾಯಿ. ಕರಟ ಹತ್ತಿ, ಕೊಂಡಿದೆ. ಅದನ್ನು ಬಲಿಸುವುದು ಗೀತೆ. ಜೀವನು ಬಲಿಯುವುದಕ್ಕೆ ಗೀತೆ ಜ್ಞಾನ ಭಕ್ತಿ ಕರ್ಮ ಎಂಬ ಮೂರು ಸಾಧನಗಳನ್ನು ಹೇಳಿದೆ.

ನಮ್ಮ ಪುಸ್ತಕ ಜೂನ್ ೧೯೫೦ ಗೀತಾ ಸಂದೇಶ ಲೇಖನ

ಗೀತಾತನಿಶ್ಲೋಕ ವ್ಯಾಖ್ಯಾನ ಸಾಧ್ಯ

ತಮಿಳಿನಲ್ಲಿ ಗೀತಾಶ್ಲೋಕಗಳೊಂದೊಂದನ್ನು ವಿಸ್ತಾರವಾಗಿ ವ್ಯಾಖ್ಯಾನ ಮಾಡಿರುವುದುಂಟು. ಅದಕ್ಕೆ ' ತನಿಶ್ಲೋಕ' ಎಂದು ಹೆಸರು.

ಒಮ್ಮೊಮ್ಮೆ ನಮ್ಮಿಂದಲೂ ಗುರುದೇವನು ಅಂತಹ ಸಾಹಸ ಮಾಡಿಸಿದ್ದಾನೆ. ಒಂದು ದಿನ 'ದೈವೀ ಹ್ಯೇಷಾ ಗುಣಮಯೀ' ಎಂಬ ಶ್ಲೋಕಕ್ಕೆ ಗುರುದೇವನು ಒಂದೂವರೆ ಗಂಟೆಯ ಹೊತ್ತು ವ್ಯಾಖ್ಯಾನ ಮಾಡಿದ. ಇನ್ನೊಮ್ಮೆ ''ಯತಃ ಪ್ರವೃತ್ತಿರ್ಭೂತಾನಾಂ'' ಎಂಬ ಶ್ಲೋಕಕ್ಕೆ ಎರಡೂ ಕಾಲುಗಂಟೆ ವ್ಯಾಖ್ಯಾನ ಮಾಡಿ ಆ ಶ್ಲೋಕವೆ ಗಾಯತ್ರಿಮಂತ್ರ ಎಂದು ಸಿದ್ಧಮಾಡಿದ. ಆದರಿಂದ ಈ ತನಿಶ್ಲೋಕ ವ್ಯಾಖ್ಯಾನವು ಆಗಲೆಂದು ಗುರುದೇವನಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಆತನು ಮಾಡಿಕೊಟ್ಟಾನು ''

ಸಂಪಾದಕರ ಮಾತು ೧೯೫೦

ಗೀತೆಯ ಪ್ರಚಾರದ ಹುಚ್ಚು

ಗೀತೆಯ ಪ್ರಚಾರದ ಹುಚ್ಚೊಂದಿದೆ. ಗೀತೆಯ ಮೂರು ಪ್ರಕಟಣೆಗಳು ಹೊರಬರಬೇಕು. ಮೊದಲಿನದು ಸುಲಭ ಭಾಷಾಂತರ. ಇದು ೨ ಆಣೆಗೊಂದರಂತೆ ಸಿಕ್ಕಬೇಕು. ೧ ಲಕ್ಷ ಪ್ರತಿಗಳನ್ನು ಜನತೆಯಲ್ಲಿ ಹರಡಬೇಕು. ಆಚಾರ್ಯತ್ರಯರ ಭಾಷ್ಯವುಳ್ಳ ಪ್ರತಿಯೊಂದು, ಇದನ್ನು ಪದವೀಧರರಿಗೆಲ್ಲ ಕ್ರಿಶ್ಚನ್ ಲಿಟರರಿ ಸೊಸಾಯಿಟಿಯವರು ಬಾಯ್‌ಬಲ್ ಕೊಡುವಂತೆ ಕೊಡಬೇಕು. ಮೂರನೆಯದಾಗಿ ಇಲ್ಲಿಯವರೆಗೆ ಗೀತೆಯ ಮೇಲೆ ಯಾರಾರು ಏನೇನು ಹೇಳಿದ್ದಾರೆ, ಹೇಳಬಹುದು ಎಂಬ ವಿವೇಚನೆಯುಳ್ಳ ೨೦೦೦ ಪುಟಗಳ ಗ್ರಂಥ. ಇದಿಷ್ಟು ಮಾಡಲು ಒಂದು ಸ್ವತಂತ್ರ ಸಂಸ್ಥೆಯು ಆಗಬೇಕು.

ದೇವುಡು ಆತ್ಮ ಕಥೆ

ಸಂಸ್ಕೃತ ಪ್ರಚಾರದ ರೀತಿ

ಮಾಡಿದರೆ ಸಂಸ್ಕೃತ ಪ್ರಚಾರ ಮಾಡಬೇಕು. ಅದಕ್ಕೆ ಒಂದು ಕ್ರಮ ಸಿದ್ಧವಾಗಿದೆ. ೬೦ ದಿನ. ದಿನಕ್ಕೊಂದು ಗಂಟೆ ಶ್ರಮಪಟ್ಟರೆ ಅರುವತ್ತೊಂದನೆಯ ದಿನ ಸ್ವತಂತ್ರವಾಗಿ ಗೀತೆ ಓದಬಹುದು. ಆದರೆ? ಅದಷ್ಟು ಸಾಲದು. ಧರ್ಮ, ಅರ್ಥ, ಕಾಮ, ಮೋಕ್ಷ ನಾಲ್ಕೂ ಒಳಗೊಂಡಿರುವುದು ಸನಾತನಧರ್ಮ. ಅದರ ಸ್ವರೂಪ ಮನಸ್ಸಿಗೆ ಹಿಡಿಯುವಂತೆ ಮಾಡಬೇಕಾದರೆ, ವೇದಗಳಿಂದ ಹಿಡಿದು ಹಲ್ಲೀಶಕುನದವರೆಗೆ ಎಲ್ಲಾ ತಿಳಿಯಬೇಕು. ಅದಕ್ಕೆ ಎಲ್ಲಾ ಸಂಗ್ರಹ ಮಾಡುತ್ತಿದ್ದೇನೆ.''

ದೇವುಡು ಆತ್ಮ ಕಥೆ

ವೇದ ಪೂರ್ಣವಿಕಾಸದ ಸಾಧನ

ಜ್ಞಾನವು ಕೊನೆಯವರೆಗೂ ಹೋಗುವಂತಹುದಾಗಿರಬೇಕು. ಒಂದೊಂದು ಮೆಟ್ಟಲಾಗಿ ಹತ್ತಿಹತ್ತಿದವನು ಬೆಟ್ಟದ ಶಿಖರವನ್ನೂ ಏರುವಂತೆ, ನಿಜವಾದ ಜ್ಞಾನವನ್ನು ಪಡೆದವನು ಮೆಟ್ಟಿಲು ಮೆಟ್ಟಿಲಾಗಿ ಏರಿ ಜ್ಞಾನದ ಕೊನೆಯನ್ನು ಸೇರುತ್ತಾನೆ. ಆಗ ತಾನು ಬೇರೆ ಅಲ್ಲ, ಜ್ಞಾನ ಬೇರೆ ಅಲ್ಲ. ತಾನೂ ಜ್ಞಾನವೂ ಒಂದೇ ಎಂದು ತಿಳಿಯುತ್ತದೆ. ಆಗ ಜ್ಞಾನವೂ ತಾನೂ ಒಂದೇ ಎಂದು ಅರಿತುಕೊಂಡಾಗ, ಮಾನವನ ವಿಕಾಸವು ಪೂರ್ಣವಾಯಿತು. ಅಂತಹ ಪೂರ್ಣವಿಕಾಸದ ಸಾಧನವು ವೇದ. ಈ ಜ್ಞಾನವು ಬುದ್ಧಿಯಲ್ಲ. ವೇದವೂ ಬುದ್ಧಿವಂತಿಕೆಯ ಮಾತಲ್ಲ.

ನಮ್ಮ ಪುಸ್ತಕ ಅಕ್ಟೋಬರ್ ೧೯೩೮ ವೇದಗಳು ಲೇಖನ

ವೇದಜ್ಞಾನ - ಸರ್ವಶ್ರೇಷ್ಠ ಏಕೆ?

ಲೋಕದಲ್ಲಿ ಎಲ್ಲರೂ ಬುದ್ಧಿಯನ್ನು ಆಶ್ರಯಿಸಿ ಜ್ಞಾನವನ್ನು ಪಡೆಯುವರು ಅದರಿಂದ ಅವರವರ ಬುದ್ಧಿಯು ಚಿಕ್ಕದೂ ದೊಡ್ಡದೂ ಆದಂತೆಲ್ಲಾ ಅವರವರ ಜ್ಞಾನಮಂಡಲವು ಕಿರಿದೂ ಹಿರಿದೂ ಆಗುವುದು. ವೇದವು ಬುದ್ಧಿಯಿಂದ ಹೊರಗಿರುವ ಜ್ಞಾನವನ್ನು ಸಂಪಾದಿಸಿ ಕೊಟ್ಟು

ಬುದ್ಧಿಯೂ ಬೆಳೆಯುವಂತೆ ಮಾಡುವುದು. ಆದರಿಂದ ವೇದವು ಸಂಪಾದಿಸಿಕೊಡುವ ಜ್ಞಾನವು ಸರ್ವ ಶ್ರೇಷ್ಠವು.

ನಮ್ಮ ಪುಸ್ತಕ ಆಕ್ಟೋಬರ್ ೧೯೩೮ 'ವೇದಗಳು' ಲೇಖನ ದೇವುಡು

ಭಾಗ -೪ ಜನಜೀವನ

ಕುಟುಂಬಿಯ ಹಿರಿಮೆ

ಮನುಷ್ಯ ಏಕಾಕಿಯಾಗಿರುವುದು, ಒಬ್ಬಂಟಿಗನಾಗಿರುವುದು ಸಾಧ್ಯವಿಲ್ಲ. ಹಾಗೆ ಒಂಟಿಯಾಗಿರುವವನಿಗೆ ಒಂಟಿಮರಕ್ಕೆ ಬರುವ ಗಾಳಿಯ ಭೀತಿಯ ಹಾಗೆ ಕಷ್ಟಗಳು ಹೆಚ್ಚು. ಅಷ್ಟೇ ಅಲ್ಲ ಒಂಟಿ ಸಲಗನ ಹಾಗೆ ಅವನಿಂದ ಸಮಾಜಕ್ಕೆ ಭೀತಿಯೂ ಹೆಚ್ಚು. ಅದರಿಂದಲೇ ತಿಳಿದವರು ಹೇಳುವುದು ''ಕುಟುಂಬಿ' ಗೃಹಸ್ಥ, ಒಂಟಿಕೊಂಟಿಗಿಂತ ಉತ್ತಮ'' ಎಂದು. ನಮ್ಮವರು ಕುಟುಂಬಿಗೆ ಗೌರವ ಹೆಚ್ಚಾಗಿ ಕೊಡುವ ಕಾರಣವಿದು.

ಕುಟುಂಬದಲ್ಲಿ ಇರುವವರೆಲ್ಲ ಒಂದೇಸಮ. ಆದರೂ ಹಸ್ತದಲ್ಲಿ ಇರುವ ಐದು ಬೆರಳುಗಳ ಹಾಗೆ. ಐದೂ ಬೆರಳೇ! ಆದರೂ ಒಂದಕ್ಕೊಂದಕ್ಕೆ ವ್ಯತ್ಯಾಸವಿದೆ ದೊಡ್ಡದಿದೆ, ಚಿಕ್ಕದಿದೆ ಹೆಬ್ಬೆರಳು ಎಲ್ಲಾ ಬೆರಳುಗಳ ಜೊತೆಯಲ್ಲೂ ಸೇರಬೇಕು. ಅದು ಎಲ್ಲದಕ್ಕಿಂತ ಬಲವಾಗಿದ್ದರೂ ಎಲ್ಲದರ ಜೊತೆಯಲ್ಲೂ ಸೇರುತ್ತದೆ. ದುಡಿಯುತ್ತದೆ. ನೀವು ಮುಷ್ಟಿ ಕಟ್ಟಿದಾಗ ಬೇರೆನಿಲ್ಲಬಲ್ಲದು ಆದರೂ ನಿಲ್ಲುವುದಿಲ್ಲ. ಹಾಗೆ ಇರಬೇಕು ಕುಟುಂಬಿ. ಕುಟುಂಬದಲ್ಲಿ ಹಿರಿಯರುಂಟು, ಕಿರಿಯರುಂಟು, ಹಿರಿಯರು ಕಿರಿಯರು ಎಲ್ಲರನ್ನು ಹೊಂದಿಕೊಂಡು ಹೋಗುವುದು ನಮ್ಮ ಸಂಸ್ಕೃತಿ

ಸಂಸ್ಕೃತಿ ಎಂದರೇನು? ಕರ್ನಾಟಕ ಸಂಸ್ಕೃತಿ ಗ್ರಂಥದಿಂದ

ಸಭೆಗಳಿಗೆ ಜನ ಬರುವ ವಿಚಾರ

ನಮ್ಮಲ್ಲಿ ಜನರು ಬರದಿದ್ದರೆ ಆ ಕಾರ್ಯವು ಕೆಟ್ಟು ಹೋಯಿತೆಂಬ ಭಾವನೆ ಬಹಳವಾಗಿದೆ. ಅದನ್ನು ಒಪ್ಪಲಾಗುವುದಿಲ್ಲ. ಇಂತಹ ಪವಿತ್ರ ಕಾರ್ಯಗಳಿಗೆ (ಧಾರ್ಮಿಕ ಉಪನ್ಯಾಸಗಳಿಗೆ) ಮೊದಮೊದಲು ಜನವು ಸೇರುವುದೇ ಇಲ್ಲ. ಈಗ ಜಗತ್ಪಸಿದ್ಧನೆಂದು ಖ್ಯಾತಿ ಪಡೆದಿರುವ ಬರ್‌ನರ್‌ಡ್ ಷಾ ಎಂಬಾತನು ಮೊದಮೊದಲು ಉಪನ್ಯಾಸಗಳಿಗೆ ಆರಂಭಿಸಿದಾಗ ಇಬ್ಬರು ಮೂವರು ಇರುತ್ತಿದ್ದರಂತೇ! ಆದರಿಂದ ಉಪನ್ಯಾಸಕರಾಗಲಿ ಭಾಷಣಕಾರರಾಗಲಿ ಅಥವಾ ಉಪನ್ಯಾಸ ಭಾಷಣಗಳನ್ನು ಏರ್ಪಡಿಸಿದವರಾಗಲೀ ಜನರು ಬಹಳ ಬರಲಿಲ್ಲವೆಂದು ವ್ಯಸನಪಡಬಾರದು. ನಮ್ಮ ಹಳ್ಳಿಗಳಲ್ಲಿ ಇರುವ ಜನರೇ ಕೊಂಚಮಂದಿ ಅವರಲ್ಲಿ ಅಕ್ಷರಸ್ಥರು ಇನ್ನೂ ಸ್ವಲ್ಪ. ಅವರಲ್ಲಿ ವಿಚಾರಪರರಾದರೋ ಒಬ್ಬರೋ ಇಬ್ಬರೋ ! ಆದರಿಂದ ಮೊದಮೊದಲು ಜನಸೇರುತ್ತಾರೆಂಬ ಆಶೆ ಇಟ್ಟುಕೊಳ್ಳ ವುದಕ್ಕಿಂತಲೂ ಯಾರೂ ಬರುವುದಿಲ್ಲ ಎಂದು ಮೊದಲು ಮಾಡುವುದು ಬಹಳ ಸರಿ.

ನಮ್ಮ ಪುಸ್ತಕ ೧೯೩೮

ದುಡಿದವರೆಲ್ಲ ಕೀರ್ತಿವಂತರಾಗಿದ್ದಾರೆಯೇ?

ದುಡಿದವರೆಲ್ಲ ಕೀತಿವಂತರಾಗಿದ್ದಾರೆಯೇ? ಇಲ್ಲ ಸುಮ್ಮನೆ ದುಡಿದರೆ ಸಾಲದು. ದುಡಿಯುವವರ ಮನಸ್ಸಿನಲ್ಲಿ ಉತ್ಸಾಹಪೂರ್ಣವಾದ ಆಸೆಯಿರಬೇಕು. ಕೈ ಹಿಡಿದು ಮುಂದಕ್ಕೆ ಎಳೆಯುವ ಸವಿಗನಸೊಂದು ಕಣ್ಣೆದುರು ನಿಂದಿರಬೇಕು. ಹಾಗೆ ಮನಸ್ಸಿಟ್ಟು, ಕಣ್ಣುಬಿಟ್ಟು ದುಡಿದರೆ ಆಗಸಿದ್ಧಿ. ಹಾಗಿಲ್ಲದೆ ಅಯ್ಯೋ ದೇವರೆ ಎಂದು ಕೊಂಡು ಹುಟ್ಟಿಸಿದ ದೇವರನ್ನು ಬಯ್ದುಕೊಂಡು ದುಡಿಯಬೇಕಲ್ಲ ಎಂದು ಆ ಕಣ್ಣನೀರು ಈ ಕಣ್ಣಿಗೆ ಹಾಕಿಕೊಂಡು ದುಡಿದರೆ, ಅದರಿಂದ ಅವರಿಗೂ ಪ್ರಯೋಜನವಿಲ್ಲ, ಇತರರಿಗೂ ಇಲ್ಲ. ನಗು ನಗುತ್ತಾ ಮನಸಾರೆ, ಶ್ರದ್ಧೆಯಿಂದ ಗುರಿಯನ್ನು ಎದುರಿಗಿಟ್ಟುಕೊಂಡು ದುಡಿದರೆ ಸಿದ್ಧಿಯ ಸ್ವರ್ಗ! ಹಾಗಿಲ್ಲದೆ ಮನಸ್ಸಿಲ್ಲದೆ ದುಡಿದರೆ ಅದೇ ಅವನಿಗೆ ನರಕ.

ನಮ್ಮ ಪುಸ್ತಕ ೧೯೩೮ 'ಗೋವಿನ ಹಾದಿ' ಲೇಖನ

ಹಣ್ಣು ತಿನ್ನುವರೆಷ್ಟು ಮಂದಿ?

ಹಣ್ಣು ತಿಂದು ಆರೋಗ್ಯವಂತರಾಗಿ ಬಾಳಿ ಎಂಬ ಪಲ್ಲವಿಯು ಎಲ್ಲೆಲ್ಲಿಯೂ ಕೇಳಿ ಬರುತ್ತಿದೆ. ಆದರೂ ಈ ಹಣ್ಣಿನ ಮೇಲಿನ ವ್ಯಾಮೋಹ ನಗರಗಳಲ್ಲಿಯೇ ಇನ್ನೂ ಎಲ್ಲರ ಮನಸ್ಸಿಗೆ ಹಿಡಿದಿಲ್ಲ. ನಮ್ಮಲ್ಲಿ ಬಾಳೆಯಹಣ್ಣು ಎಲ್ಲೆಲ್ಲಿಯೂ ಬೆಳೆಯುತ್ತದೆ. ಆದರೂ ವಾರಕ್ಕೊಂದು ಸಲವಾದರೂ- ದಿನಕ್ಕೊಂದಂತೂ ಇಲ್ಲವೇ ಇಲ್ಲ-ಒಂದು ಬಾಳೆಯ ಹಣ್ಣು ತಿನ್ನುವರೆಷ್ಟು ಮಂದಿ ಇದ್ದಾರೆ?

ನಮ್ಮ ಪುಸ್ತಕ ಅಕ್ಟೋಬರ್ ೧೯೩೮

ಸಹಕಾರ ಮಾರ್ಗ-ಒಳ್ಳೆಯ ಗರಡಿಮನೆ

ನಮ್ಮ ದೇಶದಲ್ಲಿ ಇಂದು ಹೊಸ ಸ್ವಾತಂತ್ರ್ಯ ಭಾವನೆಯು ತಲೆದೋರುತ್ತಿದೆ. ಪ್ರಜೆಗಳಲ್ಲಿ ಜವಾಬ್ದಾರಿ ಸರ್ಕಾರವನ್ನು ಅಪೇಕ್ಷಿಸುತ್ತಿದ್ದಾರೆ. ಸ್ವತಂತ್ರರಾಗಿ ಸರ್ಕಾರದ ಜವಾಬ್ದಾರಿಯನ್ನು ಹೊರಬಲ್ಲಂತಹ ಸತ್ಪ್ರಜೆಗಳನ್ನು ಮಾಡುವುದಕ್ಕೆ ಸಹಕಾರ ಮಾರ್ಗವು ಒಳ್ಳೆಯ ಗರಡಿಮನೆ. ಆದರಿಂದ ಸ್ಕೂಲ್ ಸೊಸೈಟಿಗಳು ಬರಬೇಕು. ಆದರಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತಾಗಬೇಕು. ಅಲ್ಲಿ ಎಡವಿ ಬಿದ್ದು ಮುಗ್ಗರಿಸಿ ಅನುಭವಪಡೆಯಲು ವಿದ್ಯಾರ್ಥಿಗಳಿಗೆ ಅವಕಾಶವಿರಬೇಕು. ಹೀಗೆ ಮಾಡಿದರೆ ಮುಂದಿನ ಪ್ರಜೆಗಳಿಗೆ ಇಂದೇ ಅವರ ಅಭ್ಯುದಯದ ಹಾದಿಯ ಪರಿಚಯವನ್ನು ಮಾಡಿಕೊಟ್ಟಿರುವುದು.

ನಮ್ಮ ಪುಸ್ತಕ ಅಕ್ಟೋಬರ್ ೧೯೩೮

ಕೆಲಸಕ್ಕೆ ಎರಡು ಘಟ್ಟ

ಕೆಲಸಕ್ಕೆ ಎರಡು ಘಟ್ಟ. ಒಂದು ಅದನ್ನು ಕುರಿತು ಯೋಚಿಸುವುದು; ಇನ್ನೊಂದು ಅದನ್ನು ಮಾಡುವುದು. ಈ ಎರಡೂ ನಮಗೆ ಎರಡು ಕಣ್ಣುಗಳಿದ್ದಂತೆ ಒಂದು ಕಣ್ಣು ಮುಚ್ಚಿಕೊಂಡು ನೋಡಬಹುದು. ಆದರೆ ಬಹಳ ಹೊತ್ತು ಆಗುವುದಿಲ್ಲ. ಹಾಗೆ, ಯೋಚಿಸದೆ ತಟ್ಟನೆ ಕೆಲಸಕ್ಕೆ

ಹೊರಡಬಾರದು. ಸುಮ್ಮನೆ ಯೋಚಿಸುತ್ತಲೇ ಕುಳಿತುಕೊಳ್ಳಲೂಬಾರದು. ಯೋಚಿಸಿ ಗೊತ್ತುಮಾಡಿಕೊಂಡು ನಿರ್ಧರಿಸಿದ ಮೇಲೆ ಶತಾಯಿ ಗತಾಯಿ ನೂರು ಬರಲಿ ನೂರು ಹೋಗಲಿ, ಕೆಲಸ ಮಾಡಿಬಿಡಬೇಕು. ಪ್ರಯತ್ನ ಪೂರ್ಣವಾಗಿರುವಾಗ ಒಮ್ಮೊಮ್ಮೆ ಸೋತರೂ ಸೋಲಬಹುದು. ಮಾಡುವ ಕೆಲಸವೆಲ್ಲ ಮಾಡಿದ ಮೇಲೂ ಕೆಲಸ ಕೈಗೂಡದೆ ಹೋದರೂ ಚಿಂತೆಯಿಲ್ಲ. ಮನಸ್ಸಿಗೆ ಆನಂದವೇ ಆಗಿರುತ್ತದೆ. ಸಿದ್ಧಿಯೆನ್ನುವುದು ಮಾರ್ಕೆಟ್ಟಿನ ತರಕಾರಿಯ ಹಾಗೆ ! ಕೊಂಚವೂ ಬೇರೆಯಲ್ಲ. ಒಂದು ಸೇರು ಮೆಣಸಿನ ಕಾಯಿ ಬೇಕಾದರೆ ಒಂದು ಆಣೆ ಹತ್ತು ಸೇರಿಗೆ ಹತ್ತಾಣೆ. ಮಣಕ್ಕೆ ಇನ್ನೂ ಹೆಚ್ಚು

ನಮ್ಮ ಪುಸ್ತಕ ಜುಲೈ ೧೯೬೩ ಲಗೋರಿನ ಹಾದಿ' ಲೇಖನ

ಪತ್ರಿಕೆ ಪ್ರಸಾರ ಸಂಖ್ಯೆ ಮುಖ್ಯವೇ ? ಅಲ್ಲ

ನಿಮ್ಮ ಕನ್ನಡದ ಜನ ಇರುವುದು ಅಬ್ಬಬ್ಬಾ ಎಂದರೆ ಒಂದೂವರೆ ಕೋಟಿ. ಅದರಲ್ಲಿ ಓದುಬರಹ ಬಲ್ಲವರು ಬಹುಶಃ ಹತ್ತು ಲಕ್ಷಮಂದಿ. ಅದರಲ್ಲಿ ನಿಮ್ಮ ಪತ್ರಿಕೆ (ನಮ್ಮ ಪುಸ್ತಕ) ಓದುವವರು ಎಷ್ಟುಜನ ? ನಿಮ್ಮಿಂದ ಏನಾದೀತು? ಎನ್ನುವವರು ಇಲ್ಲದೆ ಇಲ್ಲ. ಆದರೆ ಅವರಿಗೆ ನಮ್ಮ ಉತ್ತರ ಇಷ್ಟೆ.

ನೀವು ಗಟ್ಟಿಯಾಗಿ ಕೂಗಿದರೆ ಸಾವಿರಾರು ಜನಕೇಳುತ್ತಾರೆ. ಒಂದು ಲೌಡ್‌ಸ್ಪೀಕರ್ ಇಟ್ಟುಕೊಂಡು ಮಾತನಾಡಿದರೆ ಲಕ್ಷಾಂತರ ಜನ ಕೇಳುತ್ತಾರೆ. ಅದೇ ರೇಡಿಯೋದಲ್ಲಿ ಮಾತಾಡಿದರೆ ಕೋಟ್ಯಾಂತರ ಜನ ಕೇಳುತ್ತಾರೆ. ಹಾಗೆ ನಮ್ಮಲ್ಲಿ ಒಂದು ರೇಡಿಯೋ ಇದೆ. ಅದು ಭೂಮಿಯಲ್ಲಿರುವ ರೇಡಿಯೋಗಳಿಗಿಂತ ಬಲವಾದುದು. ಅದೇ ಈಶ್ವರ. ಅವನು ''ಸರ್ವಸ್ಯಚಾಹರಿ ಹೃದಿಸಂ ನಿವಿಷ್ಟಃ'' ಎಂದು ಹೇಳಿದ್ದಾನೆ. ನಮ್ಮೂರಿನ ಪೋಸ್ಟ್ ಆಫೀಸಿನಲ್ಲಿ ಹಾಕಿದ ಕಾಗದ ನಿಮಗೆ ಬಂದು ಸೇರಿಯೇ ಸೇರುವಂತೆ ನಮ್ಮಲ್ಲಿರುವ ಈಶ್ವರನಿಗೆ ನಾವು ಸಮರ್ಪಿಸಿದ ಪೂಜೆ ನಿಮ್ಮ ಹೃದಯದಲ್ಲಿರುವ ಈಶ್ವರನಿಗೆ ಸಲ್ಲುವುದಿಲ್ಲ ಎಂದರೆ ಹೇಗೆ?

ಆದರಿಂದ ನಮ್ಮಲ್ಲಿರುವ ಸದ್ಭಾವನೆ ಈಶ್ವರಾರ್ಪಿತವಾದರೆ ಅದು ಸರ್ವವ್ಯಾಪಿಯಾಗುವುದೆಂಬ ನಂಬಿಕೆಯಿಂದ ಹೊರಟಿದ್ದೇವೆ. ಗೀತೆಯು ನಿಜವಾದರೆ ಅದು ಸುಳ್ಳಾಗದು.

ನಮ್ಮ ಪುಸ್ತಕ ಜುಲೈ ೧೯೬೦

ಇಂದು ಜನವರ್ಗ ಸುಧಾರಣೆ ಹೇಗೆ?

ಈಗ ನಮ್ಮ ಸ್ವತಂತ್ರ ಭಾರತದಲ್ಲಿ ಪಾಶ್ಚಾತ್ಯ ಸಂಸರ್ಗದಿಂದ ಮನೋಭಾವನೆಗಳೆಲ್ಲ ಪಾಶ್ಚಾತ್ಯರಂತೆಯೇ ಆಗಿವೆ. ಸರ್ವಂ ಖಲ್ವಿದಂ ಬ್ರಹ್ಮ ಎಂಬ ದೃಷ್ಟಿಯಿಂದ ಪಾಶ್ಚಾತ್ಯ ಸಂಸ್ಕೃತಿಯೂ ನಮ್ಮದೇ ಎಂಬ ಅಭಿಮಾನವೇ ಸಾಧುವಾದರೂ ದೇಹವನ್ನಾಶ್ರಯಿಸಿ ಕರ್ಮಮಾಡುವವರಿಗೆ ಉಚ್ಚನೀಚ ಭಾವನೆ ಬಿಡುವುದಿಲ್ಲವಾಗಿ ಭಾರತ ಸಂಸ್ಕೃತಿಯ ವೈಶಿಷ್ಟ್ಯ, ಪರಸಂಸ್ಕೃತಿಯ ಸ್ವರೂಪ, ಸ್ವಭಾವ ಇವುಗಳನ್ನು ತೋರಿಸಿ ಜನವರ್ಗಸುಧಾರಣೆಗೆ ಪ್ರಯತ್ನ

ಮಾಡಬೇಕೆಂಬುದು ನಮ್ಮ ಗುರಿ.

(ನಮ್ಮ ಪುಸ್ತಕ ಜುಲೈ ೧೯೫೧)

ಹಳ್ಳಿತನವೆಂದರೇನು?

ಹಳ್ಳಿತನವೆಂದರೆ ಮನುಷ್ಯನು ತನಗೆ ಬೇಕಾದ ವಸ್ತುಗಳನ್ನು ಹುಟ್ಟಿಸಿಕೊಳ್ಳುವುದು; ಅವುಗಳನ್ನು ತನಗೆ ಬೇಕಾದಷ್ಟು ತಂದಿಟ್ಟುಕೊಳ್ಳುವುದು. ಅದು ಹಳ್ಳಿತನ.ಇದ್ದುದೆಲ್ಲ ಮಾರಿ ಹಣ ಮಾಡಿಟ್ಟು ಕೊಳ್ಳುವುದು ಊರುತನ

ಈಗಿನ ಹಳ್ಳಿಗಳಿಗೆ ಊರುತನ ಬಂದಿದೆ. ಏನು ಸಿಕ್ಕಿದರೂ ಮಾರಿ ಹಣ ಮಾಡಬೇಕೆಂಬ ಬುದ್ಧಿ ಬಂದಿದೆ. ಹಣವು ಎಷ್ಟು ಇದ್ದರೂ ಸಾಲದು. ಮಿಕ್ಕ ವಸ್ತುಗಳು ಬೇಕು ಎನ್ನುವುದಕ್ಕೆ ಮಿತಿಯುಂಟು ಹಣಕ್ಕೆ ಇಲ್ಲ. ಆದರಿಂದ ಈಗಿನ ದುಃಖಕ್ಕೆ ಮಿತಿಯಿಲ್ಲ.

ಹಿಂದಿನ ನಮ್ಮ ಪುಸ್ತಕ ಆಗಸ್ಟ್ ೧೯೨೯

ಸಹಕಾರ ಮಾರ್ಗ

ರಥವನ್ನು ಎಳೆಯುವುದಕ್ಕೆ ಒಬ್ಬರು ಇಬ್ಬರಿಂದ ಸಾಧ್ಯವಿಲ್ಲ. ಅನೇಕರು ಸೇರುತ್ತೇವೆ. ಎಲ್ಲರೂ ಒಂದೊಂದು ಕೈ ಹಾಕಿ ಹಗ್ಗವನ್ನು ಹಿಡಿದೆಳೆದು ರಥವನ್ನೇ ಎಳೆಯುತ್ತೇವೆ. ಯಾರಿಗೂ ಆಯಾಸವಿಲ್ಲ. ಪರ್ವತದಂತಹ ರಥವೂ ಹೊರಟು ಬೀದಿ ಬೀದಿಗಳಲ್ಲಿ ಮೆರೆದು ಒಂದು ಸ್ವಸ್ಥಾನವನ್ನು ಸೇರುತ್ತದೆ.

ಹೀಗೆಯೇ ಯಾರಿಗೂ ಆಯಾಸವಿಲ್ಲದೆ ಊರಿನ ಕೆಲಸವಾದ ತೇರು ಎಳೆದಂತೆ, ಎಲ್ಲರೂ ಸೇರಿ, ಯಾರಿಗೂ ಭಾರವಿಲ್ಲದಂತೆ ಊರಿನ ಕೆಲಸಗಳನ್ನು ನೆರವೇರಿಸುವುದೇ ಸಹಕಾರ ಮಾರ್ಗ!

ಅಕ್ಟೋಬರ್ ನಮ್ಮ ಪುಸ್ತಕ ೧೯೨೮

ಹಳ್ಳಿಗಳ ಶುಕ್ರದೆಸೆಯಾವಾಗ?

ಧನ, ಅನ್ನ ಪ್ರಜೆ ಇವು ಭಾಗ್ಯ ಇವನ್ನು ಬೆಳೆಸುವುದಕ್ಕೆ ಗ್ರಾಮ ಗ್ರಾಮದಲ್ಲಿಯೂ ನಮ್ಮ ಗ್ರಾಮವೆಂದು ಹೆಮ್ಮೆಪಡುವ ಮುಖಂಡನೊಬ್ಬ ಬೇಕು. ಬುದ್ಧಿವಂತನೂ ವಿದ್ಯಾವಂತನೂ ಸತ್ಯವಂತನೂ ಆದ ಆ ಮುಖಂಡನನ್ನು ನಮ್ಮ ಮುಖಂಡನೆಂದು ವಿಶ್ವಾಸದಿಂದ ಅನುಸರಿಸಿ ಹೋಗುವ ಜನರಾಗಬೇಕು. ಆಗ ಹಳ್ಳಿಗಳ ಭಾಗ್ಯಚಕ್ರವು ತಿರುಗುವುದು. ಹಳ್ಳಿಯು ಪಟ್ಟಣದಂತಾಗಬೇಕೆಂದು ಹಂಬಲಿಸುವುದು ತಪ್ಪುವುದು ಆಗ ಹಳ್ಳಿಯ ಶುಕ್ರದೆಸೆ ಆರಂಭ ವಾಗುವುದು.

ಅಕ್ಟೋಬರ್ ೧೯೨೮

ನಮ್ಮ ಪುಸ್ತಕ ನಮ್ಮ ಭಾಗ ಲೇಖನ

ನಮ್ಮವರನ್ನು ನಾವು ಗೌರವಿಸಬೇಕು

ಹಿತ್ತಿಲಿನಗಿಡ ಮದ್ದಲ್ಲ ಎಂಬುದೊಂದು ಗಾದೆಯುಂಟು ನಮ್ಮಲ್ಲಿ. ಹಾಗೇ ನಾವು ನಮ್ಮ

ಕರ್ನಾಟಕದ ಮಹತ್ತ್ವದ ವಿಷಯಗಳನ್ನು ಅಷ್ಟು ಗಮನಿಸುತ್ತಿಲ್ಲ. ನಮ್ಮವರನ್ನು ನಾವು ಸಾಕಾದಷ್ಟು ಆತ್ಮವಿಶ್ವಾಸವಿಲ್ಲ. ಇದು ತಪ್ಪಬೇಕು. ಬಂಗಾಳಿಗಳಲ್ಲಿರುವಂತೆ, ಆಂಧ್ರದಲ್ಲಿರುವಂತೆ, ಮಹಾರಾಷ್ಟ್ರದಲ್ಲಿರುವಂತೆ, ನಮ್ಮಲ್ಲಿಯೂ ಆತ್ಮವಿಶ್ವಾಸಬೆಳೆಯಬೇಕು. ನಮ್ಮವರ ಮಹತ್ವವನ್ನು ಅರಿತು ಅವರನ್ನು ಗೌರವಿಸುವುದರಲ್ಲಿ ನಮ್ಮ ಗೌರವವನ್ನು ನಾವು ಕಾಣಬೇಕು. ನಮ್ಮ ದೇಶದಲ್ಲಿ ಇರುವ ಮಹತ್ತ್ವದ ಸಂಗತಿಗಳನ್ನು ನಾವು ಅಭಿಮಾನದಿಂದ ತಂದು ಅಭಿಮಾನಿಸುವಂತಾಗಬೇಕು.

ನಮ್ಮ ಮಾತು ೧೯೩೮

ಸಣ್ಣ ಮನಸ್ಸಿನ ಜನರ ಪ್ರಭಾವ

ಸಣ್ಣ ಮನಸ್ಸಿನ ಜನ ಬಲವಾದರೆ ಹಿರಿಯರ ಆಟ ಏನೂ ನಡೆಯುವುದಿಲ್ಲ. ಅವರು ಯತ್ನವಿಲ್ಲದೆ ಕೆಡುವರು. ಒಂದು ಆಟಂ (ಬಾಂಬ್) ಸಿಡಿದಾಗ ಲಕ್ಷಾಂತರ ಜನರಿದ್ದ ಒಂದು ನಗರ ಹಾಳಾಯಿತು. ಹಲವರು ಸಣ್ಣಜನ ಸೇರಿ ಹಿರಿಯರನ್ನು ಹಿಡಿದು ಹಾಳುಮಾಡಿದರೆ ಆಗ ಹಾಳಾಗುವುದು ಆಯಾ ಜನ, ಆಯಾ ದೇಶಗಳೇ ಹಾಳಾಗುವುವು.

ನಮ್ಮ ಪುಸ್ತಕ ಜೂನ್ ೧೯೫೦

ಸೇವೆಯ ಹುಚ್ಚು

ಇಂದು ಎಲ್ಲೆಲ್ಲೂ ಪುನರ್ರಚನೆಗಳಾಗುತ್ತಿವೆ. ಆರ್ಥಿಕ ಸಾಮಾಜಿಕ ರಾಜಕೀಯ, ಧಾರ್ಮಿಕ ಕ್ಷೇತ್ರಗಳಲ್ಲಿ ಬದಲಾವಣೆಯಾಗುತ್ತಿದೆ. ಹೊಸದೊಂದು ಜೀವನವು ರೂಪಗೊಳ್ಳುತ್ತಿದೆ. ರೂಪುಗೊಳ್ಳುತ್ತಿರುವ ಹೊಸ ಜೀವನಕ್ಕೆ ತಾನೂಒಂದು ಅಳಿಲು ಸೇವೆಯನ್ನು ಸಲ್ಲಿಸಬೇಕೆಂದು ನಮ್ಮ ಪುಸ್ತಕದ ಆಶೆ.

ಸಂಪಾದಕೀಯ ನಮ್ಮ ಪುಸ್ತಕ ಅಕ್ಟೋಬರ್ ೧೯೩೮

ನಮ್ಮ ಅಧಿಕಾರಿಗಳು

ನಾನೂ ನಾಲ್ಕಾರು ದೇಶಗಳನ್ನು ಸುತ್ತಿ ಬಂದಿದ್ದೇನೆ. ಹೋದ ಹೋದಲ್ಲಿ ಅಧಿಕಾರಿಗಳನ್ನೂ ಖಾಸಗೀ ಜನರನ್ನೂ ಮುಖಂಡರನ್ನೂ ನೋಡಿ ಅಲ್ಲಿನ ಸ್ಥಿತಿ ಗತಿಗಳನ್ನೆಲ್ಲಾ ತಿಳಿಯಲು ಯತ್ನಿಸಿದ್ದೇನೆ. ಅಲ್ಲಿರುವ ಅಧಿಕಾರಿಗಳಿಗಿಂತ ನಮ್ಮವರು ಒಳ್ಳೆಯವರು. ನಮ್ಮ ಮೈಸೂರಿನ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ತಮ್ಮ ಪ್ರಾಣವನ್ನೇ ಆದರೂ ಕೊಡಲು ಸಿದ್ಧರಾಗಿರುವ ಅಧಿಕಾರಿಗಳು ಎಷ್ಟೋ ಜನರು ನಮ್ಮಲ್ಲಿ ಇರುವುದು ನನಗೆ ಗೊತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ರಾಜರ್ಷಿಗಳಾಗಿ ನಮ್ಮ ಶ್ರೇಯಸ್ಸಿಗಾಗಿ ಅದನ್ನು ಮಾಡುತ್ತಿರುವ ಮಹಾ ಪ್ರಭುವು ಮತ್ತಾವ ದೇಶದಲ್ಲಿಂಟು?

ನಮ್ಮ ಪುಸ್ತಕ ಮಾರ್ಚ್ ೧೯೪೦

ಸಂಸ್ಕೃತಿಯ ದೃಷ್ಟಿ

ಸಂಸ್ಕೃತಿಯ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದವು; ಹಾರುವರೆಂದು ಹೆಚ್ಚಿಲ್ಲ, ಹೊಲೆಯರೆಂದು ಕಡಿಮೆಯಿಲ್ಲ. ಕನ್ನಡ

ನಾಡಿನಲ್ಲಿ ನೆಲೆಸಿ, ಕನ್ನಡಿಗರು ನಾವು ಎಂದು ಅಭಿಮಾನ ಪಡುವ ಪ್ರತಿಯೊಂದು ಕುಲವೂನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿ ಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಅಗತ್ಯದ ಕೆಲವಾಗಿದೆ.

ಪ್ರಸ್ತಾಪನೆ ಕರ್ನಾಟಕ ಸಂಸ್ಕೃತಿ

ವೈರ ತ್ಯಾಗ ಮಾಡಿ

ಇಂದು ಜಗತ್ತು ತಾನು ಬಿಟ್ಟ ಕಾಯಿಗಳ ಭಾರದಿಂದ ತಾನೇ ಜಗ್ಗಿರುವ ಕೊಂಬೆಯಂತೆ ತಾನು ಸೃಷ್ಟಿಸಿದ ಮಾರಕಾಸ್ತ್ರಗಳಿಗೆ ತಾನೇ ಹೆದರಿ ಕಿರುಚಿಕೊಳ್ಳುತ್ತಿದೆ. ಇದನ್ನು ಸಮಾಧಾನ ಪಡಿಸಲು ಯಾರಿಂದ ಆದೀತು? ವೈರತ್ಯಾಗ ಮಾಡಿದ ಮಹಾತ್ಮನ ಆಶ್ರಯದಲ್ಲಿ ದುಷ್ಟ ಪ್ರಾಣಿಗಳು ಸಾಧುವಾಗುವುವು ಎಂದು ಪತಂಜಲಿಯು ಹೇಳುತ್ತಾನೆ. ಹಾಗೆ ಭಾರತವೂ ತಾನೂ ವೈರತ್ಯಾಗ ಮಾಡಿ ಇತರರಿಂದ ವೈರತ್ಯಾಗ ಮಾಡಿಸಲಿ.

'ಕರ್ನಾಟಕ ಸಂಸ್ಕೃತಿ' ಪೀಠಿಕೆ

ನಾವೂ ಹಿರಿಯರಾಗಬೇಕು

ನಮ್ಮ ಸಂಸ್ಕೃತಿಯು ದೇಶಾಂತರದ ಸಂಸ್ಕೃತಿಗಿಂತಲೂ ಹಿರಿದು ಎಂಬ ಬಲಿತ ನಂಬಿಕೆಯಿರುವವರಲ್ಲಿ ನಾನೂ ಒಬ್ಬನು. ಹಾಗೆಯೇ ಉತ್ತಮ ಸಾಹಿತಿಯೆಂಬ ಶ್ರೇಷ್ಠ ಕೀರ್ತಿಯು ಲಭಿಸಬೇಕಾದರೆ ಸ್ವಪ್ರಯತ್ನವೆಂಬ ಪುಣ್ಯ ರಾಶಿಯಿರಬೇಕು ಎಂಬುದನ್ನು ಮರೆತವನೂ ಅಲ್ಲ. ಆದರೂ ಪ್ರಪಂಚದ ಶ್ರೇಷ್ಠ ಜ್ಯೇಷ್ಠ ಸಾಹಿತಿಗಳ ಪರಿಚಯದಿಂದ ನಮ್ಮಲ್ಲಿಯೂ ಉತ್ತಮ ಸಾಹಿತ್ಯವು ಬೆಳೆಯಲಿ ಎಂಬ ಆಶೆಯಿಂದ ಬೆಳೆದ ಭಾಷೆಗಳ ಉದ್ಗ್ರಂಗಳನ್ನು ಕನ್ನಡಕ್ಕೆ ಮಾಡಿಕೊಂಡು ನಮ್ಮ ಮನೆಯನ್ನು ತುಂಬಿಕೊಂಡು ನಾವೂ ಹಿರಿಯರಾಗಬೇಕು ಎಂಬ ಸದಿಚ್ಛೆಯಿಂದ ಪರಸಂಸ್ಕೃತಿಯ ಗ್ರಾಸವನಿಕ್ಕಿ ಸದ್ಯಕ್ಕೆ ಕೊರಗಿರುವ ನಮ್ಮ ಸಂಸ್ಕೃತಿಯನ್ನು ಮತ್ತೆ ಬೆಳೆಯಿಸಬೇಕು.

'ವಿಚಾರಶ್ರೀ' ಪೀಠಿಕೆ

ನಮ್ಮ ಆಸ್ತಿತ್ವ ವ್ಯಕ್ತಿತ್ವ ಉಳಿಯಬೇಕಾಗಿದೆ

ಈಗ ಕರ್ಣಾಟಕರು ತಮ್ಮ ಕರ್ನಾಟಕತ್ವವನ್ನು ಗೆದ್ದು ಕೊಳ್ಳಬೇಕಾಗಿದೆ. ಜೀವನದ ಆಶೋತ್ತರ ರೀತಿನೀತಿಗಳಲ್ಲಿ ಭಿನ್ನವಾಗಿ ಸವಗ್ರಾಹಿಯಾದ ಪರ ಸಂಸ್ಕೃತಿಯ ಧಾಳಿಯಲ್ಲಿ ನಮ್ಮ ಅಸ್ತಿತ್ವ ವ್ಯಕ್ತಿತ್ವಗಳು ಕೊಚ್ಚಿ ಹೋಗುತ್ತಿವೆ. ಅದಕ್ಕಾಗಿ ಹಿರಿಯರೂ ಕಿರಿಯರೂ ಸರ್ವರೂ ಹೆಣಗಬೇಕಾಗಿದೆ. ಕುಗ್ಗಿ ಬಗ್ಗುತ್ತಿರುವ ನಮ್ಮ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳುವ ಹಿರಿಯಾಸೆ ಯಿರುವವರು ಹೆಚ್ಚಾಗಬೇಕು.

'ಮಯೂರ' ಕಾದಂಬರಿಯ ಅರಿಕೆಯಿಂದ

ಭಾಗ -೫ ಶಿಕ್ಷಣ

ಮೂರು ಉನ್ನತಿಗಳು

ಕಾಯೋನ್ನತಿ, ಮಾನೋನ್ನತಿ ಮತ್ತು ವಿದ್ಯೋನ್ನತಿ, ಈ ಮೂರು ಉನ್ನತಿತ್ರಯಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿ ಕೊಳ್ಳಬೇಕು.

ಕಾಯೋನ್ನತಿ ತಾಯಿಯಾದವಳು ಮಗುವಿಗೆ ಮೊಲೆಯುಣಿಸುವಾಗ ಕೊಡುವ ಸಂಸ್ಕಾರದಂತೆ ಶರೀರದ ಬಗೆಗೆ ಕಾಳಜಿವಹಿಸುವುದು ಕಾಯೋನ್ನತಿ ಮಾನೋನ್ನತಿ ಪ್ರಮಾಣವರಿತ ಪ್ರಜ್ಞೆ. ಉದಾಹರಣೆಗೆ ಸೌದೆ ಬೇಕೆನ್ನುವವನು ಬೆರಳುದಪ್ಪದ ಮರವನ್ನು ಕಡಿಯುವುದಿಲ್ಲ ಸಮಿತ್ತುಗಳನ್ನು ಬೇಕೆನ್ನುವವನು ದೊಡ್ಡ ಕೊಂಬೆಯನ್ನು ಕಡಿಯುವುದಿಲ್ಲ. ಅದರಂತೆಯೇ ತನ್ನ ಸ್ಥಾನ ಅಂತಸ್ತುಗಳಿಗೆ ತಕ್ಕುದನ್ನು ಬಿಟ್ಟು ಬೇರೆ ಏನನ್ನೂ ಮಾಡುವುದಿಲ್ಲವೆಂಬ ಹಠವೇ ಮಾನೋನ್ನತಿ. ವಿದ್ಯೋನ್ನತಿ ಮೂರನೆಯ ತತ್ವ. ಕಾಯೋನ್ನತಿಯಲ್ಲಿ ದೇಹವನ್ನು ಕುರಿತಂತೆ. ಮಾನೋನ್ನತಿಯಲ್ಲಿ ಮನಸ್ಸನ್ನು ಲಕ್ಷೀಕರಿಸಿದಂತೆ ವಿದ್ಯೋನ್ನತಿಯಲ್ಲಿ ಬುದ್ಧಿಯನ್ನು ಸೂಕ್ಷ್ಮಪಡಿಸಬೇಕು. ಬದುಕಿನ ಹಾದಿಯ ಅಂತ್ಯವನ್ನು ತಿಳಿಸಿಕೊಡುವ ತತ್ತ್ವವೇ ವಿದ್ಯೋನ್ನತಿ. ಹೂವಿನಿಂದ ಹೂವಿಗೆ ಹಾರಿ ಅದರಲ್ಲಿರುವ ಮಧುವನ್ನು ಸಂಗ್ರಹಿಸುವ ದುಂಬಿಯಂತೆ ನಾವು ಅಮೃತವನ್ನು ಹುಡುಕಬೇಕು. ಆ ಸಾಮರ್ಥ್ಯವನ್ನು ಕೊಡುವುದೇ ವಿದ್ಯೆ. ಅಂತ ವಿದ್ಯೆಯನ್ನು ಸಾಧಿಸುವುದೇ ವಿದ್ಯೋನ್ನತಿ.

ದೇವುಡು ಗ್ರಂಥ
ಸಾ. ಶಿ ಮರುಳಯ್ಯ

ಸ್ಕೂಲ್ ಸೊಸೈಟಿಗಳು

ಮಿಡಲ್ ಮತ್ತು ಹೈಸ್ಕೂಲುಗಳಲ್ಲಿ ಕೋ ಆಪರೇಷನ್ ವಿಚಾರವಾಗಿ ಹೇಳಿ ಕೊಟ್ಟು ಮಾಡಿ ಕಲಿಸುವುದು ಒಳ್ಳೆಯದು. ಮೊದಮೊದಲು ಶಾಲೆಯಲ್ಲಿ ಬೇಕಾಗುವ ಸಾಮಾನುಗಳನ್ನು ಮಾತ್ರ ತಂದು ಮಾರುವುದರಿಂದ ಆರಂಭಿಸಿ ವಿದ್ಯಾರ್ಥಿಗಳು ಸ್ವತಂತ್ರಿಸಿ ಯಾವುದಾದರೊಂಧು ಹೊಸ ಕೆಲಸವನ್ನು ಮಾಡುವುದಕ್ಕೆ ಸಹಾಯ ಕೊಡುವವರೆಗೂ ಎಲ್ಲವನ್ನು ಈ ಸ್ಕೂಲ್ ಸೊಸೈಟಿಗಳಿಂದ ಮಾಡಿಸಲು ಸಾಧ್ಯ ! ಈ ವೇಳೆಗಾಗಲೇ ಕೆಲವು ಶಾಲೆಗಳಲ್ಲಿ ಹೀಗೇಕೆ ಆಪರೇಟಿವ್ ಸೊಸೈಟಿಗಳಾಗಿವೆ. ಈ ಸೊಸೈಟಿಗಳು ಬಾಳುವುದೂ ಸಾಯುವುದೂ ವ್ಯಕ್ತಿಗಳನ್ನು ಅವಲಂಬಿಸಿವೆ. ಸರಿಯಾದವರು ಚುನಾಯಿತರಾಗಿ ಬಂದರೆ ಸೊಸೈಟಿ ಗೆದ್ದಿತು. ಇಲ್ಲದಿದ್ದರೆ ಅದು ಬಾಳುವುದು ಸಂದೇಹ! ಈ ತತ್ವವನ್ನು ತಿಳಿಯಿಸಲು ಸೊಸೈಟಿಗಳು ಬಹಳ ಸಹಾಯಮಾಡುವುದು. ಆದರಿಂದ ಶಾಲೆ ಶಾಲೆಗೂ ಇಂತಹ ಸೊಸೈಟಿಗಳು ಬೇಕು.

ನಮ್ಮ ಪುಸ್ತಕ ಅಕ್ಟೋಬರ್ ೧೯೩೮

ಜ್ಞಾನ-ವಿಜ್ಞಾನ

ದೇವರು ಎಲ್ಲೆಲ್ಲಿಯೂ ಇರುವನು ಎಂದು ತಿಳಿಯುವುದು ಜ್ಞಾನ. ದೇವರನ್ನು ಎಲ್ಲೆಲ್ಲಿಯೂ ಕಾಣುವುದು ವಿಜ್ಞಾನ. ಸಕ್ಕರೆ ಸಿಹಿಯಾಗಿರುವುದು ಓದಿ ತಿಳಿಯುವುದು ಜ್ಞಾನಸಕ್ಕರೆಯನ್ನು ತಿಂದು ಹೌದು ಸಿಹಿಯಾಗಿದೆ ಎನ್ನುವುದು ವಿಜ್ಞಾನ.

ನಮ್ಮ ಪುಸ್ತಕ ೧೯೫೦

ನಮ್ಮ ಕರ್ತವ್ಯವೇನು?

ನಮಗೆ ಸಂಬಳ ಕೊಡುತ್ತಿರುವವರ ಕೈ ಗೊಂಬೆಗಳಾಗಿ ಸಂತೆಗೆ ಮೂರು ಮೊಳ ನೇಯ್ದು ಮನೆಗೆ ಹೋಗುವುದೇ? ಅಥವಾ ಮುಂದಿನ ಭವ್ಯ ಭವಿಷ್ಯದ ಬೀಜಗಳನ್ನು ಬಿತ್ತಿ ಬರುವ ಬೆಳೆಯನ್ನು ಯಾವ ಪುಣ್ಯಾತ್ಮರಾದರೂ ಕೊಯ್ದು ಕೊಳ್ಳಲಿ ಎನ್ನುವ ಯೋಗೀಶ್ವರನಾಗುವುದೆ? ಇದು ಉಪಾಧ್ಯಾಯರು ಇಂದು ಬಗೆಹರಿಸಬೇಕಾಗಿರುವ ಸಮಸ್ಯೆ ! ನಾವು ಇಂದು ನಮ್ಮ ಕರ್ತವ್ಯವೇನುಎಂಬುದನ್ನು ಗೊತ್ತು ಮಾಡಿಕೊಳ್ಳಬೇಕಾಗಿದೆ.

ನಮ್ಮ ಪುಸ್ತಕ ಅಕ್ಟೋಬರ್ ೧೯೩೮

ಬಾಳಿಗೆ ನಾಲ್ಕು ಸೂತ್ರಗಳು

ಎಲ್ಲದಕ್ಕಿಂತ ಹೆಚ್ಚಾಗಿ ನಕ್ಕು ನಗಿಸುವ ಜಾಣರಾಗಿ ಬಾಳಿ ನಿಮ್ಮ ವಿದ್ವತ್ತಿನ ಪ್ರಭಾವದಿಂದ ಜಗತ್ತಿನ ಅಂಧಕಾರವು ಕಿಂಚಿತ್ತಾದರೂ ನಿವಾರಣೆಯಾಗಿ ಜ್ಞಾನಜ್ಯೋತಿ ಬೆಳಗುವಂತಾಗಲಿ.

ನಿಮ್ಮ ಸೇವಾಕ್ಷೇತ್ರ ವಿಸ್ತಾರವಾಗಲಿ ಸಂಕುಚಿತ ಮನೋಭಾವ ಯಾವ ಕಾಲಕ್ಕೂ ಯಾವ ಕಾರಣದಿಂದಲೂ ನಿಮ್ಮನ್ನು ಮಲಿನಮಾಡದೇ ಇರಲಿ

೧೯೫೨ರಲ್ಲಿ ಸಿದ್ಧ ಪಡಿಸಿದ ಭಾಷಣದಿಂದ

ವಿಶ್ವಜಿತ್‌ಯಾಗ

ವಿಶ್ವಜಿದ್ಯಾಗಮಾಡಿ ಸ್ವರ್ಗವನ್ನೂ ಗೆಲ್ಲುವೆನೆಂದ ಭಾರತ, ಈಗ ಇಂದಿನ ಜಗತ್ತಿನಲ್ಲಿ ಇನ್ನೊಂದು ರೂಪವಾಗಿ ವಿಶ್ವಜಿತ್ ಯಾಗಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿಯಾದರೂ ವಿಶ್ವಶಾಂತಿಯನ್ನು ಸಂಪಾದಿಸ ಬೇಕಾಗಿದೆ.

ಹಿಂದೆ ಬೌದ್ಧ ಯುಗದಲ್ಲಿ ಬೌದ್ಧವಿದ್ವಾಂಸರು ವೈದಿಕ ವಿದ್ವಾಂಸರನ್ನು, ಹುಡುಕಿಕೊಂಡು ಹೋಗಿ " ಗೆದ್ದು ನಿಮ್ಮಂತೆ ಮಾಡಿಕೊಳ್ಳುವಿರಾ? ಸೋತು ನಮ್ಮಂತೆ ಆಗುವಿರಾ? "ಎಂದು ಛಲದಿಂದ ಮಲೆಯುತ್ತಿದ್ದರಂತೆ ! ಈಗ ಮತ್ತೆ ಅಂತಹ ಸ್ಥಿತಿ ಬಂದಿದೆ.

೧೯೫೨ ರ ಸಿದ್ಧ ಪಡಿಸಿದ ಭಾಷಣದಿಂದ

ಮಕ್ಕಳು ಎಷ್ಟು ಹೊತ್ತು ಮಲಗಿದರೂ ಚಿಂತೆಯಿಲ್ಲ

ಬೆಳಗಿನ ಝಾವದ ನಿದ್ದೆಯು ಎಷ್ಟೇ ಗಾಢವಾಗಿದ್ದರೂ ಆಗ ಮನಸ್ಸಿಗೆ ಒಂದು ತೆರದ ಆಧ್ಯಾತ್ಮಿಕ ಭಾವನೆಯಿರುವುದು. ಆ ಭಾವನೆಯನ್ನು ಪುಟಗೊಳಿಸುವುದಕ್ಕಾಗಿಯೇ ಹಿಂದಿನವರು

ಉದಯರಾಗಗಳನ್ನು ಹಾಡಿ ಕೊಳ್ಳುತ್ತಿದ್ದುದು. ಆ ಸಣ್ಣ ರಾಗದ ಉದಯರಾಗದ ಹಾಡು, ಎದ್ದವರ ಮನಸ್ಸಿಗೆ ಹೇಗೆ ತೋರಿದರೂ ಮಲಗಿದವರ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಮಾಡುವುದು. ತಿರುಗಿ ನಿದ್ರೆಯು ಬಲಿತು ಮಕ್ಕಳು ಇನ್ನೂ ಅಷ್ಟು ಹೊತ್ತು ಮಲಗಿದರೂ ಚಿಂತೆಯಿಲ್ಲ ಅಂತೂ ಬೆಳಗಿನ ಹೊತ್ತಿನಲ್ಲಿ ಮಕ್ಕಳ ಮನಸ್ಸನ್ನು ಬೆಳೆಸುವುದಕ್ಕಾಗಿ ಉದಯರಾಗಗಳನ್ನು ಹಾಡಬೇಕು.

ಇದು ಸಾಧ್ಯವಿಲ್ಲವೇನು? 91 (೬೨)

ಪ್ರಾಥಮಿಕ ಶಾಲೆಗಳಲ್ಲಿ ಶಾರದೆಯ ಪ್ರಸಾದವನ್ನು ತಲೆಗೆ ತುಂಬುವುದೂ ಬಾಯಲ್ಲಿ ಬೀಜಾಕ್ಷರವನ್ನು ಬರೆಯುವುದು ಸಾಧ್ಯವಿಲ್ಲ. ನಿಜ, ಆದರೆ ಆ ಮಕ್ಕಳಿಗೆ ಶಿಸ್ತಿನ ಮೇಲಿನ ಪ್ರೇಮ, ಶುಚಿ ರುಚಿಗಳಲ್ಲಿ ವಿಶ್ವಾಸ, ಗುಂಪಿನ ಮೇಲಿನ ಅಭಿಮಾನ, ಸಂತೋಷವಾಗಿ ನಗು ನಗುತ್ತಿರುವುದು ಇವುಗಳನ್ನು ಕಲಿಸಲು ಸಾಧ್ಯವಿಲ್ಲವೇನು?

ನಮ್ಮ ಪುಸ್ತಕ ಅಕ್ಟೋಬರ್ ೧೯೩೮

ಭವಿಷ್ಯತ್ತಿನ ದೃಷ್ಟಿ ಇರಲಿ ಶಿಕ್ಷಕರಿಗೆ 92 (೬೩)

ಮುಂದೆ ಹತ್ತಿಪ್ಪತ್ತು ವರ್ಷಗಳಲ್ಲಿ ನಡೆಯಬೇಕಾಗಿರುವ ನಡೆಯಲಿರುವ ಭಾರಿ ಭಾರಿ ಬದಲಾವಣೆಗಳನ್ನು ಕುರಿತು ಚಿಂತಿಸಿ ಇಂದಿನ ನಮ್ಮ ಕರ್ತವ್ಯವನ್ನು ತಿದ್ದಿಕೊಳ್ಳೋಣ. ಔರಂಗಜೇಬನು ತನ್ನ ವಿದ್ಯಾ ಗುರುವಾದ ಮುಲ್ಲಾನಿಗೆ ಹೇಳಿದುದನ್ನು ನೆನೆಸಿಕೊಂಡು ಇಂದಿನ ದಿನ ನಮ್ಮ ವಿದ್ಯಾರ್ಥಿಗಳಾಗಿರುವವರು ನಾಳಿನದಿನ ನಮ್ಮ ಮುಂದೆ ನಿಂತು ಕೊಂಡು ''ಏನ್‌ಸಾರ್! ಇಂದಿಗೆ ಬೇಕಾದುದು ಏನನ್ನು ನಮಗೆ ನೀವಂದು ಹೇಳಿಕೊಟ್ಟಿರಿ'' ಎಂದರೆ ತಲೆ ತಗ್ಗಿಸದಂತೆ ಏನಾದರೊಂದು ಮಾಡೋಣ.

ನಮ್ಮ ಪುಸ್ತಕ ಅಕ್ಟೋಬರ್ ೧೯೩೮

ಸತ್ಪ್ರಜೆಗಳನ್ನು ನಿರ್ಮಿಸುವ ಹೊಣೆ 93 (೬೪)

ಉಪಾಧ್ಯಾಯರು ಮಕ್ಕಳಿಗೆ ಪಾಠ ಹೇಳಿದರೆ ತಮ್ಮ ಕಾರ್ಯವು ಮುಗಿಯಿತು. ತಾವು ಕೃತಕೃತ್ಯರಾದೆವು ಎಂದು ತಿಳಿದುಕೊಳ್ಳುವ ಕಾಲವು ಕಳೆದುಹೋಯಿತು. ಭರತಖಂಡದಲ್ಲಿ ಕಳೆದು ೫೦ ವರ್ಷಗಳಿಂದ ಹೊಗೆಯಾಡಿ ಕಿಚ್ಚೆದ್ದು, ನೊಂದಿ ಮತ್ತೆ, ಪುಟಗೊಂಡ ರಾಜಕೀಯ ಚಳುವಳಿಯ ಶಿಖೆಯು ನಮ್ಮ ಸಂಸ್ಥಾನಕ್ಕೂ (ಮೈಸೂರು ದೇಶಕ್ಕೆ) ತಟ್ಟಿ ಇಲ್ಲಿ ಇನ್ನೊಂದು ರಾಜಕೀಯ ಯುಗವು ಪ್ರಾರಂಭವಾಗುವುದರಲ್ಲಿದೆ. ಆಗ ಆ ಸ್ವಾತಂತ್ರ್ಯ ಯುಗದ ದಿನಗಳು ಬಂದಾಗ ಪ್ರಜಾಮುಖಂಡರಾಗಿ ಬಾಳುವ ಮಹನೀಯರು ಇಂದು ಮಕ್ಕಳಾಗಿ ಉಪಾಧ್ಯಾಯರಾದ ನಮ್ಮ ಮುಂದೆ ಕುಳಿತಿದ್ದಾರೆ. ಅವರನ್ನು ಮುಂದಿನ ಸ್ವಾತಂತ್ರ್ಯ ದಿನಗಳ ಸತ್ಪ್ರಜೆಗಳನ್ನು ಮಾಡುವ ಸುಯೋಗವು ನಮ್ಮ ಕೈಯಲ್ಲಿದೆ.

ನಮ್ಮ ಪುಸ್ತಕ ಅಕ್ಟೋಬರ್ ೧೯೩೮

ಉಪಾಧ್ಯಾಯನ ಹಿರಿಮೆ

ಮಾತನ್ನು ಉಪಯೋಗಿಸುವವರಲ್ಲಿ ನಾಲ್ಕು ವರ್ಗ: ಮಾಂತ್ರಿಕ, ಉಪನ್ಯಾಸಕ, ನಟ ಉಪಾಧ್ಯಾಯ.

ಮಾಂತ್ರಿಕನು ಹಲವು ಲಕ್ಷ ಸಲ ಜಪ ಮಾಡಿ ಮಂತ್ರವನ್ನು ವಶಪಡಿಸಿಕೊಂಡಿರುತ್ತಾನೆ. ಉಪನ್ಯಾಸಕರು ತಾನು ಹೇಳಬೇಕೆಂದಿರುವ ವಿಷಯವನ್ನು ನಾನು ರೂಪಗಳಲ್ಲಿ ರೂಪಕಗಳಲ್ಲಿ ಹೇಳಬಲ್ಲವನಾಗಿ ಹಲವು ಮಾತುಗಳಿಂದ ಒಂದು ವಿಷಯವನ್ನು ಸ್ಥಾಪಿಸಬಲ್ಲ ಸಾಮರ್ಥ್ಯ ಸಂಪಾದಿಸಿಕೊಂಡಿರುತ್ತಾನೆ. ನಟನು ಸತತ ಪ್ರಯತ್ನದಿಂದ ಬೇರೊಬ್ಬರು ಬರೆದಿರುವ ಇನ್ನೊಬ್ಬರ ಮಾತನ್ನು ತನ್ನ ಸ್ವಂತ ಮಾಡಿಕೊಂಡು ಇತರರಿಗೆ ಕೊಂಚವೂ ಅನುಮಾನ ಬರದಂತೆ ನುಡಿಯುವುದನ್ನು ಕಲಿತಿರುತ್ತಾನೆ. ಉಪಾಧ್ಯಾಯನು ಇದಿಷ್ಟನ್ನೂ ಮಾಡಬೇಕು. ಉಪಾಧ್ಯಾಯನು ಮಾಂತ್ರಿಕನಂತೆ ಚಿಂತಿಸಿ ಚಿಂತಿಸಿ ವಿಷಯವನ್ನು ಸ್ವಾಧೀನ ಪಡಿಸಿಕೊಂಡಿರಬೇಕು.

ಉಪನ್ಯಾಸಕನಂತೆ ವಿಷಯವನ್ನು ಹಲವಾರು ವಿಧ್ಯದಲ್ಲಿ ವಿದ್ಯಾರ್ಥಿಗಳ ಮನಸ್ಸಿಗೆ ಹಿಡಯುವಂತೆ ಚಿತ್ರ ಚಿತ್ರವಾಗಿ ಹೇಳಬಲ್ಲವನಾಗಬೇಕು; ನಟನಂತೆ ತನ್ನ ವ್ಯಕ್ತಿತ್ವವನ್ನು ಮರೆಮಾಡಿ ವಿಷಯವು ತಾನೇ ತಾನಾಗಿಎದುರುಬಂದು ನಿಂತು ನಟ ಸಾಮಾಜಿಕರಿಬ್ಬರಲ್ಲೂ ಭಾವಸಾಮ್ಯವಾಗುವಂತೆ ನಟಿಸಿದ ಹಾಗೆ ತನಗೂ ತನ್ನ ವಿದ್ಯಾರ್ಥಿಗೂ ಭಾವಸಾಮ್ಯವಾಗಿ ವಿಷಯ ಸಾಮ್ಯವಾಗುವ ಹಾಗೆ ನಟಿಸಬೇಕು.

ನಮ್ಮ ಪುಸ್ತಕ ೧೯೫೧

ಮಕ್ಕಳಿಗೊಂದು ಸಣ್ಣ ಪಾಠ

ಮಕ್ಕಳಿಗೆ ಮೊದಲಿಂದಲೂ ಕಸವನ್ನು ಬಿಸಾಡುವುದರ ವಿಚಾರವಾಗಿ ಪಾಠ ಕಲಿಸಬೇಕು. ಮನೆಯಲ್ಲಿ ಒಂದು ಕಡೆ ಒಂದು ಪುಟ್ಟಿಯನ್ನು ಇಟ್ಟು, ಮನೆಯಲ್ಲಿ ಎಲ್ಲಿ ಕಸ ಬಿದ್ದರೂ ಆ ಪುಟ್ಟಿಯಲ್ಲಿ ಹಾಕಬೇಕು, ಆ ಪುಟ್ಟಿಯ ಕಸವನ್ನು ತಿಪ್ಪೆಗೆ ಹಾಕಬೇಕು ಎಂಬ ಒಂದು ಸಣ್ಣಪಾಠವನ್ನು ತಾಯಿಯು ಇಂದಿನ ಮಕ್ಕಳಿಗೆ ಕಲಿಸಿದರೆ ಮುಂದಿನ ತಲೆಮಾರಿನವರಿಗೆ ಉಪಕಾರ ಮಾಡಿದಂತಾಗುವುದು.

ಊರಿನ ನೈರ್ಮಲ್ಯ, ಆರೋಗ್ಯಗಳನ್ನು ಕಾಪಾಡುವ ಭಾರ ಎಲ್ಲರದು. ಎಲ್ಲರಿಗೂ ಸೇರಿದುದು ಯಾರೂ ಅದು ನನ್ನ ಕೆಲಸವಲ್ಲ ಎನ್ನಬಾರದು.

೧೯೩೮ ಅಕ್ಟೋಬರ್ ನಮ್ಮ ಪುಸ್ತಕ

ತಾಯಂದಿರ ಅಪರಾಧ

ಮನೆಯಲ್ಲೆಲ್ಲ ಕಸವನ್ನು ಗುಡಿಸುತ್ತಾರೆ ಅದೆಲ್ಲವನ್ನು ತಂದು ಬೀದಿಗೆ ಎಸೆದುಬಿಡುತ್ತಾರೆ. ಮನೆಯನ್ನು ಗುಡಿಸುವಾಗ ಇರುವ ಶುಚಿಯ ಯೋಚನೆ ಗುಡಿಸಿದ ಕಸವನ್ನು ತಂದು ಬೀದಿಗೆಸೆಯುವಾಗಲೂ ಇರಬೇಕಲ್ಲವೇ? ನಮ್ಮ ಮನೆಯು ಶುಚಿಯಾಗಿರಬೇಕು ಎನ್ನುವಂತೆ ನಮ್ಮ ಬೀದಿಯೂ ಶುಚಿಯಾಗಿರಬೇಕು ಎಂದು ಪ್ರತಿಯೊಬ್ಬರೂ ಪ್ರಯತ್ನಿಸಬೇಕು. ಮಕ್ಕಳ

ತಾಯಿಯರಂತೂ ಈ ವಿಚಾರದಲ್ಲಿ ಬಹಳ ಅಪರಾಧ ಮಾಡುತ್ತಾರೆ. ಮಕ್ಕಳನ್ನು ಹೇಸಿಗೆ ಹೊರಗೆ ಮನೆಯ ಬಾಗಲಲ್ಲಿ ಕುಳ್ಳಿರಿಸುವುದು, ಮಕ್ಕಳ ಹೊಲಸನ್ನು, ತಂದು ಬೀದಿಗೆಸೆದು ಬಿಡುವುದು. ಇದು ಎಲ್ಲ ತಾಯಿಯರ ಪದ್ಧತಿಯಾಗಿದೆ. ನಮ್ಮ ಮನೆಯಲ್ಲಿ ಇರಕೂಡದೆಂಬ ಆ ಹೊಲಸು ನಮ್ಮ ಬೀದಿಯಲ್ಲೇಕೆ? ಹಾಗಾದರೆ ಆ ಹೊಲಸನ್ನು ಏನು ಮಾಡಬೇಕು ಅದಕ್ಕಾಗಿ ಬೀದಿಗಳಲ್ಲಿ ಇಟ್ಟಿರುವ ಕಸದ ಗುಂಡಿಗಳಲ್ಲಿಯೇ ಹಾಕಬೇಕು.

ನಿರಕ್ಷರತೆ - ಲೋಕಶತ್ರು

ಇಂಡಿಯಾದಲ್ಲಿ ಮೊದಲನೆಯ ಲೋಕಶತ್ರುವು ನಿರಕ್ಷರತೆ. ಇದನ್ನು ಸರ್ವ. ಪ್ರಕಾರದಿಂದಲೂ ಎದರಿಸಬೇಕು. ಜನ, ಧನ, ಹೊಸ ಸಾಧನಗಳನ್ನೆಲ್ಲ ಬಳಸಿ ಎದುರಿಸಬೇಕು. ಇನ್ನೂ ಈ ಅಜ್ಞಾನ ದುರ್ಗವನ್ನು ನಿರ್ಮೂಲಮಾಡಲು ತಕ್ಕಷ್ಟು ಪ್ರಯತ್ನಗಳಾಗಿಲ್ಲವೆಂದು ನನಗೆ ತೋರುತ್ತದೆ. ಈ ನಿರಕ್ಷತೆಯನ್ನು ನಿವಾರಿಸಿದರೆ ಸಾಹಿತಿಗಳ ವರ್ಗಕ್ಕೆ ಉದ್ಯೋಗವನ್ನು ಒದಗಿಸಿದಂತಾಗುತ್ತದೆ. ಓದಿದ ಉತ್ತಮ ವರ್ಗದವರು ಅನೇಕರು ನಿರುದ್ಯೋಗಿ ಗಳಾಗಿರುವುದಕ್ಕೆ ಓದದೇ ಇರುವವರಿಗೆ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ತಕ್ಕಷ್ಟು ಶಕ್ತಿಯಿಲ್ಲದಿರುವುದೇ ಕಾರಣ. ಕನ್ನಡಿಗರು ಉದ್ಧಾರವಾಗುವುದಕ್ಕೆ ಕನ್ನಡವೇ ಸಾಧನ.

ನಮ್ಮ ಪುಸ್ತಕ ೧೯೩೯ ಆಗಸ್ಟ್

ಜೋಗುಳದ ಹಾಡು

ಜೋಗುಳದ ಹಾಡಿನಲ್ಲಿ ಅರ್ಥವಿರಲಿ ಇಲ್ಲದಿರಲಿ, ಭಾವವಿದೆ. ಹಾಗೆ ಭಾವಪೂರ್ಣವಾದ ಹಾಡುಗಳಿಂದ ತಟ್ಟಿ ಮಲಗಿಸುವಾಗ ಮಗುವಿನ ನಿದ್ದೆಯು ಬರಿಬರಿಯ ನಿದ್ದೆಯಾಗದೆ ಭಾವ ಪೂರ್ಣವಾದ ನಿದ್ದೆಯಾಗುವುದು.

ಮಕ್ಕಳೂ ಹಾಡುಗಳೂ
ನಮ್ಮ ಪುಸ್ತಕ ಆಗಸ್ಟ್ ೧೯೩೯

ಅರ್ಕಾವತ್ತು ಎಲ್ಲಿ ಬರಬೇಕು?

ಅರಕಾವತ್ತು ಪ್ರಾಕೃತದಿಂದ ಬಂದಿರುವ ಒಂದು ವಿಚಿತ್ರ. ಸಂಸ್ಕೃತದಲ್ಲಿ ವನ್ಹಿ ಎಂದು ಬರೆದು ವಹ್ನಿ ಎಂದು ಹೇಳುವಂತೆ, ಮೊದಲು ಬರಬೇಕಾದ 'ರ್' ಸ್ವನದ ಚಿಹ್ನೆಯನ್ನು ಬಾಯಲ್ಲಿ ಚಿನ್ಹೆ ಬರವಣಿಗೆಯಲ್ಲಿ ಚಿಹ್ನೆ) ಅಕ್ಷರವನ್ನು ಬರೆದು ಅದಕ್ಕೆ ಪರವಾಗಿ ಬರೆಯುವುದು ವಾಡಿಕೆಯಲ್ಲಿ ಬಂದಿದೆ. ಸೂರ್ಯ ಎಂದು ಬರೆಯಬೇಕಾದುದನ್ನು ಸೂಯ್ ರ ಎಂದು ಬರೆದು ಸೂರ್ಯ ಎಂದು ಓದುತ್ತೇವೆ. (ಸಂಸ್ಕೃತದಲ್ಲಿ) ಹೀಗೆ ಮಾಡುವಾಗ ಪರವಾಗಿ ಬರುವ ಈ ವೊತ್ತನ್ನು ಅಕ್ಷರವೆಲ್ಲ ಬರೆದು ತಾನೇ ಬರೆಯಬೇಕು? ಅದು ಬಿಟ್ಟು ಅಕ್ಷರದ ನಡುವೆ ತರುವುದೆಂತು?

ಈ ದೃಷ್ಟಿಯಿಂದ ಧರ್ಮೋಪದೇಶ ಎಂಬಲ್ಲಿ 'ರ್ವೊ' ಎಂದು ಬರೆಯಬೇಕೇ ವಿನಾ ರ್ಮೋ ಎಂದು ಬರೆಯಬಾರದು. ಇಲ್ಲಿ 'ರ್ಮೊ ' ಎಂದು ಮೊದಲಾಗಿ ಅದಕ್ಕೆ ದೀರ್ಘ ಬಂದು 'ರ್ಮೋ' ಎಂದು ಆಗಲಿಲ್ಲ. ಮ್ ಮೂಲಾಕ್ಷರ ಅದಕ್ಕೆ ಓ ಎಂಬ ಸ್ವರ ಸೇರಿ ಅದು ಮೋ ಆಯಿತು. ಅದು

'ರ್' ಗೆ ಪರವಾಗಿ ಬಂದು ರ್ವೋ ಆಯಿತು. ಅದನ್ನು ನಮ್ಮ ವಿಚಿತ್ರ ಸಂಪ್ರದಾಯಕ್ಕನುಸಾರವಾಗಿ ಬರೆಯುವಾಗ ರ್ವೋ ಮಾಡಿದೆವು. ಆದರಿಂದ ರ್ವೋ ಎಂದು ಬರೆಯಬೇಕೇ ಹೊರತು ರ್ವೋ ಎಂದು ಬರೆಯಬಾರದು

ಯಾವುದು ಸರಿ? ನವೆಂಬರ್ ೧೯೩೬ ನಮ್ಮ ಪುಸ್ತಕ

ಸೈನ್ಸ್ ಮತ್ತು ಜನ

ಸೈನ್ಸಿನ ಹೊಸ ಹೊಸ ಸಿದ್ಧಾಂತಗಳು ಒಂದೊಂದು ಹಿಂದಿನ ಸಿದ್ಧಾಂತಗಳನ್ನೆಲ್ಲ ತಳಕೆಳಗು ಮಾಡಿ ಮಾಡಿಬರುತ್ತಿವೆ. ಜನ ಸಾಮಾನ್ಯವಾಗಿ ಏನಾದರೂ ಒಂದನ್ನು ಒಪ್ಪಿಕೊಂಡರೆ ಅದನ್ನು ಬೇಗ ಬಿಡುವುದಿಲ್ಲ. ಹಾಗೆ ತಾನು ಒಪ್ಪಿದ ಸಿದ್ಧಾಂತವನ್ನು ಬಿಡದ ಜನ, ತಪಸ್ಸು ಮಾಡಿ ಹೊಸ ಸಿದ್ಧಾಂತವನ್ನು ತರುವ ವಿದ್ವಾಂಸರು, ಇವರಿಬ್ಬರಿಗೂ ಜೋಡಿ ಸರಿಯಾಗಿಲ್ಲ. ಎತ್ತು ಏರಿಗೆ ಎಳೆಯಿತು. ಕೋಣ ನೀರಿಗೆ ಎಳೆಯಿತು ಎನ್ನುವಂತೆ ಆಗಿದೆ.

ನಮ್ಮ ಪುಸ್ತಕ ಜೂನ್ ೧೯೫೩

ಅನುಬಂಧ ೧ : ದೇವುಡು ಅವರ ಜೀವನದ ಪ್ರಮುಖ ಘಟನೆಗಳು

೨೯-೧೨-೧೮೯೬	ಜನನ ಮೈಸೂರು
೧೯೧೨	ಶ್ರೀಮತಿ ಗೌರಮ್ಮನವರೊಡನೆ ವಿವಾಹ
೧೯೨೨	ಎಂ.ಎ. ಮೈಸೂರು ವಿಶ್ವವಿದ್ಯಾಲಯ
೧೯೨೫	ಮುಖ್ಯೋಪಾಧ್ಯಾಯರು ಸದ್ವಿದ್ಯಾ ಪಾಠಶಾಲೆ, ಮೈಸೂರು
೧೯೨೮	ಮುಖ್ಯೋಪಾಧ್ಯಾಯರು ಆರ್ಯವಿದ್ಯಾಶಾಲೆ, ಬೆಂಗಳೂರು
೧೯೨೯	ಕರ್ನಾಟಕ ಫಿಲ್ಮ್ ಕಾರ್ಪೊರೇಷನ್ ಸ್ಥಾಪನೆ
	ಸುಲ್ತಾನ್ ಪೇಟೆ ಗಣೇಶ ಸ್ಕೂಲ್ ಗಲಾಟೆ-ಭಾಗವಹಿಸಿದ್ದು
	ಸಂಪಾದಕರು-ಮಕ್ಕಳ ಪುಸ್ತಕ
೧೯೩೦	ಮೈಸೂರು ಹಿಂದಿ ಪ್ರಚಾರ ಸಂಸ್ಥೆ ಸ್ಥಾಪನೆಯಲ್ಲಿ ಭಾಗವಹಿಸಿದ್ದು
	`ರಂಗಭೂಮಿ' ಮಾಸಪತ್ರಿಕೆ ಸಂಪಾದಕರು
೧೯೩೫	ಕರ್ನಾಟಕ ಸಂಸ್ಕೃತಿ ಕೃತಿಗೆ ದೇವರಾಜ ಬಹದ್ದೂರ್ ಪಾರಿತೋಷಕ ಮತ್ತು ಇತರ ಪುರಸ್ಕಾರಗಳು
೧೯೩೬	`ಚಿರಂಜೀವಿ' ಚಲನಚಿತ್ರದ ಸಾಹಿತ್ಯರಚನೆ ಮತ್ತು ನಟನೆ
೧೯೩೭	`ಕನ್ನಡ ಸಾಹಿತ್ಯ ಸಮಾಜ' ಸ್ಥಾಪನೆ
೧೯೩೮	ಮೀಮಾಂಸ ದರ್ಪಣಕ್ಕೆ ಶ್ರೀಮಾನ್ ಮಹಾರಾಜರಿಂದ ವಿಶೇಷ ಪ್ರಶಸ್ತಿ
೧೯೪೦	ವಯಸ್ಕರಿಗೆ ಕನ್ನಡ ಕಲಿಸುವುದಕ್ಕಾಗಿ ಅಕ್ಷರಪ್ರಚಾರ ಯೋಜನೆ ಪ್ರಾರಂಭ
೧೯೪೨	ಗಾಂಧಿನಗರ ಹೈಸ್ಕೂಲ್ ಸ್ಥಾಪನೆ
೧೯೪೩-೪೫	ಪ್ರಜಾಪ್ರತಿನಿಧಿ ಸಭೆಗೆ ನೇಮಕ
೧೯೪೬	ಬೆಂಗಳೂರು ಸಿಟಿ ಕೋ ಆಪರೇಟಿವ್ ಬ್ಯಾಂಕಿಗೆ ಡೈರೆಕ್ಟರ್ ಆಗಿ ಚುನಾಯಿತರಾದುದು
	ಪಠ್ಯಪುಸ್ತಕ ಸಮಿತಿಯ ಸದಸ್ಯತ್ವ
೧೯೪೮	ಬೆಂಗಳೂರು ಸಿಟಿ ಕಾರ್ಪೊರೇಟರ್ ಆಗಿ ಚುನಾಯಿತರಾದುದು
	ಕರ್ನಾಟಕ ಏಕೀಕರಣದಲ್ಲಿ ಭಾಗವಹಿಸಿದುದು
೧೯೫೦	ಗೀರ್ವಾಣ ವಿದ್ಯಾಪೀಠ ಸ್ಥಾಪನೆ
೧೯೫೧	ಭಾರತದ ಮೊಟ್ಟಮೊದಲನೆಯ ಲೋಕಸಭೆಯ ಚುನಾವಣೆಯಲ್ಲಿ ಭಾಗವಹಿಸಿದ್ದು
೧೯೫೨	ಭಾರತದ ಮೊದಲ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರವರಿಂದ ಕಾಶಿಯಲ್ಲಿ ಗೌರವ
	ಕನ್ನಡ ಕಾದಂಬರಿಕಾರರ ಸಮ್ಮೇಳನದ ಅಧ್ಯಕ್ಷರು
	ಹಿರಿಯ ಮಗ ರಾಮುವಿನ ಮರಣ
೧೯೫೬-೫೯	ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರೀ ಸಮಿತಿಯ ಸದಸ್ಯರು
೨೭-೧೦-೧೯೬೨	ದೈವಾಧೀನ
	`ಮಹಾಕ್ಷತ್ರಿಯ' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ (ಮರಣೋತ್ತರ)

33

ಅನುಬಂಧ ೨

I ಕಾದಂಬರಿ

೧. ಸಾಹಸವರ್ಮ
೨. ಕಳ್ಳರ ಕೂಟ
೩. ಅಂತರಂಗ
೪. ಮಯೂರ
೫. ಮಹಾಬ್ರಾಹ್ಮಣ
೬. ಮಹಾಕ್ಷತ್ರಿಯ
೭. ಮಹಾದರ್ಶನ
೮. ಒಡೆದ ಮುತ್ತು
೯. ಚಿನ್ನಾ (ಅವಳ ಕತೆ)
೧೦. ಮಲ್ಲಿ
೧೧. ಮುಂದೇನು?
೧೨. ಗೆದ್ದವರು ಯಾರು?
೧೩. ಎರಡನೇ ಜನ್ಮ
೧೪. ಡಾ॥ ವೀಣಾ
೧೫. ಪರಿಪೂರ್ಣ (ಅಪೂರ್ಣ)
('ಜ್ಞಾನಸುಧಾ' ಪತ್ರಿಕೆಯಲ್ಲಿ ಕೆಲವು ಭಾಗಗಳು ಪ್ರಕಟವಾಗಿದೆ)

II ಸಣ್ಣ ಕತೆ

೧. ಸೋಲೋ ಗೆಲುವೋ
೨. ದೇವುಡು ಕಥೆಗಳು
೩. ಘಾಟೀ ಮುದುಕ ಮತ್ತು ಇತರ ಕಥೆಗಳು
೪. ಮೂರು ಕನಸು
೫. ಭಾರ್ಗವಿ (ಐತಿಹಾಸಿಕ)

III ನಾಟಕ

೧. ದುರ್ಮಂತ್ರಿ
೨. ಸಾವಿತ್ರಿ
೩. ವಿಚಿತ್ರ ಶಿಕ್ಷೆ
೪. ಮಯೂರ
೫. ಯಾಜ್ಞವಲ್ಕ್ಯ

IV ಮಕ್ಕಳ ಸಾಹಿತ್ಯ (ಕೃತಿಗಳು)

೧. ಬುದ್ಧಿಯ ಕಥೆಗಳು (ಭಾಗ ೧ -೨)
೨. ಗಣೇಶನ ಕಥೆ
೩. ದೇಶಾಂತರದ ಕಥೆಗಳು
೪. ತಂತ್ರಗಾರ ನರಿ ಮತ್ತು ಇತರ ಕಥೆಗಳು
೫. ಬಂಜೆಯ ಮಗ ಮತ್ತು ಇತರ ಕಥೆಗಳು
೬. ಒಂದು ಕನಸು ಮತ್ತು ಇತರ ಕಥೆಗಳು
೭. ಅವಸರ ಮತ್ತು ಇತರ ಕಥೆಗಳು
೮. ಬರಿಯ ಆಸೆ ಮತ್ತು ಇತರ ಕಥೆಗಳು
೯. ಸ್ನೇಹಿತರು ಮತ್ತು ಇತರ ಕಥೆಗಳು
೧೦. ಮಂಗಪ್ಪಾಜಿ ಪುರಾಣ
೧೧. ಚಾಮುಂಡೇಶ್ವರಿ ಮತ್ತು ಇತರ ಕಥೆಗಳು
೧೨. ಯವನ ಪುರಾಣ (ಭಾಗ ೧ -೨)
೧೩. ಅಲ್ಲಿ ಇಲ್ಲಿಯ ಕಥೆಗಳು
೧೪. ಕಂದನ ಕಥೆಗಳು
೧೫. ಅಪಾಯ ಉಪಾಯ
೧೬. ಭೀಮಸೇನ ಬೆಕ್ಕು
೧೭. ಕನ್ನಡಿಯ ಕಥೆ

V ಜಾನಪದ

೧. ಕರ್ನಾಟಕ ಸಂಸ್ಕೃತಿ

VI ಸಂಗ್ರಹಗಳು

೧. ರಾಮಾಯಣದ ಮಹಾಪುರುಷರು
೨. ಭಾರತದ ಮಹಾಪುರುಷರು
೩. ಸಂಗ್ರಹ ರಾಮಾಯಣ
೪. ಮಹಾಭಾರತ ಸಂಗ್ರಹ
೫. ಪುರುಷೋತ್ತಮ
೬. ಕಾಳಿದಾಸನ ಕೃತಿಗಳು
೭. ಕಾಳಿದಾಸ

೩೫

VII ಅನುವಾದ

೧. ವಿಕ್ರಮೋರ್ವಶೀಯ
೨. ದಿವ್ಯವಾಣಿ
೩. ಹೊಸಕನ್ನಡ ಪಂಚತಂತ್ರ
೪. ಉಪನಿಷತ್ತು
೫. ಕಥಾಸರಿತ್ಸಾಗರ
೬. ವಾಲ್ಡನ್
೭. ಯೋಗಾವಾಸಿಷ್ಠ
೮. ಮಹಾಬ್ರಾಹ್ಮಣ (ಇಂಗ್ಲಿಷ್ ಹಸ್ತಪ್ರತಿ)
೯. ಅಂತರ್ಮುಖೀ

VIII ವಿಚಾರ-ವಿಮರ್ಶೆ-ಸಂಪಾದನೆ

೧. ಮೀಮಾಂಸ ದರ್ಪಣ
೨. ಕನ್ನಡ ಜೈಮಿನಿ ಭಾರತ
೩. ಚಿತ್ರವ್ಯಾಕರಣ
೪. ರಾಮಾಯಣವೂ, ಭಗವದ್ಗೀತೆಯೂ
೫. ಭೇರುಂಡೇಶ್ವರ
೬. ಸುರಭಿ

IX ಕಾವ್ಯ

೧. ಭಾಮಿನಿಷಟ್ಪದಿಯಲ್ಲಿ ಕರ್ನಾಟಕ ವಿಶ್ವಾಮಿತ್ರ ಚರಿತ್ರೆ

X ಪತ್ರಿಕೋದ್ಯಮ

೧. ನಮ್ಮ ಪುಸ್ತಕ
೨. ರಂಗಭೂಮಿ
೩. ಮಕ್ಕಳ ಪುಸ್ತಕ
೪. ನವಜೀವನ

ಅನುಬಂಧ ೩

೧. ದೇವುಡು ಹಸ್ತಾಕ್ಷರ ಪ್ರತಿ

1a. [illegible]

1b. [illegible] " ನೋಡಿ-

2. If the knowledge ... is to bring real freedom one should verify it by one's own living experience in the form ~~of~~ "I am Brahman" or 'Aham Brahmasmi'. It is this immediate experience or direct intuition of the Absolute, which is described as Vidvadanubhava to distinguish it from lay experience, that accordingly becomes the final criterion of truth here.

M. Hiriyanna: Outlines of Indian Phy P.38.

31

ಅನುಬಂಧ ೪

ದೇವುಡು-ಅವರನ್ನು ಕುರಿತ ಪುಸ್ತಕಗಳು.

೧. ದೇವುಡು : ಡಾ|| ಸಾ.ಶಿ. ಮರುಳಯ್ಯ (ಕನ್ನಡ ಸಾಹಿತ್ಯ ಪರಿಷತ್ತು ೧೯೯೨)

೨. ದೇವುಡು ಜೀವನ, ವ್ಯಕ್ತಿತ್ವ, ಸಾಹಿತ್ಯ : (ಡಾ|| ಸಿ.ಎಸ್. ಶಿವಕುಮಾರಸ್ವಾಮಿ ಅವರ ದೇವುಡು ಅವರನ್ನು ಕುರಿತ ಪಿ.ಎಚ್.ಡಿ. ಪ್ರಬಂಧ)

೩. ದೇವುಡು ನರಸಿಂಹಶಾಸ್ತ್ರಿ : ಶ್ರೀ ಹರ್ಷ (ಐ.ಬಿ.ಎಚ್. ಪ್ರಕಾಶನ ೧೯೮೧)

೪. ಜ್ಞಾನಸುಧಾ (ದೇವುಡು ಕುರಿತ ಸ್ಮರಣ ಸಂಚಿಕೆ ೧೯೬೪)

5 ದೇವುಡು ನರಸಿಂಹ ಶಾಸ್ತ್ರಿಗಳು (ಜೀವನ ಚರಿತ್ರೆ) ಪ್ರೊ. ಜಿ. ಅಶ್ವತ್ಥನಾರಾಯಣ

6. ದೇವುಡು ಜೀವನ ಸಾಧನೆ - ಮಲ್ಲೇಪುರಂ ವೆಂಕಟೇಶ್

7.

38

ಆತ್ಮ ಸಂಗಾತಕ್ಕೆ ದೇವುಡು ಉಂಟು

ಭಾರತೀಯ ಸಂಸ್ಕೃತಿ ಭಂಡಾರದ ಯಾವ ಕಪಾಟಿನಲ್ಲಿ ನಿಮ್ಮ ಆಸಕ್ತಿಯಿದೆ? ನೀವು ಕಣ್ಣು ಮುಚ್ಚಿಕೊಂಡು, ಕೈಗೆ ಸಿಕ್ಕಿದ ಯಾವ ಲಾಕರನ್ನು ಬೇಕಾದರೆ ತೆಗೆಯಿರಿ, ಅಲ್ಲಿ ದೇವುಡು ನರಸಿಂಹ ಶಾಸ್ತ್ರಿಗಳು ತಮ್ಮ ಪ್ರತಿಭೆಯಿಂದ ಜನ್ಯವಾದ ಮುತ್ತು ರತ್ನಗಳನ್ನು, ಹರ್ಷದ ಮಣಿಗಳನ್ನು ಮುಂದಿನ ಪೀಳಿಗೆಗಳಿಗೆ ಬಳುವಳಿಯಾಗಿ ಬಿಟ್ಟಿರುತ್ತಾರೆ. ಅವರಿಗೆ ಒಲವಿಲ್ಲದ ವಸ್ತುವಿಲ್ಲ, ವಿಚಾರವಿಲ್ಲ. ಅವರ ಅದಮ್ಯ ಉತ್ಸಾಹ, ಅದಕ್ಕೆ ಪೂರಕವಾದ ಸಾಧನಾಶಕ್ತಿಗಳು, ಮುಟ್ಟಿದ್ದನ್ನು ಚಿನ್ನವಾಗಿಸುವ ಸಿದ್ಧಹಸ್ತವನ್ನು ಅವರಿಗೆ ತಂದುಕೊಟ್ಟಿದ್ದುವು.

ಸಾಮಾಜಿಕ, ಪೌರಾಣಿಕ, ಮನೋವೈಜ್ಞಾನಿಕ ಇತ್ಯಾದಿಯಾಗಿ ಕೃಷಿಮಾಡಿದ ಕ್ಷೇತ್ರಗಳಲ್ಲಿ ಅವರ ಮೊದಲಿಗರೆನಿಸಿದರು. ಶಿಶುಸಾಹಿತ್ಯ, ವಯಸ್ಕರ ಶಿಕ್ಷಣ, ರಂಗಭೂಮಿ, ಸಂಸ್ಕೃತಿ ಪ್ರಚಾರ ಮುಂತಾದ ಪರ್ಯಾಯ ವಿಭಾಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಕೃತಾರ್ಥರಾದರು. ಇಂತಹ ಸರ್ವಾಂಗ ಸಾಧಕರಿಗೆ ಸವಲತ್ತು ಪುರಸ್ಕಾರಗಳು ದೊರೆಯಲಿಲ್ಲವೆಂಬ ಕಹಿ ಸತ್ಯ ಕನ್ನಡಿಗರಿಗೆ ನಾಚಿಕೆ ತರುವಂತಹದು. "ಮಹಾಕ್ಷತ್ರಿಯ" ಕಾದಂಬರಿಗೆ ಕೇಂದ್ರ ಪ್ರಶಸ್ತಿ ದೊರಕಿದ್ದು ಸಹ ಅವರು ಕಣ್ಮರೆಯಾದ ಮೇಲೆಯೇ.

ದೇವುಡು, ಪುರಾತನ ಭಾರತ, ಸ್ವರ್ಗಲೋಕಗಳಲ್ಲಿ ಪ್ರವಾಸ ಮಾಡಿ (ಮಾನಸಿಕವಾಗಿ) ಚಿರ ಕಾಲ ವಾಸ್ತವ್ಯ ಹೂಡಿ ಬಂದವರೆನಿಸುತ್ತದೆ. ಅದರಿಂದಲೇ, ಋಷಿಮುನಿಗಳ ದೇವತೆಗಳ ಆಚಾರ-ವಿಚಾರಗಳಲ್ಲದೇ ನಿತ್ಯ ನಡವಳಿಕೆಗಳನ್ನೂ ಸಹ ಅಷ್ಟು ವಿವರವಾಗಿ, ನಿಖರವಾಗಿ, ಹೃದಯಂಗಮವಾಗಿ ಪರಿಚಯಿಸುತ್ತಾರೆ. ಈ `ಮಹಾ ಕೃತಿಗಳು' (ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ) ಭಾರತೀಯ ಸಂಸ್ಕೃತಿಯ ಜ್ವಲಂತ ಜೀವಸತ್ವವನ್ನು ಓದುಗರಿಗೆ ಬೆಣ್ಣೆಯಂತೆ ಉಣಬಡಿಸುತ್ತವೆ. ಈ ದಿವ್ಯ ಕ್ಷೇತ್ರದಲ್ಲಿ ದೇವುಡುರವರು ಮೊದಲಿಗರು, ಅಮರರು.

ದೇವುಡು ಆಧುನಿಕ ಕನ್ನಡ ಗದ್ಯಕ್ಕೆ ಓಟ, ಓಜಸ್ಸುಗಳನ್ನು ಅಂತರ್ಗತ ಮಾಡಿ, ತಮ್ಮದೇ ಆದ ವಿಷಯ ವಿಹಿತ ಗದ್ಯ ಶೈಲಿಯನ್ನೂ ರೂಪಿಸಿಕೊಂಡರು. ನಿಮ್ಮ ಮನಸ್ಸಿನಲ್ಲಿ ಶಾಸ್ತ್ರಪ್ರಿಯತೆಯಿರಲಿ, ವಿಚಾರ ದಾಹವಿರಲಿ, ದುಗುಡವಿರಲಿ, ಸಂತಸವಿರಲಿ, ಆತ್ಮಸಂಗಾತಕ್ಕೆ ದೇವುಡು ಗ್ರಂಥಸಂಪದವಿದೆ. ಅದಕ್ಕೆ ದಾರಿದೀವಿಗೆ "ದೇವುಡು ದರ್ಶನ"

ಪ್ರೊ॥ ಎಂ. ಎಸ್. ನಾಗರಾಜ